ಕುವೆಂಪು ಒಲವು ನಿಲವು

ಕುವೆಂಪು ಸಮಗ್ರ ಸಾಹಿತ್ಯದ ಕ್ರೋಢೀಕರಣ



ಅಧ್ಯಯನ, ಆಯ್ಕೆ
ಪುಸ್ತಕಮನೆ ಹರಿಹರಪ್ರಿಯ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಕುವೆಂಪು ಒಲವು ನಿಲವು

ಕುವೆಂಪು ಸಮಗ್ರ ಸಾಹಿತ್ಯದ ಕ್ರೋಢೀಕರಣ

ಅಧ್ಯಯನ, ಆಯ್ಕೆ
ಪುಸ್ತಕಮನೆ ಹರಿಹರಪ್ರಿಯ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨
ದೂರವಾಣಿ : ೨೨೪೮೪೫೧೬

KUVEMPU OLAVU NILAVU : An anthology of the study and selection of the complete works of the Karnataka Poet Laureate KUVEMPU (Prof. K.V. Puttappa). Edited by: Pustakamane Hariharapriya, 702, BCCHS Layout, Vajarahalli, Talaghatta-pura post, Bangalore 560 062 Published by: Ashok N. Chalawadi, Administrative officer, Kannada Pustaka Pradhikara, Kannada Bhawana, J.C. Road, Bangalore-560005

First Edition : 29-12-1979
Second Edition: 2008

Pages: xxiv + 450

Price : **Rs. 150/-**

ISBN: 81–7713–237–7

ಮುಖಪುಟ ಭಾವಚಿತ್ರ : ಸಾತವಲ್ಲಿ ಶಂಕರ್, ಬೆಂಗಳೂರು

ಹಿಂಬದಿಯ ಚಿತ್ರ : ಎಸ್. ತಿಪ್ಪೇಸ್ವಾಮಿ, ಮೈಸೂರು

ಮೊದಲನೆಯ ಮುದ್ರಣ : ೨೯ ಡಿಸೆಂಬರ್ ೧೯೭೯
ಪರಿಷ್ಕೃತ ಮುದ್ರಣ : ೨೦೦೮

ಪುಟಗಳು : xxiv + ೪೫೦

ಬೆಲೆ : ರೂ. ೧೫೦/–

ಪ್ರಕಾಶಕರು :
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೨೦

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು–೧೮.
ದೂ. : ೨೬೬೧ ೩೧೨೩, ೨೬೬೧ ೮೭೫೨

ಅರ್ಪಣೆ

ಅಂದು

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಕುಟುಂಬ

ಇಂದು

ಹೆಚ್.ಜಿ. ಸೋಮಶೇಖರರಾವ್ ಕುಟುಂಬ

ನಮ್ಮ ನೆರವಿಗೆ ನಿಂತದ್ದಕ್ಕೆ

ಕೃತಜ್ಞತೆಯಿಂದ

ಕುವೆಂಪು ಮುದ್ರೆ

“ಉದಯರವಿ”
ವಾಣೀವಿಲಾಸ ಪುರಂ
ಮೈಸೂರು-೧೫೭೦೦೦೨
ದಿನಾಂಕ, ನವಂಬರ್ ೧೮, ೧೯೮೦

ಪ್ರಿಯಶ್ರೀ ಹರಿಹರಪ್ರಿಯ ಅವರಲ್ಲಿ ವಿಜ್ಞಾಪನೆಗಳು.

ನಿಮ್ಮ ೨೫-೧೦-೧೯೮೦ರ ಪತ್ರ ತಲುಪಿತು. ವಂದನೆಗಳು.

ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರಿಗೆ ಅನಾರೋಗ್ಯವೆಂದು ತಿಳಿದು ಬೇಸರವಾಯಿತು. ಅವರ ಆರೋಗ್ಯ ಸುಧಾರಿಸಲೆಂದು ಭಗವಂತನಲ್ಲಿ ಬೇಡುತ್ತೇನೆ.

ನನ್ನ “ನೆನಪಿನ ದೋಣಿಯಲ್ಲಿ” ಕೃತಿ ಕುವೆಂಪು ವಿದ್ಯಾವರ್ಧಕ ಟ್ರಸ್ಟಿನಿಂದ ೪.೧೧.೧೯೮೦ರಂದು ಬಿಡುಗಡೆ ಯಾಯಿತು.

“ಕುವೆಂಪು : ಒಲವು ನಿಲವು’ ಪುಸ್ತಕ ನೋಡಿದೆ. ನನ್ನ ಕೃತಿಗಳನ್ನು ವಿವರವಾಗಿ ಓದಿ ಅವುಗಳ ಸಾರಸಂಗ್ರಹವನ್ನು ಕ್ರೋಢೀಕರಿಸಿ ಸಂಪಾದಿಸಿರುವುದು ನನಗೆ ಸಂತೋಷ ತಂದಿದೆ. ಬಹುಶಃ ಕನ್ನಡದಲ್ಲಿ ಈ ತರಹದ ಕೃತಿ ಇದೇ ಮೊದಲು ಎಂದು ನನ್ನ ಭಾವನೆ. ಉಳಿದುದನ್ನು ನಮ್ಮ ಭೇಟಿಯಾದಾಗ ತಿಳಿಸುತ್ತೇನೆ.

ನೀವು ಇಷ್ಟು ಕೆಲಸ ಮಾಡಿದ್ದರೂ ನಿಮ್ಮ ಜೀವನ ಯಾಪನೆ ಸುಖಕರವಾಗಿಲ್ಲ ಎಂದು ತಿಳಿಯಿತು. ನಾನು ಯಾರ ಮೂಲಕವಾದರೂ ಹೇಳಿಸುವುದರಿಂದ ನಿಮಗೆ ಸಹಾಯವಾಗುವುದಾದರೆ ತಿಳಿಸಿ ಮಾಡಿಕೊಡುತ್ತೇನೆ.

ಇಂತೀ ವಿಶ್ವಾಸಪೂರ್ವಕ ವಂದನೆಗಳೊಡನೆ,

ನಿಮ್ಮ,
ಕುವೆಂಪು

ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು – ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು– ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟು ಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನ ವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ, ಅದೊಂದು ಸಮುದಾಯ ಪ್ರಜ್ಞೆ, ಶಕುಂತಲಾ ದೇವಿಯವರ ಜ್ಞಾನಶಕ್ತಿ ೨ × ೨ = ೪ ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹು ಮುಖ್ಯ ವಿಚಾರವೆಂದರೆ, ಮೊದಲನೆ ಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕ ಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ

ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು ? ಇದು ಇಂದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು ; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ,

ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ: ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮ ಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯ ವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮುಖೇಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ –

ಹಿಂದಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ, ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿ ಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸಿದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮ ವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು, ಮಾನವ ಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಅಕ್ಷರಲೋಕಕ್ಕಿದೆ. ಏಕರೂಪೀ ಗುಣದಿಂದ ಕೂಡಿದ ಗಣಕೀಕರಣದ ಏಕಾಧಿಪತ್ಯಕ್ಕಿಂತ ಬಹುರೂಪಿ ಗುಣದ ಪ್ರತಿಭಾ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನ ಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳ ಅಕ್ಷರ ಲೋಕದ ಮೂರ್ತರೂಪಗಳು ; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡು

ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ, ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನಾ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

* * *

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರಪಂಚ ಕಂಡ ಮೇರು ಪ್ರತಿಭೆ ಕುವೆಂಪು. ತಮ್ಮ ಕಾವ್ಯ ಹಾಗೂ ಗದ್ಯ ಕಥನಗಳ ಮೂಲಕ ಸಾಂಸ್ಕೃತಿಕ ಸಾಮಾಜಿಕ ಚಿಂತನೆಯ ದಿಕ್ಕನ್ನು ಬದಲಿಸಿದವರು. ಇಪ್ಪತ್ತನೆಯ ಶತಮಾನದ ಜಾಗತಿಕ ವಿದ್ಯಮಾನಗಳನ್ನು ಎದುರುಗೊಳ್ಳುತ್ತಲೇ ಸನಾತನ ಭಾರತದ ಸಾಮಾಜಿಕ ಸಾಂಸ್ಕೃತಿಕ ಬದುಕನ್ನು ಮರುಚಿಂತನೆಗೆ ಹಚ್ಚಿದವರು, ನಿಜವಾದ ಅರ್ಥದಲ್ಲಿ ಯುವ ಪ್ರಜ್ಞೆಯನ್ನು ಧಾರಣ ಮಾಡಿಕೊಂಡು ಕನ್ನಡದ ಸಾಂಸ್ಕೃತಿಕ ಬದುಕಿಗೆ ವೈಚಾರಿಕ ಎಚ್ಚರದ ವಿವೇಕವನ್ನು ಧಾರೆ ಎರೆದವರು ಕುವೆಂಪು. ಕೀರ್ತಿಶನಿ ತೊಲಗಾಚೆ ಎಂದು ನಿಷ್ಠುರ ನೈತಿಕ ಕೆಚ್ಚು

ತೋರಿದ ಧೀಮಂತ. ಬದುಕನ್ನು ಕೇವಲ ಮನುಷ್ಯಕೇಂದ್ರಿತ ದೃಷ್ಟಿಕೋನದಲ್ಲಿ ನೋಡದೆ, ಜೀವಕೇಂದ್ರಿತ ಪರಿವ್ಯಾಪ್ತಿಯಲ್ಲಿ ಧ್ಯಾನಿಸಿದವರು. ಜಾಗತಿಕ ಸಾಹಿತ್ಯದ ಅಧ್ಯಯನ ಪಾರತೆಯ ಜೊತೆಗೆ ಸಾಹಿತ್ಯೇತರ ಜ್ಞಾನಶಿಸ್ತುಗಳ ಅಧ್ಯಯನ ವಿಶೇಷತೆಯನ್ನು ಒಳಗೊಂಡ ಇವರ ವ್ಯುತ್ಪತ್ತಿಜ್ಞಾನ ಕನ್ನಡ ಸಾಹಿತ್ಯ ಲೋಕವನ್ನು ಅನೇಕ ಸಾಧ್ಯತೆಗಳಲ್ಲಿ ವಿಸ್ತರಿಸಿದೆ. ಪ್ರಾದೇಶಿಕ ಬದುಕಿನ ಸಾಂಸ್ಕೃತಿಕ ಅಸ್ಮಿತೆಯನ್ನು ತಮ್ಮ ಬರಹದಲ್ಲಿ ಸಾಕ್ಷಾತ್ಕರಿಸಿದ್ದಾರೆ. ಮನುಜಮತ ವಿಶ್ವಪಥವೆಂಬ ಲೋಕ ದರ್ಶನವನ್ನು ಸಾರಿದ ಈ ಕವಿಯ ಎಲ್ಲ ಕೃತಿಗಳಲ್ಲಿರುವ ಚಿಂತನೆಯ ಸೂಕ್ತಿಗಳನ್ನು ಸಂಗ್ರಹಿಸಿ ಒಪ್ಪವಾಗಿ ಜೋಡಿಸಿ ಒಂದು ಕೃತಿ ರೂಪದಲ್ಲಿ ಅದನ್ನು ಪ್ರಕಟಿಸಿದ್ದಾರೆ ಸಾಹಿತಿ ಹರಿಹರಪ್ರಿಯ. ಇದೊಂದು ಅಪರೂಪವಾದ ಕೆಲಸ. ಕುವೆಂಪು ಅವರ ವಿಚಾರದ ಹರಹು, ವಿಷಯ ವೈವಿಧ್ಯ ಹಾಗೂ ಆಲೋಚನಾ ಕ್ರಮದ ವಿಧಿ ವಿಧಾನಗಳನ್ನು ಒಂದೆಡೆಯಲ್ಲಿ ಕಾಣಸಿಗುವಂತೆ ಮಾಡಿರುವ ಈ ಕೆಲಸ ಶ್ಲಾಘನೀಯ. ಪುಸ್ತಕಮನೆಯ ಹರಿಹರ ಪ್ರಿಯರೆಂದೇ ಖ್ಯಾತರಾಗಿರುವ ಇವರ ಓದಿನ ಬದ್ಧತೆ, ಗ್ರಹಿಕೆಯ ಸೂಕ್ಷ್ಮತೆಯನ್ನು ಈ ಕೃತಿ ಮನಗಾಣಿಸುತ್ತಿದೆ. ಇಂಥ ಕೃತಿಯೊಂದನ್ನು ಮರು ಮುದ್ರಿಸಲು ಅನುವು ಮಾಡಿಕೊಟ್ಟ ಶ್ರೀ ಹರಿಹರಪ್ರಿಯ ಅವರಿಗೆ ಪ್ರಾಧಿಕಾರದ ಆತ್ಮೀಯ ಕೃತಜ್ಞತೆಗಳು.

ಪ್ರೊ। ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಪ್ರವೇಶ

ಯಾವುದನ್ನೂ ಇರುವ ಹಾಗೆಯೇ ಪ್ರತ್ಯಕ್ಷ ಪ್ರಮಾಣ ಎನ್ನುವಂತೆ ಸ್ವೀಕರಿಸುವುದು ಸಾಧ್ಯವೊ? ಹಾಗಾದಾಗ ; ಸಾಮಾಜಿಕ ಬದುಕಾಗಲಿ, ಸಾಂಸ್ಕೃತಿಕ ಭಿತ್ತಿಯಾಗಲಿ – ಆಳ, ಅಗಲ, ಎತ್ತರವಿಲ್ಲದೆ ; ಮಂದ್ರ, ಮಧ್ಯಮ, ತಾರ ಸ್ಥಾಯಿಗಳಿಲ್ಲದೆ ಗ್ರಹಿಸಲಾದೀತೊ? ಛಾಯೆ ಇಲ್ಲದ ಬಣ್ಣ, ಪರಸ್ಪರ ಸೋಂಕಿಲ್ಲದ ಸ್ವರ, ಸ್ವರೂಪವಿಲ್ಲದ ಅಕ್ಷರಗಳೂ ಇರಲು ಸಾಧ್ಯವುಂಟೊ? ಕಾಣುವ 'ಸತ್ಯ'ವನ್ನು ಅರ್ಥಮಾಡಿಕೊಳ್ಳಬೇಕಾದರೆ, ಕಾಣುವ ಮುಂಚೆಯಾಗಲಿ ಅಥವ ಕಂಡಾದ ಮೇಲಾಗಲಿ ಆ ಬಗೆಗೆ ತಿಳಿಯುವ 'ಸತ್ಯ' ಕೂಡ, ಸಮಗ್ರ ಗ್ರಹಿಕೆಗೆ ಇಂಬಾಗುವುದರಲ್ಲಿ ಸುಳ್ಳಿಲ್ಲವಷ್ಟೆ. ಹೀಗಾಗಿ ಒಲವು ನಿಲವು ಎರಡೂ; ವ್ಯಕ್ತಿಯ, ಕೃತಿಯ, ಘಟನೆಯ, ವಿಚಾರದ ಎರಡು ಮಗ್ಗುಲೇ ತಾನೆ.

ಒಬ್ಬ ಬರಹಗಾರನ ಕೃತಿ, ಕೃತಿಯೊಳಗಿನ ವೈಚಾರಿಕ ಒಲವು, ಅದು ಬೆಳೆದ ಪರಿ, ಪರಸ್ಪರ ಕೃತಿಗಳು ಕಟ್ಟಿಕೊಡುವ ತಾತ್ತ್ವಿಕ ನಿಲವು, ಆ ಮೂಲಕ ಸದ್ಯದ ಸಂದರ್ಭ ಮಾತ್ರವೇ ಅಲ್ಲ, ಸದ್ಯಕ್ಕೆ ಆಹ್ವಾನಿಸಿ ಎದುರಿಸಿದ ಆವರೆಗಿನ ಸಾಮಾಜಿಕ, ಸಾಂಸ್ಕೃತಿಕ ಒತ್ತಡಗಳು; ಅದಕ್ಕೆ ಜವಾಬ್ದಾರಿಯಿಂದ ತಾನು ಜೋಡಿಸಿದ ಹೊಸ ಮೈ ಮನಸ್ಸು – ಇವುಗಳನ್ನು ಬಿಡಿಬಿಡಿಯಾಗಿಯೂ ಸಮಗ್ರವಾಗಿಯೂ ಅಧ್ಯಯನ ಮಾಡಲು ಆಯ್ಕೆ ಮಾಡಿಕೊಂಡದ್ದು ಕುವೆಂಪು ಅವರನ್ನೇ. ಕರ್ನಾಟಕದಲ್ಲಿ ಮಾತ್ರವಲ್ಲ ಭಾರತದ ಇತರ ಭಾಷೆಗಳಲ್ಲಿಯೂ ಈ ಬಗೆಯ ಪ್ರಯತ್ನ, ಪ್ರಯೋಗ ನಡೆದಿಲ್ಲವೆಂದೇ ಹೇಳುವಾಗ, ಮಾದರಿಯ ಹುಡುಕಾಟ ಇಲ್ಲಿದೆ ಎಂಬುದನ್ನೂ ಬಲ್ಲವರು ಪರಾಂಬರಿಸಬೇಕು.

ಅದಕ್ಕೆ ಮುಖ್ಯಕಾರಣ : ಕನ್ನಡದ, ಕನ್ನಡಿಗರ, ಕರ್ನಾಟಕದ ನಿಜವಾದ, ವಿಶ್ವಾಸದ, ಸಮಗ್ರ ಸಾಂಸ್ಕೃತಿಕ ಪ್ರತಿಭೆ, ಕುವೆಂಪು ಎನ್ನುವುದೇ ಆಗಿದೆ.

ಬಿಡಿಬಿಡಿ ಪ್ರತಿಭಾ ವಿಲಾಸಕ್ಕೆ, ಕೇವಲ ವ್ಯಕ್ತಿ ವಿಕಾಸಕ್ಕೆ, ಬೌದ್ಧಿಕ ನಾಟ್ಯೀಕರಣಕ್ಕೆ, ವಿದ್ವತ್ತಿನ ಬೆಡಗಿಗೆ, ಶುದ್ಧ ಸಾಹಿತ್ಯಪ್ರಜ್ಞೆಗೆ –

ಬೇರೆ ಬೇರೆಯವರು ಕಣ್ಣ ಮುಂದೆ ಕಾಣಿಸಿದರೂ ; ಅವರ ನಡುವೆಯೇ ತನ್ನ ಶತಮಾನ ಮಾತ್ರವಲ್ಲ, ತನ್ನ ಕಾಲದವರೆಗಿನ ಎಲ್ಲ ಬಗೆಯ ಸಾಮಾಜಿಕ ಸಾಂಸ್ಕೃತಿಕ ಒತ್ತಡಗಳಿಗೆ ಹನುಮಶಕ್ತಿಯ ಉತ್ತರವಾಗಿ – ಬೆಳೆದು ನಿಂತವರು ಕುವೆಂಪು ಒಬ್ಬರೇ.

ಪಂಪ, ಹರಿಹರ, ಕುಮಾರವ್ಯಾಸ, ರತ್ನಾಕರವರ್ಣಿ, ಸರ್ವಜ್ಞ – ಮಾತ್ರವೇ ಅಲ್ಲದೆ ; ಪಂಜೆ, ಅಡಿಗ, ಲಂಕೇಶ್, ದೇವನೂರ ಅಂಥ ಗಗನಚುಕ್ಕಿ, ಭರಚುಕ್ಕಿಗಳು ಕುವೆಂಪು ಆಕಾಶದಲ್ಲಿಯೇ ಮಿಂಚಬಹುದು, ಹೊಳೆಯಲೂಬಹುದು. ಭಾರತದಲ್ಲಿ ಶ್ರೀ ಶ್ರೀ, ಮಹಾಶ್ವೇತಾದೇವಿ, ಪ್ರೇಮಚಂದ, ವೈಕಂ ಮಹಮ್ಮದ್ ಬಷೀರ್ ಅಂಥ ಮಹಾಪ್ರತಿಭಾ ವಿಲಾಸ, ವಿಕಾಸಗಳನ್ನು ದೊಡ್ಡದು ಎಂದು ಕಣ್ಣ ಮುಂದೆ ಇರಿಸಿಕೊಂಡರೂ, ಸಮಗ್ರತೆ ದೃಷ್ಟಿಯಿಂದ ವಿಶ್ವ ಸಾಂಸ್ಕೃತಿಕ ನಭೋಮಂಡಲಕ್ಕೆ ನೆಗೆಯಬಲ್ಲ ಏಕೈಕ ನಾಯಕ ಪ್ರತಿಭೆ ಕುವೆಂಪು ಮಾತ್ರವೇ. ಒಂದಲ್ಲ ಒಂದು ರೀತಿ, ಗೊತ್ತಿದ್ದೊ ಗೊತ್ತಿಲ್ಲದೆಯೊ ಕುವೆಂಪು ಪ್ರತಿಭೆಯನ್ನು ಎದುರಿಸದೆಯೇ ಮುಂದೆ ಯಾರೂ ತಲೆ ಎತ್ತುವಂತಿಲ್ಲ, ನಿಲ್ಲುವಂತಿಲ್ಲ ; ಏಕೆಂದರೆ, ಸಾವಿರಾರು ವರುಷಗಳ ಸಾಹಿತ್ಯವಿರಬಹುದು, ಹತ್ತಾರು ಸಾವಿರ ವರುಷಗಳ ಸಾಮಾಜಿಕ ಸ್ಥಿತಿಗತಿಗಳಿರಬಹುದು ; ಕರಗಿ, ನೀರಾಗಿ, ಹರಿಯುತ್ತಿರುವುದು ಕುವೆಂಪು ಮಹಾಸಾಗರದಲ್ಲಿಯೇ.

ಈ ಅರಿವು ಮೂಡುವ ಮುಂಚೆಯೇ, ೧೯೬೯ ರಿಂದಲೇ ಕುವೆಂಪು ಸಮಗ್ರ ಅಧ್ಯಯನಕ್ಕೆ, ಸಂಪೂರ್ಣವಾಗಿ ತೊಡಗಿಸಿಕೊಳ್ಳಲಾಯಿತು. ಆಗ ನನಗೆ ಕೇವಲ ೧೬–೧೭ರ ಹರೆಯ. ಕನ್ನಡ ನವ್ಯ ಸಾಹಿತ್ಯಕ್ಕೂ ಹೆಚ್ಚು ಕಡಿಮೆ ಅಷ್ಟೇ ಹುರುಪು, ತುಂಟಾಟ. ಕುವೆಂಪು, ಕುವೆಂಪು ಸಾಹಿತ್ಯದ ಮೇಲೆ ಎಲ್ಲ ದಿಕ್ಕುಗಳಿಂದ ದಾಳಿ ನಡೆಸಿದ್ದ ಕಾಲ ಅದು. ಅವರ ಜಾತಿ, ಒಂದು ವಿಶ್ವವಿದ್ಯಾನಿಲಯ, ಭಕ್ತರ ಸಮೂಹ ಇತ್ತು ಅನ್ನುವುದು ಬೇರೆ. ಆದರೆ ಯಾರೂ, ಯಾರೇ ಆದರೂ ಕುವೆಂಪು, ಕುವೆಂಪು ಸಾಹಿತ್ಯದ ಹೆಸರು ಎತ್ತುವವರಿಗೆ ಮರ್ಯಾದೆಯ ಕಾಲವಾಗಿರಲಿಲ್ಲ. ನಿಸಾರ್ ಅಹಮದ್ ಅವರ ಮಾತಿನಲ್ಲಿ ಆ ಎಲ್ಲ ಸತ್ಯ ಅಡಗಿದೆ. ಆಗ್ಗಿನ್ನೂ ಬಂಡಾಯ ಸಾಹಿತ್ಯ ಸಂಘಟನೆ ಹುಟ್ಟಲು ೧೦ ವರ್ಷಗಳ ಕಾಲಾವಕಾಶವಿತ್ತಷ್ಟೆ.

ಪರಿಸ್ಥಿತಿ ಹೀಗಿರುವಾಗ, ಕುವೆಂಪು ಅವರ ಬಗ್ಗೆ ಭಿನ್ನ ನೆಲೆಗಳಲ್ಲಿ ನಿಂತು ನೋಡುವ, ನೋಡಲೂ ಇಚ್ಛೆ ಪಡದ ಲಂಕೇಶ್, ಬನ್ನಂಜೆ ಗೋವಿಂದಾಚಾರ್ಯ ಅಂಥವರಿಂದಲೂ ಬರೆಸಿದ್ದು ಸ್ವತಃ ಭಕ್ತರಿಗೆ ಇರಲಿ, ಕುವೆಂಪು ಅವರಿಗೂ ಮೊದಮೊದಲಿಗೆ ಸಮಾಧಾನ ಕೊಡದ ವಿಷಯವಾಗಿತ್ತು. ಕ್ರಮೇಣ ಅವರು ನನ್ನನ್ನು ಅಪಾರ್ಥಮಾಡಿಕೊಳ್ಳಲಿಲ್ಲ ಎಂಬುದು ಇಲ್ಲಿ ಮುಖ್ಯವಾದ ಮಾತು.

ಈ ನೆಲೆಯಲ್ಲಿ : ಇವರು ಕುವೆಂಪು, ಕುವೆಂಪು ಪತ್ರಗಳು, ಕುವೆಂಪು ರಾಮಾಯಣ ಬರಹಗಾರರ ಪ್ರತಿಕ್ರಿಯೆ, ಕುವೆಂಪು ದರ್ಶನ, ಕುವೆಂಪು ಒಲವು ನಿಲವು – ಹೀಗೆ ೧೦ ವರುಷಗಳಲ್ಲಿ ಹೊರಬಂದವು.

೧. ಕುವೆಂಪು ಪದಪ್ರಯೋಗ ಕೋಶ

೨. ಕುವೆಂಪು ಶಬ್ದಕೋಶ

೩. ಕುವೆಂಪು ಟಿಪ್ಪಣಿಗಳು (ಕುವೆಂಪು ಅವರು ಯಾವುದೇ – ಯಾರದೇ ಪುಸ್ತಕ ಓದಿದರೂ ಮಾರ್ಜಿನ್‌ನಲ್ಲಿ ಪ್ರತಿಕ್ರಿಯೆ ಬರೆಯುತ್ತಿದ್ದರು. ಅದರ ಸಂಗ್ರಹ).

ಇಂಥವು ಸಿದ್ಧಪಡಿಸುವ ಹಂತದಲ್ಲಿಯೇ ಉಳಿದುಬಿಟ್ಟವು.

ಸುಮಾರು ೪೦ ವರುಷಗಳ ನಂತರ, ಒಮ್ಮೆಲೇ ಹಿಂದಿರುಗಿ, ನೋಡಿದಾಗ, ಎಷ್ಟೋ ನೋವು ನಲಿವು ಉಮ್ಮಳಿಸಿ ಬರುತ್ತಿವೆ : ಮಂಡ್ಯ ಜಿಲ್ಲೆಯ ಹಳ್ಳಿಯಲ್ಲಿ, ಕಾಲೇಜು ಮೆಟ್ಟಲೂ ಹತ್ತಲಾಗದೆ, ದೇವಸ್ಥಾನದ ಅರ್ಚಕರ ಹುಡುಗ, ಉದ್ಯೋಗದ ಹತಾಶೆಯಲ್ಲಿ, ಸೀಮೆ ಎಣ್ಣೆ ಬುಡ್ಡಿಯಲ್ಲಿ ಮಾಡಿದ ಕೆಲಸ ಇವಾಗಿವೆ. ಆಗ ಸೂಕ್ತ ವಾತಾವರಣ, ಪ್ರೋತ್ಸಾಹ, ನೆರವು, ಕೊನೆಯಪಕ್ಷ ಗೆಳೆಯರು ಸಿಕ್ಕಿದ್ದಿದ್ದರೆ, ಇನ್ನೂ ಹತ್ತು ಹಲವು ರೂಪುರೇಖೆಗಳು ತಲೆಯಲ್ಲಿ ಇದ್ದವು, ತಲೆಯಲ್ಲಿಯೇ ಉಳಿದುಬಿಟ್ಟವು.

ಏನೇ ಇರಲಿ, ಉದ್ಯೋಗವಿಲ್ಲದೆ ಉದ್ಯೋಗದ ಆಶೆಯೂ ಕೈ ಬಿಟ್ಟು, ಓದು ಬರಹಗಳನ್ನೇ ನಂಬಿಬದುಕುವ ನಿರ್ಣಯಕ್ಕೆ ತಲುಪಿದ್ದಾಯಿತು. ಕುವೆಂಪು, ಕುವೆಂಪು ಸಾಹಿತ್ಯ ಬದುಕಿಗೆ ವಿಶ್ವಾಸವಾಗಿ ಬೆಳೆಯಿತು. ಅವರನ್ನೇ ಮೂಲಾಧಾರವಾಗಿ

ಅಧ್ಯಯನಕ್ಕೆ ತೊಡಗಿದ್ದೆ. ಎಲ್ಲಕ್ಕೂ ಸಂಪೂರ್ಣ ಒಪ್ಪಿಗೆ ಕೊಟ್ಟಿದ್ದೇ ಅವರ ದೊಡ್ಡತನಕ್ಕೆ, ನನ್ನ ಪುಣ್ಯಕ್ಕೆ ಹೆಚ್ಚುಗಾರಿಕೆ. ಮನೆಗೆ ಹೋಗಿಬರಲು ಸಮಯ ಕೊಡುತ್ತಿದ್ದವರು, ಕೊನೆಗೆ ಯಾವಾಗ ಬೇಕಾದರೂ ಬರುವಂತೆ, ಕೊನೆಕೊನೆಗೆ ವಾಹನ ವೆಚ್ಚ ಕೂಡ ಎಂ.ಓ. ಮಾಡುವಷ್ಟು 'ಕಾರುಣ್ಯಶಿಶು'ವಾಗಿ ಕಂಡರು. ಆ ಚಿಕ್ಕವಯಸ್ಸಿನಲ್ಲೇ ಬದುಕಿನ ಉದ್ದಕ್ಕೂ ಕಾಣಬಹುದಾದ ದೊಡ್ಡ ವ್ಯಕ್ತಿಯನ್ನು, ಓದಬಹುದಾದ ದೊಡ್ಡ ಸಾಹಿತ್ಯವನ್ನು ಕಂಡೆ, ಓದಿದೆ ಎಂಬುದೇ ನನ್ನ ಬದುಕಿನ ಭಾಗ್ಯ.

ಈಗಾಗಲೇ ನನ್ನ ಕೃತಿಗಳು ಮೂರು ಸಂಪುಟ ಹೊರಬಂದಿವೆ. ಈಗ ಕುವೆಂಪು ಕುರಿತ ಸಾಹಿತ್ಯ ಸಂಪುಟಗಳು ಹೊರಬರಲಿವೆ. ಅದರಲ್ಲಿ ಸದ್ಯ 'ಕುವೆಂಪು ಒಲವು ನಿಲವು' ನಿಮ್ಮ ಕೈಗಳಲ್ಲಿದೆ. ನನ್ನ ಎಲ್ಲಾ ಪುಸ್ತಕಗಳಿಗೂ ಒಂದೊಂದು ಕಥೆ ಅಲ್ಲ ಪುರಾಣ ಇದೆ. ಅಂತೆಯೇ ಇದಕ್ಕೂ ಕೂಡ : ೩೫ ವರ್ಷಗಳ ಹಿಂದೆ, ಒಂದು ವರ್ಷಕ್ಕೂ ಮೀರಿ, ಜಿ.ಎಸ್. ಶಿವರುದ್ರಪ್ಪ ಅವರು, ಮನೆಗೇ ಕರೆಸಿಕೊಂಡು, ಹಸ್ತಪ್ರತಿಯ ಪುಟಪುಟವನ್ನೂ, ಸಾಲುಸಾಲನ್ನೂ ಪರಿಶೀಲಿಸಿಕೊಟ್ಟರು. ಸ್ವತಃ ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ, ಆನಂತರ ಕನ್ನಡ ಸಾಹಿತ್ಯ ಪರಿಷತ್ತಿಗೆ ಅವರೇ ತೆಗೆದುಕೊಂಡು ಹೋಗಿ ಪ್ರಕಟಣೆಗಾಗಿ ಪ್ರಯತ್ನಿಸಿದರು. ಕೊನೆಗೆ ನಾನೇ ರೋಸಿ ಹೋಗಿ, ಈ ಹಸ್ತಪ್ರತಿ ಇರುವುದೇ ಬೇಡವೆಂದು (ಸಂಸರಂತೆ) ಸುಡುವ ದುರಂತಕ್ಕೆ ಕೈ ಹಾಕಿದೆ. ಆಗ ಬೆಂಗಳೂರಿನ ರಾಜಾಜಿನಗರ ಕ್ರೀಡಾ ಮತ್ತು ಸಾಂಸ್ಕೃತಿಕ ಕೇಂದ್ರದ ಬಯಲು ಪರಿಷತ್ತಿನ ವೈ.ಎಸ್.ವಿ. ದತ್ತ ಮತ್ತು ಅವರ ವಿದ್ಯಾರ್ಥಿ, ಮಿತ್ರರು ಮುಂದೆ ಬಂದು; ಮನೆ ಮನೆ ಬೀದಿ ಬೀದಿ ಬಡಾವಣೆ ಬಡಾವಣೆಗಳಲ್ಲಿ ಅಲೆದು, ಹಣ ಸಂಗ್ರಹಿಸಿ ಕೊನೆಗೂ ಪ್ರಕಟಿಸಿದ ಸಾಹಸ, ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ವಿನೂತನವಾದದ್ದು. ಆವತ್ತಿನ ನನ್ನ ಸ್ಥಿತಿಯಲ್ಲಿ ದತ್ತ ಅವರು ಗೌರವ ಸಂಭಾವನೆಯಾಗಿ ನೀಡಿದ ಹಣವೂ ಕೂಡ ದೊಡ್ಡದೆ ! ಅಂತೆಯೇ ನನ್ನ ಎಲ್ಲಾ ಉಪಟಳ ನುಂಗಿ, ಇಳಾ ಮುದ್ರಣದವರು ಅಚ್ಚುಕಟ್ಟಾಗಿ ಮುದ್ರಿಸಿದ್ದರು.

ಈಗ ಮತ್ತೆ ಜಿ.ಎಸ್. ಶಿವರುದ್ರಪ್ಪ ಅವರೇ ಮುಂದೆ ನಿಂತು ಈ ಮರು ಮುದ್ರಣಕ್ಕೆ ಒತ್ತಾಸೆ ತಂದದ್ದು, ರಾಷ್ಟ್ರಕವಿ ರಾಷ್ಟ್ರಕವಿಗೆ

ತೋರಿದ ಗೌರವವಷ್ಟೆ. ಇಬ್ಬರು ರಾಷ್ಟ್ರಕವಿಗಳ ಒಡನಾಟ ನನ್ನ ಬದುಕಿನ ಹೆಮ್ಮೆಯೆ. ಜೊತೆಗೆ ನನ್ನ ಸಮಕಾಲೀನ ಪ್ರಮುಖ ಕವಿ ಎಸ್.ಜಿ. ಸಿದ್ದರಾಮಯ್ಯ ಅವರ ಕರ್ತೃತ್ವ ಶಕ್ತಿಯ ಫಲದಿಂದ, ಕನ್ನಡ ಪುಸ್ತಕ ಪ್ರಾಧಿಕಾರದ ಆಶ್ರಯದಲ್ಲಿ, ಅಲ್ಲಿನ ಸದಸ್ಯರು, ಕುಲ ಸಚಿವರು ನೆರವಾಗಿ, ಇಷ್ಟು ಬೇಗ ಅಂದುಕೊಂಡಂತೆ, ನಾಡಿನ ಸಾಹಿತ್ಯ ಅಭಿಮಾನಿಗಳಿಗೆ ತಲುಪಿಸುತ್ತಿದ್ದಾರೆ. ಇದಕ್ಕೆ ಲಕ್ಷ್ಮೀ ಮುದ್ರಣಾಲಯ ದವರ, ಶ್ರೀಮತಿ ದೇವಿಕಾ ತಂಡದವರ ಸಹಕಾರವೂ ಸೇರಿದೆ.

ಮೊದಲ ಮುದ್ರಣದ ಪಠ್ಯದಲ್ಲಿನ ಅಕ್ಷರ ಸ್ಖಾಲಿತ್ಯವನ್ನು ತಿದ್ದಿರುವುದು, ಅನುಬಂಧ ಮುಂತಾದ ಕಡೆ ಸೇರ್ಪಡೆ, ಬದಲಾವಣ 'ಗೊಂಡಿರುವುದು ಈ ಮರುಮುದ್ರಣದ ಮುಖ್ಯ ಅಂಶಗಳು. ಹಾಗೂ 'ಶೂನ್ಯ ಸಂಪಾದನೆ'ಯಿಂದ ಆರಂಭವಾದ ಸಂಪಾದಕ ಶಬ್ದಪ್ರಯೋಗ, ಈಗ ತಲುಪಿರುವ ಅವಸ್ಥೆಗೆ ಬೆಚ್ಚಿಬಿದ್ದು, ಸದ್ಯಕ್ಕೆ ಬೇರೊಂದು ಶಬ್ದ ಹೊಳೆಯದೆ, ಅಧ್ಯಯನ ಆಯ್ಕೆ ಎಂಬ ಜಂಟಿ ಪದವನ್ನೇ ಇರಿಸಿಕೊಳ್ಳಲಾಗಿದೆ. ಮುಂದಿನ ೩೦ ವರುಷಗಳ ಮೂರನೇ ಮುದ್ರಣ ಹೊತ್ತಿಗೆ ನೋಡಿಕೊಳ್ಳೋಣ.

ಅಂತೂ, ಕುವೆಂಪು ಹಾಗೂ ಅವರ ಸಾಹಿತ್ಯಕ್ಕೆ ಇದೊಂದು (ಅ, ಆ) ಪ್ರವೇಶವಾಗಿ, ಆ ಮೂಲಕ ನೀವೇ ನೇರವಾಗಿ ಅಧ್ಯಯನ ಮಾಡುವಂತಾದರೆ ನನ್ನ ಶ್ರಮ ಸಾರ್ಥಕ.

ಇದಕ್ಕಾಗಿ ಎಲ್ಲರಿಗೂ ನಮನ.

ಹರಿಹರಪ್ರಿಯ

ಪುಸ್ತಕಮನೆ,
೭೦೨, ಬಿಸಿಸಿಹೆಚ್ಎಸ್ ಲೇಔಟ್,
ವಾಜರಹಳ್ಳಿ, ತಲಘಟ್ಟಪುರ, ಬೆಂಗಳೂರು ೫೬೦ ೦೬೨

ಮುನ್ನುಡಿ

ಕುವೆಂಪು ಅವರು ಹೊಸಗನ್ನಡ ಸಾಹಿತ್ಯದ ಅತ್ಯಂತ ಮಹತ್ವದ ಲೇಖಕರು. ಮಹತ್ತು ಅನ್ನುವುದು ತನಗೆ ತಾನೇ ಸ್ವಯಂ ಪ್ರಕಟವಾಗಿ, ಪರಿಣಾಮ ಮಾಡುವ ಒಂದು ಲಕ್ಷಣ. ಕುವೆಂಪು ಅವರ ಕೃತಿಗಳನ್ನು ಶ್ರದ್ಧೆಯಿಂದ ಅಧ್ಯಯನ ಮಾಡಿದ ಯಾರೂ ಈ ಒಂದು ಪರಿಣಾಮದಿಂದ ತಪ್ಪಿಸಿಕೊಳ್ಳಲಾರರು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಈ ರಾಷ್ಟ್ರದ ಸೃಜನ ಸಾಮರ್ಥ್ಯ ಹಿಂದೊಮ್ಮೆ ವಂಗಕವಿ ರವೀಂದ್ರನಾಥ ಠಾಗೂರ್ ಅವರಲ್ಲಿ ಎಷ್ಟೊಂದು ಉಜ್ವಲವಾಗಿ, ಬಹುಮುಖವಾಗಿ, ಸಮೃದ್ಧವಾಗಿ ಪ್ರಕಟವಾಯಿತೋ, ಹಾಗೆಯೆ ಮತ್ತೊಮ್ಮೆ ಇಲ್ಲಿ ಕನ್ನಡದಲ್ಲಿ ಕವಿ ಕುವೆಂಪು ಅವರ ಮೂಲಕ ಅಷ್ಟೇ ಮಹತ್ತರವಾಗಿ, ಕೆಲವು ವಿಷಯಗಳಲ್ಲಿ ಇನ್ನೂ ಮಿಗಿಲಾಗಿ ಪ್ರಕಟವಾಗಿದೆ.

ಕುವೆಂಪು ಅವರ, ಈ ಅರ್ಧಶತಮಾನದ ಸಾಹಿತ್ಯ ನಿರ್ಮಿತಿಯನ್ನು ಅನು ಕ್ರಮವಾಗಿ ಅವಲೋಕಿಸಿದರೆ, ಅದರಲ್ಲಿ ನಮ್ಮ ಇಡೀ ರಾಷ್ಟ್ರಜೀವನದ ಸಾಂಸ್ಕೃತಿಕ ಇತಿಹಾಸವನ್ನೆ ಕಾಣಬಹುದಾಗಿದೆ. ಸ್ವಾತಂತ್ರ್ಯ ಪೂರ್ವದ ಗಾಂಧೀಯುಗದ ಆದರ್ಶಗಳಿಗೆ, ಕನಸುಗಳಿಗೆ, ಆವೇಶಗಳಿಗೆ, ನೋವುಗಳಿಗೆ ಹೋರಾಟಗಳಿಗೆ ಮುಖವಾಣಿಯೂ, ಸ್ಫೂರ್ತಿಯೂ ಆಗುತ್ತ; ಸ್ವಾತಂತ್ರ್ಯ ಬಂದೊಡನೆಯೇ ಇಡೀ ರಾಷ್ಟ್ರದ ಉತ್ಸಾಹಕ್ಕೆ, ಎಚ್ಚರಕ್ಕೆ, ಅಭಿವ್ಯಕ್ತಿಯಾಗುತ್ತ; ಸ್ವಾತಂತ್ರ್ಯೋತ್ತರದ ಕಲುಷಿತ ರಾಜಕಾರಣಗಳ ನಡುವೆ, ಮೌಲ್ಯಗಳ ಅಧಃಪಾತಗಳ ನಡುವೆ, ತಳಮಳಗೊಂಡು, ಕುದಿದು, ಟೀಕಿಸಿ, ರಾಷ್ಟ್ರದ ಶ್ರೇಯಸ್ಸಿನ ಬಗೆಗೆ ತಿಳಿವಳಿಕೆ ನೀಡುತ್ತಾ–ಸದಾ ಎಚ್ಚರವಾಗಿ ಬದುಕಿದ ಲೇಖಕರಿವರು. ವಿವೇಕಾನಂದ, ಗಾಂಧೀ, ಅರವಿಂದರ ಯುಗಧರ್ಮವನ್ನು ಹೇಗೊ ಹಾಗೆಯೇ, ಲೋಹಿಯಾ, ವಿನೋಬಾ, ಜೆ. ಪಿ. –ಇವರ ವಿಚಾರವಾಣಿಯನ್ನೂ ತಮ್ಮ ಬರೆಹಗಳ ಮೂಲಕ ಎತ್ತಿಹಿಡಿದವರಿವರು. ಕನ್ನಡ ಸಾಹಿತ್ಯ ಪರಂಪರೆಯ ಹಿನ್ನೆಲೆಯಲ್ಲಿ,

ಭಾರತೀಯತೆಯನ್ನು ಅನುಸಂಧಾನ ಮಾಡಿ ಕೊಳ್ಳುತ್ತಾ, ಜಗತ್ ಸಾಹಿತ್ಯದ ಸತ್ವವನ್ನು ಮೈಗೂಡಿಸಿಕೊಂಡು ಬೆಳೆದವರಿವರು. ಸಹ್ಯಾದ್ರಿಯ ಸಹಸ್ರಮುಖಿಯಾದ ನಿಸರ್ಗದ ಚೆಲುವನ್ನು ಮೊಟ್ಟಮೊದಲು ಕನ್ನಡದಲ್ಲಿ ಸೆರೆಹಿಡಿದುಕೊಡುತ್ತಲೇ, ಅದೇ ನಿಸರ್ಗದ ನಡುವಣ ಸಾಮಾಜಿಕ ಪರಿಸರದ, ಸರಳ ಸಾಧಾರಣದ ಬದುಕನ್ನು ಅತ್ಯಂತ ವಾಸ್ತವವಾಗಿ ತೆರೆದು ತೋರಿದವರಿವರು. 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ಬರೆಯುತ್ತಾ, ಉದಾತ್ತ ಪಾತ್ರಗಳನ್ನು, ಉದಾತ್ತ ಮೌಲ್ಯಗಳನ್ನು, ಶ್ರೀರಾಮ ಸೀತೆಯರ ಅಮರ ಪ್ರೇಮವನ್ನು ಚಿತ್ರಿಸುತ್ತಲೇ, ಮತ್ತೊಂದೆಡೆ ಅತ್ಯಂತ ದಲಿತ ವರ್ಗಕ್ಕೆ ಸೇರಿದ ಸಾಮಾನ್ಯ ಹೊಲೆಯರ ಬದುಕನ್ನು ಅದೇ ಶ್ರದ್ಧೆಯಿಂದ ವರ್ಣಿಸುವ ಪೂರ್ಣದೃಷ್ಟಿಯನ್ನು ಪ್ರಕಟಿಸಿದವರಿವರು. ಸನಾತನವಾದ ವೇದೋಪ ನಿಷತ್ತುಗಳ, ಆಧ್ಯಾತ್ಮಿಕಸಾರವನ್ನು ಮೈಗೂಡಿಸಿಕೊಂಡು, ಸತ್ಪರಂಪರೆಯ ವಕ್ತಾರರಂತೆ ತೋರುತ್ತ, ಆಧ್ಯಾತ್ಮಿಕತೆ, ಆತ್ಮದ ಶ್ರೇಯಸ್ಸು ಇತ್ಯಾದಿಗಳನ್ನು ಪ್ರತಿಪಾದಿಸುತ್ತಲೇ, ಅದೇ ಪರಂಪರೆಯ ಹೆಸರಿನಲ್ಲಿ, ಮೌಢ್ಯತೆಯನ್ನು ಪೋಷಿಸುತ್ತಾ, ಜನಸಾಮಾನ್ಯರನ್ನು ಸದಾ ಕತ್ತಲಿನಲ್ಲಿರಿಸಿ ಅವರನ್ನು ಸುಲಿದು ತಿನ್ನುವ ಪುರೋಹಿತಷಾಹಿಯ ಕುತಂತ್ರಗಳನ್ನು ಖಂಡಿಸುತ್ತ, ವೈಜ್ಞಾನಿಕ ಹಾಗೂ ವೈಚಾರಿಕ ನಿಲವುಗಳನ್ನು ಎತ್ತಿ ಹಿಡಿದವರಿವರು. ತಮ್ಮ ಸಾಹಿತ್ಯ ನಿರ್ಮಿತಿಗೆ ಸಂಸ್ಕೃತ, ಹಾಗೂ ಪಾಶ್ಚಿಮಾತ್ಯ ಸಾಹಿತ್ಯಗಳಿಂದ ಬಹುಮಟ್ಟಿನ ಪ್ರೇರಣೆಯನ್ನು ಪಡೆದು, ಅದೆಲ್ಲದರ ಸತ್ವವನ್ನು ಕನ್ನಡ ಭಾಷೆಗೆ ತುಂಬಿ, ಪಾಶ್ಚಾತ್ಯ ಸಾಹಿತ್ಯಕ್ಕೆ ಸವಾಲಾಗುವಂತೆ ಕೃತಿ ನಿರ್ಮಾಣ ಮಾಡುತ್ತ, ಕನ್ನಡ ನಾಡಿನಲ್ಲಿ ಕನ್ನಡಿಗರ ಉದ್ಧಾರ ಕನ್ನಡದಿಂದಲೇ ಎಂಬ ನಿಷ್ಠೆಯ ಡಿಂಡಿಮವನ್ನು ಮೊಳಗಿಸಿ ಕನ್ನಡದ ಸ್ಥಾನಮಾನಗಳಿಗಾಗಿ ಹೋರಾಡಿದವರಿವರು.

ಟಿ. ಎಸ್. ಇಲಿಯೆಟ್ 'ಕ್ಲಾಸಿಕ್' ಅಂದರೆ ಏನೆಂಬುದನ್ನು ವರ್ಣಿಸುತ್ತಾ, ಅದರ ಮುಖ್ಯ ಲಕ್ಷಣ 'ಸಮಗ್ರತೆ' ಎನ್ನುತ್ತಾನೆ. ಹೊಸಗನ್ನಡ ಸಾಹಿತ್ಯದಲ್ಲಿ 'ಸಮಗ್ರತೆ' ಕಾಣಿಸುವುದು ಕುವೆಂಪು ಅವರಲ್ಲಿಯೇ. ಆದುದರಿಂದಲೆ ಅವರನ್ನು ಹೊಸಗನ್ನಡದ ಅತ್ಯಂತ

ಮಹತ್ವದ ಲೇಖಕರು ಅಂದದ್ದು. ಹಾಗೆಯೆ, ಇಂಥ ಮಹತ್ವದ ಲೇಖಕರ ಕೃತಿಗಳನ್ನು ಸರಿಯಾಗಿ ಅಧ್ಯಯನ ಮಾಡದೆ ಹೋದರೆ, ಯಾವ ನಿಷ್ಠಾವಂತ ಸಾಹಿತ್ಯದ ವಿದ್ಯಾರ್ಥಿಯ ಅಭ್ಯಾಸವೂ ಅಪೂರ್ಣವಾಗುತ್ತದೆ ಎಂಬುದನ್ನು ಮರೆಯಬಾರದು. ಜತೆಗೆ, ಕುವೆಂಪು ಅವರ ಸಾಹಿತ್ಯದ ಬಗ್ಗೆ ಇನ್ನೂ ನಿಜವಾದ ವಿಮರ್ಶೆಯಾಗಬೇಕು ಎಂಬುದನ್ನು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿದೆ. ಈಗಾಗಲೆ ಕುವೆಂಪು ಅವರ ಕೃತಿಗಳನ್ನು ಕುರಿತು ಸಾಕಷ್ಟು ದಪ್ಪ ದಪ್ಪವಾದ ಗ್ರಂಥಗಳೇನೋ ಬಂದಿವೆ. ಆದರೆ ಅವೆಲ್ಲ ಬಹುಮಟ್ಟಿಗೆ ಅವರ ಸಾಹಿತ್ಯವನ್ನು ಪರಿಚಯ ಮಾಡಿಕೊಡುವ ಪ್ರಯತ್ನಗಳೂ, ಎಷ್ಟೋವೇಳೆ ಕೇವಲ 'ಕವಿ ಪೂಜೆ' 'ಕಾವ್ಯಾರಾಧನೆ'ಗಳೂ ಆಗಿ ತೋರುತ್ತವೆಯೆ ಹೊರತು, ಅವರ ಸಾಹಿತ್ಯ ನಿರ್ಮಿತಿಯನ್ನು ಸರಿಯಾದ ನಿಟ್ಟಿನಿಂದ ಅಭ್ಯಾಸಮಾಡುವ, ಅರ್ಥೈಸಿ ಕೊಳ್ಳುವ, ಮತ್ತು ತಕ್ಕ ಪೂರ್ವಸಿದ್ಧತೆಗಳಿಂದ ವಿಮರ್ಶಿಸಿ ನೋಡುವ, ವಸ್ತು ನಿಷ್ಠ ಅಧ್ಯಯನದ ಪರಿಣಾಮಗಳಾಗಿಲ್ಲವೆಂದೇ ನನ್ನ ಅಳುಕು.

ಇದೇನೇ ಇರಲಿ ಶ್ರೀ ಹರಿಹರಪ್ರಿಯರು ಮಾತ್ರ ಈ ಸಂಪುಟದ ಮೂಲಕ, ಕುವೆಂಪು ಅವರ 'ಒಲವು ನಿಲವು'ಗಳನ್ನು ಹಿಡಿದಿಡಲು ನಡೆಯಿಸಿರುವ ಈ ಪ್ರಯತ್ನ ಅತ್ಯಂತ ಪ್ರಶಂಸೆಗೆ ಅರ್ಹವಾಗಿದೆ. ಕುವೆಂಪು ಅವರ ಕೃತಿಗಳನ್ನು ಹೀಗೆ ಪ್ರಾಮಾಣಿಕವಾಗಿ, ಶ್ರದ್ಧೆಯಿಂದ, ತಾಳ್ಮೆಯಿಂದ ಓದುವ ಸಹೃದಯರು ನಮ್ಮಲ್ಲಿ ಬಹಳ ಜನ ಇಲ್ಲ. ಅಷ್ಟೇ ಯಾಕೆ ಕನ್ನಡದ ಮಹತ್ವದ ಲೇಖಕರ ಕೃತಿಗಳನ್ನು ಸಮಗ್ರವಾಗಿ, ಅದೊಂದು ಅಗತ್ಯವಾದ ಅಭ್ಯಾಸವೆಂಬಂತೆ ಓದಿಮುಗಿಸಿ, ಅನಂತರ ವಿಮರ್ಶೆಯ ತೀರ್ಮಾನಗಳಿಗೆ ಬರುವ ಶ್ರದ್ಧಾವಂತರನ್ನು ನಾವು ದೀಪ ಹಚ್ಚಿ ಕೊಂಡು ಹುಡುಕಬೇಕಾಗಿದೆ! ಈ ಪರಿಸ್ಥಿತಿಯಲ್ಲಿ ಹರಿಹರಪ್ರಿಯರು, ಕುವೆಂಪು ಅವರ ಎಷ್ಟೋ ಕೃತಿಗಳನ್ನು ಓದಿ, ಅವುಗಳಿಂದ ಅನೇಕ 'ಹೇಳಿಕೆ'ಗಳನ್ನು ಸಂಗ್ರಹಿಸಿ ಕುವೆಂಪು ಅವರ 'ಒಲವು ನಿಲವು'ಗಳನ್ನು ಕಾಣಿಸಲು ಪ್ರಯತ್ನಪಟ್ಟಿದ್ದಾರೆ. ಹೀಗೆ, ಬಿಡಿ ಬಿಡಿ ಹೇಳಿಕೆಗಳನ್ನು ಸಂಗ್ರಹಿಸಿ ಒಂದೆಡೆ ಕೂಡಿಸಿ, ಯಾವುದೇ

ಕವಿಯ ಅಥವಾ ಲೇಖಕನ 'ಒಲವು-ನಿಲವು'ಗಳನ್ನು ಕಾಣಲು ಸಾಧ್ಯವೆ ಎಂಬ ಅನುಮಾನ ವಿದೆ ನನಗೆ. ಆದರೆ, ಹರಿಹರಪ್ರಿಯರ ಈ ಪ್ರಯತ್ನದಿಂದಾಗಿ ಕುವೆಂಪು ಅವರ ಸಾಹಿತ್ಯ ನಿರ್ಮಿತಿಯ ಹಿನ್ನೆಲೆಗಿರಬಹುದಾದ, ಅವರ ವೈಚಾರಿಕ ತಾತ್ವಿಕಭಿತ್ತಿಯ ಪರಿಚಯವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ಈ ಹೊತ್ತಗೆಯಲ್ಲಿ ಸಮಾವೇಶವಾಗಿರುವ ಗದ್ಯರೂಪದ, ಹಾಗೂ ಪದ್ಯರೂಪದ 'ಹೇಳಿಕೆ'ಗಳು, ತಮ್ಮ ಮೂಲಕೃತಿಯ ಸಂದರ್ಭದಲ್ಲಿ ಮಾಡುತ್ತಿದ್ದ, ಪರಿಣಾಮಗಳಿಂದ, ಭಿನ್ನವಾದ, ಕೇವಲ ಚಿಂತನಾಪ್ರಧಾನವಾದ ಪರಿಣಾಮವನ್ನು ಇಲ್ಲಿ ಸಾಧಿಸುತ್ತವೆ. ಪದ್ಯರೂಪದ ಭಾಗಗಳಂತೂ, ಸಂಬಂಧಿಸಿದ ಕೃತಿಯ ಮೈಯಲ್ಲಿ ಪಡೆದಿದ್ದ ಧ್ವನಿಪ್ರಚುರತೆ ಹಾಗೂ ಕಲಾತ್ಮಕತೆಗಳನ್ನು ಕಳೆದುಕೊಂಡು, ರಮ್ಯವಾದ ರೀತಿಯಲ್ಲಿ ಹರಳುಗೊಳಿಸಿದ ಚಿಂತನೆಗಳಾಗಿ ನಿಲ್ಲುತ್ತವೆ. ಆದರೆ ಈ ಎಲ್ಲವುಗಳಲ್ಲಿ, ಕುವೆಂಪು ಅವರು ಬದುಕಿನ ಎಷ್ಟೊಂದು ಮುಖಗಳ ಬಗೆಗೆ ಪಡಿಮಿಡಿ ದಿದ್ದಾರೆಂಬುದು ಆಶ್ಚರ್ಯಕರವಾಗಿ ಸ್ಫುಟವಾಗಿದೆ: ನಿಸರ್ಗ ಸೌಂದರ್ಯವನ್ನು ಕುರಿತು, ಕಾವ್ಯ-ಕಲೆಗಳನ್ನು ಕುರಿತು, ಸಾಹಿತ್ಯ, ತತ್ತ್ವ, ವಿಜ್ಞಾನಗಳನ್ನು ಕುರಿತು, ಜಾತಿ, ಧರ್ಮ, ಅಧ್ಯಾತ್ಮ, ದೇವರು, ಮಹಾಪುರುಷರು ಇತ್ಯಾದಿಗಳನ್ನು ಕುರಿತು, ಪರಂಪರೆ, ರಾಜಕೀಯ, ಸಾಮಾಜಿಕತೆಗಳನ್ನು ಕುರಿತು, ಅನಕ್ಷರತೆ, ಬಡತನ, ಮೂಢನಂಬಿಕೆ, ಶೋಷಣೆಗಳನ್ನು ಕುರಿತು, ರಾಷ್ಟ್ರೀಯತೆ, ಶಿಕ್ಷಣ, ಶಿಕ್ಷಣ ಮಾಧ್ಯಮ ವನ್ನು ಕುರಿತು, ಕುವೆಂಪು ಅವರು ಕಂಡದ್ದು, ಕನಸಿದ್ದು, ಆಶಿಸಿದ್ದು, ಚಿಂತಿಸಿದ್ದು, ಪ್ರತಿಕ್ರಿಯಿಸಿದ್ದು ಎಲ್ಲವೂ ಇಲ್ಲಿವೆ. ನಾಸ್ತಿಕನ ಕೆಚ್ಚು, ಆಸ್ತಿಕನ ಶ್ರದ್ಧೆ, ವಿಚಾರವಾದಿಯ ತೀಕ್ಷ್ಣತೆ, ಜಾತ್ಯತೀತನ ಸಮದರ್ಶಿತ್ವ, ಮಾನವತಾವಾದಿಯ ಅನುಕಂಪೆ, ಸುಧಾರಕನ ವ್ಯಗ್ರತೆ, ಕ್ರಾಂತಿಕಾರನ ರೊಚ್ಚು, ಕವಿಯ ರಸವಂತಿಕೆ, ಸಮನ್ವಯ ದೃಷ್ಟಿಯ ಸಮಗ್ರತೆ, ವಿಜ್ಞಾನಿಯ ಚಿಕಿತ್ಸಕದೃಷ್ಟಿ-ಈ ಎಲ್ಲವೂ ಇಲ್ಲಿ ಮೇಳವಿಸಿವೆ. ಒಂದು ಮಾತಿನಲ್ಲಿ ಹೇಳುವುದಾದರೆ ಕುವೆಂಪು ಅವರ ತಾತ್ವಿಕ-ವೈಚಾರಿಕ ನಿಲವುಗಳನ್ನು, ಯಾರಾದರೂ ಈ ಸಂಗ್ರಹದಲ್ಲಿ ಗುರುತಿಸಬಹುದಾಗಿದೆ.

ನಾನು ಕಂಡ ಹಾಗೆ ಹರಿಹರಪ್ರಿಯರಿಗೆ ಏನಾದರೂ ಒಂದು ಹೊಸತನ್ನು ಮಾಡುವ ಗೀಳು. ಅದರಲ್ಲೂ ಕುವೆಂಪು ಅವರನ್ನು ಕುರಿತು ಇವರು ಈಗಾಗಲೇ ಯೋಜಿಸಿ ಪ್ರಕಟಿಸಿರುವ ಕೆಲವು ಕೃತಿಗಳು ಈ ಮಾತಿಗೆ ಸಾಕ್ಷಿಯಾಗಿವೆ. 'ಇವರು ಕುವೆಂಪು', 'ಕುವೆಂಪು ಪತ್ರಗಳು', 'ಕುವೆಂಪು ರಾಮಾಯಣ ಬರಹಗಾರರ ಪ್ರತಿ ಕ್ರಿಯೆ' ಇವುಗಳು ಮತ್ತು ಇತ್ತೀಚೆಗೆ ಕುವೆಂಪು ಅವರ ಸಾಹಿತ್ಯ ಕೃತಿಗಳ ವಿಮರ್ಶೆಗೆ ಮೀಸಲಾಗಿರಬೇಕೆಂಬ ಉದ್ದೇಶದಿಂದ ಪ್ರಕಟಪಡಿಸಿದ 'ಕುವೆಂಪುದರ್ಶನ'-ಎಂಬ ದ್ವೈಮಾಸಿಕ ಪತ್ರಿಕೆಯ ಪ್ರಥಮ ಸಂಚಿಕೆ-ಇವೆಲ್ಲಾ ಹರಿಹರಪ್ರಿಯರು ಕುವೆಂಪು ಅವರ ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಮತ್ತು ಅರ್ಥಮಾಡಿಕೊಡುವಲ್ಲಿ ಕೈಕೊಂಡ ಹೊಸ ಪ್ರಯೋಗಗಳು. ಈ ಪ್ರಯತ್ನಗಳ ಪಂಕ್ತಿಯಲ್ಲಿ 'ಕುವೆಂಪು ಒಲವು ನಿಲವು' ಎಂಬ ಈ ಹೊತ್ತಗೆ, ನನಗೆ ತಿಳಿದಮಟ್ಟಿಗೆ ಕನ್ನಡದಲ್ಲಿ ಮೊದಲ ಸಾಹಸ ವಾಗಿದೆ. ಈ ಸಾಹಸದಲ್ಲಿ, ಹರಿಹರಪ್ರಿಯರ ಇತಿ-ಮಿತಿಗಳಿಂದ ಉಂಟಾಗಿರುವ ಅರೆ-ಕೊರೆಗಳೇನೇ ಇರಲಿ, ಇಂಥ ಕೃತಿಯ ಸಂಕಲನ ಕಾರ್ಯದ ಹಿಂದಿರುವ ಅವರ ಕಳಕಳಿ, ಶ್ರದ್ಧೆ ಹಾಗೂ ಶ್ರಮಗಳನ್ನು ಯಾರೂ ಕಡೆಗಣಿಸುವಂತಿಲ್ಲ. ಕುವೆಂಪು ಅವರ ಕೃತಿಗಳ ಅಧ್ಯಯನಕ್ಕೆ, ಹಾಗೂ ಚರ್ಚೆಗೆ ಹೊಸ ನೆಲೆ-ಹಿನ್ನೆಲೆಗಳನ್ನು ಈ ಕೃತಿ ಖಂಡಿತವಾಗಿ ಒದಗಿಸುತ್ತದೆ. ಈ ಬಗೆಯ ಪ್ರಯತ್ನ ಕನ್ನಡದ ಇತರ ಮಹತ್ವದ ಲೇಖಕರ ಬಗೆಗೂ ನಡೆಯ ಬೇಕಾದ ಅಗತ್ಯವಿದೆ. ಈ ದಿಕ್ಕಿನಲ್ಲಿ ಹೊಸ ಹೆಜ್ಜೆಯನ್ನಿರಿಸಿರುವ ಹರಿಹರಪ್ರಿಯರ ದಿಟ್ಟತನಕ್ಕೆ ನಾನು ಬೆರಗಾಗಿದ್ದೇನೆ; ಹಾಗೂ ಈ ವಿನೂತನ ಸಾಹಸವನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

೨೫-೬-೧೯೯೨ ಜಿ.ಎಸ್. ಶಿವರುದ್ರಪ್ಪ

ವಿಷಯಸೂಚಿ

ಕುವೆಂಪು

ಒಲವು ನಿಲವು

೧

ಹುಲಿಯನ್ನು ಕೊಲ್ಲುತ್ತೇನೆ ಎಂದು ಹುಲಿ ಅಲ್ಲಿ ಇರುವಾಗ ಒಂದಿಷ್ಟು ಕಲ್ಲು ತೆಗೆದುಕೊಂಡು ಸರಿಯಾಗಿ ತಲೆಗೆ ಗುರಿಯಿಟ್ಟು ಹೊಡೆಯುತ್ತೇನೆಂದರೆ ಏಟ್ಟು ಬಿದ್ದ ಕೂಡಲೆ ಅದು ಒಂದು ಆಮ್ ಅಂತ ನಿಮ್ಮನ್ನು ಅಪ್ಪಳಿಸಿ ಒಂದೇ ಬಾರಿಗೆ ಪೂರೈಸುತ್ತದೆ. ಅದನ್ನು ಹೊಡೆಯಬೇಕಾದರೆ ನೀವು ಜೋಡುನಳಿಗೆ ತೋಟಾಕೋವಿ ಇಟ್ಟುಕೊಂಡು ಬಿಲ್ಲೆತ್ತಿ ಎಳೆದುಕೊಳ್ಳಬೇಕು. ಹಾಗೆ ಗುರಿಕಟ್ಟಿ ತಲೆಗೆ ಹೊಡೆದರೆ ಒಂದೇ ಹೊಡೆತಕ್ಕೆ ಅದು ಬೀಳಬೇಕು. ಅದು ಬಿಟ್ಟು ಗಾಯ ಮಾಡಿ ಬಿಡೋದಲ್ಲ, ಹಾಗೆಯೆ ಈ ಪುರೋಹಿತಶಾಹಿ ಹುಲಿಯಂತೆ.

ವಿಚಾರಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೭೩

೨

ಯಾಕಿಂತು
ಕ್ಯೂನಿಂತು
ನುಗ್ಗುತಿರುವಿರಿ ಜನ್ಮಧಾರಣೆಗೆ,
ಓ ನತದೃಷ್ಟ ಪ್ರೇತಗಳಿರಾ ?

ಪ್ರೇತಕ್ಯೂ ಪ್ರೇತಕ್ಯೂ ಪುಟ ೭೪

೩

ಉತ್ತಮ ಶ್ರೇಣಿಗೆ ಸೇರುವ ಕಾವ್ಯಕ್ಕೆ ಆತ್ಮಪ್ರಾಯವಾದ ಭಾವ ಆನಂದ ಆವೇಶಗಳೂ, ಗುಣಪ್ರಾಯವಾದ ಉಪಮೆ ಉತ್ಪ್ರೇಕ್ಷೆರೂಪಕಾದಿ ಅರ್ಥಾಲಂಕಾರಗಳೂ ಇರಲೆಬೇಕು. ರೂಪಪ್ರಾಯವಾದ ಒಳ್ಳೆಯ ಶೈಲಿಯೂ ಇದ್ದರೆ, ಅದು ಮತ್ತೂ ಮನೋಹರವಾಗುವುದು. ಭೂಷಣ ಪ್ರಾಯವಾದ ಯಮಕ, ಅನುಪ್ರಾಸ, ಪ್ರತ್ಯನುಪ್ರಾಸ ಮೊದಲಾದ ಶಬ್ದಾಲಂಕಾರಗಳೂ ಗಾಂಭೀರ್ಯ ಕೆಡದಂತೆ ಬಹಳ ಮಿತವಾಗಿದ್ದರೆ ಆ ಕಾವ್ಯವೂ ಆದರ್ಶದ ಸೀಮೆಗೇರುವುದರಲ್ಲಿ ಸಂದೇಹವಿಲ್ಲ.

ಇತ್ಯಾದಿ, ಉಪಮಾಲೋಲ ಲಕ್ಷ್ಮೀಶ ಪುಟ ೧೯

೪

ಕನ್ನಡ ಜನರೆಲ್ಲರ ಮೇಲಾಣೆ !
ಕನ್ನಡ ನಾಡೊಂದಾಗದೆ ಮಾಣೆ !
ತೊಡು ದೀಕ್ಷೆಯ ! ಇಡು ರಕ್ಷೆಯ !
ಕಂಕಣ ಕಟ್ಟಿಂದೇ !
ಇನ್ನೆಂದೂ ತಾನೊಂದೇ !
ಕನ್ನಡ ನಾಡೊಂದೇ !

ಇಕ್ಷುಗಂಗೋತ್ರಿ, ಕರ್ಣಾಟಕ ಮಂತ್ರದೀಕ್ಷೆ, ಪುಟ ೫೮

೫

ಭಾಷೆಯಕೊಟ್ಟರೆ, ಮೂರ್ತೀ, ನಾವು
ಮೋಸವ ಮಾಡದೆ ಸಲ್ಲಿಸಬೇಕು.
ಆದುದರಿಂದ, ಮೂರ್ತೀ, ಕೇಳು:
ಸತ್ಯವನೆಂದೂ ತ್ಯಜಿಸದೆ ಬಾಳು !

ಬೊಮ್ಮನಹಳ್ಳಿಯ ಕಿಂದರಿಜೋಗಿ, ಪಂಕ್ತಿ ೪೨೫-೮, ಪುಟ ೨೬

೬

ನನಗಪ್ಪುವಭಿಲಾಷೆ ! ನಾಚಿಕೆಯು ಬಿಡದು !
ನಾಚಿಕೆಯನುಳಿದವರು ಸುಖವನನುಭವಿಸಿಹರು !
ನಾಚಿ ಕೆಟ್ಟೆನು ನಾನು ! ನಾಚೆ ನಾನಿನ್ನು !

ಷೋಡಶಿ, ನಾಚೆ ನಾನಿನ್ನು, ಪುಟ ೪೬

೭

ಜನಪದ ಸಾಹಿತ್ಯವನ್ನು ಒಟ್ಟುಗೂಡಿಸುವುದು ನಮ್ಮೆಲ್ಲರ ಕರ್ತವ್ಯ. ಹಳ್ಳಿಯ ಹಾಡುಗಳು, ಕೋಲಾಟದ ಪದಗಳು, ಲಾವಣಿಗಳು ಮೊದಲಾದುವುಗಳಲ್ಲಿ ಸಾಮಾನ್ಯ ಜನರ ಮನೋಭಾವಗಳು ಬಿಚ್ಚಿತೋರುತ್ತವೆ. ಕೆಲವು ಸಾರಿ ಅವುಗಳಲ್ಲಿ ಉತ್ತಮ ಸಾಹಿತ್ಯವೂ ದೊರಕುತ್ತದೆ. ಈ ಭಾಗದ ಕೆಲಸಕ್ಕೆ ನಾವಿನ್ನೂ ಕೈಹಾಕಿಲ್ಲ ವೆಂದೇ ಹೇಳಬಹುದು. ಈಗೀಗ ಜಯಕರ್ನಾಟಕ, ಪ್ರಬುದ್ಧ ಕರ್ನಾಟಕ ಮೊದಲಾದ ಪತ್ರಿಕೆಗಳಲ್ಲಿ ಅಲ್ಪಸ್ವಲ್ಪ ಜನಪದ ಸಾಹಿತ್ಯ ಪ್ರಕಟವಾಗುತ್ತಿದೆ. ಆದರೆ ಅದು ಸಾಲದು. ಈ ಕೆಲಸವು ಒಬ್ಬಿಬ್ಬರಿಂದ ಸಾಧ್ಯವಲ್ಲ. ಆಡಿಕೆಯ ಸಮಯದಲ್ಲಿ ವಿದ್ಯಾರ್ಥಿಗಳು ತಮ್ಮ

ನಮ್ಮ ಸಾಹಿತ್ಯಕ್ಕೊಂದು ಹೊಸ ಕೋಡು ಬಂದಂತಾಗುವುದು.

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೨೬-೭

೮

ಹೊಸ ರೀತಿಯಿಂದ ಬರೆದ ನಾಟಕಗಳನ್ನು ಆಡಿ ತೋರಿಸುವುದ ರಿಂದ ಜನರಲ್ಲಿ ಸಾಹಿತ್ಯಾಭಿಮಾನ ಹೆಚ್ಚುವುದು. ಅಲ್ಲದೆ ನಾಟಕರಂಗ ಓದುಕಲಿತವರಿಗೂ ಓದುಕಲಿಯದವರಿಗೂ ಎಲ್ಲರಿಗೂ ಆದರಣೀಯವಾಗಿರುತ್ತದೆ. ರಂಗದ ಸಹಾಯ ದಿಂದ ಯಾವ ತತ್ವಗಳನ್ನು ಬೇಕಾದರೂ ಜನರಲ್ಲಿ ಹರಡಬಹುದು.

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೨೭

೯

ಜಯ್ ಭಾರತ ಜನನಿಯ ತನುಜಾತೆ,
ಜಯ ಹೇ ಕರ್ಣಾಟಕ ಮಾತೆ!

ಕೊಳಲು, ಜಯ ಹೇ ಕರ್ಣಾಟಕ ಮಾತೆ, ಪುಟ ೧೦೬

೧೦

ಬಡವರಾಗಿಹ ನರರಿಗೆಲ್ಲವು
ಅಡವಿ ಅರಮನೆ

ಅಮಲನ ಕಥೆ, ಪಾತ್ರ ಅಮಲ, ಪುಟ ೧೧

೧೧

ಪೇಳ್ವುದನಾಗಳೆ ಪೇಳಲದುವೆ ಲೇಸು.

ಬಿರುಗಾಳಿ, ಪಾತ್ರ ರಂಗನಾಯಕ, ಪುಟ ೪೧

೧೨

ಯಾರಿಗೆ ತನಗಿಂತಲೂ ದೊಡ್ಡದೊಂದಿದೆ-'ಅಸ್ತಿ'-ಎಂಬ ಪ್ರಜ್ಞೆ ಇರುವುದೊ ಅವರೆಲ್ಲ ಆಸ್ತಿಕರೆ.

ಷಷ್ಠಿನಮನ, ಶ್ರೀ ನೇಹರೂ: ವೈಜ್ಞಾನಿಕದೃಷ್ಟಿ ಮತ್ತು ವಿಚಾರಬುದ್ಧಿ, ಪುಟ ೨೬೯

೧೩

ಕಲೆ ಕನ್ನಡಿಯ ನೆಳಲು ; ಅನುಭವವೆ ಮೂಲ ಮುಖ.

ಕೃತ್ತಿಕೆ, ಎಚ್ಚರಿಕೆ, ಪುಟ ೩೩

೧೪

ನಿಲ್ಲುವುದೆ ಸಾವು;
ಚಲಿಸುವುದೆ ಬಾಳು.

ನವಿಲು, ಜೋಗ, ಪುಟ ೪೦

೧೫

ನಮ್ಮಂದಿನಾ ಕೆಚ್ಚು
ನಮ್ಮಂದಿನಾ ನೆಚ್ಚು
ನಿಮ್ಮೊಳಿಂದುದ್ಭವಿಸಲಾ ದಿವ್ಯ ಹುಚ್ಚು!

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಶಿಲಾಭೇರಿ, ಪುಟ ೪೫

೧೬

ಹೊಸ ಕಾಲದ ಹೊಸ ಧರ್ಮವನ್ನು ಹೇಳಲು ಹೊಸಕಥೆಯನ್ನು ಕಟ್ಟಿದರೆ ಸಜೀವವಾದ ಜಾತಿ ವಿದ್ವೇಷದ ಉದ್ರೇಕ ಭೂತಗಳನ್ನು ಎಬ್ಬಿಸುತ್ತದೆ. ಆ ಸ್ಥಳದವರೂ ಈ ಮತದವರೂ ಆ ಜಾತಿಯವರೂ ಈ ಕೋಮಿನವರೂ ಕೋರ್ಟಿಗೆ ಹೋಗುತ್ತೇವೆ ಎನ್ನುತ್ತಾರೆ. ಆ ರಗಳೆಯೆ ಬೇಡವೆಂದು ಹಳೆಯ ಕಥೆ ಗಳನ್ನು ಅಳವಡಿಸಿಕೊಂಡರೆ ವಿಮರ್ಶಕರು ನಮ್ಮ 'ಕ್ಷೇಮ'ದ ವಿಚಾರವಾಗಿ ಕಾತರರಾಗಿ ಸೂಚನೆ ಕೊಡ ಹೋಗುತ್ತಾರೆ. ಎಂತಹ ವಿಚಿತ್ರ ಸನ್ನಿವೇಶ–ಸಾಹಿತ್ಯದ ಸಮಾಧಿಗೆ!

ಶೂದ್ರ ತಪಸ್ವಿ, ಮಾರ್ನುಡಿ, ಪುಟ ೪೨

೧೭

ವಿಧಿ ಆಟವಾಡುತಿಹ
ಚೆಂಡುಗಳು ನಾವೆಲ್ಲ;
ಉರುಳುವೆವು, ಹೊರಳುವೆವು,
ತಾಗುವೆವು, ಬಾಗುವೆವು :
ಸ್ವಾತಂತ್ರ್ಯವಿಲ್ಲದೆಡೆ ಇಹುದೆಂಬ ಹುಸಿಚಿಂತೆ ಏಕೆ ?

ಹೊನ್ನ ಹೊತ್ತಾರೆ, ಸಂದೇಹ, ಪುಟ ೫

೧೮

ಏಕಮೇವಾದ್ವಿತೀಯವಾದ ತಾದಾತ್ಮ್ಯವೆ ಮೂರ್ತಿಪೂಜೆಯ ಗಂತವ್ಯಲಕ್ಷ್ಯ ಅದೇ ಸರ್ವಸಾಧನೆಗಳ ಚರಮ ಸಿದ್ಧಿ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೫೦

೧೯

೧೯

ಧರ್ಮದಿಂ ಧರ್ಮವಂ ಗೆಲ್ಲುವುದೆ ಮರ್ಮ !

ಯಮನಸೋಲು, ಪಾತ್ರ ಸಾವಿತ್ರಿ, ಪುಟ ೪೦

೨೦

ವರ್ಣಾಶ್ರಮಕೆ ನೀ ಪರಾಭವ !
ಜಾತಿಪದ್ಧತಿಗೆ ನೀ ಪರಾಭವ !
ಅನೈಕ್ಯತೆಗೆ ನೀ ಪರಾಭವ !
ಮತೀಯತೆಗೆ ನೀ ಪರಾಭವ !
ವೇದಾಂತಕೆ ವಿಜಯೀ ಭವ ;
ವಿಜ್ಞಾನಕೆ ವಿಜಯೀ ಭವ.

ಪ್ರೇತಕ್ಯೂ, ಪರಾಭವ ಸಂವತ್ಸರ ಪುರುಷನಿಗೆ, ಪುಟ ೭೨

೨೧

ಜಿಹ್ವೆಯಿಂದಲ್ತು,
ಮಿಂಚುವುದು ಕಣ್ಣ ಕಾಂತಿಯಿನಾತನಾತ್ಮಂ.

ಶ್ರೀ ರಾಮಾಯಣ ದರ್ಶನಂ, ಸುಗ್ರೀವಾಜ್ಞೆ, ಪಾತ್ರ ರಾಮ, ಪುಟ ೩೫೮

೨೨

ಮದ್ಯಪಾನದಿಂದಲೂ ಕೋಪೋದ್ರೇಕದಿಂದಲೂ ಮೈಮರೆತ ವ್ಯಕ್ತಿ ಸಾತ್ವಿಕ ವಚನಗಳಿಗೆ ಲಕ್ಷಕೊಡುವುದು ದುಷ್ಕರವೆಂಬುದೇನೋ ಸತ್ಯ

ಕಾನೂರು ಹೆಗ್ಗಡಿತಿ, ಪುಟ ೨೧೧

೨೩

ಭ್ರಾಂತಿರಹಿತಾನಂದಶೀಲ ಕಾನನ ಶಾಂತಿಯಂ;
ಆದರ್ಶಸಾಧನೆಯ ಹರ್ಷದುಜ್ಜ್ವಲ ಶಾಂತಿಯಂ;
ಚಿಂತೆಗೆ ಅತೀತಮಪ್ಪಾ ಸೃಷ್ಟಿಯ ರಹಸ್ಯಮಂ
ಚಿಂತಿಸುವ, ಚರ್ಚಿಸುವ, ಸಿದ್ಧಾಂತಗೊಳಿಸಿಯುಂ
ಸಂದೇಹಗೊಂಡದಂ ಮತ್ತೊಂದರಿಂ ತಿದ್ದಿ,
ಮತ್ತೆ ಮುರಿದದನೆ ಮಗುದೊಂದರಿಂ ತಿದ್ದಿ, ಮೇಣ್
ತತ್ತರಿಸುವನ್ನೆಗಂ ಬುದ್ಧಿ ಜಿಜ್ಞಾಸಿಸುತೆ
ಮುನ್ನಡೆವ ಸಾಹಸದ ಮಂಥನ ಮನಶ್ಶಾಂತಿಯಂ !

ಸೋತು ಗೆಲ್ಲುವ ಮತ್ತೆ ಗೆಲಿದು ಸೋಲುವ ಶಾಂತಿಯಂ !
ಧ್ಯಾನ ಜಪತಪ ಶಾಂತಿಯಂ ! ಹೋಮ ಧೂಮದ ಮತ್ತೆ
ಸಾಮಗಾನದ ವೇದ ಘೋಷದ ಚಿರ ಪವಿತ್ರತಾ
ಶಾಂತಿಯೆ ನಮೋ ನಿನಗೆ, ಓ ಋಷ್ಯಾಶ್ರಮದ ಶಾಂತಿ !

ಶ್ರೀ ರಾಮಾಯಣ ದರ್ಶನಂ, ಚಿತ್ರಕೂಟಕೆ, ಪುಟ ೧೪೩

೨೪

ಸ್ಥಳಗಳೆಲ್ಲ ಪವಿತ್ರ ಕ್ಷೇತ್ರಗಳೆ. ಎಲ್ಲದಕ್ಕೂ ಒಂದೊಂದು ಕಥೆಯೊ ಚರಿತ್ರೆಯೊ ಅಂಟಿರುತ್ತದೆ. ಒಂದೊಂದರ ಮಾಹಾತ್ಮ್ಯೆಯನ್ನು ಸಾರುವುದಕ್ಕೂ ಒಂದೊಂದು ಸ್ಥಳ ಪುರಾಣವಿರುತ್ತದೆ. ಇಲ್ಲಿ ಶಂಕರಾಚಾರ್ಯರು ತಪಸ್ಸು ಮಾಡಿದರು. ಇಲ್ಲಿ ರಾವಣ ತಪಸ್ಸು ಮಾಡಿದ್ದು. ಇಲ್ಲಿ ರಾಮ ತಪಸ್ಸು ಮಾಡಿ ಶಿವನಿಗೆ ತನ್ನ ಕಣ್ಣನ್ನೆ ಅರ್ಪಿಸಿದ್ದು. ಹೀಗೆಲ್ಲ ಎಲ್ಲಿ ನೋಡಿದರೂ ಪುರಾಣಗಳಿಗೂ ಭಾರತಕ್ಕೂ ರಾಮಾಯಣಕ್ಕೂ ಸಂಬಂಧಪಟ್ಟಂತೆ ಕ್ಷೇತ್ರ ಮಾಹಾತ್ಮ್ಯೆ ವರ್ಣಿತವಾಗುತ್ತದೆ. ಆದರೆ ಇದನ್ನೆಲ್ಲ ನಾವು ನಡೆದ ಚರಿತ್ರೆ ಎಂದು ನಂಬುವುದು ಅನಾವಶ್ಯಕ. ಅವುಗಳ ಉದ್ದೇಶ ಸಂಪೂರ್ಣವಾಗಿ ಭಾವೋಪಯೋಗಿಯೆ ಹೊರತು ಲೋಕೋಪಯೋಗಿಯಲ್ಲ. ಸಾಹಿತ್ಯ ನಾವು ನಾಮಪದಕ್ಕೆ ವಿಶೇಷಣವನ್ನು ಹಚ್ಚಿ ವಸ್ತುವಿನ ಗುಣೋತ್ಕರ್ಷವನ್ನು ಅನುಭವಕ್ಕೆ ತಂದುಕೊಡಲು ಪ್ರಯತ್ನಿಸು ವಂತೆ ಸ್ಥಳಗಳಿಗೂ ಒಂದು ಪವಿತ್ರವೂ ಪ್ರಸಿದ್ಧವೂ ಆದ ವ್ಯಕ್ತಿಯ ಅಥವಾ ಕಥಾ ಪ್ರತಿಮೆಯ ವಿಶೇಷಣವನ್ನು ಹಚ್ಚಿ ಯಾತ್ರಿಕರಲ್ಲಿ ಭಾವೋತ್ಕರ್ಷ ವನ್ನುಂಟುಮಾಡುವುದಕ್ಕಾಗಿಯೆ ಸ್ಥಳಪುರಾಣಗಳು ಹುಟ್ಟಿಕೊಂಡಿವೆ.

ಷಷ್ಠಿನಮನ, ತೀರ್ಥಯಾತ್ರ, ಪುಟ ೯೪-೫

೨೫

ಆಯಾ ಕಾಯಿಲೆಗಳಿಗೆ ಆಯಾ ಮದ್ದು ! ಬೇರೆ ಬೇರೆ ರೋಗಿಗಳಿಗೆ ಬೇರೆ ಬೇರೆ ಪಥ್ಯ !

ಶ್ರೀರಾಮಕೃಷ್ಣ ಪರಮಹಂಸ, ಪುಟ ೧೧೩

೨೬

ಎಲ್ಲವನುಳಿವುದೆ ಆದರೆ ಮುಕ್ತಿ
ಎಲ್ಲವನಪ್ಪುವುದರೊಳಿದೆ ಶಕ್ತಿ.
ಶಕ್ತಿಯ ಮೀರುವುದೇನೋ ಮುಕ್ತಿ ?
ಬಿಡು, ಅದು ಕೈಲಾಗದರ ಕುಯುಕ್ತಿ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ವಚನ ಬ್ರಹ್ಮ, ಪುಟ ೬೯

೨೭

ಬಾಳ್ ಸವಿಯ ಸಿರಿಯಿದಿರ್ ಸಾವಳ್ಕು
ಬರಿಯ ಬಡತನಮಲ್ತೆ? ಸೌಮ್ಯಮಲ್ತೆ?

ಜಲಗಾರ, ಪಾತ್ರ ಜಲಗಾರ, ಪುಟ ೨೨

೨೮

ನಿಮಗೆ ಜೀರ್ಣಿಸಿಕೊಳುವ ಶಕ್ತಿಯಿರುವಾಗಂದು
ನಿಮ್ಮ ಸುಖವನು ಕರುಬಿ ತಿನಲೀಯದಿವರೆಲ್ಲ
ಹಲ್ಲುದುರಿ ಹೋದುದನು ಕಂಡಿಂದು ತರತರದ
ಸಿರಿಯ ನೈವೇದ್ಯವನು ತಂದಿಕ್ಕುತಿಹರಯ್ಯ,
ನಿಮಗೆ ತೋರಿಸಿ ತಾವು ತಿಂದು ಸುಖಿಸುವೆವೆಂದು
ಚೆನ್ನಾಗಿ ನಂಬಿ! ಸಭೆಯಲಿ ನೋಡಿ: ಅದೊ ಅವರು
ಇವರ ಸಿಹಿ ಸಿಹಿ ಮಾಡೆ ಬಂದಿಹರು! ನೋಡುವನು
ಮಾನಪತ್ರವನೋದುತಿರೆ ನಿಮಗೆ, ಮಂತ್ರಿಗಳ
ಕಡೆಗೆ ತಿರುಗುತೆ ಕೃಪೆಯ ಕೋರುತಿಹನಕ್ಷಿಯೊಳೆ!
ತಿನ್ನಲಾರದ ದೇವರಿಗೆ ರುಚಿರುಚಿಯ ನೈವೇದ್ಯ!
ನಕಲಿಯಿದು ನಿಜವೆಂದು ಮೋಸ ಹೋದೀರಯ್ಯ!
ನೀವಿವರ ಬಲೆಯ ತಳುಕಿಗೆ ಬೀಳದಿರಿ. ಬಿರುದು
ಗಿರುದಿನ ಬಿಸಿಲ್ಗುದುರೆಗೆದೆಯ ಬಾಯಾರಿಕೆಯು
ಬತ್ತಲು. ಮುನಿಯಬೇಡಿ, ಕಿರಿಯನ ಬೋಧೆಯೆಂದು!

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಮುದುಕರಾದ ದೊಡ್ಡ ಮನುಷ್ಯರೊಬ್ಬರಿಗೆ, ಪುಟ ೭೧

೨೯

ನೀನಂದು ಕನಕ ರಥವನ್ನು ತಂದು ಬಾ ಎಂದು
ಕರೆದಂದು ನಾನು ದೂಳಾಡುತಿದ್ದೆ.
ಹೊಂಬಿಸಿಲು ಹೊಮ್ಮಿತ್ತು, ಖಗ ಗಾನ ಚಿಮ್ಮಿತ್ತು,
ಕಣ್ತೆರೆದುಕೊಂಡಿತ್ತು ಜಗದ ನಿದ್ದೆ!
ತೇರಿನಾ ಬಣ್ಣವನು ಕಂಡೆ
ಮೊದಲು ಮರುಳಾದೆ;
ಹುಡುಗಾಟ ಎಂದಂದುಕೊಂಡೆ
ಅದನೇರಿ ಹೋದೆ!

ಕಲಾಸುಂದರಿ, ತಾವರೆಯ ತೇರು, ಪುಟ ೨೭

೩೦

ಕಾವ್ಯಗಳನ್ನೆಲ್ಲ ಗಂಡಸರು ಬರೆದಿದ್ದಾರೆ; ಅಲ್ಲಿ ಬರುವ ಹಿರಿಯ ಹೆಣ್ಣು ಗಳೆಲ್ಲ ಅವರ ಕೈಗಾರಿಕೆ; ಸೀತೆ ಸಾವಿತ್ರಿ, ದಮಯಂತಿ, ಮಹಾಶ್ವೇತೆಯರೆಲ್ಲ ಪುರುಷ ಹೃದಯದ ಆಶಾಸೂಚಿಗಳೇ ಹೊರತು ಸ್ತ್ರೀ ಹೃದಯದ ವಿಷಯ ಸೂಚಿಗಳಲ್ಲ. ಸ್ತ್ರೀಯರೇ ಕಾವ್ಯಗಳನ್ನು ಬರೆದಿದ್ದ ಪಕ್ಷದಲ್ಲಿ ಅಥವಾ ಬರೆಯುವ ಪಕ್ಷದಲ್ಲಿ ಕಥಾನಾಯಿಕೆಯರ ರೀತಿ ಬೇರೆಯಾಗಿರುತ್ತಿತ್ತು. ಅದೂ ಅಲ್ಲದೆ, ಗಂಡಸರೆಲ್ಲ ಹೆಂಗಸರು ಸೀತೆ ಮಹಾಶ್ವೇತೆಯರಾಗಿರಬೇಕೆಂದು ಬೋಧಿಸುತ್ತಾರೆಯೆ ಹೊರತು ತಾವು ಶ್ರೀರಾಮ ಪುಂಡರೀಕರಂತೆ ಇರಬೇಕೆಂದು ಆಗ್ರಹಪಡುವುದಿಲ್ಲ.–ಇಂತಹ ಟೀಕೆಯಲ್ಲಿ ಸ್ವಲ್ಪಮಟ್ಟಿಗೆ ಸತ್ಯ ವಿರಬಹುದಾದರೂ ಶ್ರೇಯಸ್ಸಿನ ದೃಷ್ಟಿಯಿಂದ ಅದು ಅಪ್ರಕೃತ.

ತಪೋನಂದನ, ಮಹಾಶ್ವೇತೆಯ ತಪಸ್ಸು, ಪುಟ ೨೪–೫

೩೧

ನೋಯುವುದೊ ಬೇಯುವುದೊ ಸಾಯುವುದೊ ನನ್ನ ಎದೆ,
ಭವ್ಯಕವನವ ನಿನಗೆ ನಾನುಲಿಯುತಿರಲೋದಿ,
ನಿನ್ನ ಮುಖ ಕಣ್ಗಳಲಿ ಭಾವನೋಜ್ವಲ ಬೋಧಿ
ಹೊಳೆಹೊಳೆದು ತೊಳಗದಿರೆ. ಅದೆ ಘೋರ ಕಾವ್ಯವಧೆ!
ನಿನಗರ್ಥವಾಗುತಿದೆ ? ಹಾಳು ಹೆಣವಾ ಅರ್ಥ !
ನಾ ಬಲ್ಲೆ ನೀನೊಂದು ಪಂಡಿತ ನಿಘಂಟೆಂದು;
ಸುಪ್ರೌಢವ್ಯುತ್ಪತ್ತಿ ವ್ಯಾಕರಣವುಂಟೆಂದು ! –
ರಸದೃಷ್ಟಿ ಬಾಹಿರನಿಗೇನಿದ್ದರೂ ವ್ಯರ್ಥ !

ಕೃತ್ತಿಕೆ, ಕವನ ಕೇಳುವವನಿಗೆ, ಪುಟ ೩೧

೩೨

....೨೦ – ೩೦ ವರ್ಷಗಳಿಗೆ ಹಿಂದೆ ನಮ್ಮ ಬರಹವನ್ನು ಯಾರಾದರೂ ಕಿವಿ ಗೊಟ್ಟು ಕೇಳುತ್ತಾರೆ ಅಂದರೇ ಸಂತೋಷವಾಗುತ್ತಿತ್ತು; ಯಾರಾದರೂ ಅಚ್ಚು ಹಾಕಿಸುತ್ತಾರೆ ಅಂದರೆ ಇನ್ನು ಅದಕ್ಕಿಂತಲೂ ನಮಗೆ 'ವೈಕುಂಠ ಪ್ರಾಪ್ತಿ' ಮತ್ತೊಂದಿಲ್ಲ ಎಂಬಷ್ಟು ಆನಂದವಾಗುತ್ತಿತ್ತು! ಯಾರಾದರೂ ನಮ್ಮ ಪದ್ಯವನ್ನೊ, ಲೇಖನವನ್ನೊ ತೆಗೆದುಕೊಂಡು ಅದಕ್ಕೆ ಪ್ರತಿಯಾಗಿ ಗೌರವಧನ ಕೊಡುತ್ತಾರೆ ಅಂದು ಬಿಟ್ಟರಂತೂ ನಮಗಂತೂ ಭಯಂಕರವಾದ ಆಶ್ಚರ್ಯವಾಗುತ್ತಿತ್ತು! ಬೆಲೆಯೇ ಇಲ್ಲದ ವಸ್ತು, ಅದಕ್ಕೆ ದುಡ್ಡು ಬೇರೆ ಕೊಡುತ್ತಾರೆಯೇ ಎಂಬಂಥ ಸ್ಥಿತಿ ಇತ್ತು. ಆ ಸ್ಥಿತಿಯಿಲ್ಲ ಈಗ. ಬಹಳ ದೂರ ಬಂದಿದ್ದೇವೆ.

ಮನುಜಮತ ವಿಶ್ವಪಥ, ಕದನಕ್ಕೆ ಸಜ್ಜು, ಪುಟ ೫೬–೭

೩೩

ಕನ್ನಡಿ ಹಿಡಿದಿದೆ ಬ್ರಹ್ಮಾಂಡಕೆ ಈ
ಕಂದನ ಮುಖದರ್ಪಣ ಕಾಣಾ !
ಸೂರ್ಯ ಚಂದ್ರರಲೆಯುತ್ತಿಹರಲ್ಲಿ;
ಉರಿದಿವೆ ತಾರಾ ಕೋಟಿಗಳಲ್ಲಿ;
ಹೊಳೆ ತೊರೆ ಹರಿದಿವೆ; ಮುನ್ನೀರ್ ಮೊರೆದಿವೆ;
ಪರ್ವತ, ಕಾನನ, ಖಗಮೃಗ ಮೆರೆದಿವೆ;
ಸೃಷ್ಟಿಯೊಳೇನೇನಿಹುದೋ ಎಲ್ಲಾ
ಈ ಮುಖಹೊಳೆ ಕವಿ ಕಾಣಲು ಬಲ್ಲ:
ನಿನಗೂ ಕಾಣುವ ಕಣ್ಣಿದ್ದರೆ ಕಾಣಾ,
ಬರೆದುದನೋದುವ ಬಲ್ ಜಾಣಾ !

ಜೇನಾಗುವಾ, ಕಂದನ ಮೈ, ಪುಟ ೩೮

೩೪

ಆಧ್ಯಾತ್ಮಿಕ ಜೀವನಕ್ಕೆ ತುತ್ತತುದಿಯ ಗಂತವ್ಯಲಕ್ಷ್ಯವೆಂದರೆ ಪರಮಸತ್ಯ. ಆ ಸತ್ಯಸಾಕ್ಷಾತ್ಕಾರಕ್ಕಾಗಿ ಸಾಧಕನು ಕೈಗೊಳ್ಳುವ ಯಾತ್ರೆಯೆ ಸಾಧನೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೩೮

೩೫

ನಮ್ಮ ಜೀವವೆ ನಿಚ್ಚ
ಪೂಜೆ. ನಮ್ಮ ಕರ್ಮವೆ ನಿತ್ಯಯೋಗ.

ಜಲಗಾರ, ಪಾತ್ರ ಜಲಗಾರ, ಪುಟ ೧೧

೩೬

ಆನಂದದಿಂದ ಉತ್ಪತ್ತಿಯಾದ ಸೃಷ್ಟಿಯನ್ನು ತರ್ಕದಿಂದ ತಿಳಿಯಲು ಸಾಧ್ಯವೇ ? ಎಂದಿಗೂ ಇಲ್ಲ. ಅದನ್ನು ಆನಂದದಿಂದಲೇ ಅನುಭಾವಿಸಬೇಕು. ಇಲ್ಲವೆ ವಿನಾಶ ಹೊಂದಬೇಕು. ವಿಜ್ಞಾನಶಾಸ್ತ್ರಜ್ಞರು ಮಾಡುತ್ತಿರುವ ಕೆಲಸವು ದುಶ್ಶಾಸನನ ಕೆಲಸದಂತೆಯೆ ಇದೆ. ಪ್ರಕೃತಿ ಎಂಬ ದ್ರೌಪದಿಯ ವಸ್ತ್ರಾಪಹರಣದಿಂದ ಆಕೆಯ ರಹಸ್ಯವನ್ನರಿಯಬೇಕೆಂದಿರುತ್ತಾರೆ. ಆದರೆ ಪರಬ್ರಹ್ಮನಾದ ಶ್ರೀಕೃಷ್ಣನು ದ್ರೌಪದಿಯ ವಸ್ತ್ರವು ಅನಂತವಾಗುವಂತೆ ಮಾಡಿರುತ್ತಾನೆ. ದುಶ್ಶಾಸನನು ಎಷ್ಟೇ ಪದರಗಳನ್ನು ಎಳೆದರೂ ಇನ್ನೂ ಅಸಂಖ್ಯ ಪದರಗಳಿದ್ದೇ ಇರುತ್ತವೆ. ಪರಮಾತ್ಮನು ಕೃಪಾನಿಧಿ ಎಂದೇ ಹೇಳಬೇಕು. ಎಲ್ಲಿಯಾದರೂ ದ್ರೌಪದಿಯ ಸೀರೆಯು ಅನಂತವಾಗದಿದ್ದರೆ ಮಹಾ ಕಾಳಿಯ ನಗ್ನ ಭೀಕರಾಕೃತಿಯನ್ನು ನೋಡಿ ನಾಶಹೊಂದುತ್ತಿದ್ದರು. ಪರಮಾತ್ಮನು ಪ್ರಕೃತಿಯ ಮೂಲವಾದ ಮತ್ತು ಗೂಢವಾದ ಆಕಾರವು ಅತ್ಯಂತ ಕಠೋರ

ವಾಗಿಯೂ ಭೀಕರವಾಗಿಯೂ ನರರಿಂದ ನೋಡಲಸದಳವಾಗಿಯೂ ಇರುವುದರಿಂದ ಅದನ್ನು ರಹಸ್ಯದಲ್ಲಿಟ್ಟಿದ್ದಾನೆ. ಅದು ನಮ್ಮ ಸುಕೃತಕ್ಕೆಂದೇ ಹೇಳಬೇಕು. ಜಯದಿಂದಾಗುವ ಅನಾಹುತವನ್ನರಿಯದೆ ವಿಜ್ಞಾನ ಶಾಸ್ತ್ರಜ್ಞರನ್ನು ಹುರಿದುಂಬಿಸುತ್ತಿರುವ ಕೌರವರಂತಹ ಅಜ್ಞಾನಿಗಳನ್ನೇನೆಂದು ಕರೆಯಬೇಕು? ಆ ಶಾಸ್ತ್ರಜ್ಞರಲ್ಲಿಯೆ ಭೀಷ್ಮ ದ್ರೋಣ ಮೊದಲಾದವರಂತೆ ಹಲವರು ಬುದ್ಧಿವಾದವನ್ನು ಹೇಳುತ್ತಿರುವರು. ಅವರ ನುಡಿಗಳನ್ನು ಲಕ್ಷ್ಯಕ್ಕೆ ತಾರದೆ ವಸ್ತ್ರಾಪಹರಣ ಕಾರ್ಯವನ್ನು ಮಾಡುತ್ತಲೇ ಇರುವ ಇವರಿಗೆ ಕೌರವರ ಗತಿಯೇ ಪ್ರಾಪ್ತವಾಗದಿರದು. ಹಿಂದಿನ ಘೋರ ಯುದ್ಧದಲ್ಲಿ ಭೀಮನ ಗದೆಯ ಮೊದಲನೆಯ ಘಾತವು ಬಿದ್ದೇ ಇರುವುದು. ಇನ್ನಾದರೂ ಎಚ್ಚರಗೊಳ್ಳುವರೋ ಏನೋ ನೋಡಬೇಕು.

ಇತ್ಯಾದಿ, ಪ್ರಕೃತಿಸೌಂದರ್ಯ, ಪುಟ ೧೩

೩೭

ನೋಡಿದೆಯಾ, ಈ ಪುರೋಹಿತ ವರ್ಗದವರು ಅಂದಿದ್ದಂತೆಯೆ ಇಂದೂ ಇದ್ದಾರಲ್ಲಾ! ಪ್ರಪಂಚ ಇಷ್ಟು ಬದಲಾಯಿಸಿದ್ದರೂ ಅವರು ಮಾತ್ರ 'ಸ್ಥಾಣುರಚಲೋಽಯಂ' ಆಗಿಬಿಟ್ಟಿದ್ದಾರೆ.

ನನ್ನ ದೇವರು ಮತ್ತು ಇತರ ಕಥೆಗಳು, ಧನ್ವಂತರಿಯ ಚಿಕಿತ್ಸೆ, ಪಾತ್ರ ವಿಶ್ವಾಮಿತ್ರ, ಪುಟ ೮೧

೩೮

ಕರುಬು ನಾಣ್ಗಳ ಸೋಂಕು ಸುಳಿಯದೈ ಕವಿಮನಕೆ!
ಸೌಂದರ್ಯ ಸೃಷ್ಟಿಯೆ ಕವಿಗೆ ಪೂಜೆ, ಕರ್ತವ್ಯ,
ಜನಸೇವೆ, ಸಾಧನೆ: ರಸವೆ ಪರಮಗಂತವ್ಯ!

ಕೃತಿಕೆ, ದೇಶಭಕ್ತನೊರ್ವನಿಗೆ, ಪುಟ ೭೧

೩೯

ಗುಣ್ಪಿರಲಿ ನಡೆಯಲ್ಲಿ,
ನುಣ್ಪಿರಲಿ ನುಡಿಯಲ್ಲಿ
ಸೊಂಪಿರಲಿ ಶೀಲದಲಿ
ಚೆಲ್ವಿನ ಕಣಿ!
ನಿನ್ನ ನಡೆಯನು ನೋಡಿ
ನನ್ನ ತೂಕವ ಮಾಡಿ
ನುಡಿವರೆಲ್ಲರು ಕೂಡಿ,

ನನ್ನ ಚೆನ್ನೆ:
ಕವಿಹೃದಯ ಮಂದಿರದೆ
ದೇವಿ ನೀನೆಂದಿರದೆ
ಮಂದಿ ಮಣಿಯುವ ತೆರದೆ
ಬಾಳು, ರನ್ನೆ!

ಜೇನಾಗುವಾ, ನಲ್ವಾತು, ಪುಟ ೧೪

೪೦

ಹಕ್ಕಿಯುಲಿಗಳುಕ್ಕುವಿಂಪು
ಸುಗ್ಗಿದಳಿರ ಸಗ್ಗಸೊಂಪು
ಹೊಸಹೊಂಗೆಯ ನೆಳಲ ತಣ್ಪು
ಚೆಂಗೆನ್ನೆಯ ಚೆಲುವು ನುಣ್ಪು
ಸುರಹೊನ್ನೆಯ ಗೊಟ್ಪಿಗಂಪು
ಉದಯಾಸ್ತದ ಬೈಗುಗೆಂಪು
ನಿರ್ಝರಿಣಿಯ ನೆರೆಯ ತಿಣ್ಪು
ಗಿರಿಶೃಂಗದ ಬರ್ದಿಲ ಬಿಣ್ಪು
ಗಡಿಕಾಣದ ಕಡಲ ಗುಣ್ಪು
ಉಡು ರವಿ ಶಶಿ ನಭದ ಪೆಂಪು
ಅಧಿ ಆತ್ಮದ ಸಿರಿ ಅಲಂಪು
ಎಲ್ಲವೊಂದುಗೂಡಲೆಂದು
ವಿಧಿಯ ಮನಸು ಕಡೆದ ಕನಸು
ಕಾಣ್ಬ ಕಣಸೆ, ಕಾಣ್ : ಕುವೆಂಪು!
ಭಕ್ತಿಯಡಿಯ ಹುಡಿ–ಕುವೆಂಪು!
ಗುರುಹಸ್ತದ ಕಿಡಿ–ಕುವೆಂಪು!
ನುಡಿರಾಣಿಯ ಗುಡಿ–ಕುವೆಂಪು!
ಸಿರಿಗನ್ನಡ ಮುಡಿ–ಕುವೆಂಪು!
ಇರ್ದುಮಿಲ್ಲದೇ ಕುವೆಂಪು!

ಕದರಡಕೆ, ಕುವೆಂಪು, ಪುಟ ೬೩

೪೧

ಸಾಹಿತಿಯ ತಾತ್ತ್ವಿಕ ಸಿದ್ಧಾಂತಗಳು ಏನೆ ಇರಲಿ, ಆತನ ರಾಜಕೀಯ ಸಾಮಾಜಿಕ ಮತೀಯ ಆರ್ಥಿಕಾದಿ ಅಭಿಪ್ರಾಯಗಳೂ ಆದರ್ಶಗಳೂ ಆಲೋಚನೆ

ಗಳೂ ಏನೆ ಆಗಿರಲಿ, ಆವೆಲ್ಲವೂ ಗೋವಿನ ಪೀನಪಯೋಧರ ಸದೃಶವಾದ ಆತನ ರಸಮಯ ಚಿತ್ಕೋಶದಿಂದ ಹೊಮ್ಮಿ ಬಂದಲ್ಲದೆ ಅಮೃತವಸ್ತುವಾಗಿ ಪರಿಣಮಿಸುವುದಿಲ್ಲ. ಆ ರಸಮಯ ಚಿತ್ಕೋಶದಿಂದಲ್ಲದೆ ಬೇರೆ ದಾರಿಗಳಲ್ಲಿ ಬಂದುದೆಲ್ಲ ಗೋಮಯಾದಿಗಳಂತೆ ಅನ್ಯ ಪ್ರಯೋಜನಕಾರಿಗಳಾದ ಆರ್ಥಿಕ ರಾಜಕೀಯ ಮತೀಯಾದಿ ಭೂಮಿಕೆಗಳಲ್ಲಿ ಸಫಲಕೃತಿಗಳಾಗಬಹುದೆ ವಿನಾ ನಮಗೆ 'ಯಂ ಲಬ್ಧಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ' ಎಂಬಂತಹ ಅಮೃತವೀಯಲಾರವು.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೩೯

೪೨

ಮಲೆಯ ನಾಡೆನಗೆ
ತಾಯಿಮನೆ, ಕಾಡು ದೇವರ ಬೀಡು. ಗಿರಿಯ ಮುಡಿ
ಶಿವನ ಗುಡಿ. ಬನವೆಣ್ಣೆ ಮೊದಲಿನಾ ಮನದನ್ನೆ.

ಶ್ರೀರಾಮಾಯಣ ದರ್ಶನಂ, ಚಿತ್ರಕೂಟಕೆ, ಪುಟ ೧೩೭

೪೩

ಸಮನ್ವಯ ದೃಷ್ಟಿಯ ಸೆಕ್ಯೂಲರ್ ಅಥವಾ ಸಾರ್ವ ಲೌಕಿಕ ಕ್ಷೇಮರಾಷ್ಟ್ರ ಎಂದು ಘೋಷಿತವಾಗಿದೆ, ನಮ್ಮ ಭಾರತ. ಆದ್ದರಿಂದ ಆ ಘೋಷಣೆ ಕಾರ್ಯ ಕಾರಿಯಾಗಿ ಸಫಲವಾಗಬೇಕಾದರೆ ನಮ್ಮ ಶ್ರೀಸಾಮಾನ್ಯರಲ್ಲಿ ಮತದ ಮೌಢ್ಯತೆಗಳು ಮಾತ್ರವಲ್ಲದೆ, ಮತಭಾವದ ಮೌಢ್ಯತೆಯೂ ತೊಲಗಬೇಕು. ವರ್ಣಾಶ್ರಮ, ಜಾತಿ ಪದ್ಧತಿ, ಮೇಲು ಕೀಳು ಭಾವನೆ ಮುಂತಾದ ಮಧ್ಯಯುಗದ ಕ್ರೂರ ಕರಾಳ ತತ್ತ್ವಗಳೆಲ್ಲ ವೈಜ್ಞಾನಿಕ ದೃಷ್ಟಿಯ ಅಗ್ನಿಕುಂಡದಲ್ಲಿ ಭಸ್ಮೀಕೃತವಾಗಬೇಕು. ಮತ ಮತ್ತು ರಾಜಕೀಯಗಳ ಅಂಧಕಾರವು ವಿಜ್ಞಾನ ಮತ್ತು ಅಧ್ಯಾತ್ಮಗಳ ಸೂರ್ಯೋದಯಕ್ಕೆ ಶರಣಾಗಿ, ತೊಲಗಿ, ಸರ್ವೋದಯದ ಶಾಂತಿ ಹಬ್ಬಿ, ಶಾಂತಿ ಮೈದೋರಲಿ ಎಂಬ ಅಭೀಪ್ಸೆ ಸರ್ವರ ಹೃದಯದ ಪ್ರಾರ್ಥನೆಯಾಗಿ, ಅತೀತ ಕಲ್ಯಾಣ ಶಕ್ತಿಗಳ ಅವತರಣಕ್ಕೆ ಹಾದಿಯಾಗಲಿ ಎಂದು ಹಾರೈಸುತ್ತೇನೆ.

ವಿಚಾರ ಕ್ರಾಂತಿಗೆ ಆಹ್ವಾನ, ಶ್ರೀಸಾಮಾನ್ಯ ಮತ್ತು ವಿಚಾರಕ್ರಾಂತಿ, ಪುಟ ೧೦೯

೪೪

ಹಳೆಯ ಸಾಹಿತ್ಯವನ್ನು ಚೆನ್ನಾಗಿ ಓದಿ, ಕಡೆದು ನವನೀತವನ್ನು ಸವಿಯದಿದ್ದರೆ, ನಮಗೆ ಅಮೃತತತ್ತ್ವ ಎಂದಿಗೂ ಲಭಿಸುವುದಿಲ್ಲ. ಭಾಷೆಯ ಬಿಗಿ, ಶಬ್ದಗಳ ಜೋಡಣೆ, ರಚನೆಯ ವೀರಮಾರ್ಗ, ಪದಗಳನ್ನು ಆಯ್ದು, ನೆಯ್ದು, ರಸವನ್ನು ಹೊಯ್ದು, ಮನಮೋಹಿಸುವ ರಸಋಷಿಯ, ಸೌಂದರ್ಯಯೋಗಿಯ ಇಂದ್ರಜಾಲ, ಇವುಗಳೆಲ್ಲ

ಬರಬೇಕಾದರೆ, ಸಾಹಿತ್ಯದೇವಿಯ ಚರಣತಲದಲ್ಲಿ ನಾವು ಬಹುಕಾಲ ಆಕೆಯ ಶಿಷ್ಯರಾಗಿ, ಆಕೆಯ ಭಕ್ತರಾಗಿ, ಆಕೆಯ ಮಕ್ಕಳಾಗಿ, ಶಿಷ್ಯನಂತೆ ವಿಷಯಗಳನ್ನು ಸಂಗ್ರಹಿಸಿ, ಭಕ್ತನಂತೆ ಕೃಪೆಯನ್ನು ಆರ್ಜಿಸಿ, ಮಕ್ಕಳಂತೆ ಒಲ್ಮೆಯನ್ನು ಪಡೆದು, ಧನ್ಯರಾಗಿ, ದಿವ್ಯರಾಗಿ, ಸಿದ್ಧರಾಗಿ ಹೊರ ಹೊರಡಬೇಕು. ಇಲ್ಲದಿದ್ದರೆ ನಮ್ಮ ಕಬ್ಬಗಳು ತಾತ್ಕಾಲಿಕವಾದ ರೆಕ್ಕೆಗಳನ್ನು ಪಡೆದು ಅನಂತವಿಶ್ವದಲ್ಲಿ ಸಂಚರಿಸಲೆಳಸುವ ಮಳೆಯ ಹುಳುಗಳಂತೆ ಬಹು ಬೇಗ ಸತ್ತುಹೋಗುತ್ತವೆ, ಸುಟ್ಟು ಸೀಯುತ್ತವೆ, ಹೆಸರಿಲ್ಲದಂತಾಗುತ್ತವೆ.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೮-೯

೪೫

ಏನದ್ಭುತಮೇನಚ್ಚರಿ ಜನ್ಮಧಾರಣೆ !
ಸಾವನುಳಿದು ಆ ಪವಾಡಕೆಣೆಗಳಿಹವೆ ಹೇಳ್ ?
ಅತಿಪರಿಚಯದಿಂದವಜ್ಞೆಯೆಂಬುದಿರದಿರೆ
ಅಚ್ಚರಿಗಳ ನಡುವೆ ಹರಿವ ಬದುಕು ಅಚ್ಚರಿ !

ಚಂದ್ರಮಂಚಕೆ ಬಾ ಚಕೋರಿ, ಇಂದುಕಲಾ ಪುಟ ೫೮

೪೬

ನನ್ನ ನಿಜಸ್ಥಿತಿ, ನಿಮಗೆ ತಿಳಿಸುವುದಾದರೆ, ಸಾಹಿತ್ಯವಲ್ಲ, ತತ್ತ್ವವೆ. ನಾನು ತತ್ತ್ವಶಾಸ್ತ್ರದ ವಿದ್ಯಾರ್ಥಿಯೂ ಆಗಿದೆ. ಸ್ವಭಾವತಃ ಅದರಲ್ಲಿ ಒಲವು ಹೆಚ್ಚು. ಪೌರ್ವಾತ್ಯ ಪಾಶ್ಚಾತ್ಯ ತತ್ತ್ವಶಾಸ್ತ್ರಗಳನ್ನು ಸಾಕಷ್ಟು ಅಧ್ಯಯನ ಮಾಡಿ ಸಿದ್ಧಿ ಪಡೆದವರ ಸಾಮೀಪ್ಯದಲ್ಲಿದ್ದೆ. ಇತ್ತೀಚಿನವರೆಗೆ ಶ್ರೀ ಅರವಿಂದರ ಹೆಸರನ್ನು ಕೇಳಿದ್ದರೂ ಅವರ ಕೃತಿಗಳನ್ನು ಓದಿರಲಿಲ್ಲ. ಕೆಲವು ವರ್ಷಗಳ ಹಿಂದೆ ಅವರ ಕೃತಿಗಳನ್ನು ಓದಿದೆ. ಅದೂ ಆಕಸ್ಮಾತ್ತಾಗಿ. ಅವರ ಕೃತಿಗಳನ್ನು ಓದಿದ ಮೇಲೆ ಇತರ ಕೃತಿಗಳು ರುಚಿಸುತ್ತಿಲ್ಲ. ಅದು ಸಲ್ಲಕ್ಷಣವೊ ಅವಲಕ್ಷಣವೊ ನನಗೆ ತಿಳಿಯದು. ನೀವೂ ಹೀಗಾಗಬೇಕೆಂದು ನನ್ನ ಅಭಿಪ್ರಾಯವಲ್ಲ. ನನಗೆ ತಿಳಿದ ಮಟ್ಟಿಗೆ ಅವರ ಗ್ರಂಥಗಳು ಸರ್ವೋಚ್ಚ ಶೃಂಗ ಸ್ಥಾನದಲ್ಲಿ ನಿಂತಿವೆ.

ಷಷ್ಟಿನಮನ, ಶ್ರೀ ಅರವಿಂದರ ಕಾವ್ಯದರ್ಶನ, ಪುಟ ೧೮೩

೪೭

ಯಾರೂ ತುಳಿಯದ ಹಾದಿಯಲಿ ತವರೂರಿಗೆ
ಹೊರಟಿರುವೆನು. ನನ್ನದು ಸಿಡಿಲು ಮಿಂಚುಗಳ ಹಾದಿ.

ಬೇಡವೆಂಬರೆ ಹಲರು; ನುಗ್ಗು ಎಂಬರು ಎಲ್ಲಿಯೊ
ಕೆಲರು.

ಕಿಂಕಿಣಿ, ಒಡನಾಡಿ, ಪುಟ ೧೨

೪೮

ಜಾಗ್ರಜ್ಜೀವನದ ಬಯಕೆಗಳೂ ಭಯಗಳೂ ನಿದ್ದೆಯ ಲೋಕದಲ್ಲಿ ಕನಸುಗಳ ರೀತಿಯಲ್ಲಿ ಜರುಗಿ ಕೈಗೂಡುತ್ತವೆ ಎಂದು ಮನಶ್ಶಾಸ್ತ್ರಜ್ಞರ ಅಭಿಪ್ರಾಯ ವಿದೆ. ....ಆದರೂ ಎಲ್ಲ ಕನಸುಗಳನ್ನೂ ಅಭೀಷ್ಟ ಸಾಫಲ್ಯದ ಚಿತ್ರಗಳೆಂದು ಸಾಧಿಸಲಾಗುವುದಿಲ್ಲ. ಕೆಲವು ಹಿಂದಾದುದನ್ನಾಗಲಿ ಮುಂದಾಗುವುದನ್ನಾಗಲಿ ಸೂಚಿಸಬಹುದು. ಕೆಲವು ಕನಸುಗಳಂತೂ ರೂಪಕಗಳಾಗಿರುತ್ತವೆ.

ಕಾನೂರು ಹೆಗ್ಗಡಿತಿ, ಪುಟ ೨೬೭–೮

೪೯

ಇನ್ನೆಂದೂ ಮುಂದೆಂದೂ
ಬರದಿರಲಿಂದೆಯ್ತಂದೀ
ಸ್ವಾತಂತ್ರ್ಯಕೆ ಕುಂದು.
ಪುರುಷಾರ್ಥದ ಪರಮಾರ್ಥದ
ಆಧ್ಯಾತ್ಮಿಕ ಚೇತನಕೀ
ಸ್ವಾತಂತ್ರ್ಯದ ಸಂಕೇತವೆ
ಚಿರಕೇತನವಾಗುವವೋಲ್
ಕೃಪೆಯಿರಲೆಂದೆಂದೂ !

ಇಕ್ಷುಗಂಗೋತ್ರಿ, ಶ್ರೀ ಸ್ವಾತಂತ್ರ್ಯೋದಯ ಮಹಾ ಪ್ರಗಾಥಾ, ಪುಟ ೨೦

೫೦

ಎನಿಬರೆಮ್ಮೊಳಗಿಹರ್
ಬತ್ತಲಾಗಿಯುಮಿಳೆಯ ಗೌರವಂಬಡೆವವರ್ ?
ಕಾವಿಯಿಂ ಗುರುವಾಗಿ, ಹೊನ್ನಿನಿಂ ದೊರೆಯಾಗಿ,
ರಣದುಡುಗೆ ದೆಸೆಯಿಂದೆ ರಣಧೀರನೆಂದಾಗಿ,
ಜನಿವಾರದಿಂದೆ ಬ್ರಾಹ್ಮಣನಾಗಿ, ಬೂದಿಯಿಂ
ಶಿವಭಕ್ತನಾಗಿ, ವೈಷ್ಣವನಾಗಿ ನಾಮದಿಂ
ಮೆರೆದುರಿವರೆಲ್ಲರೂ ಬಂದು ಕಲಿಯಲಿ ಇಲ್ಲಿ
ನಗ್ನತೆಯ ಮಹಿಮೆಯಂ ನಿನ್ನ ಸಾನ್ನಿಧ್ಯದಲ್ಲಿ !

ಅಗ್ನಿಹಂಸ, ಶ್ರವಣಬೆಳ್ಗೊಳದ ಗೋಮಟೇಶ್ವರನ ಸಾನ್ನಿಧ್ಯದಲ್ಲಿ, ಪುಟ ೬೫–೬

೫೧

ಎಂತಹ ಭುವನ ಮೋಹನಗಾನ! ಕಾಜಾಣ ಪಕ್ಷಿ ಗಾನದೆದುರು ಮತ್ತಾವ ಹಕ್ಕಿಯ ಗಾನವೂ ನಿಲ್ಲಲಾರದು. ಅದರೆದುರು ಕೋಗಿಲೆಯ ಪಂಚಮಸ್ವರ ಕೂಡ ಪಂಚಮ ಸ್ವರವೆ! ಅದರ ಗಾನದ ಆಲಿಂಗನದಲ್ಲಿ ಉಷೆ ಮೈಮರೆಯುತ್ತಾಳೆ. ವನಗಾಯಕರಲ್ಲಿ ಕಾಜಾಣಕ್ಕೇ ಪ್ರಥಮ ಸ್ಥಾನ ಸಲ್ಲತಕ್ಕದ್ದು!

ಮಲೆನಾಡಿನ ಚಿತ್ರಗಳು, ಕಾಡಿನಲ್ಲಿ ಕಳೆದ ಒಂದಿರುಳು, ಪುಟ ೨೨

೫೨

ಐಕ್ಯದೊಳೇ ಇಹುದು ಬಾಳು;
ಅನೈಕ್ಯತೆಯೆ ನೋವು, ಗೋಳು.

ಪ್ರೇತಕ್ಯೂ, ಭಾವೈಕ್ಯತೆ, ಪುಟ ೫೧

೫೩

ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲೂ ಕೂಡ ಒಂದು ತೊಟ್ಟಿಲು ತೂಗುತ್ತಾ ಇರುತ್ತೆ. ಆ ತೊಟ್ಟಿಲಲ್ಲಿ ಅವನ ಶಿಶುತ್ವ ಅಸ್ಖಲಿತವಾಗಿ, ಮುಗ್ಧವಾಗಿ ಇರುತ್ತೆ. ತುಂಬಾ ವಿಶೇಷ ಹಾಗೂ ಪ್ರಶಾಂತ ಸಮಯಗಳಲ್ಲಿ ಆ ಶಿಶು ಎಚ್ಚರಿರುತ್ತದೆ.

ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಮಕ್ಕಳ ಸಾಹಿತ್ಯಕ್ಕೆ ಆಧುನಿಕ ಮೌಲ್ಯಗಳು, ಪುಟ ೫೧

೫೪

ಉತ್ತಮ ಕಲಾಕಾರ್ಯದ ಸವಿಯನ್ನು ಆಸ್ವಾದಿಸುವ ಪುಣ್ಯವೂ ಸಾಮರ್ಥ್ಯವೂ ಪುಕ್ಕಟೆಯಾಗಿ ಬರುವುದಿಲ್ಲ. ಅದಕ್ಕೆ ಸಂಸ್ಕಾರವೂ ಅಭ್ಯಾಸವೂ ಎರಡೂ ಆವಶ್ಯಕ.

ಕಲಾಸುಂದರಿ, ಮುನ್ನುಡಿ, ಪುಟ vii

೫೫

ಎಂತಹ ವಿದ್ವಾಂಸನಾಗಲಿ, ಎಷ್ಟೇ ಪುರಾತನ ಸಾಹಿತ್ಯವನ್ನೂ ಪರಸಾಹಿತ್ಯಗಳನ್ನೂ ಅಧ್ಯಯನ ಮಾಡಿದವನಾಗಲಿ, ಭಾವಗಳೆಲ್ಲ ತನಗೆ ಹೃದ್ಗತವಾಗಿವೆ ಎಂದು ತಿಳಿಯುವಷ್ಟು ಗರ್ವಿಯಾಗಬಾರದು. ಏಕೆಂದರೆ ಭಾವಗಳು ಕಾಲದಂತೆಯೆ ಅನಂತವಾಗಿವೆ; ಸೃಷ್ಟಿಯ ವಸ್ತುಗಳಂತೆ ಅಸಂಖ್ಯವಾಗಿವೆ. ಕಾವ್ಯಾಧ್ಯಾಯಿಗೆ ಭಾಷಾ ಜ್ಞಾನದೊಂದಿಗೆ ಸರಸಹೃದಯ. ಸಮಾನಾನುಭವ, ಸಹಾನುಭೂತಿ ಇವು ಮೂರೂ ಇರಲೇಬೇಕು.

ಕಲಾಸುಂದರಿ, ಮುನ್ನಡಿ. x

೫೬

ಎಳೆಯ ಮುಳ್ ಚುಚ್ಚಲ್ಕೆ ನೋವಲ್ಲದುವೆ ಮೆಚ್ಚು;
ಬೆಳೆದರಾ ಮುಳ್, ಅದರ ಕಚ್ಚು ಮುತ್ತಹುದೆ ಪೇಳ್ ?
ಎಳೆಯ ಕರು ಬೆಳೆದ ಮೇಲದರ ಹಾಯನೆ ಬೆದೆಗೆ
ಬಯಸಿದಪುದಯ್ಯೊ !....

ಶ್ರೀ ರಾಮಾಯಣ ದರ್ಶನಂ, ಓ ಲಕ್ಷ್ಮಣಾ, ಪಾತ್ರ ಸೀತೆ, ಪುಟ ೨೫೫

೫೭

ನಮ್ಮ ಸಂಸ್ಕೃತಿಯ ಆಳವಿಲ್ಲದ ಅಪಕ್ವಾನುಭವದ ತರುಣರು ಕಾಫ್ಕ, ಕಾಮು, ಸಾರ್ತ್ರೆ, ಕಿರ್ಕೆಗಾರ್ಡ್ ಎಂದೆಲ್ಲ ಹೆಸರು ಹೇಳಿ ಬೆರಗುಗೊಳಿಸಲು ಯತ್ನಿಸುತ್ತಿದ್ದಾರೆ. ಅವಿವೇಕದಿಂದಲೊ ಅಸೂಯೆಯಿಂದಲೊ ಅಜ್ಞಾನದಂದಲೊ ನಮ್ಮಲ್ಲಿರುವ ಉತ್ತಮತೆಯನ್ನು ನಿರ್ಲಕ್ಷಿಸಿ ತಿರಸ್ಕರಿಸಿ ವಿದೇಶೀಯ ಬೇಗಡೆಗೆ ಮಾರು ಹೋಗುತ್ತಾರೆ. ಅದನ್ನೋದದ, ಅದೇನು ಎಂದು ಗೊತ್ತಿರದ, ಗೊತ್ತಾಗಲೂ ಅವಕಾಶವಿಲ್ಲದ ನಮ್ಮ ಜನ ಸಾಮಾನ್ಯರ ಮುಂದೆ, ಹಿಂದೆ ಸಂಸ್ಕೃತ ಶ್ಲೋಕಗಳನ್ನು ಹೇಳಿ ಸಂಸ್ಕೃತ ತಿಳಿಯದ ನಮ್ಮ ಜನರನ್ನು ಬೆರಗುಗೊಳಿಸುತ್ತಿದ್ದ ನಮ್ಮ ಪುರೋಹಿತ ವರ್ಗದವರಂತೆ ತಮ್ಮ ವಿದೇಶೀ ಹೆಸರುಗಳನ್ನು ಝುಳಪಿಸುತ್ತಾರೆ !

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೨೧

೫೮

ಹಾವು ಹೊಸದಾಗಿ ಹಾಕಿದ ಮೊಟ್ಟೆಗಳನ್ನು ಒಡೆದರೆ ಅದರಲ್ಲಿ ಮರಿ ಇರುತ್ತದೆಯೇ ? ಕೆಂಪು ಬಿಳುಪಿನ ಲೋಳಿ ಇರುತ್ತದೆ. ಆ ಮೊಟ್ಟೆಗಳೂ ಎಷ್ಟು ಮುಗ್ಧ ಮನೋಹರವಾಗಿ ಕಾಣುತ್ತವೆ ! ಮುಂದೆ ಅವುಗಳಿಂದಲೆ ಘೋರ ವಿಷಸರ್ಪಗಳು ಹುಟ್ಟುತ್ತವೆ ಎಂದು ಹೇಳಿದರೆ ತಿಳಿಯದವರು ಖಂಡಿತವಾಗಿ ನಂಬಲಾರರು. ಆದರೂ ಕಾಲಾನಂತರದಲ್ಲಿ, ಸರಿಯಾದ ಸನ್ನಿವೇಶ ಒದಗಿ ಬಂದಾಗ, ಅ ಮೊಟ್ಟೆಗಳಿಂದಲೆ ಹಾವು ಹೊರಡುತ್ತವೆ.

ಕಾನೂರು ಹೆಗ್ಗಡಿತಿ, ಪುಟ ೧೬೪-೫

೫೯

ನಾ ನಿನ್ನನೊಲಿದಿಹುದು ನಿನ್ನ ಚೆಲುವಿಕೆಗಲ್ಲ,
ನಿನ್ನ ಐಸಿರಿಗಲ್ಲ, ಮತಿಗಲ್ಲ ಜಸಕಲ್ಲ:
ನಾ ನಿನ್ನನೊಲಿದಿಹೆನು ನಿಷ್ಕಾರಣಂ !
ಕಾರಣಗಳೆಲ್ಲವೂ ನಶ್ವರಗಳೆಂದು ತಿಳಿ.

ಕಾರಣಂಗಳಿಗೆಲ್ಲ ಮೊದಲ ಕಾರಣ ಒಲುಮೆ:
ಸೃಷ್ಟಿಗೆಮ್ಮೊಲ್ಮೆಯೆ ಮಹಾಕಾರಣಂ !

ಕದರಡಕೆ, ನಿಷ್ಕಾರಣಂ, ಪುಟ ೮೧

೬೦

ಒಂದಿರುವೆಯ ಮುಂದೆ ಲಕ್ಷ ತಾರ್ಕಿಕರ ವಾದ ಹೊಲ್ಲ !

ಕಿಂಕಿಣಿ, ಪವಾಡ ಸಾಕ್ಷಿ, ಪುಟ ೫೮

೬೧

ಎಲ್ಲ ಸೃಷ್ಟಿ ನಿಯಮಗಳೂ ನಮಗಿನ್ನೂ ವೇದ್ಯವಾಗಿಲ್ಲ. ತಿಳಿದ ಕೆಲವು ನಿಯಮಗಳಿಗೆ ವಿರೋಧವೆಂದು ತೋರಿಬರುವ ಘಟನೆಗಳು ಬಹುಶಃ ಮುಂದೆ ತಿಳಿಯಲಿರುವ ನಿಯಮಗಳಿಂದ ವಿಶದವಾಗಬಹುದು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೮

೬೨

ಶ್ರೀರಾಮಚಂದ್ರನ ಮಹಾಸೇತು ಮುಂದುವರಿದಂತೆ
ನೋಡಿ ನೋಡಿ ಹಿಗ್ಗಿದ ಪುಟ್ಟ ಅಳಿಲಿನ ಹೃದಯದ
ಮಹಾನ್ ಮಹಿಮೆಯನು ನನಗೆ ಕಲಿಸು, ಓ ಯೋಗೀಂದ್ರ
ಯೋಗಿ !

ಕಿಂಕಿಣಿ, ಸದಸ್ಯ ನಿರಪೇಕ್ಷಣೀಯ, ಪುಟ ೧೩

೬೩

ಮಾತಿಗೊಂದು ಅರ್ಥವೇಕೆ !
ಅರ್ಥವಿದ್ದರರ್ಥ ಸಾಕೆ ?
ಮೋಡಗಳನು ನೋಡಿ ಕಲಿ;
ಅರ್ಥ ಅಲ್ಪ ಎಂದು ತಿಳಿ !
ಮಾತು ಅರ್ಥ ಎರಡೂ ವ್ಯರ್ಥ ಸ್ವ-ಅರ್ಥವಿರದಿರೆ !

ಪಕ್ಷಿಕಾಶಿ, ಗಗನಗುರು, ಪುಟ ೬೩

೬೪

ರಸವೂ ಅರಸವೂ ಮಿಶ್ರವಾಗಿದ್ದರೆ ಸಾಮಾನ್ಯನಿಗೆ ಅದನ್ನು ಬೇರ್ಗೈಯುವುದು ಕಷ್ಟವಾಗುತ್ತದೆ. ಇರುವುದೆಲ್ಲವೂ ರಸವೆಂದೂ ಅಥವ ಅರಸವೆಂದೂ ಸ್ವೀಕರಿಸುವ

ಅಥವ ತಿರಸ್ಕರಿಸುವ ಸಂಭವವುಂಟು. ಆದ್ದರಿಂದ ಯುಕ್ತವಾದ ಸಂಗ್ರಹ ಕಾರ್ಯವೂ ವಿಮರ್ಶೆಯೇ.

ಕಾವ್ಯವಿಹಾರ, ಹರಿಶ್ಚಂದ್ರಕಾವ್ಯ, ಪುಟ ೭೯

೬೫

ಕವಿತೆ–ನಿಜವಾದ ಕವಿತೆ–ಬೇಸರವಾದಾಗ ಆಡಿ, ಆಮೇಲೆ ಬಿಸಾಡಬಹುದಾದ ಆಟದ ಗೊಂಬೆಯಂತಲ್ಲದೆ ದೇವಾಲಯದ ಗರ್ಭಗುಡಿಯಲ್ಲಿ ರತ್ನವೇದಿಕೆಯ ಮೇಲೆ ಇಟ್ಟು ಸರ್ವದಾ ಭಕ್ತಿಯಿಂದ ಪೂಜಿಸಲ್ಪಡುವ ದೇವವಿಗ್ರಹದಂತೆ ಅನವರತ ಆರಾಧನೆಗೆ ಅರ್ಹವಾದುದು.

ಕಲಾಸುಂದರಿ, ಮುನ್ನುಡಿ, ಪುಟ v

೬೬

ಬಿತ್ತರದ ಜಗತ್ತಿನಲ್ಲಿ ಮಹದ್ವ್ಯಾಪಾರಗಳು ಜರುಗುತ್ತಿರುತ್ತವೆ. ಘೋರ ಸಂಗ್ರಾಮಗಳಾಗಿ ಕಿರೀಟ ಸಿಂಹಾಸನಗಳುರುಳಿ ರಾಜ್ಯಗಳೆದ್ದು ಬಿದ್ದು ಕೌಲುಗಳಾಗಿ ಹೋಗಿ ರಾಷ್ಟ್ರ ರಾಷ್ಟ್ರಗಳ ಜೀವನಗಳಲ್ಲಿ ಮಹಾ ಪರಿವರ್ತನೆಗಳಾಗುತ್ತಿರುತ್ತವೆ. ಸಜೀವ ಜ್ವಾಲಾಮುಖಿಗಳಿಂದ ನಗರಗಳು ಭಸ್ಮವಾಗುತ್ತವೆ. ಅತಿ ಪ್ರವಾಹದಿಂದ ಪ್ರಾಂತಗಳು ಕೊಚ್ಚಿಹೋಗುತ್ತವೆ. ಲಕ್ಷಾಂತರ ಜನರು ಸಾಯುತ್ತಿರುತ್ತಾರೆ. ಮನುಷ್ಯರ ಯಂತ್ರಕೌಶಲದಿಂದ ಮರುಭೂಮಿಗಳು ನಂದನವನಗಳಾಗುತ್ತವೆ, ಕಾವ್ಯ ಕಲೆಗಳು ಅಭಿವೃದ್ಧಿ ಹೊಂದುತ್ತಿರುತ್ತವೆ. ಸತ್ತವರ ಸಂಖ್ಯೆಗಿಂತಲೂ ಹೆಚ್ಚು ಸಂಖ್ಯೆ ಹುಟ್ಟುತ್ತಿರುತ್ತಾರೆ. ಸಮುದ್ರಗಳು ಕೆರಳಿ ದ್ವೀಪಗಳು ಮುಳುಗಿ ದ್ವೀಪಗಳೇಳುತ್ತಿರುತ್ತವೆ. ಸೂರ್ಯ ಚಂದ್ರ ಗ್ರಹಗಳು ಅನಂತಾಕಾಶದಲ್ಲಿ ಯಾವ ಉದ್ದೇಶದಿಂದಲೋ ಏನೋ ಸುತ್ತುತ್ತಾರೆ. ಬರುಗಣ್ಣಿಗೆ ಕಾಣದೆ ಯಂತ್ರದೃಷ್ಟಿಗೆ ಮಾತ್ರ ಗೋಚರವಾಗಿರುವ ತಾರೆ ನೀಹಾರಿಕೆಗಳಲ್ಲಿ ಭಯಂಕರ ಅನಲ ವಿಪ್ಲವಗಳಾಗುತ್ತಿರುತ್ತವೆ. ಆದರೆ ಇವುಗಳು ಯಾವುದರಿಂದಲೂ ವಿಕ್ಷುಬ್ಧನಾಗದೆ ತನ್ನ ಆತ್ಮಶಾಂತಿಯ ಸಾಧನೆಯಲ್ಲಿಯೆ ತನ್ಮಯನಾಗಿರುತ್ತಾನೆ, ಹಿಮಾಲಯದ ಗುಹೆಯಲ್ಲಿ ತಪಸ್ಸು ಮಾಡುವ ವೈರಾಗಿ! ಆ ವೈರಾಗಿಯಂತಿರುವ ಕೆಲವು ಸ್ಥಾನಗಳಿವೆ, ಸಹ್ಯಾದ್ರಿ ಶ್ರೇಣಿಗಳಲ್ಲಿ.

ಕಾನೂರು ಹೆಗ್ಗಡಿತಿ, ಪುಟ ೧೩೯–೪೦

೬೭

ಅಂದು ನಾಂ ಪ್ರಕೃತಿಯಲಿ
ಮತ್ತೆ ಸಂಸ್ಕೃತಿಯಲ್ಲಿ
ಭಾವುಕ ತಪಸ್ಸಿನಲಿ

ರಸದರ್ಶಿಯಾದೆ:
ನಿನ್ನಾತ್ಮ ನಂದನದಿ
ಹರಿಯಲಾನಂದ ನದಿ
ಮಿಂದು ನಾನಿಂದೊಮ್ಮೆ
ರಸಲೀನವಾದೆ !

ಜೇನಾಗುವಾ, ರಸದರ್ಶಿ, ಪುಟ ೫೧

೬೮

ಭಗವದರ್ಪಿತಮಾಗೆ, ಸಾವುದುಂ ಬರ್ದುಕವೊಲ್
ಶ್ರೇಯಸ್ಕರಂ.

ಬೆರಳ್‌ಗೆ ಕೊರಳ್, ಪಾತ್ರ ದ್ರೋಣ, ಪುಟ ೫೦

೬೯

ಈಶ್ವರನ ಕಾರ್ಯಕ್ಕೆ ಯಾವ ಒಂದು ಸಂಸ್ಥೆಯೂ ಸಂಪೂರ್ಣ ಪ್ರತಿನಿಧಿಯಾಗಲಾರದು.

ಸ್ವಾಮಿ ವಿವೇಕಾನಂದ, ಪುಟ ೨೭೬

೭೦

ಬುದ್ಧಿ ಏನನ್ನು ಬೇಕಾದರೂ ಮಾಡುತ್ತದೆ–ನಾಯಿಯನ್ನು ಸಿಂಹವಾಗಿ ತೋರಿಸುತ್ತದೆ; ಸಿಂಹವನ್ನು ಇನ್ನೆಂಥದೋ ಪ್ರಾಣಿ ಎಂದು ತೋರಿಸುತ್ತದೆ.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೧೮

೭೧

ಊರಿಗೊಂದು ಪ್ರದೇಶಕ್ಕೊಂದು ಕಾಲಕಾಲಕ್ಕೊಂದು ಪರಿಭಾಷೆ ಇರುವುದಾದರೆ ವಿಜ್ಞಾನವಾಗಲಿ ಯಾವ ಶಾಸ್ತ್ರವಾಗಲಿ ಅಸ್ತಿತ್ವಕ್ಕೆ ಬರುವುದು ಅಸಂಭವ; ಪ್ರಗತಿಹೊಂದುವುದಂತೂ ಸಾಧ್ಯವೆ ಇಲ್ಲ. ಆಕ್ಸಿಜನ್ ಎಂಬ ಅನಿಲ ಧಾರವಾಡದಲ್ಲಿ 'ಪ್ರಾಣವಾಯು'ವಾಗಿ, ಮೈಸೂರಿನಲ್ಲಿ 'ಆಮ್ಲಜನಕ'ವಾಗಿ, ಇನ್ನೊಂದೂರಿನಲ್ಲಿ 'ಅಗ್ನಿವಾತ'ವಾಗಿ ಪರಿಣಮಿಸಿದರೆ ಶಾಸ್ತ್ರಾಧ್ಯಯನದ ಗತಿ ಏನಾಗಬೇಕು ? ಅಂತಹ ಅವಿವೇಕಕ್ಕೆ ಕರ್ಣಾಟಕವಾಗಲಿ ಭಾರತದ ಯಾವ ಪ್ರಾಂತವಾಗಲಿ ಹೋಗದಿರು ವುದು ನಮ್ಮ ವಿದ್ಯಾರ್ಜನೆಯ ಹಿತದೃಷ್ಟಿಯಿಂದ ಅತ್ಯಂತಾವಶ್ಯಕ. ಅಂತರರಾಷ್ಟ್ರೀಯ ವಾದ ವೈಜ್ಞಾನಿಕ ಪರಿಭಾಷೆಯನ್ನೆಲ್ಲ ಭಾಷಾಂತರಿಸುವುದು ವ್ಯರ್ಥಸಾಹಸ, ಅದರಿಂದ ಯಾವ ಪ್ರಯೋಜನವೂ ಇಲ್ಲ; ಗೊಂದಲಕ್ಕೆ ಮಾತ್ರ ಅವಕಾಶವಾಗುತ್ತದೆ. ಆದ್ದರಿಂದ

ಎಲ್ಲಕಡೆಗೂ ಸರ್ವಸಮಾನವಾಗಿ ರೂಢಿಯಲ್ಲಿರಬಹುದಾದ ಎಲ್ಲಿಯೊ ಕೆಲವು ಪದಗಳ ಹೊರತು ಉಳಿದುದೆಲ್ಲವನ್ನೂ ಅಂತರರಾಷ್ಟ್ರೀಯ ವಾದ ಪರಿಭಾಷೆ ಯಿಂದಲೆ ವ್ಯವಹರಿಸುವುದು ಉಚಿತ.

ಷಷ್ಟಿನಮನ, ಸಂಸ್ಕೃತಿ ಕರ್ನಾಟಕ, ಪುಟ ೨೬

೭೨

ಅನುಭವ, ಅಭೀಷ್ಸೆ, ಅದಕ್ಕೆ ಅನುಗುಣವಾಗಿ ಅಕೃತಕವಾಗಿ ನಿಸರ್ಗ ಸಹಜವಾಗಿ ಸಂಭವಿಸುವ ರೂಪ ವ್ಯತ್ಯಾಸ–ಈ ಮೂರನ್ನು ನಾವು ಲಕ್ಷ್ಯ ದಲ್ಲಿಡಬೇಕು. ಏಕೆಂದರೆ ಈ ಮೂರರಲ್ಲಿ ಯಾವುದೊಂದು ಊನವಾದರೂ ವಿಕಾರಸೃಷ್ಟಿಯಾಗುತ್ತದೆ. ಅಂತಹ ವಿಕಾರಸೃಷ್ಟಿ ನೂತನವಾಗಿ ತೋರಿದರೂ ಅದಕ್ಕೆ ಬದುಕುವ ಹಕ್ಕೆ ಇರುವುದಿಲ್ಲ. ಒಂದೆರಡು ದಿನಗಳ ಮಟ್ಟಿಗೆ ಜನರ ಕುತೂಹಲವನ್ನು ಕೆಣಕಿ ಸೆಳೆದು ಕೆರಳಿಸಿ ಸತ್ತು ಹೋಗುತ್ತದೆ.....

ದ್ರೌಪದಿಯ ಶ್ರೀಮುಡಿ, ಮುಂದಿನ ಸಾಹಿತ್ಯದಲ್ಲಿ...., ಪುಟ ೮೩

೭೩

ಧ್ಯಾನಿಗಳ್ ಬೇರೆವೇರೆಯಾದೊಡಂ
ಧ್ಯೇಯಮಾ ಪರಮಪುರುಷಂ ಸರ್ವಗ್ರಂ ಒರ್ವನಲ್ತೆ ?

ಚಂದ್ರಹಾಸ, ಪಾತ್ರ ವಿಷಯೆ, ಪುಟ ೬೪-೫

೭೪

ಮನಸ್ಸು, ಬುದ್ಧಿ ಇರುವುದೇ ಅದಕ್ಕೆ. ನಾವು ಏನನ್ನಾದರೂ ಅಪೇಕ್ಷಿಸಿ ಅದರ ಕಡೆ ಒಲಿದರೆ ಅದನ್ನು ಚೆನ್ನಾಗಿ ಪ್ರಚಾರ ಮಾಡುವುದಕ್ಕೆ ಅದಕ್ಕೆ ಬಹಳ ಶಕ್ತಿ ಇದೆ.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಎಚ್ಚರಿಕೆ, ಪುಟ ೧೬

೭೫

ಹುಟ್ಟುವುದು, ತಂದೆತಾಯಂದಿರ ಅಕ್ಕರೆಯ ಸಕ್ಕರೆಯನ್ನು ಸವಿದು ಬೆಳೆಯು ವುದು, ಅವರು ಒಲಿದಿತ್ತ ಚೆಲುವೆಯಾದ ನಲ್ಲೆಯನ್ನು ಕೈಹಿಡಿಯುವುದು, ಚೆನ್ನಾಗಿ ದುಡಿದು ಸಂಪಾದಿಸಿ ನೆಮ್ಮದಿಯಿಂದ ಬಾಳುವುದು, ಮಕ್ಕಳನ್ನು ಹೆತ್ತು ಸಾಕಿ ಸಲಹಿ ದೊಡ್ಡವರನ್ನಾಗಿ ಮಾಡುವುದು, ಮತ್ತೆ ಅವರಿಗೆ ಮದುವೆ ಮಾಡುವುದು–ಇದೇ ತಾನೆ ಬಾಳಿನ ಹೆದ್ದಾರಿ ಮತ್ತು ಗುರಿ. ಸಾಮಾನ್ಯರಿಗೆ ಆ ಗುರಿ ತಪ್ಪಿದ ಮೇಲೆ ಜೀವನ ಉದ್ದೇಶವಿಲ್ಲದೆ ಅರ್ಥಹೀನವಾಗುತ್ತದೆ; ಶೂನ್ಯವಾಗುತ್ತದೆ.

ಕಾನೂರು ಹೆಗ್ಗಡಿತಿ, ಪುಟ ೫೬೨

೭೬

ಜಡತನಂ
ಸ್ವಾರ್ಥದ ತಮೋನಿದ್ರೆ: ತಳ್ಳಿ ತೊರೆದೆದ್ದೇಳು.
ಜೀವೋತ್ಸವದ ತೇರ್ಗೆ ಗಾಲಿಯಾದೊಡೆ ಬಾಳು
ಸಾರ್ಥಕಂ, ಸುಂದರಂ, ಮಧುರ ಚಿರನೂತನಂ.

ಕೃತ್ತಿಕೆ, ಪೂರ್ಣಯೋಗಿಯೆ ಪರಮಭೋಗಿ, ಪುಟ ೪೯

೭೭

...ಪರಂಪರೆಯನ್ನು ಅನುಸರಿಸಬೇಕೆಂದು ನನ್ನ ಅಭಿಪ್ರಾಯವಲ್ಲ; ಪ್ರಾಚೀನದ ಸತ್ತ್ವದ ಮೇಲೆ ಅರ್ವಾಚೀನವನ್ನು ಸೃಜಿಸುತ್ತಾ ಭವಿಷ್ಯತ್ತಿನ ನೂತನ ಆಗಾಮಿಕದತ್ತ ಮುಂದುವರಿಯಬೇಕು ಎಂಬುದು ನನ್ನ ಆದರ್ಶ.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೨೦–೨೧

೭೮

ತನ್ನ ಕಾವ್ಯಕೆ ತಾಂ ಮಹಾಕವಿ ಮಣಿಯುವಂತೆ !

ಶ್ರೀ ರಾಮಾಯಣಂ ದರ್ಶನಂ, ಶಿಲಾತಪಸ್ವಿನಿ, ಪುಟ ೫೦

೭೯

ಹುಡುಗರಿಗೆ ಅವರ ಲಘುಬುದ್ಧಿ ಅವರಿಗೇ ತಿಳಿಯುವುದಿಲ್ಲ.

ಸ್ವಾಮಿ ವಿವೇಕಾನಂದ, ಪುಟ ೧೫೬

೮೦

ಬಿದಿಗೆದಿಂಗಳ್ ದೋಣಿ
ಮುಗಿಲಲೆಯನಲೆವಂತೆ,
ವರಕವಿಯ ಸುರವಾಣಿ
ಜಗದೆದೆಯ ಹೊಗುವಂತೆ,
ನಿನ್ನತಿಥಿಯಾಗಿ
ಅಮೃತದ ಕುಮಾರನಾಂ
ಬಂದಿಹೆನಮೃತಕಾಗಿ !

ಜೇನಾಗುವಾ, ಅಮೃತಕಾಗಿ, ಪುಟ ೩೬

೮೧

ಕೇರಳದಲ್ಲಿ ಮಲೆಯಾಳಿಯಂತೆ ಆಂಧ್ರದಲ್ಲಿ ತೆಲುಗಿನಂತೆ ತಮಿಳುನಾಡಿನಲ್ಲಿ ತಮಿಳಿನಂತೆ ಕರ್ಣಾಟಕದಲ್ಲಿ ಕನ್ನಡ ಪ್ರಥಮ ಭಾಷೆಯಾಗದಿದ್ದರೆ, ಕನ್ನಡವೆ ಶಿಕ್ಷಣ ಮಾಧ್ಯಮವಾಗದಿದ್ದರೆ ಕನ್ನಡಿಗರ ಬಾಳು ಕುಂಠಿತವಾಗುತ್ತದೆ; ಕನ್ನಡಿಗರ ಏಳಿಗೆಗೆ ಧಕ್ಕೆ ಬರುತ್ತದೆ; ಕರ್ಣಾಟಕದ ರಚನೆ ಅರ್ಥವಿಹೀನವಾಗುತ್ತದೆ; ನಮ್ಮ ತಾಯಿಗೆ ನಮ್ಮ ಮನೆಯಲ್ಲಿಯೆ ವರಾಂಡದಲ್ಲಿ ಮಲಗಿಕೊಳ್ಳಲು, ತಾಣವೂ ಅಲ್ಲ, ನಿಲ್ದಾಣ ಕೊಡಬೇಕಾಗುತ್ತದೆ; ನಮ್ಮ ಜನಸಾಮಾನ್ಯರ ಸರ್ವಾಂಗೀಣವಾದ ನ್ಯಾಯಬದ್ಧವಾದ ವಿಕಾಸಕ್ಕೆ ಅಡಚಣೆ ಒದಗುತ್ತದೆ; ನಮ್ಮ ಸಾಹಿತ್ಯವೂ ಸಮೃದ್ಧವಾಗಿ ಪುಷ್ಟವಾಗಿ ಬಹುಮುಖವಾಗಿ ಸರ್ವತೋಮುಖವಾಗಿ ಬದುಕಿನ ಮತ್ತು ವಿದ್ಯೆಯ ಸರ್ವಶಾಖೆಗಳಲ್ಲಿಯೂ ಚೈತನ್ಯಮಯವಾದ ಜನಜೀವನದ ನೆಲದಿಂದ ಹೊಮ್ಮದೆ ಪ್ರದರ್ಶನಕ್ಕಾಗಿ ತೂಗುಹಾಕಿರುವ ಕುಂಡಗಳಲ್ಲಿ ಬೆಳೆಯುವ ಲಘು ಮನೋರಂಜನೆಯ ವಸ್ತುವಾಗುತ್ತದೆ. ಅಂತಹ ದುಃಖದ ಅಮಂಗಳದ ದುರಂತದ ಪರಿಸ್ಥಿತಿಗೆ ಕಾರಣವಾಗುವವರೆಲ್ಲರೂ, ವ್ಯಕ್ತಿಗಳಾಗಲಿ ಸಂಸ್ಥೆಗಳಾಗಲಿ, ಚಿರಂತನ ವಾಗಿ ಶಾಪಗ್ರಸ್ತರಾಗುತ್ತಾರೆ: ಕವಿಪ್ರವಾದಿಯೂ ಆಗುತ್ತಾನೆ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೨೭–೮

೮೨

ವಿಷಯ, ಭಾವ, ಚಿತ್ರ, ಇತ್ಯಾದಿಗಳಿಗೆ ಕವಿಕೃತಿಯಾದ ಕಾವ್ಯವು ಲೋಕ ವೃತ್ತಕ್ಕೆ ಬಹುಮಟ್ಟಿಗೆ ಋಣಿ, ಚಿತ್ರಕಾರನ ಚಿತ್ರ ಬಣ್ಣಗಳಿಗೆ ಬಹುಮಟ್ಟಿಗೆ ಋಣಿಯಾಗಿರುವಂತೆ. ಆದರೆ ಬರಿಯ ಬಣ್ಣಗಳಿಂದ ಎಂದಿಗೂ ಚಿತ್ರ ಸೃಷ್ಟಿಯಾಗದು– ವರ್ಣಶಿಲ್ಪಿಯ ಪ್ರತಿಭೆ, ಭಾವ ಕಲ್ಪನೆಗಳು ಆ ಬಣ್ಣಗಳ ಕೈಂಕರ್ಯವನ್ನು ಸ್ವೀಕರಿಸದಿದ್ದರೆ ; ಅಂದರೆ ಚಿತ್ರವು ವರ್ಣಗಳಿಗೆ ಋಣಿಯಾದರೂ, ವರ್ಣಗಳಿಂದಲೆ ಅದು ಅಭಿವ್ಯಕ್ತವಾಗಿದ್ದರೂ ಚಿತ್ರಪ್ರಪಂಚವು ವರ್ಣಪ್ರಪಂಚಕ್ಕೆ ಮೀರಿದುದು. ಚಿತ್ರತ್ವ ಮತ್ತು ವರ್ಣತ್ವ ಭೂಮಿಕೆಗಳೆರಡೂ ಬೇರೆ ಬೇರೆ; ಒಂದೇ ಅಳತೆಗೋಲಿಂದ ಎರಡನ್ನೂ ಅಳೆಯಲೆಳಸುವುದು ಬೆಪ್ಪು. ಅದರಂತೆ ಲೋಕವೃತ್ತದಿಂದಲೇ ಕಾವ್ಯ ಸೃಷ್ಟಿಯಾದರೂ, ಅಲ್ಲಿಯ ಮನೆಮಠ ಮರಗಿಡ ಪಶುಪಕ್ಷಿ ಮನುಷ್ಯಾದಿಗಳೇ ಇಲ್ಲಿಯೂ ಗೋಚರವಾದರೂ ಲೋಕವೃತ್ತವು ಕವಿಕೃತಿಯಿಂದ ಭಿನ್ನವಾಗಿ, ಅನ್ಯವಾಗಿ, ಅವೆರಡೂ ಬೇರೆ ಬೇರೆಯ ಭೂಮಿಕೆಗಳಿಗೆ ಸೇರುತ್ತವೆ. ಬೇರೆ ಬೇರೆಯ ಅನನ್ಯ ಪರತಂತ್ರವಾದ ಪ್ರಪಂಚಗಳಿಗೆ ಸೇರುತ್ತವೆ ಎಂದರೂ ತಪ್ಪಾಗುವುದಿಲ್ಲ.

ತಪೋನಂದನ, ಋಷಿ ವಾಲ್ಮೀಕಿಯ ಕಾವ್ಯಜಾಹ್ನವಿ, ಪುಟ ೧೧೩–೪

೮೩

ನಿಂದಾ ಸುತ್ತಿಗಳೆಲ್ಲಮಾ
ಸಮಯವರ್ತಿಗಳಲ್ಲೆ ?

ಶ್ರೀರಾಮಾಯಣ ದರ್ಶನಂ, ಶಿಲಾತಪಸ್ವಿನಿ, ಮಟ ೫೭

೮೪

ನಿಮ್ಮನೇ ಹಾರೈಸುತಿಹರೊಡನೆ ಕೂಡಿ;
ಸಮ್ಮತಿಸದವರೊಡನೆ ಹೋರಾಟ ಬೇಡಿ.
ಹಿರಿಗೆಲಸವಿಹರೊಡನೆ ಸಂಗೀತ ಬೇಡಿ.
ಸಿರಿ ಅವರ ಕೊಂದಿಹಳು ಲೋಭವಿಷವೂಡಿ.

ಮೇಘಪುರ, ಹಕ್ಕಿಗಳು, ಮಟ ೧೩

೮೫

ವ್ಯಕ್ತಿಯ ಚಿತ್ತವೃತ್ತಿಯ ಆಧಾರದ ಮೇಲೆಯೆ ಸಂಪೂರ್ಣವಾಗಿ ನಿಲ್ಲುವುದರಿಂದ ಭಾವೋಪಮೆ ವರ್ಣನಾ ಕಾವ್ಯಗಳಿಗಿಂತಲೂ ವ್ಯಂಜಕ ಕಾವ್ಯಗಳಲ್ಲಿ ವಿಫುಲ ಪ್ರಧಾನವಾಗಿ ಪ್ರಾಶಸ್ತ್ಯ ಪಡೆದಿದೆ.

ಇತ್ಯಾದಿ, ಉಪಮಾಲೋಲ ಲಕ್ಷ್ಮೀಶ, ಮಟ ೨೩

೮೬

ಪ್ರಶ್ನೆಯಿಂದೆ ಆಶ್ಚರ್ಯಕೆ
ಆಶ್ಚರ್ಯದಿಂದೆ ಪ್ರಶ್ನೆಗೆ
ಉಭಯ ಮಧ್ಯೆ ಚಲಿಪ ವಿದ್ಯೆ
ಪೂರ್ಣೆ ಶೂನ್ಯೆ ಕುಂಡಲಿನೀ !

ಮಂತ್ರಾಕ್ಷತೆ, ಮಟ ೩೪

೮೭

ಅನುಭವಿಸಿ ಹೇಳಿದುದೆಲ್ಲ ಸಾಹಿತ್ಯ, ಉಳಿದುದೆಲ್ಲ ವರದಿ.

ತಪೋನಂದನ, ಮಹಾಶ್ವೇತೆಯ ತಪಸ್ಸು, ಮಟ ೧೫

೮೮

ಇದಿರೆ ಹೇಳು ನಮ್ಮ ಕೆಚ್ಚು,
ದೇವರಿಚ್ಛೆಗೆ ?

ಚಂದ್ರಮಂಚಕೆ ಬಾ ಚಕೋರಿ, ಪ್ರಣಯ ದಯಾಭಿಕ್ಷೆ, ಮಟ ೪

೮೯

ಹಳಗನ್ನಡದ ಕವಿ ಪಂಪ–ಕಲಿತವರಿಗೆ ಕಲ್ಪತರು. ನಡುಗನ್ನಡದ ಕವಿ ನಾರಣಪ್ಪ–ಕಲಿಯದವರಿಗೂ ಕಾಮಧೇನು. ಕರ್ನಾಟಕದ ಕವಿಜೀವನದ ಮೇಲೆ ಪಂಪನ ಪ್ರಭಾವ ವಿಶೇಷವಾಗಿರಬಹುದು. ಆದರೆ ಜನಜೀವನದ ಹೃದಯ ವೇದಿಕೆಯಲ್ಲಿ ನಾರಣಪ್ಪನೆ ಅಗ್ರಾಸನಸ್ಥ ಮಹಾಧ್ಯಕ್ಷ.

ವಿಭೂತಿಪೂಜೆ, ಕಲಿಯದವರಿಗೂ ಕಾಮಧೇನು, ಪುಟ ೧೫

೯೦

ನಮ್ಮಲ್ಲಿ ಅಕ್ಷರ ವಿದ್ಯೆಯ ಅಭಾವವಾಗಿದೆ; ಕ್ಷಾಮವಾಗಿದೆ ಎಂದರೂ ಸುಳ್ಳಾಗದು. ಸರಕಾರದವರು ಕೊಡುವ ನೌಕರಿ ಚಾಕರಿಗಳಿಗಾಗಿ ಓದುವ ಕಾಲ ಹಿಂದಾಯಿತು. ಸಂಸ್ಕೃತಿಗೋಸ್ಕರವಾದರೂ ನಮ್ಮ ಬಾಲಕರು ಓದಬೇಕು. ಬಿ. ಎ., ಎಂ. ಎ., ಡಿಗ್ರಿಗಳನ್ನೇ ಪಡೆಯಬೇಕು ಎಂದು ನನ್ನ ಭಾವವಲ್ಲ. ಪಡೆದರೇನೊ ಸಂತೋಷವೆ. ಆದರೆ ನೆಮ್ಮದಿಯಾಗಿ ಮೌನವಾಗಿ ಚೊಕ್ಕಟವಾಗಿ ಇತರರಿಗೆ ಹಾನಿಕರವಾಗದಂತೆ ಸಣ್ಣ ಮನಸ್ಸನ್ನು ಆಚೆ ನೂಕಿ ಬದುಕನ್ನು ಸಾಗಿಸಲು ಎಷ್ಟು ವಿದ್ಯೆ ಬೇಕೊ ಅಷ್ಟನ್ನಾದರೂ ನಮ್ಮ ಬಾಲಕರಿಗೆ ನಾವು ನೀಡದಿದ್ದರೆ ಮಲೆನಾಡಿನಲ್ಲಿ ಮಲೆಗಳೇ ತಲೆಗಳಾಗುವ ಸಂಭವವುಂಟೆಂದು ನಾನು ಮನಸ್ಸಿಲ್ಲದ ಮನಸ್ಸಿನಿಂದ, ಆದರೂ ಸತ್ಯ ದೃಷ್ಟಿಯಿಂದ ತಮ್ಮ ಮುಂದೆ ಹೇಳಬೇಕಾಗಿದೆ. ಈ ವಿಚಾರದಲ್ಲಿ ಸ್ತ್ರೀಪುರುಷ ಭೇದವಿಲ್ಲದೆ ಕೆಲಸ ಸಾಗಬೇಕು.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೨೬–೭

೯೧

ಐಶ್ವರ್ಯವು ಭೋಗಪ್ರೇರಕವಾಗಿರುವಂತೆ ದಾರಿದ್ರ್ಯವು ತ್ಯಾಗಪ್ರೇರಕವಾಗುತ್ತದೆ. ವಿಧಿಯ ವಿಧಾನಗಳು ಬಹುವಿಧವಾಗಿವೆ.

ಸ್ವಾಮಿ ವಿವೇಕಾನಂದ, ಪುಟ ೮೭

೯೨

ಯುವಕನೆಂಬೆನೆ ? ಹಸುಳೆ ! ನಿನ್ನೆದೆಯ ತೊಟ್ಟಿಲಲಿ
ನಾನು ಬರಿ ಹಸುಳೆ ! ನುಣ್ಣನೆಯ ಮಳಲೊಟ್ಟಿಲಲಿ
ಕುಳಿತ ನಾನಂದಿನಂತೆಯೆ ಬರಿಯ ಕನಸುಗುಳಿ.
ನವಿರು ನರೆತೊಡಮಾನು ಹೀಗೆಯೇ ಎಂದು ತಿಳಿ !

ಕಲಾಸುಂದರಿ, ತುಂಗೆ, ಪುಟ ೬೯

೯೩

ಇಂದ್ರಿಯಗಳಿಂದ್ರಧನುರ್ಧಾರಿಣಿಯೆ ಇಂದ್ರಾಣಿ,
ನನ್ನನೆದೆಗಪ್ಪು ಬಾ ! ಸ್ವಪ್ನದೋಲದಿ ತೂಗಿ
ವಿಸ್ಮೃತಿಯ ಗಾನಗೈ ! ಜನ್ಮಮೃತ್ಯು ಗ್ಲಾನಿ
ಮಾಯವಾಗಲಿ "ನಾನು" ಆನಂದಲಯವಾಗಿ !
ಮಥಿಸು ನನ್ನನು ಮಸಗಿದಂಬುಧಿಯ ತೆರೆಗಳಲಿ;
ನುಂಗಲೆನ್ನನು ಭವ್ಯ ಭೂಮಕಾನನ ಸುಪ್ತಿ;
ನೊಣೆಯಲೆನ್ನನು ಶೂನ್ಯ ಸ್ನಿಗ್ಧ ಮಧುರ ಸಮಾಧಿ !
ಓ ಪ್ರಾಣ ಪ್ರಣಯಿನಿಯೆ, ಬಳಿಗೆ ಬಂದೆನು ಬಳಲಿ–
ಬರಲೆನಗೆ ನಿನ್ನೆದೆಯ ಸೋಮಪಾನದ ತೃಪ್ತಿ:
ಮಾಧುರ್ಯ ನಿರ್ವಾಣ ಸಿದ್ಧಿಯ ಮಹಾಬೋಧಿ !

ಕಲಾಸುಂದರಿ, ಕಲ್ಪನಾಸುಂದರಿ, ಪುಟ ೭೬

೯೪

ಬಾಳು ಸಂದೊಡಮೇನು ?
ಸಾವು ಬಂದೊಡಮೇನು ?
ಸಾವು ಬಾಳಿನ ಕುಂದನೊಂದರಿಯದಿಹ ಶಾಶ್ವತಾತ್ಮ ನೀನು !

ಪಾಂಚಜನ್ಯ, ಮಲ್ಲಗೀತೆ, ಪುಟ ೪೯

೯೫

ತೀರ್ಥಯಾತ್ರೆಗಳಿಂದಲೂ ಪುಣ್ಯಕ್ಷೇತ್ರಗಳಿಂದಲೂ ನೊಂದ ಜೀವಕ್ಕೂ ಬೆಂದಲೋಕಕ್ಕೂ ಶಾಂತಿ ಸಮಾಧಾನಗಳು ಮತ್ತೆ ಮತ್ತೆ ದೊರೆಯುತ್ತಿರುವುದರಿಂದಲೆ ಜನರು ಪ್ರಯಾಣದ ಕ್ಲೇಶ, ಕಷ್ಟ, ದುರ್ಗಮತೆ, ಅಪಾಯ, ಕಡೆಗೆ ಸಾವು, ಯಾವುದನ್ನೂ ಲೆಕ್ಕಿಸದೆ ಮತ್ತೆ ಮತ್ತೆ ಅಂತಹ ಪ್ರವಾಸಗಳನ್ನು ಕೈಕೊಳ್ಳುತ್ತಿರು ವುದಲ್ಲವೆ ? ಅಂತಹ ಪ್ರವಾಸ ಯಾರಿಗೆ ಆವಶ್ಯಕವೊ ಅವರನ್ನು ಮೂಢರೆಂದಾ ಗಲಿ ಭ್ರಾಂತರೆಂದಾಗಲಿ ಕರೆದರೆ ತಪ್ಪಾಗುತ್ತದೆ, ಆಸ್ಪತ್ರೆಗೆ ಹೋಗುವ ರೋಗಿಯನ್ನು ಮೂಢನೆಂದಾಗಲಿ ಭ್ರಾಂತನೆಂದಾಗಲಿ ಕರೆದರೆ ತಪ್ಪಾಗುವಂತೆ.

ಷಷ್ಟಿನಮನ, ತೀರ್ಥಯಾತ್ರೆ, ಪುಟ ೮೭

೯೬

ಆನಂದದ ಅಂಶವಲ್ತೆ
ನಮ್ಮ ನೋವೂ ?

ಅಮೃತತ್ವದ ಅಂಗವಲ್ತೆ
ನಮ್ಮ ಸಾವೂ ?

ಚಂದ್ರಮಂಚಕೆ ಬಾ ಚಕೋರಿ, ಹರಗಿರಿಜಾ, ಪುಟ ೧೮

೯೭

ನಿದ್ದೆ ಸೊಗಸು, ಸಾವು ಲೇಸು,
ಹುಟ್ಟದಿರುವುದುತ್ತಮ !
ಹುಟ್ಟಿಬಂದಮೇಲೆ, ಲೀಲೆ
ತೋರಲದುವೆ ಉತ್ತಮ !

ಕಲಾಸುಂದರಿ, ಗುಟ್ಟನರಿತು ಸುಮ್ಮನಿರು, ಪುಟ ೫೯

೯೮

ಸಿಹಿಗೆಂತು ರುಚಿಯಿಹುದೊ
ಕಹಿಗುಮಂತೆಯೆ ಬೇರೆ ರುಚಿಯಿರದೆ ? ಭೋಜನದ
ರಸಿಕಂಗೆ ಬೇರೆ ಬೇರೆಯ ರುಚಿಯ ರಸಗಳೊಳ್
ಭೇದಭಾವಮದೇಕೆ ?

ಶ್ರೀ ರಾಮಾಯಣ ದರ್ಶನಂ, ಪಂಚವಟಿಯ ಪರ್ಣಕುಟಿ, ಪಾತ್ರ ಚಂದ್ರನುಖಿ, ಪುಟ ೨೧೯-೨೦

೯೯

ಒಂದು ಒಳ್ಳೆಯ ಗ್ರಂಥವನ್ನು ಓದಿದರೆ ಒಬ್ಬ ಮಹಾತ್ಮನ ಸ್ನೇಹಲಾಭದಿಂದ ಉಂಟಾಗುವ ಪರಿಣಾಮವಾಗುತ್ತದೆ. ಏಕಂದರೆ ಕಾವ್ಯ ಕವಿಯ ಜೀವನಸಾರದ ಸರ್ವಸ್ವ. ಅದು ನಮ್ಮದಾಗುವುದರಿಂದ ನಮ್ಮದೃಷ್ಟಿ ವಿಶಾಲವೂ ಶಾಂತಿಪೂರ್ಣವೂ ಆಗುತ್ತದೆ. ಬಾಳಿನ ಚೇಳಿನ ಬಾಲದ ಕೊಂಡಿ ಮುರಿದು ಬೀಳುತ್ತದೆ. ಜೀವಿನ ಸುಖ ಸುವರ್ಣಕ್ಕೆ ಪುಟವಿಟ್ಟಂತಾಗಿ ಆತ್ಮ ಓಜಸ್ವಿಯಾಗುತ್ತದೆ; ಆದ್ದರಿಂದ ಮನೆಯಲ್ಲಿ ಒಂದು ಒಳ್ಳೆಯ ಪತ್ರಿಕೆ, ಕೆಲವು ಒಳ್ಳೆಯ ಗ್ರಂಥಗಳು ಇರಬೇಕಾದುದು ಸದ್ಗೃಹದ ಸಲ್ಲಕ್ಷಣ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೨೯-೩೦

೧೦೦

ಭವ್ಯತಾ ಅನುಭವಸಾಧನೆಗೆ ಎರಡು ಪಕ್ಷಗಳಿವೆ: ಒಂದನೆಯದು ಮತ್ತು ಮೊದಲನೆಯದು ಆಹಂಕಾರ ನಷ್ಟ; ಎರಡನೆಯದು ಬ್ರಹ್ಮಲಾಭ.

ತಪೋನಂದನ, ಪಂಪನಲ್ಲಿ ಭವ್ಯತೆ, ಪುಟ ೩೯

೧೦೧

ಸಾಹಸದಿಂದ ಸಂಪತ್ತು ಹೆಚ್ಚಿದರೆ ಸಂಪತ್ತಿನಿಂದ ಸಾಹಸ ಹೆಚ್ಚುತ್ತದೆ. ಅವುಗಳೆರಡೂ ಸೇರಿ ಸಂಸ್ಕೃತಿಯ ಕಲ್ಪವೃಕ್ಷಕ್ಕೆ ಬೆಳೆ ನೀರು ಹೊಯ್ಯುತ್ತವೆ.

ಸ್ವಾಮಿ ವಿವೇಕಾನಂದ, ಪುಟ ೩೨

೧೦೨

ಪ್ರೇಮವಶವಾದ ಹೃದಯಕ್ಕೆ ಎಲ್ಲೆಲ್ಲಿಯೂ ಎಲ್ಲದರಲ್ಲಿಯೂ ಶಕುನಗಳೆ ತೋರುತ್ತವೆ.

ಕಾನೂರು ಹೆಗ್ಗಡಿತಿ, ಪುಟ ೧೨೭

೧೦೩

ದೊರೆಯನೆಳೆತಂದು ಬಟ್ಟೆಯ ಬಿಚ್ಚಿ ಮುಡಿಗಳಚಿ
ನೋಡಿದರೆ ತಿಳಿಯುವುದು ವೇಷಕೋ ವ್ಯಕ್ತಿಗೋ
ಆರ್ಗೆ ಗೌರವವೆಂದು! ಉಡುಗೆ ತೊಡುಗೆಯೊ ಆಳೊ
ದಿಟದರಸು ಯಾರೆಂದು!

ಅಗ್ನಿಹಂಸ, ಶ್ರವಣಬೆಳ್ಗೊಳದ ಗೋಮಟೇಶ್ವರನ ಸಾನ್ನಿಧ್ಯದಲ್ಲಿ, ಪುಟ ೬೫

೧೦೪

ಬಾಂದಳದಿ ಹಾರಿದರು ಬುವಿಯಲ್ಲಿ ಜಾರುತಿಹ
ರಸಿಕನಾಗಿಹನೊಬ್ಬ ಗೆಳೆಯನಿರಲೆನಗೆ.

ಕೊಳಲು, ನನ್ನ ಬಯಕೆ, ಪುಟ ೪೩

೧೦೫

ಕವಿತಾ ದೃಷ್ಟಿಯಿಂದ ನೋಡಿದರೆ ವಿಜ್ಞಾನವು, ವಿಶ್ವದ ಮತ್ತು ಅದರಲ್ಲಿ ನಡೆಯುವ ವ್ಯಾಪಾರಗಳ ವಿಷಯದಲ್ಲಿ, ನಮಗೆ ಮೊದಲಿಗಿಂತಲೂ ಹೆಚ್ಚು ಕೌತುಕ ವನ್ನೂ ಗೌರವವನ್ನೂ ಉಂಟುಮಾಡುತ್ತಿದೆ. ಶ್ರೇಷ್ಠಮತಿಯಾದವನಿಗೆ ವಿಜ್ಞಾನವು ಬಿಚ್ಚಿ ತೋರಿಸುತ್ತಿರುವ ಅದ್ಭುತವಾದ ವಿಶ್ವವು ಅತ್ಯಂತ ಕಾವ್ಯ ಪೂರ್ಣವಾಗಿದೆ; ರಸಮಯವಾಗಿದೆ. ವಿಜ್ಞಾನ ವಿದ್ಯೆಯಿಂದ ರಸಪ್ರಪಂಚದಲ್ಲಿ ಏನಾದರೂ ಹಾಳಾ ಗಿದ್ದರೆ ಅದು ಉಳಿಯಲು ಅರ್ಹವಾಗಿರಲಿಲ್ಲವೆಂದೇ ಹೇಳಬೇಕಾಗುತ್ತದೆ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೫೦-೧

೧೦೬

ಹೊಲೆಗೆ ಹೊಲೆ ಮಡಿಯಲ್ತು; ಕೊಲಗೆ ಕೊಲೆ ಪಡಿಯಲ್ತು;
ನೋವು ನೋವಿಗೆ ಸಾವುಮಲ್ತು.

ಶ್ರೀ ರಾಮಾಯಣ ದರ್ಶನಂ, ಭರತಮಾತೆ, ಪಾತ್ರ ಕೈಕೆ, ಪುಟ ೧೨೨

೧೦೭

ನಿನಗೆ ಸುಖವು ಬೇಕೆ ಹೇಳು;
ನನ್ನ ಮಾತು ಕೇಳು:
ಬಳಿಗೆ ಬಾ, ಒಳಗೆ ಬಾ;
ನನ್ನೊಳಾಗಿ ನನ್ನನಾಳು!
ನೀನೆ ನಾನು, ನಾನೆ ನೀನು,
ಆಗಿ, ಸುಖದಿ ಬಾಳು!

ಪ್ರೇತಕ್ಯೂ, ಭಾವೈಕ್ಯತೆ, ಪುಟ ೫೩

೧೦೮

ಎದೆಯ ದನಿ ಧರ್ಮನಿಧಿ! ಕರ್ತವ್ಯವದುವೆ ವಿಧಿ!
ನಂಬದನು; ಅದನುಳಿದು ಋಷಿಯು ಬೇರಿಲ್ಲ!
ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ,
ಅವರ ಶಾಸ್ತ್ರವು ಅವರ ಕಾಲಕ್ಕೆ ಮಾತ್ರ;
ಕಾಲಕ್ಕೆ ತಕ್ಕಂತೆ, ದೇಶಕ್ಕೆ ತಕ್ಕಂತೆ,
ನಮ್ಮ ಹೃದಯವೆ ನಮಗೆ ಶ್ರೀಧರ್ಮಸೂತ್ರ!

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಪುಟ ೨೪-೫

೧೦೯

ವಿಶ್ವವಿದು ನಿನ್ನಾತ್ಮದಾ ಕಾಲದೇಶದಲಿ
ನಿನ್ನ ಮೈಯಾಗಲಿ:-ವಸುಂಧರೆ ಹೃದಯವಾಗಿ,
ವಿಸ್ತೃತ ಸಮುದ್ರಗಳೆ ಶ್ವಾಸಕೋಶಗಳಾಗಿ,
ತೇಲಲಿ ಜಗತ್ತು ರಸಸಿದ್ಧಿಯಾಕಾಶದಲಿ

ಕೃತ್ತಿಕೆ, ರಸಸಿದ್ಧಿ, ಪುಟ ೨೯

೧೧೦

ಎಲ್ಲಿಯಾದರೇನು ? ಎಂತುಟಾದರೇನು ?
ನಿನ್ನನು ಹುಡುಕಿದರಾಯಿತು. ನಿನ್ನನು ಪಡೆದರಾಯಿತು.
ಹುಡುಕುವುದು ಮುಖ್ಯವಲ್ಲವೆ ? ಪಡೆಯುವುದು ಗುರಿಯಲ್ಲವೆ ?
ಏಕೆಂದರೆ, ನೀನು ಎಲ್ಲೆಲ್ಲಿಯೂ ಇರುವೆ:
ಎಲ್ಲದರಲ್ಲಿಯೂ ಇರುವೆ; ಎಲ್ಲವೂ ಆಗಿರುವೆ.
ಏಕೆಂದರೆ, ನೀನು ಎಲ್ಲ ಕರ್ಮಗಳ ಆದರ್ಶ;
ಎಲ್ಲ ಸಂಸ್ಕಾರಗಳ ಆದರ್ಶ; ಎಲ್ಲ ಭಾವಗಳ ಆದರ್ಶ;
ಎಲ್ಲ ಆತ್ಮಗಳ ಆದರ್ಶ !
ಏಕೆಂದರೆ, ನೀನು ಪ್ರೇಮಮಯ !

ಕಿಂಕಿಣಿ, ನೀನು ಪ್ರೇಮಮಯ, ಪುಟ ೯

೧೧೧

......ನಮ್ಮ ತರುಣರು ಇದ್ದಾರಲ್ಲ, ಅವರೂ ಒಬ್ಬರಿಗೂ ಅರ್ಥವಾಗದ **Symbolics** ಅಂತ ನವ್ಯಕವಿತೆ ಅಂತ ಬರೆಯುತ್ತಾರೆ. ಅವನ್ನು ಯಾರೂ ಹಾಡುವುದಿಲ್ಲ. ಹಿಂದೆ ನಾವು ಸಾವಿರಾರು ಜನರನ್ನು ಕೂರಿಸಿಬಿಟ್ಟು ಮೂರು ನಾಲ್ಕು ಗಂಟೆ ಗಳ ಕಾಲ ಇಂತಹವುಗಳನ್ನು ಹೇಳುತ್ತಾ ಇದ್ದರೆ, ಸಾಲದು ಇನ್ನೂ ಅಷ್ಟು ಹೇಳಿ, ಇನ್ನೂ ಅಷ್ಟು ಹೇಳಿ ಅಂತ ಕಾಫಿ ತರಿಸಿಕೊಟ್ಟು ಕೇಳುತ್ತಿದ್ದರು. ಈಗ ಇವರು ಹೇಳಲಿ. ಇವರ ಗುಂಪಿನಲ್ಲಿ ಕೂತ್ಕೊಂಡುಬಿಟ್ಟು ಇದು ಅವನದು ಚೆನ್ನಾಗಿದೆ, ಇವನದು ಚೆನ್ನಾಗಿದೆ ಅಂತ ಹೇಳುತ್ತಾರೆಯೆ ಹೊರತು ಖಂಡಿತಾ ಅದು ಜನ ಸಾಮಾನ್ಯಕ್ಕೆ ಹಿಡಿಸುವುದಿಲ್ಲ. ಅದರಿಂದ ಜೀವನಕ್ಕೆ ಪ್ರಯೋಜನವೂ ಇಲ್ಲ. **All art is useless** ಎಂಬುದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಬಹುದು.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ, ಪುಟ ೬೮

೧೧೨

ಸ್ವರ್ಗ ಮರ್ತ್ಯಂಗಳನು
ವಿಶ್ವ ಬ್ರಹ್ಮಾಂಡವನು
ನಿನಗೀವೆನಿಲ್ಲಿ !
ಯೋಗಿಗಳ ಯೋಗವನು,
ಭೋಗಿಗಳ ಭೋಗವನು
ಜ್ಞಾನಿಗಳ ಜ್ಞಾನವನು,

ಭಕ್ತರಾ ಭಕ್ತಿಯನು
ನಿನಗೀವೆನಿಲ್ಲ !
ಎಲ್ಲವಿದೆ ರಸಋಷಿಯ
ಕೈಬುಟ್ಟಿಯಲ್ಲಿ !

ಷೋಡಶಿ, ರಸಋಷಿ, ಪುಟ ೬೫

೧೧೩

ಪ್ರೇಮ ಮೊಟ್ಟಮೊದಲು ಹೃದಯದ ಕೋರಕವನ್ನು ಪ್ರವೇಶಿಸಿದಾಗ ಅದರ ವಿದ್ಯುತ್ ಸ್ಪರ್ಶದಿಂದ ಜಡ ಜಗತ್ತು ಚೇತನಪೂರ್ಣವಾಗುತ್ತದೆ. ಆಗ ಹೊಂಗನಸಿನ ಹೆಗ್ಗಡಲಿನಲ್ಲಿ ಮಹಾ ಭಯಂಕರ ಭಾರವಾಗಿರುವ ಸ್ಥೂಲ ವಿಶ್ವವೂ ಬಣ್ಣದ ಗುಳ್ಳೆಯಾಗಿ ತೇಲಾಡುತ್ತದೆ. ಪ್ರಾಣಪಕ್ಷಿ ತನ್ನ ರೆಕ್ಕೆಗಳನ್ನು ಕೆದರಿ, ಅನಂತದಲ್ಲಿ ಅಶರೀರಿಯಾಗಿ ಹಾರಾಡತೊಡಗುತ್ತದೆ.

ಕಾನೂರು ಹೆಗ್ಗಡಿತಿ, ಪುಟ ೨೨೩

೧೧೪

ಹಿಂದಿನ ಕಾಲದಲ್ಲಿ ಇಂತಹ ಈ ಅಪಕ್ವ ಮನಸ್ಸಿನ ಬರವಣಿಗೆಗೆ ಪ್ರಕಟಣಾವಕಾಶವೆ ಇರುತ್ತಿರಲಿಲ್ಲ. ಆಧುನಿಕ ಸೌಕರ್ಯಗಳಾದ ಕಾಗದ ಮುದ್ರಣ ರೇಡಿಯೊ ಪತ್ರಿಕೆ ಇವುಗಳಿರದಿದ್ದ ಕಾಲದಲ್ಲಿ ತರುಣರು ಬರೆದುದಕ್ಕೆ ಇಂದಿನಂತಹ ಸುಲಭ ಮತ್ತು ಶೀಘ್ರ ಪ್ರಚಾರಕ್ಕೆ ಅವಕಾಶವೆ ಇರುತ್ತಿರಲಿಲ್ಲ. ಈಗೇನಾಗಿದೆ ಅಂದರೆ, ಅಪಕ್ವದ ಸುಲಭ ಮತ್ತು ಶೀಘ್ರ ಪ್ರಕಾಶನಕ್ಕೆ ನಾ ಮುಂದೆ ತಾ ಮುಂದೆ ಎಂದು ಪ್ರಕಾಶಕರು, ಪತ್ರಿಕೆಗಳು, ರೇಡಿಯೊ ಮುಂತಾದವು ಹಸಿದು ಹಾತೊರೆಯುತ್ತವೆ. ಹಸಿವೆಯ ದಾರಿದ್ರ್ಯತೆಯಲ್ಲಿ ತಿನ್ನುವ ಸಾಮಗ್ರಿಯ ಅರ್ಹತೆ ಅನರ್ಹತೆಯ ಮೀನ ಮೇಷಕ್ಕೆ ಸಮಯವೆ ಇರುವುದಿಲ್ಲ.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೧೯–೨೦

೧೧೫

ಉತ್ತಮವಾದುದು ಇದ್ದರೆ ಅದನ್ನು ಪ್ರಶಂಸಿಸಿ. ಒಂದು ವೇಳೆ ಉತ್ತಮವಾದುದನ್ನು ಸರ್ವೋತ್ತಮ ಎಂದು ಕೀರ್ತಿಸಿದರೆ ಅದು ಎಲ್ಲ ಕಾಲಕ್ಕೂ ನಿಲ್ಲುವುದಿಲ್ಲ. ಕ್ರಮೇಣ ನಿಧಾನವಾಗಿಯಾದರೂ ಅದರ ಬೆಲೆ ನಿರ್ಣಯವಾಗುತ್ತದೆ. ಅದರೆ ಸರ್ವೋತ್ತಮವಾದುದನ್ನು ಈಗಲೆ ಈರ್ಷ್ಯೆಯಿಂದ ಖಂಡಿಸಿಬಿಟ್ಟರೆ ಅದು ಮೂಲೆಗೆ ಬಿದ್ದು ಸೊರಗಿ ಸತ್ತೇಹೋಗುತ್ತದೆ. ಅದಕ್ಕೆ ಮತ್ತೆ ಬೆಲೆಕಟ್ಟಿಸಿಕೊಳ್ಳುವ ಅವಕಾಶವೆ

ಇರುವುದಿಲ್ಲ. ಆದ್ದರಿಂದ ಆದಷ್ಟು ಈ ರೀತಿಯ ಖಂಡನೆ–ಏಕೆಂದರೆ ಖಂಡನೆ ಕೂಡ ಅದನ್ನು ಮಾಡುವ ರೀತಿಯಲ್ಲಿದೆ–ನಿಲ್ಲಬೇಕು.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೧೪–೫

೧೧೬

ಶೂದ್ರನೆ ಹುಟ್ಟಿಸಿ, ಶೂದ್ರನೆ ಬೆಳೆಯಿಸಿ,
ಶೂದ್ರನು ಕೊಟ್ಟಾಹಾರವ ತಿಂದಿಹ
ಕೋಗಿಲೆಗೆಲ್ಲಿಯ ದ್ವಿಜತನವು ?

ನವಿಲು, ಕಾಜಾಣ, ಪುಟ ೪೮

೧೧೭

ಜೀವ ರಥೋತ್ಸವವಿದನಣಕಿಸದಿರು,
ಎಲೆ, ಸಂನ್ಯಾಸಿ !
ಸಾರಥಿಯನು ನೋಡಾದರು ಬಾ,
ತೇರನು ಎಳೆಯುವ ಸಂನ್ಯಾಸಿ !

ಕೊಳಲು, ಜೀವ ರಥೋತ್ಸವ, ಪುಟ ೧೦೧

೧೧೮

ನಿಜವಾದ ತಪಸ್ಸಿನಲ್ಲಿ ಸತ್ಯ ಮಿಥ್ಯೆಗಳ ರಾಜಿಗೆ ಅವಕಾಶವೆ ಇಲ್ಲ.

ಶ್ರೀರಾಮಕೃಷ್ಣ ಪರಮಹಂಸ, ಪುಟ ೧೭೫

೧೧೯

ರಸಾನುಭವಕಾರಿಯಾದ ಬರವಣಿಗೆಯೆಲ್ಲವೂ ಸಾಹಿತ್ಯ ಎಂಬ ಬಿರುದಿಗೆ ಯೋಗ್ಯವಾಗುತ್ತದೆ.

ಸಾಹಿತ್ಯ ಪ್ರಚಾರ, ಕನ್ನಡ ಸಾಹಿತ್ಯ, ಪುಟ ೫೬

೧೨೦

ಮಹಾತ್ಮನೂ ಅಲ್ಲದೆ ಗುಣರೂಪಗಳು ಒಂದೂ ಇಲ್ಲದೆ ವಿರೂಪಿಯೂ ಅನಾಗರಿಕನೂ ಆದ ಮನುಷ್ಯನು ತನಗೆ ವಿಪುಲೈಶ್ವರ್ಯವಿರುವ ಪಕ್ಷದಲ್ಲಿ ಭೂಷಣಗಳಿಂದಲೆ ಮೆರೆದು ಜನಗಳನ್ನು ಆಕರ್ಷಿಸುತ್ತಾನೆ. ಇದು ಅತ್ಯಂತ ಅಧಮ ಶ್ರೇಣಿಗೆ ಸೇರಿದ ಆಕರ್ಷಣೆ. ಇದರಿಂದ ಆಕರ್ಷಿತರಾಗುವವರೂ ಕುರುಚಿಯುಳ್ಳ ಪಾಮರರು ಅಥವ ಧನಪಿಶಾಚ ಹಿಡಿದ ಲೋಭಿಗಳು.

ಇತ್ಯಾದಿ, ಉಪಮಾಲೋಲ ಲಕ್ಷ್ಮೀಶ, ಪುಟ ೧೮

೧೨೧

ಜಗತ್ತಿಗಿಂತಲೂ ಮಹಿಮಾಮಯವಾದ ದೇವಸ್ಥಾನ ಮತ್ತೊಂದುಂಟೆ? ಶುದ್ಧವಾದ ಸೌಂದರ್ಯಾನುಭವಕ್ಕಿಂತಲೂ ಬೇರೊಂದು ಪೂಜೆಯುಂಟೆ? ಕೋಟ್ಯನು ಕೋಟಿ ನಕ್ಷತ್ರಗಳಿಂದ ಖಚಿತವಾದ ಅನಂತವಾದ ಅಪಾರವಾದ ರಾತ್ರಿಯ ಅಂತ ರಿಕ್ಷವನ್ನು ಈಕ್ಷಿಸಿದಾಗ ಹೃದಯಮಂದಿರದಲ್ಲಿ ಆವಿರ್ಭವಿಸದ ಪರಮಾತ್ಮ ಅನಿಲಸಂಚಾರವಿಲ್ಲದ ಕತ್ತಲು ಕವಿದ ಗರ್ಭಗುಡಿಯಲ್ಲಿ ನಮಗೆ ಮೈದೋರುವನೆ?

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೨೬

೧೨೨

ಕವಿ ಜನಮನಸ್ಸಿನ ನಿಧಿಯಾಗಿ, ಪ್ರತಿನಿಧಿಯಾಗಿ, ಪಾರದರ್ಶಿಯಾಗಿರುವುದರಿಂದ ಕವಿಸೃಷ್ಟಿಯಾದ ಸಾಹಿತ್ಯವೂ ಜನಜೀವನದ ನಿಧಿಯೂ ಪ್ರತಿನಿಧಿಯೂ ಆಗುವುದಲ್ಲದೆ ಭವಿಷ್ಯತ್ತಿನ ಮಾರ್ಗದರ್ಶಿಯೂ ಆಗುತ್ತದೆ. ಲಕ್ಷೋಪಲಕ್ಷ ಹೃದಯಗಳ ಆಶೆಯ ಭಯದ ಆಕಾಂಕ್ಷೆಯ ಆನಂದದ ಕಷ್ಟಸಂಕಟದ ಸಾಹಸಪ್ರಯತ್ನದ ಸೋಲು ಗೆಲುವಿನ ಮೂಕ ಮೌನಕ್ಕೆ ಕವಿವಾಣಿಯಾಗುತ್ತಾನೆ. ಆ ವಾಣಿಯನ್ನು ಆಲಿಸಿದ ಜನಜೀವನದಲ್ಲಿ ಅದಕ್ಕೆ ಪ್ರತಿಕ್ರಿಯೆಯಾಗಿ ಮತ್ತೆ ಹೊಸ ಹೊಸ ಆಶೆ ಭಯ ಆಕಾಂಕ್ಷೆ ಸಾಹಸ ಪ್ರಯತ್ನಗಳು ಮೈದೋರುತ್ತವೆ. ಏಕೆಂದರೆ, ಸಾಹಿತ್ಯಕ್ಕೆ ಜನಜೀವನ ಪ್ರೇರಕಶಕ್ತಿಯಾಗುವಂತೆ ಜನಜೀವನಕ್ಕೆ ಸಾಹಿತ್ಯ ಪ್ರಚೋದಕಶಕ್ತಿಯಾಗುತ್ತದೆ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸದೃಷ್ಟಿ, ಪುಟ ೪೯

೧೨೩

ಚಪಲ ಮತಿ ಗೌರವಾರ್ಹನೆ? ಶಾಸನಾರ್ಹಂ!

ಶ್ರೀ ರಾಮಾಯಣ ದರ್ಶನಂ, ಊರ್ಮಿಳಾ, ಪಾತ್ರ ಲಕ್ಷ್ಮಣ, ಪುಟ ೬೨

೧೨೪

ಪ್ರಕೃತಿರೂಪದಲ್ಲಿ ಅವ್ಯಕ್ತವಾಗಿರುವ ಶಕ್ತಿಯ ಇಚ್ಛಾವಿಕಾಸದಿಂದಲೆ ಸೃಷ್ಟಿಯಲ್ಲಿ ಬೇರೆಬೇರೆ ಪರಿಣಾಮಗಳಾಗುತ್ತವೆ. ಬರಿಯ ಸನ್ನಿವೇಶ ಮಾತ್ರದಿಂದಲ್ಲ. ಸನ್ನಿವೇಶ ಪ್ರಭಾವ ಅಭಿನಿವೇಶಕ್ಕೆ, ಎಂದರೆ ಅಸ್ಮಿತಾಸಕ್ತಿಗೆ, ನಿಮಿತ್ತಭಿತ್ತಿಯಾಗುತ್ತದೆಯೆ ಹೊರತು ಅದೇ ಪರಿಣಾಮ ಕರ್ತೃವಲ್ಲ.

ವಿಭೂತಿಪೂಜೆ, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪುಟ ೫೫

೧೨೫

ಕಲ್ಪಾಂತರಗಳ ಸಂಕ್ಷಿಪ್ತಾಕೃತಿ,
ಜಗಶಿಲ್ಪಿಯ ಯುಗಯುಗ ಕರ್ಮದ ಕೃತಿ,
ಶತಮಾನಂಗಳ ಸಂಗ್ರಹ ಸಂಸ್ಕೃತಿ:
ಮಲಗಿದೆ ನವಶಿಶು ತೊಟ್ಟಿಲಲಿ!

ಕೋಗಿಲೆ ಮತ್ತು ಸೋವಿಯಾಟ್ ರಷ್ಯಾ, ಕೂಸಿನ ಕನಸು, ಪುಟ ೫೬

೧೨೬

ನಿನ್ನ ನೋಡದಿಂತು ಬಯಸಿ
ಹಾಡುತಿರುವೆನು.
ದೂರದೇಶದಲ್ಲಿ ಇರುವ
ಹಿರಿಯ ಕವಿಯ ಕತೆಯ ಕೇಳಿ,
ಅವನ ಕವಿತೆಯೋದಿ, ಅವನ
ನೋಡೆ ಬಯಸುವ
ಕಿರಿಯ ಕವಿಯ ತೆರದಿ ನಿನ್ನ
ಕೂಡಲೆಳಸುವೆ!

ಕೊಳಲು, ಕಾಣದ ಕಡಲಿಗೆ, ಪುಟ ೨೭

೧೨೭

ನನ್ನ ನಮಸ್ಕಾರಕ್ಕಾದರೂ ನಿನ್ನ 'ಅಲ್ಪತೆ' ತೊಲಗಲಿ; ನಿನ್ನ ಹೃದಯದಲ್ಲಿ 'ಭೂಮ' ಚೇತನ ಉದ್ದೀಪನವಾಗಿ ತೊಳಗಲಿ.

ಮನುಜಮತ ವಿಶ್ವಪಥ, ಕನ್ನಡಕ್ಕಾಗಿ ಕೈಯೆತ್ತು, ಪುಟ ೧

೧೨೮

ಸೃಷ್ಟಿಕವಿಯ ವಿಶ್ವಕಾವ್ಯಕ್ಕೆ ಆನಂದವೇ ಕಾರಣ, ಉದ್ದೇಶ ಮತ್ತು ಪ್ರಯೋಜನ– ಎಂಬುದು ಪೂರ್ಣದೃಷ್ಟಿಗೆ ಮಾತ್ರ ಸ್ವಸಂವೇದ್ಯ. ಖಂಡ ಅಥವಾ ಅಂಶದೃಷ್ಟಿಗೆ ಅದು ಸ್ವಯಂ ಸಾಧ್ಯವಲ್ಲ. ಯಾವಪ್ರಜ್ಞೆ ಹಿಂದು ಮುಂದಿಂದುಗಳನ್ನು ಏಕಕಾಲದಲ್ಲಿ ಅಥವಾ ಕಾಲಾತೀತವಾದ ನಿತ್ಯದಲ್ಲಿ ಅಖಂಡವಾಗಿ ಗ್ರಹಿಸಬಲ್ಲುದೊ ಅದಕ್ಕೆ ಮಾತ್ರ ಗೋಚರ–ಎಲ್ಲದರ ಕಾರಣ, ಎಲ್ಲದರ ಉದ್ದೇಶ ಮತ್ತು ಎಲ್ಲದರ ಪ್ರಯೋಜನ. ಖಂಡದೃಷ್ಟಿಯಲ್ಲಿ ಮಾತ್ರ ಚರಿಸಲು ಸಮರ್ಥವಾಗಿರುವ ಅಯೋಗ ಬುದ್ಧಿಗೆ ನಿಷ್ಕಾರಣವೆಂದೂ ನಿರುದ್ದೇಶಕವೆಂದೂ ನಿಷ್‌ಪ್ರಯೋಜನವೆಂದೂ ತೋರುವ ಘಟನೆಗಳೂ ವ್ಯಾಪಾರಗಳೂ ಪೂರ್ಣದೃಷ್ಟಿಯ ದಿವ್ಯವಿಜ್ಞಾನಕ್ಕೆ ಸಕಾರಣವಾಗಿ ಸೋದ್ದೇಶವಾಗಿ ಸಪ್ರಯೋಜನವಾಗಿ ತೋರುತ್ತವೆ. ಸರ್ವ ಶಕ್ತಿಗೆ

ಕೈಲಾಗದೆ ಅದರ ಸರ್ವಜ್ಞಾನಕ್ಕೆ ದುಃಸ್ಥಿತಿ ಒದಗಿಲ್ಲ. ಏಕೆಂದರೆ ಅದಕ್ಕೆ ತಿಳಿಯದುದಿಲ್ಲ; ಅದಕ್ಕೆ ಅಸಾಧ್ಯವಾದುದಿಲ್ಲ; ಅದು ಇಲ್ಲದುದಿಲ್ಲ; ಅದು ಅಲ್ಲದುದೂ ಇಲ್ಲ. ಅದು ಎಲ್ಲ.

ತಪೋನಂದನ, ಕಾವ್ಯ ವಿಮರ್ಶೆಯಲ್ಲಿ ಪೂರ್ಣ ದೃಷ್ಟಿ, ಪುಟ ೧೨೦-೧

೧೨೯

ಪಾಂಡಿತ್ಯವೆನಗಿಲ್ಲ. ಮುಚ್ಚುಮರೆ ಏತಕ್ಕೆ ?
ಪಂಡಿತರ ಕಂಡರೆನಗಾಗುವುದೆ ಇಲ್ಲ.

ಕಥನಕವನಗಳು, ಕರಿಸಿದ್ಧ, ಪುಟ ೨

೧೩೦

ಇಂದಿನ ಮಹಾತಪಸ್ಸಿನ ಚಿತೆಯ
ರಕ್ತಿಮ ವಿಭೂತಿಯೊಳೆ ಮುಂದಿನ ನವೋದಯದ
ಧವಳಿಮ ಪಿನಾಕಧರನೈತಹನು : ಮತ್ತೊಮ್ಮೆ
ಭಾರತಾಂಬೆಯು ಜಗದ ಬೆಳಕಾಗುವಳು; ಹೆಮ್ಮೆ
ಗೌರವಗಳಿಂದ ಜನಗಣದ ಕಟು ನಿರ್ದಯದ
ಲೋಭಬುದ್ಧಿಯ ಹೀನ ಕುಟಿಲತೆಯನುರೆ ನೀಗಿ
ಮೆರೆವಳು ತಪಸ್ವಿನಿಯೆ ಚಕ್ರವರ್ತಿನಿಯಾಗಿ !

ಕೃತ್ತಿಕೆ, ಭಾರತ ತಪಸ್ವಿನಿ, ಪುಟ ೭೮

೧೩೧

ಕಾವ್ಯದ ವಸ್ತು ಸತ್ಯವಾಗಿರಲಿ, ಅಲ್ಲದಿರಲಿ; ಅದು ಸಹೃದಯನಿಗೆ ಅಲಕ್ಷಿತವಾದದ್ದು. ಅವನಿಗೆ ಭಾವಸಂವಾದವೆ ಮುಖ್ಯ ಲಕ್ಷ್ಯ. ಆ ಭಾವ ಸಂವಾದ ಯಾವ ರಸಸ್ಥಿತಿಯನ್ನು ಅಥವಾ ಭಾವಭಿತ್ತಿಜ ಚಿತ್ತಭಂಗಿಯನ್ನು ಸಹೃದಯನಲ್ಲಿ ಉಂಟು ಮಾಡಬೇಕೆಂದು ಉದ್ದೇಶಿತವಾಗಿದೆಯೊ ಅದನ್ನು ನೆರವೇರಿಸಿದರೆ ಮುಗಿಯಿತು ಕಾವ್ಯದ ಕಾರ್ಯ.

ರಸೋ ವೈ ಸಃ, ಕವಿನಿರ್ಮಿತಿಯಲ್ಲಿ ನಿಯತಿಕೃತ ನಿಯತಿಕೃತ ನಿಯಮರಾಹಿತ್ಯ, ಪುಟ ೫೫

೧೩೨

ಬಹುಭಾಷೆ, ಬಹುಮತ, ಅನೇಕಾಚಾರ ಮೊದಲಾದ ಅಸಂಖ್ಯ ಭೇದಗಳಿಂದ ಕೂಡಿರುವ ನಮ್ಮ ರಾಷ್ಟ್ರಜೀವನ, ತನ್ನ ಏಕತ್ವವನ್ನು ರಕ್ಷಿಸಿಕೊಂಡು ಹೋಗಬೇಕಾದರೆ ವಿಜ್ಞಾನ ದೃಷ್ಟಿಯ ಮತ್ತು ವಿಚಾರ ಬುದ್ಧಿಯ ಆಧಾರದ ಮೇಲೆ ನಿಲ್ಲುವ

ಮನುಜ ಮತಕ್ಕೂ ಮತ್ತು ವಿಶ್ವ ಪಥಕ್ಕೂ ನಮ್ಮ ಜನವನ್ನು ತಿರುಗಿಸುವುದು ಅತ್ಯಂತ ಆವಶ್ಯಕ.

ಮನುಜಮತ ವಿಶ್ವಪಥ, ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ, ಪುಟ ೨೩

೧೩೩

ನೇಗಿಲ ಗೆರೆಯೇ ತೋರುವುದೆನಗೆ
ಮುಕ್ತಿಯ ಹಾದಿಯನು;
ವೇದಗಳೆಲ್ಲಾ ನೆಗೆನೆಗೆದರಿಯದ
ಅಂತ್ಯದ ಆದಿಯನು.

ಜಲಗಾರ, ಪಾತ್ರ ರೈತ, ಪುಟ ೮

೧೩೪

ನಿನ್ನ ಮೈ ದೇಗುಲದಿ
ನಾನು ಪೂಜಾರಿ;
ನೀನೆ ದೇವತೆ ಅಲ್ಲಿ
ನನ್ನೆದೆಯ ನಾರಿ.
ಪ್ರೇಮದಾಲಾಪನೆಯೆ
ಋಷಿ ಮಂತ್ರದೋಜೆ;
ಪ್ರಣಯ ಪ್ರಸಾದದಿಂ
ತಣಿಯುವುದೆ ಪೂಜೆ!

ಪ್ರೇಮ ಕಾಶ್ಮೀರ, ರಸ ಪೂಜೆ, ಪುಟ ೬೬

೧೩೫

ವಿದ್ಯಾರ್ಥಿ ಜೀವನವೂ ಒಂದು ತಪಸ್ಸೆ ವಿದ್ಯಾರ್ಥಿ ತಪಸ್ವಿ. ಅನ್ನಾಹಾರವನ್ನು ಬಿಟ್ಟಿರುವುದೇ, ಒಂಟಿಕಾಲಿನಲ್ಲಿ ತಲೆ ಕೆಳಗಾಗಿ ನಿಲ್ಲುವುದೇ ತಪಸ್ಸಲ್ಲ. ಶಕ್ತಿಯ ಆರ್ಜನೆಯೇ ತಪಸ್ಸು. ಅದರ ರೂಪುಗಳು ಅನೇಕ; ಅದನ್ನು ಆರ್ಜಿಸುವ ವಿಧಾನಗಳು ಹಲವಾರು. ನಾವು ಯಾವ ಕೆಲಸ ಉದ್ಯೋಗಗಳನ್ನು ಕೈಕೊಂಡಿದ್ದರೂ ಅವುಗಳನ್ನು ಶ್ರದ್ಧೆಯಿಂದ, ಭಕ್ತಿಯಿಂದ, ನಿಷ್ಠೆಯಿಂದ, ಗುರಿ ಸಾರುವ ತನಕ ಸಾಧಿಸುವುದೇ ತಪಸ್ಸು. ಎಂಥ ಉಗ್ರ ಪರಿಸ್ಥಿತಿಯಲ್ಲಿಯೂ ಮನಸ್ಸನ್ನು ಛಿದ್ರಗೊಳಿಸದೆ ಏಕಾಗ್ರತೆಯಿಂದ ಮುಂದುವರಿಯುವುದೇ ತಪಸ್ಸು. ಈ ತಪಸ್ಸೆ ಇಲ್ಲದ ಜೀವನ ಜೀವನವಲ್ಲ. ದೇಶಕ್ಕೆ, ಹೆತ್ತಿರುವ ತಂದೆತಾಯಿಯರಿಗೆ, ಸಮಾಜಕ್ಕೆ ದ್ರೋಹವೆಸಗಬಾರದು. ಈ ದ್ರೋಹ ಒಮ್ಮೊಮ್ಮೆ ಪ್ರಜ್ಞಾಗೋಚರವಾಗುವುದಿಲ್ಲ.

ಜೀವನದ ಸರ್ವಮುಖಗಳನ್ನೂ ಈಗಲೆ ಯೋಚಿಸಿ, ನಮ್ಮ ಕರ್ತವ್ಯವನ್ನು ನಿರ್ಣಯಿಸಿಕೊಂಡು ಸಾಧಿಸದಿದ್ದರೆ, ಬದುಕಿ ಪ್ರಯೋಜನವಿಲ್ಲದಂತಾಗುತ್ತದೆ. ಮಿಂಚಿ ಹೋದ ಕಾಲ ಮತ್ತೆ ಕೂಡಿ ಬರುವುದಿಲ್ಲ.

ಷಷ್ಠಿನಮನ, ವಿದ್ಯಾರ್ಥಿ ಜೀವನವೂ ಒಂದು ತಪಸ್ಯೆ, ಪುಟ ೧೯೭

೧೩೬

ನೀನ್ ಬಂದ ಈ ಜಗಂ ನೀನ್ ಬಿಡುವ ಆ ಜಗಕೆ
ಕೀಳಾಗುವಂತೆ ಬಾಳ್

ಜೇನಾಗುವಾ, ಹೆಸರಿಟ್ಟು ಹರಸುವೆನು ಚೈತ್ರನಂ, ಪುಟ ೭೨

೧೩೭

ಒಲ್ಮೆ ಜಾಣ್ಮೆಯಲ್ಲ. ಒಲ್ಮೆಯ ಭಾವಾವೇಶದ ನೀತಿಯೇ ಬೇರೆ; ಜಾಣ್ಮೆಯ ಲೆಕ್ಕಾಚಾರದ ರೀತಿಯೇ ಬೇರೆ. ಬಹುಶಃ ತುತ್ತತುದಿಯಲ್ಲಿ ಜಾಣ್ಮೆ ಒಲ್ಮೆಗೆ ಅಡಿಯಾಳಾಗಿ ಕಲಿಯಬೇಕಾಗುತ್ತದೆಂದೂ ತೋರುತ್ತದೆ.

ಕಾನೂರು ಹೆಗ್ಗಡಿತಿ, ಪುಟ ೨೭೧

೧೩೮

ಈ ದೇಶದಲ್ಲಿ ಹಿಂದೂ ಧರ್ಮದ ಪುರೋಹಿತಶಾಹಿ ಎಲ್ಲೋ ಶೇ. ೫ ರಷ್ಟು ಇದ್ದಾರೆ. ಅವರಿಗೆಲ್ಲಾ ಬೆಂಬಲ ಎಲ್ಲಿಂದ ಬರುತ್ತದೆ? ಬಾಕಿಯವ ರಿಂದ ಬರುತ್ತದೆ. ನೀವು ಈ ಬಾಕಿಯವರ ಮನಸ್ಸನ್ನು ತಿದ್ದಿ ತಿರುಗಿಸಿದರೆ ಅದು ತನ್ನಷ್ಟಕ್ಕೆ ತಾನೆ ಒಣಗಿ ಹೋಗುತ್ತದೆ. ಈ ಶೂದ್ರ ಶಕ್ತಿಯ ಬೆಂಬಲ ತಪ್ಪಿ ಆ ಪುರೋಹಿತಶಾಹಿ ತನಗೆ ತಾನೆ ಬಾಡಿ ಬೀಳುತ್ತದೆ. ಅವರು ಅಡ್ಡ ಪಲ್ಲಕ್ಕಿಯ ಮೇಲೆ ಕುಳಿತುಕೊಂಡು ಬರಬಹುದು. ಆದರೆ ನಾಲ್ಕು ಐದು ಜನ ಅವರವರೇ ಬರಬೇಕು ಎದುರುಗೊಳ್ಳಲು. ಅದು ಬಿಟ್ಟು ನೀವು ದೊಡ್ಡದಾಗಿ ಲಕ್ಷಾಂತರ ಜನ ಹೋಗಿ ಕಾಲಿಗೆ ಬೀಳುವುದು ಮಾಡುವುದು ಇದನ್ನೆಲ್ಲ ಮಾಡಿದರೆ ಶುದ್ಧ ಅವಿವೇಕವಾಗುತ್ತದೆ. ಅವರು ಅವರೇ ಮಾಡಿಕೊಳ್ಳಲಿ. ಬೇಡ ಅಂತ ಯಾರು ಹೇಳುತ್ತಾರೆ? ನಿನ್ನ ಮನೆಯಲ್ಲಿ ನೀನು ಚಿನ್ನದ ಕುರ್ಚಿ ಹಾಕಿ ಕುಳಿತುಕೊ, ಬೇಡ ಅಂತ ಯಾರು ಹೇಳಿದವರು? ಆದರೆ ನಾನು ಬಂದು ನಿನ್ನ ಸಿಂಹಾಸನಕ್ಕೆ ಅಡ್ಡಬೀಳುವುದು ಸುಳ್ಳು!

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ, ಪುಟ ೬೧

೧೩೯

ಹಿಂದೆಯೆ, ನಾವು ಕಾವ್ಯ ಬರೆಯುತ್ತಾ ಇರುವಾಗಲೆ, ಅಂದರೆ ಸ್ವಾತಂತ್ರ್ಯ ಪೂರ್ವದಲ್ಲಿ, ೧೯೩೫ರಲ್ಲಿ, ನಮಗೂ ಕೂಡ ಈ 'ಮಣ್ಣಿನ ವಾಸನೆ'ಯ ಕರೆ ಇತ್ತು.

'ಮಣ್ಣಿನ ವಾಸನೆ' ಎಂಬುದು ಹೊಸದಾಗಿ ಏನೂ ಸೃಷ್ಟಿಯಾದುದಲ್ಲ. ಪಟ್ಟಣಗಳಲ್ಲಿ ಹುಟ್ಟಿ ಬೆಳೆದ ಉಚ್ಚಜಾತಿಯ ಮಡಿಯ ಮಕ್ಕಳಿಗೆ 'ಮಣ್ಣಿನ ವಾಸನೆ' ಎಲ್ಲಿಂದ ಬರಬೇಕು? ಹೇಗೆ ಗೊತ್ತಾಗಬೇಕು? ಅವರಿಗೆ ವಿಶೇಷವಾಗಿ ನಶ್ಯದ ವಾಸನೆ, ಸಿಗರೇಟ್ ವಾಸನೆ, ಸಾರಾಯಿ ವಾಸನೆ, ಹೆಣ್ಣಿನ ವಾಸನೆಗಳು ಮೂಗಿಗೆ ಬೀಳುವುದು! ಅವರಿಗೆ ನಿಜವಾಗಿಯೂ ಅವೇ ಪ್ರಮುಖ! ಅವರಿಗೆ ನಿಜವಾದ ಮಣ್ಣಿನ ವಾಸನೆ ಬಂದೂ ಇಲ್ಲ, ಗೊತ್ತೂ ಇಲ್ಲ. ಈ 'ಮಣ್ಣಿನ ವಾಸನೆ' ಮತ್ತು ಈ ಕ್ರಾಂತಿಯ ಭಾವನೆ ಇವರೆಲ್ಲ ಕಣ್ಣು ಬಿಡುವುದಕ್ಕೆ ಮುನ್ನವೆ ಸಾಹಿತ್ಯರಂಗ ಪ್ರವೇಶಮಾಡಿ ಸಿಂಹಾಸನವೇರಿದ್ದುವು. 'ಮರಳಿ ಮಣ್ಣಿಗೆ' ಎಂಬ ಹೆಸರು ಹೊತ್ತು ಒಂದು ಕಾದಂಬರಿಯೆ ಹುಟ್ಟಿತ್ತು!

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯಬಯಸುವರಿಗೆ ಒಂದು ಎಚ್ಚರಿಕೆ, ಪುಟ ೨೪-೫

೧೪೦

ಚೆಲುವೆಲ್ಲಿದ್ದರೆ ಗೆಲುವಲ್ಲಿ;
ಒಲವೆಲ್ಲಿದ್ದರೆ ಬಲವಲ್ಲಿ.

ಚಂದ್ರಮಂಚಕೆ ಬಾ ಚಕೋರಿ, ಪ್ರೇಮ ಮಂತ್ರ, ಪುಟ ೬೧

೧೪೧

ಸಾಹಿತ್ಯ ಪ್ರಚಾರವು ಆವೇಶದಾವಾಗ್ನಿಯ ಪ್ರಸಾರವೆಂದು ತಿಳಿಯಿರಿ. ವಾಙ್ಮಂತ್ರ ಶಕ್ತಿಗೆ ಶಿಲೆ ಸಜೀವವಾಗುತ್ತದೆ; ನುಡಿಕಲೆಯ ಹೊಳೆಯಲ್ಲಿ ಮಿಂದ ಹೊಲೆ ಹೊಸಮಡಿಯಾಗುತ್ತದೆ.

ಸಾಹಿತ್ಯ ಪ್ರಚಾರ, ದೇಶದೇವಿಯ ಪೂಜೆಗೆ ಬನ್ನಿ, ಪು ೭೧

೧೪೨

ಕನಸೂ ಎಚ್ಚರೂ ಬೇರೆ ಬೇರೆ ಭೂಮಿಕೆಗಳು. ಒಂದಿರುವಾಗ ಮತ್ತೊಂದಿರುವುದಿಲ್ಲ. ಅವುಗಳಲ್ಲಿ ಯಾವೊಂದರಲ್ಲಿ ನಾವಿರುವಾಗಲಾಗಲಿ ನಮ್ಮ ಅನುಭವವು ಮತ್ತೊಂದರಿಂದ ಅಬಾಧಿತ, ಒಂದರ ಆಳಿಕೆ ಮತ್ತೊಂದಕ್ಕಿಲ್ಲ. ಅದರದರ ಶಾಸನ ಅದರದರ ನೆಲದಲ್ಲಿ ಮಾತ್ರ ಮಾನ್ಯ. ಇದು ಅದಕ್ಕೆ, ಅದು ಇದಕ್ಕೆ ಶೂನ್ಯ. ಆದ್ದರಿಂದಲೆ ಒಂದರ ಸತ್ಯಮಾನದಿಂದ ಮತ್ತೊಂದನ್ನು ಅಳೆಯಲಳವಲ್ಲ. ಜಾಗ್ರತ್ ಸತ್ತೆಯ ಒರೆಗಲ್ಲಿಗೆ ತಿಕ್ಕಿ ಸ್ವಪ್ನದ ಸೃಷ್ಟಿಯನ್ನು "ಮಿಥ್ಯೆ" ಎನ್ನುವುದು ಏಕಪಕ್ಷೀಯ ಇತ್ಯಾರ್ಥ. ಸ್ವಪ್ನ ಸತ್ತೆಯ ಪ್ರತಿಮೆಯ ಸತ್ಯತೆ ಇರುವುದು ಅದರ ಹೊರಮೈಯಲ್ಲಲ್ಲ; ಅದಕ್ಕೆ ಕಾರಣವಾದ ಅನುಭವದಲ್ಲಿ. ಆ ಅನುಭವ ಕನಸಿಗೂ ಎಚ್ಚರಿಗೂ ಎರಡಕ್ಕೂ

ಸತ್ಯ. ಆ ಅನುಭವದ ದೃಷ್ಟಿಗೆ ಎಚ್ಚರು ಕನಸುಗಳೆರಡೂ ಸಮಪ್ರಮಾಣದ ಸತ್ಯಗಳು.

ತಪೋನಂದನ, ಪ್ರತಿಮಾ ಮತ್ತು ಪ್ರಕೃತಿ, ಪುಟ ೩೦

೧೪೩

ಬ್ರಹ್ಮವು ಜನಿಸಿತು ನಿನ್ನಿಂದ !
ಬ್ರಹ್ಮಕೆ ನೀನೇ ಆನಂದ !
ಆದಿಯ ಕಾಣದ ಪುರುಷನು ನೀನು
ಅಂತವನರಿಯದ ಆತ್ಮನು ನೀನು.

ಮರಿವಿಜ್ಞಾನಿ, ಅಮ್ಮನ ಮೂರ್ತಿ, ಪುಟ ೨೪

೧೪೪

ಮಹಾಪುರುಷರ ಜನ್ಮಚರಿತ್ರೆ ಕಾಲದಲ್ಲಿ ಕೊನೆಗೊಂಡರೂ ಅವರ ಜೀವನ ಯಾತ್ರೆ ಕಾಲಕ್ಕಿಂತಲೂ ಚಿರಂಜೀವಿಯಾದುದು. ಅವರ ಮಾತುಕತೆಗಳು, ಅವರ ವಚನೋಪದೇಶಗಳು, ಅದರ ಜೀವನ ಉಪಾಖ್ಯಾನಗಳು, ಎಲ್ಲಕ್ಕಿಂತಲೂ ಅತಿಶಯ ವಾಗಿ ಅದರ ಚೈತನ್ಯ ಮತ್ತು ಆತ್ಮಶಕ್ತಿಗಳು ಜಗಜ್ಜೀವನದ ನಾಡಿಗಳನ್ನು ಪ್ರವೇಶಿಸಿ, ಅದರ ರಕ್ತನಾಳಗಳಲ್ಲಿ ಮೊರೆದು, ಅದರ ಒಂದೊಂದು ಧಮನಿಯಲ್ಲಿಯೂ ಪ್ರತಿಧ್ವನಿಗೈದು, ರಕ್ತದಲ್ಲಿ ರಕ್ತವಾಗಿ, ಮಾಂಸದಲ್ಲಿ ಮಾಂಸವಾಗಿ, ಅಸ್ಥಿಯಲ್ಲಿ ಅಸ್ಥಿಯಾಗಿ, ಜೀವನದ ಶ್ರೇಯೋಗಮನಕ್ಕೊಂದು ಶಾಶ್ವತಪ್ರೇರಕ ಶಕ್ತಿಯಾಗಿ, ಕಷ್ಟ ಸಂಕಟಗಳಲ್ಲೊಂದು ವಜ್ರಕವಚವಾಗಿ, ನಿರಾಶೆಯ ತಿಮಿರದಲ್ಲೊಂದು ಆಶಾಕಿರಣ ವಾಗಿ ಅಧೈರ್ಯದ ಕಾಲದಲ್ಲೊಂದು ಪಾಂಚಜನ್ಯವಾಗಿ ಪರಿಣಮಿಸಿ ಚಿರಂತನ ವಾಗಿರುತ್ತವೆ. ಆದ್ದರಿಂದ ಮಹಾಪುರುಷನಿಗೆ ಮರಣ ವಿಲ್ಲ. ಆತನು ಚಿರಂಜೀವಿ. ಕರ್ಮಮಯ ಜಗತ್ತಿನಲ್ಲಿ ಆತನ ಚೈತನ್ಯ ನಿರ್ಝರಿಣಿ ಚಿರತರಂಗಿಣಿ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨೨೫

೧೪೫

ನೀನೇಕೆ ಮೌನವಾಗಿರುವೆ; ನೀನೂ ನನ್ನಂತೆ
ಎಲ್ಲವನು ಮರೆತು ಬಿಟ್ಟಿಹೆಯೇನು ?

ಕಿಂಕಿಣಿ, ಜನ್ಮಾಂತರ, ಪುಟ ೧೬

೧೪೬

ಕಡೆಯ ಪುರೋಹಿತನ ಕರುಳು
ಕಡೆಯ ದೊರೆಯ ಕೊರಳಿಗುರುಳು

ಬಿಗಿದ ಹೊರತು ಬರಿಯ ನೆರಳು
ಸ್ವಾತಂತ್ರ್ಯದ ಸ್ವರ್ಗವು !

ಕದರಡಕೆ, ಕ್ರಾಂತಿಮಂತ್ರ ಪುಟ ೮೧

೧೪೭

ಎನ್ನಹಂಕೃತಿ ಬೆಳೆಗೆ ಹೆರರ ಮೆಚ್ಚುಗೆ ಬೇಲಿ,
ನಿಂದೆಯೆಂಬುದೆ ಪಹರೆ.

ಕೃತ್ತಿಕೆ, ರಸವೊಂದೆ ಕವಿಗೆ ನೀತಿ, ಪುಟ ೧೬

೧೪೮

ಕರುಣೆ ಮೂಕಪ್ರಾಣಿಯ ಬಲಿದಾನಕ್ಕಿಂತಲೂ ಹೆಚ್ಚಿನ ಪೂಜೆ.

ಕಾನೂರು ಹೆಗ್ಗಡಿತಿ, ಪಾತ್ರ ಹೂವಯ್ಯ ಪುಟ ೨೬೩

೧೪೯

ನನ್ನ ಕೃತಿ ಕಲೆಯಲ್ಲ;
ನಾನು ಕವಿಯಲ್ಲ.
ಕಲೆಗಾಗಿ ಕಲೆಯೆಂಬ
ಹೊಳ್ಳು ನೆಲೆಯಿಲ್ಲ.

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ನಾನು ಕವಿಯಲ್ಲ, ಪುಟ ೮೪

೧೫೦

ಪ್ರಕೃತಿಮಾತೆಯ ಮೇಲೆ ನಮಗಿರುವ ಪ್ರೇಮವು ಆಯಾ ಅವಸ್ಥೆಗಳಲ್ಲಿ ವ್ಯತ್ಯಾಸ ಹೊಂದುವುದು. ಅಂದರೆ ಪ್ರೀತಿಯೇನೋ ಇದ್ದೇ ಇರುವುದು. ಆದರೆ ಪ್ರೀತಿಯ ಲಕ್ಷಣವು ಬದಲಾಯಿಸುವುದು. ಅನುಭವವು ಹೆಚ್ಚಿದಂತೆಲ್ಲಾ ನಮ್ಮ ಪ್ರೇಮವು ಭಕ್ತಿರೂಪವನ್ನು ಹೊಂದುತ್ತಾ ಬರುವುದು.

ಇತ್ಯಾದಿ, ಪ್ರಕೃತಿ ಸೌಂದರ್ಯ, ಪುಟ ೪

೧೫೧

ಪೆಣ್ತನದ
ಕಲ್ತನಕ್ಕೆಲ್ಲೆ ಮೇಣೆಣೆಯುಂಟೆ ?

ಶ್ರೀ ರಾಮಾಯಣ ದರ್ಶನಂ, ಓ ಲಕ್ಷ್ಮಣಾ, ಪಾತ್ರ ಲಕ್ಷ್ಮಣ, ಪುಟ ೨೫೫

೧೫೨

ನರ್ತನದಿಂ ನವಶಕ್ತಿಯು ಹೊಮ್ಮಿ
ಸೃಷ್ಟಿ ಸ್ಥಿತಿ ಲಯ ಚಕ್ರಂ ಚಿಮ್ಮಿ
ಜಡ ಚೇತನ ರೂಪುಗಳಾಗೊಡೆದು
ತೋರ್ಪುದು ಸುಖದುಃಖಗಳನು ಹಡೆದು !

ಪಾಂಚಜನ್ಯ, ಭೈರವನಾರಿ, ಪುಟ ೧೯

೧೫೩

ಉತ್ತಮವಾದುದನ್ನು ಬೆರಳಿಟ್ಟು ತೋರುವುದು ಹೇಗೆ ವಿಮರ್ಶೆಯೋ ಹಾಗೆಯೇ ಅನುತ್ತಮವಾದುದನ್ನು ಮುಚ್ಚುವುದೂ ತೆರನಾದ ವಿಮರ್ಶೆಯೆ.

ಕಾವ್ಯವಿಹಾರ, ಹರಿಶ್ಚಂದ್ರಕಾವ್ಯ, ಪುಟ ೭೯

೧೫೪

ಖಿನ್ನಮುಖದಲಿ ಮರಳಿ ಸಗ್ಗಕೆ ಮರಳಲೆಂದು
ನಡೆಯುತಿರೆ, ದಾರಿಯೆಡೆ ಒಂದರಣ್ಯದ ಮಧ್ಯೆ,
ಹಳ್ಳಿಮನೆಯೊಂದರಿಂ ತನ್ನೊಂದು ಕಬ್ಬಮಂ
ವಾಚಿಸುವ ಸಂಗೀತ ಕೇಳಿಸಿತು. ಕೌತುಕಕೆ
ಕವಿ ನಡೆದನಲ್ಲಿಗೆ. ಅಲ್ಲಿ, ಯಃಕಶ್ಚಿತಂ
ತಾನೊಬ್ಬನಾ ಕವನವನ್ನೋದುತೆದೆಯುಕ್ಕಿ,
ಭಾವರಸದಾನಂದದಾವೇಶದಿಂ ಪೊಂಗಿ
ಕಂಬನಿಯ ಕರೆಯುತಿರೆ ಆತನಿಗೆ ಕಬ್ಬಿಗಂ
ಕೈಮುಗಿದನೊಡನೆ: ಯಾರೊಬ್ಬರಲ್ಲಿರಲಿಲ್ಲ;
ತನ್ನ ಕಲ್ಪಿಯ ತೋರ್ಕೆಗವನೋದುತಿರಲಿಲ್ಲ;
ಕವಿಯ ಪ್ರತಿಭೆಗೆ ಭಾವದಾರತಿಯನಿರದೆತ್ತಿ
ತನ್ಮಯಾನಂದ ಪೂಜೆಯೊಳಿರ್ದನಾ ಹೃದಯಿ !
ಅವನ ಕಣ್ಣಿನ ಹನಿ ಹೃದಯದಲಿ ಕಾಣಿಸಿತು
ಕಬ್ಬಿಗಗೆ ತನ್ನ ಕೀರ್ತಿಯ ನಿತ್ಯಮಂದಿರಂ !
ಆ ರಸಸಲಿಲ ಗಂಗೆಯಲಿ ಮಿಂದು, ಶುಚಿಯಾಗಿ,
ನಗೆಮುಗುಳ ಮಾಲೆಯಿಂದಿರದೆ ಸಿಂಗರಗೊಂಡು,
ಧನ್ಯ ನಾನೆಂದೆನುತ ಸಗ್ಗಕಡರಿದನು ಕವಿ,
ತನ್ನಾ ಯಶಃಸ್ಥಿರತೆಯುತ್ಸಾಹದಲಿ ತೇಲಿ !

ಕೋಗಿಲೆ ಮತ್ತ ಸೋವಿಯಟ್ ರಷ್ಯಾ, ಕವಿಯ ಕೀರ್ತಿ, ಪುಟ ೮೨–೩

೧೫೫

(ರಾಜ್ಯಕ್ಕೆ 'ಕರ್ನಾಟಕ' ಎಂದು) ಹೆಸರೇನೋ ಬಂತು. ಆದರೆ ಇನ್ನೂ ಸಾಧಿತವಾಗಬೇಕಾದ ಒಂದೆರಡು ಬಹಳ ಮುಖ್ಯವಾದ ಕಾರ್ಯಗಳಿವೆ:

೧. ರಾಜ್ಯಮಟ್ಟದಲ್ಲಿ ಅಧಿಕೃತ ಭಾಷೆಯಾಗಿ ಕನ್ನಡ ಜಾರಿಗೆ ಬರಬೇಕು.

೨. ಕರ್ಣಾಟಕದ ಹೊರಗೆ ಉಳಿದಿರುವ ನಿಜವಾದ ಕನ್ನಡ ಪ್ರದೇಶಗಳು ಮಾತ್ರ ರಾಜ್ಯದಲ್ಲಿ ವಿಲೀನಗೊಂಡು, ಅಲ್ಲಿನ ಜನಗಳ ಹಾರೈಕೆ ಹಂಬಲಗಳು ಸಫಲವಾಗಬೇಕು.

೩. ವಿದ್ಯಾಭ್ಯಾಸದ ಎಲ್ಲ ಸ್ತರಗಳಲ್ಲಿಯೂ ಕನ್ನಡ ಪ್ರಥಮ ಭಾಷೆಯೂ ಶಿಕ್ಷಣ ಮಾಧ್ಯಮವೂ ಆಗಬೇಕು.

ಜನತೆಯ ಆಶೋತ್ತರಗಳ ಆಧ್ಯಾತ್ಮಿಕ ಪ್ರತಿನಿಧಿಯಾದ ಕವಿ ಲೌಕಿಕ ಪ್ರತಿನಿಧಿಗಳಾದ ಶಾಸಕರಿಗೆ ಹಾಗೂ ಸರ್ಕಾರಕ್ಕೆ ಸಲ್ಲಿಸುವ ಒತ್ತಾಯ ಪೂರ್ವಕವಾದ ಬೇಡಿಕೆಯಿದು. ಜನ ಬಯಸುವ ಈ ಕೆಲಸಗಳು ಎಂದಾದರೂ ಆಗಿಯೇ ತೀರುತ್ತವೆ; ಕಾರಣಮಾತ್ರರಾಗಿ ನೀವೇ ಆ ಪುಣ್ಯಕ್ಕೆ ಭಾಜನರಾಗಿ ಎಂದು ನಾನು ಸಂಬಂಧಪಟ್ಟವರಿಗೆಲ್ಲ ಸೂಚಿಸುತ್ತೇನೆ.

ವಿಚಾರ ಕ್ರಾಂತಿಗೆ ಆಹ್ವಾನ, ಕರ್ಣಾಟಕ ಇಟ್ಟ ಹೆಸರು ಕೊಟ್ಟ ಮಂತ್ರ, ಪುಟ ೯೦

೧೫೬

ಲೀಲೆಯೆಂಬುವುದೆಲ್ಲ
ಮೂಡುವುದು ಮುಳುಗುವುದರಲ್ಲಿಹುದು, ಅದಕೇಕೆ
ಮರುಗುವುದು ?

ಶ್ಮಶಾನ ಕುರುಕ್ಷೇತ್ರಂ, ಪಾತ್ರ ಕಲಿ, ಪುಟ ೬

೧೫೭

ಎನಗಾಗಿ ಸ್ಥಿತಿಲಯಗಳೆನಗಾಗಿ ಸೃಷ್ಟಿ
ಎನಗಾಗಿ ಸುಖದುಃಖಮಾ ಬ್ರಹ್ಮದೃಷ್ಟಿ
ಎನಗಾಗಿ ನಾಂ ರಚಿಪ ಬ್ರಹ್ಮವಾನಂದ
ಎನಗಾಗಿ, ಎನಗಾಗಿ ಎನ್ನ ಆನಂದ !

ಕೊಳಲು, ಎನಗಾಗಿ ಎನ್ನ ಆನಂದ, ಪುಟ ೬೭

೧೫೮

ದಮ್ಮಯ್ಯ, ಕಂದಯ್ಯ,
ಬೇಡುವೆನು ನಿನ್ನ;

ಕನ್ನಡಮ್ಮನ ಹರಕೆ,
ಮರೆಯದಿರು, ಚಿನ್ನಾ!
ಮರೆತೆಯಾದರೆ ಅಯ್ಯೊ,
ಮರೆತಂತೆ ನನ್ನ;
ಹೋರಾಡು ಕನ್ನಡಕೆ
ಕಲಿಯಾಗಿ, ರನ್ನಾ!

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಕನ್ನಡಮ್ಮನ ಹರಕೆ, ಪುಟ ೪೮

೧೫೯

ಮೊನ್ನೆ ಕಣ್ ಬಿಟ್ಟುದೀ
ಪಸುಳೆ ವಿದ್ಯಾನಿಲಯವಾ ಮುತ್ತ ನುಡಿತಾಯ್ಗೆ
ಮೊಲೆವಾಲನಿತ್ತೊಲಿದು ಸಲಹಿದಪುದೆಂಬಾಸೆ
ನಗೆಗೀಡು, ನಾಣ್ಗೇಡು, ಬೆಳ್ತನಂ!

ಇಕ್ಷುಗಂಗೋತ್ರಿ, ಅಳುಕದೀ ಕನ್ನಡಂ! ಪುಟ ೫೩

೧೬೦

ಈಶ್ವರ ಮನುಷ್ಯನ ಆಮುಷ್ಮಿಕವಾದ ಗುರಿ; ಸಂಸ್ಕೃತಿ ಐಹಿಕವಾದ ಗುರಿ. ಇವೆರಡಕ್ಕೂ ವಿರುದ್ಧಭಾವವಿಲ್ಲ. ಒಂದಕ್ಕೊಂದು ಸೋಪಾನವಾಗಿದೆ, ಪೂರಕವಾಗಿದೆ. ಒಂದರಲ್ಲಿ ಇನ್ನೊಂದಿದೆ. ಎರಡೂ ಒಂದೇ ಎಂದರೂ ತಪ್ಪಾಗದು. ಸುಸಂಸ್ಕೃತಿಗೆ ಸದ್ವಿದ್ಯೆಯೇ ಸಾಧನ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೨೬

೧೬೧

ನಿರಂತರ ಪ್ರಯತ್ನವೇ ಜೀವನ; ತುದಿಮುಟ್ಟಿದೆವೆಂದು ನಿಲ್ಲುವುದೇ ಮೃತ್ಯು. ಸಲ ಸಲವೂ ತನ್ನನ್ನು ತಾನು ಮೀರಲೆಳಸುವುದೇ ಸಾಧನೆ. ಅನಂತವಾದ ಆತ್ಮವನ್ನು ಅನಂತವಾಗಿಯೇ ಸಾಧಿಸಬೇಕು. ಸಿದ್ಧಿ ಎಂದರೆ ಕಾಲದಲ್ಲಿ ಕೊನೆ ಮುಟ್ಟುವುದೆಂದಲ್ಲ; ಕಾಲವನ್ನೇ ನುಂಗಿ ಮೀರುವುದು.

ಸ್ವಾಮಿ ವಿವೇಕಾನಂದ ಪುಟ, ೨೫೦

೧೬೨

ನೆಲ ನೀರು ಗಾಳಿಗಳ ಗುರುಕೃಪೆಯಿದ್ದರೆ ತಾನೆ, ಬೀಜದಲ್ಲಿ ಗುಪ್ತವಾಗಿರುವ ವ್ಯಕ್ತಿತ್ವ ತನ್ನ ಸುಪ್ತಿಯಿಂದ ಎಚ್ಚತ್ತು ಬೆಳೆಯಲು ಸಾಧ್ಯವಾಗುತ್ತದೆ!

ನಮ್ಮೆಲ್ಲರಲ್ಲಿಯೂ ಗುಪ್ತವಾಗಿರುವ ಆ ಸುಪ್ತಶಕ್ತಿ ಎಚ್ಚರಗೊಳ್ಳಬೇಕಾದರೆ ಅಂತಹ ಗುರುಕೃಪಾ ರೂಪನಾದ ದೈವೇಚ್ಛೆಯ ಬಲ ಅತ್ಯಂತ ಆವಶ್ಯಕ. ಯಾವ ರೂಪ ದಲ್ಲಿಯೆ ಒದಗಲಿ, ಯಾವ ರೀತಿಯಲ್ಲಾದರೂ ಕೆಲಸಮಾಡಲಿ, ಅಂತಹ ಗುರುಕೃಪೆಯ ಆಶೀರ್ವಾದದ ಬಲಕ್ಕಾಗಿ ನಾವು ಸಾಧನೆ ಮಾಡದಿದ್ದರೆ ನಮ್ಮ ಅಂತಃಶಕ್ತಿ ಸಮರ್ಪಕವಾಗಿ ಸಂಪೂರ್ಣವಾಗಿ ಶ್ರೀಯುಕ್ತವಾಗಿ ಮೈದೋರಲಾರದು. ಒಂದು ವೇಳೆ ಅವಿನಯಶೀಲವಾದ ಅಹಂಪ್ರಯತ್ನದಿಂದ ಸ್ವಪ್ರತಿಷ್ಠೆಯ ಉದ್ದೇಶಕ್ಕಾಗಿ ಹೊರಹೊಮ್ಮಿದರೂ ಬಂಡೆಯ ಮೇಲಿರುವ ಅಲ್ಪಮೃತ್ತಿಕೆಯಲ್ಲಿ ಮೊಳೆಯವ ಗಿಡದಂತೆ ಹ್ರಸ್ವವೂ ಕುಬ್ಜವೂ ವಿಕೃತವೂ ಆಗಿ ವ್ಯರ್ಥವಾಗುವುದರಲ್ಲಿ ಸಂದೇಹವಿಲ್ಲ.

ವಿಭೂತಿಪೂಜೆ, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪುಟ ೪೫

೧೬೩

ಸಾಮಾನ್ಯವಾಗಿ ಭಾವವನ್ನು ಲೋಕದಲ್ಲಿಯೂ ರಸವನ್ನು ಕಾವ್ಯಕಲಾದಿ ರಂಗದಲ್ಲಿಯೂ ಅನುಭವಿಸುತ್ತೇವೆ. ಭಾವಕ್ಕೆ ಲೌಕಿಕಕ್ರಿಯಾಪೇಕ್ಷೆ ಇರುವುದ ರಿಂದಲೂ ಸ್ವಾರ್ಥ ಮತ್ತು ಅಹಂಕಾರಗಳಿಂದ ಕಲುಷಿತವಾಗಿರುವುದರಿಂದಲೂ ಅದರ ಸ್ಥಾನ ಕೆಳಮಟ್ಟದ್ದು; ಸಂಗದೂರವಾಗಿ ಸಾಕ್ಷೀಪ್ರಜ್ಞಾಧೀನವಾಗಿ, ಶಮತ್ವವನ್ನು ಪಡೆದು, ರಜೋಗುಣದಿಂದ ವಿಮುಕ್ತವಾಗಿ, ಸತ್ವದಿಂದ ಕೂಡಿ, ಆಸ್ವಾದ್ಯವಾಗು ವುದರಿಂದ ರಸದ ಸ್ಥಾನ ಮೇಲುಮಟ್ಟದ್ದು.

ರಸೋ ವೈ ಸಃ, ಭೂಮಾನುಭೂತಿ, ಪುಟ ೯೧

೧೬೪

'ದರ್ಶನ' ಎಂದರೆ ನಿಯಮಬದ್ಧವಾದ ಅಥವಾ ತರ್ಕಬದ್ಧವಾದ ಆಲೋಚನೆಗಳ ಸಮುದಾಯವಲ್ಲ. ಭಾವ, ಕಲ್ಪನೆ ಮತ್ತು ಆಲೋಚನೆಗಳ ವಿದ್ಯುದಾಲಿಂಗನದಿಂದ ಸಂಭವಿಸುವ ಪ್ರತಿಭಾಜ್ಯೋತಿ ಅದರ ಲಕ್ಷಣ. ಅಂತಹ ದರ್ಶನ ಸಂಪಾದನೆ ಕವಿಗೆ ತಪಸ್ಸಿನಿಂದಲೂ ಧ್ಯಾನದಿಂದಲೂ ಅವಲೋಕನ ದಿಂದಲೂ ಮಾತ್ರವೇ ಸಾಧ್ಯವಾಗುತ್ತದೆ. ಕಲಾಸುಂದರಿ ಬಹಿರಂಗದಲ್ಲಿ ತೇಜಸ್ವಿನಿ; ಅಂತರಂಗದಲ್ಲಿ ತಪಸ್ವಿನಿ. ಲಘುಜೀವನದಿಂದ ಕಲಾಸುಂದರಿ ಸಾಕ್ಷಾತ್ಕಾರವಾಗಳು. ಅನೀತಿ, ಕಳಂಕ, ಅನುದಾರತೆಗಳಿಂದ ತಾತ್ಕಾಲಿಕ ಸುಖದಾಯಕಗಳಾದ ಪದ್ಯಗಳು ಹುಟ್ಟಬಲ್ಲವೆ ಹೊರತು ಸರ್ವಕಾಲ ದೇಶ ಸಮ್ಮತವಾದ ಆತ್ಮೋದ್ಧಾರಕವಾದ ಆನಂದ ದಾಯಕವಾದ ಕವನಗಳು ಲಭಿಸುವುದಿಲ್ಲ. ಆದ್ದರಿಂದ ಕವಿ ತನ್ನ ಜೀವನವನ್ನು ಸರ್ವ ವಿಧದಲ್ಲಿಯೂ ಪರಿಷ್ಕರಿಸಿಕೊಳ್ಳುವುದು ಅತ್ಯಾವಶ್ಯಕ. ಭಾವ, ಕಲ್ಪನೆ, ಆಲೋಚನೆ ಎಲ್ಲದರಲ್ಲಿಯೂ ಆತನು ಸಮದೂರನಾಗಿ ಬಹುದೂರ ಮುಂದುವರಿದು ಪ್ರತಿಭಾಶಾಲಿಯಾಗಿ ರಸಋಷಿಯಾಗಬೇಕು. 'ದರ್ಶನ' ಸಂಪಾದನೆ ಮಾಡಬೇಕು.

ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೩೩

೧೬೫

ಅಮರಾತ್ಮದ ಅನಂತಯಾತ್ರೆಗೆ ಕೊನೆ ಎಲ್ಲಿ? ಯಾವುದು ಅನಂತವೋ ಅದರ ಅನಂತ ಸಾಹಸಗಳಿಗೆ ಅಂತ್ಯವೆಲ್ಲಿ? ಆದ್ದರಿಂದ ಅದು ಕಡೆಯದೂ ಅಲ್ಲ, ಕೊನೆಯದೂ ಅಲ್ಲ.

ಇತ್ಯಾದಿ, ದಿವಂಗತ 'ಶ್ರೀ' ಯವರು, ಪುಟ ೯೦

೧೬೬

ತಿಳಿಯದಿಹ ಮಂಕರಿಹ
ಈ ವಿಶ್ವದಲ್ಲಿ,
ಬರಿಯ ಬಯಲಿಗೆ ಕೈಯ
ಮುಗಿಯುವವರಲ್ಲಿ
ನಾವಿಬ್ಬರಹೆವ್ವೆಸೆ
ತಿಳಿದ ಕಪಟಿಗಳು:
ಗುಟ್ಟನಡಗಿಸಿ ನಡೆವ
ನೀನೊಬ್ಬ ಕಪಟಿ;
ಗುಟ್ಟ ತಿಳಿದುಸಿಕನಿಹ
ನಾನೊಬ್ಬ ಕಪಟಿ!

ಪಾಂಚಜನ್ಯ, ಜಡವಾದಿ, ಪುಟ ೨೮-೯

೧೬೭

ಅಂತೂ ಜಗನ್ನಿಯಂತ್ರಶಕ್ತಿ ಕಡಲ ರಾಣಿಯ ಮತ್ತು ಭಾರತಾಂಬೆಯ ಜೀವನಸೂತ್ರಗಳನ್ನು ಹೆಣೆದು ಬಿಟ್ಟಿತು. ಒಂದು ದೃಷ್ಟಿಯಿಂದ ಅದನ್ನು ನಮ್ಮ ದೌರ್ಬಲ್ಯದ ಸೂಚನೆಯೆಂದು ಭಾವಿಸಿ ಮರುಗಿದರೂ, ಮತ್ತೊಂದು ದೃಷ್ಟಿಯಿಂದ ಅದನ್ನು ನಮ್ಮ ಪುಣ್ಯಕ್ಕೂ ಮತ್ತು ಪುರೋಭಾಗ್ಯಕ್ಕೂ ಕಾರಣವಾದ ಮಂಗಲಘಟನೆ ಎಂದು ತಿಳಿದು ಹಿಗ್ಗಬೇಕಾಗುತ್ತದೆ. ಉಷ್ಣವಲಯದ ಬಿಸಿಲಿಗೆ ಬತ್ತಿ, ಹರಿಯದೆ ನಿಂತುಹೋಗಿ, ಪಾಚಿ ಹಬ್ಬಿ, ಹುಳುವಾಗಿ, ಕೊಳಕಾದ ಹೊಲೆಗೆರೆಯಂತಿದ್ದ ಭಾರತದ ಬಾಳಿಗೆ-ನವೀನವಾದ ಶೈತ್ಯವನ್ನೂ ಚೈತನ್ಯವನ್ನೂ ಕಾರ್ಯೋತ್ಸಾಹ ನೈಪುಣ್ಯಗಳನ್ನೂ ಮೂಢಮತ ವಿಧ್ವಂಸಕವಾದ ವೈಜ್ಞಾನಿಕಮತಿಯನ್ನೂ ಒಳ ಗೊಂಡ ಪಾಶ್ಚಾತ್ಯ ಜೀವನ ಪರ್ವತದ ನಿರ್ಝರಿಣಿಯ ಹೊಸನೀರು ಧುಮುಕಿ ದಂತಾಯಿತು!

ಸ್ವಾಮಿ ವಿವೇಕಾನಂದ, ಪುಟ ೩೪-೫

೧೬೮

ಹಳೆಮತದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ
ಕೊಚ್ಚಿ ಹೋಗಲಿ: ಬರಲಿ ವಿಜ್ಞಾನ ಬುದ್ಧಿ.
ವೇದಪ್ರಮಾಣತೆಯ ಮರುಮರೀಚಿಕೆಯಲ್ಲಿ
ನೀರರಸಿ ಕಡೆದಿರಲಿ ಸ್ವಾತಂತ್ರ್ಯ ಸಿದ್ಧಿ.
ತರುಣರಿರ, ಎದ್ದೇಳಿ ! ಎಚ್ಚರಗೊಳ್ಳಿ ! ಬಾಳಿ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ತರುಣರಿರ ಎದ್ದೇಳಿ, ಪುಟ ೨೬

೧೬೯

ನಮ್ಮ ಕನ್ನಡನಾಡಿಗೆ ದೇವರು ಸಹ್ಯಾದ್ರಿಯನ್ನು ದಯಪಾಲಿಸಿದ್ದಾನೆ. ತುಂಗಾ ಕಾವೇರಿಯರನ್ನು ದಯಪಾಲಿಸಿದ್ದಾನೆ. ಪಶ್ಚಿಮ ಸಮುದ್ರದ ಸಂಗಸಾನ್ನಿಧ್ಯಗಳನ್ನು ಕೃಪೆಮಾಡಿದ್ದಾನೆ. ಜೊತೆಗೆ, ಅವೆಲ್ಲಕ್ಕೂ ಹೆಗಲೆಣೆಯಾಗಿ ನಿಂತರೂ ನಮಗೆ ಒಡನಾಡಿಗಳಾಗಿರುವಂತೆ, ಪಂಪ ನಾರಣಪ್ಪರನ್ನೂ ಅನುಗ್ರಹಿಸಿದ್ದಾನೆ. ಅವರ ಬೆಲೆಯರಿತು ನಾಡಿನ ಬಾಳು ಅರಳಲಿ. ಆ ವಿಶ್ವಕವಿಗಳಿಬ್ಬರನ್ನೂ ನಮ್ಮವರೆಂದು ಹೇಳಿಕೊಳ್ಳುವ ನಮ್ಮ ಹೆಮ್ಮೆಯ ನೆತ್ತಿ ಮುಗಿಲಿಗೆ ತಾಗುತ್ತಿರಲಿ.

ವಿಭೂತಿ ಪೂಜೆ, ಕಲಿಯದವರಿಗೂ ಕಾಮಧೇನು, ಪುಟ ೧೮

೧೭೦

ಕರ್ನಾಟಕ, ಕನ್ನಡ ಇಷ್ಟೇ ಸಂಕುಚಿತದಲ್ಲಿ ನಿಮ್ಮ ಪ್ರಜ್ಞೆ ಇಟ್ಟುಕೊಳ್ಳುವುದು ಬೇಡ. ನಾನೂ ಕರ್ನಾಟಕಕ್ಕಾಗಿ ಕನ್ನಡಕ್ಕಾಗಿ ಕೆಲಸ ಮಾಡಿದ್ದೇನೆ. ಆದರೆ ನನ್ನ ಪ್ರಜ್ಞೆ ವಿಶ್ವಪ್ರಜ್ಞೆ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೭೯-೮೦

೧೭೧

ಜಗತ್ತಿನಲ್ಲಿ ತ್ಯಾಗಿಗಳನೇಕರು ಬಂದು ಸಂದಿದ್ದಾರೆ. ರಾಜ್ಯ ಪರಿತ್ಯಾಗ ಮಾಡಿದವರಿದ್ದಾರೆ; ಕಾಮಿನೀ ಕಾಂಚನ ತ್ಯಾಗಮಾಡಿದವರಿದ್ದಾರೆ; ಪತ್ನಿಪುತ್ರ ಬಂಧುಮಿತ್ರರನ್ನು ತ್ಯಾಗಮಾಡಿದವರಿದ್ದಾರೆ; ಐಹಿಕ ಭೋಗಗಳೆಲ್ಲವನ್ನೂ ತ್ಯಾಗ ಮಾಡಿದವರಿದ್ದಾರೆ; ಶರೀರ ಜೀವಗಳನ್ನೇ ತ್ಯಾಗಮಾಡಿದವರಿದ್ದಾರೆ. ಆದರೆ ತ್ಯಾಗ ವನ್ನೇ ತ್ಯಾಗಮಾಡಲು ಸಿದ್ಧರಾಗಿದ್ದವರು ಯಾರಿದ್ದಾರೆ? ನಿರಂತರ ಸಾಹಸದಿಂದ ಭಾವಸಾಧನೆಗಳಲ್ಲಿ ಸಿದ್ಧಿ ಹೊಂದಿ, ಸಂನ್ಯಾಸ ಗ್ರಹಣಮಾಡಿ, ವೇದಾಂತಸಾಧನೆ ಯಿಂದ ನಿರ್ವಿಕಲ್ಪಸಮಾಧಿಸ್ಥರಾಗಿ, ಬ್ರಹ್ಮ ಸಾಕ್ಷಾತ್ಕಾರ ಮಾಡಿದವರಾಗಿ, ಜಗತ್ತನೆಲ್ಲ ಮಿಥ್ಯೆಯೆಂದು ಸ್ವಾನುಭವದಿಂದ ಅರಿತವರಾಗಿ, ಕಾಮಿನೀ ಕಾಂಚನ ಮೋಹವನ್ನು

ಸಂಪೂರ್ಣವಾಗಿ ಜಯಿಸಿದವರಾಗಿ, ಉತ್ತ ಮೋತ್ತಮ ಆದರ್ಶಜೀವಿಗಳಾಗಿ ಬಹು ಕಠೋರ ತಪಸ್ಸಿನಿಂದ ಉಪಾರ್ಜಿಸಿದ ಮಹಾತ್ಯಾಗವನ್ನೇ ತ್ಯಾಗಮಾಡಲು ಸಿದ್ಧರಾಗಿದ್ದ ಶ್ರೀರಾಮಕೃಷ್ಣರಂತಹ ಜೀವಜ್ಯೋತಿಗಳು ಯಾರಿದ್ದಾರೆ? ಯಾರಿದ್ದಾರೆ! ಯಾರೂ ಇಲ್ಲ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೮೯-೯೦

೧೭೨

ನಮ್ಮ ಕಾವ್ಯ ಪುರಾಣಗಳನ್ನು ಜನತೆ ಇದುವರೆಗೆ ಒಂದು ಶ್ರದ್ಧೆಯಿಂದ, ಒಂದು ಭಕ್ತಿಯಿಂದ, ಒಂದು ಗೌರವದಿಂದ, ಒಂದು ಪ್ರೀತಿಯಿಂದ ಓದುತ್ತಾ ಆಸ್ವಾದಿಸುತ್ತಾ ಪೂಜಿಸುತ್ತಾ ಬಂದಿದೆ. ಆ ಪವಿತ್ರ ಕಥೆಗಳಲ್ಲಿ ಬರುವ ಕಥಾನಾಯಕಾದಿ ಪಾತ್ರಗಳ ವಿಚಾರದಲ್ಲಿಯೂ ಅವರು ನಡೆದ ನಡೆ, ನುಡಿದ ನುಡಿ, ಮಾಡಿದ ಕೆಲಸ, ಬೋಧಿಸಿದ ಉಪದೇಶ ಇತ್ಯಾದಿಗಳ ವಿಚಾರದಲ್ಲಿಯೂ ಸಂಪ್ರದಾಯ ಸಿದ್ಧವಾದ ಒಂದು ಸ್ವೀಕಾರ ಬುದ್ಧಿ ಇದುವರೆಗೂ ನಮ್ಮ ಜನಸಾಮಾನ್ಯರಲ್ಲಿ ಅಸ್ಖಲಿತವಾಗಿತ್ತು. ಆದರೆ ಈಗ ವೈಜ್ಞಾನಿಕವಾದ ಒಂದು ವಿಚಾರದೃಷ್ಟಿ ಉದ್ದೀಪನ ವಾಗುತ್ತಿದೆ. ಎಲ್ಲ ನಂಬುಗೆಗಳನ್ನೂ, ಅವು ಎಷ್ಟೇ ಪ್ರಾಚೀನವಾಗಿರಲಿ, ಎಷ್ಟೇ ಪೂಜ್ಯವಾಗಿರಲಿ, ವಿಚಾರನಖದಿಂದ ಕೆರೆದು ನೋಡುವ ಒಂದು ಸ್ವತಂತ್ರಮತಿ ಜನ ಸಾಮಾನ್ಯರಲ್ಲಿಯೂ ತನ್ನ ವೈಜ್ಞಾನಿಕ ಹಸ್ತಪ್ರಸಾರ ಮಾಡುತ್ತಿದೆ. ಆ ಕಥೆಗಳನ್ನೂ ಆ ಕಥೆಗಳಲ್ಲಿ ಬರುವ ದೈವೀಪಾತ್ರಗಳನ್ನು ಅಲ್ಲಿ ಸಂಭವಿಸುವ ಅದ್ಭುತ ಘಟನೆಗಳನ್ನೂ ನಂಬಲು ಆವಶ್ಯಕವಾದ ಒಂದು ಶಿಶುಸಹಜ ಮುಗ್ಧತೆ ಜನರಿಂದ ಮಾಯ ವಾಗುತ್ತಿದೆ. ಆ ಮೌಢ್ಯಭಂಗಿಯನ್ನು ನಾವು ಶ್ರದ್ಧೆ ಎಂದು ಕರೆದರೂ ದಿನದಿನವೂ ಬೆಳಗುತ್ತಿರುವ ವೈಜ್ಞಾನಿಕ ದೃಷ್ಟಿಯ ವಿಚಾರ ದೀಪ್ತಿಯ ಮುಂದೆ ಅದಕ್ಕೆ ಉಳಿಗತಿಯಿಲ್ಲವೆಂದೆ ತೋರುತ್ತದೆ. ವಿಜ್ಞಾನಬುದ್ಧಿಯ ಬಿಸಿಲಿನಲ್ಲಿ ಆ ಶ್ರದ್ಧೆ ಬತ್ತಿಹೋದಮೇಲೆ ಜನರು ಆ ಕಥೆಗಳನ್ನೂ ಆ ಪಾತ್ರಗಳನ್ನೂ ಆ ಘಟನೆಗಳನ್ನೂ ಕವಿಕಲ್ಪಿತ ಮಿಥ್ಯೆಗಳೆಂದೂ ಬರಿಯ ಕಲ್ಪನಾವಿಲಾಸದ ಒಂದು ಸೊಗಸಿಗಾಗಿ ಓದತಕ್ಕವೆಂದೂ ಅವುಗಳನ್ನೆಲ್ಲ ಈಸೋಫನ ಕತೆಗಳನ್ನೆಂತೊ ಅಂತೆ ಬಾಲಕರಿಗಾಗಿ ಮೀಸಲಿಡುತ್ತಾರೆ. ಹಾಗೇನಾದರೂ ಆದರೆ ಮಾನವ ಕುಲಕ್ಕೆ ಒಂದು ದೊಡ್ಡ ಅಪಘಾತ ಸಂಭವಿಸಿದಂತಾಗುತ್ತದೆ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೪೨-೩

೧೭೩

ನನ್ನ ಬದುಕಿನಲ್ಲಿ ನನಗೆ ಒದಗಿರುವ ಯಾವ ಪ್ರೇಯಸ್ಸಾಗಲಿ ಶ್ರೇಯ ಸ್ಸಾಗಲಿ ನನ್ನ ಪ್ರಯತ್ನದಿಂದ ಬಂದುದೆಂದು ನನಗೆ ಎಂದೂ ಭಾಸವಾಗಿಲ್ಲ. ಯಾವುದೋ ನನಗರಿ ಯದ ಮಹಾಕೃಪೆ ನನ್ನ ಅರ್ಹತೆಯನ್ನೂ ಅಭೀಪ್ಸೆಯನ್ನೂ ಗಮನಿಸದೆ,

ಕೆಲವೊಮ್ಮೆ ನನ್ನ ಅಹಂಕಾರದ ಇಷ್ಟಕ್ಕೆ ಇದಿರಾಗಿಯೆ, ನನ್ನನ್ನು ಮಂಗಳದ ಕಡೆಗೆ ಎಳೆದೊಯ್ದಿದೆ; ಮತ್ತು ಇಂದಿಗೂ ಎಳೆದೊಯ್ಯುತ್ತಿದೆ.

ಮನುಜಮತ ವಿಶ್ವಪಥ, ದೀಕ್ಷಾಯಾತ್ರೆ, ಪುಟ ೯೩-೪

೧೭೪

ಈಗ ಪ್ರಪಂಚದಲ್ಲಿರುವ ಬಹು ಸಂಖ್ಯೆಯ ವಿಶ್ವವಿದ್ಯಾನಿಲಯಗಳಲ್ಲಿ ಎಷ್ಟು ಮಂದಿ ತತ್ತ್ವಶಾಸ್ತ್ರಾಧ್ಯಾಪಕರೂ ಅಧ್ಯಾಯಿಗಳೂ ಇದ್ದಾರೆ! ಹಾಗೆಯೆ ವೇದೋಪ ನಿಷತ್ತುಗಳನ್ನೆಲ್ಲ ಬಾಯಿಪಾಟಮಾಡಿ, ಬೇಕಾದರೆ ಅವುಗಳನ್ನು ಹಿಂದು ಮುಂದಾಗಿ, ತಲೆಕೆಳಗಾಗಿ, 'ಉಲ್ಲಾಸೀದಾ' ಲಾಗ ಹಾಕಿಸಿ ಹೇಳುವ ಘನಪಾಠಿಗಳೆಷ್ಟಿದ್ದಾರೆ! ಹಾಗೆಯೆ ವ್ಯಾಖ್ಯಾನ ಟೀಕೆಗಳನ್ನೆಲ್ಲ ಚೆನ್ನಾಗಿ ಅಧ್ಯಯನಮಾಡಿ ಗಂಟೆ ಗಂಟೆಗಳ ಕಾಲ ಭಯಂಕರವಾಗಿ ತರ್ಕ ಮಾಡುವ ಪಂಡಿತೋತ್ತಮರೂ ಜಗದ್ಗುರುಗಳೂ ಎಷ್ಟಿದ್ದಾರೆ! ಅವರೆಲ್ಲರಿಗೂ ದರ್ಶನೋದಯವಾಗಿದೆಯೆ? ಅವರ ಜೀವನವನ್ನೂ ಅವರ ಸಂಕುಚಿತ ದೃಷ್ಟಿಯನ್ನೂ ಅವರ ಅವಿಶಾಲವಾದ ಮತ್ತು ಅನುದಾರವಾದ ಹೃದಯವನ್ನೂ ನೋಡಿದರೆ 'ಆಗಿದೆ' ಎಂದು ಹೇಳುವುದು ತಾವೆ ಹೇಗೆ?

ಇತ್ಯಾದಿ, ಉಪನಿಷತ್ತಿನ ಋಷಿಯ 'ದರ್ಶನ', ಪುಟ ೭೫-೬

೧೭೫

ಕವಿಗಳೆಲ್ಲ ಒಂದೆತೆರನಲ್ಲ. ಒಬ್ಬೊಬ್ಬ ಕವಿಯೂ ವಿಶಿಷ್ಟ ವ್ಯಕ್ತಿ. ಒಬ್ಬೊಬ್ಬನದೂ ಸಂಸ್ಕಾರ ಬೇರೆ, ಬದುಕು ಬೇರೆ, ಜೀವಿತೋದ್ದೇಶ ಬೇರೆ, ಸ್ವಭಾವ ಸ್ವಧರ್ಮಗಳೂ ಬೇರೆ ಬೇರೆ. ಆಶೆ, ರುಚಿ, ಅಭಿರುಚಿ, ವಿದ್ಯೆ, ಸಂಸ್ಕೃತಿ ಎಲ್ಲ ಬೇರೆ ಬೇರೆ. ಊರಿಂದೂರಿಗೆ ನಾಡಿಂದ ನಾಡಿಗೆ ದೇಶದಿಂದ ದೇಶಕ್ಕೆ ಈ ವ್ಯಕ್ತಿತ್ವದ ವ್ಯತ್ಯಾಸಗಳು ಹೆಚ್ಚುತ್ತಾ ಹೋಗುತ್ತವೆ.

ವಿಭೂತಿ ಪೂಜೆ, ಕವಿಯ ದೃಷ್ಟಿಯಲ್ಲಿ ಪ್ರಕೃತಿ, ಪುಟ ೨೪

೧೭೬

ತ್ಯಾಗದಲ್ಲಿ, ದೇಶಪ್ರೇಮದಲ್ಲಿ, ತತ್ತ್ವನಿಷ್ಠೆಯಲ್ಲಿ, ಪರಾನುಕಂಪೆಯಲ್ಲಿ ಕೆಚ್ಚಿನಲ್ಲಿ, ದೃಢತೆಯಲ್ಲಿ, ಮೇಧಾಶಕ್ತಿಯಲ್ಲಿ, ವಾಗ್ಮಿತೆಯಲ್ಲಿ, ಲೇಖನ ಪ್ರತಿಭೆಯಲ್ಲಿ, ಸಯನ್ಸ್‌ಯ ದೃಷ್ಟಿಯಲ್ಲಿ, ಅಕುಟಿಲಭಾವ ಮತ್ತು ಋಜುವರ್ತನೆಗಳಲ್ಲಿ ಶ್ರೀ ನೆಹರೂ ಅಸಾಧಾರಣ ವ್ಯಕ್ತಿಯಾಗಿದ್ದರು.

ಷಷ್ಟಿನಮನ, ಶ್ರೀ ನೆಹರೂ ವೈಜ್ಞಾನಿಕ ದೃಷ್ಟಿ ಮತ್ತು ವಿಚಾರಬುದ್ಧಿ, ಪುಟ ೨೭೧

೧೭೭

ಕೀರ್ತಿಗಿಂತಲೂ ನನಗೆ ಹೆಚ್ಚು ಪ್ರಿಯವಾದದ್ದು ಸತ್ಯ. ಸತ್ಯ ಹೇಳಿದರೆ ಕಲುಷಿತವಾಗುವ ಕೀರ್ತಿ ಭ್ರಷ್ಟಾಚಾರದ ವಸ್ತುವಾಗುತ್ತದೆ...ಕೀರ್ತಿ ಕಲುಷಿತವಾಗುವು ದಿರಲಿ, ಅಪಕೀರ್ತಿಯೆ ಬಂದರೂ ಸತ್ಯ ಹೇಳುವುದನ್ನು ಬಿಡುವುದಿಲ್ಲ.

ವಿಚಾರ ಕ್ರಾಂತಿಗೆ ಆಹ್ವಾನ, ಪ್ರಶ್ನೆಗಳಿಗೆ ಉತ್ತರಗಳು, ಪುಟ ೧೧೨

೧೭೮

ಶುದ್ಧಿ ಮೇಣ್
ಶ್ರದ್ಧೆಯಿರೆ ತುದಿಗೆ ತಪ್ಪದು ಸಿದ್ಧಿ ಸಾಧನೆಗೆ.
ತನ್ನಿಷ್ಟದೇವತೆಯ ಸೇವೆಯಂ ನೊಗವೊತ್ತ
ಪೆಗಲೊಳೆಯೆ ಸತ್ತರಾ ಸಾವುಮುತ್ತಯ ಗತಿಯೆ,
ನಾಸ್ತಿಕನಲ್ಲದಾತ್ಮನಿಷ್ಠಂಗೆ.

ಶ್ರೀ ರಾಮಾಯಣ ದರ್ಶನಂ, ಇರ್ದುದು ಮಹೇಂದ್ರಾಚಲಂ, ಪಾತ್ರ ಮೈಂದ, ಪುಟ ೩೪೯

೧೭೯

ನಾನೊಬ್ಬ ಸುಖಿಯಾದರೇನಾಯ್ತು ? ಲೋಕವೇ
ಬೊಬ್ಬಿರಿಯುತಿಹುದಲ್ಲ ಬೆಂದು ಬಡತನದಲ್ಲಿ.

ಮಹಾರಾತ್ರಿ, ಪಾತ್ರ ಸಿದ್ಧಾರ್ಥ, ಪುಟ ೭

೧೮೦

ಕವನಗಳೆ ಮಂತ್ರಗಳು ರಸಯೋಗಿ ಋಷಿಕವಿಗೆ;
ಕವನಗಳೆ ದೇವಾಲಯಂ. ಕವನಗಳೆ ಪಾತ್ರೆ
ಕುಸುಮಾನುಭವಗಳಿಗೆ; ತೀರ್ಥಗಳಮೃತಯಾತ್ರೆ
ಕವನ ಪಠನಂ. ಕವನಗಳೆ ವೇದಮನುಭವಿಗೆ !
ಕವನ ರಚನೆಯೆ ಪೂಜೆ; ಕವನ ಗಾನವೆ ಭಕ್ತಿ.
ಕವನ ಮಂತ್ರದಿ ಸೃಷ್ಟಿ, ಕವನ ಮಂತ್ರದಿ ಲಯಂ;
ದೇವ ದೇವ ಪ್ರಾಣಕಂಪನ ರಸಾಲಯಂ !
ಕವನಗಳೆ ಭುಕ್ತಿ ಮೇಣತ್ಯಂತ ಸುಖಮುಕ್ತಿ !
ಕವನ ಕಾನನ ಪಂಕ್ತಿ; ಕವನ ಪರ್ವತಧಾತ್ರಿ;
ಕವನ ನೀಲಾಂಭೋಧಿ: ಕವನ ನೀಲಾಂಬರಂ;
ಕವನ ರವಿ; ಕವನ ಶಶಿ; ಕವನ ತಾರಾರಾತ್ರಿ;
ಕವನ ಶಿವನುನ್ಮಾದ ತಾಂಡವಾಡಂಬರಂ !–

ಪಾಂಡಿತ್ಯದರ್ಥಫಣಿಗಿದು ಕಾವ್ಯಗರುಡಮಣಿ:
ಕವಿಗೊರ್ವನಿಗೆ ಸಾಧ್ಯ; ಕವಿಗೊರ್ವನಿಗೆ ವೇದ್ಯ!

ಕೃತ್ತಿಕೆ, ಕವನಗಳೆ ಮಂತ್ರಗಳು, ಪುಟ ೨೬

೧೮೧

ಸ್ಥಿರತೆಯದು ಸಾವಲ್ಲ, ಜೀವಿತ ಚರಮ ಲಕ್ಷ್ಯ!

ನವಿಲು, ಸಂಸ್ಕೃತ ಮಾತೆ, ಪುಟ ೮೩

೧೮೨

ಜನ ನೆರೆದು, ಸಭೆ ಸೇರಿ, ಕಯ್ಯ ಚಪ್ಪಳೆಯಿಕ್ಕಿ,
ಕೊರಳಿಗುರುಳಿಪ ಹಾರ ನನಗೆ ನಿಸ್ಸಾರ;
ತಳಿರ ಬೆರಳಿನ ಕಯ್ಯ ಕಂದನಾ ನಳಿದೋಳು
ಕೊರಳನಪ್ಪಿದರೆನಗೆ ಸಗ್ಗಕೆ ಸಾರ:
ಸಾಮಾನ್ಯತಾ ಸುಖವೆ ಶಾಂತಿ ಜೀವಾಧಾರ;
ಸಾಮಾನ್ಯತೆಯೆ ಜಗನ್ ಮಾನ್ಯತಾ ಸಂಸಾರ!

ಪ್ರೇಮಕಾಶ್ಮೀರ, ಸಂಸಾರ ಸಂಹಿತೆ, ಪುಟ ೪

೧೮೩

ಶ್ರೇಷ್ಠರಿಲ್ಲದಿರೆ,
ಏನಿರ್ದರೇನಂತೆ, ಮಸಣಮಾ ಪತ್ತನಂ
ತತ್ವ ವಿದ್ಯಾ ಕಲಾ ಸಂಗೀತ ಸಾಹಿತ್ಯ
ಸಕಲ ಸಂಸ್ಕೃತಿಗೆ, ಬಿತ್ತರದ ಬೀದಿಗಳೆರಡು
ಕೆಲದಿ ಮುಗಿಲಂ ಮುಟ್ಟಿ ಮೆರೆದೊಡೇಂ ಸ್ಪರ್ಧೆಯಾ
ಪ್ರಾಸಾದ ಪಂಕ್ತಿ? ರಂಜಿಸಿದೊಡೇಂ ರಜನಿಯಂ
ಪಗಲುಗೈದಾಗಸದ ಚುಕ್ಕಿಗಳನೇಳಿಸುತೆ
ಕಿಕ್ಕಿರಿದು ಕಣ್ಬೆರಗುಗೊಳಿಸಿ ಗೊಂಚಲ್ಗೊಂಡು
ಉರಿವ ವಿದ್ಯುದ್ದೀಪ ರಾಜಿ? ಬಣ್ಣದ ಬುಗ್ಗೆ
ಕಣ್ಗೆ ಕಾಮನ ಬಿಲ್ಗಳಂಗನೆಯರಾಟವೆನೆ
ಸಾಲ್ಗೊಂಡು ವಿವಿಧಗತಿಯಾ ಕಲಾಕೃತಿಯಿಂದೆ
ರಂಗುರಂಗಿನ ತೋಂಟರಂಗದಿ ಮನಂಗೊಳಿಸಿ
ಕುಣಿದೊಡೇಂ? ಪ್ರಾಸಛಂದಃಪೂರ್ಣಮಪ್ಪುದೇಂ

ಪುರುಷಾರ್ಥ ಶಾಶ್ವತದ ರಾಸಲೀಲಾ ಬೃಂದೆ ?
ಜನಮನೋಮಂದಿರದ ಸುಸ್ವಪ್ನಗೋಪುರದ
ಕಲಶಂ ನಭಶ್ಚುಂಬಿಯಾಗದಿರೆ, ಋಷಿಹೃದಯ
ಮಂಗಳಾರತಿ ಬಾಳಿನಂಧತೆಯನಳಿಸದಿರೆ,
ಕವಿಕೃತಿಯ ವರ್ಣಗಾನಂ ಮಹನ್‌ನಿತ್ಯತಾ
ಸ್ವರ್ಣಸುಂದರ ಇಂದ್ರಿಯಾತೀತ ನಂದನದಿ
ನವರಸಾಪ್ಸರಿಯರಂ ನರ್ತನಂಗೈಸದಿರೆ, ಪೇಳ್,
ಏನಿರ್ದುಮೇನ್ ಅನಾಗರಿಕತಾ ಶ್ರೀ

ಶ್ರೀ ರಾಮಾಯಣ ದರ್ಶನಂ, ಪಾದುಕಾ ಕಿರೀಟಿ, ಪುಟ ೧೮೬-೭

೧೮೪

ನೀವೇನು ಮಾಡುವಿರೊ ಅದೆ ನಿಮ್ಮ ಧರ್ಮ.
ಬೇರೆ ಧರ್ಮವದೆಲ್ಲಿ ?

ಬಿರುಗಾಳಿ, ಪಾತ್ರ ರುದ್ರನಾಯಕ, ಪುಟ ೪೪

೧೮೫

ವಾಚಕರ ಕಲ್ಪನೆ ಸದಾ ಎಚ್ಚತ್ತಿರಬೇಕು. ಅದು ನಿದ್ದೆ ಮಾಡುವುದಿರಲಿ, ತೂಕಡಿಸಿದರೂ ರಸಾಸ್ವಾದನೆಗೆ ಭಂಗ ಬರುತ್ತದೆ. ಸನ್ನಿವೇಶಗಳನ್ನು ಕಲ್ಪಿಸಿಕೊಳ್ಳು ವಾಗ, ದೃಶ್ಯಗಳನ್ನು ಚಿತ್ರಿಸಿಕೊಳ್ಳುವಾಗ, ವ್ಯಕ್ತಿಗಳನ್ನು ಪರಿಚಯ ಮಾಡಿಕೊಳ್ಳುವಾಗ, ಅವರ ಸಂಭಾಷಣೆಗಳನ್ನು ಅವರವರ ಬೇರೆ ಬೇರೆಯ ವಾಣಿಗಳೊಡನೆ ಆಲಿಸು ವಾಗ ವಾಚಕರು ಸಿನಿಮಾ ವಾಕ್ಚಿತ್ರವನ್ನು ತತ್ಪರತೆಯಿಂದ ನೋಡುತ್ತಿರುವ ಪ್ರೇಕ್ಷಕರಂತಾಗ ಬೇಕಾಗುತ್ತದೆ. ಹಾಗೆ ಮಾಡದಿದ್ದರೆ ಓದು ಸಾರ್ಥಕವಾಗುವುದಿಲ್ಲ.

ಕಾನೂರು ಹೆಗ್ಗಡಿತಿ, ಅರಿಕೆ, ಪುಟ iii

೧೮೬

ಚಿಂತೆಗೆ ಅತೀತವಾಗಿ, ದ್ವಂದ್ವ ಸಾಮ್ರಾಜ್ಯದ ಎಲ್ಲೆ ಮೀರಿ, ವಿಕೃತಿ ಪ್ರಕೃತಿ ಗಳಿಂದ ಕೂಡಿರುವ ಮಾಯೆಯನ್ನು ಹಿಂದುಳಿದು, ಸೃಷ್ಟಿ ಸ್ಥಿತಿ ಲಯ ಜಾಲವನ್ನು ಉತ್ತರಿಸಿ, ಸುಖದುಃಖ ಸದಸತ್ತು ಪಾಪಪುಣ್ಯ ಮೊದಲಾದ ಭಾವಗಳನ್ನು ಕೊಚ್ಚಿ ಕೆಡಹಿ, ನಿತ್ಯತತ್ತ್ವವಾದ ಸಚ್ಚಿದಾನಂದ ಬ್ರಹ್ಮವು ನಿರ್ವಿಕಲ್ಪಸಮಾಧಿಯಲ್ಲಿ ಸ್ವಯಂ ಜ್ಯೋತಿಯಿಂಗ ಪ್ರಜ್ವಲಿಸುತ್ತದೆ. ಜನನ ಜೀವನ ಮರಣಗಳು ಆ ಮಹಾಸತ್ತಿನಲ್ಲಿ ಮುಳುಗುತ್ತವೆ; ಜ್ಞಾನ ಜ್ಞೇಯ ಜ್ಞಾತೃಗಳು ಆ ಮಹಾ ಚಿತ್ತಿನಲ್ಲಿ ಲೀನವಾಗುತ್ತವೆ; ಪ್ರಿಯ ಪ್ರೇಮ ಪ್ರಿಯೆ ಎಲ್ಲವೂ ಆ ಮಹಾ ಆನಂದದಲ್ಲಿ ಐಕ್ಯವಾಗುತ್ತವೆ; ಕರ್ಮ

ಧರ್ಮ ಶ್ರದ್ಧೆ ಸಂಶಯ ಈ ಚಿತ್ತವೃತ್ತಿಗಳೆಲ್ಲ ಅಲ್ಲಿ ಲಯವಾಗುತ್ತವೆ. ಆ ಅನಿರ್ವಚನೀಯ ನಿರ್ವಿಕಲ್ಪ ಸಮಾಧಿಯಲ್ಲಿ ಶರೀರದ ವ್ಯಾಪಾರಗಳು ನಿಲ್ಲುತ್ತವೆ; ಮನಸ್ಸಿನ ತರಂಗಗಳು ಸ್ತಬ್ಧವಾಗುತ್ತವೆ; ಅಹಂಕಾರವು ಬ್ರಹ್ಮಾನಂದದಲ್ಲಿ ಲಯ ಹೊಂದುತ್ತದೆ. ಕಾಲ ದೇಶ ನಿಮಿತ್ತಗಳು ಅನಂತ ಶೂನ್ಯದಲ್ಲಿ ಅಡಗುತ್ತವೆ. ಆ ಅನಿರ್ವಚನೀಯದ ಸ್ತಬ್ಧತೆಯ ನಿಃಶಬ್ದತೆಯ ಸವಿಯನ್ನು ಬಲ್ಲವನ್ನೇ ಬಲ್ಲ!

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೭೫

೧೮೭

ಗುರಿಯು ನೀನೆಂದೆನಲು ನಾಚುವೆನು ಜನನಿ:
ಗುರಿಯು ನೀನೆನಲೆನ್ನ ಮರುಳನೆಂಬುವರು!
ತಿರೆಯ ಸಿರಿಸುತರೆದುರು ತಲೆವಾಗಿ ನಿಂತು
ಮನದಿ ನಿನ್ನನು ನೆನೆವೆ ನಮ್ರಭಾವದೊಳು!

ಕೊಳಲು, ಗುರಿ, ಪುಟ ೧೩

೧೮೮

ಬರಿ ವಾದದಿಂದೇನು?
ಮನಸಿರಲು ಮಾರ್ಗವಿದೆ!

ಪಕ್ಷಿಕಾಶಿ, ಪ್ರಕೃತಿ ಉಪಾಸನೆ, ಪುಟ ೨೪

೧೮೯

ಅವತಾರಪುರುಷರು ಪ್ರಾಕೃತರಂತೆ ಸಾಧನೆ ಮಾಡಿದರೂ ಅವರ ಬೆನ್ನಿನ ಮೇಲೆ ಬಹುಜನ್ಮ ಸಂಸ್ಕಾರಗಳ ಹೊರೆಯೂ ಆಕರ್ಷಣೆ ವಿಕರ್ಷಣೆಗಳ ತೊಂಡು ತೊಳಸೂ ಇಲ್ಲದಿರುವುದರಿಂದಲೂ ಜೀವನದ ಮಹೋದ್ದೇಶ ಅವರಲ್ಲಿ ಸರ್ವದಾ ಜಾಗ್ರತವಾಗಿರುವುದರಿಂದಲೂ ನಡೆಯಬೇಕಾಗಿರುವ ಹಾದಿಯ ಅರಿವು ಚೆನ್ನಾಗಿರುವುದರಿಂದಲೂ ಪ್ರಾಕೃತರು ಕಲ್ಪಾಂತರಗಳಲ್ಲಿ ಮಾಡಿ ಮುಗಿಸುವುದನ್ನು ಅವರು ಅಲ್ಪಾಂತರದಲ್ಲಿಯೇ ಸಾಧಿಸಿಬಿಡುತ್ತಾರೆ. ಅಲ್ಲದೆ ಅವರು ಇತರ ಋಷಿಗಳು ಮಹರ್ಷಿಗಳು ಯೋಗಿಗಳು ಸಿದ್ಧರಂತಲ್ಲದೆ ಅನೇಕ ಮಾನವರನ್ನು ಉದ್ಧಾರ ಮಾಡಲು ಸಮರ್ಥರಾಗುತ್ತಾರೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೪೧

೧೯೦

ನಿಮ್ಮ ಕನ್ಯೆಯರಿಗೆ ಸೇರು ಬಂಗಾರದ ಕೊರಳ ಹಾರಕ್ಕಿಂತಲೂ ಮುದ್ದಾದ ಕನ್ನಡದ ಅಕ್ಷರಮಾಲೆಯೇ ರಮಣೀಯತರವಾದ ಅಲಂಕಾರವೆಂದು ನಾನು

ಧೈರ್ಯವಾಗಿ ಹೇಳಬಲ್ಲೆ. ವಿದ್ಯೆಯ ಸೌಂದರ್ಯ ಸಜೀವ ಸೌಂದರ್ಯ; ಚಿನ್ನದ ಚೆಲುವು ಹೆಣದಂತೆ! ಬಣ್ಣ ಬಣ್ಣದ ಮಾರಂಚಿನ ಜರತಾರಿ ಸೀರೆಗಳು, ಸೇರು ಸೇರು ಚಿನ್ನ ಹೇರಿರುವ ನಯ ನಾಜೋಕುಗಳಿಲ್ಲದ ತೊಡಕಾದ ತೊಡವುಗಳು! ಇವುಗಳೆಲ್ಲಾ ಏಕೆ ? ಯಾವ ಮೋಹಕ್ಕೆ? ಯಾವ ಶ್ರೇಯಸ್ಸಿಗೆ ? ಯಾವ ದೇವರ ಪ್ರೀತಿಗೆ ? ಅವುಗಳನ್ನು ನಿತ್ಯವೂ ಉಟ್ಟು ತೊಡುತ್ತಾರೆಯೆ ? ವರ್ಷಕ್ಕೊಂದು ಸಾರಿ ಎಲ್ಲಿಗಾದರೂ ಮದುವೆ ಮನೆಗಳಿಗೆ ಹೋಗುವಾಗ ಕತ್ತಲೆ ಕೋಣೆಗಳಲ್ಲಿ ಬಚ್ಚಿಟ್ಟಿರುವ ಸಂದುಕಗಳಿಂದ ಹೊರಗೆ ತೆಗೆಯುತ್ತಾರೆ. ಗರ್ವ ಪೋಷಕವೇ ಹೊರತು ಉಟ್ಟುಕೊಂಡರೆ ಅದಾದರೂ ಸುಖವಾಗಿರುತ್ತದೆಯೆ ? ಮರ್ಮರನಾದ ಮಾಡುವ ದೆವ್ವ ದೆವ್ವ ಬಣ್ಣದ ಮಾರಂಚಿನ ನಸರಿಗೆ ಸೀರೆ ಲಲನೆಯರಿಗೆ ಸಹಜವಾದ ಕೋಮಲ ಚಲನ ಗಮನಗಳನ್ನು ರುದ್ಧಮಾಡಿ ಅವರಿಗೆ ತೊಂದರೆ ಕೊಡುವುದಲ್ಲದೆ ನೋಡುವವರಿಗೆ ಅವರನ್ನು ಮಾರ್ಕೆಟ್ಟಿನ ಸ್ಥೂಲ ವರ್ಣದ ಕುರುಚಿ ಸುಂದರವಾದ ಚಿತ್ರಗಳಂತೆ ಮಾಡಿ ಬಿಡುತ್ತದೆ. ನಮ್ಮ ಸಹೋದರಿಯರಿಗೆ ಇದನ್ನು ಚೆನ್ನಾಗಿ ತಿಳಿಸಬೇಕು. ಸೌಂದರ್ಯ ಈ ವಿಧವಾದ "ರಾಣಾರಂಪ"ದಿಂದ ಎಂದಿಗೂ ಹೆಚ್ಚಾಗುವುದಿಲ್ಲ. ಈ ವಿಚಾರದಲ್ಲಿಯೂ ಮಿತವೇ ವಿಹಿತವಾಗಿರುತ್ತದೆ. ಆಕಾಶ ಬಣ್ಣದ ಒಂದು ಖಾದಿ ಸೀರೆಯ ನಮ್ರ ಗಂಭೀರ ಸಂಯಮ ಪೂರ್ಣವಾದ ಸೌಂದರ್ಯ ಜರತಾರಿ ಸೀರೆಗಳ ಕೆಂಗೂಳು ಬಣ್ಣದ ರೌದ್ರದಿಂದ ಎಂದಿಗೂ ಸಾಧ್ಯವಲ್ಲ. ಅಗ್ಗದಿಂದಲೆ ಸೊಬಗಿನ ಸುಗ್ಗಿ ಸಾಧ್ಯವಾಗಿರುವಾಗ ಭಯಾನಕ ವರ್ಣ ಪ್ರದರ್ಶನದ ಹವ್ಯಾಸವೇಕೆ ?

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೨೭–೮

೧೯೧

ರಸಋಷಿಯಾದ ಕವಿ ಅರ್ವಾಚೀನದ ಶಿಖರೇಶ್ವರದಲ್ಲಿ ನಿಂತು, ತನ್ನೊಂದು ಕೈಯನ್ನು ಮಸಗುಗತ್ತಲೆ ಕವಿದ ಪ್ರಾಚೀನದ ಗೋರಿಯೊಳಗೆ ನೀಡಿ ಹುಡುಕುತ್ತಿರುತ್ತಾನೆ; ಮತ್ತೊಂದು ಕೈಯನ್ನು ಅನಂತತೆಯ ಗಗನ ನೀಲಿಮೆ ತುಂಬಿರುವ ಭವಿಷ್ಯತ್ತಿನ ಅವ್ಯಕ್ತಗರ್ಭದ ಕಡೆಗೆ ಚಾಚಿ ತಡವುತ್ತಿರುತ್ತಾನೆ.

ಅಂತಹ ಕವಿಯಿಂದ ಕಾವ್ಯ ರಚನೆಯೇ ಆಗಬೇಕೆಂದಿಲ್ಲ; ರಾಷ್ಟ್ರ ನಿರ್ಮಾಣವೂ ಆಗಬಹುದು. ಅವನಿಂದ ಮತಸ್ಥಾಪನೆಯಾಗಬಹುದು; ಅಥವಾ ಅತಿ ಗಹನವಾದ ವಿಜ್ಞಾನ ಸಂಶೋಧನೆಯಾಗಬಹುದು. ಅಂಥಾ ಕವಿ ಸಾಕ್ರೆಟೀಸ್ ಆಗುತ್ತಾನೆ; ತಪ್ಪಿದರೆ, ಬುದ್ಧದೇವನಾಗುತ್ತಾನೆ. ಅಶೋಕ ಚಕ್ರವರ್ತಿಯಾಗುತ್ತಾನೆ; ಅಥವಾ ಪಂಪನಾಗುತ್ತಾನೆ. ಅವನು ಐನ್‌ಸ್ಟೀನ್ ಬೇಕಾದರೂ ಆಗಬಹುದು; ಅಥವಾ ಏಸುಕ್ರಿಸ್ತನಾದರೂ ಆಗಬಹುದು. ಆ ಸೃಷ್ಟಿಶಕ್ತಿಯಿಂದಲೇ ತ್ಯಾಗರಾಜರಂತಹ

ಗಾನಯೋಗಿಗಳೂ ಮಹಾತ್ಮಾ ಗಾಂಧಿಯವರಂತಹ ಕರ್ಮ ಯೋಗಿಗಳೂ ಸಂಭವಿಸುತಾರೆ. ಆ ಪ್ರತಿಭೆಯ ಪ್ರಕಾಶನ ವಿಧಾನಕ್ಕೆ ಇತಿಮಿತಿಗಳಿಲ್ಲ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೪೬-೭

೧೯೨

ಸ್ವಾತಂತ್ರ್ಯೋದಯದ ಹೊಸ್ತಿಲಲ್ಲಿಯೆ, ಆ ಉದಯಕ್ಕೆ, ಮುಖ್ಯ ಕಾರಣವಾದ ಮಹಾಜ್ಯೋತಿ ನಮ್ಮ ಮಧ್ಯೆ ಇನ್ನೂ ಪ್ರಜ್ವಲಿಸುತ್ತಿದ್ದಾಗಲೆ, ಮತಾಂಧತೆಯ ಶೋಣಿತಹಸ್ತ ಭಾರತವನ್ನು ರುಧಿರಪ್ಲಾವಿತವನ್ನಾಗಿ ಮಾಡಿತು. ವಿವೇಕದ ಮತ್ತು ವಿಚಾರದ ಹನನಯಜ್ಞವೆ ನಡೆಯಲು ಮೊದಲಾದಾಗ 'ವಿಚಾರವಾದ' ಮತ್ತು 'ವೈಜ್ಞಾನಿಕದೃಷ್ಟಿ'ಗಳನ್ನು ಕೇಳುವರಾರು ?

ಅಂತೂ ಕೊನೆಗೆ ಮಹಾತ್ಮನ ರಕ್ತಗಂಗಾವಾರಿಯಿಂದ ಅವಿವೇಕದ ಆ ಯಜ್ಞಾಗ್ನಿ ನಂದಿ, ಭಾರತಿಗೆ ಶಾಂತಿಯ ಅವಭೃತ ಸ್ನಾನವಾಯಿತು. ಆದರೆ ಮತಾಂಧತೆ, ಮತಭ್ರಾಂತಿ, ಮತದ್ವೇಷ ಮತ್ತು ಮತಸ್ವಾರ್ಥತೆ ಇವು 'ವಿಚಾರವಾದ' ಮತ್ತು 'ವೈಜ್ಞಾನಿಕ ದೃಷ್ಟಿ'ಗಳಿಗೆ ಕೊಟ್ಟ ಪೆಟ್ಟಿನಿಂದ ಅವಕ್ಕೆ ಸೊಂಟಮುರಿ ದಂತಾಗಿ ಅವು ತೆವಳಿಕೊಂಡ ಮುನ್ನಡೆಯುವಂತಾಗಿದೆ. ಮೇರುದಂಡ ನೆಟ್ಟ ಗಾಗಿ ಅವು ಎಂದು ಎದ್ದು ನಿಂತು ನಡೆಯತೊಡಗುತ್ತವೆಯೊ ದೇವರೆ ಬಲ್ಲ !

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮೂರನೆಯ ಮುದ್ರಣಕ್ಕೆ ಮುನ್ನಡಿ, ಪುಟ v

೧೯೩

ಎಲ್ಲಿ ನೋಡಿದರೆಲ್ಲರೂ ದಾಸರೆಯೆ. ಶಿವಾ !
ಈಶರೊಬ್ಬರ ಕಾಣೆ.

ನವಿಲು, ಮರದ ನೆಳಲು, ಪುಟ ೧೬

೧೯೪

ಮಣ್ಣಿನಲಿ ಬಿದ್ದು ಹೊರಳಿ ಬದುಕುವುದಕಿಂತಲೂ
ಬಾನಿನಲಿ ತೇಲಿ ಹಾರಿ ಸಾಯುವುದೆಮೇಲು.

ಕಿಂಕಿಣಿ, ಬಾನೆಡೆಗೇರು ಓ ಆತ್ಮಪಕ್ಷಿ, ಪುಟ ೨೭

೧೯೫

ನನಗೆ ಚಿಕ್ಕಂದಿನಿಂದಲೂ ಪ್ರಕೃತಿ ಸೌಂದರ್ಯವೆಂದರೆ ಬಹಳ ಇಷ್ಟ ಅದಕ್ಕಾಗಿಯೆ ನಾನು ಯಾವ ಊರಿನಲ್ಲಿದ್ದರೂ ವ್ಯಾಯಾಮದ ನೆವದಿಂದ ಬಹುದೂರ ಸಂಚಾರ ಹೋಗುವುದು ವಾಡಿಕೆ.

ನನ್ನ ದೇವರು ಮತ್ತು ಇತರ ಕಥೆಗಳು, ಔದಾರ್ಯ, ಪಾತ್ರ ಕಥಾನಾಯಕ, ಪುಟ ೩೫

೧೯೬

ಕಾವ್ಯ ಕಲೆ ವಿಜ್ಞಾನತತ್ತ್ವಗಳು
ಭೋಗಗಳೆ ? ವ್ಯರ್ಥ ಮಿಥ್ಯೆಗಳೇನು ? ಅಲ್ಲಲ್ತು ; ಎಲ್ಲ
ಸೋಪಾನಶ್ರೇಣಿ !
ಬಂದಿರುವುವೆಲ್ಲ ಕದಿರುಗಳೊಂದೆ ರವಿಯಿಂದೆ ;
ವಂದ್ಯವೊಂದೊಂದು ಛವಿ ! ಎದೆಯ ಗವಿಗೊಮ್ಮೊಮ್ಮೊ
ಸುಂದರ ಮರೀಚಿಗಳಲೊಂದು ಬರೆ 'ದರ್ಶನ'ಕೆ ನಲಿಯುವುದು
ಕವಿಯ ವಾಣಿ !

ಅಗ್ನಿಹಂಸ, ಮುಕ್ತ ಮಹಾಪುರುಷನಿಗೆ, ಪುಟ ೫೬

೧೯೭

ಗಂಟೆಗಳ ನಾ ಹೊಡೆಯೆ, ಶಂಖವನು ನಾನೂದೆ,
ಮಂಗಳಾರತಿಯ ನಾ ಬೆಳಗಲರಿಯೆ ;
ನಿನ್ನ ಸಂಗವ ತೊರೆಯೆ, ನಿನ್ನನೆಂದೂ ಮರೆಯೆ,
ನಿನ್ನವನು ನಾನಲ್ಲವೇನೊ, ದೊರೆಯೆ !

ಕೊಳಲು, ನಿನ್ನವನು ನಾನಲ್ಲವೆ, ಪುಟ ೬೫

೧೯೮

ವಿನಯಮಿರದಿರಲದೆ ಕುಸಂಸ್ಕೃತಿ !

ಚಿತ್ರಾಂಗದಾ, ಮೊದಲನೆಯ ಪರ್ವಂ, ಪಾತ್ರ ಅರ್ಜುನ, ಪಂಕ್ತಿ ೩೪೪, ಪುಟ ೧೩

೧೯೯

ತಾನೊಲಿದಂಗೆ
ಪ್ರಾಣೇಶ್ವರಂಗಿಷ್ಟಮೂರ್ತಿಗಾದರ್ಶಕ್ಕೆ ಪೇಳ್
ಪ್ರಾಣಾರ್ಪಣಂ ಗೈವ ಸೊಗದಿಂ ಮಿಗಲ್ ಸೊಗಂ
ತಾನೊಳದೆ ? ಪೋ ! ಸಗ್ಗಕೇಂ ಕೋಡುಂಟೆ ಬೇರೆ ?

ಶ್ರೀ ರಾಮಾಯಣ ದರ್ಶನಂ, ಮಮತೆಯ ಸುಳಿ ಮಂಥರೆ, ಪುಟ ೬೬

೨೦೦

ತುಡಿಪುದಾತ್ಮವಾ
ದೆಸೆಗೆ, ಆ ಕರೆಯ ಕೂರ್ಮೆಯೆ ಇಲ್ಲಿ ನಮ್ಮ ಬಾಳಂ

ಕಡೆದು ತೆರೆತೆರೆಯೆಬ್ಬಿಸಿರ್ಪುದೆನೆ, ದೈವಮಂ
ಮೀರ್ವರಾರ್ ?

ಶ್ರೀ ರಾಮಾಯಣ ದರ್ಶನಂ, ಊರ್ಮಿಳಾ, ಪಾತ್ರ ರಾಮ, ಪುಟ ೯೩-೪

೨೦೧

ಕಡಲು, ಪೊಡವಿ, ಹಿರಿಯ ಬಾನು
ಗಳಿಗೆ ನಾನು ಕಿರಿಯನೇನು ?
ಸೊಗವ ಸವಿನ ಕವಿಯು ನಾನು
ನಿಂತು ನೋಡೆ ಸುತ್ತಲು
ಆ ದಿಗಂತದೊಳು ಅನಂತ
ಮಹಿಮೆ ತೋರ್ದುದೆತ್ತಲು !

ಕಲಾಸುಂದರಿ, ಕಡಲ ತಡಿ, ಪುಟ ೫೫

೨೦೨

ಇಂದಿನವರಾಗಲಿ ಹಿಂದಿನವರಾಗಲಿ ಧನವನ್ನು ಹೂಳಿದರೆ ಗಂಟು ಗಂಟೇ ! ಆದರೆ ಇಂದಿನವರ ಪದ್ಧತಿ ಹೂಳಿಡುವುದಲ್ಲ; ಹೂಳಿದ್ದನ್ನು ಕೀಳುವುದು. ಎಷ್ಟಾದರೂ ಭೂಗರ್ಭಶೋಧನೆಯ ಕಾಲವಷ್ಟೆ! ಅದರಲ್ಲಿಯೂ ಇಂದಿನವರಿಗೆ ಕೂಳಿಡುವುದಕ್ಕೇ ಧನವಿಲ್ಲ; ಹೂಳಿಡುವುದಕ್ಕೆ ಎಲ್ಲಿಂದ ತರಬೇಕು ? ಈಗ ಹಣವಿದ್ದವರು ಅದನ್ನು ನೆಲದಲ್ಲಿಡುವುದಿಲ್ಲ, ಕಡಲಾಚೆಗೆ ಕಳುಹಿಸುತ್ತಾರೆ !

ನನ್ನ ದೇವರು ಮತ್ತು ಇತರ ಕಥೆಗಳು, 'ಗಂಟು' ಅಥವಾ ಗುಪ್ತಧನ, ಪಾತ್ರ ಕಥಾನಾಯಕ, ಪುಟ ೪೬

೨೦೩

ನಾವೆಲ್ಲ ಪರಸ್ಪರೋಪಜೀವಿಗಳು !

ಕಿಂಕಿಣಿ, ನಿರ್ಭರತೆ, ಪುಟ ೩೩

೨೦೪

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು ?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು ?
ಎಂದೊ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು ?
ನಿನ್ನೆದೆಯ ದನಿಯೆ ಋಷಿ ! ಮನು ನಿನಗೆ ನೀನು !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಯಾವ ಕಾಲದ ಶಾಸ್ತ್ರವೇನು ಹೇಳಿದರೇನು, ಪುಟ ೨೪

೨೦೫

ಇಂದಿಗೆ ಸುಮಾರು ಮೂರುನಾಲ್ಕು ದಶಕಗಳ ಹಿಂದೆ ನನ್ನ ಬಾಲ್ಯೋತ್ತರ ತಾರುಣ್ಯ ತನ್ನ ಹೃದಯ ಶುಕ್ತಿಕೆಯನ್ನು ತೆರೆದು ಆಧ್ಯಾತ್ಮಿಕ ಪಿಪಾಸೆಯ ನಿವಾರಣಾರ್ಥವಾಗಿ ಬಾಯಿ ಬಾಯಿ ಬಿಡುತ್ತಿದಾಗ ಕನ್ನಡ ವಾಙ್ಮಯದಲ್ಲಿ ಅದನ್ನು

ತಣಿಸುವ ಸ್ವಾತಿಯ ತೀರ್ಥ ಯಾವುದೂ ಸಿದ್ಧವಾಗಿರಲಿಲ್ಲ. ಅಂತಹ ಪವಿತ್ರ ತೃಪ್ತಿಯ ಸಾಧನೆಗಾಗಿ ನಾನು ಇಂಗ್ಲಿಷ್ ಭಾಷೆಯನ್ನೆ ಆಶ್ರಯಿಸಬೇಕಾಗಿತ್ತು. ಹಳ್ಳಿಯಲ್ಲಿ ಲೋವರ್ ಸೆಕೆಂಡರಿ ಪಾಸುಮಾಡಿ, ಪಟ್ಟಣಕ್ಕೆ ಹೈಸ್ಕೂಲಿನ ಮೊದಲನೆಯ ತರಗತಿಗೆ ಬಂದಿದ್ದ ನಾನು, ನನ್ನ ಕುಂಟು ಕುರುಡು ಇಂಗ್ಲಿಷಿನ ಹೆಗಲನ್ನೇರಿ, ಪಬ್ಲಿಕ್ ಲೈಬ್ರರಿಯಲ್ಲಿ ಬೀರುವಿನಿಂದ ಬೀರುವಿಗೆ ಪ್ರವಸಿಸುತ್ತಿದ್ದಾಗ, ನಾನು ನೀಡಬಹುದಾದ ಗೌರವವನ್ನೆಲ್ಲ ಸೂರೆಗೊಳ್ಳುವಂತೆ, ಲಕ್ಷಣವಾಗಿ ಅಚ್ಚಾಗಿದ್ದ ಸ್ವಾಮಿ ವಿವೇಕಾ ನಂದರ ಭಾಷಣಗಳ ದೀರ್ಘವಾದ ಪುಸ್ತಕ ಪಂಕ್ತಿ ಕಣ್ಣಿಗೆ ಬಿತ್ತು. ನಾನು ಅದಕ್ಕೆ ಮರುಳಾದೆ, ಸೆರೆಯಾದೆ.

ಷಷ್ಟಿನಮನ, ಶ್ರೀ ರಾಮಕೃಷ್ಣ ಲೀಲಾಪ್ರಸಂಗ, ಪುಟ ೨೫೬

೨೦೬

ನಿಘಂಟುಗಳಲ್ಲಿ ನಿರ್ಜೀವವಾಗಿ ಕಲ್ಲಿನ ಗೊಂಬೆಗಳಂತೆ ಅಕಾರಾದಿಯ ಅನುಕೂಲ ಸೂತ್ರದ ಆಜ್ಞೆಗೆ ಅಧೀನವಾಗಿ ಕವಾಯಿತಿಗೆ ಒಳಗೊಂಡಂತಿರುವ ಶಬ್ದಶ್ರೇಣಿ ಕವಿ ಪ್ರತಿಭೆಯ ಭಾವವಿದ್ಯುತ್ತಿನ ಐಂದ್ರಜಾಲಕ್ಕೆ ಸಿಕ್ಕಿ ಜಾಗ್ರತವಾಗಿ ಚಿನ್ಮಯವಾಗುತ್ತವೆ. ಕಾವ್ಯೋಚಿತ ಸ್ಥಾನದಲ್ಲಿ ನಿಂತಾಗಲಂತೂ ಆ ಯಃಕಶ್ಚಿತವಾ ದಂತಿದ್ದ ಪದ ವಿಗ್ರಹಗಳಲ್ಲಿ ದೇವತಾ ಚೈತನ್ಯ ಸಂಚಾರವಾಗುತ್ತದೆ. ಆಗ ಅವು ಸರಸ್ವತಿಯ ಸಾಕ್ಷಾತ್ ಚರಣ ಚಿಹ್ನೆಗಳಾಗಿ ಪ್ರೋಜ್ವಲಿಸುತ್ತವೆ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೩೬

೨೦೭

ಇಂಗ್ಲಿಷ್ ಭಾಷೆ ಬಲಾತ್ಕಾರದ ಸ್ಥಾನದಿಂದ ಐಚ್ಛಿಕ ಸ್ಥಾನಕ್ಕೆ ನಿಯಂತ್ರಣ ಗೊಳ್ಳದಿದ್ದರೆ, ಇಂಗ್ಲಿಷ್ ಶಿಕ್ಷಣ ಮಾಧ್ಯಮ ತೊಲಗಿ ಪ್ರಾದೇಶಿಕ ಭಾಷೆಗೆ ಆ ಸ್ಥಾನ ಲಭಿಸದಿದ್ದರೆ, ನಮ್ಮ ದೇಶ ಹತ್ತೇ ವರ್ಷಗಳಲ್ಲಿ ಸಾಧಿಸಬೇಕಾದುದನ್ನು ಇನ್ನೊಂದು ನೂರು ವರ್ಷಗಳಲ್ಲಿಯೂ ಸಾಧಿಸಲಾರದೆ ನಿತ್ಯರೋಗಿಯಂತಿರ ಬೇಕಾಗುತ್ತದೆ. ಅಲ್ಲದೆ ಮತ್ತೂ ಒಂದನ್ನು ಕಂಡಂತೆ ಹೇಳುತ್ತೇನೆ ತಮಗೆ ; ನಮ್ಮ ಕಾರ್ಖಾನೆಗಳನ್ನೆಲ್ಲ ನಿಲ್ಲಿಸಿ, ಅಣೆಕಟ್ಟುಗಳನ್ನೆಲ್ಲ ತಡೆಹಿಡಿದು, ಪ್ರಯೋಗ ಶಾಲೆ ಸಂಶೋಧನಾಗಾರ ಗಳನ್ನೆಲ್ಲ ವಜಾಮಾಡಿ, ಹಲವು ಪಾಂಚವಾರ್ಷಿಕ ಯೋಜನೆಗಳ ಆ ಹಣವನ್ನೆಲ್ಲಾ ಇಂಗ್ಲಿಷ್ ಸ್ಟಾಂಡರ್ಡ್ ಅನ್ನು ಉತ್ತಮಗೊಳಿಸು ವುದಕ್ಕಾಗಿಯೆ ವೆಚ್ಚಮಾಡಿದರೂ, ಇನ್ನು ನೂರು ವರ್ಷಗಳ ಅನಂತರವೂ ನಮ್ಮ ಮಕ್ಕಳ ಇಂಗ್ಲಿಷಿನ ಮಟ್ಟ ಈಗಿರುವುದಕ್ಕಿಂತ ಮೇಲಕ್ಕೇರುವುದಿಲ್ಲ! ಅಲ್ಲದೆ, ಸಂಖ್ಯೆಯೂ ವಿಸ್ತಾರವೂ ಹೆಚ್ಚುತ್ತಿರುವುದನ್ನು ಗಮನಿಸಿದರೆ, ಈಗಿರುವ ಮಟ್ಟವೂ ಇಳಿದು ದುರ್ಗತಿಹೊಂದುವುದರಲ್ಲಿ ಸಂದೇಹವಿಲ್ಲ.

ಮನುಜಮತ ವಿಶ್ವಪಥ, ಬಲತ್ಕಾರದ ಇಂಗ್ಲಿಷ್ : ಪ್ರಚ್ಛನ್ನ ಭ್ರಷ್ಟಾಚಾರ, ಪುಟ ೧೧

೨೦೮

ಸೃಷ್ಟಿರಚನೆ ವಿಸ್ಮಯಕಾರಿಯಾದುದಾಗಿದೆ. ಎಷ್ಟೇ ಸ್ವಾತಂತ್ರ್ಯವಿದ್ದರೂ ಕ್ರಮಬದ್ಧವಾಗಿದೆ. ಸ್ವಾತಂತ್ರ್ಯಾನಂದಗಳ ಸಮ್ಮೇಳವೇ ಮೋಕ್ಷ. ಅಂದರೆ ನಮ್ಮ ಚಿತ್ತವು ಬ್ರಹ್ಮಚಿತ್ತದಲ್ಲಿ ಲೀನವಾಗುವುದೇ ಮುಕ್ತಿ. ಸೃಷ್ಟಿಯಲ್ಲಿ ಆ ವಿಧವಾದ ಮುಕ್ತಿಯಿರುವುದು.

ಇತ್ಯಾದಿ, ಪ್ರಕೃತಿಸೌಂದರ್ಯ, ಪುಟ ೧೨

೨೦೯

ಪದಗಳೆಂಬ ಮಣಿಗಳೆಲ್ಲ
ಭಾವವೆಂಬ ದಾರದಲ್ಲಿ
ತಮಗೆ ತಾವೆ ಕೋದುಕೊಂಡು
ಕಬ್ಬ ಮಾಲೆಯಾಗಿ ಮೆರೆಯೆ,
ತೊಡಿಸಿಯದನು, ಮೊಗುವ ನೋಡಿ
ಮುತ್ತನೊಂದ ಸೆಳೆದುಕೊಂಡು
ನಿನ್ನ ಕೊರಳ ತಬ್ಬಿ ತಬ್ಬಿ
ಮೈಯ ಮರೆವೆನು !

ಕೊಳಲು, ಕವಿತೆಗೆ, ಪುಟ ೯

೨೧೦

ಕಣ್ಣು
ಬರಿ ಇಂದ್ರಿಯವಲ್ಲೊ :
ಸಾಕ್ಷಾತ್ಕಾರದ ಅಪರೋಕ್ಷದ ಅನುಭೂತಿಯ ಒಂದಂಗ !

ಅನಿಕೇತನ, ಕಣ್ಣು, ಪುಟ ೪

೨೧೧

ನಿಯತಿಯ ವಜ್ರದೃಷ್ಟಿಯಲ್ಲಿ ವ್ರತಚ್ಯುತಿ ಶಿಕ್ಷಾರ್ಹ. ಶಿಕ್ಷೆಗೋಸ್ಕರ ಶಿಕ್ಷೆಯಲ್ಲ. ಅದರಲ್ಲಿ ಪ್ರತೀಕಾರ ಭಾವನೆಯಿಲ್ಲ. ಶುದ್ಧೀಕರಣ ಭಾವನೆಯಿದೆ.

ತಪೋನಂದನ, ಮಹಾಶ್ವೇತೆಯ ತಪಸ್ಸು, ಪುಟ ೧೯

೨೧೨

ಇಂಗ್ಲಿಷನ್ನು ಅದರ ಪ್ರಥಮ ಭಾಷಾಸ್ಥಾನದಿಂದ ಸದ್ಯಕ್ಕೆ ದ್ವಿತೀಯ ಸ್ಥಾನಕ್ಕೆ ಇಳಿಸಿ, ಕನ್ನಡವನ್ನ ಪ್ರಥಮ ಭಾಷಾಸ್ಥಾನಕ್ಕೆ ಏರಿಸಿ, ಪ್ರಥಮ ಭಾಷೆಯ ಮೂರು ಪ್ರಶ್ನೆ ಪತ್ರಿಕೆಗಳಲ್ಲಿ ಒಂದನ್ನು ಇಂಗ್ಲಿಷ್ ಸಾಹಿತ್ಯ ಎಂಬ ಹೆಸರಿನಲ್ಲಿ ಇಂಗ್ಲಿಷ್ ಸಾಹಿತ್ಯಕ್ಕೆ ಮೀಸಲಾಗಿರಿಸಿ, ಕನ್ನಡದಲ್ಲಿ ಪಾಠ ಹೇಳಿ, ಕನ್ನಡದಲ್ಲಿಯೆ ಉತ್ತರ ಬರೆಯುವಂತೆ ಮಾಡಿದರೆ, ನಮ್ಮ ಮಕ್ಕಳಿಗೆ ಇಂಗ್ಲಿಷ್ ಭಾಷೆಯ ಹೊರೆಯನ್ನು ತಪ್ಪಿಸುವುದರೆ

ಜೊತೆಗೆ, ಇಂಗ್ಲಿಷ್ ಸಾಹಿತ್ಯದ ರಸಾಮೃತವನ್ನು ಪಾನ ಮಾಡಿಸಿ ದಂತಾಗಿ, ಅವರ ಪುಷ್ಟಿ ಈಗಿರುವುದಕ್ಕಿಂತಲೂ ನೂರ್ಮಡಿ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಷಷ್ಟಿನಮನ, ನಮಗೆ ಬೇಕಾಗಿರುವ ಇಂಗ್ಲಿಷ್, ಪುಟ ೭೯–೮೦

೨೧೩

ಒಂದೆಡೆ ಸ್ಮೃತಿಯ ಮಂದಿರಂ
ಕಣ್ಣು ಕೋರೈಪಂತೆ ಹೊನ್ನ ಸಿಂಗಾರದಲಿ
ಮೆರೆದಿತ್ತು. ಮತ್ತೊಂದು ಕಡೆ ತನ್ನ ವಿಗ್ರಹಂ
ಹಾಲ್ಗಲ್ಲಿನಲಿ ಕಡೆದು ನಡುಬೀದಿ ಚೌಕದಲಿ
ಹೊನ್ನಕ್ಕರದ ಬರಹದೊಡಗೂಡಿ ನಿಂತಿತ್ತು.
ಮಗುದೊಂದು ತಾಣದಲಿ ತನ್ನ ಚಿತ್ರಕೆ ಹೂವು
ಮುಡಿಸಿ, ಪರಿಮಳ ಗಂಧ ಕರ್ಪೂರಗಳನಿತ್ತು,
ಪೂಜೆ ನಡೆದಿತ್ತು. ಒಂದೆಡೆ ವಿಮರ್ಶಕವರ್ಯ
ಪಂಡಿತೋತ್ತಮನೊಬ್ಬನವನ ಕಬ್ಬವ ಕುರಿತು
ವ್ಯಾಖ್ಯಾನ ಕೊಡುತ್ತಿದ್ದನಾಲಿಪರ ಚಪ್ಪಾಳೆ
ಕಿವುಡುಗೈವಂತೆ. ಇನ್ನೊಂದು ಕಡೆ ಪತ್ರಿಕೆಯ
ಮುಖವೆಲ್ಲ ಕವಿಯ ಸಂಕೀರ್ತನೆಯ ಮಸಿಯಿಂದೆ
ಕರಿಹಿಡಿದು ಹೋದಂತೆಯಿತ್ತು! ಇದನೆಲ್ಲವನು
ಕಂಡು ಕವಿ ಕಂಬನಿಯ ಸೂಸಿದನು ನಿಡುಸುಯ್ದು!
ತನ್ನೊಡನೆ ತನ್ನ ಕೀರ್ತಿಯುಮಳಿದುದೇ ಎಂದು!

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಕವಿಯ ಕೀರ್ತಿ, ಪುಟ ೮೨

೨೧೪

ನಾಳೆ ನಾಳೆಗೆ ಇರಲಿ.
ನಿನ್ನೆ ನಿನ್ನೆಗೆ ಇರಲಿ,
ಇಂದಿಗಿರಲಿಂದೆ!
ನಾಳೆಯನೆ ನೋಳ್ಪರಿಗೆ,
ಇಂದನೇ ಕಾಂಬರಿಗೆ,
ಮುಂದೆ ಸೊಗವೊಂದೆ!

ಷೋಡಶಿ, ರಸಋಷಿ ಪುಟ ೭೨

೨೧೫

ಅಸಂಖ್ಯ ರೂಪಧಾರಿಯಾದ ಸಚ್ಚಿದಾನಂದದ ಬೇರೆ ಬೇರೆ ಮುಖಗಳೆ ಜೀವ, ಜಗತ್ತು ಮತ್ತು ಈಶ್ವರ. ಕವಿದರ್ಶನಕ್ಕೆ ಇವೆಲ್ಲವೂ ಸತ್ಯ; ನಿತ್ಯಸತ್ಯದ ಬೇರೆ ಬೇರೆ ಪ್ರಕಾರಗಳಾದ ಲೀಲಾಸತ್ಯ. ಜಡವು ಜೀವವಾಗಿ ಜೀವ ಮಾನವನಾಗಿ

ಮಾನವ ದೇವನಾಗುವುದೆ ಸೃಷ್ಟಿಯ ಪರಮಗಂತವ್ಯ. ಈಶ್ವರನು ಸಗುಣನೂ ಹೌದು, ನಿರ್ಗುಣನೂ ಹೌದು. ಈಶ್ವರನ ಸಗುಣವೂ ಕ್ರಿಯಾತ್ಮಕವೂ ಆದ ಶಕ್ತಿಯೆ ಋತಚಿನ್ಮಯೀ ಜಗನ್ಮಾತೆ ಅಥವ ಋತಚಿತ್. ವಿಶ್ವದ ಚರಾಚರ ಸೃಷ್ಟಿಯೆಲ್ಲವೂ ಆಕೆಯ ಲೀಲಾವಿಲಾಸ. ಜಗತ್ತೆಲ್ಲವೂ ಜಗನ್ಮಾತೆಯ ರೂಪವಾದರೂ ಪ್ರಕೃತಿಯ ಹೊದಿಕೆಯಲ್ಲಿ ಅಂತರ್ಯಾಮಿಯಾಗಿರುವ ಪರಮ ಪುರುಷನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದೆ ಜೀವದ ಗುರಿ. ಜೀವಿಜೀವಿಗಳ ಹೃದಯದಲ್ಲಿ ಸ್ಥಿತನಾಗಿರುವ ಆ ಅಂತರತಮನಾದ ಗುರು, 'ಜನುಮ ಜನುಮ ಶತಕೋಟಿ ಸಂಸ್ಕಾರ ಪರಮ ಚರಮ ಸಂಸ್ಕಾರಿ !' ಆತನೆ ಆತ್ಮದ ತಮಸ್ಸನ್ನು ಪರಿಹರಿಸುತ್ತಾನೆ. ಅವನಿಗೆ ಶರಣಾಗಿ ಅವನು ತೋರಿದ ದಾರಿಯಲ್ಲಿ ನಡೆದರೆ ಭಯವಿಲ್ಲ. ಆದ್ದರಿಂದ ಪೂರ್ಣ ಸಮರ್ಪಣೆಯೆ ಶಾಂತಿಯ ದಿವ್ಯಧಾಮ. ಪ್ರಾರ್ಥನೆ, ಧ್ಯಾನ, ಉದ್ಧಾರದ ಆಸಕ್ತಿ–ಇವೆಲ್ಲ ಮಾನವನನ್ನು ಸಾಕ್ಷಾತ್ಕಾರದತ್ತ ಕರೆದೊಯ್ಯುತ್ತವೆ.

ದ್ರೌಪದಿಯ ಶ್ರೀಮುಡಿ, ಕವಿಯ ಜೀವನದೃಷ್ಟಿ ಮತ್ತು ಕಾವ್ಯದೃಷ್ಟಿ, ಪುಟ ೪೨–೩

೨೧೬

ಕುಮಾರ ವ್ಯಾಸನು ಹಾಡಿದನೆಂದರೆ,
ಕಲಿಯುಗ ದ್ವಾಪರವಾಗುವುದು !
ಭಾರತ ಕಣ್ಣಲಿ ಕುಣಿವುದು, ಮೆಯ್ಯಲಿ
ಮಿಂಚಿನ ಹೊಳೆ ತುಳುಕಾಡುವುದು !
ಕಲಿ ಕೆಚ್ಚಾಗುವನು !
ಕವಿ ಹುಚ್ಚಾಗುವನು !

ಪಾಂಚಜನ್ಯ, ಕುಮಾರ ವ್ಯಾಸ, ಪುಟ ೧೪

೨೧೭

ಇಂಗ್ಲಿಷ್ ಸ್ವಲ್ಪ ಮಟ್ಟಿಗೆ ಪ್ರಚಲಿತವಾಗಿರುವ ಪಟ್ಟಣಗಳಲ್ಲಿಯೆ ಶ್ರೀಮಂತರು ಮತ್ತು ಹೆಚ್ಚು ಸಂಬಳ ಬರುವ ಅಧಿಕಾರವರ್ಗದವರಂತೆ ಪ್ರೈವೇಟ್ ಟ್ಯೂಷನ್‌ನ ಕವಾಯಿತು ಕೊಡಲಾರದ ಮಧ್ಯಮವರ್ಗದ ಮತ್ತು ಜನ ಸಾಮಾನ್ಯರ ಮಕ್ಕಳು ಆ ಭಾಷೆಯನ್ನು ಬರೆಹದ ಮಾಧ್ಯಮವಾಗಿ ಉಪಯೋಗಿಸುವಷ್ಟು ಕಲಿಯಲು ಸಾಧ್ಯವಾಗಿಲ್ಲ ಎಂದ ಮೇಲೆ ಇನ್ನು ಆ ಸೌಕರ್ಯಗಳಾವುವೂ ಇಲ್ಲದೆ ಅದಕ್ಕೆ ವಿರುದ್ಧವಾದ ವಾತಾವರಣವೂ ಇರುವ ಗ್ರಾಮಾಂತರದ ಮಕ್ಕಳ ಆಂಗ್ಲ ಭಾಷಾಜ್ಞಾನ ಯಾವ ಮಟ್ಟದ್ದಾದೀತು ? ಅವರು ಇಂಗ್ಲಿಷ್ ಮಾಧ್ಯಮದಲ್ಲಿ ಏನು ವಿದ್ಯೆ ಗಳಿಸಿಯಾರು ? ಯಾವ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿಯಾರು ? ಸಾವಿರಾರು ಮಕ್ಕಳು ಒಂದು ಎರಡು ಮೂರು ನಾಲ್ಕು ವರ್ಷ ಪರೀಕ್ಷೆಗಳಲ್ಲಿ ಸೋತು ನಿರಾಶರಾಗಿ, ನಿಷ್ಪ್ರಯೋಜಕರೂ ಸಮಾಜಕಂಟಕರೂ ಆಗಿ ಮುಯ್ಯಿ

ತೀರಿಸಿಕೊಳ್ಳುತ್ತಾರೆ. ಈ ಕೃತಕ ಪರಿಸ್ಥಿತಿಯಿಂದ ನಮ್ಮ ಮಕ್ಕಳನ್ನು ಎಷ್ಟು ಬೇಗ ಪಾರು ಮಾಡಿದರೆ ಅಷ್ಟೂ ಕ್ಷೇಮವಾಗುತ್ತೆ ದೇಶಕ್ಕೆ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೨೨-೩

೨೧೮

ದೊಡ್ಡ ಮನಸ್ಸಿಂದ ಮಾಡಿದ ಸಣ್ಣ ಕಾರ್ಯಗಳು ಸಣ್ಣ ಮನಸ್ಸಿನಿಂದ ಮಾಡಿದ ದೊಡ್ಡ ಕಾರ್ಯಗಳಿಗಿಂತಲೂ ಎಷ್ಟೋ ಶ್ರೇಷ್ಠವಾದವುಗಳೆಂದು ನನ್ನ ನಿಶ್ಚಲವಾದ ಅಭಿಪ್ರಾಯ. ಮಹಿಮೆ ಕಾರ್ಯಗಳಲ್ಲಿಲ್ಲ; ಕಾರ್ಯ ಮಾಡಿಸುವ ಚಿತ್ತ ವೃತ್ತಿಯಲ್ಲಿದೆ.

ಸಂನ್ಯಾಸಿ ಮತ್ತು ಇತರ ಕಥೆಗಳು, ಹೋಳಿಗೆ ಪ್ರತಿಜ್ಞೆ, ಪುಟ ೭೧

೨೧೯

ಭುವಿಗರ್ಭಕೆ ರವಿಗರ್ಭಕೆ
ನೀಹಾರಿಕೆಗೂ ಹೊಕ್ಕು
ಸತ್ಯದ ಕರುಳನೆ ಕಿತ್ತಿದೆ
ವಿಜ್ಞಾನದ ರಣಹದ್ದಿನ
ನೆತ್ತರು ಬಸಿಯುವ ಕೊಕ್ಕು!

ಅಗ್ನಿಹಂಸ, ಶತಮಾನ ಸಂಧ್ಯೆ, ಪುಟ ೮೫

೨೨೦

ನನ್ನ ಉಪದೇಶ ಭಾಷಣದಿಂದ ಮಹತ್ಸಾಧನೆಯಾಗಿ ಬಿಡುತ್ತದೆ ಎಂಬ ನಂಬಿಕೆ ಏನೂ ನನಗಿಲ್ಲ. ಏಕೆಂದರೆ ಹಿಂದೆಯೂ ನಮ್ಮ ರಾಷ್ಟ್ರದ ನೂರಾರು ವಿಶ್ವವಿದ್ಯಾನಿಲಯಗಳಲ್ಲಿ ಇಂತಹ ಘಟಿಕೋತ್ಸವ ಭಾಷಣಗಳು ಸಾವಿರಾರು ನಡೆದಿವೆ. ಆ ಭಾಷಣಗಳನ್ನು ಕೇಳಿ "ಸತ್ಯಂ ವದ ಧರ್ಮಂ ಚರ" ಮೊದಲಾದ ನೀತಿ ಸೂಕ್ತಿಗಳನ್ನು ಸಾಮೂಹಿಕವಾಗಿ ಯಾಂತ್ರಿಕವಾಗಿ ಉಚ್ಚರಿಸಿ ಪ್ರತಿಜ್ಞೆಮಾಡಿದ್ದ ನಿಮ್ಮಂತಹ ಲಕ್ಷಾಂತರ ಸ್ನಾತಕರೆ ಇಂದು ರಾಜಕೀಯ ರಂಗದಲ್ಲಿ, ಆರ್ಥಿಕ ರಂಗ ದಲ್ಲಿ, ಅಧಿಕಾರ ರಂಗದಲ್ಲಿ, ಶಿಕ್ಷಣ ರಂಗದಲ್ಲಿ ನಿರ್ಲಜ್ಜೆಯಿಂದ ಪಾಪಮಯ ಭ್ರಷ್ಟಾಚಾರಗಳಲ್ಲಿ ತೊಡಗಿ ದೇಶವನ್ನು ದುರ್ಗತಿಗೆ ಒಯ್ಯುತ್ತಿರುವುದನ್ನು ನೆನೆದರೆ ಬದುಕ ಬೆಬ್ಬಳಿಸಿ ಹದುಗುವಂತಾಗುತ್ತದೆ.

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೨

೨೨೧

ನಾವೂ ಬದುಕಿ ಬಾಳುವವರೆಗೆ ದೇಹವನ್ನು ಚೊಕ್ಕಟವಾಗಿಡಬೇಕು. ಆದರೆ ಅದಕ್ಕಿಂತಲೂ ಶಾಶ್ವತವಾದ ಆತ್ಮದ ಪೋಷಣೆಯನ್ನು ಮರೆಯಬಾರದು. ಒಳ್ಳೆಯ ಮಾತು ಕತೆ, ಆಲೋಚನೆ ನಡತೆ ಇವುಗಳಿಂದ ನಮ್ಮ ಆತ್ಮ ಶುದ್ಧವಾಗುತ್ತದೆ; ದೇವರಿಗೆ ಪ್ರಿಯವಾಗುತ್ತದೆ. ಆದ್ದರಿಂದ ನಿತ್ಯವೂ ದೇವರನ್ನು ಪ್ರಾರ್ಥಿಸಬೇಕು :

ಒಳ್ಳೆಯ ಮಾತುಕೊಡು ; ಒಳ್ಳೆಯ ಆಲೋಚನೆ ಕೊಡು ; ನಮ್ಮೆಲ್ಲರನ್ನೂ ಕಾಪಾಡು, ಎಂದು.........ಗೊತ್ತಾಯಿತೆ ?......

ಕಾನೂರು ಹೆಗ್ಗಡಿತಿ, ಪಾತ್ರ ಹೂವಯ್ಯ, ಪುಟ ೧೭೮

೨೨೨

ನಮ್ಮ ದೇಶಕ್ಕೆ ರಾಜಕೀಯರೂಪವಾದ ಸ್ವಾತಂತ್ರ್ಯಯ ಸಿದ್ಧಿಯಾದ ಈ ಸಂಧಿ ಸಮಯದಲ್ಲಿ, ಎಲ್ಲ ವಲಯಗಳಲ್ಲಿಯೂ ಜನರ ಸತ್ಯ ಸೌಜನ್ಯ ನಿಷ್ಠಾಭಕ್ತಿಗಳು ಶಿಥಿಲವಾಗುತ್ತಿವೆ ಎಂಬ ಶಂಕೆಗೆ ಆಸ್ಪದವಾಗುತ್ತಿರುವಲ್ಲಿ, ದೇವರು ಸತ್ಯ ಧರ್ಮ ಆತ್ಮ ಕರ್ಮ ಜನ್ಮಾಂತರ ಪುಣ್ಯ ಮೊದಲಾದ ತತ್ವ ಮತ್ತು ಪುರುಷಾರ್ಥಗಳಲ್ಲಿ ನಂಬುಗೆಯೂ ಭರವಸೆಯೂ ಕುಗ್ಗುತ್ತಿರುವ ಈ ದುರಂತ ಸನ್ನಿವೇಶದಲ್ಲಿ, ಸ್ವಪ್ರತಿಷ್ಠೆ ಸ್ವಾರ್ಥಗಳೇ ತಮ್ಮ ಸರ್ವಸ್ವವೋ ಎಂಬಂತೆ ಮುಂದಾಳು ಗಳಾಗಿರುವ ಶ್ರೇಷ್ಠರೆಂಬುವರು ಕೂಡ ವರ್ತಿಸುತ್ತಿರುವ ಈ ದುರ್ಮೂಹೂರ್ತದಲ್ಲಿ ರಾಮಾಯಣದ ದಿವ್ಯಹಸ್ತ ನಮ್ಮನ್ನು ನಿಜವಾಗಿಯೂ ಮೇಲೆತ್ತಬಲ್ಲುದು ; ಅದರ ಅಮರಸಂಗೀತ ನಮ್ಮ ಶುಷ್ಕ ಜೀವನದಲ್ಲಿ ಅಮೃತರಸ ಸಂಚಾರವಾಗುವಂತೆ ಮಾಡಬಲ್ಲುದು........

ವಿಭೂತಿ ಪೂಜೆ, ಶ್ರೀರಾಮಾಯಣ ದಿವ್ಯಶಿಲ್ಪಿ, ಪುಟ ೧೪೪

೨೨೩

ಜನರಲ್ಲಿ ಕವಿಯ 'ದರ್ಶನ'ದ ರಸದೃಷ್ಟಿ ಪ್ರಬುದ್ಧವಾಗಿ, ಅವರೂ ರಸಋಷಿಗಳಾದರೆ ಜಗಜ್ಜೀವನದಲ್ಲಿ ಸುಖಶಾಂತಿ ಹೆಚ್ಚುತ್ತದೆ. ಸಂಕುಚಿತ ಬುದ್ಧಿ ಮಾಯವಾಗಿ ಔದಾರ್ಯ ಮೊಳೆದೋರುತ್ತದೆ. ಕ್ಲೈಬ್ಯದೌರ್ಬಲ್ಯಗಳಳಿದು ಪೌರುಷ ಧೈರ್ಯಗಳು ಮೂಡುತ್ತವೆ. ಆಗ ವಿಜ್ಞಾನ ರಾಜಕೀಯ ಮತ ತತ್ತ್ವ ಕಲೆಗಳೆಲ್ಲವೂ ಪರಸ್ಪರ ವಿರೋಧಿಗಳಾಗದೆ ಪೂರಕಗಳಾಗಿ, ಒಂದೇ 'ದರ್ಶನ'ದ ಅಂಗಗಳೂ ಅಂಶಗಳೂ ಆಗಿ, ಬಾಳಿನ ಪಾಪ ತಾಪಗಳು ಆದಷ್ಟು ಮಟ್ಟಿಗಾದರೂ ತಗ್ಗಿ, ಬದುಕು ಸುಗ್ಗಿಯ ಬನದ ಹೂವಿನಂತೆ ಹಿಗ್ಗುತ್ತದೆ.

ಈ ಮನದಾಶೆ ಕೈಗೂಡುವಂತೆ ಕಲಾಸುಂದರಿಯಾದ ವಾಗ್ದೇವಿ ಕೃಪೆ ಗೈಯಲಿ ! ನಮ್ಮ ಸಾಹಿತಿಗಳು ದಿವ್ಯ 'ದರ್ಶನ' ದ್ರಷ್ಟರಾಗಲಿ ! ನಮ್ಮ ನಾಡಿನ ಜನರ ಜೀವನ ಸುಖಶಾಂತಿಮಯವಾಗಲಿ !

ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೪೨

೨೨೪

ಭಾರತ ಲೋಕವ್ಯವಹಾರದ ಕಾವ್ಯ. ಮೊತ್ತದಲ್ಲಿ ಅದರ ಗುರಿ ಧರ್ಮ ಸಂಸ್ಥಾಪನೆ ಎಂದುಕೊಂಡರೂ ಅದರ ಕಣ್ಣು ಐಹಿಕ ವ್ಯಾಪಾರಗಳ ಕಡೆಗೂ ಅವು ಗಳಿಂದ ಮೂಡುವ ಸಮಸ್ಯೆಗಳ ಅರಿವು ಮತ್ತು ಪರಿಹಾರಗಳ ಕಡೆಗೂ ಒಲೆದಿದೆ. ಮಾನವರ ಮೂಲವಾಸನೆಗಳ ಅತಿವರ್ತನೆಯಿಂದಲೊ ದುರ್ವರ್ತನೆಯಿಂದಲೊ ಒದಗುವ ಘರ್ಷಣೆಗಳೂ ದುಷ್ಪರಿಣಾಮಗಳೂ ದುರಂತಗಳೂ ಅದರ ಮುಖ್ಯ

ವಸ್ತು. ಅಲ್ಲಿ ಮೈದೋರುವುದು ಕರ್ಮಯೋಗದ ಮತ್ತು ಧರ್ಮವಿರುದ್ಧ ಭೋಗದ ಮಹಿಮೆ. ಅಲ್ಲಿ ಪರಮಜ್ಞಾನಿಗಳನ್ನೂ ಜೀವನ್ಮುಕ್ತರನ್ನೂ ಜೀವನ ರಣರಂಗದ ಜಟಿಲತೆ ಕುಟಿಲತೆಗಳ ಹಾಸುಹೊಕ್ಕಿನಲ್ಲಿಯೆ ಸಂಧಿಸುತ್ತೇವೆ. ಅಜ್ಞಾನಿಗಳೊಡನೆಯೂ ದುರಭಿಮಾನಿಗಳೊಡನೆಯೂ ದುಷ್ಟರು ವಂಚಕರು ಅಮರ್ಷಿಗಳೊಡನೆಯೂ ಹೋರಾಡುತ್ತಿರುವಾಗಲೆ ಅವರನ್ನು ಎದುರುಗೊಳ್ಳು ·ತ್ತೇವೆ. ಶಾಂತಿಪರ್ವವೆಂಬ ಒಂಗು ಇಡೀ ಪರ್ವವನ್ನೇ ಒಳಕೊಂಡಿರುವ ಆ ದುರಂತ ಇತಿಹಾಸದ ರುದ್ರಕಾವ್ಯದಲ್ಲಿ ಶಾಂತಿ ಎಂಬುದು ಮರುಸರಸ್ಸಿನಂತೆ ದಿಗಂತ ಯಾತ್ರಿಯಾಗಿದೆಯೆ ಹೊರತು ಒಂದೆಡೆ ನಿಂತಂತೆಯಾಗಲಿ ಎಲ್ಲಿಯಾದರೂ ನೆಲಸಿದಂತೆಯಾಗಲಿ ತೋರುವುದಿಲ್ಲ. ಆ ವಾಸ್ತವ ಕಾವ್ಯದಲ್ಲಿ ಜೀವನದ ಯಥಾರ್ಥತೆ ಅದು ಇರುವಂತೆಯೆ ಚಿತ್ರಿತವಾಗಿದೆ.

ತಪೋನಂದನ, ಪಂಪನಲ್ಲಿ ಭವ್ಯತೆ, ಪುಟ ೪೪

೨೨೫

ಅಲ್ಲಲ್ಲಿ ಕರ್ಣಾಟಕ ಸಂಘಗಳನ್ನು ಸ್ಥಾಪಿಸಿ ಜನರಿಗೆ ಸಾಹಿತ್ಯ ಪ್ರಪಂಚದಲ್ಲಿ ಈಗ ನಡೆಯುತ್ತಿರುವ ಕಾರ್ಯವನ್ನು ತಿಳಿಸಬೇಕು. ಹಳೆಯ ಸಾಹಿತ್ಯದಲ್ಲಿಯಾಗಲಿ, ಹೊಸ ಸಾಹಿತ್ಯದಲ್ಲಿಯಾಗಲಿ ದೊರಕುವ ಉತ್ತಮ ಕಾವ್ಯ ಭಾಗಗಳನ್ನು ಓದಿ ಚರ್ಚೆ ಮಾಡಿ ಟೊಳ್ಳುಗಟ್ಟಿಗಳನ್ನು ಬೇರೆ ಬೇರೆ ಮಾಡಿ ತೋರಿಸಿ ಸದಸ್ಯರಲ್ಲಿ ವಿಮರ್ಶ ಬುದ್ಧಿಯೂ ರುಚಿಶುದ್ಧಿಯೂ ಉಂಟಾಗುವಂತೆ ಮಾಡಬೇಕು. ವಿಮರ್ಶಾತ್ಮಕ ವಾದ ಉಪನ್ಯಾಸಗಳನ್ನು ಕೊಡಬೇಕು. ಆತ್ಮಸಂಸ್ಕಾರಕ್ಕೆ ಸಾಹಿತ್ಯದಿಂದ ಆಗು ವಷ್ಟು ಸಹಾಯ ಕೆಲವು ಸಾರಿ ಮತಾಚಾರದಿಂದಲೂ ಆಗುವುದಿಲ್ಲ.

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೨೫

೨೨೬

ನನ್ನೀ ಶಿಶುತನ ನಿನ್ನೀ ತಾಯ್ತನ
ಎರಡೇ ಒಡವೆಗಳೆಮಗಮ್ಮಾ :
ನಾ ನಿನಗೊಡವೆಯು ; ನೀ ನನಗೊಡವೆಯು ;
ಬೇರೆಯ ಒಡವೆಗಳೇಕಮ್ಮಾ ?

ನನ್ನ ಮನೆ, ಒಡವೆಗಳು, ಪುಟ ೧೪

೨೨೭

ಓದುಬಲ್ಲ ಮನೆತನದವರೆಲ್ಲರೂ ಪತ್ರಿಕೆಗಳನ್ನು ತರಿಸಲೇಬೇಕು. ತಮ್ಮ ಸಂಕುಚಿತ ಜೀವನದ ಬಿಂದುಗಳನ್ನು ಬಾಹ್ಯ ಜಗಜ್ಜೀವನದ ಮಹಾ ಸಿಂಧುವಿನಲ್ಲಿ ಲಗ್ನ ಮಾಡಬೇಕು. ನಾನೆಷ್ಟೋ ಮನೆಗಳನ್ನು ನೋಡಿದ್ದೇನೆ. ಅವರಿಗೆ ಓದುವಷ್ಟು ಮಟ್ಟಿನ ವಿದ್ಯೆಯಿದ್ದರೂ ಪತ್ರಿಕೆಗಳ ಮುಖವನ್ನೇ ಕಾಣದೆ, ಹೊರಗಿನ ಪ್ರಪಂಚದ ವಿಚಾರದಲ್ಲಿ ಸಂಪೂರ್ಣವಾಗಿ ಅಜ್ಞರಾಗಿತ್ತಾರೆ. ಅವರ ಗೊಬ್ಬರದ ಗುಂಡಿಯಲ್ಲಿ ಇರುವ ಹುಳುವಿಗೆ ಮಹಾತ್ಮಾ ಗಾಂಧಿಯವರ ವಿಚಾರ ಎಷ್ಟು ಗೊತ್ತೋ ಅವರಿಗೂ

ಅಷ್ಟೇ ಗೊತ್ತಿರುತ್ತದೆ. ಅಡಕೆಯ ಧಾರಣೆಯನ್ನು ಎಷ್ಟು ಮುತುವರ್ಜಿ ವಹಿಸಿ ಕುತೂಹಲದಿಂದ ತಿಳಿಯುತ್ತೀರಿ ? ಆ ಕುತೂಹಲದಲ್ಲಿ ವೀಸ ಪಾಲನ್ನಾದರೂ ರಾಷ್ಟ್ರಜೀವನದ ಕಡೆಗೆ ತಿರುಗಿಸಬಾರದೆ ? ತಿರುಗಿಸಿ ನೋಡಿ. ಅದ ರಲ್ಲೂ ಆನಂದವಿದೆ. ಜೀವನದ ಅನುಭವವಲಯ ವಿಶಾಲವಾಗಿ, ಕೆಟ್ಟುಸಿರು ತುಂಬಿರುವ ಕೋಣೆಯ ಕಿಟಕಿ ಬಾಗಿಲು ತೆರೆದು ಹೊಸದಾದ ತಂಗಾಳಿ ಬೀಸಿದಂತಾಗುತ್ತದೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೨೮-೯

೨೨೮

ಒಂದೊಂದೂ ಗುಂಪಿನವರು ತಮ್ಮ ತಮ್ಮ ಪರವಾಗಿ ಒಂದೊಂದು ಪತ್ರಿಕೆಯನ್ನು ಹೊರಡಿಸುವುದಕ್ಕೆ ಶುರು ಮಾಡುತ್ತಾರೆ. ನಾಲ್ಕೇ ದಿವಸ ನಡೆದರೂ ಪರವಾಯಿಲ್ಲ. ಕ್ರಮವಾಗಿ ನಡೆಯುವುದಿಲ್ಲ ಎಂದು ಗೊಣಗಿಯೆ ಅವಕ್ಕೆ ಅಲ್ಪಾಯುಗಳು ಎಂದು ಕರೆಯುವುದಕ್ಕೆ ಬದಲಾಗಿ 'ಅನಿಯತಕಾಲಿಕೆ'ಗಳು ಎಂದು ಹೆಸರಿಡುತ್ತಾರೆ. ಹೀಗೆ ಬಯ್ಗುಳಗಳು ಚೆನ್ನಾಗಿ ಒಂದು ಕಡೆ ಸೇರಿದಮೇಲೆ, ಒಂದಾದರೂ ಆಯಿತು ಎರಡಾದರೂ ಆಯಿತು, ಪ್ರಕಟಿಸುತ್ತಾರೆ. ಹೀಗೆ ವಿಜೃಂಬಿಸಿದೆ ಗುಂಪುಗುಳಿತನ !

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೧೬

೨೨೯

ಭಾವ ಒಂದು ಲೋಕವ್ಯಾಪಾರ ; ರಸ ಅದರಿಂದ ಮುಂದುವರಿದ ಅಥವಾ ಮೇಲ್ವರಿದ ಲೋಕೋತ್ತರ ವ್ಯಾಪಾರ. ಆದ್ದರಿಂದ ಭಾವವನ್ನು ಲೌಕಿಕವೆಂದೂ ರಸವನ್ನು ಅಲೌಕಿಕವೆಂದೂ ಕರೆಯುತ್ತಾರೆ.

ರಸೋ ವೈ ಸಃ ಭೂಮಾನುಭೂತಿ, ಪುಟ ೯೧

೨೩೦

ತಂದೆತಾಯಿಯರಿಗೆ ಋಣಿಯಾಗಿರುವ ಮಗವ ಮೈ ಬರಿಯ ಛಾಯೆಯೆ ? ಅವನು ಸ್ವತಂತ್ರ ಜೀವಿಯಲ್ಲವೆ ? ಅವನು ತನ್ನ ಕರ್ಮ ಸಂಸ್ಕಾರ ಆಸೆ ಆಶಯ ಜೀವಿತೋದ್ದೇಶಗಳಿಗೆ ಅನುಸಾರಿಯಾಗಿ ಬೆಳೆಯುವುದಿಲ್ಲವೇ ? ಅವನಿಗೆ ವ್ಯಕ್ತಿ ಸ್ವಾತಂತ್ರ್ಯವಿಲ್ಲವೆ ? ಲೋಕ ಅವನಿಂದ ನಿರೀಕ್ಷಿಸುವುದಾದರೂ ಏನನ್ನು ?ಯೋಗ್ಯ ವ್ಯಕ್ತಿಯಾಗಿ ಬಾಳಿ ಬೆಳೆದು, ತನ್ನ ಪೂರ್ಣತ್ವವನ್ನು ಸಾಧಿಸುವುದರ ಜೊತೆಗೆ ತನ್ನ ವ್ಯಕ್ತಿ ವಿಶೇಷತ್ವದ ಪ್ರಭಾವದಿಂದ ಲೋಕ ಕಲ್ಯಾಣಕ್ಕೂ ಕಾರಣನಾಗಬೇಕು ಎಂದಲ್ಲವೆ ? ಸಾಹಿತ್ಯದಲ್ಲಿಯೂ ಅಷ್ಟೆ : ಅಷ್ಟನ್ನು ಸಾಧಿಸುವ ಯಾವ ಕೃತಿಯೂ ತಾನು 'ಛಾಯೆ' ಯಾದೆನೆಂದು ನಾಚುವುದು ಬೇಡ. ಅಂತಹ ಕೃತಿ ರಚನೆ ಮಾಡಿದಾತನ ಕೃತಕೃತ್ಯನೆ ಹೌದು.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೩೩

೨೩೧

ನನ್ನದು ಇದೊಂದು ಬಿನ್ನಹ : ನನ್ನನೂ ಒಂದು ಆಷಾಡ
ಸೂರ್ಯೋದಯವನ್ನಾಗಿ ಮಾಡಿ ಇನ್ನಾವುದಾದರೊಂದು

ಲೋಕದ ಇಂತಹ ರಮಣೀಯ ಪ್ರಾತಃಕಾಲದ ಇಂತಹ
ಅತುಲ ಐಶ್ವರ್ಯಕ್ಕೆ ನಿವೇದಿಸುವೆಯಾ ?

ಕಿಂಕಿಣಿ, ಆಷಾಡ ಸೂರ್ಯೋದಯ, ಪುಟ ೩

೨೩೨

...ಭರತಖಂಡದ ಸಂಸ್ಕೃತ ಸಾಹಿತ್ಯದಲ್ಲಿ ಮತ್ತು ಇತರ ಸಾಹಿತ್ಯದಲ್ಲಿ ಯಾವ **original and imperishable thought** ಇದೆಯೋ ಅದು ಕನ್ನಡದಲ್ಲಿಯೂ ಇದ್ದೇ ಇದೆ. ಅಷ್ಟೇ ಅಲ್ಲ ಈಗ ಆದಿಪುರಾಣದಲ್ಲಿ, ಒಂದು ಜೀವ ತನ್ನ ವಿಕಾಸ ಮಾರ್ಗದಲ್ಲಿ ಜನ್ಮ ಜನ್ಮಾಂತರಗಳಲ್ಲಿ ಬೇರೆ ಬೇರೆ ಅನುಭವಗಳನ್ನು ಪಡೆದುಕೊಂಡು, ಪಡೆದುಕೊಂಡು, ಪಡೆದುಕೊಂಡು, ಕೊನೆಯಲ್ಲಿ ಪರಿಪೂರ್ಣ ಸ್ಥಿತಿಯನ್ನು ಪಡೆಯುತ್ತದೆ ಎನ್ನುವುದೊಂದು ತತ್ತ್ವ ಇದೆಯಲ್ಲ–ಇಂಥ ತತ್ತ್ವ ಮತ್ತು ಅದಕ್ಕೆ ಸಂಬಂಧ ಪಟ್ಟಂಥ ಕಾವ್ಯ ಯಾವ ಬೇರೆ ಸಾಹಿತ್ಯದಲ್ಲಿದೆ ? ಭಾರತೀಯ ಸಾಹಿತ್ಯ ಬಿಟ್ಟು ಬಿಡಿ, ನಾನು ಕೇಳುವುದು **world's contribution** ಅಂತ. ಗೊತ್ತಾಯಿತೆ ? ಆದ್ದರಿಂದ, ಇಷ್ಟೇ ಅಲ್ಲ, ಕಡೆಗೆ ನಮ್ಮ ಐದಾರು ಮಹಾ ಕವಿಗಳಲ್ಲಿ ಜಗತ್ತಿನ ಯಾವ ಮಹಾಕವಿಗೂ ಕಡಿಮೆಯಾಗದ, ಸ್ಪರ್ಧೆಯಲ್ಲಿ ಗೆಲ್ಲಬಹುದಾದಂಥ ಕಾವ್ಯ ಸಾಹಿತ್ಯವೂ ಇದೆ, ಸಾಹಿತ್ಯ ಭಾಗಗಳೂ ಇವೆ.

ವಿಚಾರ ಕ್ರಾಂತಿಗೆ ಆಹ್ವಾನ, ಸಾಹಿತ್ಯ ಚರಿತ್ರಕಾರರಿಗೆ ಸಲಹೆಗಳು, ಪುಟ ೩೫–೩೬

೨೩೩

ಭವ್ಯತೆಗೆ ಪ್ರತಿಮಾ ನಿರ್ಮಾಣವು ಹೇಗೆ ದಿವ್ಯ ಪ್ರತಿಭಾ ಮಾತ್ರ ಸಾಧ್ಯವೋ ಭೂಮಾನುಭೂತಿಯೂ ಹಾಗೆಯೆ ಸಾಧನಶೀಲವಾದ ಸಹೃದಯತೆಗೆ ಮಾತ್ರ ಸಾಧ್ಯ. ಆ ಅನುಭವ ಪಡೆಯುವ ಅಧಿಕಾರ ಸಂಪಾದನೆ ಧವಳಗಿರಿಶೃಂಗಕ್ಕೆ ಏರುವಂತೆ. ಕಣಿವೆಯ ಉದ್ಯಾನಗಳಲ್ಲಿ ವಿಹರಿಸುವಂತೆಯೂ ಅಲ್ಲ; ತಪ್ಪಲಿನ ಅರಣ್ಯಗಳಲ್ಲಿ ಅಲೆದಾಡುವಂತೆಯೂ ಅಲ್ಲ. ಶೃಂಗಾರಾದಿ ರಸಾನುಭವಗಳಂತೆ ಸಾಧಕರಲ್ಲದ ಅಲಸ ರಸಿಕರಿಗೆ ಗಿಟ್ಟುವುದಿಲ್ಲ ಭೂಮಾನುಭೂತಿ. ಏಕೆಂದರೆ, ಭವ್ಯತಾ ಅನುಭವವು ರಸ ಋಷಿಗಳ ಅಮೃತಾಹಾರ. ಆ ಅನುಭೂತಿ ಕಲಾಯೋಗದ ಶಿಖರಸಿದ್ಧಿ. ಆದ್ದರಿಂದಲೆ ಓದುಗನು ಅಲ್ಪತೆಯ ಮತ್ತು ಅಲ್ಪಸ್ವಲ್ಪತೆಯ ಸಣ್ಣ ಮನಸ್ಸನ್ನು ವಿಸರ್ಜಿಸಿ ಮಹಾ ಯಾತ್ರೆಗೆ ಸಿದ್ಧವಾಗುವ ಭೂಮ ಬುದ್ಧಿಯಿಂದ ಮುಂಬರಿಯುವುದು ಅತ್ಯವಶ್ಯ.

ತಪೋನಂದನ, ಪಂಪನಲ್ಲಿ ಭವ್ಯತೆ, ಪುಟ ೫೩

೨೩೪

ಸಮನ್ವಯ, ಸರ್ವೋದಯ, ಪೂರ್ಣದೃಷ್ಟಿ ಈ ಮೂರು ಮಹಾತತ್ತ್ವಗಳು ಜಗತ್ತಿನ ಮುಂದಿನ ಬಾಳಿನ ಮೂಲಮಂತ್ರಗಳಾಗುವುದರಲ್ಲಿ ಸಂದೇಹವಿಲ್ಲ. ಆ ಬಾಳನ್ನು ನಿರೂಪಿಸುವುದರಲ್ಲಿಯೂ ರೂಪಿಸುವುದರಲ್ಲಿಯೂ ಸ್ಥಾಪಿಸುವುದ

ರಲ್ಲಿಯೂ ಆಸಕ್ತವಾಗುವ ಮುಂದಿನ ಸಾಹಿತ್ಯಕ್ಕೂ ಆ ಮೂಲಮಂತ್ರ ತ್ರಯಗಳೆ 'ದರ್ಶನ'ವಾಗಿ ಮಾರ್ಗದರ್ಶಕವಾಗುತ್ತವೆ.

ದ್ರೌಪದಿಯ ಶ್ರೀಮುಡಿ, ಮುಂದಿನ ಸಾಹಿತ್ಯದಲ್ಲಿ.... ಪುಟ ೮೮

೨೩೫

ಆತ್ಮದ ಸಂಸರ್ಗ ಆಂತರಂಗಿಕವಾದುದು ; ಸಂಪೂರ್ಣ ಮಾನಸಿಕವಾದುದು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೯೪

೨೩೬

ಸೊನ್ನೆ, ನಿನಗೆ ಬೆಲೆಯೆ ಇಲ್ಲ
ಎಂದು ಬರಿದೆ ಬೈವರೆಲ್ಲ !
ನಿನ್ನ ಹಿಂದೆ 'ಒಂದು' ನಿಲಲು
ನಿನಗೆ ಬೆಲೆಯು ಬರುವುದು.
'ಒಂದು' ಬೆಂಬಲವಿರೆ ಸೊನ್ನೆ
ಕೋಟಿಗಳನು ತರುವುದು !

ಕಲಾಸುಂದರಿ, ಸೊನ್ನೆ, ಪುಟ ೨೩

೨೩೭

ಕವಿಗೆ ಕಕ್ಕಾವಿಕ್ಕಿ :
ಯಾವುದು ಮಹತ್ತರ ?...
ಅರ್ಥವಿಲ್ಲದ ಪ್ರಶ್ನೆಗೆ
ಸುಮ್ಮನಿರುವುದೆ ಉತ್ತರ !

ಪ್ರೇತಕ್ಯೂ, ಮಹತ್ತರ ಸುದ್ದಿ, ಪುಟ ೩೫

೨೩೮

ಸಿರಿವೆಣ್ಣಿಗಿನಿಯನ ಜಯಿಸೆ
ಚೆಲುವಿನಲಗೊಂದಿರಲ್ ಬೇರೆ ಕೂರಂಬೇಕೆ ?

ಚಿತ್ರಾಂಗದಾ, ಎರಡನೆಯ ಪರ್ವಂ, ಪಂಕ್ತಿ, ೫೨೯–೩೦, ಪುಟ ೨೦

೨೩೯

ಕವಿಯ ಮನೆಯ ಅಂಗಳ
ದಿವಿಜರಿಗೂ ಮಂಗಳ !
ಸರಸ್ವತಿಯ ತಂದನ
ಮನಕೆ ಮಿಗಿಲೆ ನಂದನ ?

ಅನಿಕೇತನ, ಸೌಂದರ್ಯಯಾಜಿ, ಪುಟ ೨೦

೨೪೦

ಧರ್ಮವ ಬಿಸುಟು, ಕರ್ಮಕೆ ಬೆದರಿ,
ಸಂಗಾತಿಗಳನು ಬಿಟ್ಟೋಡಿಹೋಗದೆ,
ಅವರೆಡರೆಲ್ಲವನಾನಂದದಿಂದ
ಹೊರುವಂಥ ಮನವೆನಗಿರಲಿ ಸದಾ.

ಕೊಳಲು, ಬಿನ್ನಹ, ಪುಟ ೪೮

೨೪೧

ನಾನು ಬದುಕೊಳುಳಿವ ಮನೆ,
ನಾನು ಬಾಳಿಯಳಿವ ಮನೆ :
ನನ್ನದಲ್ಲದಿಳೆಯೊಳಿಂದು
ಹೆಮ್ಮೆಯಿಂದ ನನ್ನದೆಂದು
ಬೆಂದು ಬಳಲಿದಾಗ ಬಂದು
ನೀರು ಕುಡಿವ ನನ್ನ ಮನೆ !

ನನ್ನ ಮನೆ, ನನ್ನ ಮನೆ ೨, ಪುಟ ೨೦

೨೪೨

ಆಧುನಿಕ ನಾಗರಿಕತೆಗೆ ತಪಸ್ಸಿನಲ್ಲಿ ನಂಬುಗೆ ತಪ್ಪಿಹೋಗಿದೆ. ನಿಜವಾಗಿಯೂ ವಾಸ್ತವ ಜೀವನದಲ್ಲಿ ಅದು ತಪ್ಪಿಹೋಗಿಲ್ಲ. ತಪ್ಪುವುದಾದರೂ ಹೇಗೆ ? ಪ್ರಕೃತಿ ಸಿದ್ಧವಾದ ನಿಯಮವದು.

ತಪೋನಂದನ, ಮಹಾಶ್ವೇತೆಯ ತಪಸ್ಸು, ಪುಟ ೭

೨೪೩

ಕವಿತೆ ತರಳೆಯ ಲಾವಣ್ಯದಲ್ಲಿ ಪರಿಸಮಾಪ್ತಿ ಹೊಂದಬಾರದು. ಅದು ಕೆಲವು ಸಂದರ್ಭಗಳಲ್ಲಿ ವೀರನ ಖಂಡೆಯದಂತೆ ಮೋಹನ ಭೀಷಣವಾಗಿಯೂ, ಕಾಳಿಯ ನೃತ್ಯದಂತೆ ಮಂಗಳ ಭಯಂಕರವಾಗಿಯೂ ಇರಬೇಕಾಗುತ್ತದೆ.

ಸಾಹಿತ್ಯಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೧೩

೨೪೪

ಪಕ್ಷಪಾತದ ಪ್ರಶಂಸೆಯಿಂದ ಆಗುವ ಹಾನಿಗೆ ನೂರ್ಮಡಿ ಹಾನಿ ಪಕ್ಷಜಾತಿ ಪ್ರಚೋದಿತವಾದ ಖಂಡನೆಯಿಂದ ಆಗುತ್ತದೆ. ನಿಜವಾಗಿಯೂ ಉತ್ತಮವಲ್ಲದುದು ಯಾವುದಾದರೂ ಪಕ್ಷಪಾತದಿಂದ ಇಂದು ಪ್ರಶಂಸಿತವಾದ ಮಾತ್ರಕ್ಕೆ ಅದಕ್ಕೆ ಮುಂದೆಂದಾದರೂ ಋಜುದೃಷ್ಟಿಯಿಂದ ತಿದ್ದುಪಡೆಯುವ ಅವಕಾಶವಿರುತ್ತದೆ. ಆದರೆ ಮಹತ್ತಾದ ಸಾಹಿತ್ಯ ಪಕ್ಷಪಾತಕ್ಕೆ ಗುರಿಯಾಗಿ ಖಂಡನೆಗೊಳಗಾದರೆ ಅದು ತಿರಸ್ಕೃತವಾಗಿ ಮೂಲೆ ಸೇರಿ ಒಮ್ಮಿಂದೊಂಮ್ಮೆಗೆ ಕಣ್ಮರೆಯಾದರೆ ಮುಂದೆ ಅದಕ್ಕೆ

ಬೆಲೆಕಟ್ಟಿಸಿಕೊಳ್ಳುವ ಅವಕಾಶವೂ ತಪ್ಪಿಹೋಗಿ ಶಾಶ್ವತ ವಿನಾಶಕ್ಕೆ ಪಕ್ಕಾಗುತ್ತದೆ. ನಾಡು ಮತ್ತೆಂದು ಕೂಡಿಬರದ ಮಹಾನಷ್ಟಕ್ಕೆ ಈಡಾಗುತ್ತದೆ.

ರಸೋ ವೈ ಸಃ, ರಸೋ ವೈ ಸಃ, ಪುಟ ೧೨೧-೨

೨೪೫

ಇಲ್ಲಗೈಯೆ ನಿನ್ನ ನೀನು
ದೇವರಲ್ಲದುಳಿವುದೇನು ?

ಮಂತ್ರಾಕ್ಷತೆ, ಪುಟ ೪೭

೨೪೬

ಬಹು ಜನರು ಮಾಡಿದುದೆ
ಪಾಪವಾದರು ಪುಣ್ಯ ;
ಬಹು ಜನರು ಸೇರಿದುದೆ
ನರಕವಾದರು ಸ್ವರ್ಗ !

ಷೋಡಶಿ, ರಸಋಷಿ, ಪುಟ ೭೨

೨೪೭

ಎಲ್ಲ ಪೂಜೆಯ ಪರಮೋದ್ದೇಶವೆಂದರೆ ನಾವು ಯಾವುದನ್ನು ಪೂಜಿಸುತ್ತೇವೆಯೋ ಅದರಂತಾಗುವುದು ; ಕೊನೆಗೆ ಇನ್ನೂ ಮುಂಬರಿದು ಅದನ್ನು ಪೂರ್ಣವಾಗಿ ಪಡೆದು ಅದೇ ಆಗುವುದು.

ವಿಭೂತಿಪೂಜೆ, ಕವಿಯಲ್ಲ ವಿಭೂತಿ, ಪುಟ ೨

೨೪೮

ನುಡಿಗೆ ನಿಲುಕದೆ, ಬುದ್ಧಿಯರಿಯದಿಹ,
ಅತ್ಯನಿರ್ವಚನೀಯ ತತ್ತ್ವವೊಂದೀ ಸರ್ವ
ವಿಶ್ವವನು ಸರ್ವತ್ರ ತುಂಬಿ ಮರೆಯಾಗಿಹುದು.
ಆ ಪರಮ ತತ್ತ್ವ ಸ್ವರೂಪವೇ ಪ್ರೇಮ.
ಧರ್ಮನೂ ಪ್ರೇಮಕ್ಕೆ ಕಿಂಕರನು. ನಿಯಮಗಳು
ಶುದ್ಧವಹ ದಿವ್ಯಾನುರಾಗಕ್ಕೆ ಸೇವಕರು.

ಯಮನ ಸೋಲು, ಪಾತ್ರ ಯಕ್ಷ, ಪುಟ ೪೩

೨೪೯

ನಮ್ಮ ದೇಶದ ಪ್ರಚ್ಛನ್ನ ಶತ್ರುಗಳಾದ ಸ್ವಾರ್ಥಸಾಧಕ ಪಟ್ಟಭದ್ರ ಹಿತಾಸಕ್ತ ಪ್ರತಿಗಾಮಿ ಶಕ್ತಿಗಳು, ಮಕ್ಕಳಿಗೆ ಹಾಲುಣಿಸುವ ನೆವದಿಂದ ಅವಳನ್ನು ಕೊಲ್ಲುತ್ತಿದ್ದ ಭಾಗವತ ಪುರಾಣದ ಪೂತನಿಯಂತೆ, ಬಲಾತ್ಕಾರದ ಇಂಗ್ಲಿಷ್ ಭಾಷೆಯಿಂದಲೂ ಇಂಗ್ಲಿಷ್ ಮಾಧ್ಯಮದಿಂದಲೂ ವರ್ಷ ವರ್ಷವೂ ಪರೀಕ್ಷೆಯ ಜಿಲೊಟಿನ್ನಿಗೆ ಕೊಟ್ಯಂತರ ಬಾಲಕರ ಮತ್ತು ತರುಣರ ತಲೆಗಳನ್ನು ಬಲಿಕೊಡುತ್ತಿದ್ದಾರೆ. ಆ ನಷ್ಟದ

ಪರಿಮಾಣವನ್ನು ಊಹಿಸಲು ಸಾಧ್ಯವಿಲ್ಲ. ಬಹುಶಃ, ಸರಿಯಾಗಿ ಲೆಕ್ಕ ಹಾಕಿದರೆ, ನಾಲ್ಕಾರು ಪಾಂಚವಾರ್ಷಿಕ ಯೋಜನೆಗಳ ಮೊತ್ತವೆ ಆದರೂ ಆಗಬಹುದೇನೋ !

ಮನುಜಮತ ವಿಶ್ವಪಥ, ಬಲಾತ್ಕಾರದ ಇಂಗ್ಲಿಷ್ ಪ್ರಚ್ಛನ್ನ ಭ್ರಷ್ಟಾಚಾರ, ಪುಟ ೧೦-೧

೨೫೦

ನಂಬಿಹೆನು ಆತ್ಮವಚ್ಯುತವೆಂದು ; ಅದರಿಂದೆ
ಕಂಬನಿಯ ಕರೆಯುವುದೆ ನಾಸ್ತಿಕತೆ !

ಅಗ್ನಿಹಂಸ, ಮುಕ್ತಮಹಾಪುರುಷನಿಗೆ, ಪುಟ ೫೨

೨೫೧

ಕವಿ ಬೇಸರ ಪರಿಹಾರ ಮಾಡುವ ವಿದೂಷಕನಲ್ಲ. ಕವಿತೆ ಅಲಸ ಸಮಯಗಳಲ್ಲಿ ಲಘುಮನಸ್ಕರನ್ನು ನಲಿಸುವ ನರ್ಮಮೂರ್ತಿಯಲ್ಲ. ತಪಸ್ಸಿಲ್ಲದ ಕವಿ ಕುಕವಿ ; ದರ್ಶನ ಮೂಲವಲ್ಲದ ಕವಿತೆ ಜಳ್ಳು. ಅದು ತೆರೆಯ ಮೇಲೆ ತೇಲುವ ನೊರೆಯೇ ಹೊರತು ಕಡಲಾಳದ ಮುತ್ತಲ್ಲ. ನೊರೆ ಕ್ಷಣಿಕ ಮನೋಹರವಾದುದು ; ಮುತ್ತುಗಳಂತೆ ಶಾಶ್ವತ ಘನವಾದುದಲ್ಲ. ಲಘುಕಾವ್ಯ ತಾತ್ಕಾಲಿಕ ಪ್ರಮೋದಕಾರಿ ಯಾಗಿ ನಶಿಸಿ ಹೋಗುತ್ತದೆ. ಕವಿಯ ತಪಸ್ಸಿನಿಂದ ದರ್ಶನಾತ್ಮಕವಾಗಿ ಮೂಡುವ ಕಾವ್ಯ ಅಚ್ಯುತ ಜ್ಯೋತಿಯಾಗಿ ಜೀವನವನ್ನು ಬೆಳಗುತ್ತದೆ. ಆದ್ದರಿಂದ ಕವಿ ಸಾಮಾನ್ಯ ಮಂದಿಯ ಕುರುಚಿ ಪೋಷಣೆ ಮಾಡಿ ಹುಲ್ಲು ಬೆಂಕಿಯಂತಹ ಅಚಿರ ಕೀರ್ತಿಗೆ ಅಳುಪದೆ, ತನ್ನ ಜೀವನವನ್ನು ಸಮುದ್ರದಂತೆ ಗಂಭೀರವನ್ನಾಗಿ ಮಾಡಿಕೊಂಡು, ಒಮ್ಮೊಮ್ಮೆ ಮೇಲೆ ಮೇಲೆ ತೆರೆಯ ನೊರೆಯನ್ನೂ ಪ್ರದರ್ಶಿಸಿ ಜನರನ್ನು ನಲಿಸಿ ದರೂ ಒಳಗೆ ಅನರ್ಘ್ಯವಾದ ಮುತ್ತರತ್ನಗಳನ್ನು ವಿರಚಿಸಬೇಕು. ಎಂದರೆ ಸಾಹಿತ್ಯ ವಿನೋದಗೊಳಿಸುವುದರ ಜೊತೆಗೆ ಆತ್ಮೋದ್ಧಾರಕ್ಕೂ ಕಾರಣವಾಗಬೇಕು.

ಸಾಹಿತ್ಯಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೩೪

೨೫೨

ಪೀಡಿಸುತ್ತಿಹೆ ಏಕೆ ? ತೊಲಗಾಚೆ, ಕೀರ್ತಿಶನಿ ;
ಸಾಕೆನಗೆ ನಿನ್ನ ಸಹವಾಸ ವಿಭವಭ್ರಾಂತಿ !
ಬಾ ಬಳಿಗೆ, ಸಾಮಾನ್ಯತಾ ದೇವಿ, ಓ ಶಾಂತಿ ;

ಕೃತ್ತಿಕೆ, ಕೀರ್ತಿಶನಿ, ಪುಟ ೩೫

೨೫೩

ಜಗದ ದೇಗುಲದಲ್ಲಿ ಜಗದುದಯ ಕಾರಣನ
ಕಾಣದವನೆಂತು ಕಾಣ್ಬನು ಶಿವನ, ಗುಡಿಯಲ್ಲಿ ?
ತಣ್ಗದಿರ ಬೆಂಗದಿರನರಿಲುಗಳೆ ಸೊಡರುಗಳು.

ಸುಮಮಾಲೆ ಅಲರುಗಳ ಚೆಲ್ಲುತಿರುವಡವಿಗಳು.
ಮುನ್ನೀರು ತೊರೆ ಕೆರೆಗಳೇ ಪಂಚಪಾತ್ರೆ,
ಬಿತ್ತರದ ಬಾಂದಳವೆ ಗೋಪುರಂ! ಹೊಳೆಗಳಲಿ
ಹರಿವ ಸಲಿಲವೆ ತೀರ್ಥ; ಸುಮಗಂಧವೇ ಧೂಪ.
ಹಕ್ಕಿಯಿಂಚರವೆ ಸುಸ್ವರಮೇಳ! ಎದೆಯೊಲವೆ
ವರ ಧರ್ಮಶಾಸ್ತ್ರ. ಭಕ್ತಿಯೆ ದಿವ್ಯಾತ್ಮ ಯಜ್ಞ,
ಎದೆಯ ಮಣೆಯೇ ಯಜ್ಞಶಾಲೆ!
ನಲ್ವಾತುಗಳೆ ಮಂತ್ರಘೋಷ; ನೀತಿಯೆ
ಪರಮ ವೇದ. ತಿರೆಗಿಂತ ದೇಗುಲವದೊಳದೇನ್?

ಜಲಗಾರ, ಪಾತ್ರ ಜಲಗಾರ, ಪುಟ ೧೨

೨೫೪

ನಮ್ಮ ಸ್ವಾತಂತ್ರ್ಯ ಸಂಪಾದನೆಗೆ ನಮ್ಮ ರಾಷ್ಟ್ರಪಿತನನ್ನೇನೊ ಉಪಯೋಗಿಸಿಕೊಂಡೆವು, ಆತ ಬೋಧಿಸಿದ ಸ್ವದೇಶಿ, ಸತ್ಯಾಗ್ರಹ, ಅಹಿಂಸೆ, ಗ್ರಾಮ ಸ್ವರಾಜ್ಯ, ಸರಳ ಜೀವನ, ತ್ಯಾಗಬುದ್ಧಿ ಮೊದಲಾದ ಕೈದುಗಳನ್ನಾಂತು. ಆದರೆ ಸ್ವಾತಂತ್ರ್ಯ ಸಂಪಾದನೆ ಆದೊಡನೆಯೆ ಆತನನ್ನು ತೊಲಗಿಸಿದೆವು : ಆತನ ದೇಹಕ್ಕೆ ಗುಂಡಿಕ್ಕಿದವನೇನೊ ಒಬ್ಬನೆ; ಆದರೆ ತರುವಾಯ ಆತನ ಧ್ಯೇಯಕ್ಕೆ ಉರುಳಿಕ್ಕಿ ಕೊಂದವರು ಹಲವರು ಆತನ ಅನುಯಾಯಿಗಳೆ!

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೨

ಟಾಲ್‌ಸ್ಟಾಯ್ ತನ್ನ ಜೀವಮಾನದಲ್ಲಿ ಬರೆದದ್ದು ಮೂರು ಕಾದಂಬರಿಗಳು–ಮೊದಲನೆಯದು ದೊಡ್ಡದು, ಎರಡನೆಯದು ಅದಕ್ಕಿಂತ ಚಿಕ್ಕದು, ಮೂರನೆಯದು ಇನ್ನೂ ಚಿಕ್ಕದು. ಹಾಗೆ ಅಲ್ಲದೆ ನಾನು ನೂರು ಕಾದಂಬರಿ ಬರೆದೆ, ಅದರ ಶತಮಾನೋತ್ಸವ ಮಾಡುತ್ತೇನೆ ಎಂದು ಹೊರಟರೆ ಅದು ಆಗುವುದಿಲ್ಲ. ಅದಕ್ಕೆ ಬೇಕಾದಷ್ಟು ಶ್ರಮ ಬೇಕಾಗುತ್ತದೆ. ತಪಸ್ಸು ಬೇಕಾಗುತ್ತದೆ. ಎಲ್ಲ ರೆಕಾರ್ಡು ಗಳನ್ನೂ ನೋಡಬೇಕಾಗುತ್ತದೆ. ಘಟನೆಗಳು ನಡೆದಂಥ ಸ್ಥಳಗಳಿಗೆ ಹೋಗಬೇಕಾಗು ತ್ತದೆ. ಎಲ್ಲಿ ಲಾಠಿ ಚಾರ್ಜ್ ಆಯಿತು, ಎಲ್ಲಿ ಯಾವ ಈಸೂರಿನಲ್ಲಿ ಮನೆಗಳನ್ನು ಸುಟ್ಟರು, ಅಲ್ಲಿ ಇರುವ ಮುದುಕ ಮುದುಕಿಯರನ್ನೆಲ್ಲಾ ನೋಡಬೇಕಾಗುತ್ತದೆ. ಕೇಳಿ ತಿಳಿಯಬೇಕಾಗುತ್ತದೆ. ಹೀಗೆ ತುಂಬಾ ಕೆಲಸ ಮಾಡಬೇಕು. ಆದರೆ ಯಾರು ಕೆಲಸ ಮಾಡಿ ಅಂಥ ಒಂದೇ ಒಂದಾದರೂ ಕಾದಂಬರಿಯನ್ನು ಸೃಷ್ಟಿಸುವನೋ ಅವನಿಗೆ ಶಾಶ್ವತವಾದ ಕೀರ್ತಿ ಲಭ್ಯ. ಅಷ್ಟೇ ಅಲ್ಲ, ಅಂಥ ಕಾದಂಬರಿಯಗಳನ್ನು ಕಡೆಗೆ–ಈಗಲ್ಲದಿರಬಹುದು, ಇನ್ನು ಮುಂದಾದರೂ–ಬೇರೆ ಭಾಷೆಗಳಿಗೆ ಭಾಷಾಂತರಿಸಿ ಅದನ್ನು ಪ್ರಚಾರ ಮಾಡಿಯೆ ಮಾಡುತ್ತಾರೆ.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೧೩

೨೫೬

ಬಲಿಷ್ಠರೂ ಬಹುಸಂಖ್ಯೆಯವರೂ ಆದವರ ಕಡೆ ಸರ್ಕಾರವಿದ್ದರೆ ಅದಕ್ಕೂ ಕ್ಷೇಮ ; ನ್ಯಾಯರಕ್ಷಣೆಯೂ ಸುಲಭಸಾಧ್ಯ.

ಮಲೆಗಳಲ್ಲಿ ಮದುಮಗಳು, ಪುಟ ೧೦

೨೫೭

ಸಂಶಯದ ಕಣ್ಣಿಗೆ ಬಹಳ ಕರುಬು.

ರಕ್ತಾಕ್ಷಿ, ಪಾತ್ರ ಲಿಂಗಣ್ಣ, ಪುಟ ೮

೨೫೮

ಕಣ್ಗಳೆರಡಾದರೇನೊಂದಲ್ತೆ ಪೇಳ್
ದೃಷ್ಟಿ ತಾಂ ? ಮೆಯ್ಗಳೆರಡಾದಡೇನೊಲಿದರ್ಗೆ
ಬಾಳ್ವೆಯೊಂದಲ್ತೆ ?

ಶ್ರೀ ರಾಮಾಯಣ ದರ್ಶನಂ, ಮಮತೆಯ ಸುಳಿ ಮಂಥರೆ, ಪುಟ ೬೭-೮

೨೫೯

ಪಾಶ್ಚಾತ್ಯ ತತ್ವಾಲೋಚನೆಗೆ ಈ ಮನಸ್ಸು ಎಂಬುದನ್ನು ಕ್ರಮೇಣ ಪ್ರಕಟಗೊಳಿಸುವ ಮಗುವೂ ಕೂಡ, ಅದರ ಮನಸ್ಸಿನಂತೆಯೆ, ಶುದ್ಧ ಶೂನ್ಯದಿಂದ ಮೊತ್ತಮೊದಲಿಗೆ ವ್ಯಕ್ತಗೊಳ್ಳುವ ವಸ್ತು ! ಪ್ರಾಚ್ಯ ಮೂಲವಾದ ತತ್ವಾಲೋಚನೆಗೆ ಆ ಮಗು ಹೊಚ್ಚ ಹೊಸ ವಸ್ತುವಲ್ಲ ; 'ಬಹು ಬಹು ಜನ್ಮಗಳಲ್ಲಿ ಸಂಚರಿಸಿ, ಮತ್ತೆ ಮತ್ತೆ ಸತ್ತು, ಮತ್ತೆ ಮತ್ತೆ ಹುಟ್ಟಿ, ನಾನಾ ದೇಶಗಳಲ್ಲಿ ನಾನಾ ರೀತಿಗಳಲ್ಲಿ ನಾನಾ ಅನುಭವ ಗಳನ್ನು ಪಡೆದು, ಆ ಅನುಭವಗಳ ಸಾರವನ್ನೆಲ್ಲ ಸಂಸ್ಕಾರ ರೂಪದಲ್ಲಿ ಹುದುಗಿ ಕೊಂಡು ಮತ್ತೆ ಜನ್ಮವೆತ್ತಿ ಬರುವ ಒಂದು ಅನಾದಿ ಅನಂತ ಅಮೃತ ಚೇತನ. ಆದ್ದರಿಂದ ಆ ಮಗುವಿನ ಮನಸ್ಸು ನಮಗೆ ಖಾಲಿಯಾಗಿರುವಂತೆ ಕಂಡರೂ ಅದು ಶುದ್ಧ ಶೂನ್ಯವಲ್ಲ, ಕರ್ಮನಿಯಮಗಳಂತೆ ವಿಕಾಸ ಹೊಂದಲಿರುವ ಸಂಸ್ಕಾರ ಬೀಜ ಕೋಟಿಗಳಿಂದ ಕೂಡಿದ್ದು, ಮುಂದೆ ಬದುಕಿನಲ್ಲಿ ಅನೇಕ ಫಲಗಳಲ್ಲಿ ಪರಿಣಾಮ ಗೊಳ್ಳುವ ಜೀವನ ನಿಧಿ !

ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಮಕ್ಕಳಿಗೇಕೆ ವೈಚಾರಿಕತೆ, ಪುಟ ೩೬

೨೬೦

ವಿಮರ್ಶೆ ಎಂದರೆ ಕವಿಪ್ರತಿಭೆಯಿಂದ ಹೊರಹೊಮ್ಮುವ ಸುಂದರ ಭಾವಮಯ ಕಾವ್ಯಕ್ಷೇತ್ರಗಳಲ್ಲಿ ಸೂಕ್ಷ್ಮಮತಿಯಾದ ಸಹೃದಯನು ಕೈಕೊಳ್ಳುವ ವಿಹಾರ ಯಾತ್ರೆ ಅಥವಾ ಸಾಹಸ ಯಾತ್ರೆಯ ಕಥನ ಕಾರ್ಯ.

ಕಾವ್ಯ ವಿಹಾರ, ಹರಿಶ್ಚಂದ್ರ ಕಾವ್ಯ, ಪುಟ ೭೮

೨೬೧

ನೆಚ್ಚಿರಲಿ ! ಕೆಚ್ಚಿರಲಿ !
ಮುಂಬರಿವ ಹುಚ್ಚಿರಲಿ !
ಮುಂದುವರಿವುದೆ ಬಾಳು ; ಹಿಂದೆ ಸರಿವುದು ಸಾವು, ಆತ್ಮಹತ್ಯ !
ಹೋರುವುದೆ ಚೈತನ್ಯ,
ಸುಮ್ಮನಿರೆ ಜಡಶೂನ್ಯ !
ತುದಿಯ ಗುರಿ ಶಾಂತಿ ಎನೆ ಬರಿನಿದ್ದೆಯಲ್ಲವದು ಸತ್ಯ ಸತ್ಯ !

ಪಾಂಚಜನ್ಯ, ಮಲ್ಲಗೀತೆ, ಪುಟ ೪೭

೨೬೨

ಯುವಕರು 'ನಿರಂಕುಶಮತಿ'ಗಳಾಗಬೇಕು. 'ನಿರಂಕುಶಮತಿ'ತ್ವ ಎಂದರೆ ನಿರಂಕುಶಪ್ರಭುತ್ವದಂತೆ ಎಂದು ತಿಳಿಯಬಾರದು. ನಿರಂಕುಶಪ್ರಭುತ್ವದ ಲಕ್ಷಣ ವೆಂದರೆ ವಿವೇಕಹೀನವಾದ ಸ್ವಚ್ಛಂದ ವರ್ತನೆ. ಸಂಯಮ ಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೆ 'ನಿರಂಕುಶಮತಿ'. ಮತಿ ಮಾನವನ ಸರ್ವೋತ್ಕೃಷ್ಟವಾದ ಆಯುಧ. ಮತಿಯೇ ಕತ್ತಲಲ್ಲಿ ದಾರಿ ತೋರುವ ರತ್ನದ ಕೈದೀವಿಗೆ, ಮತಿಯ ದೆಸೆಯಿಂದಲೇ, ಪ್ರಾಣಿಮಾತ್ರವಾಗುತ್ತಿದ್ದ ನರಜೀವಿ ಮನುಷ್ಯತ್ವಕ್ಕೆ ಏರಿದ್ದಾನೆ. ಮತಿಯ ಕೃಪಾ ಮಹಿಮೆ ಯಿಂದಲೇ ನಾವು ಮನುಷ್ಯತ್ವದಿಂದ ದೇವತ್ವಕ್ಕೆ ಏರಬೇಕಾಗಿದೆ. ಮತಿ ಮನುಷ್ಯತ್ವದ ಹಕ್ಕು. ಆದ್ದರಿಂದ, ಸಹೋದರರೇ, ಮತಿ ನಿಮ್ಮ ನಚ್ಚಿನ ರನ್ನ ದೀವಿಗೆಯಾಗಲಿ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೨

೨೬೩

ಕಲೆ ಭವಿಷ್ಯದ್ದರ್ಶಿ. ಅದರ ಕಾರುಣ್ಯಕ್ಕೂ ಜನತೆಯ ಕಾರ್ಪಣ್ಯಕ್ಕೂ ಬಹು ದೂರಾಂತರ. ಬದುಕಿರುವಾಗ ಮಹಾತ್ಮನಿಗೆ ಮೊಳೆ ಹೊಡೆದು ಕೊಂದು, ಅವನ ಕೀರ್ತಿಗೆ ಸ್ಮಾರಕಗಳನ್ನು ನಿರ್ಮಿಸುತ್ತದೆ ಜನತಾ ಕಾರ್ಪಣ್ಯ. ಕಲಾಕಾರುಣ್ಯವಾದರೊ ಆತನ ಗರ್ಭಾವತರಣ ಮೊದಲುಗೊಂಡು ಸಮವಸರಣದವರೆಗೂ ತನ್ನ ಹಾಲ್ದೊರೆಯ ಔದಾರ್ಯವನ್ನು ಹರಿಯಿಸುತ್ತದೆ, ಹೊರುವ ಹೆರುವ ಸಾಕುವ ಸಲಹುವ ತಾಯಿಯಂತೆ.

ತಪೋನಂದನ, ಪಂಪನಲ್ಲಿ ಭವ್ಯತೆ, ಪುಟ ೫೨

೨೬೪

....ಪರಿಣಾಮಕ್ರಮದ ಈ ಸೃಷ್ಟಿಯಲ್ಲಿ ವ್ಯಷ್ಟಿಯ ಮುಖಾಂತರವೇ ಸಮಷ್ಟಿಯ ಉತ್‌ಕ್ರಮಣವೂ ಉದ್ಧಾರವೂ ಆಗಬೇಕಾಗಿದೆ. ವ್ಯಷ್ಟಿಯ ಪರಿವರ್ತನೆಯಾಗದೆ, ವ್ಯಷ್ಟಿಯ ಮುಖಾಂತರವಾಗಿ ಪರಿಣಾಮಪಥಪ್ರದೇಶ ಮಾಡದೆ, ಸಿದ್ಧ ವ್ಯಷ್ಟಿಯಾದ ವನು ಸಮಷ್ಟಿಯ ಉದ್ಧಾರಕ್ಕಾಗಿ ತನ್ನನ್ನು ತಾನು ಸಮರ್ಪಿಸಿಕೊಳ್ಳದೆ, ಸಮಷ್ಟಿಯಲ್ಲಿ

ಯಾವ ಪರಿವರ್ತನೆಯೂ ಮೊಳೆತು ಬೆಳೆದು ಸುಪ್ರತಿಷ್ಠಿತವಾಗ ಲಾರದು. ಆದ್ದರಿಂದಲೆ ಲೋಕೋದ್ಧಾರ ಮಾಡುವುದಕ್ಕೆ ಹೊರಡುವ ಮೊದಲು ಪ್ರತಿಯೊಬ್ಬ ವ್ಯಕ್ತಿಯೂ ತನ್ನನ್ನು ತಾನು ನಿಜವಾಗಿಯೂ 'ಉದ್ಧಾರ' ಮಾಡಿಕೊಳ್ಳ ಬೇಕು. ಬೆಳಕು ನೀಡುವ ಮುನ್ನ ಬೆಳಕು ಪಡೆಯಬೆಕು. ತನ್ನ ಪ್ರಸಿದ್ಧಿಯೇ ಜಗತ್ಕಲ್ಯಾಣಸಿದ್ಧಿ ಎಂಬ ಭ್ರಾಂತಿ ಹಳ್ಳಿಯೊಳಿದ್ದರೇನು ? ದಿಳ್ಳಿಯೊಳಿದ್ದರೇನು ? ಅಂತಹ ಕೀರ್ತಿಶನಿಯಿಂದ ಎಂದಿಗೂ ಸಿದ್ಧಿಸದು ಜಗತ್‌ಶಾಂತಿ.

ವಿಭೂತಿಪೂಜೆ, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪುಟ ೪೭-೮

೨೬೫

ಒಂದು ನಿಯತಿ ಮತ್ತು ಅದರ ನಿಯಮಗಳಿರದೆ ಯಾವ ಸೃಷ್ಟಿಯೂ ಸಾಧ್ಯ ವಾಗಿವುದಿಲ್ಲ. ಸೃಷ್ಟಿಯೆಂದರೆ ನಿಯತಿ ನಿಯಮಾಧೀವಾಗಿಯೆ ಹೊಮ್ಮುವ ಸೃಜನೆ.

ರಸೋ ವೈ ಸಃ, ಕವಿ ನಿರ್ಮಿತಿಯಲ್ಲಿ ನಿಯತಿಕೃತ ನಿಯಮರಾಹಿತ್ಯ, ಪುಟ ೬

೨೬೬

ಸಾಹಿತಿಗಳ ಕರ್ತವ್ಯ ಈಗ ಇದು : ಇನ್ನು ಐವತ್ತು ವರ್ಷವಾದರೂ ನಾವು ಈ ಜನತೆಯನ್ನು ಅವೈಜ್ಞಾನಿಕತೆಯಿಂದ ಅವಿಚಾರಬುದ್ಧಿಯಿಂದ ಪಾರುಮಾಡಲು ಶ್ರಮಿಸುವುದು. ನಾವು ನಾಸ್ತಿಕರಾದರೂ ಚಿಂತೆಯಿಲ್ಲ, ಮತಭ್ರಾಂತಿಯ ಮತ ಮೌಢ್ಯಗಳ ವಿಷದಂಷ್ಟ್ರದಿಂದ ಪಾರಾಗಲೇಬೇಕು. ನಾವು ಬರೆಯುವುದು ಎಲ್ಲವೂ ಯಾವಾಗಲೂ ತ್ರಿಕಾಲ ಸಾಹಿತ್ಯವೇ ಆಗಬೇಕಿಲ್ಲ. ಮಾಡಬೇಕಾದ ಈ ಕಾರ್ಯವೇನೂ ಅಲ್ಪವಲ್ಲ. ಪ್ರಚಾರಸಾಹಿತ್ಯ ವಿಚಾರಸಾಹಿತ್ಯ ಇದ್ದಂತೆ ಇದೊಂದು 'ಸಕಾಲ ಸಾಹಿತ್ಯ'. ಅಂದರೆ ಈ ಕಾಲಕ್ಕೆ ಅಗತ್ಯವಾದ ಸಾಹಿತ್ಯ ಈಗ ಬೇಕಾಗಿದೆ. ಬರಹಗಾರು ಇತ್ತಕಡೆ ಗಮನ ಹರಿಸಬೇಕು.

ಮನುಜಮತ ವಿಶ್ವಪಥ, ತ್ರಿಕಾಲ ಸಾಹಿತ್ಯ ಸಕಾಲ ಸಾಹಿತ್ಯ, ಪುಟ ೩೩

೨೬೭

ಕೇದಾರ ಬದರೀನಾಥಾದಿ ಪುಣ್ಯಕ್ಷೇತ್ರಗಳಿಗೆ ಯಾತ್ರೆ ಹೋಗಿರುವವರು ಯಾವ ಯಾವ ನಂಬುಗೆಗಳಿಂದ ಏನೇನನ್ನು ಮಾಡುತ್ತಾರೊ ಅದನ್ನೆಲ್ಲ ಸಹಾನುಭೂತಿಯಿಂದ ನೋಡಿ ಶ್ಲಾಘಿಸುವುದು ಸಾಧ್ಯವಾಗುತ್ತದೆಯೆ ? ಅದು ಸಾಧ್ಯವಾಗದಿದ್ದರೆ ಟೀಕಿಸುವುದು ಮುನ್ನುಡಿ ಬರೆಯುವವನಿಗೆ ಯೋಗ್ಯವೆ, ಸಭ್ಯವೆ ? ಮನಸ್ಸಿನಲ್ಲಿ ಖಂಡನೆಯಿದ್ದೂ ಬಾಯಲ್ಲಿ ಮಾತ್ರ ಉಪಚಾರ ಶ್ಲಾಘನೆ ಮಾಡುವುದು ನನಗೆ ಎಂದಾದರೂ ಸಾಧ್ಯವೆ ? ನನ್ನ ಸ್ವಂತ ಅಭಿಪ್ರಾಯವೇನಾ ದರೂ ಆಗಿರಲಿ ; ಇತರ ಹೃದಯಾನುಭವದ ದೃಷ್ಟಿಯಿಂದಲಾದರೂ ಅದನ್ನು ಮೆಚ್ಚಬಹುದಲ್ಲ ಎಂದರೆ, ಮನಸ್ಸಿನಲ್ಲಿ ಇನ್ನೂ ಹಸಿ ಹಸಿಯಾಗಿರುವ ಮೊನ್ನೆ ಮೊನ್ನೆ ನಡೆದ ಕುಂಭಮೇಳದ ಕಾಲ್ತುಳಿತದ ಮರಣಕಾಂಡದ ಪ್ರಕರಣವೂ ಅದಕ್ಕಿಂತಲೂ ಹೆಚ್ಚು ಸಮೀಪವಾಗಿರುವ

ಮಾದೇಶ್ವರ ಬೆಟ್ಟದ ಜಾತ್ರೆಯ ಕಾಲರಾ ಬಲಿಯ ವಾರ್ತೆಯ ಅಸಹ್ಯಾನುಭವವೂ ತಮ್ಮ ಅಶ್ಲೀಲ ವಿಕಾರ ಭೀಕರ ರೂಪಗಳಿಂದ ತನ್ನ ಮುಂದೆದ್ದು ನಿಂತು ಹಲ್ಲು ಕಿರಿದು ಹಾಸ್ಯ ಮಾಡುವಂತೆ ಭಾಸವಾಯಿತು! ಇಂತಹ ಗುರುಪ್ರಮಾಣದ ಕೇಡಿಗೆ ಕಾರಣವಾಗುವ ಮೌಢ್ಯಗಳನ್ನು ಖಂಡಿಸದೆ ಶ್ಲಾಘಿಸಿದರೆ ಜನಕ್ಕೆ ದ್ರೋಹವೆಸಗಿದಂತಾಗುತ್ತದೆ ಎಂದು ತೋರಿತು.

ಷಷ್ಟಿನಮನ, ತೀರ್ಥಯಾತ್ರೆ, ಪುಟ ೮೮

೨೬೮

ವ್ಯಕ್ತಿತನವೆ ಕವಿಗೆ ಇಲ್ಲ;
ಅವನು ಇಲ್ಲ, ಅಥವ ಎಲ್ಲ.

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಕವಿಯ ಹೃದಯವೊಂದು ವೀಣೆ, ಪುಟ ೮೬

೨೬೯

ವೆಂಕಣ್ಣಯ್ಯನವರಿಗೆ ನನ್ನ ಮೇಲೆ ಅಪಾರ ಅಭಿಮಾನ. ನನ್ನ ಪರೋಕ್ಷದಲ್ಲಿ ಇತರರೊಡನೆ ನನ್ನನ್ನು ನಿರ್ದೇಶಿಸಿ, 'ಹಿಂದೆ ಇರಲಿಲ್ಲ, ಮುಂದೆ ಬರುವುದಿಲ್ಲ.' 'ನಭೂತೋ ನ ಭವಿಷ್ಯತಿ' ಎಂಬಂತೆ ಮೆಚ್ಚುತ್ತಿದ್ದರು ಎಂಬುದನ್ನು ಕೇಳಿದ್ದೇನೆ. ಅದು ಎಷ್ಟರಮಟ್ಟಿಗೆ ದಿಟವೋ ಸಟೆಯೊ ನಾನು ಹೇಳಲಾರೆ.

ಮನುಜಮತ ವಿಶ್ವಪಥ, ಅಹೇತುಕ ಆತ್ಮೀಯತೆ, ಪುಟ ೮೬

೨೭೦

ನಮ್ಮ ಸಹೃದಯ ವರ್ಗಕ್ಕೆ ಬುದ್ಧಿಪೂರ್ವಕವೂ ಹೃದಯ ತೃಪ್ತಿಕರವೂ ವಿಚಾರ ಸಮ್ಮತವೂ ಆಗಿರುವ ರಸಾನುಭವದ ಸತ್ಯಸ್ವರೂಪ ಮೀಮಂಸೆಯನ್ನೊದಗಿಸಿದರೆ ನಮ್ಮ ಪ್ರಾಚೀನ ಸಾಹಿತ್ಯದ ಕಲ್ಯಾಣಕರವೂ ಆಹ್ಲಾದಕರವೂ ಆಗಿರುವ ಶಕ್ತಿ ನಮ್ಮ ಜನತೆಯ ಆತ್ಮಶ್ರೀಗೆ ಅಮೃತವಾಗಿ ಒದಗುತ್ತದೆ; ಮತ್ತು ಮುಂಬರುವ ಸಾಹಿತ್ಯ ಸೃಷ್ಟಿ ಅಜೀರ್ಣ ಅಥವಾ ಅರ್ಧಜೀರ್ಣವಾದ ಅಪೂರ್ಣದೃಷ್ಟಿಯ ಪಂಗುತತ್ತ್ವ ಗಳ ಮೇಲೆ ಒಲೆಯುವ ಸಿದ್ಧಾಂತಗಳನ್ನಾಶ್ರಯಿಸಿ ನಿಸ್ಸತ್ವವಾಗುವುದೂ ತಪ್ಪುತ್ತದೆ.

ರಸೋ ವೈ ಸಃ, ರಸಾನುಭವದ ಅಲೌಕಿಕತೆ, ಪುಟ ೨೭

೨೭೧

ಕವಿಯ ಸ್ವರೂಪದಲ್ಲಿ ಕಾವ್ಯಕ್ಕೆ ಅತೀತವಾಗಿ ಇರುವ 'ದರ್ಶನ'ವೆ ಕಾವ್ಯ ಪ್ರತಿಮೆಯಲ್ಲಿ ರೂಪುವೆತ್ತು, ಅದರಲ್ಲಿ ಅಂತರ್ಯಾಮಿಯಾಗುವ ದೇವತಾತ್ಮ. ಆ ಆತ್ಮವು ಅಂತರ್ಯಾಮಿಯಾಗದ ಪ್ರತಿಮೆ ಎಂತಹ ನಿಪುಣ ಕೃತಿಯಾಗಿದ್ದರೂ ಅದು ಬರಿಯ ವಿಗ್ರಹ ಮಾತ್ರ. ತನಗೇ ಚಿರಚೇತನವಿಲ್ಲದಿರುವಾಗ ತನ್ನೆಡೆಗೆ ಬರುವವರಿಗೆ ಅದೆಂತು ಚೈತನ್ಯದಾನ ಮಾಡಬಲ್ಲುದು? ಶಾಶ್ವತ ದರ್ಶನದಿಂದ ದೀಪ್ತವಾಗದ ಕೃತಿಗೊಂಬೆಯಂತೆ ತಾತ್ಕಾಲಿಕ ಮನರಂಜನೆಗೆ ಕಾರಣವಾಗ ಬಹುದಾದರೂ

ಅದರಿಂದ ಶಾಶ್ವತ ಫಲವಾಗಲಿ ಚಿರಸ್ಫೂರ್ತಿಯಾಗಲಿ ಲಭಿಸುವುದಿಲ್ಲ. ಅಂತಹ ಕೃತಿ ಅಮರ ಕಾವ್ಯವಾಗಲಾರದು.

ತಪೋನಂದನ, ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ, ಪುಟ ೧೨೫

೨೭೨

ನೆಲದ ಸಿರಿ ತಾನ್ ಒಲುಮೆಗೋಸುಗವಲ್ತೆ ? ಕೊಂದದಂ
ಸಿರಿಗರಸರಾಗೆ ಮರುಭೂಮಿಯೊಡೆತನಮಲ್ತೆ ?

ಶ್ರೀ ರಾಮಾಯಣ ದರ್ಶನಂ, ಪಾದುಕಾ ಕಿರೀಟಿ, ಪಾತ್ರ ರಾಮ, ಪುಟ ೧೭೦-೧

೨೭೩

ಯಾರೊ ಮಾಡಿದ ಮನೆಯು
ನಮಗೆ ಸೆರೆಯಹುದೆಂದು
ನಾವು ಮಾಡಿದ ಸೆರೆಯೆ
ಮನೆಯಪ್ಪುದೇನು ?
ಯಾರೊ ಕಟ್ಟಿದ ನೇಣು
ಸಂಕೋಲೆಯಾಗುವೊಡೆ
ನಾವು ಸುತ್ತಿದ ಮಣಿಯು
ಜನಿವಾರವೇನು ?

ಷೋಡಶಿ, ರಸಋಷಿ, ಪುಟ ೭೪

೨೭೪

ಹಾ ! ಹೊಟ್ಟೆಗಿಲ್ಲದ ಅನ್ನ
ಬಡಜನರು ಸಾಯುತಿರೆ, ರಸಗಂಧವನು ತೋರೆ
ತಣಿವಹುದೆ ?

ಕೃತ್ತಿಕೆ, ಕ್ರಾಂತಿಕಾಳಿ, ಪುಟ ೬೩

೨೭೫

ಅವತಾರ, ಮಹರ್ಷಿ, ಯೋಗಿ, ಸಿದ್ಧಗುರು ಇವರು ಸಚ್ಚಿದಾನಂದರ ಸತ್ಯ ಮತ್ತು ಶಿವಾಂಶಗಳನ್ನೇ ಪ್ರಧಾನ ಲಕ್ಷ್ಯವಾಗಿಟ್ಟುಕೊಳ್ಳುವುದರಿಂದ ಅವರು ಗೌರವಾರ್ಹ ರಾದರೂ ಪೂಜಾರ್ಹರಾದರೂ ಮಧುಲೋಲ ಪ್ರಿಯವಾದ ನರ ಚೈತನಕ್ಕೆ ಆಕರ್ಷಣೀಯವೂ ರಮಣೀಯವೂ ಆಗಿ ರುಚಿಸುವುದು ಕಷ್ಟ.

ವಿಭೂತಿ ಪೂಜೆ, ಕವಿಯಲ್ಲಿ ವಿಭೂತಿ, ಪುಟ ೫

೨೭೬

ಗುಡಿಯೊಳಗೆ ಕಣ್‌ಮುಚ್ಚಿ ಬೆಚ್ಚಗಿರುವರನೆಲ್ಲ,
ಭಕ್ತ ರಕ್ತವ ಹೀರಿ ಕೊಬ್ಬಿಹರನೆಲ್ಲ,

ಗಂಟೆ ಜಾಗಟೆಗಳಂ ಬಡಿದು, ಕುತ್ತಿಗೆ ಹಿಡಿದು
ಕಡಲಡಿಗೆ ತಳ್ಳಿರೈ ಶಂಖದಿಂ ನುಡಿದು !

ಪಾಂಚಜನ್ಯ, ಇಂದಿನ ದೇವರು, ಪುಟ ೩೯

೨೭೭

ಒಲಿದೆದೆಗ-
ಳೆಂದಿಗೂ ಅಗಲಲಾರವು ಎಂಬುದಿದು ವಿಶ್ವ-
ನಿಯಮ.

ಯಮನಸೋಲು, ಪಾತ್ರ ಸಾವಿತ್ರಿ, ಪುಟ ೩೪

೨೭೮

ಹಾ, ಜೀವನದೊಳೆನಿತೆನಿತು
ದ್ವೇಷ ನಿಷ್ಠುರ ವೈರ ಕಷ್ಟಗಳಿಗೆಲ್ಲಮಾ
ಪ್ರೇಮವೇ ಪಿತಾಮಹನ್ ?

ಶ್ರೀ ರಾಮಾಯಣ ದರ್ಶನಂ, ಅಗ್ನಿಯಾತ್ರೆ, ಪುಟ ೧೩೪

೨೭೯

ಬಹಿಃಕ್ರಾಂತಿ ಸೋಲ್ತಡೇಂ
ಗೆಲ್ವುದಂತಃಕ್ರಾಂತಿ ತುದಿಗೆ !

ಶ್ರೀ ರಾಮಾಯಣ ದರ್ಶನಂ, ಸಾಗರೋಲ್ಲಂಘನಂ, ಪುಟ ೪೨೮

೨೮೦

ಜನ ಕಂಡರೆ ಜನ ಹೆದರಿದೆ ;
ಎಲ್ಲೆಲ್ಲಿಯೂ ಸಂದೇಹ !
ಶಾಂತಿಯ ಪರದೆಯ ಹಿಂಗಡೆ
ಕ್ರಾಂತಿಯ ರಣ ಸನ್ನಾಹ !
ನರ ನೀಚತೆ ಮಾರೀಚತೆ
ದೇಶಪ್ರೇಮದ ನೆವದಿ
ದಂಷ್ಟ್ರಾಶ್ರಿತ ರಾಷ್ಟ್ರಂಗಳ
ಅಸು ಹಿಂಡುತ್ತಿದೆ ಜವದಿ !

ಅಗ್ನಿಹಂಸ, ಶತಮಾನ ಸಂಧ್ಯೆ, ಪುಟ ೮೪

೨೮೧

ಕೆಲವು ಹಳದಿ ಪತ್ರಿಕೆಗಳಿವೆ. ಅವಕ್ಕೆ ಅದೇ ಕಸುಬು. ಹೀಗೆ ಒಂದು ಸಣ್ಣದನ್ನು ತೆಗೆದುಕೊಂಡು ದೊಡ್ಡದು ಮಾಡಿ ಹಾಳುಮಾಡುವುದು. ಅಂತೂ ಅದು ಆಯಿತು. ಬರೀ ಪತ್ರಿಕೆಗಳನ್ನು ಟೀಕೆ ಮಾಡಿದರೆ ಆಗಲಿಲ್ಲ. ಆ ಪತ್ರಿಕೆಗಳನ್ನು ಓದಿ ಅದರಿಂದ ಪ್ರಭಾವಿತರಾದಂತಹ ಈ ಮಹನೀಯರಿದ್ದಾರಲ್ಲಾ ಅವರೂ ಅದೇ

ಹಳದಿ ಮೆದುಳಿನವರೆ! ಅವರು ಹಳದಿ ಮೆದುಳಿನವರಾದ್ದರಿಂದಲೇ ಪತ್ರಿಕೆ ಹಾಗೆಲ್ಲ ಮಾಡಿತು. ಬರೀ ಪತ್ರಿಕೆ ಏನು ಮಾಡುತ್ತದೆ? ಇವರ ಮೆದುಳೂ ಹಳದಿಯಾಗಿರುವುದರಿಂದ ಆ ಹಳದಿ ಬಣ್ಣದ ಸಹಾಯ ತೆಗೆದುಕೊಂಡು ಆ ಕೆಲಸ ಮಾಡಿತು, ಅಷ್ಟೆ

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ! ಪುಟ ೬೪-೫

೨೮೨

ಬ್ರಹ್ಮದ ಪ್ರತೀಕವಾದ ಸಮಸ್ತ ಜಗತ್ತೇ-"ನಾನು" ಎಂಬ ಭಾವವನ್ನು ಒಳಕೊಂಡು-ಅಪ್ರತಿಹತವಾದ ಮಹಾಮೂರ್ತಿಯಾಗಿರಲು ಅದನ್ನು ಒಡೆಯುವವನೇ ನಿಜವಾದ ವಿಗ್ರಹ ಭೇದಕನು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೫೧

೨೮೩

ಮೊದಲು ನಿಮ್ಮ ನಿಮ್ಮ ಹೃದಯಗಳನ್ನೆ ಶೋಧಿಸಿಕೊಳ್ಳಬೇಕು. ಶತಮಾನಗಳ ಬೋಧನೆ ಮತ್ತು ನಂಬಿಕೆಗಳ ಫಲವಾಗಿ ನಿಮ್ಮ ವಿಚಾರ ಶಕ್ತಿಯೆ ಕುಂಠಿತವಾಗಿ ಹೋಗಿದೆ.

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೨

೨೮೪

ನಮ್ಮಲ್ಲಿ ಅನೇಕರು ಸದ್ಯಃಫಲಾಕಾಂಕ್ಷಿಗಳು. ದೀರ್ಘಕಾಲ ಸಾಧನೆ ಮಾಡುವ ತಾಳ್ಮೆಯಿಲ್ಲ, ದೃಢ ಚಿತ್ತವಿಲ್ಲ. ಸತ್ಕರ್ಮ ಸತ್ಫಲವನ್ನು ತಂದೇ ತರುತ್ತದೆ ಎಂಬ ಶ್ರದ್ಧೆಯಿಲ್ಲ....ಮಹಾಫಲಕ್ಕೆ ಹೆಚ್ಚು ಕಾಲವೂ ಹೆಚ್ಚು ಸಾಧನೆಯೂ ಬೇಕಾಗುತ್ತದೆ. ಆದ್ದರಿಂದ ಅಲ್ಪ ಕಾಲದಲ್ಲಿ ಫಲ ಲಭಿಸದಿದ್ದರೆ ಹತಾಶರಾಗದೆ ಮುಂದುವರಿಯುವ ಉಕ್ಕಿನಂತಹ ಚಿತ್ತದಾರ್ಢ್ಯವನ್ನು ನಾವು ಸಂಪಾದಿಸಬೇಕು. ನಮ್ಮ ಉತ್ಸಾಹ ಹುಲ್ಲಿನ ಬೆಂಕಿಯಾಗಬಾರದು ; ಕಲ್ಲಿದ್ದಲ ಕಾವಾಗಬೇಕು.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೧೩

೨೮೫

ನಮ್ಮೀ ಪೃಥ್ವಿಯ ಸುಂದರ ವದನವು ಮಾನವನ ಈರ್ಷ್ಯಾದ್ವೇಷಗಳಿಂದಲೂ ಸಂಕುಚಿತ ಬುದ್ಧಿ ಮತಭ್ರಾಂತಿಗಳಿಂದಲೂ ತಾಡಿತವಾಗಿ ಕುರೂಪವಾಗಿದೆ. ಮಾನವನ ಉನ್ಮಾದಾಗ್ನಿಯಿಂದ ಭೂದೇವಿಯ ಎದೆ ಬೆಂದು ಹೋಗಿದೆ. ಶ್ರೀರಾಮಕೃಷ್ಣರ ಸಮನ್ವಯ ಸಂದೇಶವನ್ನು ಸ್ವೀಕರಿಸಿದಲ್ಲದೆ ಜಗತ್ತಿಗೆ ಶಾಂತಿಯಿಲ್ಲ. ವ್ಯಕ್ತಿಶಃ ಅಲ್ಲದಿದ್ದರೂ ತತ್ತ್ವಶಃ ಆಗಿಯಾದರೂ ಶ್ರೀರಾಮಕೃಷ್ಣರು ನವಯುಗದ ದೇವಮೂರ್ತಿ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨೪೦

೨೮೬

ಪುರಾತನವೆಂದರೆ ಪೂಜ್ಯವಾದುದು ಎಂಬ ಭಾವವು ಮಾನವ ವರ್ಗಕ್ಕೆ ಸರ್ವಸಾಧಾರಣವಾಗಿದೆ. ಏಕೆಂದರೆ ಹಳೆಯದು ಕಾಲದೃಷ್ಟಿಯಿಂದ ದೂರವಾದುದೂ ಹೌದು,

ತೀರಿ ಹೋದುದೂ ಹೌದು. ಮೃತನಾದವನಲ್ಲಿದ್ದ ದುರ್ಬಲತೆ ದುರ್ಗುಣ ಗಳನ್ನೆಲ್ಲ ನಿರ್ಲಕ್ಷಿಸಿ, ಉತ್ತಮ ಗುಣಗಳನ್ನೆ ದ್ವಿಗುಣ ಮಾಡಿ ಪ್ರಶಂಸಿಸುವಂತೆ, ಪುರಾತನದಲ್ಲಿರುವ ಕಾಳಿಕೆಯನ್ನೂ ಅದರಲ್ಲಿರುವ ಹೊನ್ನಿನೊಡನೆ ಬೆರೆಸಿ ಆರಾಧಿ ಸುವುದು ಸಾಮಾನ್ಯ ಜನ ಮನದ ಪದ್ಧತಿ, ಮೋಹ ಅಥವಾ ಭ್ರಾಂತಿ. ಧರ್ಮ ಗ್ರಂಥಗಳ ಮತ್ತು ಧಾರ್ಮಿಕ ವ್ಯಕ್ತಿಗಳ ವಿಚಾರದಲ್ಲಿ ಈ ಭ್ರಾಂತಿ ಮೇರೆ ಮೀರಿರುತ್ತದೆ.

ಇತ್ಯಾದಿ, ಉಪನಿಷತ್ತಿನ ಋಷಿಯ 'ದರ್ಶನ', ಪುಟ ೬೬-೭

೨೮೭

ನಿನ್ನೆದೆ ಸೋಲೆ
ಸೃಷ್ಟಿ ಸೌಂದರ್ಯಕದೆ ಅಮೃತಗಂಗಾಸ್ನಾನ !

ಕೃತ್ತಿಕೆ, ಕವಿಶೈಲ-೨, ಪುಟ ೯

೨೮೮

ಮಲೆನಾಡಿನಲ್ಲಿ ಮಳೆಯಿದೆ, ಬೆಳೆಯಿದೆ. ಆದರೆ ಅನೇಕ ಮನೆತನಗಳ ಜೀವನ ನೆಮ್ಮದಿಯಾಗಿಲ್ಲ. ಯೋಗ್ಯ ವಸ್ತುಗಳಿಗಾಗಿ ಧನವ್ಯಯ ಮಾಡಲು ಹಿಂಜರಿದು, ಅಯೋಗ್ಯವೂ ಅಪ್ರಯೋಜಕವೂ ಆದವುಗಳಿಗಾಗಿ ಬಹಳ ವೆಚ್ಚ ಮಾಡುವುದು ಇದಕ್ಕೆ ಮುಖ್ಯ ಕಾರಣವಾಗಿದೆ. ಕೋರ್ಟು ವ್ಯವಹಾರ, ವಿವಾಹ, ಭೂತಾರಾಧನೆ ಮೊದಲಾದ ಕರಾಳ ಪೂಜಾ ಪದ್ಧತಿಗಳು-ಇವು ಮೂರನ್ನು ಹೆಚ್ಚಾಗಿ ಗಮನಿಸಬೇಕು. ನಮ್ಮ ಸಂಪಾದನೆಯಲ್ಲಿ ಎಷ್ಟು ಭಾಗ ಕೋರ್ಟು ವ್ಯವಹಾರಕ್ಕಾಗಿ ಖರ್ಚು ಆಗುತ್ತಿದೆ ? ನಮ್ಮ ಸಾಲದಲ್ಲಿ ಎಷ್ಟು ಭಾಗ ಕೋರ್ಟು ವ್ಯವಹಾರಕ್ಕಾಗಿಯೇ ಆಗಿದೆ ? ಚೆನ್ನಾಗಿ ವಿಚಾರಿಸಿ ನೋಡಿ. ನ್ಯಾಯ ಪಡೆಯುವುದ ಕ್ಕಾಗಿ ಎಷ್ಟು ಖರ್ಚಾಗುತ್ತಿದೆ ? ಅನ್ಯಾಯ ಸಾಧನೆಗಾಗಿ ಎಷ್ಟು ಖರ್ಚಾಗುತ್ತಿದೆ ? ಮಾತ್ಸರ್ಯಕ್ಕಾಗಿಯೋ, ಛಲಕ್ಕಾಗಿಯೋ ಪ್ರತಿಹಿಂಸೆಯ ಸಲುವಾಗಿಯೋ ಜನರು "ಕೋರ್ಟು ಮನೆ ಹತ್ತಿ" ತಮ್ಮ ಮನೆ ಹಾಳಾದುದನ್ನು ಲೆಕ್ಕಿಸದೆ ದಿಗ್ವಿಜಯ ಲೋಲುಪರಾಗಿರುವುದನ್ನು ನೀವೆಲ್ಲರೂ ನೋಡಿರಬಹುದು. ನಮ್ಮಲ್ಲಿ ಸದ್ಬುದ್ಧಿ, ಸ್ನೇಹ, ಔದಾರ್ಯಗಳು ಹೆಚ್ಚಾಗುವಂತೆ ಮಾಡಿಕೊಂಡರೆ ಈ ದುಂದುವೆಚ್ಚವನ್ನು ನಿಲ್ಲಿಸಿಬಿಟ್ಟು ಮನಃ ಕಷಾಯಗಳಿಂದಾಲೂ ವಿಮುಖರಾಗಿ ಧನ್ಯರಾಗಬಹು ದೆಂಬುದು ನನ್ನ ದೃಢವಾದ ನಂಬುಗೆ. ದೇವರ ದಯೆಯಿಂದ ನಮ್ಮ ಸಂಘ ಒಂದಲ್ಲ ಒಂದು ದಿನ ನ್ಯಾಯಾಧೀಶರೂ ವಕೀಲರೂ ಮಾಡುವ ಕೆಲಸವನ್ನು ವೆಚ್ಚವಿಲ್ಲದೆ ಮಾಡಿ, ನಮ್ಮ ನಮ್ಮಲ್ಲಿ ತಲೆದೋರುವ ಭಿನ್ನಾಭಿಪ್ರಾಯಗಳಿಗೆ ಸ್ನೇಹ ಪೂರ್ವಕವಾಗಿ ತೀರ್ಪು ಕೊಡಲು ಸಮರ್ಥವಾಗಲಿ ಎಂಬುದು ನನ್ನ ಹಾರೈಕೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೨೧

೨೮೯

ಕೆಲವರಲ್ಲಿ ನಗ್ನತೆ ಹೆಚ್ಚಿದಷ್ಟೂ ನವೀನತೆ ಹೆಚ್ಚುತ್ತದೆ ಎಂಬ ಭ್ರಾಂತಿ ಮೂಡು ತ್ತಿದೆ ! ವಿಜ್ಞಾನ ಕಂಡು ಹಿಡಿದಿರುವ ಹೊಸ ಹೊಸ ಭೋಗೋಪಕರಣಗಳನ್ನೆಲ್ಲ

ಒದಗಿಸಿಕೊಳ್ಳುವುದರಲ್ಲಿ ಕೆಲವರಿಗೆ ನವೀನತೆ ಕಾಣುತ್ತಿದೆ. ಜುಟ್ಟು ಬಿಟ್ಟು ಕಚ್ಚೆ ಪಂಚೆ ಯುಟ್ಟು ಶಾಲು ಹೊದೆದಿರುವವರನ್ನು ಯಾರಾದರೂ ನವೀನರು ಎನ್ನುತ್ತಾರೆಯೆ ? ಹ್ಯಾಟು ಬೂಟು ಹಾಕಿಕೊಂಡಿರುವವರನ್ನು, ಅವನು ಸಂಪೂರ್ಣವಾಗಿ ಸಂಸ್ಕೃತಿ ಬಾಹಿರನಾಗಿದ್ದರೂ, ಅನಾಗರಿಕನಾಗಿದ್ದರೂ, ಯಾರಾದರೂ ನವೀನನಲ್ಲ ಎಂದು ಹೇಳುತ್ತಾರೆಯೆ ? ಆದರೂ, ನೂತನವೇಷಗಳನ್ನು ಹಾಕಿಕೊಂಡ ಮಾತ್ರಕ್ಕೆ ನವೀನ ಮಾನವನಾಗುವುದಿಲ್ಲ. ಸೊನ್ನೆಗೆ ಚಿನ್ನದ ಕಟ್ಟು ಹಾಕಿದ ಮಾತ್ರಕ್ಕೆ ಅದರ ಬೆಲೆ ಏರುವುದಿಲ್ಲವೆಂದು ಗಣಿತಶಾಸ್ತ್ರಜ್ಞನಿಗೆ ಗೊತ್ತು. ಷೋಕಿಯ ಟೊಳ್ಳುಗಳು ನವೀನ ಮಾನವರಲ್ಲ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೪೪

೨೯೦

ಕಡಲಿನ ಕಾಶಿಯ ಸೇರಲು ಹೋಗುವ
ಗಗನದ ಯಾತ್ರಿಕರೇನಮ್ಮಾ ?
ಸೃಷ್ಟಿ ರಹಸ್ಯವನರಿಯಲು ತಿರುಗುವ
ವಿಶ್ವದ ಕಬ್ಬಿಗರೇನಮ್ಮಾ ?

ನನ್ನ ಮನೆ, ಮೂರ್ತಿಯ ಬೆಳ್ಳುಗಿಲು, ಪುಟ ೨೧

೨೯೧

ಕಾವ್ಯಲೋಕ ಈ ಲೋಕ ಆ ಲೋಕಗಳ ನಡುವೆ ಸಂಚರಿಸುವ ಒಂದು ಯಾತ್ರಾಜಗತ್. ಅದು ಯಾತ್ರೆಯೂ ಆಗುತ್ತದೆ, ಸೇತುವೂ ಆಗುತ್ತಿದೆ. ತನ್ನ ಅತ್ಯಂತ ಮಹೋನ್ನತ ಸ್ಥಿತಿಯಲ್ಲಿ ಅದರ ಮುಡಿ ಕೈವಲ್ಯ ಸತ್ಯದ ನಿರ್ದಿಗಂತ ಸೀಮೆಯಲ್ಲಿ ಆನಂದ ವಿಹಾರಿಯಾದರೆ ತನ್ನ ಅತ್ಯಂತ ಸಾಮಾನ್ಯ ಸ್ಥಿತಿಯಲ್ಲಿ ಅದರ ಅಡಿ ಮರ್ತ್ಯಸತ್ಯದ ಮಿತವಲಯದಲ್ಲಿ ಕರ್ಮಕಾರಣ ಸಂಚಾರಿಯಾಗುತ್ತದೆ.

ತಪೋನಂದನ, ಸರೋವರದ ಸಿರಿಗನ್ನಡಿಯಲ್ಲಿ, ಪುಟ ೯೨

೨೯೨

ನಾನು ಮಲೆನಾಡಿಗನು. ಮಲೆನಾಡಮ್ಮನ ಹೊಟ್ಟೆಯಲ್ಲಿ ಹುಟ್ಟಿ, ಮಡಿಲಲ್ಲಿ ಬೆಳೆದು, ತೊಡೆಯ ಮೇಲೆ ನಲಿದು, ಆ ತಾಯಿಯ ಮೊಲೆ ಹಾಲು ಕುಡಿದು ಬೆಳೆದು ಬಂದವನು. ಮಲೆನಾಡೆಂದರೆ ನನಗೆ ಬಹಳ ಮಮತೆ. ಒಂದು ವಿಧವಾದ ಕುರುಡು ಮೋಹ ಎಂದರೂ ಎನ್ನಬಹುದು. ಮಲೆನಾಡು ಸೊಬಗಿನ ಬೀಡು ; ಸಿಡಿಲು ಮಿಂಚುಗಳ ನಾಡು ; ಸಾಲು ಸಾಲಾಗಿ ಎದ್ದಿರುವ ಬೆಟ್ಟಗಳು ; ಮಾಲೆ ಮಾಲೆಯಾಗಿ ಬೆಳೆದಿರುವ ಕಾಡುಗಳು ; ಅಲ್ಲಲ್ಲಿ ಬನ ಬೆಟ್ಟಗಳ ನಡುವೆ ಹರಿಯುವ ಹೊಳೆತೊರೆಗಳು ; ಕಾಡಿನ ಮೇಲೆ ಮಲಗುವ ಬಿಸಿಲು ಬೆಳ್ದಿಂಗಳು ; ವಿಧ ವಿಧವಾಗಿ ಇಂಚರಗೈವ ಸಾವಿರಾರು ಬಣ್ಣ ಬಣ್ಣದ ಹಕ್ಕಿಗಳು ; ಅನವರತ ಶ್ಯಾಮಲ ವನಶ್ರೇಣಿಗಳಿಂದ ಆವೃತವಾದ ಧೀರ ಸಹ್ಯಾದ್ರಿಪರ್ವತಗಳ ಕಂದರ ಮಾರ್ಗಗಳಲ್ಲಿ

ಮಂಜುಳ ನಾದದಿಂದ ಪ್ರವಹಿಸುವ ತುಂಗೆ, ಭದ್ರೆ, ಶರಾವತಿಯರು ; ಶೃಂಗೇರಿ ಮೊದಲಾದ ಪುರಾತನ ಪವಿತ್ರ ಕ್ಷೇತ್ರಗಳು ; ಗೇರುಸೊಪ್ಪೆ ಮೊದಲಾದ ದರ್ಶನೀಯ ಪ್ರಕೃತಿ ಸೌಂದರ್ಯಸ್ಥಾನಗಳು ; ಇವೆಲ್ಲವುಗಳಿಂದ ಮೋಹಿತನಾದ ನನಗೆ ಮಲೆನಾಡೆಂದರೆ ಬಹಳ ಮಮತೆ.

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೧೫–೬

೨೯೩

ಎರಡನೂ ನೀಡಿತ್ತ, ಓ ನನ್ನ ದೇವಿ
ಕೈಗೆ ಕಾಮನಬಿಲ್ಲು, ಮೈಗಿರಲಿ ಕಾವಿ !

ಕದರಡಕೆ, ಎರಡು ವರಗಳು, ಪುಟ ೭೮

೨೯೪

ವಿಕಾಸವಾದ ಬೋಧಿಸುವಂತೆ ಬಲವಾದುದು ಬದುಕುತ್ತದೆ. ಆದ್ದರಿಂದ ಸ್ವಪ್ನ ಸುಂದರ ಧ್ಯೇಯಗಳ ಸಮ್ಮೋಹಿನೀಶಕ್ತಿಗೆ ಒಳಗಾಗಿ ನಾಶವಾಗುವ ಬದಲು ಕಠೋರ ವಾಸ್ತವ ಜಗತ್ತಿನ ನಿಷ್ಕರುಣ ನಿಯಮಗಳನ್ನು ಔದಾರ್ಯಕ್ಕಿಂತಲೂ ಅತಿಶಯವಾಗಿ ಯುಕ್ತಿ ಸಾಮರ್ಥ್ಯಗಳಿಂದ ಜಯಿಸಿ ಕೃತಾರ್ಥರಾಗಿ ಸುಖಿಗಳಾಗುವುದು ಲೇಸಲ್ಲವೆ ? ವಿಶ್ವಪ್ರೇಮ, ಅಂತರರಾಷ್ಟ್ರೀಯತೆ ಮೊದಲಾದುವು ಸೋತವರ ಸನ್ನಾಹಗಳೇ ಹೊರತು ಗೆದ್ದವರ ನೀತಿಯಲ್ಲ. ಆದ್ದರಿಂದ ದೇಶಗಳು ತಮ್ಮ ತಮ್ಮ ಸುಖ ಸೌಕರ್ಯಗಳನ್ನು ಮೊದಲು ಗಣನೆಗೆ ತೆಗೆದುಕೊಂಡು ಉದ್ಧಾರವಾಗಬೇಕು. ತಮ್ಮ ಉದ್ಧಾರ ಅನ್ಯಜನಾಂಗಗಳ ವಿನಾಶವನ್ನು ಒಳಗೊಂಡಿದ್ದರೂ ಚಿಂತೆಯಿಲ್ಲ. ಏಕೆಂದರೆ ಬದುಕಲಾರದುದು ಬದುಕಬಾರದು; ಬದುಕಲರ್ಹವಲ್ಲ. ಈ ರೀತಿ ವಾದಿಸಿ ರಾಜಕೀಯ ಜನಗಳಿಗೆ ಅನ್ನದಾಸೆ ತೋರಿಸುತ್ತದೆ. ಹಸಿದವರಿಗೆ ಬೇಕಾದುದೂ ಅನ್ನ ; ಮತ, ತತ್ತ್ವ ಮತ್ತು ಕಲೆಗಳ ಕನಸಿನುಣಿಸಲ್ಲ. ಅಂತಹ ವಾಸ್ತವಾನ್ನವನ್ನು ಕೊಡುತ್ತೇನೆಂದು ಹೇಳುತ್ತಿರುವ ರಾಜಕೀಯದ ಗಂಡುತನದ ಮುಂದೆ ಕಾಣದ ಕನಸಿನ ಅಮೃತವನ್ನು ನಿರ್ದೇಶಿಸುವ ಕಾವ್ಯ ಕಲೆಗಳ ಹೆಣ್ಣುತನ ಹೆಗಲೆಣೆಯಾಗಬಲ್ಲುದೇ ?

ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೩೦

೨೯೫

ಕವಿಗಳ ಭಾಷೆಯೆ ಅಲಂಕಾರಿಕವಾದುದು ; ಅದರಲ್ಲಿಯೂ ಉಪಮಾಪೂರ್ಣವಾದುದು. ಅದರಲ್ಲಿಯೂ ಪುರಾಣಗಳನ್ನು ಬರೆದ ಕವಿಗಳು ಯಾವ ದೇಶದವರಾಗಲಿ ಯಾವ ಕಾಲದವರಾಗಲಿ ಉಪಮಾಲಂಕಾರವನ್ನು ಹೆಚ್ಚಾಗಿ ಉಪಯೋಗಿಸುತ್ತಾರೆ. ಏಕೆಂದರೆ ಉಪಮಾಲಂಕಾರವು ಮಲ್ಲಿಗೆಯ ಹೂವಿನಂತೆ ಹಗ್ಗವನ್ನು ಕೂಗ ಸಗ್ಗಕ್ಕೊಯ್ಯಬಲ್ಲುದು. ಅದು ಸಹೃದಯ ಹೃದ್ಯವಾಗಿರುವುದರಿಂದಲೂ ತತ್ಸಮಯದಲ್ಲಿ ಅಪ್ರಕೃತವಾಗಿ ಕಂಡುಬಂದರೂ ಮನೋಹರವಾದ ಇತರಾನುಭವ ಚಿತ್ರಗಳನ್ನು ಸ್ಮೃತಿಪಥಕ್ಕೆ ತಂದು, ಕಲ್ಪನೆಯನ್ನು ಸಜೀವ ಜ್ಯೋತಿ

ರ್ಮಯವಾಗಿ ಮಾಡಿ, ಆನಂದದಾಯಕವಾಗುವುದರಿಂದಲೂ ಪಾಶ್ಚಾತ್ಯ ದೇಶಗಳ ಪುರಾಣ ಕಾವ್ಯಗಳಲ್ಲಿ ಉಪಮಾಲಂಕಾರವು ಪ್ರಬಲಾಕಾರವನ್ನು ಧಾರಣೆ ಮಾಡಿ "ಮಹೋಪಮೆ" (Epic Simile) ಎಂಬ ಹೆಸರಿನಿಂದ ಎಲ್ಲರ ಆದರಣೆಗೂ ಗೌರವಕ್ಕೂ ಪಾತ್ರವಾಗಿದೆ. ನಮ್ಮಲ್ಲಿ ಆ ಮಹೋಪಮೆಯನ್ನು ಸರ್ವಾಂಶದಲ್ಲಿಯೂ ಹೋಲುವ ಉಪಮೆಗಳು ಇಲ್ಲವೆ ಇಲ್ಲ. ಆದರೂ ಅಲ್ಲಲ್ಲಿ ಮಹೋಪಮೆಯನ್ನು ನೆನಪಿಗೆ ತರುವ ಛಾಯಾಚಿತ್ರಗಳನ್ನಾದರೂ ಸಂದರ್ಶಿಸಬಹುದು, ವಿರಳವಾಗಿ.

ಇತ್ಯಾದಿ, ಉಪಮಾಲೋಲ ಲಕ್ಷ್ಮೀಶ, ಪುಟ ೨೪

೨೯೬

ವಿಭೂತಿಯೆಂದರೆ ವಿಶೇಷವಾದ ಭೂತಿ. ಭೂತಿ ಎಂದರೆ ಆಗುವಿಕೆ. ಜಗತ್ತೆಲ್ಲ ಈಶ್ವರನ ಭೂತಿಯೆ, ಎಂದರೆ ಅವನ ಆಗುವಿಕೆಯೆ. ಆದರೂ ಲೀಲಾ ಪ್ರಯೋಜನಾರ್ಥವಾಗಿ ಅವನ ಈ ಭೂತಿ ಅಥವಾ ಆಗುವಿಕೆಯಲ್ಲಿ ಗುಣ, ಶಾಂತಿ, ಶಕ್ತಿ, ವಿಕಾಸ ಪ್ರಕಾಶಾದಿಗಳಲ್ಲಿ ತಾರತಮ್ಯ ಗೋಚರವಾಗಿದೆ. ಈಶ್ವರನ ಅಥವಾ ಈಶ್ವರೀ ಶಕ್ತಿಯ ಈ ಭೂತಿ ಅಥವಾ ಆಗುವಿಕೆ ಎಲ್ಲಿ ತನ್ನ ಸಾಮಾನ್ಯ ಪ್ರಮಾಣ ಕ್ಕಿಂತಲೂ ಅಧಿಕತರವಾಗಿ ಅಥವಾ ತನ್ನ ಸಾಮಾನ್ಯ ರೀತಿಗಿಂತಲೂ ಪರತರವಾಗಿ ಕಾಣಿಸಿಕೊಳ್ಳುತ್ತದೆಯೊ ಅಲ್ಲಿ 'ವಿಭೂತಿ' ಮೂಡುತ್ತದೆ. ಎಂದರೆ ವಿಶೇಷವಾದ ಭೂತಿ ಆವಿರ್ಭವಿಸುತ್ತದೆ. ಆಗ 'ಸಾಮಾನ್ಯ ಭೂತಿ' ಈ ವಿಭೂತಿಯ ಮಟ್ಟಕ್ಕೇರಲು ಮೊದಲು ಆಶಿಸುತ್ತದೆ ; ಆಮೇಲೆ ಪ್ರಯತ್ನಿಸುತ್ತದೆ. ಆ ಆಶೆಯೆ ಪ್ರಶಂಸೆ, ಪೂಜೆ ; ಆ ಪ್ರಯತ್ನವೆ ಉಪಾಸನೆ, ಸಾಧನೆ. ಸಾಮಾನ್ಯ ಭೂತಿ ವಿಶೇಷ ಭೂತಿಯಾಗಲು ಕೈಕೊಳ್ಳುವ ಕಾರ್ಯಕ್ರಮದ ಪ್ರಪ್ರಥಮ ವಿನ್ಯಾಸವೆ ವಿಭೂತಿ ಪೂಜೆ !

ವಿಭೂತಿ ಪೂಜೆ, ಕವಿಯಲ್ಲಿ ವಿಭೂತಿ, ಪುಟ ೩

೨೯೭

ದೇಶದಲ್ಲಿ ನಡೆಯುತ್ತಿದ್ದದ್ದು ಏನು ಎಂಬುದರ ಅರ್ಥದ ಅರಿವು ಮಲೆನಾಡಿನ ಕಾಡಿನ ಮೂಲೆಯ ಹಳ್ಳಿಯಿಂದ ಬಂದಿದ್ದ ಬಾಲಕನ ಗ್ರಾಮೀಣ ಪ್ರಜ್ಞೆಗೆ ಗೋಚರವಾದ ಮೇಲೆ, ಸುಮಾರು ೧೯೨೫–೨೬ ರಿಂದ ೧೯೪೭–೪೮ ರವರಿಗೆ ನಡೆದ ಭಾರತದ ಜಗನ್ಮಹಾದ್ಭುತ ಸ್ವಾತಂತ್ರ್ಯಸಂಗ್ರಾಮದ ಚಿತ್ಸಾಗರದಲ್ಲಿ ನನ್ನ ಕವಿ ಚೇತನ ಸಮುದ್ರ ಸಂಪೂರ್ಣ ಮಗ್ನವಾಗಿಬಿಟ್ಟಿತು. ಆ ಬೃಹತ್ ಸಾಗರದ ಸಂಮಥನ ಕ್ಷೋಭೆಯಿಂದ ಉಲ್ಲೋಲಕಲ್ಲೋಲವಾದ ಮಹಾತರಂಗಗಳೆಲ್ಲ ಈ ಕವಿಚೇತನ ಸಮುದ್ರದಲ್ಲಿಯೂ ಪ್ರತಿಫಲಿತವಾಗಿ ಸಾವಿರಾರು ಕವನ ರಾಶಿ ಪುಂಜೀಭೂತವಾದುವು, ಸಾಹಿತ್ಯವೇಲೆಯಲ್ಲಿ. ಆ ಕಾಲದಲ್ಲಿ ನಡೆದ ಯಾವ ಮಹಾ ಘಟನೆಯೂ ಬಹುಶಃ ನನ್ನ ಲೇಖನಿಯಿಂದ ವಂಚಿತವಾಗಿಲ್ಲ. ವಿಭೂತಿ ಪ್ರಮಾಣದ ಯಾವ ಮಹದ್ ವ್ಯಕ್ತಿಯಾಗಲಿ ಯಾವ ಮಹತ್ ಸಂಗತಿಯಾಗಲಿ ಈ ಕವಿಚೇತನದಲ್ಲಿ ಪ್ರತಿಸ್ಪಂದಿತವಾಗದೆ ಹೋಗಿಲ್ಲ.

ಮನುಜಮತ ವಿಶ್ವಪಥ, ಬಲಾತ್ಕಾರದ ಇಂಗ್ಲಿಷ್ : ಪ್ರಚ್ಛನ್ನ ಭ್ರಷ್ಟಾಚಾರ, ಪುಟ ೭

೧೯೮

ಯಾವ ಗುರುವಾದರೇನು ? ಯಾವ ಮತಾಚಾರ್ಯನಾದರೇನು ? ನಾವು ವಿಮರ್ಶೆ ಮಾಡಲೇಬೇಕು. ವಿಮರ್ಶಿಸಲು ಹಿಂಜರಿಯಬಾರದು. ಯಾವನೋ ಒಬ್ಬ ಸಂದೇಹಾ ಸ್ಪದವಾದ ಗುರುಲಕ್ಷಣಗಳುಳ್ಳ ನಮ್ಮಂತಹ ಮನುಷ್ಯ ಪ್ರಾಣಿಯನ್ನೇ ಸಂಪ್ರದಾಯದಿಂದ ಗುರುವೆಂದು ಭಾವಿಸಿ ನಮ್ಮ ಖಾಲಿ ಖಜಾನೆಯ ದಾರಿದ್ರ್ಯದಿಂದ ಸಾಲತಂದ ಹಣವನ್ನು ಕಾಣಿಕೆ ತೆತ್ತು ಅಪಾತ್ರ ದಾನವೆಂಬ ಪಾಪಕ್ಕೆ ಭಾಜನರಾಗುವುದ ಕ್ಕಿಂತ ದರಿದ್ರ ನಾರಾಯಣನ ಸೇವೆಗಾಗಲಿ ಅಜ್ಞಾನಿ ನಾರಾಯಣನ ಪೂಜೆಗಾಗಲಿ, ಎಂದರೆ ಬಡವರ ಉದ್ಧಾರಕ್ಕಾಗಲಿ, ವಿದ್ಯಾ ಪ್ರಚಾರಕ್ಕಾಗಲಿ ಆ ಹಣವನ್ನು ಅರ್ಪಿಸುವುದು ಶ್ರೇಯಸ್ಕರವೆಂದು ಮತ್ತೆ ಮತ್ತೆ ಒತ್ತಿಯೊತ್ತಿ ಹೇಳಬೇಕಾಗಿಲ್ಲ.

ಆತ್ಮಶ್ರೀಗಾಗಿ ನಿರಕುಂಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೨೬

೧೯೯

ಕವಿ ವಿಭೂತಿಗೆ ನಮೋ ! ಕೃತಿ ವಿಭೂತಿಗೆ ನಮೋ !
ದರ್ಶನಧ್ವನಿರಸಾಮೃತ ಪಾನದಾನಂದದಿಂ
ಲೋಕಶೋಕನವಳಿಸಿ ಭುವನತ್ರಯಂಗಳಂ
ತಣಿಪ ನಂದನ ತಪೋದೀಕ್ಷೆಯ ಕೊಂಡೆಸಪ
ರಸಋಷಿಗೆ ಯೋಗಮತಿ ಸಹೃದಯ ವಿಭೂತಿಗೆ ನಮೋ !

ಶ್ರೀ ರಾಮಾಯಣ ದರ್ಶನಂ, ಅಭಿಷೇಕ ವಿರಾಡ್ ದರ್ಶನಂ, ಪುಟ ೮೮೪

೨೦೦

ಹುಚ್ಚರು ನಾವುಗಳು,
ಕೆಚ್ಚೆದೆಯಾಳುಗಳು ;
ಪೆಚ್ಚರು ನೀವುಗಳು
ನೆಚ್ಚಿನ ಮೆಚ್ಚಿಕೆಯಾಳುಗಳು !

ಷೋಡಶಿ, ಸೋಮಾರಿಯ ಹಾಡು, ಪುಟ ೩೦

೨೦೧

ಮನುಷ್ಯ ವಾಸ್ತವವಾಗಿಯೂ ಈ ಪ್ರಪಂಚದಲ್ಲಿ ಒಬ್ಬ ಪ್ರವಾಸಿ. ಅವನ ಜೀವನ ಸಮಸ್ತವೂ ಒಂದು ಪ್ರವಾಸ. ಜೀವನಯಾತ್ರೆ ಎಂಬ ರೂಢಿಯ ರೂಪಕದಲ್ಲಿ ಆ ಸತ್ಯ ಧ್ವನಿತವಾಗುತ್ತದೆ. ಅವನ ನಿವಾಸ, ನಿತ್ಯನಿವಾಸ, ದೇವರು; ಯಾವನು ಜಗನ್ನಿವಾಸ ಎಂದು ಕರೆಯುತ್ತೇವೆಯೋ ಆ ಬ್ರಹ್ಮ ಅಥವಾ ಪರಬ್ರಹ್ಮ ಅಥವಾ ಸಚ್ಚಿದಾನಂದ, ಈ ಪ್ರಪಂಚದ ಪ್ರವಾಸದಲ್ಲಿಯೂ ಜೀವ ನಿತ್ಯಸ್ವರೂಪವಾದ ತನ್ನ ನಿಜ ನಿವಾಸವನ್ನು ಹುಡುಕುತ್ತಾ ಹೋಗುವುದೆ ಅದರ ಸಹಜ ಲಕ್ಷಣ, ಹೊಳೆ ಕಡಲನ್ನರಸುತ್ತಾ ಅದರೆಡೆಗೆ ಹರಿಯುವಂತೆ. ಜೀವದ ಆ ಸಹಜಲಕ್ಷಣ ಲಕ್ಷರೂಪ ಗಳಲ್ಲಿ ಕೋಟಿ

ವಿಧಾನಗಳಲ್ಲಿ ಆಯಾ ಲೋಕಸತ್ತೆಗೆ ಅನುಗುಣವಾಗಿ ಪ್ರಕಟ ವಾಗುತ್ತದೆ, ಆಯಾ ಜೀವ ಸಂಸ್ಕಾರ ಬದ್ಧವಾಗಿ, ಬಹಿರ್ಮುಖಿ ಯಾದಾಗ ಒಂದು ರೀತಿಯಲ್ಲಿ, ಅಂತರ್ಮುಖಿಯಾದಾಗ ಮತ್ತೊಂದು ರೀತಿಯಲ್ಲಿ.

ಷಷ್ಟಿನಮನ, ತೀರ್ಥಯಾತ್ರೆ, ಪುಟ ೮೪

೩೦೨

ಏನಾದರೇನಂತೆ ? ಹಾಳಾಗಲಾ ಚಿಂತೆ !
ಎಲ್ಲ ಹಾಳಾಗುವಾ ಮುನ್ನವೇ ನಾವೊಲಿದು,
ಬಾಳ ಹಲ್ಲೆಯ ಹಿಂಡಿ, ಜೇನನೆಲ್ಲವ ಹೀರಿ,
ಮೃತ್ಯು ಬರೆ ಬಾಗಿಲಿಗೆ, ತೆರೆದದರ ಹೆಬ್ಬಾಯ್ಗೆ
ಬಿಸುಡುವಂ ! ಸತ್ತೆಸಾಯುವೆವೆ ಎಂದಿದ್ದರೂ !
ಶೂನ್ಯವಾಗುವ ಮೊದಲೆ ಒಲಿದು ನಲಿವುದೆ ಜಾಣ್ಮೆ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ನಾಸ್ತಿಕನ ಪ್ರೇಮಭಿಕ್ಷೆ, ಪುಟ ೬೨-೩

೩೦೩

ಓ ಪೂಜಾರಿ,
ಕೋಮಲ ಸುಮಗಳ ಕತ್ತನು ಕೊಯ್ದು
ಕಗ್ಗಲ್ಲಿನ ಕಗ್ಗತ್ತಲೆಗೊಯ್ದು
ಗುಡಿಯಾ ಕಲ್ಲಿಗೆ ಬಲಿಕೊಡದಿದ್ದರೆ
ಪರಮಾತ್ಮಗೆ ತೃಪ್ತಿಯೆ ಇಲ್ಲೇನು ?
ಈ ಗಿಡದೊಳೆ ರಾರಾಜಿಸುತಿದ್ದರೆ
ಶಿವಪೂಜೆಯು ಸಲ್ಲುವುದಿಲ್ಲೇನು ?
ಚೆಲುವೆಂಬುದು ಅ ಶಿವನಲ್ಲೇನು ?
ಸೌಂದರ್ಯದ ಸುಮ ನಯನವ ಕಿತ್ತರೆ
ಶಿವನಾರಾಧನೆಯಾದೀತೆ ?
ಶಿವಮುಖಚಂದ್ರಕೆ ಚೆಲುವದು ಸತ್ತರೆ
ಭುವನಕೆ ಮಂಗಳವಾದೀತೆ ?
ಬಿಡೊ ಅಲ್ಲಿರಲಿ ಆ ಹೂವು !
ನೀ ಸೃಷ್ಟಿಸಲಾರದ ಚೆಲುವಿಗೆ ನಿನ್ನಿಂದೇತಕೆ ಸಾವು ?

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಹೂವು-ದೇವರು, ಪುಟ ೭೮

೩೦೪

ಕಾವ್ಯದಲ್ಲಾಗಲಿ ಬದುಕಿನಲ್ಲಾಗಲಿ ಪಾಪಸಮರ್ಥನೆ ಕೇಡಿಗೆ ಹೆದ್ದಾರಿ. ಪಾಪಿಯಲ್ಲಿ ಅನುಕಂಪೆ ಪಾಪದಲ್ಲಿ ಮೈತ್ರಿಯಾಗಬಾರದು. ನಮ್ಮ ಪಾಪಿಯ ಅನುಕಂಪೆ ಒಮ್ಮೊಮ್ಮೆ ನಮ್ಮ ಪಾಪರುಚಿಯ ಛದ್ಮರೂಪವಾಗಿರುವುದೂ ಸಾಧ್ಯ. ಶಸ್ತ್ರ

ಚಿಕಿತ್ಸೆಗೆ ಅರ್ಹವಾದ ರೋಗದೊಡನೆ ಅನುಕಂಪೆ ತೋರಿದರೆ ದೇಶನಾಶ ಸ್ವತಃ ಸಿದ್ಧ. ನರಕಶಿಕ್ಷೆಗೆ ಅರ್ಹವಾದ ಪಾಪದೊಡನೆ ಸಹಾನುಭೂತಿಯ ಸರಸವಾಡಿದರೆ ಆತ್ಮನಾಶ ಸ್ವತಃ ಸಿದ್ಧ.

ದ್ರೌಪದಿಯ ಶ್ರೀಮುಡಿ, ಯಶೋಧರ ಚರಿತೆ....., ಪುಟ ೩೨

೩೦೫

ಮನುಷ್ಯ ಲೋಕದಲ್ಲಿ ಮತ್ತು ಮನುಷ್ಯ ರೂಪದಲ್ಲಿ ಈ ವಿಭೂತಿ ತನ್ನ ಪರಮಾವಧಿಯಲ್ಲಿ ಮೈದೋರಿದಾಗ 'ಅವತಾರ' ಎನ್ನುತ್ತೇವೆ. ಎಂದರೆ ತನ್ನ ನರರೂಪದಲ್ಲಿ 'ಅವತಾರ'ಕ್ಕಿಂತಲೂ ಅತಿಶಯತರವಾದ ಪ್ರಕಾರದಲ್ಲಿ ಆ ಭಗವದ್ ವಿಭೂತಿ ಗೋಚರಿಸುವುದಿಲ್ಲ. ಅದಕ್ಕೆ ದ್ವಿತೀಯ ಸ್ಥಾನದಲ್ಲಿ ಆ ವಿಭೂತಿ ಋಷಿ, ಯೋಗಿ, ಪ್ರವಾದಿ, ಗುರು, ಮಹಾತ್ಮಾ, ಮಹಾಕವಿ, ವರ್ಣಶಿಲ್ಪಿ, ರಸಋಷಿ, ಗಾನಯೋಗಿ, ಯುದ್ಧವೀರ, ದಾನವೀರ, ದಯಾವೀರ, ತ್ಯಾಗಿ, ಜ್ಞಾನಿ, ಭಕ್ತ, ಕರ್ಮಯೋಗಿ, ರಾಷ್ಟ್ರಭಕ್ತ ಇತ್ಯಾದಿಯಾಗಿ ನಾನಾ ಗುಣಗಳಲ್ಲಿ ವ್ಯಕ್ತಿಗನುಗುಣವಾದ ಶಕ್ತಿತಾರತಮ್ಯಗಳಿಂದ ಆವಿರ್ಭವಿಸುತ್ತದೆ.

ವಿಭೂತಿ ಪೂಜೆ, ಕವಿಯಲ್ಲಿ ವಿಭೂತಿ, ಪುಟ ೪

೩೦೬

ಗುಣವಿರುವೆಡೆ ಮತ್ಸರವೇಕೆ ?

ನವಿಲು, ಕಾಜಾಣ, ಪುಟ ೪೯

೩೦೭

ಮಹಿಮೆಯಿರುವುದು ಮಹಿಮೆ ಮೂಡುವಂದದಿ ಮಾಡೆ;
ದೊಡ್ಡದಿರುವುದು ಕಿರಿದರೆಡೆಯಲ್ಲಿ ದೊಡ್ಡತನ
ಮೊಳೆದೋರುವಂತೆ ಆದರ್ಶವನು ತೋರಿಸಲು.

ನವಿಲು, ಜೋಗ, ಪುಟ ೪೨

೩೦೮

ನೀನು ಮಾವನ ಮಗಳೆ ? ಗುರುಕರುಣೆಯಿತ್ತ ಕೃಪೆ :
ಅವನ ಆಶೀರ್ವಚನವೀ ಚೆಲ್ವು ರೂಪದಿಂ
ಬಂದೆನ್ನನೆತ್ತುತಿದೆ ಕತ್ತಲೆಯ ಕೂಪದಿಂ
ಬೆಳಕಿನೆತ್ತರಕೆ-ಎಂದೆದೆಮುಟ್ಟಿ ನಂಬಿದಪೆ !

ಜೇನಾಗುವಾ, ಪ್ರಿಯ ಸತಿಗೆ, ಪುಟ ೨೬

೩೦೯

ಆಡುವೆನು ನಾನೆನ್ನ ತಾಯ ಕೂಡೆ
ಶಾಸ್ತ್ರಗಳ ಮೂಲೆಗೊತ್ತಿ !

ನುಡಿಗೆ ಬಂದುದ ಪಾಡಿ, ಮನಕೆ ಬಂದುದ ಮಾಡಿ,
ನಲಿಯುವೆನು ನಾನೆನ್ನ ತಾಯ ಕೂಡಿ!

ಮೇಘಪುರ, ಒಡನಾಟ, ಪುಟ ೧೫

೩೧೦

ಹುಚ್ಚಿನಲ್ಲಿ ಅನೇಕ ತೆರವಿರುತ್ತದೆ. ಕೈಗೂಡದ ಬಯಕೆ ಬೆದರಿಕೆಗಳೂ ಸಮಾಜ ಮರ್ಯಾದೆಗಾಗಿ ವ್ಯಕ್ತಿ ಮನಸ್ಸಿನೊಳ್ಳಗೆ ಅದುಮಿದ ಬಯಕೆ ಬೆದರಿಕೆ ಗಳೂ ಉಲ್ಬಣಾವಸ್ಥೆಯನ್ನು ಮುಟ್ಟಿದರೆ ಹುಚ್ಚಾಗಿ ಪರಿಣಮಿಸುತ್ತವೆ. ಅವುಗಳು ತಾಳುವ ವೇಷಗಳನ್ನು ಲೆಕ್ಕ ಮಾಡುವುದಕ್ಕೂ ಸಾಧ್ಯವಿಲ್ಲ. ಸಾಧಾರಣ ತಲೆನೋವಿ ನಿಂದ ಹಿಡಿದು ಮೂರ್ಛೆರೋಗ, ಮೈಮೇಲೆ ಬರುವುದು, ದೆವ್ವ ಹಿಡಿಯುವುದು, ನಿರಂತರ ಭ್ರಾಂತಿ–ಇತ್ಯಾದಿಗಳಾಗಿ, ಆತ್ಮಹತ್ಯದವರೆಗೂ ಹೋಗಬಹುದು.

ಕಾನೂರು ಹೆಗ್ಗಡಿತಿ, ಪುಟ ೨೬೯

೩೧೧

ಪ್ರಕೃತಿ ಕವಿಪ್ರಜ್ಞೆಯನ್ನು ಮೊತ್ತಮೊದಲು ಆಕರ್ಷಿಸುವುದು ತನ್ನ ವೈಭವ ಯುಕ್ತವೂ ವೈವಿಧ್ಯಪೂರ್ಣವೂ ಆಗಿರುವ ಸೌಂದರ್ಯದಿಂದ. ಆಕೆಯ ನಾನಾ ಭಂಗಿಯ ವರ್ಣಮಯ ನರ್ತನ ಅವನ ಚೇತನವನ್ನು ಸೆಳೆಯುತ್ತದೆ. ಆ ಭಾವೋಜ್ವಲ ಆಕರ್ಷಣೆಯ ಸ್ವರೂಪವಾಗಲಿ ಉದ್ದೇಶವಾಗಲಿ ಪ್ರಯೋಜನವಾಗಲಿ ಅವನ ಮತಿಗೆ ಆಗ ಗೋಚರಿಸದಿರಬಹುದು. ಆದರೂ ಆ ರಸಾಕರ್ಷಣೆಗೆ ಸಿಲುಕಿ ಅವಶವಾಗಿ ಎಂಬಂತೆ, ಅನಿವಾರ್ಯವಾಗಿ ಎಂಬಂತೆ, ಆಸ್ವಾದನಾ ಮಧು ಸ್ರೋತದಲ್ಲಿ ತೇಲುತ್ತಾನೆ : ಆ ತಾವರೆಯ ತೇರನ್ನು ಏರುತ್ತಾನೆ; ಆ ಕಮಲ ಯಾನದ ಕಲಾ ವಿಮಾನದಲ್ಲಿ ಅನಂತ ಯಾತ್ರಿಯಾಗುತ್ತಾನೆ.... ಕ್ರಮೇಣ ಬಹಿರ್ಮುಖವಾದ ಬಹಿರಂಗ ಸೌಂದರ್ಯದ ಮೋಹಾಕರ್ಷಣೆ ಅಂತರ್ಮುಖವಾದ ಅಂತರಂಗ ಸೌಂದರ್ಯದ ಕಡೆಗೂ ತಿರುಗಿ ಉಪಾಸನಾ ರೂಪವನ್ನು ತಾಳುತ್ತದೆ. ಪ್ರಕೃತಿಯ ಅದ್ಭುತಶಕ್ತಿ, ಅತ್ಯದ್ಭುತ ರಚನಾಕೌಶಲ, ಅನಿರ್ವಚನೀಯವಾದ ಮಹೋದ್ದೇಶ, ಅಚಿಂತ್ಯವಾದ ಪರಮ ಪುರುಷಾರ್ಥ ಇತ್ಯಾದಿಗಳ ಮನನದಿಂದ ಧ್ಯಾನಗೋಚರ ವಾಗುವ ಆಕೆಯ ರೂಪ ಆಕೆಯ ಸ್ವರೂಪಸತ್ಯವನ್ನೆ ಪರಿವರ್ತನಗೊಳಿಸುತ್ತದೆ. ಹೊರ ಹೊರಗೆ ಮೃಣ್ಮಯಿಯಾಗಿ ತೋರುವವಳು, ವೈಜ್ಞಾನಿಕವಾದ ನೋಟಕ್ಕೆ ನಿಯಮ ಮಯಿಯಾಗಿ ತೋರುವವಳು, ವೇದಾಂತಿಯ ದೃಷ್ಟಿಗೆ ಚಿನ್ಮಯೀ ಶಕ್ತಿಯಾಗಿ ತೋರುವವಳು ಕವಿಪ್ರಜ್ಞೆಗೆ ಆ ಸತ್ಯಮುಖಗಳಲ್ಲಿ ಯಾವುದನ್ನೂ ಅಲ್ಲಗಳೆಯದ ಮತ್ತು ಆ ಎಲ್ಲ ಸತ್ಯಮುಖಗಳನ್ನೂ ಒಳಕೊಳ್ಳುವ ಬ್ರಹ್ಮಮಯಿಯಾಗಿ ಆನಂದ ಮಯಿಯಾಗಿ ಗೋಚರಿಸುತ್ತಾಳೆ. ಮೊದಮೊದಲು ಬಾಳುವೆಯ ಹಿನ್ನೆಲವಾಗಿ, ಬರಬರುತ್ತ ಕಾವ್ಯಕಲಾಕ್ಷೇತ್ರದ ಹಿನ್ನೆಲೆಯಾಗಿ, ಮತ್ತೆ ಮುಂಬರಿದು ಕಾವ್ಯ ರಮಣೀಯತೆಯನ್ನು ಹೆಚ್ಚಿಸುವ ಅಲಂಕಾರಸಾಧನಗಳನ್ನು ಸಮೃದ್ಧಿಯಗಿ

ಒದಗಿಸುವ ಸೊಬಗಿನ ಗಣಿಯಾಗಿ, ಅದಕ್ಕೂ ಮುಂದೆ ಹೋಗಿ ಸೂಕ್ಷ್ಮತರವಾದ 'ಧ್ವನಿ'ಗೂ ಆಧ್ಯಾತ್ಮಿಕವಾದ 'ದರ್ಶನ'ಕ್ಕೂ ಪ್ರತಿಮಾ ರೂಪಿಣಿಯಾಗುತ್ತಾಳೆ. ಅಂತಹ ಕವಿಪ್ರತಿಜ್ಞೆಗೆ 'ಪ್ರಕೃತಿಯಾರಾಧನೆಯೆ ಪರಮನಾರಾಧನೆಯಾಗುತ್ತದೆ'; 'ಪ್ರಕೃತಿ ಯೊಲ್ಮೆಯೆ ಮುಕ್ತಿಯಾನಂದ ಸಾಧನೆ' ಯಾಗುತ್ತದೆ.

ವಿಭೂತಿ ಪೂಜೆ, ಕವಿಯ ದೃಷ್ಟಿಯಲ್ಲಿ ಪ್ರಕೃತಿ, ಪುಟ ೨೭-೮

೩೧೨

ಯುಗಯುಗದಿ ಸಂಭವಿಪೆನೆಂಬ ಭಗವದ್ದಿವ್ಯಮಾ
ವಚನಮೇಂ ನರರೂಪಮಾತ್ರಕ್ಕೆ ಮುಡಿಪೆ, ಪೇಳ್ ?
ನರಸಿಂಹ ಮತ್ಸ್ಯ ಕೂರ್ಮಾದಿ ಚರಮಾ ಲೀಲೆಗೇಂ
ಪೊರತೆ ಈ ಕೃತಿರೂಪಮಾ ಭಗವದಾವಿರ್ಭಾವ
ಬಹುರೂಪ ಸೂತ್ರತೆಗೆ ? ರಾಮಂಗೆ ಮೊದಲಲ್ತೆ
ರಾಮಾಯಣಂ ? ಮುನ್ನಲ್ತೆ, ಪಿರಿದಲ್ತೆ, ಮಯ್ಯಲ್ತೆ
ಮನೆಯಲ್ತೆ ರಾಮಾಯಣಂ ? ರಾಮನಾಮದ ಮಹಿಮೆ
ರಾಮಂಗೆ ಮಿಗಲೆಂಬವೋಲೆ ರಾಮಾವತಾರಕಿಂ
ಗುರುತರಂ ತಾನ್ಯೆಸೆ ರಾಮಾಯಣಾವತಾರಂ

ಶ್ರೀ ರಾಮಾಯಣ ದರ್ಶನಂ, ಅಭಿಷೇಕ ವಿರಾಡ್ ದರ್ಶನಂ, ಪುಟ ೮೮೪

೩೧೩

ನೆಳಲಿಗೇನ್ ನಡೆಯುವವನ ತೊಂದರೆಯೆ?

ಶ್ರೀ ರಾಮಾಯಣ ದರ್ಶನಂ, ಪಾದುಕಾ ಕಿರೀಟಿ, ಪಾತ್ರ ಸೀತೆ, ಪುಟ ೧೬೭

೩೧೪

ನರತ್ವದಿಂದ ಸುರತ್ವಕ್ಕೆ ವಿಕಾಸಗೊಳ್ಳಲು ತಪಸ್ವಿಯಾಗಿರುವ ಮಾನವತೆಗೆ ಒಂದಿನಿತಾದರೂ ನೆರವಾಗುವ ಕಲೆ ದೈವೀಕಲೆ; ಅದಕ್ಕೆ ಪ್ರತಿಕೂಲವಾಗುವ ಕಲೆ ಎಷ್ಟು ಮನಮೋಹಕವಾಗಿದ್ದರೂ ಆಸುರೀಕಲೆ. ಇದುವರೆಗೆ ಪ್ರಪಂಚದ ಸಾಹಿತ್ಯದಲ್ಲಿ ದೈವೀಕಲೆಗೆ ವಿಶೇಷ ಸಹಾಯವಾಗಿ ನಿಂತಿರುವ ವಿಧಾನವೆಂದರೆ ಪ್ರತಿಮಾ ವಿಧಾನ.

ತಪೋನಂದನ, ನಾಟಕ ಕಲೆಯಲ್ಲಿ ಪ್ರತಿಕೃತಿ ಮತ್ತು ಪ್ರತಿಮಾ ವಿಧಾನಗಳು, ಪುಟ ೧೧೧

೩೧೫

ಕಲೆಯ ಭೂಮಿಕೆಯಲ್ಲಿ ಮೇಲು ಕೀಳುಗಳಿಲ್ಲ. ಅಲ್ಲಿ ಸರ್ವರೂ ಸಮ. ಅದನ್ನು ಪ್ರವೇಶಿಸಿದವರೆಲ್ಲ ಸಮ ಶ್ರೀಮಂತರೆ! ಅದನ್ನು ಹೊಕ್ಕ ಕೂಡಲೆ ಎಂಥ ಪ್ರಾಚೀನ ವೈಭವವನ್ನು ಸಂದರ್ಶಿಸುತ್ತೀರಿ; ಎಂಥ ಅದ್ಭುತ ವ್ಯಕ್ತಿಗಳ ಸಂದರ್ಶನ

ಪಡೆಯುತ್ತೀರಿ ! ಲೌಕಿಕ ಐಶ್ವರ್ಯವಿಲ್ಲದಿದ್ದರೂ ಸಾಹಿತ್ಯ ಲೋಕದ ಅನರ್ಘ್ಯ ಐಶ್ವರ್ಯದಿಂದ ನೀವು ಎಣೆಯಿಲ್ಲದ ಶ್ರೀಮಂತರಾಗುತ್ತೀರಿ.

ಷಷ್ಠಿನಮನ, ವಿದ್ಯಾರ್ಥಿ ಜೀವನವೂ ಒಂದು ತಪಸ್ಸೆ, ಪುಟ ೨೦೪

೩೧೬

ಕಾವ್ಯಸತ್ತೆ ಸ್ವಪ್ನ ಮತ್ತು ಜಾಗ್ರತ್ ಸತ್ತೆಗಳೆರಡರ ಲಕ್ಷಣಗಳನ್ನೂ ಒಳಗೊಂಡು ಅವೆರಡರ ನಡುವೆ ನಿಲ್ಲುವ ಮತ್ತೊಂದು ಪ್ರತಿಮಾ ಪ್ರಪಂಚವಾಗುತ್ತದೆ. ಎಂದರೆ ಸ್ವಪ್ನಸತ್ಯ, ಕಾವ್ಯಸತ್ಯ ಮತ್ತು ಜಾಗ್ರತ್ ಸತ್ಯ ಇವು ಮೂರೂ ಒಂದೇ ಮೂಲಾನುಭವವು ಬೇರೆ ಬೇರೆ ಭೂಮಿಕೆಗಳಲ್ಲಿ ಮೈದೋರುವ ಬೇರೆ ಬೇರೆ ಪ್ರತಿಮಾ ವಿಧಾನಗಳಾಗುತ್ತವೆ. ಅದರದರ ಪ್ರತಿಮಾಸತ್ಯ ಅದರದರ ಭೂಮಿಕೆಗೆ ಮಾತ್ರ ಅಬಾಧಿತವಾಗಿ ಅನ್ವಯವಾಗುತ್ತದೆ. ಆತ್ಮಾನುಭವ ಮಾತ್ರ ಎಲ್ಲ ಭೂಮಿಕೆಗಳಿಗೂ ಸಾಮಾನ್ಯ.

ತಪೋನಂದನ, ಪ್ರತಿಮಾ ಮತ್ತು ಪ್ರತಿಕೃತಿ, ಪುಟ ೩೫

೩೧೭

ಹೊಣೆ ನಮತು,
ನಂಟರ ಮನೆಗೆ ಹೋಗುವನ್ನೆಗಂ ; ಹೋದಂದು
ನಾನವರ ಸೆರೆಯಲ್ತೆ ಬಿರ್ದ್ದನಿಕ್ಕುವವರೆಗೆ,
ಮೇಣವರೆ ಬೀಳುಕೊಡುವನ್ನೆಗಂ ?

ಶ್ರೀ ರಾಮಾಯಣ ದರ್ಶನಂ, ಪಂಚವಟಿಯ ಪರ್ಣಕುಟಿ, ಪಾತ್ರ ಚಂದ್ರನಖಿ, ಪುಟ ೨೧೮

೩೧೮

'ಕಾವ್ಯ' ರಂಗದಲ್ಲಿಯಾದರೋ ಈ ನಾಟಕ ಕಲಾ ಸಮಯದ ಕಟ್ಟು ಕಟ್ಟಳೆಯ ಇಕ್ಕಟ್ಟಿಲ್ಲ ; ಅಲ್ಲಿ ಪ್ರತಿಭೆಯ ತಾಂಡವಕ್ಕೆ ನಾಟಕ ವೇದಿಕೆಯ ಸ್ಥಳಸಂಕೋಚವಿಲ್ಲ.

ವಿಭೂತಿ ಪೂಜೆ, 'ಶಕ್ತಿಕವಿ'ರನ್ನ, ಪುಟ ೧೩

೩೧೯

ಕರ್ಮ, ವಿಧಿ, ಈಶ್ವರೇಚ್ಛೆ–ಈ ಮೂರೂ ಅಭಿನ್ನ ; ಒಂದೇ ತತ್ವದ ಮೂರು ಮುಖಗಳು. ಕರ್ಮಫಲಸ್ವರೂಪಿಯಾದ ಈಶ್ವರೇಚ್ಛೆಯ ಮುಂದೆ ಮನುಷ್ಯೇಚ್ಛೆ ಅದರ ಗತಿಯ ಮರ್ಮ ಮಾನವನ ಅಪೂರ್ಣದೃಷ್ಟಿಗೆ ನಿಲುಕದು.

ಬೆರಳ್ ಗೆ ಕೊರಳ್, ಟಿಪ್ಪಣಿಕೆ, ಪುಟ ೬೩

೩೨೦

ಮುದ್ದುಗೆಳೆಯರ ಮೊಗದ ಮುದ್ದಿನ ಮುಗುಳ್ನಗೆಯ
ಮಾಧುರ್ಯದಂದದಲಿ ನೀ ಬರಲುಬಹುದು;

ಕಬ್ಬವೆಣ್ಣಿನ ಕಣ್ಣ ಮಿಂಚಿನೊಲ್ಲೆಯ ತೆರದಿ
ಪ್ರತಿಭೆಯಂದದಿ ಸೊಗವ ಬಳಿಗೆ ತರಬಹುದು.

ಕಲಾಸುಂದರಿ, ನೀನೆಂತು ಪೊರೆವೆಯೋ....., ಪುಟ ೫೮

೩೨೧

ತುಟಿಗೆ ತುಟಿ ಮುತ್ತಿಟ್ಟು,
ಎದೆಗೆ ಎದೆಯೊತ್ತಿಟ್ಟು,
ಆತ್ಮಕಾತ್ಮದ ಗುಟ್ಟು
ಹೊಳೆವಂತೆ ಬಿಗಿ ಕಟ್ಟು;
ಬಾ, ಬೇಗಬಾ!

ಜೇನಾಗುವಾ, ಲಲ್ಲೆ, ಪುಟ ೮

೩೨೨

ಕವಿಯ ಕಾವ್ಯಕೃತಿಯನ್ನು ಪರಿಶೀಲಿಸುವಾಗ ಅವನು ತರ್ಕಪೂರ್ವಕವಾಗಿ ಒಪ್ಪಿರುವ ತತ್ತ್ವಗಳು ನಮಗೆ ಮಾನ್ಯವಾದರೂ ಗೌಣ. ಏಕೆಂದರೆ ಕಾವ್ಯವು ಮೂಲದಲ್ಲಿ ಬುದ್ಧಿಯ ಕರ್ಮವಲ್ಲ. ಬುದ್ಧಿಯನ್ನೂ ನಿರ್ಣಯಿಸಿ ನಡಸುವ 'ದರ್ಶನ'ದ ಕರ್ಮ. ಎಂದರೆ, ಕೃತಿಯಲ್ಲಿ ಅಭಿವ್ಯಕ್ತವಾಗುವ 'ದರ್ಶನ'ದ ಪೂರ್ಣಜ್ಞಾನ ಕವಿಗೆ ಬುದ್ಧಿ ಪೂರ್ವಕವಾಗಿರಬಹುದು ಅಥವಾ ಇರದಿರಬಹುದು. ಕವಿಯ ಜೀವನದ ಖಚಿತವಾದ ಮತ್ತು ಸಂಪೂರ್ಣವಾದ ಪರಿಚಯ ಇಲ್ಲದಿರುವಾಗ (ಅದು ಕವಿಗೇ ಅಗಮ್ಯವಾಗಿರುವಾಗ ಇತರರಿಗೆ ಇನ್ನೂ ಅಗಮ್ಯ) ನಾವು ಅವನ ಕೃತಿಯಿಂದಲೇ ಅವನ 'ದರ್ಶನ'ಕ್ಕೆ ಹೋಗಬೇಕಾಗುತ್ತದೆ. ಅವನ ಕೃತಿಪ್ರತಿಯೆ ಅವನ 'ದರ್ಶನ'ಕ್ಕೆ ಅನುರೂಪಿ. ಆದ್ದರಿಂದ ಅದಕ್ಕೆ ಸಾಕ್ಷಿ. ಅವನ 'ದರ್ಶನ'ಕ್ಕೆ ಅವನ ಆತ್ಮಸಿದ್ಧಿ, ಆಧಾರ. ಆ ಆತ್ಮಸಿದ್ಧಿ ಅಥವಾ ಸಾಕ್ಷಾತ್ಕಾರ ಎಷ್ಟು ಹಿರಿದಾಗಿದ್ದರೆ ಅವನ ಕೃತಿ ಅಷ್ಟು ಮಹತ್ತಾಗುತ್ತದೆ. 'ದರ್ಶನ'ದ ಔನ್ನತ್ಯ ಕೃತಿಯಲ್ಲಿ ಶಿರವೆತ್ತಿ ಗಗನಚುಂಬಿಯಾಗುತ್ತದೆ. 'ದರ್ಶನ'ದ ವೈಶಾಲ್ಯ ಕೃತಿಯಲ್ಲಿ ಮೈದೋರಿ ವಿಶ್ವವ್ಯಾಪಿಯಾಗುತ್ತದೆ. ಕವಿಯ 'ದರ್ಶನ'ವು 'ವಿರಾಟ್' ಆದರೆ ಅವನ ಕೃತಿಯೂ 'ವಿರಾಟ್' ಆಗುತ್ತದೆ. ವಿರಾಡ್ದರ್ಶನವು ಕೃತಿಯ ವಿರಾಟ್ ಪ್ರತಿಮೆಯಲ್ಲಿ ಅವತಾರ ತಾಳುತ್ತದೆ.

ತಪೋನಂದನ, ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ, ಪುಟ ೧೨೬–೭

೩೨೩

ಓ ಒಣ ವೇದಾಂತಿ, ದುಃಖ ಮಾಯೆಯಾದರೆ ನಿನ್ನ ಜ್ಞಾನ ಮಾಯೆಗಿಂತಲೂ ಮಾಯೆ!

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೯೮

೩೨೪

ಸ್ವಾಮಿ ವಿವೇಕಾನಂದರಿಂದ "ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ" ಎಂಬ ಮಹಾಧ್ಯೇಯದಿಂದ ಸ್ಥಾಪಿತವಾದ ಶ್ರೀ ರಾಮಕೃಷ್ಣ ಮಹಾಸಂಘ ಸದ್ದು ಗದ್ದಲವಿಲ್ಲದೆ ಮೆಲ್ಲಮೆಲ್ಲಗೆ ಕ್ರಮಕ್ರಮೇಣ ತನ್ನ ಶಾಖೋಪಶಾಖೆಗಳನ್ನು ವಿಸ್ತರಿಸುತ್ತಾ ತನ್ನ ಮಾತೃಸದೃಶವಾದ ಕರುಣಾಬಾಹುಗಳಿಂದ ಪ್ರಪಂಚವನ್ನೆಲ್ಲ ತಬ್ಬುತ್ತಿದೆ. ಪ್ರತಿವರುಷವೂ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಮಹಾಸಂಘದ ಶಾಖಾ ಕೇಂದ್ರಗಳು ಸ್ಥಾಪಿತವಾಗುತ್ತಿವೆ. ಆದರೆ ಅದರ ರೀತಿಯೆ ಬೇರೆ, ನೀತಿಯ ಬೇರೆ. ಅಲ್ಲಿ ಪ್ರೀತಿ ಗಲ್ಲದೆ ಭೀತಿಗೆ ಒಂದಿನಿತೂ ಅವಕಾಶವಿರುವುದಿಲ್ಲ. ಅದು ಮತಪ್ರಚಾರ ಸಂಸ್ಥೆಯಲ್ಲ; ಧರ್ಮಪ್ರಸಾರ ಸಂಸ್ಥೆ. ಅದರ ಉದ್ದೇಶ ಇತರ ವಿದೇಶೀಯ ಮತ ಸಂಸ್ಥೆಗಳಂತೆ ಮತಾಂತರಗೊಳಿಸುವುದಲ್ಲ. ಎಲ್ಲ ಮತಗಳೂ ಭಗವಂತನೆಡೆಗೆ ಭಕ್ತನನ್ನು ಕರೆದೊಯ್ಯುವ ವಿವಿಧ ಪಥಗಳು ಎಂಬುದೆ ಅದರ ದೃಢವಿಶ್ವಾಸ. ಅಮೆರಿಕದ ಮತ್ತು ಇಂಗ್ಲೆಂಡಿನ ಕ್ರೈಸ್ತ ಮಿಶನ್ನುಗಳಂತೆಯಾಗಲಿ ಮಹಮ್ಮದೀಯ ಬೌದ್ಧಾದಿ ಪ್ರಚಾರ ಸಂಸ್ಥೆಗಳಂತಾಗಲಿ ಅದು ಮತಾಂತರಗೊಳಿಸುವ ನೆವದಿಂದ ತಮ್ಮ ಪಕ್ಷದ ಸಂಖ್ಯೆಯನ್ನು ವಿಪುಲಗೊಳಿಸುವ ಲೌಕಿಕವೂ ರಾಜಕೀಯವೂ ಆದ ಕಾರ್ಯಕ್ಕೆ ಎಂದೂ ಪ್ರವೇಶಿಸುವುದಿಲ್ಲ, ಅಲ್ಲದೆ ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿ ಎಂದರೆ, ಇತರ ವಿದೇಶೀಯ ಮಿಶನ್ನುಗಳಿಗೆ ಅವರ ದೇಶದ ಸರಕಾರವೋ ಅಥವಾ ಅವರ ಮತಾಧಿಪತಿಯೋ ಹಣವೊದಗಿಸುವಂತೆ ಶ್ರೀ ರಾಮಕೃಷ್ಣ ಮಹಾಸಂಘವು ಹಣವೊದಗಿಸುವುದಿಲ್ಲ. ಎಲ್ಲಿ ಯಾವ ಕೇಂದ್ರ ತೆರೆದರೂ ಅಲ್ಲಿಯ ಜನರ ಅಪೇಕ್ಷೆಯಂತೆ ತೆರೆಯ ಬೇಕು. ಅಲ್ಲಿಯ ಜನರೇ ಆ ಸಂಸ್ಥೆ ನಡೆಯುವುದಕ್ಕೆ ಹಣ ಒದಗಿಸಬೇಕು. ಅವರು ಬೇಕೆಂದರೆ ಇರುತ್ತದೆ; ಬೇಡವೆಂದರೆ ಹೋಗುತ್ತದೆ. ತಾಯಿಸಂಸ್ಥೆ ಹಣವೊದಗಿಸಿ ಅದರ ಆಯುಪ್ರಮಾಣವನ್ನು ಕೃತಕವಾಗಿ ಅಧಿಕಗೊಳಿಸುವ ಗೋಜಿಗೆ ಎಂದಿಗೂ ಹೋಗುವುದಿಲ್ಲ. ಈ ಎಲ್ಲ ಕಾರಣಗಳಿಂದ ಶ್ರೀ ರಾಮಕೃಷ್ಣ ಸಂಘದ ಕೇಂದ್ರೋಪಕೇಂದ್ರಗಳು ಯಾವ ಕೃತಕ ಪ್ರಚೋದನೆಯೂ ಇಲ್ಲದೆ, ಯಾವ ಲೌಕಿಕ ಪ್ರಯೋಜನದ ಉದ್ದೇಶವನ್ನೂ ಒಲ್ಲದೆ, ಸ್ವಾಭಾವಿಕವಾಗಿ, ಸಂದೇಹ ಭೀತಿ ಘರ್ಷಣೆಗಳಿಗೆ ಒಂದಿನಿತೂ ಅವಕಾಶವಿಲ್ಲದಂತೆ ಮೂಡಿ ಮಲರಿ ಬಾಳುತ್ತಿವೆ; ಬದುಕನ್ನು ಬೆಳಗಿಸುತ್ತಿವೆ.

ಷಷ್ಠಿನಮನ, ಶ್ರೀ ರಾಮಕೃಷ್ಣ ವಚನವೇದ, ಪುಟ ೯೭-೮

೩೨೫

ನವೀನ ಮಾನವನೆಂದರೆ ವರ್ತಮಾನಕಾಲದಲ್ಲಿ ಜೀವಿಸುತ್ತಿರುವಾತನು ಎಂದು ಮಾತ್ರ ಅರ್ಥವಲ್ಲ. ಯಾರ ಪ್ರಜ್ಞೆಯ ಎತ್ತರ, ಬಿತ್ತರ ಮತ್ತು ಆಳಗಳು ಪರಮಾವಧಿ ಮುಟ್ಟಿರುತ್ತವೆಯೋ; ಯಾರ ಅಪ್ರಜ್ಞೆ ಅತ್ಯಂತ ಕಡಿಮೆಯಾಗಿರುತ್ತದೆಯೋ; ಯಾರು ಸಮಷ್ಟಿ ಮನಸ್ಸಿನ ನಿಧಿಯೂ ಪ್ರತಿನಿಧಿಯೂ ಆಗಿ, ಪ್ರಾಚೀನತೆಯ ಸಾರ ಸತ್ತ್ವ ವನ್ನೂ ಹೀರಿಕೊಂಡು, ಅರ್ವಾಚೀನತೆಯ ಪ್ರಾಣರಸವನ್ನು ನಿರಂತರವೂ ಸಂಗ್ರಹಿಸಿ

ಬೆಳೆಯುತ್ತಾ, ಭೂತವರ್ತಮಾನಕಾಲಗಳ ತುದಿಯಂಚಿನಲ್ಲಿ ನಿಂತು ಬರಲಿರುವ ಕಾಲದ ಗಂಭೀರ ಪಾತಾಳದ ಕಡೆಗೆ ದೃಷ್ಟಿಯಿಡುತ್ತಾನೆಯೋ ಅಂಥವನೇ ನವೀನ ಮಾನವ ಪಟ್ಟಕ್ಕೆ ಯೋಗ್ಯನಾಗುತ್ತಾನೆ ಎಂದು ನಿರ್ಣಯಿಸಿದ್ದೇವೆ. ಅಂಥವರು ಬಹಳ ಮಂದಿ ಇರಲಾರರು. ಆದ್ದರಿಂದಲೆ, ಜನಸಂದಣಿಯ ಮಧ್ಯೆ ಇದ್ದರೂ, ನವೀನ ಮಾನವನು ಏಕಾಂತಜೀವಿ : ಬೆಟ್ಟಗಳ ನಡುವೆಯಿದ್ದರೂ ಮೇಘಚುಂಬಿಯಾದ ಶಿಖರತಪಸ್ವಿ ನೀಲಶೂನ್ಯದ ವಿಜನಸೀಮೆಯಲ್ಲಿ ಏಕಾಂಗಿಯಾಗಿರುವಂತೆ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೪೮-೯

೩೨೬

ನಿನ್ನಿಂದಲೆ ಹಿಮ್ಮೆಟ್ಟಿದೆ
ಜನ ಜನದಾ ಕುಸಂಸ್ಕೃತಿ ;
ನಿನ್ನಿಂದಲೆ ಸೆಡೆತಡಗಿದೆ
ಮನಮನದಾ ಅಸಂಸ್ಕೃತಿ.

ಇಕ್ಷುಗಂಗೋತ್ರಿ, ಮನೆಮನೆಯ ತಪಸ್ವಿನಿಗೆ, ಪುಟ ೮

೩೨೭

ಗಾನಕ್ಕೆ ಮನಸೋಲದವರುಂಟೆ ?
ಇದ್ದರವನತಿ ಪಾಪಿ. ಅವನೆದೆಯೆ ನರಕ

ಚಂದ್ರಹಾಸ, ಪಾತ್ರ ಚಂಪಕಮಾಲಿನಿ, ಪುಟ ೬೮

೩೨೮

ಕಲೆಯೂ ಮತ ತತ್ತ್ವ ವಿಜ್ಞಾನ ರಾಜಕೀಯಗಳಂತೆ ಆತ್ಮಸಾಕ್ಷಾತ್ಕಾರಕ್ಕೆ ಒಂದು ಮಾರ್ಗವೆ ಹೊರತು ಗಮ್ಯವಲ್ಲ ; ದಾರಿಯೆ ಹೊರತು ಮನೆಯಲ್ಲ. 'ದಾರಿಗಾಗಿ ದಾರಿ' ಎಂದರೆ ಎಷ್ಟು ವಿವೇಕವಾಗುತ್ತದೆಯೋ ಅಷ್ಟೆ ವಿವೇಕವಾಗುತ್ತದೆ 'ಕಲೆಗಾಗಿ ಕಲೆ' ಎಂದರೆ.

ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೩೩

೩೨೯

ಹೋಗುತಿದೆ ಹಳೆಕಾಲ, ಹೊಸಕಾಲ ಬರುತಲಿದೆ,
ಬರುತಲಿದೆ ಹೊಸದೃಷ್ಟಿ, ಹೊಸ ಬಯಕೆಗಳಲಿ.
ಹೋಗುತಿದೆ ಹಳೆಬಾಳು, ಹೊಸಬಾಳು ಬರುತಲಿದೆ,
ಬರುತಲಿದೆ ಕುದಿಗೊಂಡು ತರುಣರೆದೆಗಳಲಿ.
ತರುಣರಿರ, ಎದ್ದೇಳಿ ! ಎಚ್ಚರಗೊಳ್ಳಿ ! ಕೇಳಿ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ತರುಣರಿರ ಎದ್ದೇಳಿ, ಪುಟ ೨೬

೩೩೦

ನನ್ನ ಗುರಿ ಬರಿಯ ಶಾಸ್ತ್ರಾಧ್ಯಯನ ಮಾತ್ರವಲ್ಲ: ನನ್ನ ಜೀವನದ ವಿಕಾಸದ ಮಾರ್ಗದಲ್ಲಿ, ಅದರ ಪ್ರಯಾಣದಲ್ಲಿ ಇವುಗಳಿಂದ ಏನೇನು ಸಹಾಯ ದೊರಕೀತು, ಶಕ್ತಿ ಲಭಿಸೀತು, ದಾರಿ ಕಂಡೀತು, ವಿಘ್ನಗಳ ಅಪಸರಣವಾದೀತು–ಎಂದೆ ಮುಖ್ಯ ಆಸೆ, ಗುರಿ.

ಷಷ್ಟಿನಮನ, ಭಾರತ ವಿಶ್ವವಿದ್ಯಾನಿಲಯಗಳಲ್ಲಿ ಆಧುನಿಕ ಮನಃಶಾಸ್ತ್ರ, ಪುಟ ೧೨೯

೩೩೧

ನಾ ನಂಬಿದೆ !
ಹೇಳಿದರು ಅವರೆಲ್ಲ
ನೀನು ಬರಿ ದೊರೆಯೆಂದು.
ನಾ ನಂಬಿದೆ–
ಮಿಂಚಿಹುದು ಕಣ್ಣಲ್ಲಿ,
ಗುಡುಗಿಹುದು ದನಿಯಲ್ಲಿ,
ಕಾರ್ಮುಗಿಲು ಮೈಯಲ್ಲಿ ;
ನೀ ರುದ್ರನೆಂದು !
ಭಯ ಭಕ್ತಿ ಬೇಕೆಂದು,
ಕೈ ಮುಗಿಯಬೇಕೆಂದು ;
ನೀ ಬಂದ ಕಾಲದಲಿ
ಕಾಲ್ಗೆರಗು ಎಂದು.
ನಾ ಕಾದು ನಿಂತಿದ್ದೆ,
ಎದೆ ನಡುಗಿ ಹೆದರಿದ್ದೆ,
ಏನಂತೊ ಎಂದು :
ನೀ ಬಂದೆ ದೂರದಲಿ
ಸುಂದರಾಕಾರದಲಿ
ಶಾರದಾಕಾಶದಲಿ
ಬೆಳ್ಮುಗಿಲ ವೇಷದಲಿ.
ಚಂದ್ರಿಕೆಯ ಸೌಂದರ್ಯ,
ಚೈತ್ರ ಮಾಧುರ್ಯ !
ಮಿಂಚಿಲ್ಲ, ಗುಡುಗಿಲ್ಲ,
ಕಾರ್ಮುಗಿಲು ಇಲ್ಲ.
ನೋಡಿದರೆ ದೊರೆಯಲ್ಲ !
ನೀನೆನ್ನ ನಲ್ಲ !
ಕೈಮುಗಿಯಲಿಲ್ಲ ನಾ,
ಕಾಲ್ಗೆರಗಲಿಲ್ಲ ನಾ ;

ಬಿಗಿಯಪ್ಪಿ ಮುತ್ತಿಟ್ಟು
ನಾ ನಂಬಿದೆ !
ಮೈ ಮರೆತು ಮುತ್ತಿಟ್ಟು
ನಾ ನಂಬಿದೆ !

ಅಗ್ನಿಹಂಸ, ನಾ ನಂಬಿದೆ, ಪುಟ ೬೯–೭೦

೩೩೨

ಸಾಹಿತ್ಯ ಪ್ರಪಂಚದಲ್ಲಿ, ಮಹಾಕವಿಗಳ ಅನುಭವ ಸಾರ ಸರ್ವಸ್ವವಾದ ಅವರ ಕೃತಿಗಳಲ್ಲಿ ಮಹದ್ಭಾವಗಳೂ ಮಹದಾಲೋಚನೆಗಳೂ ನಮಗೆ ಯಥೇಚ್ಛವಾಗಿ ದೊರೆಯುತ್ತವೆ. ಆದರೆ ಅವು ಬೆನ್ನ ಮೇಲಣ ಹೇರಿನಂತಾಗದೆ ಮೈಯೊಳಗಣ ನೆತ್ತರಂತಾಗಿ ನಮಗೆ ಆಯಾಸಕರ ಮಾತ್ರವಾಗದೆ ಶಕ್ತಿದಾಯಕವಾಗಬೇಕಾದರೆ, ನಮ್ಮ ಆತ್ಮದ ಪುಷ್ಟಿಗೆ ಅಮೃತಾಹಾರವಾಗಬೇಕಾದರೆ, ರೋಮಂಥನ ಕ್ರಿಯಾ ಸ್ವರೂಪ ವಾದ ಧ್ಯಾನ ಅತ್ಯಂತ ಆವಶ್ಯಕ. ಮಹದ್ಭಾವಗಳಿಲ್ಲದಿದ್ದರೆ, ಮಹದಾಲೋಚನೆ ಗಳಿಲ್ಲದಿದ್ದರೆ ನಮ್ಮ ಧ್ಯಾನ ಕಬ್ಬು ಕೊಡದೆ ಗಾಣ ತಿರುಗಿಸಿದಂತೆ ವ್ಯರ್ಥವಾಗುತ್ತದೆ ; ಮೇವು ಮೇಯದೆ ಮೆಲುಕು ಹಾಕುವಂತೆ ನಿಷ್ಫಲವಾಗುತ್ತದೆ. ಧ್ಯಾನವಿಲ್ಲದೆ ಆತ್ಮಶ್ರೀಯ ಆವಿರ್ಭಾವವಿಲ್ಲ. ಆತ್ಮಶ್ರೀಯಿಲ್ಲದ ಇತರ ಶ್ರೀಗಳು ಅಶಾಶ್ವತ, ಅಶಾಂತಿಕರ ; ಬಹು ಬೇಗನೆ ಅರ್ಥಹೀನವಾಗಿ ನೀರಸವಾಗುತ್ತವೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ, ಪುಟ ೫೭

೩೩೩

ನಿನಗಾಗಿಯೆ ನಿನ್ನೊಲವಿಗೆ
ಇನ್ ಮೀಸಲ್ ನೀ ಬೆಳೆವ ಬೆಳೆ !
ನಿನಗಾಗಿಯೆ ನಿನ್ನೊಲವಿಗೆ
ಇನ್ ಮೀಸಲ್ ನೀ ಉಳುವ ಇಳೆ.

ಇಕ್ಷುಗಂಗೋತ್ರಿ, 'ಶ್ರೀ ಸಾಮಾನ್ಯ'ರ ದೀಕ್ಷಾಗೀತೆ, ಪುಟ ೩

೩೩೪

ಪ್ರಕೃತಿಯು ಪರಮಾತ್ಮನ ಮೈದೋರುವಿಕೆಯೇ ಹೌದು ಎಂಬುದನ್ನು ನಾವು, ಜಲವು ಆಮ್ಲಜನಕ ಜಲಜನಕಗಳೆಂಬ ವಾಯುಗಳ ರಾಸಾಯನಿಕ ಸಂಯೋಗ ದಿಂದಾದುದೆಂದು ತೋರಿಸುವಂತೆ, ಸಿದ್ಧಾಂತ ಪಡಿಸುವುದಕ್ಕಾಗುವುದಿಲ್ಲ. ಏಕೆಂದರೆ ನಾವು ನಮ್ಮ ಸಿದ್ಧಾಂತದ ಹೊರಗೆ ನಿಲ್ಲಲಾರೆವು. ಆದರೆ ಇದನ್ನು ಅರಿಯುವುದಕ್ಕೆ ಆಗುವುದಿಲ್ಲವೆ? ಎಂದು ಪ್ರಶ್ನೆಮಾಡಿದರೆ 'ಆಗುವುದು' ಎಂದು ಪ್ರತ್ಯುತ್ತರ ಕೊಡ ಬೇಕಾಗುವುದು. ಹೇಗೆಂದರೆ ? ಅನುಭವದಿಂದ, ಬರಿಯ ಅರಿವಿನಿಂದಲ್ಲ.

ಇತ್ಯಾದಿ, ಪ್ರಕೃತಿ ಸೌಂದರ್ಯ, ಪುಟ ೬

೩೩೫

ಗೆಲವೆಂದರೇನ್ ?–
ಸೋಲ್ವರ ಸಂತಾಪಂ ; ವಿಜಯಿಗಳ ಪೆರ್ಮೆ !

ಶ್ಮಶಾನ ಕುರುಕ್ಷೇತ್ರಂ, ಪಾತ್ರ ದ್ವಾಪರ, ಪುಟ ೩

೩೩೬

ಪುಣ್ಯರೇಖೆಯೆ ಕೊಂಕಿ
ಪುಟ್ಟಿತೆನೆ ಪಾಪಚಕ್ರದ ವಕ್ರತಾ ದ್ರುತಂ,
ಇಂದೊ ನಾಳೆಯೊ ಎಂದೊ ಗೆಲ್ಲದಿರ್ಪುದೆ ಋತಂ
ತನ್ನ ಮುನ್ನಿನ ಋಜುತೆವೆತ್ತು ?

ಶ್ರೀ ರಾಮಾಯಣ ದರ್ಶನಂ, ಅತ್ತಲಾ ಕಿಷ್ಕಿಂದೆಯೊಳ್, ಪುಟ ೨೯೬

೩೩೭

ಕವಿಯ ಹಕ್ಕಿನಿಂದ ನಾನು ನಿನ್ನ ಬೇಡುವೆ,
ಸ್ವಾರ್ಥಕಾಗಿ ಬೇಡೆ ನಾ–ಪ
ರಾರ್ಥಕಾಗಿ ಬೇಡುವೆ !–ಸ್ವಾ
ತಂತ್ರ್ಯದಿಂದ ಬೇಡುವೆ !
ಹೆಮ್ಮೆಯಿಂದ ಸಿಂಹದಂತೆ ಬೇಡುತಿರುವೆನು ;
ಕೃಷ್ಣರಾಜ ಕೃಷ್ಣನಂತೆ ನೀಡು ಭಿಕ್ಷವ !

ಇಕ್ಷುಗಂಗೋತ್ರಿ, ಬೆಳ್ಳಿ ಹಬ್ಬದ ಕಬ್ಬದ ಬಳ್ಳಿ, ಪುಟ ೭೩

೩೩೮

ಬ್ರಹ್ಮಸಾಕ್ಷಾತ್ಕಾರಾನುಭವವನ್ನು ಕೃಪೆಗೈಯುವ ನಿರ್ವಿಕಲ್ಪ ಸಮಾಧಿ, ಸಿದ್ಧಿ ತನಗೆ ತಾನೆ ಮಹೋನ್ನತವಾದುದು ; ಬದುಕಿನ ಕೃತಕೃತ್ಯತೆಯ ಅನುಭವವನ್ನು ಪೂರ್ಣವಾಗಿ ತಂದುಕೊಡತಕ್ಕದ್ದು. ಅದಕ್ಕೆ ಅದೇ ಪರಮ ಪ್ರಯೋಜನ. ವ್ಯಕ್ತಿಗೆ ಅದಕ್ಕಿಂತಲೂ ಹೆಚ್ಚಿನ ಅನ್ಯ ಪ್ರಯೋಜನ ಬೇರಾವುದೂ ಇಲ್ಲ. ಅದು ಪಡೆದ ಮೇಲೆ ಪಡೆಯತಕ್ಕದ್ದು ಇನ್ನೇನೂ ಇರುವುದಿಲ್ಲ. ಅದರ ಪರಮ ಮೌನ ; ಪರಮ ನೈಷ್ಕರ್ಮ್ಯ ; ಸರ್ವಕರ್ತವ್ಯ ವಿರಾಮ. ಆದ್ದರಿಂದಲೆ ಆ ಸಿದ್ಧಿಯನ್ನು ಪಡೆದ ಸಾಧಕರು ಜೀವನರಂಗದಿಂದ ಸಂಪೂರ್ಣವಾಗಿ ವಿರಕ್ತರಾಗುತ್ತಾರೆ.

ವಿಭೂತಿ ಪೂಜೆ, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪುಟ ೪೯

೩೩೯

ಭಾಷಾನುಗುಣವಾಗಿ ರಾಜ್ಯಗಳನ್ನು ವಿಂಗಡಿಸಿದಾಗಲೇ ನಮ್ಮ ಪ್ರಜಾಸತ್ತಾತ್ಮಕವಾದ ರಾಜ್ಯಾಂಗ ಈ ಪ್ರಾದೇಶಿಕ ವೈಶಿಷ್ಟ್ಯವನ್ನು ಕಾನೂನು ಬದ್ಧವಾಗಿಯೆ ಗುರುತಿಸಿದಂತಾಗಿದೆ. ಆದ್ದರಿಂದ ಆಯಾ ಭಾಷಾ ಪ್ರದೇಶದ ರಾಜ್ಯಗಳಲ್ಲಿರುವ ವಿಶ್ವವಿದ್ಯಾನಿಲಯಗಳು ಆಯಾ ಪ್ರದೇಶದ ಭಾಷಾ ಸಾಹಿತ್ಯ ಕಲಾ ಸಂಸ್ಕೃತಿಗಳಿಗೆ

ವಿಶೇಷ ಪ್ರೋತ್ಸಾಹವೀಯುವುದು ಅತ್ಯಗತ್ಯ. ಏಕೆಂದರೆ ಆಯಾ ಪ್ರಾದೇಶಿಕ ವಿಶ್ವವಿದ್ಯಾನಿಲಯಗಳು ಆ ಕೆಲಸವನ್ನು ಕೈಕೊಳ್ಳದಿದ್ದರೆ ಪ್ರಪಂಚದ ಇನ್ನಾವ ವಿದ್ಯಾಸಂಸ್ಥೆಗಳೂ ಅದನ್ನು ಕೈಕೊಳ್ಳುವುದಿಲ್ಲ.

ಮನುಜಮತ ವಿಶ್ವಪಥ, ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ, ಪುಟ ೧೯

೩೪೦

ಜನ ನೋಡದ ಮಲೆನಾಡಿನ ಕಾಡಿನ ಮುಲೆಯ
ಒಂದು ಕಿರು ಹೊದರಿನಲಿ ಮೂಡಿ, ತೆಂಗಾಳಿಯಲಿ ತಳಿರ ಹಿಂದೆ
ಬಳುಕಿ ನಲಿದು, ನಾಚುವ ಚೆನ್ನೆಯ ಚೆಲ್ವಿನ ಕೆನ್ನೆಯಲಿ
ಸುಲಿವ ಬೆಳ್ಗೆಂಪಿನ ಬಣ್ಣದ ಹೂವಿನಂತೆ ನಮ್ರ ಗರ್ವದಿಂದ
ಬಾಳುವುದನು ನನಗೆ ಕಲಿಸು, ಓ ಸೌಂದರ್ಯಯೋಗಿ !

ಕಿಂಕಿಣಿ, ಸದಸ್ಯ ನಿರಪೇಕ್ಷಣೀಯ, ಪುಟ ೧೩

೩೪೧

ಸಾಧ್ಯಾಸಾಧ್ಯತೆಯನ್ನೂ ಔಚಿತ್ಯವಿವೇಕಗಳನ್ನೂ ವಿಚಾರಪೂರ್ವಕವಾಗಿ ಪರಿಶೀಲಿಸಬೇಕಾಗುತ್ತದೆ. ಅಂತಹ ಬಹುಮುಖವಾದ ಮತ್ತು ವ್ಯಾಪಕವಾದ ಕಾರ್ಯನಿರ್ವಹಣೆಯಲ್ಲಿ ವಿಮರ್ಶಕನಿಗೆ ಒಂದು ಗಭೀರವಾದ ಮತ್ತು ವಿಶಾಲವಾದ ಪೂರ್ವಸಿದ್ಧತೆ ಬೇಕಾಗುತ್ತದೆ. ನಾನಾ ಸಾಹಿತ್ಯಗಳ ತಲಸ್ಪರ್ಶಿಯಾದ ಪರಿಚಯದ ಜೊತೆಗೆ ಮನಶ್ಶಾಸ್ತ್ರ, ತತ್ತ್ವಶಾಸ್ತ್ರ ಮತ್ತು ಯೋಗವಿಜ್ಞಾನಗಳೂ ಆತನಿಗೆ ನೆರವಾಗುತ್ತವೆ. ಕುಶಾಗ್ರ ಬುದ್ಧಿಯ ನಮ್ಮ ಪ್ರಾಚೀನ ಆಲಂಕಾರಿಕರ ಭಾರತೀಯ ಕಾವ್ಯಮೀಮಾಂಸೆಯ ಜೊತೆಗೆ ವಿಪುಲವಾಗಿ ಮತ್ತು ಪ್ರೌಢವಾಗಿ ಬೆಳೆದಿರುವ ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯ ಮತ್ತು ಕಾವ್ಯಮೀಮಾಂಸೆಯ ಜ್ಞಾನವೂ ನೆರೆಯಬೇಕಾಗುತ್ತದೆ. ಮುಂದಿನ ನಮ್ಮ ಸಾಹಿತ್ಯಜೀವನದಲ್ಲಿ ಅಧಿಕಾರಿಯಾದ ಅಂತಹ ವಿಮರ್ಶಕೋತ್ತಮನಿಗೆ ಒಂದು ಮಹತ್ತಾದ ಸ್ಥಾನವಿದೆ. ಆ ಸ್ಥಾನ ಎಂತಹ ಮಹೋನ್ನತಕವಿಯ ಸ್ಥಾನಕ್ಕೇನೂ ಕೀಳಾದುದಲ್ಲ.

ಷಷ್ಟಿನಮನ, ಸಂಸ್ಕೃತಿ ಕರ್ನಾಟಕ, ಪುಟ ೪೩-೪

೩೪೨

ಮನುಷ್ಯನ ಅಂತಶ್ಚಿತ್ತ ಸಮುದ್ರದಂತೆ ಗಭೀರವಾಗಿದೆ, ಅಪಾರವಾಗಿದೆ. ಅಲ್ಲಿ ನಡೆಯುವ ವ್ಯಾಪಾರಗಳು ನಮಗೆ ಅಗೋಚರವೆಂದು ಹೇಳಬಹುದು. ಸಮುದ್ರದ ಒಳಗೆ ಜರುಗುವ ಘಟನೆಗಳ ಪರಿಣಾಮವಾಗಿ ಇದ್ದಕ್ಕಿದ್ದಂತೆ ದ್ವೀಪಗಳೇಳುತ್ತವೆ, ದ್ವೀಪಗಳು ಮುಳುಗುತ್ತವೆ ; ನೀರು ಭೂಮಿಯನ್ನು ಕ್ರಮಿಸುತ್ತದೆ ಅಥವಾ ಭೂಮಿಯೇ ಕಡಲನ್ನು ತಳ್ಳಿದಂತಾಗಿ ನೀರು ಹಿಂಜರಿಯುತ್ತದೆ ; ತೀರವು ಕುಸಿದು ಬಿದ್ದು, ನೆಲವು ಕೊಚ್ಚಿಹೋಗುತ್ತದೆ ; ಅಥವಾ ಸಮುದ್ರತಲದ ಅನರ್ಘ್ಯರತ್ನಗಳೊಡನೆ ಅಲ್ಲಿ ವಾಸಿಸುವ ವಿಚಿತ್ರವೂ ವಿಕಾರವೂ ಭಯಂಕರವೂ ಆದ ಪ್ರಾಣಿಗಳೂ ದಡಕ್ಕೆ ಚಿಮ್ಮಿ

ಬೀಳುತ್ತವೆ. ಮೇಲೆ ನಿಂತು ನೋಡುವವರಿಗೆ ಈ ವ್ಯಾಪಾರಗಳು ಆಕಸ್ಮಿಕಗಳಂತೆ, ವಿಪ್ಲವಗಳಂತೆ, ಅದ್ಭುತಗಳಂತೆ ತೋರುತ್ತವೆ. ಆದರೆ ಭೂಗರ್ಭ ಸಮುದ್ರಗರ್ಭಗಳ ವಿಚಾರವಾದ ವಿಜ್ಞಾನವನ್ನು ತಿಳಿದ ಶಾಸ್ತ್ರಜ್ಞರಿಗೆ ಆ ವ್ಯಾಪಾರಗಳು ಅದ್ಭುತಗಳೂ ಅಲ್ಲ, ಆಕಸ್ಮಿಕಗಳೂ ಅಲ್ಲ, ವಿಪ್ಲವಗಳೂ ಅಲ್ಲ; ಸಕಾರಣವಾಗಿ ಕಾಲ ದೇಶಗಳಲ್ಲಿ ವಿಕಾಸ ಹೊಂದಿದ ಪ್ರಕೃತಿ ಘಟನೆಯ ಶಿಖರಗಳಾಗುತ್ತವೆ!

ಕಾನೂರು ಹೆಗ್ಗಡಿತಿ, ಪುಟ ೪೮೬

೩೪೩

ನಿನ್ನ ತುಟಿ ನನ್ನ ತುಟಿಯ ಸಂಧಿಸುವ
ಸ್ಥಾನದಾ ಕಂದರದಿ ಪ್ರವಹಿಸುವ ವಿಸ್ಮೃತಿಯ ವೈತರಣಿಯಲ್ಲಿ
ಜಗಜ್ಜೀವನದ ಅನಂತ ಆಪತ್ತುಗಳೆಲ್ಲ ಮುಳುಗಿ ಕರಗಿ
ಲಯವಾಗಲಿ.
ನಾನು ನೀನು ಜಗತ್ತುಗಳಳಿದು ನಮ್ಮೊಲವಿನ
ಮುತ್ತೊಂದೆ ಚಿರವಾಗಲಿ.

ಕಿಂಕಿಣಿ, ಚಿರವಾಗಲಿ, ಪುಟ ೪೯

೩೪೪

ಯಾವ ಮನೆಯಲ್ಲಿ ಪ್ರತಿದಿನವೂ ಅರ್ಧಗಂಟೆಯ ಮಟ್ಟಿಗಾದರೂ ಕಾವ್ಯ ವಾಚನವಾಗುವುದಿಲ್ಲವೊ. ಯಾವ ಮನೆಯ ಮಂದಿ ಸ್ವಲ್ಪಕಾಲವಾದರೂ ತಮ್ಮ ಮನಸ್ಸನ್ನು ಗದ್ದೆ, ಗೊಬ್ಬರ, ಹಣ, ತೋಟ ಇವುಗಳಿಂದ ಬೇರೆಮಾಡಿ ರಾಮ, ಕೃಷ್ಣ, ಧರ್ಮರಾಯ, ನಳ, ಹರಿಶ್ಚಂದ್ರ, ವ್ಯಾಸ, ವಾಲ್ಮೀಕಿ ಇತ್ಯಾದಿ ಮಹಾವ್ಯಕ್ತಿಗಳಿರುವ ಭಾವನಾ ಪ್ರಪಂಚಕ್ಕೆ ಕೊಂಡೊಯ್ಯದಿರುವರೊ, ಯಾವ ಮನೆಯಲ್ಲಿ ಜನರ ಆತ್ಮಗಳು ಪರಮಾತ್ಮನ ಪರವಾದ ಭಕ್ತಿಯನ್ನು ತುಸುವಾದರೂ ಸವಿಯದಿರುವುವೋ ಅಂತಹ ಮನೆ ಸುಡುಗಾಡಿಗಿಂತಲೂ ಕೀಳು; ಅಲ್ಲಿರುವವರು ಪ್ರೇತಗಳಿಗಿಂತಲೂ ಮೇಲಲ್ಲ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೨೯

೩೪೫

ಕವಿತೆಯೆಂಬ ಹೆಸರಿನಲ್ಲಿ ಈಗ ಯಥೇಚ್ಛವಾಗಿ ಪತ್ರಿಕೆ, ಮಾಸಪತ್ರಿಕೆ, ಪುಸ್ತಕಗಳಲ್ಲಿ ಪ್ರಕಟವಾಗುತ್ತಿರುವ ಪದ್ಯಗಳನ್ನೆಲ್ಲಾ ನಾನು ಪ್ರಶಂಸೆ ಮಾಡುತ್ತಿಲ್ಲ. ಅವುಗಳಲ್ಲಿ ಕೆಲವನ್ನು ಓದಿದರಂತೂ ಮುಖ ಮುಚ್ಚಿಕೊಳ್ಳುವಷ್ಟು ನಾಚಿಕೆಯಾಗುತ್ತದೆ. ಅದು ಅನಿವಾರ್ಯ. ಕಡಲಲ್ಲಿ ಮುಳುಗಿದವನು ಬರಿಯ ಮುತ್ತಿನ ಚಿಪ್ಪುಗಳನ್ನೇ ಮೇಲೆ ತರುವುದಿಲ್ಲ. ಮುತ್ತಿನ ಚಿಪ್ಪುಗಳ ಜೊತೆಗೆ, ಪ್ರಮಾಣದಲ್ಲಿ ಅವುಗಳಿಗಿಂತಲೂ ಹೆಚ್ಚಾಗಿ, ಕಪ್ಪೆಚಿಪ್ಪು, ಏಡಿ, ಓಡು, ಮರಳು, ಹರಳು ಎಲ್ಲವೂ ಇರುತ್ತವೆ. ಹಾಗೆಂದು ಮುತ್ತುಗಳಿಗಾಗಿ ಮುಳುಗುವುದನ್ನೇ ಬಿಡುವುಕ್ಕಾಗುತ್ತದೆಯೆ? ಒಂದು ಕವನರತ್ನ

ಕ್ಕಾಗಿ ಹತ್ತು ವ್ಯರ್ಥಪದ್ಯಗಳನ್ನು ಸಹಿಸಬೇಕಾಗುತ್ತದೆ. ಗಣಿಯಲ್ಲಿ ಒಂದು ರತ್ನಕ್ಕಾಗಿ ಎಷ್ಟು ಕಲ್ಲುಮಣ್ಣನ್ನು ಆಗೆಯಬೇಕಾಗುತ್ತದೆ!

ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೩೭

೩೪೬

ನೀನಾರೆಂಬುದನರಿಯೆಯೊ ನೀನು.
ಕೇಳೈ ನಿಜವನು ತಿಳಿಸುವೆ ನಾನು :
ಕಾಲಾತೀತನು ನೀನಾಗಿರುವೆ,
ದೇಶಾತೀತನು ನೀನಾಗಿರುವೆ,
ಜನನ ಮರಣಗಳು ಮೀರಿಹೆ ನೀನು,
ಪಾಪ ಪುಣ್ಯಗಳ ದಾಂಟಿಹೆ ನೀನು ;
ನಿನ್ನೊಳಗಡಗಿದೆ ಬ್ರಹ್ಮಾಂಡ,
ಮೂರ್ತೀ, ನೀನೇ, ಬ್ರಹ್ಮಾಂಡ!

ಮರಿವಿಜ್ಞಾನಿ, ಅಮ್ಮನಮೂರ್ತಿ, ಪುಟ ೨೩

೩೪೭

ಮಂತ್ರಿತ್ವ ವಹಿಸಿಕೊಳ್ಳುವ ಕಾಲನಿರ್ಣಯ ಮಾಡುವವನು ಜ್ಯೋತಿಷಿ; ವಿಮಾನ ಏರುವ ಮುಹೂರ್ತವನ್ನು ಇಟ್ಟುಕೊಡುವವನು ಜ್ಯೋತಿಷಿ; ಕೊನೆಗೆ ವಿಮಾನ ಹಾರುವ ಸಮಯ ಹೊತ್ತು ಗೊತ್ತುಮಾಡುವುದು ಇವನ ಕೈಲಿರದಿದ್ದರೆ, ಜೋಯಿಸನ 'ನಿಮಿತ್ತ'ಕ್ಕೆ ಶರಣಾಗಿ, ತನ್ನ ನಿವಾಸದಿಂದಾದರೂ ಆ ಸಮುಹೂರ್ತಕ್ಕೆ ಹೊರಡದಿದ್ದರೆ ಆತನ ಮನಸ್ಸಿಗೆ ನೆಮ್ಮದಿ ಇಲ್ಲ. ತನ್ನ ಅವಿವೇಕದಿಂದ ಏನಾದರೂ ಕೆಟ್ಟುದಾದರೆ, ಸರಿ, ಹೊರಟ ಗಳಿಗೆಯ ಮೇಲೆ ಹೊರೆ ಹೇರುತ್ತಾನೆ! ಅಧ್ಯಾಪಕ, ಅಧಿಕಾರಿ, ಮಂತ್ರಿ, ವ್ಯಾಪಾರಿ, ಮಠಾಧಿಪತಿ, ಶ್ರಮಜೀವಿ, ಕೂಲಿ, ಕಡೆಗೆ ಕಳ್ಳ– ಎಲ್ಲರಲ್ಲಿಯೂ ಎಲ್ಲೆಲ್ಲಿಯೂ ಇಂತಹ ಅವೈಜ್ಞಾನಿಕತೆ ಮತ್ತು ಅವಿಚಾರತೆ ವ್ಯಾಪಿಸಿ ವರ್ಧಿಸುತ್ತಿರುವುದನ್ನು ಸಂಕಟದಿಂದ ನೋಡುತ್ತಿರಬೇಕಾಗಿದೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮೂರನೆಯ ಮುದ್ರಣಕ್ಕೆ ಮುನ್ನುಡಿ, ಪುಟ ೭

೩೪೮

ಅಸಂಖ್ಯ ರಾಗಾನುರಾಗಗಳ ವಿಶ್ವವರ್ಣಶಿಲ್ಪಿಯೆ,
ನಿನ್ನ ಇಂದ್ರಜಾಲದ ಸೌಂದರ್ಯವನ್ನು ಮಾತಿಲ್ಲದೆ
ಅನುಭವಿಸುವುದನು ನಮಗೆ ಕಲಿಸು.

ಕಿಂಕಿಣಿ, ಭಗವನ್ ಮೌನ, ಪುಟ ೧೦

೩೪೯

ಅಪಾರ್ಥಿವ ಪುರುಷರ ವಿಷಯದಲ್ಲಿ ಅಪಾರ್ಥಿವ ಅದ್ಭುತಗಳು ಜರುಗುವುದರಲ್ಲಿ ವಿಶೇಷವೇನಿದೆ ?

ಸ್ವಾಮಿ ವಿವೇಕಾನಂದ, ಪುಟ ೨೦

೩೫೦

ಲೋಕರಂಗದಲ್ಲಿ ಸತಿ ;
ನಿತ್ಯದಲ್ಲಿ ಭಗವತಿ !
ಇಲ್ಲಿ ನಿನಗೆ ತೊಟ್ಟಿಲಲ್ಲೆ
ನಾನೆ ಇಟ್ಟ,
ನಾನೆ ಕೊಟ್ಟ
ಹೆಸರು : (ಹೇಳಿಬಿಡಲೆ, ನಲ್ಲೆ ?)
ಹೇ. ಮಾ. ವ. ತಿ !

ಅನುತ್ತರಾ, ನಿತ್ಯದಲ್ಲಿ ಭಗವತಿ, ಪುಟ ೩೦

೩೫೧

ಹನಿಯನ್ನು ಹೊತ್ತು ಮುತ್ತನ್ನು ಹೆರುವ ಶುಕ್ತಿಕೆಯ ಋಣ ಅದರ ದೋಷವಲ್ಲ, ಸರ್ವರೂ ಹೃತ್ಪೂರ್ವಕವಾಗಿ ಹಾರೈಸಿ ಹರಸಬೇಕಾದ ದಿವ್ಯಗುಣ, ಮತ್ತು ಅದರ ಸ್ವಧರ್ಮ ಲಕ್ಷಣ.

ವಿಭೂತಿ ಪೂಜೆ, 'ಶಕ್ತಿಕವಿ' ರನ್ನ ಪುಟ ೧೧

೩೫೨

ಇಂಗ್ಲಿಷಿನ ಸ್ಥಾನದಲ್ಲಿ ಹಿಂದಿಯನ್ನು ತಂದು ಕೂರಿಸಬೇಕೆಂಬುದು ಹಿಂದಿವಾದಿಗಳ ಸಂಚು. ಇದನ್ನು ಕನ್ನಡಿಗರು ಪ್ರತಿಭಟಿಸಿ ವಿಫಲಗೊಳಿಸಬೇಕು. ಕೇಂದ್ರ ಸರ್ಕಾರವನ್ನು ಮೆಚ್ಚಿಸುವುದಕ್ಕಾಗಿ ರಾಜ್ಯಸರ್ಕಾರ ಹಿಂದಿ ವಿಶ್ವವಿದ್ಯಾನಿಲಯ ಸ್ಥಾಪನೆಯೇ ಮುಂತಾದ ಅವಿವೇಕದ ಕಾರ್ಯಗಳಿಗೆ ಕೈಹಾಕಿ ಕನ್ನಡಿಗರ ಹಿತವನ್ನು ಬಲಿಕೊಡಬಾರದು. ಈ ವಿಷಯದಲ್ಲಿ ಹೆಜ್ಜೆ ಹೆಜ್ಜೆಗೂ ಎಚ್ಚರಬೇಕು ; ಒಂದು ಕ್ಷಣ ಕಣ್ಣು ಮುಚ್ಚಿಕೊಳ್ಳುವ ತಪ್ಪಿಗೆ ಯುಗ ಯುಗಗಳ ಅಂಧಕಾರ ಫಲವನ್ನು ಅನುಭವಿಸಬೇಕಾದೀತು.

ವಿಚಾರ ಕ್ರಾಂತಿಗೆ ಆಹ್ವಾನ, ಕರ್ಣಾಟಕ : ಇಟ್ಟ ಹೆಸರು ಕೊಟ್ಟ ಮಂತ್ರ, ಪುಟ ೯೨–೩

೩೫೩

'ವೇದ' ಎಂದರೆ ನಿತ್ಯಜ್ಞಾನ. ಅದು ಸನಾತನ. ಅದು ಅಪೌರುಷೇಯ . ಅಂದರೆ ಯಾವ ಮಾನವವ್ಯಕ್ತಿಯಿಂದಲೂ ಹುಟ್ಟಿಬಂದುದಲ್ಲ. ಮನುಷ್ಯತ್ವ ಹುಟ್ಟುವುದಕ್ಕೆ ಮೊದಲು ಅದು ಇತ್ತು, ಮನುಷ್ಯತ್ವ ಹೋದಮೇಲೆಯೂ ಅದು ಇರುತ್ತದೆ. ಅಂದರೆ 'ಲೋಕ'ಕ್ಕೆ ಪೂರ್ವದಲ್ಲಿಯೂ ಇತ್ತು ; 'ಲೋಕ'ದ ಅನಂತರವೂ ಇರುತ್ತದೆ. 'ವೇದ' 'ಲೋಕ'ಕ್ಕೆ ಅವತರಿಸುವಾಗ ಯಾವನಾದರೊಬ್ಬ ಮನುಷ್ಯಪಾತ್ರದ ಮೂಲಕವಾಗಿಯೆ ಹೊಮ್ಮುತ್ತದೆ. ಅಂತಹ ಮನುಷ್ಯ ನೀರನ್ನು ಹರಿಯಿಸುವ ಒದಗೆಯೆ ಹೊರತು ಅದನ್ನು ಸೃಷ್ಟಿಸುವವನಲ್ಲ. ಅವನು ಪ್ರಣಾಳಿಕಾ ರೂಪ ಮಾತ್ರ. ಅಂತಹನನ್ನು ಋಷಿ, ಕವಿ, ದ್ರಷ್ಟಾರ ಎಂದೆಲ್ಲ ಕರೆಯುತ್ತೇವೆ.

ಷಷ್ಟಿನಮನ, ಶ್ರೀ ರಾಮಕೃಷ್ಣ ವಚನವೇದ, ಪುಟ ೧೦೩–೪

೩೫೪

ಒಂದು ಚಳವಳಿಯ ರೂಪದಿಂದ, ಉದ್ರೇಕದಿಂದ ಯಾವುದನ್ನಾದರೂ ಮಾಡಲು ಹೊರಟರೆ ಅದು ಶಾಶ್ವತವಾಗಿ ಸಫಲವಾಗುವುದು ಕಷ್ಟವಾಗುತ್ತದೆ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೪೮

೩೫೫

....ಗಾಂಧೀಜಿಯನ್ನು ಕೈ ಬಿಟ್ಟೆವು ಎಂದಾಗಬಾರದೆಂದು ಅವರ ಧ್ಯೇಯಗಳನ್ನು ಮ್ಯೂಸಿಯಂಗಳಲ್ಲಿ ಪ್ರದರ್ಶನಕ್ಕಿಟ್ಟೆವು : ಅಂದರೆ ಆ ಧ್ಯೇಯಗಳ ಜೀವ ತೆಗೆದು, ಜೀವವಿದ್ದರೆ ಅವುಗಳಿಂದ ತೊಂದರೆಯಾಗಬಹುದೆಂಬ ಮುಂದಾಲೋಚನೆಯಿಂದ ಅವುಗಳನ್ನು ಕೊಂದು, ಚರ್ಮ ಸುಲಿದು, ಹದ ಹಾಕಿ, ಪ್ರದರ್ಶನ ಮಂದಿರಗಳನ್ನು ಕಟ್ಟಿಸಿಟ್ಟೆವು. ಅವುಗಳ ಪೂಜೆಗೂ ಏರ್ಪಾಟುಮಾಡಿ, ಅವರ ಭಕ್ತರನ್ನು ಸಮಾಧಾನಪಡಿಸಿ, ಮೂಲೆಗೆ ತಳ್ಳಿ, ಮತ್ತೆ ನಮ್ಮ ಪಾಶ್ಚಾತ್ಯರ ಅನುಕರಣೆಯ ಪಾಂಚವಾರ್ಷಿಕ ಯೋಜನೆಗಳ ಯಾಗಕ್ಕೆ ಶುರುಮಾಡಿದೆವು.

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೨

೩೫೬

ಗಂಗೆ ಯಮುನೆಯರ ಲೌಕಿಕವಾದ ಸಂಗಮಕ್ಕೆ ಅವ್ಯಕ್ತವೂ ಅಂತರ್ಗಾಮಿಯೂ ಆದ ಸರಸ್ವತಿಯ ಅಲೌಕಿಕತೆಯೂ ಸಂಗಮವಾಗದಿದ್ದರೆ ಯಾವ ನೀರೂ ತೀರ್ಥವಾಗಲಾರದು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೬೫

೩೫೭

ಮೌನದ ತಿಮಿರವೆ ತೀವ್ರ ವಿರಾಗಿಗೆ
ಸಾಧನ ಮಾರ್ಗವದಾಗಿರಲೇನು ?
ಸಾರಸಂಗೀತವೆ ವರರಸಯೋಗಿಗೆ
ಮುಕ್ತಿಯ ಹೃದಯವು : ರಸಋಷಿ ನಾನು !

ಕುಟೀಚಕ, ಜಪಮಣಿ, ಪುಟ ೫೮

೩೫೮

ಪ್ರಕೃತಿಮೈತ್ರಿಯು ನಮ್ಮಲ್ಲಿ ಸದ್ಯಕ್ಕೆ ಅವ್ಯಕ್ತವಾಗಿರುವ ದೇವತ್ವವನ್ನು ವ್ಯಕ್ತಪಡಿಸುತ್ತದೆ. ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ ನಮ್ಮ ಅನಂತತ್ವವನ್ನು ಬೋಧೆಗೆ ತರುತ್ತದೆ ; ಅಲ್ಲದೆ ನಮ್ಮ ಜೀವಮಾನವನ್ನೆಲ್ಲಾ ಆನಂದಮಯವಾಗಿ ಮಾಡುತ್ತದೆ. ಆ ಆನಂದವು ಇಂದ್ರಿಯಗಳಿಂದುಂಟಾಗುವ ಕ್ಷಣಿಕ ಸುಖಗಳಂತೆ ಚಂಚಲವಾದುದಲ್ಲ ;- ಅಚಲವಾದುದು ; ಅಪರಿಮಿತವಾದುದು. ಅದು ಅನುಭವದಿಂದ ದೊರಕುವುದಲ್ಲದೆ, ಸಾವಿರ ಉಪನ್ಯಾಸಗಳನ್ನು ಕೇಳಿದರೂ ಬರುವುದಿಲ್ಲ. ಅಂಥಾ ಆನಂದವನ್ನು ಪಡೆಯಲು ಪ್ರತಿಯೊಬ್ಬ ಮಾನವನೂ ಚಿತ್ತಸೂಕ್ಷ್ಮತೆಯನ್ನೂ

ಹೃದಯ ಸಂವೇದನಾ ತೀಕ್ಷ್ಣತೆಯನ್ನೂ ವ್ಯವಸಾಯಮಾಡಲೇಬೇಕು. ಆ ಅಭ್ಯಾಸದಿಂದ ನಮ್ಮೆಲ್ಲರಿಗೂ ಅಪರಿಮಿತ ಶ್ರೇಯಸ್ಸುಂಟಾಗುವುದರಲ್ಲಿ ಲೇಶವೂ ಸಂದೇಹವಿಲ್ಲ.

ಇತ್ಯಾದಿ, ಪ್ರಕೃತಿ ಸೌಂದರ್ಯ, ಪುಟ ೧೧

೩೫೯

ನಮ್ಮ ಇಂದಿನ ಕನಸು
ನಿಮ್ಮ ನಾಳೆಯ ಮನಸು ;
ನಮ್ಮ ಇಂದಿನ ಹುಚ್ಚೆ
ಮುಂದೆಲ್ಲರಿಚ್ಚೆ !

ನವಿಲು, ಕಬ್ಬಿಗರು, ಪುಟ ೩

೩೬೦

ಯೋಗವೇದಿಕೆ ಮಂಚ ;
ಭೋಗಾಸನವೆ ಯೋಗಾಸನ.
ಚೆಂದುಟಿಯ ಚುಂಬನವೆ ಧ್ಯಾನಮುದ್ರೆ ;
ಹೊಂಗಳಸದಾಲಿಂಗನವೆ ಯೋಗನಿದ್ರೆ.

ಅನುತ್ತರಾ, ಅನುತ್ತರಾ, ಪುಟ ೭

೩೬೧

ಎಲ್ಲ ಕಾಮುಕರಿಲ್ಲ
ನಾಚಿಕೆಯದೇಕೆ ?
ಇಲ್ಲಿ ಕರುಬುವರಿಲ್ಲ
ಹೆದರಿಕೆಯದೇಕೆ ?

ಷೋಡಶಿ, ರಸಋಷಿ, ಪುಟ ೫೮

೩೬೨

ಕಾಯುವುದು ಕಾರ್ಯಸಾಧನೆಗಿಂತ ಕಷ್ಟತರ !

ಯಮನ ಸೋಲು, ಪಾತ್ರ ಯಕ್ಷ, ಪುಟ ೪೧

೩೬೩

ಆತ್ಮಶ್ರೀ ಸಾಧಕನಾದ ವಿದ್ಯಾರ್ಥಿಯೂ ತಪಸ್ವಿ. ಆತನ ತಪಸ್ಸು ತಲೆ ಕೆಳಗಾಗಿ ನಿಲ್ಲುವುದರಲ್ಲಿಲ್ಲ ; ಬರಿಯ ದೇಹದಂಡನೆಯಲ್ಲಿಲ್ಲ ; ಜೀವನದ ಮುಗ್ಧ ಸುಖಗಳ ತ್ಯಾಗದಲ್ಲಾಗಲಿ ಸರಳ ಸೌಂದರ್ಯಗಳ ವಿಸರ್ಜನೆಯಲ್ಲಾಗಲಿ ಇಲ್ಲ. ಆತನ ತಪಸ್ಸು ದೇಹಶ್ರೀ ಭಾವಶ್ರೀ ಬುದ್ಧಿಶ್ರೀಗಳ ತಿರಸ್ಕಾರದ ರೂಪ ತಾಳುವ ಬಣಗು ಚಿತ್ತವೃತ್ತಿಯಲ್ಲ. ಆತನ ತಪಸ್ಸು ಇರುವುದು ಅಧ್ಯಯನದಲ್ಲಿ, ಏಕಾಗ್ರತೆಯಲ್ಲಿ, ಸಂಯಮದಲ್ಲಿ, ಧ್ಯಾನದಲ್ಲಿ, ಆತ್ಮಾನುಸಂಧಾನದಲ್ಲಿ.

ಆತ್ಮಶ್ರೀಗಾಗಿ, ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ, ಪುಟ ೩೫

೩೬೪

ಎಂತಹ ಉತ್ಕೃಷ್ಟ ನಾಗರಿಕತೆಗೇರಿದ ಯಾವ ದೇಶದ ಎಷ್ಟು ಮುಂಬರಿದ ಸಾಹಿತ್ಯದಲ್ಲಾಗಲಿ ಹುಟ್ಟಿದುದೆಲ್ಲ ಬದುಕುವುದಿಲ್ಲ. ಕೆಲವು ಭಾಗ ಪತ್ರಿಕಾ ಸಾಹಿತ್ಯದಂತೆ ತನ್ನ ದಿನದ ಕರ್ತವ್ಯವನ್ನು ಮಾಡಿ ಮುಗಿಸಿ ಮಡಿಯುತ್ತದೆ. ಅದು ದೈನಂದಿನ ಆಯುಃ ಪರಿಮಾಣದ್ದು. ಕೆಲವು ಭಾಗ ಯಾವುದಾದರೊಂದು ಸಮಸ್ಯೆಯ ಪರಿಹಾರಕ್ಕಾಗಿಯೊ ಅಥವಾ ಯಾವುದಾದರೊಂದು ಹೊಸನೀತಿಯ ಪ್ರಚಾರಕ್ಕಾಗಿಯೊ ಹುಟ್ಟುತ್ತದೆ. ಆ ಉದ್ದೇಶ ನೆರವೇರಿದೊಡನೆಯೆ ಅದು ಮನಸ್ಸಿನಿಂದ ಮರೆಯಾಗುತ್ತದೆ. ಇನ್ನು ಸ್ವಲ್ಪ ಭಾಗ ತತ್ಕಾಲ ದೇಶ ಸನ್ನಿವೇಶದ ಪ್ರಭಾವದಿಂದ ಹೊಮ್ಮಿ, ಆ ಪರಿಸ್ಥಿತಿ ಸಜೀವ ವಾಗಿರುವ ತನಕ ಬಾಳಿ, ಕ್ರಮೇಣ ಜನಮನದಿಂದ ವಿಸ್ಮೃತವಾಗಿ ತರುವಾಯ ಸಾಹಿತ್ಯಚರಿತ್ರೆಯ ವಿಷಯವಾಗಿಯೊ ಅಥವಾ ಪಂಡಿತರ ವಿಶೇಷಾಧ್ಯಯನದ ವಿಷಯವಾಗಿಯೊ ಉಳಿಯುತ್ತದೆ. ಎಲ್ಲಿಯೊ ಅಲ್ಪ ಸ್ವಲ್ಪ ಭಾಗ ಮಾತ್ರ ನಮ್ಮ ಚಿರಕಾಲಿಕ ಆಶೆ ಆದರ್ಶ ಆಕಾಂಕ್ಷೆ ಪ್ರಯೋಜನಗಳಿಗೆ ಸಂಬಂಧಪಟ್ಟು ನಮ್ಮ ನಿತ್ಯಜೀವನದ ನಿತ್ಯ ಪುರುಷಾರ್ಥಗಳಿಗೆ ನಿತ್ಯವೂ ನೀರೆರೆಯುವ ಹೊಂಗಿಂಡಿಗಳೊ ಹೊಂಗೊಡಗಳೊ ಆಗಿ ಪರಿಣಮಿಸಿ ನಿತ್ಯ ಸಾಹಿತ್ಯವಾಗಿರುತ್ತವೆ. ಈ ಎಲ್ಲ ಬಗೆಯ ಸಾಹಿತ್ಯಗಳೂ ಸಮಾನ ಸಾರ್ಥಕವಾದುವೆ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೩೪

೩೬೫

ತಾರುಣ್ಯದ ಬೆಳವಣಿಗೆಯನ್ನು ಚಂಚಲತೆ ಎಂದು ಕರೆದು ಎಲ್ಲ ಹಾಳಾಗುತ್ತಿದೆ ಎಂದು ತಲೆಚಚ್ಚಿಕೊಂಡು ಕೂಗಿಕೊಳ್ಳುವುದು ಸಹಜವಾದುದು, ಬೆಳವಣಿಗೆ ಮುಕ್ತಾಯವಾದ ಮುದಿತನಕ್ಕೆ! ನೂತನವು ಮುಂದಕ್ಕೆ ನುಗ್ಗಿದರೆ ಪುರಾತನವು ಹಿಂದಕ್ಕೆ ಜಗ್ಗುತ್ತದೆ. ಬಹುಶಃ ಪ್ರಗತಿಗೆ ಆ ಎರಡು ಶಕ್ತಿಗಳೂ ಬೇಕೆಂದು ತೋರುತ್ತದೆ. ಜೀವನ ರಥದ ಚಲನೆಯಲ್ಲಿ ಯೌವನವು ಚಕ್ರದಂತೆ ಉರುಳುತ್ತಿದ್ದರೆ, ಹಿಡಿಹಿಡಿದು, ಮುಗ್ಗರಿಸಿ ಮೂಗುಮುರಿದುಕೊಳ್ಳದಂತೆ ಹುಷಾರಾಗಿ ಮುಂದಕ್ಕೆ ಬಿಡುತ್ತದೆ. ಬಾಳಿನ ಇಳಿಜಾರಿನಲ್ಲಿ ಬಿರಿಯಿಲ್ಲದೆ ತೇರು ನಡೆಯುವುದೂ ಅಪಾಯಕರವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಬರಿಯ ಬಿರಿಯ ಮೇಲೆ ಇದುವರೆಗೆ ಯಾವ ತೇರೂ ಮುಂದುವರಿದಿಲ್ಲ. ಗಾಲಿ ಬಿರಿಯ ಉಪಯೋಗವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಹಾಗೆಯೇ ಬಿರಿಯೂ ತನ್ನ ಸ್ಥಾನವನ್ನೂ ಮಾನವನ್ನೂ ನಿಷ್ಕೃಷ್ಟವಾಗಿ ತಿಳಿದುಕೊಂಡರೆ ಲೇಸು.

ಸ್ವಾಮಿ ವಿವೇಕಾನಂದ, ಪುಟ ೪೬

೩೬೬

ತಾರಾ ಗರ್ಭಿಣಿಯಾಗಿಹ ಸೃಷ್ಟಿ ;
ನಕ್ಷತ್ರ ಪ್ರಸವದ ಸಂತುಷ್ಟಿ ;

ಗ್ರಹ ನಿರ್ಮಾಣದ ವರ್ತುಲ ವೃಷ್ಟಿ;
ಮೇಣ್ ಪ್ರಾಣೋದಯದಾನಂದ ;
ಸ್ಥಲ ಜಲ ಸಸ್ಯದ ಪ್ರಾದುರ್ಭಾವ ;
ಪ್ರಥಮ ರಚನೆಗಳ ಕಾವ್ಯಾಭಾವ ;
ಜನ್ಮಾಂತರ ಸಂಸ್ಕಾರ ಪ್ರಭಾವ :
ಶಿಶು ಸ್ವಪ್ನದ ರಚನಾ ಬಂಧ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಕೂಸಿನ ಕನಸು, ಪುಟ ೫೮

೩೬೭

ಕರಿಯರದೊ ಬಿಳಿಯರದೊ ಯಾರದಾದರೆ ಏನು ?
ಸಾಮ್ರಾಜ್ಯವಾಗಂ ಸುಲಿಗೆ ರೈತರಿಗೆ !
ವಿಜಯನಗರವೊ ! ಮೊಗಲರಾಳ್ವಿಕೆಯೊ ? ಇಂಗ್ಲಿಷರೊ ?
ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ !
ಕತ್ತಿ ಪರದೇಶಿಯಾದರೆ ಮಾತ್ರ ನೋವೆ ?
ನಮ್ಮವರೆ ಹದಹಾಕಿ ತಿವಿದರದು ಹೂವೆ ?

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ರೈತನ ದೃಷ್ಟಿ, ಪುಟ ೧೫

೩೬೮

ಈ ಜಗತ್ತು ನಾವು ಊಹಿಸಿರುವಷ್ಟು ಆದರ್ಶಪ್ರಾಯವಾಗಿಲ್ಲ....ಅದರಲ್ಲಿಯೂ ಹುಡುಗರಾಗಿದ್ದಾಗ ಕಟ್ಟಿಕೊಂಡ ಕನಸುಗಳೆಲ್ಲ ವಾಸ್ತವವಾಗಬೇಕಾದರೆ ಬಹಳ ಕಷ್ಟ, ಅಸಾಧ್ಯ ! ಕಡೆಕಡೆಗೆ ಸತ್ಯ ಅಸತ್ಯದೊಡನೆ ರಾಜಿಮಾಡಿಕೊಂಡೂ ಮಾಡಿಕೊಂಡೂ ಎರಡಕ್ಕೂ ಇರುವ ಭೇದವೂ ಗೊತ್ತಾಗದಂತೆ ಆಗಿಬಿಡುತ್ತದೆ.

ಕಾನೂರು ಹೆಗ್ಗಡತಿ, ಪಾತ್ರ ಹೂವಯ್ಯ, ಪುಟ ೩೨೮

೩೬೯

ಸಿದ್ಧಿ ಬೇಕೆನ್ನುವ ಯಾರಿಗೂ ಸಾಧನೆ ತಪ್ಪಿದುದಲ್ಲ. ಅವತಾರ ಪುರುಷರಿಗೂ ತಪ್ಪಿದುದಲ್ಲ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೪೦

೩೭೦

ಜಾತಿಯಲಿ ಹಣದಲ್ಲಿ ಅಂತೆ ಅಧಿಕಾರದಲಿ
ಮೇಲೆ ಕುಳಿತವರೆಲ್ಲ ಮೆರೆಯುತಿರುವರು ಸೊಕ್ಕೆ !

ಪಕ್ಷಿಕಾಶಿ, ಸಾಕು ಈ ಬಲಾತ್ಕಾರ, ಪುಟ ೯೨

೩೭೧

ಸೌಂದರ್ಯದ ಶಬ್ದಾರ್ಥ ನಿರೂಪಣವನ್ನರಿತ ಪಂಡಿತನ ಹೃದಯ ಸೂಕ್ಷ್ಮತೆ ಮಂದವಾಗಿದ್ದರೆ, ಆತನ ಜ್ಞಾನವು ಸೌಂದರ್ಯ ಗ್ರಹಣಕ್ಕೆ ಎಂದಿಗೂ ಸಹಕಾರಿಯಾಗ

ಲಾರದು. ಆದುದರಿಂದ ಸೌಂದರ್ಯ ಪ್ರಶಂಸೆಗೆ ಬೇಕಾದುದು ಶಬ್ದಾರ್ಥ ನಿರೂಪಣ ಶಕ್ತಿಯಲ್ಲ ; ಅದನ್ನು ಅನುಭವಿಸುವ ಹೃದಯಸೂಕ್ಷ್ಮತೆ.

ಇತ್ಯಾದಿ, ಪ್ರಕೃತಿ ಸೌಂದರ್ಯ, ಪುಟ ೨

೩೭೨

ಗಗನಚುಂಬಿಗಳಾದ ಬೆಟ್ಟಗೋಡು ; ಶತಮಾನಗಳಿಂದಲೂ ಮರದ ಬುಡದೆಡೆ ಬಿಸಿಲನ್ನೇ ಕಾಣದೆ ನಿಂತಿರುವ ದಟ್ಟಕಾಡು ; ಬಿತ್ತರವಾದ ಗದ್ದೆಯ ಕೋಗು ; ಎತ್ತರವಾದ ತೋಟಗಳು ; ತರತರದ ಹಕ್ಕಿಗಳು ; ಸಾವಿರ ತರದ ಅರಣ್ಯಜಂತುಗಳು ; ಹೂವು, ಹಣ್ಣು, ಜೇನು, ಗಂಧ, ಗೆಡ್ಡೆ, ಗೆಣಸು, ಮೂಲಿಕೆ, ಕಬ್ಬು, ಕಾಫಿ, ಏಲಕ್ಕಿ, ಮೆಣಸು, ಅಡಕೆ, ಬತ್ತ, ಹಾವು, ಮೊಸಳೆ, ಮೀನು, ಹುಲಿ, ಆನೆ, ಜಿಂಕೆ, ದೊಡ್ಡು, ಕಡ, ಮಾಂಸ, ಚರ್ಮ ; ಉಗುರು, ಹಲ್ಲು, ಕೊಬ್ಬು, ಗರಿ ! ಏನುಂಟು ? ಏನಿಲ್ಲ ? ಆದರೆ ನಾವು ಎಚ್ಚತ್ತಿಲ್ಲ. ನಮ್ಮ ಸಸ್ಯಶಾಸ್ತ್ರಜ್ಞರೂ ಪ್ರಾಣಿಶಾಸ್ತ್ರಜ್ಞರೂ ಖನಿಜ ಶಾಸ್ತ್ರಜ್ಞರೂ ಪಾಶ್ಚಾತ್ಯ ಮಾತ್ರವಾದ ಪಠ್ಯಪುಸ್ತಕ ಶಾಸ್ತ್ರಜ್ಞಾನದಿಂದಲೇ ತೃಪ್ತಿಪಟ್ಟುಕೊಳ್ಳದೆ ಈ ಕಡೆಯೂ ತಿರುಗಿ ಕೆಲಸಮಾಡಿದರೆ ಎಷ್ಟು ಶ್ರೀಮಂತರಾಗುತ್ತೇವೆಯೋ ಹೇಳಬಲ್ಲವರಾರು ?

ವಿಭೂತಿ ಪೂಜೆ, ಮಲೆನಾಡಿನ ನಿಸರ್ಗ ಭೂತಿ, ಪುಟ ೩೫–೬

೩೭೩

ಚೀಃ ಕರುಬೆ ಕಿಳ್ತನಂ !

ಬೆರಳ್ ಗೆ ಕೊರಳ್, ಪಾತ್ರ ಏಕಲವ್ಯ, ಪುಟ ೪೫

೩೭೪

ಬದುಕಿರುವವರೂ ಸಾಯುತ್ತಾರೆ ; ಸತ್ತವರು ಮತ್ತೆ ಹುಟ್ಟುತ್ತಾರೆ. ಹೀಗೆ ಸಾಗುತ್ತಿದೆ ಭಗವಂತನ ಲೀಲೆ !

ಮಲೆಗಳಲ್ಲಿ ಮದುಮಗಳು, ಪಾತ್ರ ಸನ್ಯಾಸಿ, ಪುಟ ೫೨೬

೩೭೫

ಲೋಕದೊಳ್ ಹೊರಮೆಯ್ಯನೀಕ್ಷಿಸುತೆ
ಸೊಬ್ಬಗನಾರೈವವರ್ ಬರಿಯ ಬೆಪ್ಪುಗಳಲ್ತೆ ?

ಶ್ರೀ ರಾಮಾಯಣ ದರ್ಶನಂ, ಪಾತ್ರ ಕೈಕೆ ಮಮತೆಯ ಸುಳಿಮಂಥರೆ, ಪುಟ ೭೬

೩೭೬

ಬಿಂಬ ಚುಂಬನ ರಸದ
ಅಗ್ನಿ ಆನಂದದಲಿ
ಕರಗೆ ಕೈಲಾಸ,
ಪಕ್ಷದಾಲಿಂಗನದ
ಇಕ್ಷು ಪೀಡನಕುಣ್ಮೆ

ಕ್ಷೀರೋಧಿಹಾಸ,
ಚಂದ್ರ ಮಂಟಪದಲ್ಲಿ
ಇಂದ್ರ ಇಂದ್ರಿಯಕುದಿಸೆ
ಭೋಗ ಸಂತ್ರಾಸ,
ಗಂಗೆಯಮುನೆಯ ತೊಡೆಯ
ತುಂಗಭದ್ರೆಗೆ ಮೂಡೆ
ತೀರ್ಥ ನಿಃಶ್ವಾಸ,

ಜೇನಾಗುವಾ, ಜೇನಾಗುವಾ, ಪುಟ ೧

೩೭೭

ವಿಜ್ಞಾನ ಸಂಪನ್ನವಾದ ಪಾಶ್ಚಾತ್ಯ ನಾಗರಿಕತೆ ನಮ್ಮನ್ನು ಇನ್ನೂರು ವರ್ಷ ಆಳಿದರೂ ಅದರ ವಿಜ್ಞಾನ ಸೃಷ್ಟಿಸಿದ ಯಂತ್ರನಾಗರಿಕತೆಯನ್ನು ಅನುಕರಿಸಿದೆವೆ ಹೊರತು ಅದರ ವೈಜ್ಞಾನಿಕದೃಷ್ಟಿ ನಮ್ಮದಾಗಲಿಲ್ಲ ; ಮತ್ತು ಆ ವೈಜ್ಞಾನಿಕದೃಷ್ಟಿಗೂ ತಾಯಿಬೇರಾದ ವೈಚಾರಿಕತೆಯನ್ನೂ ನಾವು ಮೈಗೂಡಿಸಿಕೊಳ್ಳಲಿಲ್ಲ. ಇನ್ನು ಮುಂದಾದರೂ ನಾವು ವೈಜ್ಞಾನಿಕ ದೃಷ್ಟಿಯ ಮತ್ತು ವೈಚಾರಿಕ ಬುದ್ಧಿಯ ನೆರವಿನಿಂದ ನಮ್ಮ ನಾಡಿನ ರಾಜಕೀಯ, ಸಾಮಾಜಿಕ ಮತ್ತು ಮತಧಾರ್ಮಿಕರಂಗ ಗಳನ್ನು ಪರಿಶೋಧಿಸದಿದ್ದರೆ, ನಮಗೆ ಕೇಡು ತಪ್ಪದು.

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ, ಆಹ್ವಾನ, ಪುಟ ೭–೮

೩೭೮

ಭಾರತೀಯ ಸಂಸ್ಕೃತಿ ಬರಿಯ ವೈದಿಕವಲ್ಲ ; ಅವೈದಿಕವೂ ಅದರ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ. ಬೌದ್ಧ ಜೈನಗಳಲ್ಲದೆ ನ್ಯಾಯ ವೈಶೇಷಿಕ ಸಾಂಖ್ಯ ಯೋಗ ದರ್ಶನಗಳೂ ವೇದದ ಪರಮಪ್ರಾಮಾಣ್ಯವನ್ನು ಅವಿಚಾರಕವಾಗಿ ಒಪ್ಪ ಬೇಕು ಎನ್ನುವುದಿಲ್ಲ. ನನ್ನದು ವಿಶ್ವಸಂಸ್ಕೃತಿ. ಅಭಾರತೀಯವೂ ಅದರಲ್ಲಿ ಸೇರಿದೆ. ಸನಾತನವೂ (ಪುರಾತನ ಅಲ್ಲ) ಶಾಶ್ವತವೂ ಆಧ್ಯಾತ್ಮಿಕವೂ ವಿಚಾರ ಮತ್ತು ವಿಜ್ಞಾನ ಗಳಿಗೆ ಅವಿರುದ್ಧವೂ ಆಗಿರುವ ಸತ್ಯ ಎಲ್ಲಿಯೆ ಇರಲಿ ಅದನ್ನು ನಾನು ಸ್ವೀಕರಿಸಿದ್ದೇನೆ.

ವಿಚಾರ ಕ್ರಾಂತಿಗೆ ಆಹ್ವಾನ, ಪ್ರಶ್ನೆಗಳಿಗೆ ಉತ್ತರಗಳು, ಪುಟ ೧೧೨

೩೭೯

ಬರಿಯ ಕೂಗಿನಿಂದ ಕಾರ್ಯಸಾಧನೆಯಾಗದು.
ಜಯಕಾರ ಮಾಡಿದ ಮಾತ್ರದಿಂದ ಜಯಲಾಭವಾಗದು.
ಬರಿಯ ಬಾಯ್ಗಲಿಗಳಾದರೆ ಸಾಲದು. ಕಯ್ಗಲಿಗ–
ಳಾಗಬೇಕು ! ಮೈಗಲಿಗಳಾಗಬೇಕು !

ರಕ್ತಾಕ್ಷಿ, ಪಾತ್ರ ಐದನೆಯವ, ಪುಟ ೭೩

೩೮೦

ರೂಪಕ ಪ್ರತಿಮಾವಿಧಾನದ ಸರ್ವಲಕ್ಷಣಗಳಿಂದಲೂ ಸಂಪನ್ನವಾಗಿರುತ್ತದೆ. ಅದೊಂದು ಸೌಂದರ್ಯ ವಿಶೇಷ ಮಾತ್ರವಲ್ಲ, ಶಕ್ತಿವಿಶೇಷವೂ ಹೌದು. ಅದೊಂದು ಶಬ್ದಪ್ರಕಾರ ಮಾತ್ರವಲ್ಲ; ಅರ್ಥಪ್ರಕಾರ ಮಾತ್ರವಲ್ಲ; ಅನುಭವ ಪ್ರಕಾರವೂ ಆಗಿದೆ. ಅದು ರಸಶಕ್ತಿಯ ಸಂಚಾರಕ್ಕೆ ಪ್ರಣಾಳಿಕೆ ಮಾತ್ರವಾಗಿರದೆ ರಸಶಕ್ತಿಯ ಉದ್ಭವಕ್ಕೆ ಆಕಾರವೂ ಸ್ಥಾನವೂ ಆಗಿರುತ್ತದೆ. ಇದ್ದುದು ಯಾವುದನ್ನಾದರೂ ತೀಕ್ಷ್ಣವಾಗಿ ಹೇಳುವುದಷ್ಟೆ ಅದರ ಕೆಲಸವಲ್ಲ; ಅದುವರೆಗೂ ಇಲ್ಲದಿದ್ದುದನ್ನು ಸೃಷ್ಟಿಸುವುದೂ ಅದರ ಕರ್ತವ್ಯ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೬೬

೩೮೧

ಇಂದಿನ ಕನಸು ನಾಳೆಯ ಮನಸ್ಸು; ನಾಳೆಯ ಮನಸ್ಸು ನಾಡಿದ್ದಿನ ಉಣಿಸು. ಇವೊತ್ತಿನ ಹಾರೈಕೆ ನಾಳೆಯ ಪೂರೈಕೆ.

ವಿಭೂತಿಪೂಜೆ, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪುಟ ೫೫

೩೮೨

ಬರಿಕೆಚ್ಚು
ಸಲ್ಲದಿಲ್ಲಿಗೆ. ಸಮರ್ಥರ ಬುದ್ಧಿ, ಸಜ್ಜನರ
ಪುಣ್ಯಹೃದಯದ ಸಿದ್ಧಿ ನೆರವೀಯದಿರೆ, ವೃಥಾ
ಸಾಹಸಂ ನಮ್ಮುಲ್ಲಸಂ.

ಶ್ರೀ ರಾಮಾಯಣ ದರ್ಶನಂ, ಕಿವಿಗೊಟ್ಟನವನಿಜಾ ರಮಣಂ, ಪಾತ್ರ ಜಾಂಬವ, ಪುಟ ೫೪೦–೧

೩೮೩

....ಕೃತಿಯ ಉದ್ದೇಶ ತಾತ್ಕಾಲಿಕವಾದ ಹೊಟ್ಟೆಪಾಡಿನ ಕಚ್ಚಾಟದಲ್ಲಿ ಭಾಗ ವಹಿಸುವುದಲ್ಲ; ಚಿರಕಾಲದ ನಿತ್ಯಸತ್ಯಗಳನ್ನೂ ಶಾಶ್ವತವಾದ ರಸಾನುಭೂತಿಯನ್ನೂ ಸಹೃದಯರಿಗೆ ದಾನಮಾಡಿ, ಅವರನ್ನು ಜಾತಿ ಕುಲ ಧನ ಕ್ರಿಯಾದಿ ಭೇದವಿಲ್ಲದೆ ರಸ ಸುಖಿಗಳನ್ನಾಗಿ ಮಾಡುವುದು.

ಶೂದ್ರ ತಪಸ್ವಿ, ಮಾರ್ನುಡಿ, ಪುಟ ೪೦

೩೮೪

ಯಾರೂ ಅರಿಯದ ನೇಗಿಲ ಯೋಗಿಯೆ
ಲೋಕಕೆ ಅನ್ನವನೀಯುವನು.
ಹೆಸರನು ಬಯಸದೆ ಅತಿಸುಖಕೆಳಸದೆ
ದುಡಿವನು ಗೌರವಕಾಶಿಸದೆ.

ನೇಗಿಲಕುಳದೊಳಗಡಗಿದೆ ಕರ್ಮ;
ನೇಗಿಲ ಮೇಲೆಯೆ ನಿಂತಿದೆ ಧರ್ಮ.

ಕೊಳಲು, ನೇಗಿಲ ಯೋಗಿ, ಪುಟ ೨೮

೩೮೫

ಈ ಬಿಳಿಮಳಲ ರಾಶಿ, ವನಪರ್ಣ ವಾರಾಶಿ,
ನರ್ತಿಸುವ ಪ್ರವಹಿಸುವ ನೀಲಾಭ ಜಲರಾಶಿ,
ನೀಲ ನೀರವ ಶಕುನದಂತಿರುವ ಆಕಾಶ,
ಎಲ್ಲವೂ ನನ್ನ ದೃಷ್ಟಿಗೆ ಆತ್ಮದಾವೇಶ
ಭಾವಗಳು ! ಜಡವಲ್ಲ ; ಸ್ಥೂಲವಸ್ತುಗಳಲ್ಲ !
ಮೃತ ನಿಸರ್ಗದ ಚೇತನ ವಿಹೀನ ಶವವಲ್ಲ !
ಈಶ್ವರ ಶರೀರದಲಿ ಚಿನ್ಮಯ ಮಹಾಂಗಗಳು ;
ಬ್ರಹ್ಮದ ಮಹಾ ಚಿತ್ತಶರಧಿಯ ತರಂಗಗಳು ;

ಕಲಾಸುಂದರಿ, ತುಂಗೆ, ಪುಟ ೬೯–೭೦

೩೮೬

ದೇಶಭಕ್ತಿ, ರಾಷ್ಟ್ರೀಯತೆ, ಸ್ವಮತ, ಸ್ವಸಂಸ್ಕೃತಿ, ಸ್ವಭಾಷಾಭಿಮಾನಗಳೆಲ್ಲ ಅಹಂಕಾರ ಮೂಲವಾದ ವ್ಯಷ್ಟಿಪ್ರತಿಷ್ಠೆಯ ಸಮಷ್ಟಿರೂಪಗಳಲ್ಲದೆ ಮತ್ತೇನು ? ಆದ್ದರಿಂದ ವ್ಯಷ್ಟಿವ್ಯಷ್ಟಿಗಳಲ್ಲಿ ಅಂತಹ ಶಮಸಾಧನೆಯಿಂದ ಮೂಡುವ ಮೂಲಪರಿವರ್ತನೆಗಾಗಿ ನಾವು ಸಾಮೂಹಿಕವಾಗಿ ಕಾರ್ಯೋನ್ಮುಖವಾಗದಿದ್ದರೆ ಬರಿಯ ಅರ್ಥಶಾಸ್ತ್ರದ ಅಥವಾ ರಾಜಕೀಯಶಾಸ್ತ್ರದ ತೇಪೆಹಾಕುವ ಕುಶಲಕರ್ಮದಿಂದ ಎಂದಿಗೂ ಸರ್ವರೂ ಅಪೇಕ್ಷಿಸುವ ಸಮಷ್ಟಿ ಶಾಂತಿ ಸಿದ್ಧಿಸುವುದಿಲ್ಲ.

ವಿಭೂತಿ ಪೂಜೆ, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪುಟ ೫೮

೩೮೭

ಕಡಲಿನಾಳವು ಹಿರಿದು.
ಕಡಲಿಗಿಂತಲು ಮಿಗಿಲು
ಮನಸಿನಾಳ !
ಬಾನಿನಗಲವು ಹಿರಿದು.
ಬಾನಿಗಿಂತಲು ಮಿಗಿಲು
ಮನುಜನೆದೆಯು !
ತುಹಿನ ಗಿರಿಯದು ಹಿರಿದು.
ತುಹಿನ ಗಿರಿಗಿಮ್ಮಡಿಯು
ನರನ ಬಲವು !
ಮಳೆಯಬಿಲ್ಲದು ಚೆಲುವು.
ಮಳೆಯ ಬಿಲ್ಲನು ಮೀರಿ
ಮನುಜನೊಲವು !

ಷೋಡಶಿ, ಮನುಜನೊಲವು, ಪುಟ ೧೨

೩೮೮

ಸ್ವರ್ಗ ಸುಖದಲ್ಲೆನಗೆ
ಸಂದೇಹವಿಲ್ಲ ;
ಮರ್ತ್ಯ ಸುಖದಲ್ಲೆನಗೆ
ದ್ವೇಷವೂ ಇಲ್ಲ !

ಷೋಡಶಿ, ರಸಋಷಿ, ಪುಟ ೭೧

೩೮೯

ನಾಕವಾದರು ಬಾಯಿಪಾಠದ ಬದುಕು ಸಪ್ಪೆ

ಅನುತ್ತರಾ, ಸ್ವರ್ಗದ್ವಾರದಿ ಯಕ್ಷಪ್ರಶ್ನೆ, ಪುಟ ೧೭

೩೯೦

ಓ ಭೂಮಿಯೆ, ಓ ವ್ಯೋಮವೆ
ಓ ಮಾಗಿಯ ಹಗಲೇ,
ಓ ಗಿರಿಗಳೆ, ಓ ತರುಗಳೆ
ಓ ಬೆಳ್ಳಿಯ ಮುಗಿಲೇ,
ನಿಮಗಾಗಿಯೆ ನೀವ್ ವಂದ್ಯರು,
ನೀವ್ ಸೂಚಿಪುದಿರಲಿ !

ಪಕ್ಷಿಕಾಶಿ, ಮಾಗಿಯ ಹಗಲು, ಪುಟ ೭೯

೩೯೧

ಲಲಿತೆ, ಓ ಮನದಮೋಹಿನಿ ರತಿಯೆ,
ನಿನ್ನಾದಿ ತಾರುಣ್ಯ ಕಾಲದಾರಂಭಮಂ
ಪೊಸಕೆಂದು ಪೊಸವೊಲ್ಮೆವೇಟಂ ತಗುಳ್ದಂದು
ನೀ ಮದನನಧರಕ್ಕೆ ಮುತ್ತೊತ್ತಿದಾ ಇಂಪೆ
ತಾನವಗಂ ಮರಳಿಮರಳಿ ಮಲರುತೆ ಚಿರಂ
ಸೊಗವೀವುದಲ್ತೆ ನವ ನಿಖಿಲ ದಂಪತಿಗಳ್ಗೆ ?

ಶ್ರೀ ರಾಮಾಯಣ ದರ್ಶನಂ, ಮಮತೆಯ ಸುಳಿಮಂಥರೆ, ಪುಟ ೬೬

೩೯೨

ಚಿಂತೆಗಳು ನನ್ನ ಮನದಲಿ ; ನನ್ನ ನಾಡಿಯಲಿ
ರಕ್ತ ಬಿಂದುಗಳು ! ನಾನುಸಿರೆಳೆಯೆ ಮೋಡದಲಿ
ಶ್ವಾಸವಾಡುವುದು ! ಅದು ಕಾರಣದಿ ಬಾಲ್ಯದಲಿ
ಮೊದಲ್ಗೊಂಡು ನಾನಿಂದುವರೆಗೂ ನಿತ್ಯದಲಿ–
ಪ್ರಕೃತಿಯಾರಾಧನೆಯೆ ಪರಮನಾರಾಧನೆ ;

ಪ್ರಕೃತಿಯೊಲ್ಮೆಯೆ ಮುಕ್ತಿಯಾನಂದಸಾಧನೆ,
ಎಂದರಿತು ಉದಯಾಸ್ತಗಳಲಿ, ವನಗಿರಿಗಳಲಿ,
ತೆಂಗಾಳಿಯಲಿ, ರುದ್ರವರ್ಷದಲಿ, ತಿಂಗಳಲಿ,
ಎಳೆಹಸುರ ಮೇಲೆ ಮಿರುಗುವ ಹಿಮದ ಮಣಿಗಳಲಿ,
ಕಾಜಾಣ, ಕಾಮಳ್ಳಿ, ಕೋಗಿಲೆಯೆ ಗಿಳಿಗಳಲಿ,
ಮಾನವರ ಸೌಂದರ್ಯ ಒಲುಮೆ ನೇಹಂಗಳಲಿ
ನನ್ನಿಷ್ಟದೇವತೆಯ ಗರ್ಭಗುಡಿಯನು ಕಟ್ಟಿ
ತಲ್ಲೀನನಾಗಿಹೆನು ಪೂಜೆಯಲಿ !

ಕಲಾಸುಂದರಿ, ತುಂಗೆ, ಪುಟ ೭೦

೩೯೩

ಕಳೆದ ಇಪ್ಪತ್ತು ಮೂವತ್ತು ವರ್ಷಗಳಿಂದ, ಇಂಗ್ಲಿಷ್ ಭಾಷಾ ಸಾಹಿತ್ಯದ ಪ್ರೇರಣೆಯಿಂದಲೆ, ನಮ್ಮ ದೇಶಭಾಷೆಗಳು ಮತ್ತು ಗತಪೂರ್ವದ ಸಂಸ್ಕೃತಿಯ ಪುನರುಜ್ಜೀವನದೊಂದಿಗೆ ನವೀನ ಪ್ರಪಂಚದ ಜ್ಞಾನ ವಿಜ್ಞಾನ ಸಂಸ್ಕೃತಿಗಳಿಂದ ಉತ್ತೇಜಿತವಾಗಿ, ಸಶಕ್ತವಾಗಿ ಊರ್ಜಿತಗೊಂಡಿವೆ ; ದಿನದಿನವೂ ಮೇಲಮೇಲಕ್ಕೇರುತ್ತಿವೆ. ಕೆಲವು ಭಾಷೆಗಳಲ್ಲಿ, ಅದರಲ್ಲಿಯೂ ಸಾಹಿತ್ಯಕ್ಷೇತ್ರದಲ್ಲಿ, ಅಲ್ಪಸ್ ಪರ್ವತ ಶಿಖರಗಳನ್ನು ನಾಚಿಸುವ ಹಿಮಾಲಯ ಪರ್ವತ ಶಿಖರಗಳಂತೆ, ಯಾವ ಪಾಶ್ಚಾತ್ಯ ಸಾಹಿತ್ಯ ಕೃತಿಯೂ ಇದುವರೆಗೂ ಏರಲಾರದಂತಹ ಮಹೋನ್ನತಿಗೆ ಕೆಲವಾದರೂ ಸಾಹಿತ್ಯ ಕೃತಿಗಳು ಏರಿನಿಂತಿವೆ. ಅತಿಶಯ ಎಂದು ಕೆಲವರಿಗೆ ತೋರಬಹುದಾದ ಈ ಉಕ್ತಿಯ ಸತ್ಯ ಗೊತ್ತಾಗಬೇಕಾದರೆ, ನಮ್ಮ ಪ್ರದೇಶ ಭಾಷಾ ಸಾಹಿತ್ಯಗಳ ಪರಿಚಯ ಪರಸ್ಪರರಿಗೆ ಅರಿವಾಗುವಂತೆ ಅನುವಾದಕಾರ್ಯ ನಡೆಯಬೇಕಾಗಿದೆ.

ಮನುಜಮತ ವಿಶ್ವಪಥ, ಬಹುಜಿಹ್ವಾ ಭಾರತಿಗೆ ಐಕ್ಯತೆಯ ಆರತಿ, ಪುಟ, ೪೨-೩

೩೯೪

ಜನಜೀವನದಿಂದ ಪ್ರೇರಿತವಾದ ಸಾಹಿತ್ಯವು ಜನಜೀವನಕ್ಕೆ ಉಪಯೋಗವಾಗಬೇಕಾದರೆ ಜನಜೀವನದ ವಾಣಿಯ ವೇಷವನ್ನು ಧರಿಸಬೆಕು ; ಅಂದರೆ ಮಾತ್ರಾ ಛಂದೋ ನಿಯಮವನ್ನು ನಾವು ಬಳಕೆಗೆ ತರಬೇಕು. ಪಂಪ, ರನ್ನ ಮೊದಲಾದ ಕವಿಗಳ ಮಹಾಕಾವ್ಯಗಳು ಏಕೆ ಉದ್ಗ್ರಂಥಗಳಾಗಿ ಮೇಲೆ ದೂರದಲ್ಲಿಯೆ ನಿಂತು ಬಿಟ್ಟುವು ? ಕುಮಾರವ್ಯಾಸ, ಲಕ್ಷ್ಮೀಶ, ಸರ್ವಜ್ಞ ಮೊದಲಾದ ಕವಿಗಳ ರಸಕೃತಿಗಳು ಏಕೆ ಜನಜೀವನವನ್ನು ಪ್ರವೇಶಿಸಿದುವು ? ಆಲೋಚಿಸಿ ನೋಡಿ.

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೨೧

೩೯೫

ನನಗಂತೂ ಪ್ರೊ ॥ ಟಿ. ಎಸ್. ವೆಂಕಣ್ಣಯ್ಯನವರೊಬ್ಬರ ಸಾನ್ನಿಧ್ಯವೆ ಉಳಿದ ಸಾವಿರಾರು ಮಂದಿಯ ಇರುವಿಕೆಯನ್ನು ನುಂಗಿ ನಿಂತಂತಾಗುತ್ತಿತ್ತು. ಅವರೊಬ್ಬರಿ

ಗಾಗಿಯೆ ಗಂಟೆಗಟ್ಟಲೆ ಬೇಕಾದರೂ ಕವನ ವಾಚನ ಮಾಡುವ ಹುಮ್ಮಸ್ಸು ಉಂಟಾಗುತ್ತಿತ್ತು. ಅಂತಹ ಸಹೃದಯವರೇಣ್ಯರಾಗಿದ್ದರವರು : ಕುಶಾಗ್ರಮತಿಯ ವಸ್ತು ಪ್ರವೇಶನಶಕ್ತಿಯೂ ಭಾವಯಿತ್ರೀ ಕಲ್ಪನಾ ಪ್ರತಿಭೆಯ ದರ್ಶನಧ್ವನಿ ಗ್ರಹಣಕಾರಿ ಯಾದ ರಸಾನುಭವಸಾಮರ್ಥ್ಯವೂ ಅವರದಾಗಿತ್ತು. ಅವರ 'ಶ್ಲಾಘನೆ' ಲಭಿಸಿತೆಂದರೆ ಜಗತ್ತಿನ ಒಬ್ಬ ಮಹೋನ್ನತ ಮೇಧಾವೀ ವಿಮರ್ಶಕನ ಸರ್ಟಿಫಿಕೇಟು ದೊರೆತಂತೆಯೆ ಆಗುತ್ತಿತ್ತು.

ಮನುಜಮತ ವಿಶ್ವಪಥ, ಅಹೇತುಕ ಆತ್ಮೀಯತೆ, ಪುಟ ೮೮

೩೯೬

ಆದರ್ಶವಿರುವುದು ಅದರಂತಾಗುವುದಕ್ಕೆ; ಅದಾಗುವುದಕ್ಕೆ. ನಾವು ಯಾರನ್ನು ಗೌರವಿಸುತ್ತೇವೆಯೋ ಅವರ ಗುಣಗಳೇ ನಮ್ಮಲ್ಲಿ ಮೂಡುತ್ತವೆ. ನಾನು ಯಾರನ್ನು ಆರಾಧಿಸುತ್ತೇವೆಯೊ ಅವರಂತೆಯೆ ಆಗುತ್ತೇವೆ. ದೇವರನ್ನು ಪೂಜಿಸಿದರೆ ದೇವರಾಗುತ್ತೇವೆ. ದೆವ್ವಗಳನ್ನು ಪೂಜಿಸಿದರೆ ದೆವ್ವಗಳಾಗುತ್ತೇವೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೨೩

೩೯೭

ನಾವು ಲೀಲಾಮಾತ್ರ ಜೀವರು, ನಮ್ಮ ಜೀವನ ಲೀಲೆಗೆ!
ನಿನ್ನೆ ನಿನ್ನೆಗೆ, ಇಂದು ಇಂದಿಗೆ, ಇರಲಿ ನಾಳೆಯು ನಾಳೆಗೆ!

ನವಿಲು, ದೋಣಿಹಾಡು, ಪುಟ ೫೧

೩೯೮

ಪರಮಹಂಸರು ಅನೇಕ ಮುಖ ದರ್ಪಣದಂತೆ ಅನೇಕ ಕಿರಣಗಳನ್ನು ಅನೇಕ ರೀತಿಯಾಗಿ ಪ್ರತಿಬಿಂಬಿಸಿದ ಮಹಾವ್ಯಕ್ತಿ. ಯಾವ ಭಾವವನ್ನೂ ನಷ್ಟಗೈಯದೆ, ಯಾರ ಸ್ಥಿತಿಯನ್ನೂ ಚ್ಯುತಿಗೊಳಿಸದೆ ಅವರವರ ಸಂಸ್ಕಾರಗಳಿಗೆ ಅನುಗುಣವಾಗಿ ಆಯಾ ಉಪದೇಶಗಳನ್ನು ದಾನಮಾಡುತ್ತಿದ್ದರು. ಸಂನ್ಯಾಸೀ ಶಿಷ್ಯರಿಗೆ ಕೊಡುತ್ತಿದ್ದ ಕಠಿಣ ಪಥ್ಯವನ್ನು ಸಂಸಾರಿ ಭಕ್ತರಿಗೆ ಕೊಡುತ್ತಿರಲಿಲ್ಲ. ನಿಪುಣನೂ ದಯಾಳುವೂ ಸಮರ್ಥನೂ ಅನುಭವಶಾಲಿಯೂ ಆದ ಅಂತಹ ಮತ್ತೊಬ್ಬ ದೇವವೈದ್ಯನನ್ನು ಜಗತ್ತು ಇದುವರೆಗೂ ಸಂದರ್ಶಿಸಿಲ್ಲ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೨೭

೩೯೯

ಕವನಗಳ ಹಾಡುವೆನು :
ಕಲ್ಲು ಕವಿಯಪ್ಪನ್ನೆವರಮಾನು ಹಾಡುವೆನು!
ಶಿಲೆಯು ಕಲೆಯಪ್ಪನ್ನೆವರಮಾನು ಹಾಡುವೆನು!

ಕಲಾಸುಂದರಿ, ಶಿಲಾತಪಸ್ವಿ, ಪುಟ ೫೧

೪೦೦

ಬಾಲ್ಯದ ಬಹಿರ್ಮುಖವಾದ ಪ್ರಜ್ಞೆಗೆ ಪ್ರಕೃತಿ ಒಮ್ಮೆ ಆಡುಂಬೊಲವಾಗಿಯೂ ಒಮ್ಮೆ ಆಟದ ವಸ್ತುವಿನಂತೆಯೂ ಒಮ್ಮೆ ಜೊತೆ ಆಡುವ ಆಟಗಾರನಂತೆಯೂ ಗೋಚರವಾಗುತ್ತದೆ. ಮಳೆಗಾಳಿ ಮಿಂಚು ಇಂತಹ ಪ್ರಕೃತಿ ವ್ಯಾಪಾರಗಳು ಬೆದರಿಕೆಗೂ ಬೆಕ್ಕಸಕ್ಕೂ ಕಾರಣವಾದರೆ, ಹಸುರು ಹಕ್ಕಿ ಹೂವು ಮೊದಲಾದುವು ಅದರ ಆಶ್ಚರ್ಯ ಆನಂದಗಳಿಗೆ ಕಾರಣವಾಗುತ್ತವೆ. ಆಗ ಮರ ಹಣ್ಣುಕೊಡುವ ಇಷ್ಟದೇವತೆ ಯಾದರೆ ಗಾಳಿಹಣ್ಣು ಉದುರಿಸುವ ಗಗನದ ಗೆಳೆಯನಾಗುತ್ತಾನೆ. ಆಗ ಆಕಾಶ ಆಶ್ಚರ್ಯದ ವಿಷಯವಾಗಿ ಕಂಡರೂ ಅದು ಹುಡುಗನಿಗೆ ಬಹಳ ಸಮೀಪದ ವಸ್ತು: ಮನೆಯ ಮುಂದೆ ಗೋಡೆಕಟ್ಟಿ ಹಬ್ಬಿರುವ ಮಲೆಯ ತಲೆಯ ಮೇಲೆ ಒಂದು ಏಣಿ ಹಾಕಿದರೆ ಸರಿ ಆಕಾಶಕ್ಕೆ ತಲುಪುತ್ತೇವೆ! ಆಗ ಪ್ರಕೃತಿ ಸಮಸ್ತವೂ ಪ್ರಜ್ಞಾಪೂರ್ವಕವಾದಂತೆ ತೋರುತ್ತದೆ. ಮಗುವಿಗೆ ತನ್ನ ವ್ಯಾಪಾರಕ್ಕೂ ಪ್ರಕೃತಿವ್ಯಾಪಾರಕ್ಕೂ ಪ್ರಭೇದ ಕಾಣುವುದಿಲ್ಲ. ಸೃಷ್ಟಿಯ, ಎಂದರೆ ಜಡ ಜೀವ ಮನಸ್ಸು ಎಲ್ಲ ಸೇರಿ, ಸೃಷ್ಟಿಯ ಸರ್ವವ್ಯಾಪಾರಗಳೂ ಚಿಚ್ಛಕ್ತಿಯ ಪ್ರಕಾಶನದ ಭಿನ್ನ ಭಿನ್ನ ಪ್ರಕಾರಗಳು ಎಂಬ ತುತ್ತತುದಿಯ ಪೂರ್ಣದೃಷ್ಟಿಯ ಸಾಕ್ಷಾತ್ಕಾರ ಪ್ರಜ್ಞೆ, ಇನ್ನೂ ಜ್ಞಾನವಲ್ಲದ ಯಾವುದೋ ಒಂದು ರೀತಿಯಲ್ಲಿ, ಮಗುತನಕ್ಕೆ ಸಹಜವಾಗಿರುವಂತೆ ತೋರುತ್ತದೆ.... ಬೆಳೆಯುವ ಹುಡುಗನ ಎಳೆಯ ಪ್ರಜ್ಞೆ ವಿಕಾಸವಾದ ಹಾಗೆಲ್ಲ ಕ್ರಮೇಣ ಪ್ರಕೃತಿ ಅದರ ಮೊದಲಿನ ಅಪೃಥಗ್ ಭಾವದಿಂದ ದೂರದೂರವಾಗಿ ಬಾಲಕನ ಕ್ರೀಡಾದಿ ಕರ್ಮಗಳಿಗೆ ರಂಗಭೂಮಿಯಾಗಿ ಪರಿಣಮಿಸುತ್ತದೆ. ಪ್ರಪಂಚದ ಭೌತಸ್ವರೂಪವೂ ಮನಸ್ಸಿನ ಮೇಲೆ ತನ್ನ ಅಧಿಕಾರವನ್ನು ಹೆಚ್ಚು ಹೆಚ್ಚಾಗಿ ಸ್ಥಾಪಿಸುತ್ತ ಹೋಗುತ್ತದೆ. ಎಲ್ಲವೂ ತನಗಾಗಿ, ತನ್ನ ಸಂತೋಷಕ್ಕಾಗಿ, ತನ್ನ ಅನುಕಾಲಕ್ಕಾಗಿ ಎಂಬುವ ಭಾವಕ್ಕೆ ಧಕ್ಕೆ ತಗಲುತ್ತಾ ಹೋದಂತೆ ನಮ್ಮ ವಿಶಿಷ್ಟತೆಯೂ ಪ್ರತ್ಯೇಕತೆಯೂ ಅಹಂಕಾರವೂ ಬಲಿಯುತ್ತದೆ. 'ಅಮ್ಮಾ ಅಮ್ಮಾ ತಿಂಡಿಕೊಡು' ಎಂದು ಗೋಗರೆದಾಗ ತಾಯಿ ತಿಂಡಿ ಕೊಡುವಂತೆ 'ಮರವೇ ಮರವೇ ಹಣ್ಣುಕೊಡು' ಎಂದಾಗ ಮರ ಹಣ್ಣು ಕೊಡುವುದಿಲ್ಲ ಎಂಬುದು ಗೊತ್ತಾಗುತ್ತದೆ. ಹಣ್ಣು ಬೇಕಾದರೆ ಮರ ಹತ್ತಿ ಕೀಳಬೇಕು. ಇಲ್ಲವೆ ಬಡಿಗೆ ಎಸೆದು ಉದುರಿಸಬೇಕು ಎಂಬ ಪೌರುಷ ಬುದ್ಧಿಯೂ ಉದ್ಯೋಗ ಶೀಲತೆಯೂ ಮೂಡುತ್ತವೆ. ಭೂಮಿಯ ಮೇಲೆ ನಡೆದಂತೆ ನಡೆಯುತ್ತೇವೆ ಎಂದು ನೀರಿಗೆ ಕಾಲಿಟ್ಟಾಗ ಹಳ್ಳಕ್ಕೆ ಬಿದ್ದು ಮೈ ಒದ್ದೆಮಾಡಿಕೊಂಡ ಮೇಲೆ ನೀರಿನ ನಿರ್ದಾಕ್ಷಿಣ್ಯ ಮನಸ್ಸಿಗೆ ಗೋಚರವಾಗಿ, ನೀರನ್ನು ಗೆಲ್ಲುವುದಕ್ಕಾಗಿ ಈಜುಕಲಿಯುತ್ತಾನೆ. ಹೀಗೆ ಪ್ರಕೃತಿಯ ನಿರ್ದಾಕ್ಷಿಣ್ಯತೆಯೂ ನಿಷ್ಠುರತೆಯೂ ಮತ್ತೆ ಮತ್ತೆ ಮನಸ್ಸಿಗೆ ತಗುಲಿ ಹುಡುಗನ ಬುದ್ಧಿಯನ್ನು ಅದರ ನಿಯತಿ ಮತ್ತು ನಿಯಮನಿಷ್ಠೆಯ ಕಡೆಗೆ ಕೊಂಡೊಯ್ಯುತ್ತವೆ. ಜೊತೆಗೆ ಹಿರಿಯರ ಮಾತುಕತೆ ನಡೆನುಡಿಗಳಿಂದಲೂ ವಿದ್ಯಾಭ್ಯಾಸಕ್ಕಾಗಿ ಓದುವ ಪಠ್ಯಪುಸ್ತಕಾದಿ ಪ್ರಥಮ ಪಾಠಗಳಿಂದಲೂ

ಪೂರ್ವಕವಿಗಳ ಕವನಕೃತಿಗಳಿಂದಲೂ ಮತ್ತು ಇತರ ಕಲಾನುಭವಗಳಿಂದಲೂ ಪ್ರಕೃತಿ ವಿಷಯವಾದ ಸ್ಥೂಲಾಭಿಪ್ರಾಯಗಳು ರೂಪುಗೊಳ್ಳುತ್ತವೆ.

ವಿಭೂತಿ ಪೂಜೆ, ಕವಿಯ ದೃಷ್ಟಿಯಲ್ಲಿ ಪ್ರಕೃತಿ, ಪುಟ ೨೫-೭

೪೦೧

ಒಂದು ಜನಾಂಗದ ಶ್ರೇಷ್ಠತೆಗೆ ಅದರ ಸಂಸ್ಕೃತಿ ಸಾಕ್ಷಿಯಾಗುವಂತೆ ಆ ಸಂಸ್ಕೃತಿಗೆ ಅದರ ಸಾಹಿತ್ಯ ಅಕ್ಷಿಯಾಗುತ್ತದೆ. ಎಂದರೆ ಸಾಹಿತ್ಯ ಸಂಸ್ಕೃತಿಗೆ ಹೊಸ ಹೊಸ ಉಣಿಸನಿತ್ತು ಹೊರೆಯುವಂತೆ ಸಂಸ್ಕೃತಿಯ ಹೃದಯವನ್ನು ಬಿಚ್ಚಿ ತೋರಿ ಅದನ್ನು ಮೆರೆಯುತ್ತದೆ. ಒಂದು ದೃಷ್ಟಿಗೆ, ಸಾಹಿತ್ಯ ಜನಜೀವನದ ವಾಣಿ ; ಮತ್ತೊಂದು ದೃಷ್ಟಿಗೆ, ಅದು ಜನಜೀವನಕ್ಕೆ ತನ್ನ ಶ್ರೀಮಂತ ವಕ್ಷ ಪೀಯೂಷಪಾನದಿಂದ ರಕ್ಷಣೆ ಶಿಕ್ಷಣೆಗಳನ್ನಿತ್ತು, ಅದಕ್ಕೆ ಅಮೃತತ್ವವನ್ನು ದಯಪಾಲಿಸಿ, ಅದನ್ನು ಕೈಹಿಡಿದು ನಡೆಯಿಸುವ ಮಾತೃಶ್ರೀ ಮಹಾರಾಣಿ.

ಸಾಹಿತ್ಯ ಪ್ರಚಾರ, ಕನ್ನಡ ಸಾಹಿತ್ಯ, ಪುಟ ೫೬

೪೦೨

ಈ ಹಾರುವರ ದೆಸೆಯಿಂದ ನಮಗೆ ಉಳಿಗಾಲವಿಲ್ಲ! ನಮಗಿ ವಿದ್ಯೆ ಬುದ್ಧಿ, ಚೆನ್ನಾಗಿ ಕೊಡಲಿಲ್ಲವಲ್ಲಾ, ಹೋಗಲಿ! ಒಳ್ಳೊಳ್ಳೆ ಹೆಸರುಗಳನ್ನಾದರೂ ಇಟ್ಟು ಕೊಡಬಾರದೆ! ಅದಕ್ಕೂ ಹೊಟ್ಟೆಕಿಚ್ಚು ಅಂತಾ ಕಾಣ್ತದೆ. ಕರಿಯ, ಸಿಂಡ, ತಿಮ್ಮ, ಕಾಳ, ಬೋಳ ಇವೇ ತಮ್ಮ ಪಾಲಿಗೆ!

ಕಾನೂರು ಹೆಗ್ಗಡಿತಿ, ಪಾತ್ರ ಚಿನ್ನಯ್ಯ, ಪುಟ ೬೨೭

೪೦೩

ಹಸುಲೆಯೊಲ್ಮೆ ದಾಂಪತ್ಯ
ಮಂದಿರಕೆ ಗೋಪುರದ ಹೊಂಗಳಸಮಲ್ಲದೆಯೆ
ಗರ್ಭಗುಡಿಯಲಿ ಪುಣ್ಯವೇದಿಕೆಯ ದೇವಮೂರ್ತಿ :
ವತ್ಸವಾತ್ಸಲ್ಯಮಿಲ್ಲದ ವಿವಾಹಂ ವ್ಯರ್ಥಮ್!

ಚಿತ್ರಾಂಗದಾ, ಐದನೆಯ ಪರ್ವಂ, ಪಾತ್ರ ಶ್ರೀಮೂರ್ತಿ, ಪಂಕ್ತಿ, ೧೮೩೫-೮, ಪುಟ ೬೭

೪೦೪

ವಾಗ್ದೇವಿ, ನಿನಗಿದೋ ಬಡಕವಿಯ ಪ್ರಾರ್ಥನೆ :
ಪಂಡಿತರು, ನೀರಸರು, ಪೊಳ್ಳುಹೃದಯದ ಮಂದೆ,
ತಮ್ಮ ಭೋಗಗಳೊಡನೆ ಇದು ಒಂದು ಸೇರಿರಲಿ
(ಸಂಸ್ಕೃತಿಯ ಚಿಹ್ನೆಯಲ್ಲವೆ ಹೊತ್ತುಗೆಯ ಮನೆ ?)
ಎಂಬವರ್ಗೆನ್ನ ಕೃತಿ ಸಿಲುಕುವೊಡೆ, ನಾನಳಿದಂದೆ
ನನ್ನೊಡನೆ ತಾನುಂ ಬೆಂದು ಹೆಣಬೂದಿಯಾಗಿರಲಿ!

ಕೃತ್ತಿಕೆ, ಕವನ ಕೇಳುವವನಿಗೆ, ಪುಟ ೩೧

೪೦೫

ಮಹಿಮೆ ಎಷ್ಟು ದಿನತಾನೆ ಮೂಲೆಯಲ್ಲಿರಬಲ್ಲುದು? ಧರ್ಮದಿಂದಲೊ ಅಧರ್ಮದಿಂದಲೊ ಹೇಗೊ ಅದು ಮೈದೋರಲೆಬೇಕು. ಸಿದ್ಧಿಯ ಮಂಗಳವೆ ಸಾಧನೆಯನ್ನು ಪಾವನಗೈಯುತ್ತದೆ. ಧ್ಯೇಯದ ಪುಣ್ಯವೆ ಮಾರ್ಗದ ಪಾಪವನ್ನು ತೊಳೆದು ಬಿಡುತ್ತದೆ.

ಕಾವ್ಯವಿಹಾರ, ಕುಮಾರವ್ಯಾಸನ ದುರಂತ ಕರ್ಣ, ಪುಟ ೩೮

೪೦೬

ಸೌಂದರ್ಯ ದರ್ಶನದಿ ಭಾವದಿನನಂತದಲಿ
ಧ್ಯಾನಲಯನಾಗದಿರೆ ಮುಕ್ತಿಯೆಲ್ಲೈ ಪ್ರಾಣಿ?
ಕಲೆಯ ಮಿಂಚುಣದವಗೆ ಇಹ ಶೂನ್ಯ, ಪರಶೂನ್ಯ,
ರಸರೂಪಿ ಸರ್ವೇಶನಾಶೀರ್ವಚನ ಶೂನ್ಯ!

ಕೃತ್ತಿಕೆ, ರಸೋ ವೈ ಸಃ, ಪುಟ ೮೭

೪೦೭

ಮುಂಬಯಿನಲ್ಲೊ ಮದ್ರಾಸಿನಲ್ಲೊ ಅಥವಾ ಬೇರೆ ಇನ್ನೆಲ್ಲೊ ಕನ್ನಡಿಗರು ಹೋಗಿ ವಾಸಿಸುತ್ತಿದ್ದರೆ ಅವರ ಇರುವಿಕೆ ಆ ಪ್ರದೇಶದ ಭಾಷೆಯ ಪ್ರಗತಿಗೆ ತಡೆಯಾಗಬಾರದು. ಕನ್ನಡಿಗರು ಕನ್ನಡನಾಡಿನ ಹೊರಗಿದ್ದಾಗ ವೈಯಕ್ತಿಕವಾಗಿ ಕನ್ನಡಿಗರು, ಅಷ್ಟೆ. ಪ್ರಾದೇಶಿಕವಾಗಿ ಅವರು ತಾವು ಇರುವ ಪ್ರದೇಶದವರೇ. ಈ ಮಾತು ಕನ್ನಡ ನಾಡಿನಲ್ಲಿರುವ ಅನ್ಯ ಭಾಷೀಯರಿಗೂ ಅನ್ವಯವಾಗುತ್ತದೆ. ಅವರು ತಮ್ಮ ಮಾತೃಭಾಷೆಯ, ಪ್ರಾದೇಶಿಕ ಸಂಸ್ಕೃತಿಯ ದೃಷ್ಟಿಯಿಂದ ಯಾರೇ ಆಗಿರಲಿ ಇಲ್ಲಿ ಅವರು ಕನ್ನಡನಾಡಿನವರು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಎಲ್ಲದರ ಪ್ರಗತಿಯಲ್ಲಿಯೂ ಅವರು ಭಾಗಿಗಳಾಗಿರಬೇಕು. ಅವರಿದ್ದಾರೆ ಎನ್ನುವುದು ಕನ್ನಡಕ್ಕೆ ಕಾಲ್ತೊಡಕಾಗಬಾರದು.

ಮನುಜಮತ ವಿಶ್ವಪಥ, ಕನ್ನಡ ನಾಡಿನ ರಾಜಧಾನಿಯಲ್ಲಿ, ಪುಟ ೫೦

೪೦೮

ಎಲ್ಲಿ ಪೂಜೆ ನಡೆಯುತಿಹುದೊ
ಅಲ್ಲೆ ನನ್ನ ದೇಗುಲ;
ಪ್ರಾರ್ಥಿಸಿರುವುದಾರ ಹೃದಯ
ಅದುವೆ ನನ್ನ ಗುರುಕುಲ;
ದೇವರೇಗಳಾರ್ಗೆ ನೆನಪೊ
ನಾನವರ ಕುಲ!

ಮಂತ್ರಾಕ್ಷತೆ, ಪುಟ ೧೮

೪೦೯

ಪೂರ್ವ ಪಶ್ಚಿಮ ದಕ್ಷಿಣ ಸಮುದ್ರಗಳೂ ಹಿಮವತ್ ಪರ್ವತವೂ ನಮ್ಮನ್ನು ಭೌಗೋಲಿಕವಾಗಿ ಒಂದುಗೂಡಿಸಿರಬಹುದು. ಆದರೆ ರಾಜಕೀಯವಾಗಿ ಭಾರತೀಯ ಜನತೆ ಪರಸ್ಪರ ವೈರಿಗಳೆಂದು ಪರಿಗಣಿತವಾಗಿದ್ದ ಭಿನ್ನ ಭಿನ್ನ ರಾಜ್ಯಗಳಲ್ಲಿ ಖಂಡ ಖಂಡವಾಗಿ ಹರಿದು ಹಂಚಿ ಹೋಗಿದ್ದಾಗಲೂ ಅವರನ್ನೆಲ್ಲ ಶತ ಶತಮಾನಗಳಿಂದ ಅಖಂಡವಾಗಿಯೆ ಇಟ್ಟಿದ್ದ ಶಕ್ತಿಯಾವುದು ? ಆ ಶಕ್ತಿ ವೇದೋಪನಿಷತ್ತು ಷಡ್ದರ್ಶನಾದಿಗಳಲ್ಲಿ ಹರಿಯುತ್ತಿರುವ ಅಧ್ಯಾತ್ಮಶಕ್ತಿ ; ರಾಮಾಯಣ ಮಹಾಭಾರತ ಭಾಗವತಾದಿಗಳಲ್ಲಿಯೂ ದೇಶ ದೇಶದ ಕಾಲ ಕಾಲದ ಮಹಾಕವೀಂದ್ರರ ಮಹಾಕೃತಿಗಳಲ್ಲಿಯೂ ಹರಿಯುತ್ತಿರುವ ಸಾಹಿತ್ಯ ಶಕ್ತಿ ; ಋಷಿಯೋಗಿ ಸಾಧಕ ಸಿದ್ಧ ಸಾಧು ಸಂತರ ದಿವ್ಯ ಜೀವನದಿಂದ ಆಕರ್ಷಿತವಾಗಿ, ಅವತರಿಸಿ ಅಭಿವ್ಯಕ್ತಗೊಂಡಿರುವ, ಹಾಗೂ ಒಂದಲ್ಲ ಇನ್ನೊಂದು ರೀತಿಯಿಂದ, ಒಬ್ಬರಲ್ಲ ಮತ್ತೊಬ್ಬರಿಂದ ಇಂದಿಗೂ ಆವಿರ್ಭಾವಗೊಳ್ಳುತ್ತಿರುವ ಧಾರ್ಮಿಕಶಕ್ತಿ. ಆ ಶಕ್ತಿಯೆ ಭಾರತಿ ! ನೆಲದಲ್ಲಿ ಅದು ನೆಲೆಗೊಂಡಿರುವ ವಿಭಾಗವೆ ಭಾರತ ! ಅಲ್ಲಿ ಹುಟ್ಟಿ ಬೆಳೆದು, ಅವರ ಧ್ಯೇಯೋದ್ದೇಶಗಳನ್ನು ಸಾಧಿಸುತ್ತ ಪೂರ್ಣತ್ವದ ಕಡೆಗೆ ಸಾಗುತ್ತಿರುವ ಜನವೇ ಭಾರತೀಯರು.

ಷಷ್ಠಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೮

೪೧೦

ತನ್ನ ಆಕಾರದ ಅಥವಾ ತಾನು ಅರಿತ ಪ್ರಕಾರದ ದೇವರೆ ದೇವರು ; ಭಗವದ್ವಸ್ತು ತನಗರಿಯದ ಅಥವಾ ತಾನು ಗ್ರಹಿಸಲಾರದ ಅನ್ಯಾಕಾರ ಅಥವಾ ಅನ್ಯಪ್ರಕಾರಗಳಿಂದ ಭಾವಿತವಾದರೆ ಅದು ದೇವರಲ್ಲ ಎಂದು ವಾದಿಸುವವನು ಮೂರ್ಖನಲ್ಲದಿದ್ದರೆ ಶಠನಂತೂ ನಿಶ್ಚಯ.

ಷಷ್ಠಿನಮನ, ಶ್ರೀ ನೆಹರೂ ವೈಜ್ಞಾನಿಕದೃಷ್ಟಿ ಮತ್ತು ವಿಚಾರ ಬುದ್ಧಿ, ಪುಟ ೨೬೯

೪೧೧

ಸಿದ್ಧನೂ ಸ್ಥಿತಪ್ರಜ್ಞನೂ ಆಗಿ ವಿಜ್ಞಾನಮಯಕ್ಕೇರಿದ ಪೂರ್ಣಯೋಗಿಗೆ ಮಾತ್ರ ಪೂರ್ಣದೃಷ್ಟಿಸಾಧ್ಯ.

ತಪೋನಂದನ, ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ, ಪುಟ ೧೨೩

೪೧೨

ಎಲ್ಲಿ ಸೌಂದರ್ಯ ಪರಿಮಿತದಲ್ಲಿ ವಿಹರಿಸುತ್ತದೆಯೋ ಅಲ್ಲಿ ಮೈದೋರುವುದು ಲಾಲಿತ್ಯ. ಎಲ್ಲಿ ಅಪರಿಮಿತದಲ್ಲಿ ವಿಜೃಂಬಿಸಿ ವಿರಾಟ್ ಸ್ಪರ್ಶಿಯಾಗುತ್ತದೆಯೋ ಅಲ್ಲಿ ಹೊರಹೊಮ್ಮುವುದು ಭವ್ಯತೆ. ಅಲ್ಪ ಶಬ್ದಕ್ಕೆ ಯಾವ ಹೀನಾರ್ಥವನ್ನೂ ಆರೋಪಿಸದೆ ಹೇಳುವುದಾದರೆ, ಅಲ್ಪತೆ ಲಾಲಿತ್ಯದ ಒಂದು ಲಕ್ಷಣ ; ಭೂಮತೆ ಭವ್ಯತೆಯ ಲಕ್ಷಣ.

ತಪೋನಂದನ, ಪಂಪನಲ್ಲಿ ಭವ್ಯತೆ, ಪುಟ ೩೮

೪೧೩

ಆರ್ಯ ಸಂಸ್ಕೃತಿಯನ್ನು ಸಂಪೂರ್ಣವಾಗಿ ಮುಳುಗಿಸಿ ಮಾಯಮಾಡಿ ಬಿಡುವುದೋ ಎಂಬಂತೆ ರಭಸದಿಂದ ನುಗ್ಗಿ ಬಂದ ಪಾಶ್ಚಾತ್ಯ ಸಂಸ್ಕೃತಿಯ ಪ್ರಚಂಡ ಪ್ರವಾಹವನ್ನು ತಡೆದು ಸುಮುಖವಾಗಿಸಿದ ಮಹನೀಯರಲ್ಲಿ ಸ್ವಾಮಿ ದಯಾನಂದ ಸರಸ್ವತಿಯೂ ಸುಮಾನನೀಯನು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೩

೪೧೪

ನಿನ್ನ ಪುಣ್ಯಸಂಗ ಲಭಿಸೆ
ಧನ್ಯನಾದೆನು !
ನಿನ್ನ ಕೂಡೆ ಜನರಿಗೆಲ್ಲ
ಗಣ್ಯನಾದೆನು !
ಅಲ್ಲಗಳೆಯುತಿದ್ದ ಜನಕೆ
ಮಾನ್ಯನಾದೆನು ;
ನಿನ್ನ ಜೊತೆಯೊಳೆನ್ನ ಕಂಡು
ದೂರದರಿಯದಿರುವ ಮಂದಿ
ಗೆಳೆಯರಾದರು.

ಕೊಳಲು, ಕವಿತೆಗೆ, ಪುಟ ೭

೪೧೫

ಕಾಲವೆಂದರೆ ಏನು ? ರವಿಯ ದೂರಕೆ ನಾನು
ದಬ್ಬಿದೆನು : ಆ ಆತ್ಮಬಲವೆ ಕಾಲ !
ದೇಶವೆಂದರೆ ಏನು ? ಒಲಿದು ಭೂಮಿಯ ನಾನು
ತಬ್ಬಿದೆನು : ಆ ಆತ್ಮದೊಲವೆ ದೇಶ !

ಕದರಡಕೆ, ಕಾಲ ಮತ್ತು ದೇಶ, ಪುಟ ೮೦

೪೧೬

ಜೀವಂಗಳಂ ಮಸೆಯಲ್ಕೆ,
ನಿಶಿತಗೊಳಿಸಲ್ಕೆ, ಬೆಳಗಲ್ಕೆ ದುಃಖಭೋಗಂ
ತಾಂ ಸಾಣೆಯೆಲ್ತೆ ?

ಶ್ರೀ ರಾಮಾಯಣ ದರ್ಶನಂ, ದಶಾನನ ಸ್ವಪ್ನಸಿದ್ಧಿ, ಪಾತ್ರ ರಾವಣ, ಪುಟ ೭೮೧

೪೧೭

ಸುಣ್ಣ ಎಲೆ ಅಡಿಕೆಯಂ
ಬಣ್ಣವಾಗುವ ತೆರದಿ
ಭೂತಸಂಯೋಗದಿಂ

ಉದಿಸುವುದು ಚೈತನ್ಯ :
ಜನ್ಮವೆತ್ತಿದುದೆಲ್ಲವಳಿವಂತೆ ಚೈತನ್ಯದಂತ್ಯ !

ಹೊನ್ನ ಹೊತ್ತಾರೆ, ಸಂದೇಹ, ಪುಟ ೨

೪೧೮

ವಿಶ್ವ ಸಂಸ್ಥೆಯಂಥ ಸಂಸ್ಥೆ ಬಂದಿದೆ. ನಾಳೆ ಒಂದು ಪ್ರಪಂಚ, ಒಂದು ಸರ್ಕಾರ ಆದರೂ ಆಗಬಹುದು.

ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಮಕ್ಕಳ ಸಾಹಿತ್ಯಕ್ಕೆ ಆಧುನಿಕ, ಮೌಲ್ಯಗಳು, ಪುಟ ೫೦

೪೧೯

ಮೊದಲೆಲ್ಲಿ,
ಕೊನೆಯೆಲ್ಲಿ ನಿನ್ನ ರಚನೆಯ ವಿಶ್ವವಿಸ್ತರಕೆ,
ರಸಋಷಿಯೆ, ಓ ವರ್ಣಶಿಲ್ಪಿ ? ಬಣ್ಣಗಳಲ್ತು,
ನಿನ್ನ ಹೃದಯದ ರಕ್ತವರ್ಣಗಳೆ ಕುಂಚಿಕೆಗೆ
ತೀರ್ಥಮೈಸಲೆ ಬರೆವ ಸಾಧನೆಗೆ ! ಚಿತ್ರಗಳೊ,
ಬರಿಯ ಬರೆಪಗಳಲ್ತು : ಕಾಲಮಂ ದೇಶಮಂ
ಮೇಣನಂತಾಕಾಶದಾಂತರ್ಯಮಂ ಕೊರೆದು,
ಅವ್ಯಕ್ತದಂಗಂಗಳಂ ಬಣ್ಣದಿ ಪೊರಳ್ಚಿ,
ಕಡೆದ ಕನಸುಗಳಲ್ತೆ ? ಧಾನ್ಯದಶರೀರತೆಗೆ
ಸಾಕಾರತೆಯನಿತ್ತು, ಮೌನಮಾಕೃತಿವೆತ್ತು,
ಕಲೆಯ ಹೆಪ್ಪಿಗೆ ಕನಸುಗಳೆ ಹೆತ್ತು, ಕಣ್ಬಡೆದು,
ರಸವೆ ಸಾಕ್ಷಾತ್ಕಾರಗೊಂಡಿರ್ಪುದೈ ನಿನ್ನ
ಈ ಪವಾಡದ ಚಿತ್ರನಕ್ಷತ್ರ ಶಾಲೆಯಲಿ.

ಅಗ್ನಿಹಂಸ, ರೋರಿಕ್ ಚಿತ್ರಶಾಲಾ ಸ್ಮೃತಿ, ಪುಟ ೬೦-೧

೪೨೦

ವಿವಾಹ ತತ್ವಗಳಲ್ಲಿಯೂ ನರನಾರಿಯರ ಸಂಬಂಧದ ವಿಷಯಗಳಲ್ಲಿಯೂ ಹೊಸ ಹೊಸ ಬಿರುಕುಗಳೂ ಸಡಿಲಗಳೂ ಸಂದೇಹಗಳೂ ಮೊಗದೋರುತ್ತಿರುವ ಈ ಸಮಯದಲ್ಲಿ ನಮ್ಮ ಮನಸ್ಸು ಪ್ರಾಚೀನಕಾಲದ ಮಹಾ ಮಹಿಳೆಯರ ಚರಣ ತಲ ಕ್ಷೇತ್ರಕ್ಕೆ ಯಾತ್ರೆ ಹೋಗಲು ನಾಚುತ್ತಿರುವುದೇನೂ ಅರ್ಥವಾಗುತ್ತದೆ. ಆದರೆ ಆ ಯಾತ್ರೆ ಸಂಪೂರ್ಣವಾಗಿ ನಿಂತುಹೋದರೆ ಎಲ್ಲಿ ಅನರ್ಥವುಂಟಾಗುತ್ತದೆಯೋ ಎಂದು ಹೆದರಿಕೆಯೂ ಆಗುತ್ತದೆ.

ತಪೋನಂದನ, ಮಹಾಶ್ವೇತೆಯ ತಪಸ್ಸು, ಪುಟ ೨೪

೪೨೧

ಕಳುಹು ಆವೇಶದ ಪುತ್ರನನು,
ದೇಶದ ಮಿತ್ರನನು ;

ಕಳುಹು ಪವಿತ್ರ ಚರಿತ್ರನನು,
ಗೌರವ ಪಾತ್ರನನು.–
ಕಳುಹು ಕಲಾರಸ ಭಕ್ತನನು,
ಕಾವ್ಯಾಸಕ್ತನನು ;
ಕನ್ನಡ ಸೇವಾ ಶಕ್ತನನು
ನಿನ್ನಡಿ ಯುಕ್ತನನು.–
ಕಳುಹು ನಿರಂಕುಶ ಮುಕ್ತನನು ,
ಮೌಢ್ಯ ವಿರಕ್ತನನು ;
ಕಳುಹು ಮನೋ ಸ್ವಾತಂತ್ರ್ಯನನು,
ಶಿವ ಪರ ತಂತ್ರನನು.

ಜೇನಾಗುವ, ಬಿನ್ನಯ್ಸಿದಳು ತಾಯಪ್ಪಳಿಂತು, ಪುಟ ೧೯

೪೨೨

ಕುಳಿತಿಲ್ಲಿ ಶಿವನಂ
ಧ್ಯಾನಿಸುವೆ. ಸದ್ದಿಲ್ಲದೇಕಾಂತದಲ್ಲಿಯೇ
ಭಕ್ತಿಲತೆ ಚಿಗುರಿ ಪರಮಾತ್ಮನಡಿಯಲರುಗಳ
ಮುಟ್ಟುವುದು.

ಜಲಗಾರ, ಪಾತ್ರ ಜಲಗಾರ, ಪುಟ ೨೯

೪೨೩

ಒಂದೊಂದು ಸಲ ದೊಡ್ಡವರ ಸಂಗ ಸಹವಾಸವೆಲ್ಲ ತುಂಬಾ ಬೇಜಾರಾಗಿ ಇದರ ಬದಲು ಮಕ್ಕಳ ಸಹವಾಸ, ಅವರ ಸಾಹಿತ್ಯಗಳ ಮೂಲಕ ಬೇರೊಂದು ಪ್ರಪಂಚಕ್ಕೆ ಪ್ರವಾಸಮಾಡಿ ಮನಸ್ಸಿಗೆ ಜಗತ್ತೆಲ್ಲ ಈಥರದಲ್ಲೆ ಇದ್ರೆಸಾಕಲ್ಲ ಅನ್ಸುತ್ತೆ. ಅಷ್ಟು ಸಂತೋಷವಾಗುತ್ತೆ ಮಕ್ಕಳ ಸಾಹಿತ್ಯ ಮತ್ತು ಸಹವಾಸ.

ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಮಕ್ಕಳ ಸಾಹಿತ್ಯಕ್ಕೆ ಆಧುನಿಕ ಮೌಲ್ಯಗಳು, ಪುಟ ೫೧

೪೨೪

ಶ್ರೇಷ್ಠತೆ ಸಂಸರ್ಗಿಸೆ ಸಾಮಾನ್ಯತೆ
ಹೊಳೆಯದೆ ಹೊನ್ನಂತೆ ?

ಪಕ್ಷಿಕಾಶಿ, ಇಂದ್ರ ದಿಗಂತದಿ, ಪುಟ ೨೮

೪೨೫

ಭಾಷೆಯ ಬೇರೆ ಬೇರೆಯ ಉಪಯೋಗಗಳನ್ನೂ ಪ್ರಯೋಜನಗಳನ್ನೂ ಗುರುತಿಸದೆ ಲೆಕ್ಕಿಸದೆ ಕಾವ್ಯದ ಅಥವಾ ಶಾಸ್ತ್ರದ ಬರವಣಿಗೆಗಳನ್ನು ಓದತೊಡಗಿದರೆ ಸ್ವಲ್ಪದೂರ ಮುಂದುವರಿಯುವುದರೊಳಗಾಗಿ ನಾವು ಭಾವದ ಅಥವಾ ಬುದ್ಧಿಯ ತೊಡಕುಗಳಿಗೆ ಅನಿವಾರ್ಯವಾಗಿ ಒಳಗಾಗಬೇಕಾಗುತ್ತದೆ. ಶಾಸ್ತ್ರಕ್ಷೇತ್ರದಲ್ಲಿ ಪದ, ಪದಪುಂಜ

ಮತ್ತು ವಾಕ್ಯಗಳಿಗಿರುವ ವ್ಯಾಪಾರ ವ್ಯಾಪ್ತಿಗಳನ್ನು ಕಾವ್ಯಕ್ಷೇತ್ರಕ್ಕೂ ವಿಸ್ತರಿಸಿ, ಒಂದನ್ನು ಮತ್ತೊಂದರಿಂದ ಅಳೆದು ತೂಗಿ, ಒಂದರ ಉದ್ದೇಶವನ್ನು ಮತ್ತೊಂದರಲ್ಲಿ ಕಾಣಬಯಸಿ, ಆ ಎರಡರ ನಿಜವಾದ ಪ್ರಯೋಜನದಿಂದಲೂ ವಂಚಿತರಾಗುತ್ತೇವೆ.

ದ್ರೌಪದಿಯ ಶ್ರೀಮುಡಿ, ಭಾಷೆ ಲೋಕೋಪಯೋಗಿ ಮತ್ತು ಭಾವೋಪಯೋಗಿ, ಪುಟ ೭೩

೪೨೬

ಚರಿತ್ರೆ ಒಂದು ವೇಳೆ ಕವಿಯ ಅನುಭವವಾಗಿ ಕಾವ್ಯವಾಗಬಹುದು. ಆದರೆ ಕಾವ್ಯ ನಡೆದ ಚರಿತ್ರೆಯಾಗಲಾರದು. ಅದನ್ನು ಚರಿತ್ರೆ ಓದುವ ದೃಷ್ಟಿಯಿಂದ ಓದಬಾರದು. ಹಾಗೆ ಮಾಡಿದರೆ ಚರಿತ್ರೆಯ ಅಧ್ಯಯನದಿಂದ ಒದಗಬಹುದಾದ ಅಭ್ಯುದಯದಿಂದಲೂ ದೂರವಾಗಿ ಕಾವ್ಯಪಾರಾಯಣದಿಂದ ಲಭಿಸುವ ನಿಃಶ್ರೇಯಸದಿಂದಲೂ ವಂಚಿತರಾಗುವ ಉಭಯ ನಷ್ಟಕ್ಕೆ ಪಕ್ಕಾಗುತ್ತೇವೆ.

ವಿಭೂತಿ ಪೂಜೆ, ಶ್ರೀ ರಾಮಾಯಣ ದಿವ್ಯಶಿಲ್ಪಿ, ಪುಟ ೧೪೧

೪೨೭

ನಿರ್ಗುಣಬ್ರಹ್ಮದ ಸಗುಣತತ್ತ್ವಗಳು ಋತಚಿತ್ ಸತ್ಯದಲ್ಲಿ ಋತಕಲ್ಪನಾವ್ಯಕ್ತವಾಗಿ, ಋತಚಿತ್ತಿನ ಅಧಿಕಾರದಲ್ಲಿಯೆ ಅಭಿವ್ಯಕ್ತಿಯನ್ನು ಪಡೆಯುತ್ತವೆ. ಆ ಅಭಿವ್ಯಕ್ತಿಯೇ ಸೃಷ್ಟಿ. ಸೃಷ್ಟಿ ಒಂದು ಮಹಾಪ್ರತಿಮೆ: ತನಗೆ ಹಿನ್ನೆಲೆಯೂ ಬೆಂಬಲವೂ ಮುನ್ನಡೆಯೂ ಕಡೆಗುರಿಯೂ ಆಗಿರುವ ಋತಚಿದ್ ವಿಭೂತಿಯ ಶಾಶ್ವತಸತ್ಯಗಳು ಕಾಲದೇಶ ಪಂಜರದಲ್ಲಿ ಗೋಚರವಾಗುವ ಒಂದು ಬೃಹತ್ ಪ್ರತಿಮೆ.

ತಪೋನಂದನ, ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ, ಪುಟ ೧೨೨

೪೨೮

ಕಾರಣಸಂಬಂಧವಿರಲಿ ನಿಮಿತ್ತಸಂಬಂಧವಿರಲಿ ಒಂದು ಪ್ರಕೃತಿ ವಿಷಯದ ಭಾವಕೋಶಕ್ಕೆ ಮತ್ತೊಂದು ಅನ್ಯವಿಷಯದ ಭಾವಕೋಶವನ್ನು ಸಂಗಗೊಳಿಸಿ, ಪ್ರಕೃತ ವಿಷಯದ ಭಾವಕೋಶದ ವೃದ್ಧಿಯಿಂದ ರಸವೃದ್ಧಿಯಾಗುವಂತೆ ಮಾಡುವುದೇ ಉಪಮಾ ಅಲಂಕಾರದ ಉದ್ದೇಶ. ಮೊದಲನೆಯದರ ಭಾವಕೋಶ ಪುಷ್ಟಿಗೊಳ್ಳಬೇಕಾದರೆ ಎರಡನೆಯದರ ಭಾವಕೋಶ ಅದಕ್ಕೆ ಅವಿರುದ್ಧವಾಗಿರಬೇಕೆಂದು ಬೇರೆ ಹೇಳಬೇಕಾಗಿಲ್ಲ.

ತಪೋನಂದನ, ಮಹೋಪಮೆ, ಪುಟ ೬೨-೩

೪೨೯

ನಾ ನಿನಗೆ ನೀನೆನಗೆ ಜೇನಾಗುವಾ !
ರಸ ದೇವಗಂಗೆಯಲಿ ಮೀನಾಗುವಾ !
ಹೂವಾಗುವಾ ಹಣ್ಣಾಗುವಾ
ರತಿರೂಪಿ ಭಗವತಿಗೆ ಮುಡಿಪಾಗುವಾ !

ಜೇನಾಗುವಾ, ಜೇನಾಗುವಾ, ಪುಟ ೧

೪೩೦

ಆತ್ಮ ಹಾನಿಯಿಂ ಸರ್ವನಾಶಮಕ್ಕುಂ

ಬೆರಳ್ ಗೆ ಕೊರಳ್, ಪಾತ್ರ ಏಕಲವ್ಯ, ಪುಟ ೪೪

೪೩೧

ಪ್ರಕೃತಿಯ ಪ್ರತಿಶೋಧಕ್ಕೆ ಸಿಲುಕಿದ ಆತ್ಮವು ಪ್ರಕೃತಿಯನ್ನು ಗೆದ್ದು ಉದ್ಧಾರವಾಗಬೇಕು ; ಇಲ್ಲದಿದ್ದರೆ ಆದರ್ಶ ಚ್ಯುತವಾಗಿ ವಿನಾಶಹೊಂದಬೇಕು ; ಇಲ್ಲದಿದ್ದರೆ ಕೋಟಿ ಕೋಟಿ ಮಾನವರು ಹಿಡಿದಿರುವ ಸಾಧಾರಣ ಪಥವನ್ನು ಹಿಡಿಯಬೇಕು.

ಕಾನೂರು ಹೆಗ್ಗಡಿತಿ, ಪುಟ ೨೭೦-೧

೪೩೨

ಕೃತಿ ಏಕಮಾದೊಡಂ
ಮಾಳ್ಪಾತನಿರ್ಪ ಸೀಮೆಯ ಜನದ ಸಂಸ್ಕೃತಿಗೆ
ಕುರುಪಲ್ತೆ ತಾಂ ?

ಶ್ರೀ ರಾಮಾಯಣ ದರ್ಶನಂ, ಅತ್ರಿಯಿಂದಗಸ್ತ್ಯಂಗೆ, ಪಾತ್ರ ರಾಮ, ಪುಟ ೧೯೭

೪೩೩

ಒಂದು ಒಳ್ಳೆಯ ಧ್ಯೇಯದ ಕಡೆಗೆ ಮಾರ್ಗಕ್ರಮಣ ಮಾಡುವುದು ಪ್ರಗತಿಶೀಲ ಮನುಷ್ಯತ್ವದ ಸಲಕ್ಷಣ.

ವಿಚಾರ ಕ್ರಾಂತಿಗೆ ಆಹ್ವಾನ, ಲಿಪಿ ಭಾಷೆ ಮತ್ತು ಭಾವೈಕ್ಯತೆ, ಪುಟ ೧೧೧

೪೩೪

ಹರಸುವೆನು ಹೆಸರಿಟ್ಟು,
ಹೆಸರಿನ ಹಿರಿಮೆ ಉಸಿರಿಗೂ ಬರಲಿ ಎಂದೊಲಿದು
ಬಯಸಿ

ಜೇನಾಗುವಾ, ಹೆಸರಿಟ್ಟು ಹರಸುವೆನು ಚೈತ್ರನಾ, ಪುಟ ೭೦

೪೩೫

ನನ್ನ ಪುರೋಹಿತಷಾಹಿ ಖಂಡನೆಗೆ ಕಾರಣವನ್ನು ನನಗಾಗಿರಬಹುದಾದ ವೈಯಕ್ತಿಕ ಅನುಭವದಲ್ಲಿ ಹುಡುಕುವುದು ಅತ್ಯಂತ ಹಾಸ್ಯಾಸ್ಪದ. ನನ್ನ ಮೂವ್ವತ್ತು ನಾಲ್ವತ್ತು ವರ್ಷದ ಹಿಂದಿನ ಬರಹವನ್ನು ಯಾರೊ ಒಬ್ಬರು ಅಂದು ಟೀಕಿಸಿದುದಕ್ಕಾಗಿ ಇಂದು ನಾನು ನಾಲ್ವತ್ತು ವರ್ಷಗಳ ಮೇಲೆ ರೊಚ್ಚು ತೀರಿಸಿಕೊಳ್ಳುವುದಕ್ಕೆ ಹಾಗೆ ಮಾತನಾಡಿದೆನೆಂದು ಹೇಳುವುದು ನನ್ನ ವ್ಯಕ್ತಿತ್ವಕ್ಕೆ ಅತ್ಯಂತ 'ಅಲ್ಪತನ' ಆರೋಪಿಸಿದಂತಾಗುತ್ತದೆ. ನಾನು ಅಷ್ಟು 'ಸಣ್ಣ'ವನಲ್ಲ.

ವಿಚಾರ ಕ್ರಾಂತಿಗೆ ಆಹ್ವಾನ, ಪ್ರಶ್ನೆಗಳಿಗೆ ಉತ್ತರಗಳು, ಪುಟ ೧೧೪

೪೩೬

ಶ್ರೀಗೋಮಟೇಶ್ವರನ ವಿಗ್ರಹವ ಪೂರ್ಯೆಸೆ
ಬ್ರಹ್ಮಸಾಕ್ಷಾತ್ಕಾರಮಾಯ್ತು ನಿನಗೆ!
ಧ್ಯಾನವಾವುದು ನಿನ್ನ ಕಲ್ಪನೆಯ ಮೀರಲರಿಗುಂ?
ನಿನ್ನ ಸಾಧನೆ ಯಾವ ಯೋಗಸಾಧನೆಗೆ ಹೀನಂ?
ನಿನ್ನ ಸಿದ್ಧಿಗೆ ಪಿರಿದದಾವುದೈ, ಶಿಲ್ಪಿಸಿದ್ಧ?
ನೀನೆ ಜೀವನ್ಮುಕ್ತ! ನಿನ್ನದೈ ಬ್ರಹ್ಮಯೋಗಂ!

ಕೊಳಲು, ಗೋಮಟೇಶ್ವರ, ಪುಟ ೪೦

೪೩೭

ಕಾವ್ಯದ ಭೂಮಿಕೆ ಉದ್ದೇಶ ಪ್ರಯೋಜನಗಳಿಗೆ ಅನುಸಾರಿಯಾಗಿ ಕವಿಯ ಕಲ್ಪನಾ ಪ್ರತಿಭೆ ಪರಿಚಿತ ಲೋಕ ನಿಯತಿಯನ್ನು ಉತ್ತರಿಸಿದರೂ ಮತ್ತೊಂದು ಸೂಕ್ಷ್ಮತರ ನಿಯತಿಗೆ ಅಧೀನವಾಗಿ ಸೃಜನಕಾರ್ಯದಲ್ಲಿ ತನ್ನ ಗುರಿಯನ್ನು ಸಾಧಿಸುತ್ತದೆ.

ರಸೋ ವೈ ಸಃ, ಕವಿ ನಿರ್ಮಿತಿಯಲ್ಲಿ ನಿಯತಿಕೃತ ನಿಯಮರಾಹಿತ್ಯ, ಪುಟ ೮

೪೩೮

ವಿಧಿಯ ಸೂತ್ರದ ಜಗಜ್ಜಾಲದೊಳ್
ವ್ಯಕ್ತಿಗಳ್ ಗ್ರಂಥಿಮಾತ್ರಗಳಲ್ತೆ, ವಿಧಿಹಸ್ತ
ಕೌಶಲ ಪ್ರತಿಮೆಗಳ್? ನಂನಮ್ಮ ಕರ್ಮ ಫಲಮಂ
ನಾಮುಣಲೆವೇಳ್ಕುಮ್.

ಶ್ರೀ ರಾಮಾಯಣ ದರ್ಶನಂ, ದೂರಮಿರದಿನ್ ಸುಗತಿ, ಪಾತ್ರ ಸೀತೆ, ಪುಟ ೭೦೯

೪೩೯

ವಯಸ್ಸಿಗೇಂ ಪಿರಿತನಮೆ?
ನಿನ್ನ ಪೆರ್ಮೆಗೆ ವಂದಿ ನಿನ್ನಾತ್ಮದೋಜೆ; ಮೇಣ್
ನಿನ್ನ ತೇಜಕೆ ಸಾಕ್ಷಿ ನಿನ್ನಕ್ಷಿ

ಶ್ರೀ ರಾಮಾಯಣ ದರ್ಶನಂ, ಚಿತ್ರಕೂಟಕೆ, ಪಾತ್ರ ಹಾರೀತ, ಪುಟ ೧೪೭

೪೪೦

'ಶ್ರೀ ರಾಮಾಯಣ ದರ್ಶನಂ' ಕಾವ್ಯ ಬರೆಯಲು ಸುಮಾರು ೯–೧೦ ವರ್ಷ ಹಿಡಿಯಿತು. ಆ ಹತ್ತು ವರ್ಷಗಳ ಕಾವ್ಯ ತಪಸ್ಸಿನಲ್ಲಿ ನಾನಿದ್ದಾಗ ಎಷ್ಟು ಟೀಕಿಸಿದರೂ ಆಹ್ವಾನಿಸಿದರೂ ಆಕರ್ಷಿಸಿದರೂ ಮೋಹಿಸಿದರೂ ಯಾವುದಕ್ಕೂ ನನ್ನನ್ನು ಜಗ್ಗಲು ಬಿಡಲಿಲ್ಲ; ಆ ಶಕ್ತಿ ತನ್ನ ಕೆಲಸವನ್ನು ನನ್ನ ಕೈಯಿಂದ ಸಾಧಿಸಿತು. ಬಹುಶಃ ಇಂಥ ಸಾಧನೆಯ ಕಾಲದಲ್ಲಿ ಇತರರು ಜೀವನದ ಸಂತೋಷಗಳು

ಎಂದು ಕರೆಯುವ ಅನೇಕ ವಿಷಯಗಳಿಂದ ಕವಿ ವಂಚಿತನಾಗಬೇಕಾಗುತ್ತದೆ. ಆ ರೀತಿಯಲ್ಲಿ ಒಂದು ತ್ಯಾಗವನ್ನು ಒಪ್ಪಿಕೊಳ್ಳದಿದ್ದರೆ ಶ್ರೇಷ್ಠ ಕೃತಿರಚನೆ ಸಾಧ್ಯವಾಗುವುದಿಲ್ಲ.

ಷಷ್ಟಿನಮನ, ವಿಶ್ವಮಾನದ, ಪುಟ ೪೭

೪೪೧

ಮೆಚ್ಚುಗೆಯೆ ನನಗೆ ಕೊಲೆ ;
ಬದುಕುವುದೆ ನನಗೆ ಬೆಲೆ.
ಸಾಧನೆಯ ಛಾಯೆ ಕಲೆ ;
ವಿಶ್ವಾತ್ಮವದಕೆ ನೆಲೆ.
ನಿನಗದು ಚಮತ್ಕಾರ ;
ನನಗೊ ಸಾಕ್ಷಾತ್ಕಾರ !
ಮೌನದಿಂದನುಭವಿಸು :
ಕೋ ನಮಸ್ಕಾರ !
ಕಲೆಯೆಂದು ಹೊಗಳುವೊಡೆ :
ಕೋಟಿ ಧಿಕ್ಕಾರ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ನಾನು ಕವಿಯಲ್ಲ, ಪುಟ ೮೪

೪೪೨

ಗಿರಿವನಪ್ರೀತಿ ತಾಂ ದೈವಕೃಪೆ ದಲ್.
ಜಗದೀಶ್ವರನ ಮಹಿಮೆ ಸಂವೇದ್ಯವಹುದಿಲ್ಲಿ
ಭವ್ಯ ಸೌಂದರ್ಯ ಶೀಲದ ವನ್ಯ ಶಾಂತಿಯಲಿ.
ಉಪನಿಷತ್ತಿನ ಮಹಾ ಮಂತ್ರಾನುಭವಗಳುಂ
ಹೃದ್ಗಮ್ಯವಿಲ್ಲಿ. ಚಿತ್ತಕೆ ಸಮಾಧಿಯನಿತ್ತು
ಹರಿದಂತ ವಿಶ್ರಾಂತಿ ಹರಿತ ಕಾನನಮಯಂ ತಾಂ
ಪರ್ವತಶೇಣಿ ಪರ್ವಿದೆ ನೋಡು ಶಿವನಂತೆವೋಲ್,
ಧ್ಯಾನ ಮಾಳ್ಪಗೆ ಹೃಷ್ಟರೋಮತೆಯನಿತ್ತು.

ಶ್ರೀ ರಾಮಾಯಣ ದರ್ಶನಂ, ಶಿಲಾತಪಸ್ವಿನಿ, ಪಾತ್ರ ವಿಶ್ವಾಮಿತ್ರ, ಪುಟ ೪೪

೪೪೩

ಯಾವ ವ್ರತವಾದರೂ ಆತ್ಮದ ಶ್ರೇಯಸ್ಸಿಗೆ ಆವಶ್ಯಕವಾಗಿದ್ದರೆ ಜಯಶೀಲವಾಗುತ್ತದೆ. ಒಬ್ಬರು ಮಾಡಿದ್ದಾರೆಂದು ಮತ್ತೊಬ್ಬರು ಅನುಕರಿಸುವ ವ್ರತ ಹುಟ್ಟಿ ಬಂದ ಮೀಸೆಯಂತಿರುವುದಿಲ್ಲ, ಕಟ್ಟಿಕೊಂಡ ಗಡ್ಡದಂತಿರುತ್ತದೆ. ನಸು ಜಗ್ಗಿದರಾಯ್ತು ಕಿತ್ತುಬರುತ್ತದೆ.

ತಪೋನಂದನ, ಮಹಾಶ್ವೇತೆಯ ತಪಸ್ಸು, ಪುಟ ೧೮

೪೪೪

ಗುರುಗೆ ಗುರುವಾದವಗೆ ಗೌರವಮೆ ಗುರುಗಾಣ್ಕೆ!

ಚಿತ್ರಾಂಗದಾ, ಪಾತ್ರ ಚಿತ್ರಾಂಗದೆ, ಐದನೆಯ ಪರ್ವಂ, ಪಂಕ್ತಿ ೨೦೭೪, ಪುಟ ೭೫

೪೪೫

ವಿಶ್ವವಿದ್ಯಾನಿಲಯಗಳು ಮಾತ್ರವೆ ಜ್ಞಾನಗಂಗೋತ್ರಿಗಳಾಗಿವೆ ಎಂದರೆ ತಪ್ಪಾಗುತ್ತವೆ. ವಿಶ್ವವಿದ್ಯಾನಿಲಯಗಳ ಹೊರಗೆ ಇದ್ದು ನಾನಾ ಪ್ರಮಾಣದಲ್ಲಿ ಶಕ್ತಿ ಪಾತ್ರಗಳಾಗಿ ಪ್ರವಹಿಸುತ್ತಿರುವ ಚೇತನಗಳುಂಟು. ಪೂರ್ಣಪ್ರವಾಹದಂತೆ ಅಲ್ಲದಿದ್ದರೂ ಹೊಳೆಯಂತೆ, ನಾಲೆಗಳಂತೆ, ಕಿರುಕಾಲುವೆಗಳಂತೆ ಇರುವವರೂ ಉಂಟು. ವಿಶ್ವವಿದ್ಯಾನಿಲಯಗಳೂ ಮಾಡದ ಮಹತ್‌ಕಾರ್ಯವನ್ನು ಮಾಡುತ್ತಿರುವ ಸಂಘ ಸಂಸ್ಥೆಗಳುಂಟು... ಇಂಥವರನ್ನೆಲ್ಲ ವಿಶ್ವವಿದ್ಯಾನಿಲಯ ತನ್ನ ನಿಧಿಯನ್ನಾಗಿ ಮಾಡಿಕೊಳ್ಳಬೇಕು ; ತನ್ನ ಪರಿಧಿಯಲ್ಲಿ ಸೇರಿಸಿಕೊಳ್ಳಬೇಕು. ಹಾಗೆಮಾಡದೆ ಮಡಿವಂತಿಕೆಯನ್ನು ತೋರಿದರೆ ಮಹಾ ನಷ್ಟವಾಗುವುದು ಖಂಡಿತ. ಹಾಗಾಗದಿರಲಿ.

ಮನುಜಮತ ವಿಶ್ವಪಥ, ತ್ರಿಕಾಲಸಾಹಿತ್ಯ, ಸಕಾಲಸಾಹಿತ್ಯ, ಪುಟ ೨೭-೮

೪೪೬

ಓ ಚಂಚಲತೆ, ನಿನ್ನ ಹೆಸರೇ ಸ್ತ್ರೀಯಲ್ತೆ ?

ರಕ್ತಾಕ್ಷಿ, ಪಾತ್ರ ಬಸವಯ್ಯ, ಪುಟ ೬

೪೪೭

ನಮ್ಮಲ್ಲಿರುವ ಶಕ್ತಿ ಯಾವ ಕಾರ್ಯರಂಗಕ್ಕೆ ಮನಃಪೂರ್ವಕವಾಗಿ ಇಳಿದರೂ ತನ್ನ ಕೆಲಸವನ್ನು ಸಾಧಿಸುತ್ತದೆ. ಅದರಲ್ಲಿಯೂ ನಾವು ಎಷ್ಟರಮಟ್ಟಿಗೆ ನಮಗಿಂತಲೂ ಮೇಲಿರುವ ಮತ್ತೊಂದು ಶಕ್ತಿಯನ್ನು ನೆಮ್ಮಿ ಕೆಲಸಕ್ಕೆ ಹೊರಡುತ್ತೇವೆಯೋ ಅಷ್ಟರ ಮಟ್ಟಿಗೆ ಅದರ ಭಾರವನ್ನೆಲ್ಲಾ ಆ ಶಕ್ತಿಯೇ ವಹಿಸಿಕೊಂಡು ಸೇವೆ ಮಾಡಿಸಿಕೊಳ್ಳುತ್ತದೆ.

ಷಷ್ಟಿನಮನ, ವಿಶ್ವಮಾನವ, ಪುಟ ४೭-೮

೪೪೮

ಕವಿಯ ಕಾವ್ಯಪ್ರತಿಮೆ ಬ್ರಹ್ಮಕವಿಯ ವಿಶ್ವಪ್ರತಿಮೆಯಾದಾಗ, ಸಾಮಾನ್ಯ ಸಹೃದಯ ಪ್ರಜ್ಞೆ ರಸಋಷಿ ಪ್ರಜ್ಞೆಯಾಗಿ ಏರಿದಾಗ, ವಿಶ್ವಪ್ರತಿಮೆಯಲ್ಲಿ ಭೂಮಾನುಭೂತಿಯ ಬ್ರಹ್ಮ ರಸಾಸ್ವಾದ ಸಾಧ್ಯವಾಗುವುದು, ಈ 'ದರ್ಶನಧ್ವನಿ' ಶಕ್ತಿಯಿಂದಲೆ. ದರ್ಶನಧ್ವನಿಶಕ್ತಿಯ ಕೃಪೆ ಆಯಿತೆಂದರೆ ಆ ರಸಾನುಭವ ಮಾಡುವ ಚೇತನಕ್ಕೆ ಅಲ್ಪ ಮತ್ತು ಭೂಮಗಳಿಗಿರುವ ಕೃತಕ ವ್ಯತ್ಯಾಸ ಮಾಯವಾಗುತ್ತದೆ.

ರಸೋ ವೈ ಸಃ, ರಸೋ ವೈ ಸಃ, ಪುಟ ೧೩೫

೪೪೯

ಸಂಶಯ ಒಮ್ಮೆ ಮುದಿ ಮಿದುಳನ್ನು ಪ್ರವೇಶಿಸಿತೆಂದರೆ ಒಣಗಿದ ಮರದ ಬುಡಕ್ಕೆ ಗೆದ್ದಲು ಹಿಡಿದಂತಾಗುತ್ತದೆ. ಏನು ಕಂಡರೂ ಏನು ಕೇಳಿದರೂ ಎಲ್ಲವೂ ಸಂಶಯಭೂತವನ್ನು ಮತ್ತೂ ಹಿರಿದಾಗಿ ಮಾಡುವ ಸಾಕ್ಷಿಗಳಾಗಿ ಪರಿಣಮಿಸುತ್ತವೆ. ಮೊದಲು ಸಾಧಾರಣ ಸರಳ ಮುಗ್ಧವಾಗಿ ತೋರುತ್ತಿದ್ದ ವಿಷಯಗಳು ತರುವಾಯ ಪಿತೂರಿಯ ಪಿಶಾಚಿಗಳಾಗಿ ತೋರುತ್ತವೆ. ಸಂಶಯದಿಂದ ಮಾತ್ಸರ್ಯ ದ್ವೇಷ ಕ್ರೋಧಗಳು ಹೊಮ್ಮಿ ಹೃದಯ ಹಿಂಸಾಭಿಮುಖವಾಗುತ್ತದೆ.

ಕಾನೂರು ಹೆಗ್ಗಡಿತಿ, ಪುಟ ೨೪೪

೪೫೦

ನಿಲ್ಲು ನಿಲ್ಲೆಲೆ ಹೆಣ್ಣೆ,
ನಿಲ್ಲು ಚೆಲ್ವಿನ ಕಣ್ಣೆ,
ನಿನ್ನ ಸೊಬಗನು ನೋಡಿ
ಕೈ ಬಿಡುವೆನು !
ಬಗೆ ತಣಿಯೆ ಹೀರಾಡಿ
ಕೈ ಬಿಡುವೆನು !

ಷೋಡಶಿ, ಸೌಂದರ್ಯಯೋಗಿ, ಪುಟ ೫೩

೪೫೧

ಮಹಾಯಾತ್ರೆ ಹೊರಡುವಾತನ ವಿಷಯವೇ ಬೇರೆ. ಅಂತಹ ಪರಿವ್ರಾಜಕನಿಗೆ ದಾರಿಯೆಲ್ಲವೂ ಗುರಿಯೇ; ಯಾತ್ರೆಯುದ್ದಕ್ಕೂ ಆತನು ತೀರ್ಥದರ್ಶಿ ಮತ್ತು ಕ್ಷೇತ್ರಸ್ಪರ್ಶಿ . ಅವನದು ವಿರಾಮಾಯಣ. ಅವನಿಗೆ ಅವಸರವಿಲ್ಲ. ನಡೆದು ನಡೆದು ದಣಿದಾಗ ದಣಿವಾರುವವರೆಗೂ ಕೂತುಕೊಳ್ಳುತ್ತಾನೆ. ನೀರಡಿಕೆಯಾದರೆ ನಾಲ್ಕಾರು ಮೈಲಿಗಳಾಚೆ ಕಾಣಬಹುದಾದ ಸರೋವರಕ್ಕಾಗಿ ಅಡ್ಡದಾರಿ ಹಿಡಿಯುತ್ತಾನೆ. ನೀರ್ಕುಡಿದು ತಣಿದಮೇಲೆ, ಮರಳಿ ತನ್ನ ದಾರಿಗೆ ಸೇರಿ, ಹೊಸತುಗೊಂಡ ಹುರುಪಿನಿಂದ ಮುಂದುವರಿಯುತ್ತಾನೆ. ಎಲ್ಲಿ ಬೈಗಾದರಲ್ಲಿ ಬಳಿಯ ಹಳ್ಳಿಯಲ್ಲಿ ತಂಗುತ್ತಾನೆ. ದಾರಿ ನಡೆಯುವಾಗ ಯಾರಾದರೂ 'ಹತ್ತು ಮೈಲಿ ದೂರದಲ್ಲಿ ಒಂದು ಗೇರುಸೊಪ್ಪೆಯಿದೆ' ಎಂದರಾಗಲಿ, 'ಹದಿನೈದು ಮೈಲಿ ದೂರದಲ್ಲಿ ಒಂದು ಹಳೇಬೀಡೋ ಬೇಲೂರೋ ಸೋಮನಾಥಪುರವೋ ಇದೆ' ಎಂದರಾಗಲಿ, ಸರಿ, ಅಡ್ಡದಾರಿ ಹಿಡಿಯುತ್ತಾನೆ. ಅದರಿಂದ ನಷ್ಟವಿಲ್ಲ. ಆ ಜಲಪಾತವನ್ನೊ ಆ ಕಲೆಯ ಬಲೆಯ ದೇಗುಲವನ್ನೊ ಮನದಣಿಯೆ ನೋಡಿ ಹೊಸಜೀವ ತುಂಬಿಕೊಳ್ಳುತ್ತಾನೆ. ಬೇಸರ ಪರಿಹರಿಸಿಕೊಳ್ಳುತ್ತಾನೆ. ಏಕನಾದದಂತಾಗುತ್ತಿದ್ದ ದಾರಿಯನ್ನು ವಿವಿಧ ಸುಸ್ವರ ಮೇಳವನ್ನಾಗಿ ಮಾರ್ಪಡಿಸಿಕೊಳ್ಳುತ್ತಾನೆ. ಇಮ್ಮಡಿಸಿದ ಹುರುಪಿನಿಂದ, ಆನಂದದಿಂದ, ಉಲ್ಲಾಸದಿಂದ, ಉತ್ಸಾಹದಿಂದ ಹಾಡಿಕೊಳ್ಳುತ್ತಾ ಬಂದು, ಮತ್ತೆ ತನ್ನ

ಬಟ್ಟೆವಿಡಿದು ಮುಂಬರಿಯುತ್ತಾನೆ. ಹೋಗುತ್ತಾ ಹೋಗುತ್ತಾ ಅವನ ಅನುಭವ ಹೆಚ್ಚುತ್ತದೆ. ಭಾವಕೋಶ ಬೆಳೆಯುತ್ತದೆ. ಆ ಯಾತ್ರೆ ಇನ್ನೂ ಹೆಚ್ಚು ಅರ್ಥಪೂರ್ಣವಾಗುತ್ತದೆ ; ಇನ್ನೂ ಭಾವಮಯವಾಗುತ್ತದೆ. ಭಿಕಾರಿ ಬೀದಿವರಿಯುತ್ತಾ ಶ್ರೀಮಂತನಾಗುವ ಭವ್ಯವಾದ ಪವಾಡ ದೃಶ್ಯವನ್ನು ಸಂಧಿಸುತ್ತೇವೆ. ಅಂತಹ ಪರಿವ್ರಾಜಕನೊಡನೆ ಅರೆತಾಸು ಮಾತಾಡಿದರೆ ಸಾಕು, ನಾವೇ ಯಾತ್ರೆಮಾಡಿದಂತಾಗುತ್ತದೆ : ಹೊಳೆ, ಕೆರೆ, ಹಳ್ಳಿ, ಕಾಡು, ಪಟ್ಟಣ, ಪರ್ವತ, ಜಲಪಾತ, ದೇವಾಲಯ, ತರತರದ ಜಂತುಗಳು, ವಿವಿಧ ಶೀಲದ ಮಾನವರು!–ಕೂತಲ್ಲಿಯೇ ಯಾತ್ರೆಯಾಗುತ್ತದೆ. ಆತನ ಬೆನ್ನ ಜೋಳಿಗೆ ಪೊಳ್ಳಾಗಿರಬಹುದು ; ಆದರೆ ಮನಸ್ಸಿನ ಜೋಳಿಗೆ ಕಾಳಿಡಿದು ಸಿಡಿಯುವಂತಿರುತ್ತದೆ.

ಮಹಾಕಾವ್ಯವು ಮೇಲೆ ಹೇಳಿದ ಮಹಾಯಾತ್ರೆಯಂತೆ. ಮಹೋಪಮೆ ಅಲ್ಲಿಯೆ ಕೊಟ್ಟಿರುವ ಆ ಯಾತ್ರೆಯ ವರ್ಣನಾ ಚಿತ್ರದಂತೆ.

ತಪೋನಂದನ, ಮಹೋಪಮೆ, ಪುಟ ೬೮–೯

೪೫೨

ಕಲ್ಪನೆ ಮಾತ್ರವಿದ್ದರೆ ಲಘುವಾಗುತ್ತದೆ ; ಭಾವ ಮಾತ್ರವಿದ್ದರೆ ಬರುಗನಸಾಗುತ್ತದೆ ; ಆಲೋಚನೆ ಮಾತ್ರವಿದ್ದರೆ ಶುಷ್ಕವಾಗುತ್ತದೆ. ಕಲ್ಪನೆ ಮತ್ತು ಭಾವ ಇವೆರಡೂ ಕವಿತೆಗೆ ಬಹುಮುಖ್ಯವಾದ ಅಂಗಗಳೆಂದು ಹೇಳುವವರು ಅವುಗಳೇ ಅದರ ಸರ್ವಸ್ವವೆಂದು ಹೇಳುವಷ್ಟರಮಟ್ಟಿಗೆ ಸಾಹಸ ಮಾಡುತ್ತಾರೆ. ಆಲೋಚನೆ ತತ್ತ್ವಶಾಸ್ತ್ರದ ಕಾರ್ಯ, ಆನಂದವೇ ಕವಿತೆಯ ಉದ್ದೇಶ ; ಆದ್ದರಿಂದ ಹೃದಯವನ್ನು ಆನಂದಪಡಿಸುವ ಕರ್ತವ್ಯವನ್ನು ಬಿಟ್ಟು ಕವಿತೆ ಬುದ್ಧಿಗೆ ಶ್ರಮಕೊಡುವ ಕಾರ್ಯವನ್ನು ವಹಿಸಲಾಗದು ಎಂದು ಅಂಥವರ ಅಭಿಪ್ರಾಯ. ಆದರೆ ಪ್ರಪಂಚದ ಮಹಾಕವಿಗಳನ್ನು ತೆಗೆದುಕೊಂಡರೆ, ಅವರೆಲ್ಲರೂ ಉತ್ತಮ ಆಲೋಚಕರೂ ಆಗಿದ್ದಾರೆ. ಅವರ ಮಹಾಕೃತಿಗಳು ಬೂರುಗದ ಅರಳೆಯಂತೆ ಹಗುರವಾಗಿಲ್ಲ. ವಜ್ರದಂತೆ ಘನವಾಗಿವೆ. ಅರಳೆ ಮಲಗುವುದಕ್ಕೆ ಮೃದುವಾಗಿದ್ದರೂ ಅದಕ್ಕೆಂದಿಗೂ ವಜ್ರದ ಬೆಲೆಯಿಲ್ಲ. ಇದನ್ನು ಚೆನ್ನಾಗಿ ವಿಚಾರ ಮಾಡಿನೋಡಿದರೆ ಧ್ಯಾನಮಯವೂ ತತ್ತ್ವಶೀಲವೂ ಅಲ್ಲದ ಕವಿತೆ ಎಷ್ಟೇ ಭಾವ ರಾಗ ಪೂರ್ಣವಾಗಿದ್ದರೂ ಅದರಲ್ಲಿ ಎಷ್ಟೇ ಮಧುರ ಪದಶೈಲಿಯಿದ್ದರೂ, ಅದು ಸಮುದ್ರದ ತೆರೆಗಳ ಮೇಲೆ ನಲಿದಾಡಿ ಮನಮೋಹಿಸುವ ಕ್ಷಣಿಕ ನಶ್ವರವಾದ ನೊರೆಯಂತೆಯೇ ಹೊರತು ಕಡಲಿನ ಆಳದಲ್ಲಿ ಗಂಭೀರ ಗೌರವದಿಂದ ಮೌನವಾಗಿರುವ ಮುತ್ತುಗಳಂತೆ ಮಾನ್ಯವಾಗಲಾರದು ; ಘನವಾಗ ಲಾರದು ; ಶಾಶ್ವತವಾಗಲಾರದು. ಎಂದರೆ ಉತ್ತಮ ಕವಿತೆಗೆ ತೇಜಸ್ಸಿನಂತೆ ತಪಸ್ಸೂ ಅತ್ಯಾವಶ್ಯಕ. ತಪಸ್ಸಿಲ್ಲದ ತೇಜಸ್ಸು ಪ್ರೇಮವಿಲ್ಲದ ಕಾಮದಂತೆ ತುಚ್ಛವಾದುದು. ಅದರಿಂದ ಇಂದ್ರಿಯಗಳಿಗೆ ತಾತ್ಕಾಲಿಕ ತೃಪ್ತಿ ಲಭಿಸಿದರೂ ಆತ್ಮಕ್ಕೆ ಚಿರಹಾನಿ ತಪ್ಪದು.

ಕಲಾಸುಂದರಿ, ಮುನ್ನುಡಿ, ಪುಟ iv

೪೫೩

ವಿದ್ಯಾರ್ಥಿಯ ಜೀವನವೂ ಒಂದು ತಪಸ್ಸಾಧನೆ; ಪ್ರತಿಯೊಬ್ಬ ದಿಟವಾದ ವಿದ್ಯಾರ್ಥಿಯೂ ಒಬ್ಬ ಗೌರವತಪಸ್ವಿ. ವಿದ್ಯಾರ್ಜನೆಯ ಸಮಯವೆಂದರೆ ಆತ್ಮಶಕ್ತಿ ಸಂಗ್ರಹದ ಕಾಲ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಲ್ಲಿ ಮತಿಗೌರವದ ಆವಶ್ಯಕತೆ, ಪುಟ ೩೪

೪೫೪

ಈ ದೇಹ ದೇವರ ಗುಡಿ. ಅದನ್ನು ಶುಚಿಯಾಗಿಡುವುದು ಪ್ರತಿಯೊಬ್ಬ ಮಾನವನ ಕರ್ತವ್ಯ. ಕೊಳಕಾದ ಗುಡಿಯಲ್ಲಿ ಈಶ್ವರನು ಪ್ರಕಾಶವಾಗನು; ದೆವ್ವ ದೇವರುಗಳಿಗೆ ಕಟ್ಟುವ ಕಾಣಿಕೆಯ ಹಣವನ್ನು ಎಣ್ಣೆ, ಸೀಗೆ, ಸಾಬೂನುಗಳಿಗೆ ಉಪಯೋಗಿಸಿದರೆ ಆತನು ನಮ್ಮನ್ನು ಇನ್ನೂ ಹೆಚ್ಚಾಗಿ ಒಲಿಯುತ್ತಾನೆ; ಏಕೆಂದರೆ, ಆತನಿಗೆ ಬೇಕಾದುದು ನಮ್ಮ ಹೃದಯದ ಸರಳ ಭಕ್ತಿ; ನಮ್ಮ ಕಬ್ಬಿಣದ ಪಿಠಾರಿಯ ದುಡ್ಡಲ್ಲ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೧೯-೨೦

೪೫೫

ಸಿರಿಬನದೇವಿಯ ಬೊಕ್ಕಸದಿಂದ
ಕದ್ದವು ಕೆಲವಿವು ಹಾಡುಗಳು;
ಸುಂದರ ಋತುಗಳ ಸಿರಿಗೈಯಿಂದ
ಸುಲಿದವು ಕೆಲವಿವು ಹಾಡುಗಳು;
ನೇಸರು ಚಂದಿರ ತಾರೆಗಳಿಂದ
ಕೆಲವನು ಭಿಕ್ಷೆಯ ಬೇಡಿದೆನು;
ಬೈಗಿನ ಹೆಣ್ಣನು ಬೆಳಗಿನ ಹೆಣ್ಣನು
ಕಾಡಿಸಿ ಕೆಲವನು ಕೂಡಿದೆನು.
ಹಗಲಿರುಳೆರಡರ ಸಂಗಮದಿಂದ
ಪಡೆದವು ಕಬ್ಬಗಳಲಿ ಕೆಲವು;
ಸುಖದುಃಖಗಳಾಲಿಂಗನದಿಂದ
ಹಡೆದವು ಹಾಡುಗಳಲಿ ಕೆಲವು;
ನೆಚ್ಚಳಿದೊಲುಮೆಯ ಕಂಬನಿ ತೆತ್ತಿಹ
ಭಾವದ ಗೀತೆಗಳಿವು ಕೆಲವು;
ಹುಡುಗಾಟದ ಸಿಂಗಾರದ ಸರಳತೆ
ಬಿನದಕೆ ಹಾಡಿವವಿವು ಕೆಲವು;
ಪರವಿಹವೆರಡರ ನವ ಅಭಿಸಾರವು
ಹೆತ್ತವು ಕೆಲವಿವು ಗಾನಗಳು;

ಜೀವನ ದೇವನ ನವ ಅನುರಾಗವು
ನೀಡಿದವಿವು ಕೆಲ ದಾನಗಳು !

ಕೊಳಲು, ಗೊಲ್ಲನ ಬಿನ್ನಹ, ಪುಟ ೧–೨

೪೫೬

ಭೀಮ ನೀಹಾರಿಕೆಯು
ಭೂಮಿ ರವಿಗಳನೆಲ್ಲ
ಸೆಳೆಯುವಂದದಲಿ
ಪ್ರೇಮವೆಂಬುವ ಶಕ್ತಿ
ನೇಮದಾಲಿಂಗನದಿ
ಬಂಧಿಸಿದೆ ಸಕಲರನು
ವಜ್ರಬಂಧದಲಿ !

ಪ್ರೇಮಕಾಶ್ಮೀರ, ಆಕರ್ಷಣೆ, ಪುಟ ೨೯

೪೫೭

ನಮ್ಮ ಜನತೆಯ ದೃಷ್ಟಿ ಇನ್ನೂ ಕನ್ನಡ ಸರಸ್ವತಿಯ ಮಂದಿರದ ಕಡೆಗೆ ಸಾಕಾದಷ್ಟು ಒಲೆಯದಿರುವುದನ್ನು ನೋಡಿ ಉತ್ಸಾಹಿಗಳಿಗೆ ಎದೆನೋವಾಗುತ್ತದೆ. ದೇವಾಲಯಗಳನ್ನು ಕಟ್ಟಿಸುತ್ತಾರೆ ; ಅನ್ನ ಸತ್ರಗಳನ್ನು ನಿರ್ಮಿಸಿ ದರಿದ್ರ ನಾರಾಯಣ ಸೇವೆಗೆ ಭೂರಿ ಭೋಜನಮಾಡಿಸುತ್ತಾರೆ ; ರೋಗ ಪರಿಹಾರಕ್ಕೆ ಚಿಕಿತ್ಸಾಲಯಗಳನ್ನು ರಚಿಸುತ್ತಾರೆ. ಅವೆಲ್ಲವೂ ಪುಣ್ಯತರುವ ಮಹಾಕಾರ್ಯಗಳೇ ಹೌದು. ಆದರೆ ಸಾಹಿತ್ಯವು ಮನಸ್ಸನ್ನೇ ದೇವಸ್ಥಾನವನ್ನಾಗಿ ಮಾಡುವುದಿಲ್ಲವೇ ? ಅದು ಆತ್ಮಕ್ಕೆ ರಸಾನ್ನದಾನ ಮಾಡುವ ದೇವಸತ್ರವಲ್ಲವೇ ? ಮನೋಮಂದಿರದಲ್ಲಿ ಅಜ್ಞಾನ ದಾರಿದ್ರ್ಯವನ್ನು ಪರಿಹರಿಸಿ ಜ್ಞಾನನಾರಾಯಣನನ್ನು ಪ್ರತಿಷ್ಠಿಸುವುದಿಲ್ಲವೇ ? ಜೀವನದ ಜಡತ್ವವನ್ನು ನೀಗಿ ಚೇತನಮೃತವನ್ನು ದಯಪಾಲಿಸುವ ಚಿಕಿತ್ಸಾಲಯವಲ್ಲವೇ ? ಆರೋಗ್ಯಾಶ್ರಮ ವಲ್ಲವೇ ? ಕೀರ್ತಿದೃಷ್ಟಿಯಿಂದ ಕೂಡ ಅದಕ್ಕಿಂತಲೂ ಹೆಸರನ್ನು ಶಾಶ್ವತವನ್ನಾಗಿ ಮಾಡುವುದು ಬೇರೊಂದಿದೆಯೇ ? ಅರಿಕೇಸರಿಯ ಹೆಸರಿರುವುದು ಪಂಪ ನಿಂದಲ್ಲವೇ ? ನಾವಿಂದು ಅತ್ತಿಮಬ್ಬೆಯನ್ನು ನೆನೆಯುವುದು ರನ್ನನಿಂದಲ್ಲವೇ ? ಶ್ರೀರಾಮ ಮತ್ತು ಶ್ರೀಕೃಷ್ಣರ ಹೆಸರುಗಳೂ ಮಹಾಸಾಹಿತ್ಯಕರ್ತೃಗಳಿಗೆ ಋಣಿಗಳಾಗಿಲ್ಲವೇ ? ಯಾವ ಕಡೆಯಿಂದ ನೋಡಿದರೂ ಸಾಹಿತ್ಯದೇವಿ ವರದಹಸ್ತೆಯಾಗಿ ನಿಂತಿದ್ದಾಳೆ. ಆದ್ದರಿಂದ ಲಕ್ಷ್ಮೀಯ ಪುತ್ರರಲ್ಲಿ ಸರಸ್ವತಿಯ ಯಃಕಶ್ಚಿತ ಭಕ್ತಕಿಂಕರನೊಬ್ಬನ ಸವಿನಯ ಪ್ರಾರ್ಥನೆ : ತಾವೆಲ್ಲರೂ ತಾಟಸ್ಥ್ಯವನ್ನೂ ಔದಾಸೀನ್ಯವನ್ನೂ ದೂರಮಾಡಿ ಔದಾರ್ಯದ ಸಂಗದಲ್ಲಿ ದೇವಿಯ ಸೇವೆಗೆ ಮುಂಬರಿಯಬೇಕೇಂದು ಬೇಡುತ್ತೇನೆ.

ಸಾಹಿತ್ಯ ಪ್ರಚಾರ, ಕನ್ನಡ ಸಾಹಿತ್ಯ, ಪುಟ ೬೩–೪

೪೫೮

ಕೆಲವು ಕಾರ್ಯಗಳನ್ನು ನಾವೇ ಮಾಡುವೆವಾದರೂ ಮಾಡಿಸುವುದು ನಮ್ಮಿಚ್ಛೆಯಲ್ಲ.

ಸಂನ್ಯಾಸಿ ಮತ್ತು ಇತರ ಕಥೆಗಳು, ಆರಾಣೆ ಮೂರು ಕಾಸು, ಪಾತ್ರ ಮಾಧವರಾಯ, ಪುಟ ೪೯

೪೫೯

ಯಾರನು ಕಳುಹಿಸಿದನೊ ಕಾಣೆ!
ಯಾರಾದರು ಆಗದಕೇನಂತೆ?
ನಮ್ಮೊಲುಮೆಯ ಕುಡಿ ನಮಗೆಮ್ಮಂತೆ:
ಕಂದಾ, ನೀನೆಮಗಿಂಪಿನ ಸಂತೆ;
ಸಲಹುತ್ತೊಲಿವೆವೊ, ಶಿವನಾಣೆ!

ಜೇನಾಗುವಾ, ಸ್ವಾಗತ ನಿನಗೆಲೆ ಕಂದಯ್ಯ, ಪುಟ ೩೦

೪೬೦

ಯಾರ ಯಾರ ಹೃದಯಗಳಲ್ಲಿ ಯಾವ ಯಾವ ಭಾವಗಳು ಸಂಚರಿಸುತ್ತಿದ್ದವೊ ಅದನ್ನು ಅವರವರೆ ಬಲ್ಲರು!

ಸ್ವಾಮಿ ವಿವೇಕಾನಂದ, ಪುಟ ೯೯

೪೬೧

ಹಿಗ್ಗುವೆ ಏತಕೆ ಚೆಲುವಿನ ಹೆಣ್ಣೆ?
ಕಡೆಗೀ ರೂಪಿಗೆ ಗತಿ ಮಣ್ಣೆ!
ನಿನ್ನೀ ಅಂದಕೆ ಚಂದಕೆ ಎಲ್ಲಾ
ಮಸಣವೆ ಅಂತ್ಯದ ಗತಿ ಹೆಣ್ಣೆ:

ಕೊಳಲು, ಗತಿ, ಪುಟ ೨೪

೪೬೨

ಇಲ್ಲಿ ಹುಗಲಿಲ್ಲ ನಿನಗೆ, ಓ ಬಿಯದ:
ಇದು ಪಕ್ಷಿಕಾಶಿ!
ಕೊಲ್ವ ಬತ್ತಳಿಕೆ ಬಿಲ್ಲು ಬಾಣವನು
ಅಲ್ಲೆ ಇಟ್ಟು ಬಾ;
ಬಿಂಕದುಕುತಿಯನು ಕೊಂಕು ಯುಕುತಿಯನು
ಎಲ್ಲ ಬಿಟ್ಟು ಬಾ;
ಮೆಯ್ಯ ತೊಳೆದು ಬಾ, ಕಯ್ಯ ಮುಗಿದು ಬಾ,
ಹಮ್ಮನುಳಿದು ಬಾ:

ಪಕ್ಷಿಕಾಶಿ, ಪಕ್ಷಿಕಾಶಿ, ಪುಟ ೧

೪೬೩

ಲೋಕಸಾಹಿತ್ಯಸೃಷ್ಟಿಯಲ್ಲಿಯೂ ಭಾವಸಾಹಿತ್ಯಸೃಷ್ಟಿಯಲ್ಲಿಯೂ ಕನ್ನಡ ಇಪ್ಪತ್ತು ಮೂವತ್ತು ವರ್ಷಗಳಿಂದ ಯಾವ ಭಾಷೆಯಾದರೂ ಹೆಮ್ಮೆ ಪಟ್ಟುಕೊಳ್ಳುವಷ್ಟರಮಟ್ಟಿಗೆ ಬೆಳೆದಿದೆ ಮತ್ತು ಬೆಳೆಯುತ್ತಿದೆ. ನಮ್ಮಲ್ಲಿ ಕೆಲವರು ಈ ವಿಚಾರವಾಗಿ ಮಾತನಾಡುವಾಗ ನೀಚೋಹಂ ಬುದ್ಧಿಯಿಂದಲೊ ದಾಸೋಹಂ ಭಾವದಿಂದಲೊ ಅಥವಾ ನೈಚ್ಯಾನುಸಂಧಾನವೆ ವಿನಯದ ಲಕ್ಷಣ ಎಂದು ಭ್ರಮಿಸಿಯೊ ತುಂಬ ಸಂಕೋಚದಿಂದ, ದೈನ್ಯದಿಂದ, ದರಿದ್ರರು ಶ್ರೀಮಂತರೆದುರು ಕುಗ್ಗಿ ಕುನಿದು ವರ್ತಿಸುವಂತೆ ಮಾತನಾಡುತ್ತಾರೆ. ಅತಿಯಾದ ಆತ್ಮಶ್ಲಾಘನೆ ಸುಸಂಸ್ಕೃತಿಗೆ ಸಲ್ಲದೆಂದು ಒಪ್ಪಿಕೊಂಡರೂ ಆತ್ಮಾವಹೇಳನ ಆತ್ಮತಿರಸ್ಕಾರ ಆತ್ಮತೇಜೋವಧೆಗಳು ಅದಕ್ಕಿಂತಲೂ ಹೆಚ್ಚಿನ ಅಪಾಯಕ್ಕೆ ನಮ್ಮನ್ನು ಗುರಿಮಾಡುತ್ತವೆ. ಪ್ರವರ್ಧಮಾನ ಜೀವಕ್ಕೆ ಆತ್ಮ ಪ್ರತ್ಯಯ ಅತ್ಯಂತಾವಶ್ಯಕ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೧೯

೪೬೪

ನಮ್ಮ ಪರಪ್ರತ್ಯಯನೇಯ ಬುದ್ಧಿ ಅತ್ಯಂತ ಅವಹೇಳನಕರವೂ ಅಸಹ್ಯವೂ ಆಗುವಷ್ಟರ ಮಟ್ಟಿಗೆ ಬೆಳೆದಿದೆ. ಸ್ವಾತಂತ್ರ್ಯ ಬಂದ ಮೇಲಾದರೂ ಅದು ಕಡಮೆಯಾಗಬಹುದೆಂಬ ಆಶೆಯಿತ್ತು. ಬರಿಯ ರಾಜಕೀಯವಾದ ಸ್ವಾತಂತ್ರ್ಯದಿಂದ ಅಂತಹ ಆತ್ಮಶ್ರದ್ಧೆ ಸಂಭವಿಸುವುದಿಲ್ಲ ಎಂಬುದು ಹೆಚ್ಚುಹೆಚ್ಚಾಗಿ ಮನದಟ್ಟಾಗುತ್ತಿಗೆ. ಏಕೆಂದರೆ ಸಮಾಚಾರ ಸಂಚಾರಾದಿ ಸೌಕರ್ಯ ಸೌಲಭ್ಯಗಳ ದೆಸೆಯಿಂದಾಗಿ ಆ ದೌರ್ಬಲ್ಯ ದಿನದಿನಕ್ಕೂ ಉಲ್ಬಣಿಸುತ್ತಿರುವಂತೆ ತೋರುತ್ತದೆ. ಯಂತ್ರ ನಾಗರಿಕತೆಯಲ್ಲಿ ನಮಗೆ ಮಾರ್ಗದರ್ಶಕವಾಗಬಹುದಾದ ಅಮೆರಿಕೆ ಜಗತ್ತಿನ ಶಾಂತಿಪಾಲನೆಯಲ್ಲಿಯೂ ಶಾಂತಿಸಾಧನೆಯಲ್ಲಿಯೂ ಗುರುವಾಗುತ್ತದೆ ಎಂಬುದು ಬರಿಯ ಭ್ರಾಂತಿ. ಎಷ್ಟು ಅರ್ಥಸಿದ್ಧಿಯಿದ್ದರೇನು ? ಎಷ್ಟು ಯಂತ್ರಬುದ್ಧಿಯಿದ್ದರೇನು ? ತನ್ನ ಶಾಂತಿಯನ್ನೆ ತಾನು ಸಂಪಾದಿಸಿಕೊಳ್ಳಲಾರದ ದೇಶ ಅನ್ಯದೇಶಗಳಿಗೆ ಎಂತು ತಾನೆ ಶಾಂತಿ ದಾನ ಮಾಡಬಲ್ಲುದು ?

ವಿಭೂತಿ ಪೂಜೆ, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪುಟ ೫೧

೪೬೫

ಕವನಗಳ್, ಬಿಳಿಕಾಗದದ ಮೇಲೆ ಬರಿಮಸಿಯ
ಬೀಳಲ್ತೆ, ಓದರಿಯದಾತಂಗೆ ? ಅಂತೆ, ತಿಳಿ,
ಮುಗಿಲುಗಳ್ :– ಬರಿಯ ನೀರಾವಿಗಳ್ ಜಡಮತಿಯ
ವಿಜ್ಞಾನಿಯಜ್ಞತೆಗೆ ; ಗಗನಕವಿ ಕಲ್ಪನೆಯ
ಸಂಜೀವ ಭಾವಗಳ್ ಋಷಿಯ ರಸವಿಜ್ಞಾನ
ದರ್ಶನಕೆ : ಸಾಕ್ಷಿಗಳತೀತದಸ್ತಿತ್ವಕ್ಕೆ ;

ಅನ್ಯಲೋಕಗಳನ್ನ ರೀತಿಗೆ ಗವಾಕ್ಷಗಳ್ ;
ಭೂನಿಸರ್ಗದ ಪ್ರಾಕ್ತನಾದ್ಭುತ ಪೆಡಂಭೂತ
ಸೃಷ್ಟಿಯ ಪುನಃಸ್ಮೃತಿಯ ಬಾನ್‌ಬಗೆಯ ವಿಕೃತಿಗಳ್ ;
ಅಧ್ಯಾತ್ಮದರ್ಥ ಪ್ರತೀಕಗಳ್ ; ಆವೇಶ
ಚಿಹ್ನೆಗಳ್ ; ತಿರೆಗೆ ಸಗ್ಗದ ಸೆರಗುಸನ್ನೆಗಳ್ ;
ಆಕಾಶಪುಸ್ತಕದ ಅತ್ಯನಿರ್ವಚನೀಯ
ದೇವಭಾಷಾ ದೃಶ್ಯ ಕಾವ್ಯಗಳ್ !

ಅಗ್ನಿಹಂಸ, ರೋರಿಕ್ ಚಿತ್ರಶಾಲಾ ಸ್ಮೃತಿ, ಪುಟ ೬೨

೪೬೬

ಮಲೆನಾಡೆಂದರೆ ಕರ್ಣಾಟಕದ ಕಾಶ್ಮೀರ ; ಪ್ರಕೃತಿಯ ಪರ್ಣಶಾಲೆ ; ಅರಣ್ಯರಮಣಿಯ ವಿಲಾಸಕ್ಷೇತ್ರ, ದಿಗಂತದ ಮಹಾಸ್ವಪ್ನಗಳಂತೆ ಧೀರವಾಗಿ ಹಬ್ಬಿರುವ ಪರ್ವತ ಶ್ರೇಣಿಗಳು ; ಆ ಪರ್ವತಗಳನ್ನು ಸರ್ವದಾ ಆಲಿಂಗಿಸಿರುವ ಚಿರಶ್ಯಾಮಲ ಕಾನನರಾಜಿ ; ನಿಬಿಡ ನಿರಂತರ ತರುಚ್ಛಾಯಾಮಯವಾದ ಗಿರಿ ಶಿಖರಗಳಲ್ಲಿ ಆವಿರ್ಭವಿಸಿ ಅರೆ ಬಂಡೆಗಳ ವಕ್ರಪಥಗಳಲ್ಲಿ ಎಡೆಬಿಡದೆ ಪ್ರವಹಿಸುವ ಹೊಳೆತೊರೆಗಳು ; ಗಿರಿಕಂದರಗಳಲ್ಲಿ ಕಂಗೊಳಿಸುವ ಅಡಕೆ ತೋಟಗಳು, ಬತ್ತದ ಗದ್ದೆಗಳು ; ಗಿಳಿ, ಕಾಮಳ್ಳಿ, ಕಾಜಾಣ, ಪಿಕಳಾರ, ತೇನೆ, ಚೋರೆ, ಕೋಗಿಲೆ ಮೊದಲಾದ ಅಸಂಖ್ಯ ಜಾತಿಯ ಪಕ್ಷಿಗಳ ಕಲಗಾನ ; ವಿಧವಿಧ ಜಾತಿಯ ಕಾಡಿನ ಮತ್ತು ನಾಡಿನ ಜಂತುಗಳು ; ಪ್ರೇಮಲ ಸ್ವಭಾವದವರೂ ಶಾಂತಜೀವಿಗಳೂ ಉದಾರಿಗಳೂ ಆಗಿರುವ ಸರಳ ಹೃದಯದ ಒಕ್ಕಲು ಮಕ್ಕಳು ; ಇವೆಲ್ಲದರ ಸಾನ್ನಿಧ್ಯದಿಂದ ಮಲೆನಾಡು ಅತ್ಯಂತ ರಮಣೀಯವೂ ಕಮನೀಯವೂ ಆಗಿದೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೧೭-೮

೪೬೭

ನಾವು ಭಾರತೀಯರು. ಅಷ್ಟೇ ಅಲ್ಲ ಪೂರ್ವದೇಶಗಳವರು. ನಾವು ಪೂರ್ವದೇಶಗಳವರು, ಒಂದು ಮಗುವನ್ನು ನೋಡುವ ರೀತಿಗೂ ಪಶ್ಚಿಮದೇಶಗಳ ವರು ನೋಡುವ ರೀತಿಗೂ ಒಂದು ಮೂಲಭೂತ ವ್ಯತ್ಯಾಸವಿದೆ. ನಾವು ಯಾವೊಂದು ಜೀವವೂ ಇದೇ ಮೊದಲನೆಯ ಸಾರಿ ಹುಟ್ಟಿತು ಅಂತ ಭಾವಿಸುವುದಿಲ್ಲ. ಅಥವಾ ಇಲ್ಲಿ ಸತ್ತ ಒಂದು ಜೀವಕ್ಕೆ ಇದೇ ಕೊನೆಯ ಸಾವು, ಇದು ಮತ್ತೆ ಹುಟ್ಟುವುದಿಲ್ಲ ಅಂತಲೂ ಭಾವಿಸುವುದಿಲ್ಲ. ಈ ಜೀವ ಅನಾದಿಕಾಲದಿಂದಲೂ ಇತ್ತು, ಅನಂತಕಾಲದವರೆಗೂ ಇರುತ್ತೆ. ಈ ಜನ್ಮ ಒಂದು ಕೊಂಡಿ.

ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಮಕ್ಕಳ ಸಾಹಿತ್ಯಕ್ಕೆ ಆಧುನಿಕ ಮೌಲ್ಯಗಳು, ಪುಟ ೪೫

೪೬೮

ನೋಡು ತಳಿತ ತಳಿರ ನಡುವೆ
ಅರುಣ ಕಿರಣ ಸರಿಯ ಸುರಿಸಿ

ಉದಯ ರವಿಯು ಮೆರೆವನು ;
ಕವಿಯ ಮನವ ಮೋಹಿಸುತ್ತ
ಮೌನವಾಗಿ ಕರೆವನು !

ಕೊಳಲು, ಉದಯ, ಪುಟ ೭೧

೪೭೯

ಉತ್ತಮವಾದ ಕವಿತೆ ಕವಿಯ ಧ್ಯಾನದಿಂದಲೂ ತಪಸ್ಸಿನಿಂದಲೂ ಅನುಭವದ ಆಳದಿಂದಲೂ ಆವೇಶಪೂರ್ವಕವಾಗಿ ಬಳ್ಳಿಯಿಂದ ತಳಿರು ಹೂವು ಹೊಮ್ಮುವಂತೆ ಹೊರಗೆ ಬರಬೇಕು. ರೂಪ ಅಲಂಕಾರಗಳು ಅದಕ್ಕೆ ಎಷ್ಟೇ ಆವಶ್ಯಕವಾದರೂ–ಅವುಗಳಿಲ್ಲದ ಕವಿತೆಯೇ ಇಲ್ಲ, ಅವುಗಳಿರದಿದ್ದರೆ ಕವಿತೆಯೇ ಅಲ್ಲ ಎಂದು ಹೇಳುವಷ್ಟು ಆವಶ್ಯಕವಾದರೂ–ಆತ್ಮದ ಮುಂದೆ ಅವುಗಳನ್ನೆಲ್ಲ ಗೌಣವೆಂದೇ ಹೇಳಬೇಕು. ಒಳಗಡೆ ಕಾಣಿಸದೆ ಅಡಗಿಕೊಂಡು ದೇಹ ಸಮಸ್ತಕ್ಕೂ ಅವಲಂಬನ ರೂಪವಾಗಿರುವ ಎಲುಬುಗೂಡಿನ ಮೇಲೆ ದೇಹ ಸೌಂದರ‍್ಯವು ಹೇಗೆ ನಿಂತಿದೆಯೋ ಹಾಗೆಯೆ ಕವನ ಸುಂದರಿತತ್ತ್ವ, ಆಲೋಚನೆ, ಧ್ಯಾನಗಳೆಂಬ ಅಡರ್ಪುಗಳಿಂದಲೇ ನಾಲ್ಕುಕಾಲ ಬಾಳಲು ಸಮರ್ಥೆಯಾಗುವಳು.

ಕಲಾಸುಂದರಿ, ಮುನ್ನುಡಿ, ಪುಟ ೪–೫

೪೮೦

ನೀರಸತೆಗಿಂ ಪಾಪಮಿಲ್ಲ, ರಸಕೆಣೆಯಾಗಿ
ಪುಣ್ಯಮಿಲ್ಲೆನೆ–ಪೂರ್ಣಯೋಗಿಯೆ ಪರಮಯೋಗಿ!

ಕೃತ್ತಿಕೆ, ಪೂರ್ಣಯೋಗಿಯೆ ಪರಮಭೋಗಿ, ಪುಟ ೪೯

೪೮೧

ಸಾಮಾನ್ಯ ಜೀವನವು ಪರಮ ಸುಧೆಯಂತೆ,
ಮಿತಿಮೀರಿದತಿಭೋಗ ಘೋರ ವಿಷದಂತೆ.

ಹಾಳೂರು, ಪಂಕ್ತಿ ೫೨೫–೬, ಪುಟ ೨೩

೪೮೨

ಸಫಲವಾದ ಒಂದು ಪ್ರಯತ್ನವನ್ನೇ ಪ್ರಮಾಣವಾಗಿಟ್ಟುಕೊಂಡು ವಿಫಲವಾದ ನೂರು ಪ್ರಯತ್ನಗಳನ್ನು ಜನರು ಲಕ್ಷಿಸುವುದೇ ಇಲ್ಲ. ಅದೂ ಅಲ್ಲದೆ ಮನುಷ್ಯನಿಗೆ ಸ್ವಾಭಾವಿಕವಾಗಿಯೆ ಸಾಹಸದಲ್ಲಿ ಕುತೂಹಲವಿರುತ್ತದೆ.

ನನ್ನದೇವರು ಮತ್ತು ಇತರ ಕಥೆಗಳು, 'ಗಂಟು' ಅಥವಾ ಗುಪ್ತಧನ, ಪಾತ್ರ ಕಥಾನಾಯಕ, ಪುಟ ೪೯

೪೮೩

ನಿನ್ನ ಸಂಗ ನಿಚ್ಚವಾಗ
ಲೆನಗೆ, ಕವಿತೆಯೆ :

ಯೋಗಿಯಾಗಲಾಸೆ ಇಲ್ಲ,
ಚಾಗಿಯಾಗಲಾಸೆ ಇಲ್ಲ,
ಸಿದ್ಧನಾಗಲಾಸೆ ಇಲ್ಲ,
ಬುದ್ಧನಾಗಲಾಸೆ ಇಲ್ಲ ;
ನಿನ್ನ ಸಂಗದೊಂದು ಹುಚ್ಚೆ
ಆಸೆ ತಿರುಕಗೆ !
ಬದುಕಿನಲ್ಲಿ, ಸಾವಿನಲ್ಲಿ
ಜನುಮ ಜನುಮಗಳಲಿ ನಿನ್ನ
ಸಂಗ ತಪ್ಪದಿರಲಿ ಎನಗೆ,
ಕಬ್ಬದಂಗನೆ !

ಕೊಳಲು, ಕವಿತೆಗೆ, ಪುಟ ೧೦–೧೧

೪೭೪

ಅನಂತಮುಖವಾದ ಈಶ್ವರೀಶಕ್ತಿ ಈ ವಿಶ್ವವನ್ನು ನಮ್ಮ ಈಗಿನ ಅನುಭವಕ್ಕೆ ಸಂಪೂರ್ಣವಾಗಿ ವ್ಯತ್ಯಸ್ತವಾಗಬಹುದಾದ ಇನ್ನೂ ಎಷ್ಟೋ ಪ್ರಕಾರಗಳಲ್ಲಿ ರಚಿಸಬಹುದಾಗಿತ್ತು. ಆದರೆ ಸದ್ಯದ ಸೃಷ್ಟಿಗೆ ಒಪ್ಪಿ ಅದು ರಂಗಕ್ಕಿಳಿದ ಮೇಲೆ ಗೊಣಗಾಡಿದರೆ ಪ್ರಯೋಜನವಿಲ್ಲ, ಗೊಣಗುವುದರಿಂದಾಗುವ ಸಂಸ್ಕಾರ ಪ್ರಯೋಜನ ಒಂದು ವಿನಾ.

ತಪೋನಂದನ, ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ, ಪುಟ ೧೩೮

೪೭೫

ನೂರು ಮತದ ಹೊಟ್ಟ ತೂರಿ,
ಎಲ್ಲ ತತ್ತ್ವದೆಲ್ಲೆ ಮೀರಿ,
ನಿರ್ದಿಗಂತವಾಗಿ ಏರಿ,
ಓ ನನ್ನ ಚೇತನ,
ಆಗು ನೀ ಅನಿಕೇತನ !

ಅನಿಕೇತನ, ಅನಿಕೇತನ, ಪುಟ ೬೦

೪೭೬

ಲೋಕದೃಷ್ಟಿಗೆ ಅಲ್ಪವಾದುದು ಆತ್ಮದೃಷ್ಟಿಗೆ ಭೂಮವಾಗುತ್ತದೆ. ಲೋಕ ಗೌರವಕ್ಕೆ ಪಾತ್ರವಾಗಿ ಇಲ್ಲಿಯ ಸ್ತುತಿಗೆ ಮೆಚ್ಚುಗೆಗೆ ಭಾಜನವಾದದ್ದು ಆತ್ಮಶ್ರೀಯ ದೃಷ್ಟಿಗೆ ಅತ್ಯಲ್ಪವಾಗಿ ಯಃಕಶ್ಚಿತವಾಗಿ ಅನರ್ಥಕರವಾಗಿ ತಿರಸ್ಕಾರಾರ್ಹವಾಗಿ ತೋರಬಹುದು. ಆ ಶ್ರೇಯಸ್ಸಿನ ಸಾಹಸ ಈ ಪ್ರೇಯಸ್ಸಿನ ಕಣ್ಣಿಗೆ ಗಾಳಿಗುದ್ದುವ ಹುಚ್ಚನಂತೆ ನಗೆಗೀಡಾಗುತ್ತದೆ. ಯಾರೂ ಇದುವರೆಗೆ ಏರಲಾಗದಿದ್ದ ಹಿಮಗಿರಿಯ

ಶಿಖರವನ್ನೇರಿ ನಿಂತವನ ಸಾಧನೆ ಸಾಹಸ ಸಿದ್ಧಿಗಳು ಜನರಿಗೆ ತಟಕ್ಕನೆ ಸುಸ್ಪಷ್ಟವಾಗಿ ಮುಷ್ಟಿಗ್ರಾಹ್ಯವೆನ್ನುವಂತೆ ಗೋಚರವಾಗುತ್ತವೆಯೊ ಹಾಗೆ ಅರಿಷಡ್ವರ್ಗಗಳನ್ನು ಗೆದ್ದು, ಮಾಯೆಯ ಆವರಣಗಳನ್ನು ಸೀಳಿ, ಲೋಕದಿಂದ ಲೋಕಕ್ಕೇರಿ ಬ್ರಹ್ಮ ಸಾಕ್ಷಾತ್ಕಾರ ಮಾಡುವ ಮಹಾಯೋಗಿಯ ಸಾಧನೆ ಸಿದ್ಧಿಗಳ ಸಾಹಸವಾಗಲಿ ದಿಗ್ವಿಜಯವಾಗಲಿ ಅದರ ಮಹಿಮೆಯಾಗಲಿ ಸಾಮಾನ್ಯ ಜನಪ್ರಜ್ಞೆಗೆ ಒಳಗಾಗುವುದು ಅತ್ಯಪೂರ್ವ.

ಷಷ್ಟಿನಮನ, ಮಹಾಪುರುಷ ಸ್ವಾಮಿ ಶಿವಾನಂದರು, ಪುಟ ೨೩೪–೫

೪೭೭

ವಿದ್ವಾಂಸರ ಮನೋರಂಜನಾರ್ಥವಾಗಿ ಸಾದೃಶ್ಯಮೂಲವಾದ ಅರ್ಥಾಲಂಕಾರಗಳು ನಾಮಭೇದದಿಂದ ಅನೇಕವಾಗಿದ್ದರೂ ತತ್ತ್ವತಃ ಇರುವುದು ಉಪಮಾಲಂಕಾರವೊಂದೇ. ಉಳಿದುವೆಲ್ಲ ಉಪಮಾಲಂಕಾರದ ರೂಪಾಂತರಗಳು.

ಇತ್ಯಾದಿ, ಉಪಮಾಲೋಲ ಲಕ್ಷ್ಮೀಶ, ಪುಟ ೨೩

೪೭೮

ನಾನು ಸಂಪೂರ್ಣ ಆಶಾವಾದಿಯಾಗಿದ್ದೇನೆ.

ಕನ್ನಡನಾಡಿನಲ್ಲಿ ಕನ್ನಡ ಆಡಳಿತದ ಭಾಷೆಯಾಗುತ್ತದೆ. ಕನ್ನಡ ನಾಡಿನ ಶಿಕ್ಷಣಕ್ರಮದಲ್ಲಿ ಕನ್ನಡ ಪ್ರಥಮ ಭಾಷೆಯಾಗುತ್ತದೆ. ವಿದ್ಯಾಭ್ಯಾಸದ ಎಲ್ಲ ಮಟ್ಟಗಳಲ್ಲಿಯೂ ಕನ್ನಡ ಶಿಕ್ಷಣ ಮಾಧ್ಯಮವಾಗುತ್ತದೆ. ಪ್ರದೇಶ ಪ್ರದೇಶದ ಮತ್ತು ಪ್ರದೇಶ ಕೇಂದ್ರದ ವ್ಯವಹಾರ ಮಾತ್ರಕ್ಕಾಗಿ ಹಿಂದಿ ಉಳಿಯುತ್ತದೆ. ಹೊರ ಪ್ರಪಂಚದೊಡನೆಯೂ ಮತ್ತು ದಿನ ದಿನವೂ ವಿಸ್ತರಿಸುತ್ತಿರುವ ಜಗತ್ತಿನ ಯಂತ್ರವಿದ್ಯೆಜ್ಞಾನ ವಿಜ್ಞಾನಗಳೊಡನೆಯೂ ಸಂಬಂಧ ಸಂಪರ್ಕಗಳನ್ನಿಟ್ಟುಕೊಳ್ಳುವ ಸಲುವಾಗಿ, ಇಂಗ್ಲಿಷ್, ಪ್ರಪಂಚದ ಇತರ ಪ್ರಸಿದ್ಧ ಭಾಷೆಗಳಂತೆಯೆ, ಐಚ್ಛಿಕಭಾಷೆಯಾಗಿ, ಮತ್ತು ಕೆಲವರ ಭಾಗಕ್ಕೆ ವಿಶೇಷ ಸಾಹಿತ್ಯಾಧ್ಯಯನ ವಿಷಯವಾಗಿಯೂ, ಮುಂದುವರಿಯುತ್ತದೆ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೨೮–೯

೪೭೯

ಕಣ್ಣಿಗಲ್ಲ ಎದೆಗೆ ಚೆಲುವು,
ತರಳೆ, ತಿಳಿಯದೆ ?
ಅಳಿಯಲೊಡನೆ ಹೃದಯದೊಲವು
ಚೆಲುವು ಉಳಿವುದೆ ?

ಜೇನಾಗುವಾ, ಬರಿಯ ಮೆಯ್ಯ ಹೆಮ್ಮೆ ತಪ್ಪು, ಪುಟ ೧೫

೪೮೦

ಮನೋರೋಗಕಾ
ಪ್ರೇಮವೆ ಭಿಷಗ್ವರಂ.

ಶ್ರೀ ರಾಮಾಯಣ ದರ್ಶನಂ, ಶಬರಿಗಾದನು ಅತಿಥಿ ದಾಶರಥಿ, ಪುಟ ೨೮೯

೪೮೧

ಬರೆಯುತಿರೆ ಮೂಡುವುದು
ನಲ್ಗಬ್ಬವೊಮ್ಮೆ;
ಮೂಡಬಹುದಲ್ಲಲ್ಲಿ
ಬೆಳ್ಗಬ್ಬವೊಮ್ಮೆ.

ನವಿಲು, ಗೂಬೆ, ಪುಟ ೭೦

೪೮೨

ಒಬ್ಬೊಬ್ಬ ವ್ಯಕ್ತಿಗೂಮನಸ್ಸಿರುವಂತೆ ಒಂದೊಂದು ಸಮೂಹಕ್ಕೂ ಮನಸ್ಸಿದೆ. ಮೊದಲನೆಯದು ವ್ಯಷ್ಟಿಮನಸ್ಸು; ಎರಡನೆಯದು ಸಮಷ್ಟಿ ಮನಸ್ಸು. ಮೊದಲನೆಯದು ತರಂಗದಂತೆ; ಎರಡನೆಯದು ಸಾಗರದಂತೆ. ಆ ಸಮಷ್ಟಿ ಮನಸ್ಸು ದೇಶ ದೇಶಕ್ಕೂ ಬದಲಾಯಿಸುವಂತೆ ಕಾಲಕಾಲಕ್ಕೂ ಬದಲಾಯಿಸುತ್ತದೆ. ಅದನ್ನು ಯುಗ ಶಕ್ತಿ, ಯುಗಮನಸ್ಸು, ಯುಗದೇವತೆ ಎಂದು ನಾನಾವಿಧವಾಗಿ ಕರೆಯುತ್ತಾರೆ. ಅದನ್ನು ಪರ್ವತದಂತೆ ಭಾವಿಸಿದರೆ ಕವಿ ಅದರ ಶಿಖರವಾಗುತ್ತಾನೆ. ಅಥವಾ ಅದನ್ನು ಈಟಿ ಎಂದು ಚಿತ್ರಿಸಿದರೆ ಕವಿ ಅದರ ಮೊನೆಯಾಗುತ್ತಾನೆ. ಎಂದರೆ, ಕವಿಯ ಮನಸ್ಸು ಜನಮನಸ್ಸಿಗೆ ನಿಧಿಯೂ ಹೌದು; ಪ್ರತಿನಿಧಿಯೂ ಹೌದು.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೪೭

೪೮೩

ವಿದ್ಯೆಯ ಲೋಕದಲ್ಲಿ ಧನಿಕರಾಗಲು ಸುಲಭೋಪಾಯಗಳಿಲ್ಲ. ಅಲ್ಲಿ ಯಾರೂ ವಂಚನೆಯಿಂದ ಸಂಪತ್ತು ಗಳಿಸಲಾರರು. ಅಲ್ಲಿ ದುಡಿಮೆಯಂತೆ ಪಡಿ. ಅಲ್ಲಿ ಕಳ್ಳರುಜುಗಳಿಗೂ ಸುಳ್ಳು ಪತ್ರಗಳಿಗೂ ಚಿರಂಜೀವವಿಲ್ಲ. ಅಲ್ಲಿ ಯಾವನೂ ಬರಿಯ ದಳ್ಳಾಳಿತನ ಮಾಡಿ ಶ್ರೀಮಂತನಾಗಲಾರನು. ಅದು, ವಿರೋಧಾಭಾಸವಾಗಿ ಕಂಡು ಬಂದರೂ, ಸಮತಾವಾದದ ಚಕ್ರಾಧಿಪತ್ಯ! ದುಡಿಯುವವರಿಗೆ ಮಾತ್ರ ಅಲ್ಲಿಗೆ ಪ್ರವೇಶ. ಆದರೆ ಯಾರು ಬೇಕಾದರೂ ಅಲ್ಲಿಗೆ ಹೋಗಿ ದುಡಿಯಬಹುದು. ಕೂಲಿಯಾಳಾಗದೆ ಅಲ್ಲಿಗೆ ಹೊಗಲಿಲ್ಲ; ಹೊಕ್ಕ ಮೇಲೆ ಅಲ್ಲಿ ಎಲ್ಲರೂ ಚಕ್ರವರ್ತಿಗಳೆ! ಅಷ್ಟೆ ಅಲ್ಲ; ಚಕ್ರವರ್ತಿಯಲ್ಲದವನಿಗೆ ಅಲ್ಲಿ ಕೂತುಕೊಳ್ಳಲೂ ಸ್ಥಳವಿಲ್ಲ; ಏಕೆಂದರೆ ಅಲ್ಲಿ ಸಿಂಹಾಸನಗಳಲ್ಲದೆ ಬೇರೆ ಪೀಠಗಳಿಲ್ಲ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಲ್ಲಿ ಮತಿಗೌರವದ ಆವಶ್ಯಕತೆ, ಪುಟ ೩೯

೪೮೪

ಎಲ್ಲಕ್ಕೂ ಮೊದಲು ನಮ್ಮ ಹಿರಿಯರಲ್ಲಿ ಒಂದು ವಿಜ್ಞಾಪನೆ. ಏಕೆಂದರೆ, ಅನುಭವಸಾಲದ ನಮ್ಮನ್ನು ಅನುಭವಶಾಲಿಗಳಾದ ತಾವು ಚೆನ್ನಾಗಿ ಪರೀಕ್ಷಿಸದೆ ತಿರಸ್ಕರಿಸಿದರೆ ತಮ್ಮ ಅನುಭವದ ಹೆಚ್ಚಿಗೆಯಲ್ಲಿ ನಮಗೆ ನೆಚ್ಚುಗೆಡಬಹುದು. 'ಹಳೆಯದೆಲ್ಲಾ ಹೊನ್ನು; ಹೊಸತೆಲ್ಲಾ ಮಣ್ಣು' ಎಂಬ ಸೂತ್ರದಿಂದ ಮಾತ್ರ ಹೊರಡಬೇಡಿ. ನಮ್ಮ ಹೊಸ ಸಾಹಸವನ್ನು ಸುಮ್ಮನೆ ತಿರುಳಿಲ್ಲದ ಭ್ರಾಂತಿಯೆಂದು ಹಳೆಯದಿರಿ. ಹೊಸ ಸಾಹಿತ್ಯವನ್ನು ಓದಿ ನೋಡಿ; ಪರೀಕ್ಷಿಸಿ. ನಿಮ್ಮ ಸ್ವಂತ ಒರೆಗಲ್ಲಿನಲ್ಲಿಯೇ ಅದನ್ನು ತಿಕ್ಕಿನೋಡಿ. ಮನಸ್ಸು ತೃಪ್ತಿಯಾದರೆ ಹೊಗಳಿ; ಇಲ್ಲದಿದ್ದರೆ ಖಂಡಿಸಿ, ತಪ್ಪುಗಳನ್ನು ತೋರಿಸಿಕೊಡಿ. ಅದರಿಂದ ನಮಗೂ ಶ್ರೇಯಸ್ಸು; ನಿಮಗೂ ಕಿರಿಯರನ್ನು ತಿದ್ದಿದೆವಲ್ಲಾ ಎಂಬ ತೃಪ್ತಿ. ನಾವು ತಮ್ಮ ಸೂಚನೆಗಳನ್ನು ಅಲ್ಲಗಳೆಯುವಷ್ಟು ಮೊಂಡರಲ್ಲ; ಕುರುಡರಲ್ಲ. ತಮ್ಮ ಸಲಹೆಗಳನ್ನೆಲ್ಲ ಭಕ್ತಿಯಿಂದ ಸ್ವೀಕರಿಸುತ್ತೇವೆ. ಆದಷ್ಟು ಪ್ರಯತ್ನಪಟ್ಟು ಅವುಗಳನ್ನೆಲ್ಲ ಪ್ರಯೋಗಕ್ಕೆ ತರಲೆಳಸುತ್ತೇವೆ. ಹಳೆಯ ಬೆಳಕು ಬಲು ಸೊಗಸಾದುದು; ಜ್ಯೋತಿರ್ಮಯವಾದುದು, ಪವಿತ್ರವಾದುದು! ಹೌದು; ಯಾರು 'ಅಲ್ಲ' ಎನ್ನುವವರು? ಆದರೆ ಹೊಸ ಬೆಳಕಿಗೆ ಕಣ್ಣನ್ನೇಕೆ ಮುಚ್ಚುವುದು? ಅದನ್ನೂ ನೋಡಿ, ತಮ್ಮ ಘನವಾದ ಅಭಿಪ್ರಾಯಗಳನ್ನು ಸೂಚಿಸಿ.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೭

೪೮೫

ಬಳಿಯಿರುವ ವೆಂಕಯ್ಯ ಕಂಠಯ್ಯ ಕಸ್ತೂರಿ
ಶ್ರೀನಿವಾಸರು ಮೆಚ್ಚಿದರೆ ಸಾಕೆನಗೆ ತೃಪ್ತಿ;
ನನ್ನ ಕನ್ನಡ ಕವನಗಳ ಯಶಸ್ಸಿನ ವ್ಯಾಪ್ತಿ
ಲಂಡನ್ನಿನೊಳಗೂದಬೇಕಿಲ್ಲ ತುತ್ತೂರಿ!
ನಮ್ಮ ಸೊಡರಿಗೆ ಮನೆಯ ಬೆಳಗುವುದೆ ಮೊದಲ ಗುರಿ;
ದೂರದ ನೆಲವ ಬೆಳಗಲಿಲ್ಲೆಂದು ಕೊರಗುವರೆ?
ಬೇಡವೆನ್ನುವುದಿಲ್ಲ, ಸಂತೋಷ, ಬೆಳಗಿದರೆ!
ಆದರದಕಾಗಿ ಮರುಗುವ ಮಂದಿ ಮಂಕೆ ಸರಿ!
ಹಿರಿಯ ಕವಿ ಯಾವನೂ ಹೊನಲುಲು ಹವಾಯ್ಗಳಲಿ
ಕೇಳಿಸುವುದೆಂದೆಣಿಸಿ ತನ್ನ ಕಾವ್ಯದ ವೀಣೆ
ಮಿಡಿಯನ್ಯೆ, ಬಹುದೂರದಲಿ ಮೈಸೂರಿನಲಿ
ಕುಳಿತು. ತಂತಿಲಿಯಂಚೆ ನೆರವಾಗಿ ಈ ವಾಣಿ
ಅಲ್ಲಿಯೂ ಕೇಳ್ವುದೆಂದರಿಯೆ ಸೊಗಸುವನಿಲ್ಲಿ:
ಆದರಳನೆಂದಿಗೂ ಕೇಳ್ವುದಿಲ್ಲೆಂದಲ್ಲಿ!

ಕೃತ್ತಿಕೆ, ಕವಿಯ ತೃಪ್ತಿ, ಪುಟ ೩೬

೪೮೬

ಸಚ್ಚಿದಾನಂದ ಲೀಲಾರ್ಥವಾಗಿ ಮಾಯೆಗವತರಿಸಿದ ಜೀವ ತನ್ನ ಸ್ವಸ್ಥಾನ ಸಂಸ್ಥಾಪನಾಸಾಧನೆಯಲ್ಲಿ ತೊಡಗುತ್ತದೆ. ಸ್ವಾಭಾವಿಕವಾಗಿ, ಪ್ರಕೃತಿ ಸಿದ್ಧವಾಗಿ. ಆ ಸಾಧನೆ ಬೇರೆ ಬೇರೆಯ ಕೋಶಗಳಲ್ಲಿ ಆಯಾ ಕೋಶಗಳಿಗೆ ಅನುಗುಣವಾದ ರೀತಿಗಳಲ್ಲಿ ರೂಪಗಳಲ್ಲಿ ಸಾಗುತ್ತದೆ. ಅದು ಅನ್ನಮಯದಲ್ಲಿ ವಿಕಾಸಗೊಳ್ಳುವಾಗ ನಿದ್ರಿತವೆಂಬಂತೆ ಸಾಗುತ್ತದೆ. ಪ್ರಾಣಮಯದಲ್ಲಿ ಸ್ವಪ್ನಸ್ಥವೆಂಬಂತೆ ; ಮನೋಮಯ ದಲ್ಲಿ ಜಾಗ್ರತವಾಗಿ, ಪ್ರಜ್ಞಾಪೂರ್ವಕವಾಗಿ, ಸ್ವಪ್ರಯತ್ನಶೀಲವಾಗಿ, ತನ್ನರಿವಿಗೆ ತಾನೆ ವಿಷಯವಾಗಿ ತನ್ನನ್ನು ತಾನೆ ಗಮನಿಸುತ್ತಾ ಮುಂಬರಿಯುತ್ತದೆ. ಮನೋಮಯದ ಪ್ರಜ್ಞೆಯಲ್ಲಿ ಜೀವನಿಗೆ ತನಗಿಂತಲೂ ಮುಂದಿರುವ ಸ್ಥಾನ ಆಕರ್ಷಣೆಯವಾಗಿ, ಆರಾಧ್ಯವಾಗಿ, ಆದರ್ಶವಾಗಿ, ಕರೆಯಾಗಿ, ಕೋರಿಕೆಯಾಗಿ, ಪ್ರಿಯವಾಗಿ, ಪೂಜ್ಯವಾಗಿ ಗೋಚರವಾಗುತ್ತದೆ. ಹಾಗೆಯೆ ತಾನಿರುವ ಮಟ್ಟಕ್ಕೆ ಆ ಮೇಲಿರುವ ಮಟ್ಟ ವಿಭೂತಿಸ್ಥಾನವಾಗಿ ಪರಿಣಮಿಸುತ್ತದೆ. ಅಲ್ಲಿಗೆ ಏರಿರುವ ಇನ್ನೊಂದು ಚೇತನ ವಿಭೂತಿಯಾಗುತ್ತಾನೆ. ಅಲ್ಲಿಗೆ ಏರಬೇಕೆಂಬುವ ಅಪೇಕ್ಷೆಪ್ರಶಂಸಾ ರೂಪದಲ್ಲಿ ಪೂಜಾ ರೂಪದಲ್ಲಿ ಭಾವಚರವಾಗುತ್ತದೆ. ಆ ಅಪೇಕ್ಷೆ ತನ್ನ ಸದ್ಯಃ ಸ್ಥಿತಿಯಿಂದ ಆದರ್ಶ ಪ್ರಾಯವಾದ ಆ ವಿಭೂತಿಸ್ಥಾನಕ್ಕೆ ಏರಲು ಪೂಜಾಪಥದಲ್ಲಿ ಯಾತ್ರಿಯಾಯಿತೆಂದರೆ ಆರಾಧನೆಯ ಉಪಾಸನೆಯ ಸಾಧನೆಯ ರೂಪದಲ್ಲಿ ಯೋಗ ಶಕ್ತಿಯಾಗುತ್ತಾ ಹೋಗುತ್ತದೆ.

ವಿಭೂತಿ ಪೂಜೆ, ಕವಿಯಲ್ಲಿ ವಿಭೂತಿ, ಪುಟ ೨

೪೮೭

ಅಲೆವ ಪ್ರೇತಗಳಾಗಿ ಚೀರಿ
ಕಾಡುವೆವು ನಿಮಗೆ ನಿದ್ದೆಯ ಕೊಡದೆ ಚಿರದಿನಂ
ರಕ್ತತರ್ಪಣಕಾಗಿ ಗಂಟಲಾರಿ !
ತನಿಯೆರೆಯಿರೈ ನಿಮ್ಮ ಎದೆನೆತ್ತರನು ಬಸಿದು
ಸ್ವಾತಂತ್ರ್ಯ ದೇವತೆಯ ತೃಷಿತ ಮುಖಕೆ.
ಇಂದು ಭಾರತಿ ಹಡೆದಳಲ್ತು ನಿಮ್ಮನು ಸುಖಕೆ ;
ಪಶುಗಳೈ ಸೀವೆಲ್ಲರಮೃತ ಮುಖಕೆ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ರಕ್ತತರ್ಪಣ, ಪುಟ ೩೧

೪೮೮

ಯಾವ ಒಂದು ಮತದ ಸಿದ್ಧಾಂತದ ಬಂಧನಕ್ಕೂ ಒಳಗಾಗದೆ, ಉದಾತ್ತ ದರ್ಶನಗಳೆಲ್ಲವುಗಳ ಸಾರವನ್ನೂ ಹೀರಿಕೊಂಡು, ನವದರ್ಶನ ದೀಪ್ಯಮಾನಮನ ನಾಗಿ, ಮಹಾಕವಿ ಡಾಂಟೆ 'ಡಿವೈನ್ ಕಾಮೆಡಿ'ಯನ್ನು ರಚಿಸಿದಂತೆ ರಚಿಸುವುದಾದರೆ

'ಆದಿಪುರಾಣ'ದ ಕಥಾಸಾಮಗ್ರಿಯಿಂದ ಲೋಕ ಗೌರವ ಭಾಜನವಾಗುವ, ಅತ್ಯಂತ ನವೀನ ತತ್ತ್ವಜ್ಞಾನ ಮತ್ತು ವಿಜ್ಞಾನಾಂಶಗಳನ್ನು ಒಳಗೊಂಡ ನೂತನ ದರ್ಶನದ, ಜಗತ್ಕಾವ್ಯವೊಂದನ್ನು ಸೃಜಿಸುವ ಪುಣ್ಯ ಮುಂದೆ ಬರಲಿರುವ ಕನ್ನಡ ಕವೀಂದ್ರನೊಬ್ಬನಿಗೆ ಮೀಸಲಾಗಿದೆ.

ತಪೋನಂದನ, ಪಂಪನಲ್ಲಿ ಭವ್ಯತೆ, ಪುಟ ೪೬

೪೮೯

ಸೌಂದರ್ಯಾನುಭವ ಅಥವಾ ರಸಾನುಭವವು ಕಾವ್ಯ ಕಲಾಭೂಮಿಗೆ ಮಾತ್ರ ಪರಿಮಿತವಾಗಿದ್ದಿದ್ದರೆ, ಅದರ ಪ್ರಭಾವ ಪರಿಣಾಮಗಳು ಲೋಕದ ವಿಶಾಲ ಜೀವನಕ್ಕೆ ವ್ಯಾಪಿಸದಿದ್ದಿದ್ದರೆ ಅದರ ರುಚಿಪ್ರಯೋಜನವಷ್ಟರಿಂದಲೆ ತೃಪ್ತರಾಗಿ ಸುಮ್ಮನಿರಬಹುದಾಗಿತ್ತು. ಆದರೆ ಸಾಮಾಜಿಕನ ಯಾವ ಅನುಭವವೂ ತನ್ನ ಪರಿಧಿಯಲ್ಲಿಯೆ ಪರ್ಯವಸಾನವಾಗುವುದಿಲ್ಲ. ಅದು ಸಮಾಜವನ್ನೆಲ್ಲ ವ್ಯಾಪಿಸುತ್ತದೆ; ಬದುಕನ್ನು ರೂಪಿಸುತ್ತದೆ.

ರಸೋ ವೈ ಸಃ, ರಸಾನುಭವದ ಅಲೌಕಿಕತೆ, ಪುಟ ೩೧

೪೯೦

ಕವಿಕೃತಿಯಾದ ಕಾವ್ಯವೂ ಈಶ್ವರಕೃತಿಯಾದ ವಿಶ್ವಸೃಷ್ಟಿಗೆ ಸದೃಶವಾದ ಒಂದು ಪ್ರತಿಮೆ. ಸದೃಶವಾದುದು ಮಾತ್ರ, ಸಮವಾದುದಲ್ಲ. ಅದರಷ್ಟು ಸ್ವತಂತ್ರವೂ ಅಲ್ಲ; ಶಕ್ತಿ ಸಮನ್ವಿತವೂ ಅಲ್ಲ. ಏಕೆಂದರೆ ಕಾವ್ಯಕೃತಿಯನ್ನು ರಚಿಸುವ ಕವಿಯೂ ಈಶ್ವರಸೃಷ್ಟಿಯಲ್ಲಿ ಒಂದು ಕೃತಿಮಾತ್ರನಾಗಿದ್ದಾನೆ.

ತಪೋನಂದನ, ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ, ಪುಟ ೧೨೨

೪೯೧

ಗುರಿ ಬಳಿಗೆ
ಸಾರಿ ಬರೆ, ಪೆರ್ಚಿದಪುದೆರ್ದೆಯ ಕುದಿದಾಟಮಂ!

ಶ್ರೀ ರಾಮಾಯಣ ದರ್ಶನಂ, ಪಂಚವಟಿಯ ಪುರ್ಣಕುಟಿ, ಪಾತ್ರ ರಾಮ, ಪುಟ ೨೧೫

೪೯೨

ಭವ್ಯತೆಯನ್ನು ತಕ್ಕ ಪ್ರಮಾಣದಲ್ಲಿ ಹೊರಹೊಮ್ಮಿಸದ ಯಾವ ಕವಿಯೂ ಮಹಾ ಕವಿಯಾಗಲಾರನು; ಯಾವ ಕಾವ್ಯವೂ ನಿತ್ಯ ನೂತನವಾದ ಚಿರಕಾವ್ಯವಾಗಲಾರದು.

ತಪೋನಂದನ, ಪಂಪನಲ್ಲಿ ಭವ್ಯತೆ, ಪುಟ ೪೧

೪೯೩

ಉದ್ದೇಶ ಎಷ್ಟೇ ಶ್ಲಾಘ್ಯವಾಗಲಿ, ಅದು ತಿಳಿವಳಿಕೆಯಿಂದ ಕೂಡಿರದಿದ್ದರೆ ಅಪಾಯವಾಗುತ್ತದೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೭

೪೯೪

ಮೂದಲಿಸಲೆಳಸಿದರೆ ದುರುಳ ವಿಧಿ
ಹಡೆದ ಕರುಳೇನ ಮಾಡುವುದಣ್ಣ ?

ಶ್ರೀ ರಾಮಾಯಣ ದರ್ಶನಂ, ಅಗ್ನಿಯಾತ್ರೆ, ಪಾತ್ರ ಕೌಸಲ್ಯೆ, ಪುಟ ೧೨೮

೪೯೫

ಶಾಂತಿಯ ಸಮಯದಲ್ಲಿ ಮೈಮುರಿದು ದುಡಿಯಲಾರದ ಜನಾಂಗಗಳು ಯುದ್ಧ ಕಾಲದಲ್ಲಿ ರಕ್ತಸೋರಿ ಸಾಯುವುದನ್ನೆ ಅನರ್ಘ್ಯವೆಂದು ಉತ್ಸಾಹಪ್ರದರ್ಶನ ಮಾಡುವುದಿಲ್ಲವೆ ?

ಕಾನೂರು ಹೆಗ್ಗಡಿತಿ, ಪುಟ ೧೩೮

೪೯೬

ಲೇಖಕರು ತಮ್ಮ ಲೌಕಿಕ ಜೀವನಕ್ಕೆ ಬೇಕೇ ಬೇಕಾದ ಸಂಪತ್ತನ್ನು ರಾಜರಿಂದ ಪಡೆಯಲಾರರು. ಅವರ ಜೀವನಕ್ಕೆ ಅತ್ಯವಶ್ಯವಾದ ಮಿತ ಭೋಗವನ್ನು ಜನರೇ ಕಲ್ಪಿಸಿಕೊಡಬೇಕು. ಅವರ ಗ್ರಂಥಗಳು ಮಾರಾಟವಾಗಬೇಕು. ಅವರ ಮನಸ್ಸೆಲ್ಲ ಹೊಟ್ಟೆಯಲ್ಲೇ ಸುಳಿದಾಡದೆ ಉತ್ತಮ ಧ್ಯೇಯಗಳ ಗಗನ ಪ್ರಾಂತದಲ್ಲಿ ಹಾರಾಡುವಂತೆ ಮಾಡುವ ಕೆಲಸ ಜನರ ಕೈಯಲ್ಲಿದೆ. ಪಾಶ್ಚಾತ್ಯ ದೇಶಗಳಲ್ಲಿ ಸಾಹಿತ್ಯ ಕಲೆಯೇ ಒಂದು ಜೀವನವೃತ್ತಿಯಾಗಿದೆ. ಅಲ್ಲಿಯ ಸಾಧಾರಣ ಲೇಖಕರೂ ಕೂಡ ಲಕ್ಷಾಧಿಕಾರಿಗಳಾಗಿದ್ದಾರೆ. ನಮ್ಮಲ್ಲಿ ಇನ್ನೂ ಆ ಕಾಲ ಬಂದಿಲ್ಲ. ನಾವೀಗ ಪ್ರಯತ್ನಪಟ್ಟರೆ ಮುಂದೆ ಶತಮಾನದ ಮೇಲಾದರೂ ಆ ಸ್ಥಿತಿ ಒದಗಬಹುದು. ಹಿಂದೆ ಪಾಶ್ಚಾತ್ಯ ದೇಶಗಳಲ್ಲಿಯೂ ಈಗ ನಮ್ಮಲ್ಲಿರುವ ಸ್ಥಿತಿಯೇ ಇತ್ತು.

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೨೪

೪೯೭

ಮನುಷ್ಯನ ಮನಸ್ಸು ಉರ್ಧ್ವಮುಖಿ. ಅವನ ಕನಸು ಗಗನಗಾಮಿ. ಅವನ ಕಲ್ಪನೆ ನಕ್ಷತ್ರಯಾತ್ರಿ. ಆ ಊರ್ಧ್ವಮುಖದ, ಗಗನ ಗಮನದ ಮತ್ತು ನಕ್ಷತ್ರ ಯಾತ್ರೆಯ ಸಾಹಿಸಕ್ಕೆ ಮೊದಲನೆಯ ಸಾಕ್ಷಿ ಚರಿತ್ರೆ; ಎರಡನೆಯ ಸಾಕ್ಷಿ ಕಲೆ. ಒಂದು ಬಹಿರ್ಮುಖದ ಸಾಹಸವಾದರೆ ಮತ್ತೊಂದು ಅಂತರ್ಮುಖದ ಸಾಹಸ. ದಾರಿಗಳೆರಡಾದರೂ ಗುರಿಗಳೆರಡಲ್ಲ. ಇಂದಿಲ್ಲದಿದ್ದರೂ ಮುಂದೆ ಕೈಗೂಡಬಹುದೆಂದು ನಂಬಿರುವ ಸುಖಶಾಂತಿಗಳ ಸಂಪಾದನೆಯೆ ಮಾನವ ಸಾಹಸಕ್ಕೆ ಪರಮಗಂತವ್ಯ.

ತಪೋನಂದನ, ಮಹಾಶ್ವೇತೆಯ ತಪಸ್ಸು, ಪುಟ ೧

೪೯೮

ದಣಿವೆಂದರೇನ್
ರಾಜ್ಯಕಾರ್ಯದಿ ಮುಳುಗಿದಾತಂಗೆ ?

ಚಂದ್ರಹಾಸ, ಪಾತ್ರ ದುಷ್ಟಬುದ್ಧಿ, ಪುಟ ೮೪

೪೯೯

ಬೇರೆ ಖಾಯಿಲೆಗಳು ಬಂದರೆ ಡಾಕ್ಟರು ಹತ್ತಿರ ಹೋಗುತ್ತೇವೆ. ಔಷಧ ಕೊಡುತ್ತಾನೆ. ಆದರೆ ಈ ಕರುಬಿನ ಕಾರಣದ ಖಾಯಿಲೆಗೆ ಅವನೇನು ಮದ್ದು ಕೊಟ್ಟಾನು ?

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೧೬

೫೦೦

ಕಲೆಯನ್ನು ಸವಿಯಲು ಕಲಾದೃಷ್ಟಿಬೇಕು. ಕವಿ ತನ್ನ ಪ್ರತಿಭೆಗೆ, ತನ್ನ ಕಲ್ಪನೆಗೆ, ತನ್ನ ಭಾವಕ್ಕೆ ಗೋಚರವಾಗುವ ಸೃಷ್ಟಿಯ ರಹಸ್ಯ ಆನಂದ ಸೌಂದರ್ಯಗಳನ್ನು ಕೈಲಾದಮಟ್ಟಿಗೂ ತನ್ನ ಕೃತಿಯಲ್ಲಿ ಪ್ರತಿಬಿಂಬಿಸಲು, ನಿಹಿತಗೈಯಲು ಸಾಹಸಮಾಡುತ್ತಾನೆ. ಅಂತಹ ಕೃತಿ ಹೊಸದಾಗಿರುವಾಗ ಜನರಿಗೆ ಅದು ರುಚಿಸದೆ ಹೋಗಬಹುದು; ಅರ್ಥವಾಗದಿರಬಹುದು. ಆ ಕೃತಿಯ ಆಳಕ್ಕೆ ಮುಳಗಲು, ಎತ್ತರಕ್ಕೆ ಏರಲು ಅವರಿಗೆ ಅಸಾಧ್ಯವಾಗಬಹುದು. ಆಗ ಅವರು ಅದನ್ನು ತಿರಸ್ಕರಿಸುವುದೂ ಹೀಯಾಳಿಸುವುದೂ ಸ್ವಾಭಾವಿಕ, ಹಾಗೆಂದು ಆ ಕಲಾಕೃತಿಯನ್ನೇ ಅಲ್ಪವೆಂದು ಅಲ್ಲಗಳೆಯುವುದಕ್ಕೆ ಆಗುತ್ತದೆಯೆ ?

ಕಲಾಸುಂದರಿ, ಮುನ್ನುಡಿ, ಪುಟ ೭–೮

೫೦೧

ಭೂಮದ ಅನುಭೂತಿಯ ಸುಳಿವು ಇದ್ದ ಮಾತ್ರಕ್ಕೆ ಕಲೆಯ ಭೂಮಿಕೆಯಲ್ಲಿ ಭವ್ಯತೆ ತನಗೆ ತಾನೆ ಉಂಟಾಗುವುದಿಲ್ಲ. ಭೂಮದ ಅನುಭೂತಿ ತನ್ನ ವಿಭೂತಿ ಪ್ರಮಾಣದಲ್ಲಿ ಕಾವ್ಯ ಲೋಕದಲ್ಲಿ ಅಭಿವ್ಯಕ್ತವಾಗಬೇಕಾದರೆ ಅದು ಭವ್ಯತಾ ಅನುಭವವನ್ನು ಸಹೃದಯನಿಗೆ ನೀಡುವ 'ಶಕ್ತಿ'ಗೇರಬೇಕಾಗುತ್ತದೆ. ಆ ಶಕ್ತಿ ಚಿಂತನಾಂಶ ಕಲ್ಪನಾಂಶ ರೂಪಾಂಶಗಳ ಅತ್ಯುಚ್ಚ ಮಟ್ಟದ ನೆರವಿನಿಂದ ಮಾತ್ರ ಸಾಧ್ಯವಾಗುತ್ತದೆ. ಅಂದರೆ ಭೂಮದ ಅಭಿವ್ಯಕ್ತಿಗೆ ಸೌಂದರ್ಯ ಮಾಧ್ಯಮದ ಸರ್ವಶ್ರೇಷ್ಠ ಸೇವೆ ಸಲ್ಲಬೇಕಾಗುತ್ತದೆ. ಭವ್ಯತಾ ಅನುಭವ ಪ್ರಚೋದನೆಗೆ ಮಹಾಕವಿ, ಮಹಾಕಾವ್ಯ, ಮಹೋಪಮೆ, ಮಹಾಶೈಲಿ ಇವುಗಳ ಮಹತ್ತು ಸಹಕರಿಸದಿದ್ದರೆ ಭೂಮಾನುಭೂತಿ ತನಗೆ ತಾನೆ ಭವ್ಯತೆಗೇರಲು ಸಾಧ್ಯವಿಲ್ಲ, ಕಾವ್ಯಲೋಕದಲ್ಲಿ. ವೈನತೇಯನಾದರೂ ಅವನ ವೀರ್ಯಕ್ಕೆ ತಕ್ಕ ಪ್ರಮಾಣದ ರೆಕ್ಕೆಗಳಿಲ್ಲದಿದ್ದರೆ ಅವನ ಬಲಿಷ್ಠತೆ ಪ್ರಕಾಶಿಸುವುದೆಂತು, ವಿಯಲ್ಲೋಕದಲ್ಲಿ ?

ರಸೋ ವೈ ಸಃ, ಭೂಮಾನುಭೂತಿ, ಪುಟ ೧೦೦

೫೦೨

ಮನುಷ್ಯನು ತಿಳಿದುಕೊಂಡಿರುವುದಕ್ಕಿಂತಲೂ ಹೆಚ್ಚಾಗಿಯೆ ಅವನ ಅಂತಃಪ್ರಕೃತಿ ಸೃಷ್ಟಿಯ ಬಹಿಃಪ್ರಕೃತಿಗೆ ಅನುಯಾಯಿಯಾಗಿರುತ್ತದೆ. ಆತನ ಆತ್ಮಕೋಶವು ಬಹುಜನ್ಮಗಳ ಸಂಸ್ಕಾರಗಳಿಂದ ತುಂಬಿರುವಂತೆ ಆತನ ಅನ್ನಮಯ ಕೋಶವೂ

ಪೃಥ್ವಿಯಲ್ಲಿ ಪ್ರಾಣೋತ್ಪತ್ತಿಯಾದಂದಿನಿಂದ ಮೊದಲುಗೊಂಡು ಇಂದಿನವರೆಗೆ ಜೀವವು ಕೈಕೊಂಡ ನಾನಾ ರೂಪದ ನಾನಾ ಪ್ರಯೋಗದ ನಾನಾ ಕಷ್ಟಸಂಕಟಗಳ ನಾನಾ ಸುಖ ಸಂತೋಷಗಳ ಮಹಾ ಸಾಹಸಯಾತ್ರೆಯ ಸಮಗ್ರಪರಿಣಾಮ ಮುದ್ರೆಯನ್ನೂ 'ಅಸ್ಮೃತಿ' ರೂಪದಲ್ಲಿ ಪಡೆದಿರುತ್ತದೆ. ಆ ಅಪಾರ್ಥಿವ ಮತ್ತು ಪಾರ್ಥಿವ ಸಂಸ್ಕಾರಕೋಶಗಳೆರಡೂ ನಮ್ಮ ಬಾಳ್ವೆಯ ಹೃದಯದ ಇಕ್ಕೆಲಗಳಲ್ಲಿ ಶ್ವಾಸಕೋಶಗಳಂತಿವೆ. ಅಪ್ರಜ್ಞಾ ಸೀಮೆಯಲ್ಲಿರುವ ಆ ಸಂಸ್ಕಾರಗಳಲ್ಲಿ ಯಾವುದನ್ನಾದರೂ ಮುಟ್ಟಿ ಎಚ್ಚರಿಸುವಂತಹ ಸನ್ನಿವೇಶ ಒದಗಿದರೆ ನಮಗೆ ಅಹೇತುಕ ಆನಂದವೊ ಅಕಾರಣ ಸಂಕಟವೊ ಸಂಭವಿಸಿದಂತಾಗುತ್ತದೆ. ಅಲ್ಪಕಾರಣದಿಂದ ಮಹತ್ತಾದ ಅನುಭವವುಂಟಾದಂತೆ ಭಾಸವಾಗಿ ಆಶ್ಚರ್ಯವಾಗುತ್ತದೆ.

ಮಲೆಗಳಲ್ಲಿ ಮದುಮಗಳು, ಪುಟ ೫೦-೧

೫೦೩

ಪ್ರತಿಯೊಂದು ಪದಕ್ಕೂ ಅರ್ಥ ಮತ್ತು ಭಾವಗಳಿರುವಂತೆ ಅರ್ಥಕೋಶ ಮತ್ತು ಭಾವಕೋಶಗಳೂ ಇರುತ್ತವೆ. ನಿಘಂಟಿನಲ್ಲಿರುವ ಪದದ ಅರ್ಥ ಸರ್ವರಿಗೂ ಸಮಾನ ; ಆದರೆ ಭಾವ ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಾಗುತ್ತದೆ. ಅಥವಾ ಒಂದೇ ವ್ಯಕ್ತಿಯಲ್ಲಿಯೂ ಕಾಲದಿಂದ ಕಾಲಕ್ಕೆ ವ್ಯತ್ಯಾಸ ಹೊಂದುತ್ತದೆ. ಭಾವಕೋಶವೆಂದರೆ ಪದದ ಅರ್ಥವನ್ನು ಕೇಂದ್ರ ಬಿಂದುವಾಗುಳ್ಳ ರಾಗಾನುಭವಗಳ, ನಿಷ್ಕೃಷ್ಟತೀರವಿಲ್ಲದ, ಅಸ್ಪಷ್ಟ ಪಾರಾವಾರ ಅಥವಾ ಪರಿವೇಷ. ಭಾವಕೋಶವು ವ್ಯಕ್ತಿಯ ಸ್ವಯಂ ಅನುಭವದಿಂದ ಮಾತ್ರ ವೃದ್ಧಿಯಾಗುತ್ತದೆ. ಅದು ಎಷ್ಟು ಪುಷ್ಟಿಗೊಂಡರೆ ಅಷ್ಟು ಹೆಚ್ಚಾಗುತ್ತವೆ ರಸಗ್ರಹಣಕಾರಿಯಾದ ಸೂಕ್ಷ್ಮಬುದ್ಧಿ ಮತ್ತು ರಸಾನುಭವಕಾರಿಯಾದ ಹೃದಯಶಕ್ತಿ. ಕಾವ್ಯಕಲೆಯ ರಸಾಸ್ವಾದನೆಗೂ ಆನಂದಾನುಭವಕ್ಕೂ ಅತ್ಯಂತ ಆವಶ್ಯಕವಾದ ಸಹಕಾರಿ ಈ ಭಾವಕೋಶಪುಷ್ಟಿ.

ತಪೋನಂದನ, ಮಹೋಪಮೆ, ಪುಟ ೬೩

೫೦೪

ಪಗೆಯೇ ?
ತೆಗೆತೆಗೆ ! ಪೆರ್ಮೆಗೊಲ್ಮೆಯೆ ಚಿಹ್ನೆ. ಮಹತ್ತಿಗೇಂ
ಬೆಲೆಯೆ ಪೇಳ್ ಕೊಲೆ ?

ಶ್ರೀ ರಾಮಾಯಣ ದರ್ಶನಂ, ಕುಣಿದಳುರಿಯ ಉರ್ವಶಿ, ಪುಟ ೧೬೧

೫೦೫

ಆರಾದರೇನ್ ? ಆರಾಧ್ಯರ್ ತಪೋಧನರ್ !
ನಮಸ್ಕಾರಮೆ ಪುಣ್ಯಂ ; ತಿರಸ್ಕಾರಮೆ ಪಾಪಂ !

ಶೂದ್ರ ತಪಸ್ವಿ, ಪಾತ್ರ ಬ್ರಾಹ್ಮಣ, ಪುಟ ೩೨

೫೦೬

ಅಲೌಕಿಕ ಎನ್ನಿಸಿಕೊಳ್ಳುವ ರಸಾನುಭವವೂ ಮಳೆಯ ಮೇಘದಂತೆ ಲೋಕ ಜೀವನದಿಂದಲೆ ಮೇಲೇರಿ ಮುಗಿಲಾಗಿ ಗಗನದಲ್ಲಿ ಸಂಚರಿಸಿ ಮತ್ತೆ ಮತ್ತೆ ಮಳೆಯ ರೂಪದಲ್ಲಿ ಲೋಕಸ್ಪರ್ಶಮಾಡಿ ಜೀವನವನ್ನು ಆರ್ದ್ರಗೊಳಿಸುತ್ತದೆ. ಹಾಗೆ ಮಾಡದೆ ಅದು ಆಕಾಶಕ್ಕೇರಿ ಅತ್ತಲೆ ಅಗೋಚರವಾಗುವ ಪಕ್ಷದಲ್ಲಿ ಮರ್ತ್ಯಜೀವನ ದೃಷ್ಟಿಯಿಂದ ಅದು ಅಸಾರ್ಥಕ ಮತ್ತು ಅಪ್ರಯೋಜಕವಾಗುತ್ತದೆ.

ರಸೋ ವೈ ಸಃ, ರಸಾನುಭವದ ಅಲೌಕಿಕತೆ, ಪುಟ ೨೪

೫೦೭

ಕವಿಪ್ರತಿಭೆಯ ಸಂಜೀವಿನೀ ಶಕ್ತಿಗೆ ಒಳಗಾಗಿ ಮೃತವಾದುದೆಲ್ಲ ಚಿರಂಜೀವ ವಾಗುತ್ತದೆ...ಕವಿಪ್ರತಿಭಾಕಿರಣ ಸ್ಪರ್ಶಮಾತ್ರದಿಂದ ಹೆಪ್ಪುಗಟ್ಟಿದಂತೆ ಗಡ್ಡೆಯಾಗಿರುವ ಎನಿತೆನಿತೂ ಜೀವಗಳ ಜಡತ್ವ ಅಳಿಯುತ್ತದೆ.

ವಿಭೂತಿ ಪೂಜೆ, ಕವಿಯಲ್ಲಿ ವಿಭೂತಿ, ಪುಟ ೬

೫೦೮

ಕವಿ ಮನುಷ್ಯನಾಗಿ ಲೋಕದ ಮತ್ತು ಸಮಾಜದ ಒಂದು ಅಂಶವಾಗಿ ದ್ದಾನೆ; ಅವನ ಕೃತಿಯೂ, ಅದೆಷ್ಟೆ ನಿಯತಿಕೃತ ನಿಯಮರಹಿತದಂತೆ ತೋರಲಿ, ಲೋಕದ ಒಂದಂಶವೆ. ಈ ಮಾತು ಸಹೃದಯನಿಗೂ ಸಂಪೂರ್ಣವಾಗಿ ಅನ್ವಿತ.

ರಸೋ ವೈ ಸಃ, ರಸಾನುಭವದ ಅಲೌಕಿಕತೆ, ಪುಟ ೨೯

೫೦೯

ಈ ಪ್ರಕೃತಿಯಾಟೋಪದೀ ಉಗ್ರತೆಯ ಮಧ್ಯೆ
ನಾಂ ಮನುಜರತ್ಯಲ್ಪ ಕೃತಿ ! ನಮ್ಮಹಂಕಾರ
ರೋಗಕಿಂತಪ್ಪ ಬೃಹದುಗ್ರತಾ ಸಾನ್ನಿಧ್ಯಮೇ
ದಿವ್ಯ ಭೇಷಜಮೆಂಬುದೆನ್ನನುಭವಂ. ಇಲ್ಲಿ,
ಈ ಗರಡಿಯೊಳ್ ಸಾಧನೆಯನೆಸಗಿದಾತಂಗೆ
ದೊರೆಕೊಳ್ಳುದೇನ್ ದುರ್ಲಭಂ ಪಾರ್ವತಸ್ಥಿರತೆ ?

ಶ್ರೀ ರಾಮಾಯಣ ದರ್ಶನಂ, ಸುಗ್ರೀವಾಜ್ಞೆ, ಪಾತ್ರ ರಾಮ, ಪುಟ ೩೫೭

೫೧೦

ನಮ್ಮಲ್ಲಿ ನಡೆಯುತ್ತಿರುವ ಕೆಲಸ ಕಡಿಮೆಯೆಂದು ಭಾವಿಸಿಕೊಳ್ಳಬೇಡಿ. ನನ್ನ ಎದುರುಗಡೆ ಇಲ್ಲಿ ಕುಳಿತಿರುವ ಒಂದು ಸಾಲನ್ನಷ್ಟೇನೇ ನೋಡಿದರೂ ಸಾಕು. ಎಂಥೆಂಥ ಮೇಧಾವಿಗಳು, ವಿಚಾರವಂತರು, ಭಾವುಕರು ಸಾಹಿತ್ಯದ ಕೆಲಸ ಮಾಡಿಕೊಂಡು ಹೋಗಿದ್ದಾರೆ! ಒಬ್ಬ ಡಿ. ವಿ. ಜಿ., ಒಬ್ಬ ಮಾಸ್ತಿ, ಒಬ್ಬ ಬೇಂದ್ರೆ-ಇನ್ನು ಉಳಿದವರ ಹೆಸರುಗಳನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ-ಕಾರಂತರ ಹೆಸರನ್ನೂ ಬರೆದಿದ್ದೆ (ಇಲ್ಲಿ ಬರುವುದಿಲ್ಲ ಎಂದು ತಿಳಿದುಕೊಂಡು). ಪ್ರಪಂಚದ ಯಾವ ಮಹಾ ಲೇಖಕನಿಗೂ ಕವಿಗೂ ನಮ್ಮವರೇನೂ ಕಡಮೆಯಿಲ್ಲ. ಅಷ್ಟೇ ಅಲ್ಲ,

ವಸ್ತು ನಿಷ್ಠವಾಗಿ ಸರಿಯಾಗಿ ವಿಚಾರಿಸಿದರೆ ಅವರಿಗಿಂತಲೂ ಮೇಲ್ಮಟ್ಟದವರು ನಮ್ಮಲ್ಲಿ ಬೇಕಾದಷ್ಟು ಇದ್ದಾರೆ.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೧೩

೫೧೧

ಹುಟ್ಟು ಕಟ್ಟುಗಳೇಕೆ ? ನೋವು ಸಾವುಗಳೇಕೆ ?
ಇದರರ್ಥಗಳ ನಾವು ತಿಳಿಯಲೆಳಸುವುದೇಕೆ ?
ನಿನ್ನಿಂದ ಬಂದವರು, ನಿನ್ನೊಳೇ ನಿಂದವರು
ನಿನ್ನ ಸಾಧಿಪುದೇಕೆ ? ಮತ್ತೆ ಹೊಂದುವುದೇಕೆ

ಕೊಳಲು, ಏಕೆ, ಪುಟ ೯೭

೫೧೨

ಧರ್ಮ ಸಾಧನೆಗಳಲ್ಲಿ ವೈಷ್ಣವ ವೈರಾಗ್ಯಕ್ಕಿಂತಲೂ ಸೊಗಸಾದುದು ಮತ್ತೊಂದಿಲ್ಲ. ಅದರಲ್ಲಿ ದೇಹದಂಡನೆಯಿಲ್ಲಿ ; ಅನಾವಶ್ಯಕವಾದ ಆತ್ಮದಂಡನೆಯೂ ಇಲ್ಲ ! ಬೃಂದಾವನದ ಶ್ರೀಕೃಷ್ಣನು ಇಷ್ಟದೇವತೆಯಾದುದರಿಂದ ರಾಸಲೀಲೆಗೂ ಬೇಕಾದಷ್ಟು ಅವಕಾಶವಿರುತ್ತದೆ. ಆ ಸಾಧಕರಿಗೆ ಬೇಕಾದುದು ಪ್ರಪತ್ತಿ. ಎಂದರೆ ಸಂಪೂರ್ಣವಾಗಿ ದೇವರಿಗೆ ಶರಣಾಗುವುದು. ಪ್ರಪತ್ತಿಯೊಂದಿದ್ದರೆ ಏನೇನು ಮಾಡಿದರೂ ಎಲ್ಲಕ್ಕೂ ಕ್ಷಮೆ. ನಾವು ಭಗವಂತನಿಗೆ ಕರುಣಾಸಾಗರ ಎಂದು ಬಿರುದು ದಯಪಾಲಿಸುವುದೇನು ಪುಕ್ಕಟೆಯಲ್ಲ !

ನನ್ನ ದೇವರು ಮತ್ತು ಇತರ ಕಥೆಗಳು, ವೈರಾಗ್ಯದ ಮಹಿಮೆ, ಪುಟ ೯೪

೫೧೩

ನಾವಿರುವ ಈ ನೆಲದ ಮೇಲಿರುವ ಬಾಂದೊಲದ
ಮೋಡಗಳ ನೋಡುವುದನರಿಯುತಿಲ್ಲೇ
ಎಲ್ಲ ದೇಶಗಳೆಲ್ಲ ಚೆಲುವ ಸವಿಯಲು ಬಲ್ಲ
ಕಬ್ಬಿಗಗೆ ಬೇಕಿಲ್ಲ ದೂರ ಜಿಲ್ಲೆ.

ಪ್ರೇಮಕಾಶ್ಮೀರ, ಪ್ರವಾಸ, ಪುಟ ೬೦

೫೧೪

ಶುಭಂ ಬಪ್ಪ ರೀತಿಯಂ ತರಿಸಲಲ್ ನಾಮಾರ್ ?
ದೈವಮೆ ಸಮರ್ಥಂ !

ಬೆರಳ್ ಗೆ ಕೊರಳ್, ಪಾತ್ರ ಏಕಲವ್ಯ, ಪುಟ ೫

೫೧೫

ಮೌನ ನಿರ್ಜನತೆಗಳ ಭೀಷಣ ಗುರು ಭಾರವನು
ಪರಿಹರಿಸಿಕೊಳ್ಳುಲು ಹಾಡಿ ಹಾಡಿ ಮುಂದೆ ಸಾಗಿದೆ.

ಕಿಂಕಿಣಿ, ನಾನು ಮುರಾರಿ, ಪುಟ ೧೮

೫೧೬

ನಾಮರೂಪಗಳ ದೃಷ್ಟಿಯಿಂದಲೂ, ಕವಿಕೃತಿಲೋಕವು ಪ್ರಕೃತಿಲೋಕಕ್ಕಿಂತಲೂ ಹೆಚ್ಚುಸ್ಥಿರ, ಮತ್ತು ಸತ್ಯತರ. ಕವಿಪ್ರತಿಭೆಯ ರಸಕ್ರಿಯೆ ಲೌಕಿಕ ನಶ್ವರಕ್ಕೆ ಅಮೃತತ್ವವನ್ನು ದಯಪಾಲಿಸುತ್ತದೆ ; ಕಾಲದೇಶದ ಮೃತ್ಯುಪಂಜರದಿಂದ ಪಾರು ಮಾಡಿ, ವಿಸ್ಮೃತಿಯ ವೈತರಣಿಯಲ್ಲಿ ಅದನ್ನು ಮುಳುಗಲೀಯದೆ ಉದ್ಧಾರಮಾಡುತ್ತದೆ. ಸ್ವಲ್ಪ ಸಂಖ್ಯೆಯ ಜನದ, ಸ್ವಲ್ಪ ಕಾಲದ ಮತ್ತು ಪರಿಮಿತ ದೇಶದ ಸ್ವಾರ್ಥ ತಾಸಂಕುಚಿತವಲಯ ಬದ್ಧವಾದ ಭಾವಾನುಭವಗಳನ್ನು ಅಸಂಖ್ಯಾತ ಮಾನವರ ಸಾರ್ವಕಾಲಿಕ ಮತ್ತು ಸಾರ್ವದೇಶಿಕವೂ, ಸ್ವಾರ್ಥತಾವಿಮುಕ್ತವೂ, ವಿಶ್ವವಿಶಾಲವೂ ಆದ ಭಾವಾನುಭಾವ ಗಳನ್ನಾಗಿ ಮಾಡಿ, ಅಚಿರವೂ ಪ್ರಾಪಂಚಿಕವೂ ಪರಿವರ್ತಿಸುತ್ತದೆ.

ತಪೋನಂದನ, ಪ್ರತಿಮಾ ಮತ್ತು ಪ್ರತಿಕೃತಿ, ಪುಟ ೩೬

೫೧೭

ಸತ್ಯಂಗಮೆಯೆ ಮಂಗಳಂ ತಪಂ !

ಶ್ರೀ ರಾಮಾಯಣ ದರ್ಶನಂ, ಅತ್ರಿಯಿಂದಗಸ್ತ್ಯಂಗೆ, ಪಾತ್ರ ರಾಮ, ಪುಟ ೨೦೧

೫೧೮

ಈಶ್ವರನು ನಮ್ಮಲ್ಲಿಯೂ ಇದ್ದಾನೆ. ಆತನ ಮಹಾಜ್ಯೋತಿಯ ಕಿರಣಗಳು ನಮ್ಮ ಬುದ್ಧಿಯಲ್ಲಿಯೂ ಪ್ರಕಾಶಿಸುತ್ತವೆ. ಆ ಪ್ರಕಾಶವೇ ಮತಿ. ಮತಿಯನ್ನು ತಿರಸ್ಕರಿಸಿ ದರೆ ಈಶ್ವರನ ಜ್ಯೋತಿಯನ್ನು ತಿರಸ್ಕರಿಸಿದಂತಾಗುತ್ತದೆ. ಹಾಗೆ ಮಾಡುವವನೇ ನಿಜವಾಗಿಯೂ ನಾಸ್ತಿಕನು. ಮೌಢ್ಯವೇ ಈಶ್ವರನಿಂದೆ. ಯಾವ ರೂಪದಲ್ಲಿಯೇ ಆಗಲಿ, ಯಾವ ವೇಷದಲ್ಲಿಯೆ ಆಗಲಿ, ತಿಳಿದೂ ತಿಳಿದೂ ಮೂಢತನವನ್ನು ಆರಾಧಿಸಿ, ಬೋಧಿಸಿ, ಲಾಭ ಪಡೆಯುತ್ತ ನೆಮ್ಮದಿಯಾಗಿರುವವನು ಪಾಷಂಡಿ ಯಾಗುತ್ತಾನೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೩

೫೧೯

ಕೆಟ್ಟವರಿಗೆ ನೆಟ್ಟಗಿರುವವರನ್ನೂ ತಮ್ಮಂತೆ ಮಾಡಿಕೊಳ್ಳುವ ಚಪಲತೆಯಾಗು ಗುತ್ತದೆ.

ಕಾನೂರು ಹೆಗ್ಗಡಿತಿ, ಪುಟ ೧೫೯

೫೨೦

ಕಣ್ದೆರೆದು
ಪ್ರಕೃತಿ ಸೌಂದರ್ಯಮಂ ಭಾವನೋಜ್ವಲವಾಗಿ
ನೋಡದಿಹ ಬಾಳೊಂದು ಬಾಳಲ್ಲ !

ಪಕ್ಷಿಕಾಶಿ, ಪ್ರಕೃತಿ ಉಪಾಸನೆ, ಪುಟ ೨೩

೫೨೧

ಸತ್ಯಬೋಧಕವಾದರೂ ಸೌಂದರ್ಯಸಾಧಕವಾದ ಕಾವ್ಯದ ಭಾಷೆ ಸಂಪೂರ್ಣವಾಗಿ ಆಲಂಕಾರಿಕವಾದುದು. ಮನುಷ್ಯನಿಗೆ ಆತ್ಮ ಗುಣ, ರೂಪ, ಭೂಷಣಗಳಿರುವಂತೆಯೆ ಕಾವ್ಯಕನ್ನಿಕೆಗೂ ಇರುವುವು.....ತತ್ವತಃ ಆತ್ಮ ಮತ್ತು ಗುಣಗಳನ್ನು ಬೇರೆ ಬೇರೆಯಾಗಿರುವಂತೆ ಭಾವಿಸಿದರೂ ವಸ್ತುತಃ ಅವೆರಡನ್ನು ಏಕಮಾತ್ರವಾದ ಅವಿಭಕ್ತಿ ತತ್ವದ ಅವಯವ ಅಥವ ಅಂಶಗಳೆಂದು ತಿಳಿಯುತ್ತೇವೆ. ರೂಪ ಮತ್ತು ಭೂಷಣಗಳು ಗೌಣವಾದುವು. ಅದರಲ್ಲಿಯೂ ರೂಪಕ್ಕಿಂತಲೂ ಭೂಷಣ ಹೆಚ್ಚು ಗೌಣವಾದುದು.

ಇತ್ಯಾದಿ, ಉಪಮಾಲೋಲ ಲಕ್ಷ್ಮೀಶ, ಪುಟ ೧೭-೮

೫೨೨

ಪ್ರೀತಿಯೊಂದಿದ್ದರೆ ಜಾತಿಯಿಂದೇನು ? ಸಮಾಜದ ರೀತಿನೀತಿಗಳೂ ಸಂಪ್ರದಾಯದ ಕಟ್ಟುನಿಟ್ಟುಗಳೂ ಎದೆಯ ಸರಳತೆಗೆ ಶರಣಾಗಲೇ ಬೇಕು. ಮುಖ್ಯವಾದುದು ಆವೇಶವಲ್ಲದೇ ವೇಷವಲ್ಲ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨೪

೫೨೩

ಯಾವ ಮತದವನಲ್ಲ,
ಎಲ್ಲ ಮತದವನು ;
ಯಾವ ಪಂಥವು ಇಲ್ಲ
ಬಹು ಪಂಥದವನು

ಷೋಡಶಿ, ರಸಋಷಿ, ಪುಟ ೬೫

೫೨೪

ನಿಜವಾದ ಪ್ರಜಾಸತ್ತೆ ಎಂದರೆ ಅನಿರ್ಬಾಧಿತ ಇಚ್ಛಾ ಸ್ವಾತಂತ್ರ್ಯದಿಂದ ಪ್ರಜೆಗಳು ಆಯುವ ಪ್ರಾಮಾಣಿಕ ವ್ಯಕ್ತಿಗಳಿಂದ ಸರ್ವರ ಅಭ್ಯುದಯಕ್ಕಾಗಿ ನಡೆಯುವ ರಾಜ್ಯಭಾರ.

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೫

೫೨೫

ಪ್ರಾರ್ಥನಾ ತೀವ್ರತೆಯ ಸಾತ್ವಿಕ ತಪಶ್ಶಕ್ತಿ, ಪೇಳ್ ,
ತಾಂ ಸ್ವಯಂಕ್ರಿಯೆಯಾಗಿ ಚೋದಿಸದೆ ಸೃಷ್ಟಿಯಂ ?
ಸೇತುಗಟ್ಟದೆ ಕಷ್ಟದಂಬುಧಿಗೆ ?-ಮೇಣಂತೆ ತಾಂ
ತಿರ್ದದೇನುಳಿಯುವುದೆ ಪೇಳಿಂದಲ್ಲದಿರೆ ನಾಳೆ

ಪಾಪ ಬುದ್ಧಿಯ ಜೀವಿತದ ವಕ್ರರೇಖೆಯಂ
ಪುಣ್ಯ ಋಜು ಪಥಕೆ ?

ಶ್ರೀ ರಾಮಾಯಣ ದರ್ಶನಂ, ಸಂಸ್ಕೃತಿ ಲಂಕಾ, ಪುಟ ३४೦

३೨೬

ಕರ್ಮವಾರಾಧನೆ, ಸೇವೆಯೇ ಪೂಜೆ.

ಜಲಗಾರ, ಪಾತ್ರ ಜಲಗಾರ, ಪುಟ ೧೦

३೨೭

ಈಶ್ವರನ ಸೃಷ್ಟಿಯನ್ನು ಒಲಿಯಬೇಕು ; ಅದರಲ್ಲಿಯ ಸೊಬಗನ್ನು ಸವಿದು ನಲಿಯಬೇಕು ; ಆತನ ಜೀವರಾಶಿಗಳನ್ನು ಪ್ರೀತಿಸಬೇಕು ; ಅವುಗಳ ಸೇವೆ ಮಾಡಬೇಕು ; ಆತನನ್ನು ಪ್ರಾರ್ಥಿಸಬೇಕು, ಧ್ಯಾನಿಸಬೇಕು ; ಆತನಲ್ಲಿ ವಿಹರಿಸಬೇಕು. ಅದು ಆರಾಧನೆ, ಅದು, ಸಾಧನೆ. ಅದರಿಂದ ಪರಮ ಶ್ರೇಯಸ್ಸು ಲಭಿಸುತ್ತದೆ.

ಇತ್ಯಾದಿ, ಉಪನಿಷತ್ತಿನ ಋಷಿಯ, 'ದರ್ಶನ', ಪುಟ ೭३

३೨೮

ಮಾನವನ ಅನುಭವಗಳನ್ನು ಹಾಗೆ ಹಾಗೆಯೆ ತೆಗೆದುಕೊಂಡು ಶಸ್ತ್ರಚಿಕಿತ್ಸೆಮಾಡುವಂತೆ ವಿಭಜನೆಮಾಡಿ ಅವುಗಳ ನಗ್ನಸ್ವರೂಪವನ್ನು ನಿರ್ಣಯಿಸುವುದು ವಿಜ್ಞಾನಶಾಸ್ತ್ರದ ಕರ್ತವ್ಯಕಾರ್ಯ. ಆ ಅನುಭವಗಳನ್ನು ನಮಗೆ ಸಂಬಂಧಪಟ್ಟ ರೀತಿಯಲ್ಲಿ ಸಂಗ್ರಹಿಸಿ ಅವುಗಳ ಕುರೂಪವನ್ನು ಆವರಿಸಿ ಸುರೂಪಗಳನ್ನು ವಿಕ್ಷೇಪಿಸಿ ಅವುಗಳ ಪರಮಾರ್ಥ ಸ್ವರೂಪವು ಹೊಳೆಯುವಂತೆ ಮಾಡುವುದು ಕಾವ್ಯದ ಲೀಲಾ ಕಾರ್ಯ.

ಇತ್ಯಾದಿ, ಉಪಮಾಲೋಲ ಲಕ್ಷ್ಮೀಶ, ಪುಟ ೧೭

३೨೯

ಎಲ್ಲಾದರು ಇರು ; ಎಂತಾದರು ಇರು ;
ಎಂದೆಂದಿಗು ನೀ ಕನ್ನಡವಾಗಿರು.
ಕನ್ನಡ ಗೋವಿನ ಓ ಮುದ್ದಿನ ಕರು,
ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಮೆಟ್ಟುವ ನೆಲ ಕರ್ನಾಟಕ, ಪುಟ ४३

३३೦

ಒಂದು ಭಾಷೆ ಮಾತೃಭಾಷೆಯಾದ ಮಾತ್ರಕ್ಕೆ ಅದರಲ್ಲಿರುವ ಉತ್ತಮ ಸಾಹಿತ್ಯವೆಲ್ಲವೂ ಶ್ರಮ ಪ್ರಯತ್ನಗಳಿಲ್ಲದೆ ತಮಗೆ ಗೊತ್ತಾಗುವುದು ಎಂದು ಕೆಲವರು ತಿಳಿದುಕೊಂಡಂತೆ ತೋರುತ್ತದೆ. ಅದರಲ್ಲಿಯೂ ಇಂಗ್ಲಿಷ್ ಭಾಷೆಯನ್ನು ಓದಿ ಕೊಂಡಿರುವ ಕೆಲವರು ಕನ್ನಡದಲ್ಲಿಯೂ ತಾವು ಪಂಡಿತರೆಂದು ಭ್ರಮಿಸಿ ತಮಗೆ

ಅರ್ಥವಾಗದ ಕನ್ನಡವೆಲ್ಲ ಪಠನಾನರ್ಹವೆಂದು ಸಾರುವನಿತು ಸಾಹಸಮಾಡುತ್ತಾರೆ. ಅಂತಹ ಚಿತ್ತವೃತ್ತಿ ಅಂಧಾಭಿಮಾನಕ್ಕಲ್ಲದೆ ವಿವೇಕಕ್ಕೆ ಚಿಹ್ನೆಯಲ್ಲ.

ಕಲಾಸುಂದರಿ, ಮುನ್ನುಡಿ, IX-X

೫೩೧

ಕವಿತೆಗೂ ಭೇದವೇನೆಂದರೆ: ಒಂದನೆಯದರಲ್ಲಿ ಭಾವವೇಪ್ರಧಾನ, ಎರಡನೆಯದರಲ್ಲಿ ಸಿದ್ಧಾಂತ ಕುಶಲತೆಗಳು ಪ್ರಧಾನ! ಕವಿಯ ಗಮ್ಯಸ್ಥಾನ ಕಲೆಯ ರಸಾನಂದ; ಪದ್ಯ ರಚಕನದು ಕಮ್ಮಾರ–ಪ್ರಯೋಜನ. ಕವಿತೆ ನೃತ್ಯದಂತೆ; ಪದ್ಯರಚನೆ ಪ್ರಯಾಣದಂತೆ. ನೃತ್ಯಮಾಡುವಾಗ ನಟನು ಬೇಕಾದಷ್ಟು ಶಕ್ತಿಯನ್ನು ಉಪಯೋಗಿಸುವನಾದರೂ, ಹೆಜ್ಜೆಗಳನ್ನು ಅನೇಕ ಸಾರಿ ಎತ್ತಿ ಇಡುವನಾದರೂ ಇದ್ದಲ್ಲಿಯೇ ಇರುತ್ತಾನೆ. ಅವನು ಯಾವುದಾದರೂ ಗೊತ್ತಾದ ಸ್ಥಳವನ್ನು ಸೇರಲೆಳಸುವ ಪ್ರಯಾಣಿಕನಲ್ಲ. ಆನಂದವೇ ನೃತ್ಯದ ಲಕ್ಷ್ಯ. ಪ್ರಯಾಣಿಕನಾದರೋ ತನ್ನ ಪ್ರತಿಯೊಂದು ಹೆಜ್ಜೆಯನ್ನೂ ಲಾಭಕ್ಕಾಗಿಯೇ ಇಡುತ್ತಾನೆ. ತನ್ನನ್ನು ಗೊತ್ತಾದ ಸ್ಥಳಕ್ಕೆ ಬಳಿಸಾರಿಸದ ಒಂದು ಅಡಿಯನ್ನಾದರೂ ಅವನು ಇಡಲೊಲ್ಲನು. ಪ್ರಯಾಣಿಕನ ಭಾಗಕ್ಕೆ ನೃತ್ಯ ವ್ಯರ್ಥಕಾರ್ಯ. ಪದ್ಯರಚಕರಿಂದ ಸಾಹಿತ್ಯದೇವಿಯ ದೇಹ ಕೊಬ್ಬಬಹುದೇ ಹೊರತು ಅವರಿಂದ ಆಕೆಯ ಆತ್ಮ ಕಲ್ಯಾಣವಾಗಲಾರದು.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೧೧

೫೩೨

ನೀ ಮೊಗವನೊಡ್ಡಿ ಬರೆ
ನಾ ಮುತ್ತನೊತ್ತಿದರೆ
ನನ್ನ ತಪ್ಪೇನು ?
ನೀನೆದೆಯ ನೀಡಿಬರೆ
ನಾನೆದೆಯ ನೀಡಿದರೆ
ನನ್ನ ತಪ್ಪೇನು ?

ಕಲಾಸುಂದರಿ, ಕವಿತೆಯಲ್ಲಿ, ಪುಟ ೨೬

೫೩೩

ನಿರ್ವಾಣ ಪದಕೇರ್ದ ನಿನ್ನನುಂ ನಗಿಪೆಮ್ಮ
ತಿಳಿಗೇಡಿತನದ ಮಾಮಹಿಮೆಯೆನಿತು ?
ನಿನ್ನಡಿಯ ಪೀಠದಡಿಯುರುಳುತಿರೆ ಕಾಲಚಕ್ರಂ
ಸೌಮ್ಯಭಾವವ ತೋರಿ ನಿಂತಿರುವೆಯಚಲಮಾಗಿ :
ಧಾರಿಣಿಯ ಗಲಿಬಿಲಿಯ ಸಹಿಸಲಾನಂದದಿಂದ
ನಿನ್ನಚಲತೆಯೊಳಿನಿತ ನೀಡೆಮಗೆ, ಗೋಮಟೇಶ !

ಕೊಳಲು, ಗೋಮಟೇಶ್ವರ, ಪುಟ ೩೭

೫೩೪

ಪ್ರಪಂಚಜೀವನ ಅನೇಕತೆಯಿಂದ ಏಕತೆಗೆ ಚಲಿಸುತ್ತಿದೆ. ಅನೇಕತೆಯನ್ನು ಇಲ್ಲಗೈಯುವ ಏಕತೆಯ ಕಡೆಗಲ್ಲ; ಅನೇಕತೆಯನ್ನು ಸಮನ್ವಯಗೊಳಿಸುವ ಏಕತೆಗೆ. ಅದರ ಪರಿಣಾಮವಾಗಿ ಅಥವಾ ಮತ್ತೊಂದು ಗೂಢತರದೃಷ್ಟಿಯಿಂದ ಅದಕ್ಕೆ ಕಾರಣವಾಗಿ, ಒಂದು ಪೂರ್ಣದೃಷ್ಟಿ ಸಿದ್ಧವಾಗುತ್ತಿದೆ. ಈ ಪೂರ್ಣದೃಷ್ಟಿಯ ಮತ್ತು ಸಮನ್ವಯ ಬುದ್ಧಿಯ ಪರಿಣಾಮವಾಗಿ ಒಂದು ಸರ್ವಸಮಾನತೆಯ ಸಮತಾಭಾವ ತಲೆದೋರಿ ಸುಪ್ರತಿಷ್ಠಾಪಿತವಾಗಲು ಪ್ರಯತ್ನಿಸುತ್ತದೆ. ರಾಜಕೀಯ ಮತ್ತು ಆರ್ಥಿಕ ರಂಗಗಳಲ್ಲಿ ಅದು ವರ್ಣಪೂರ್ಣವಾಗಿ ಕಲಹಕೌಲುಗಳಿಂದ ರಂಜಿತವಾಗಿ ಸುಪ್ರಕಟವಾಗಿ ಗೋಚರಿಸುತ್ತದೆ. ಆದರೆ ಸಾಮಾಜಿಕ ರಂಗದಲ್ಲಿ, ಧಾರ್ಮಿಕ ರಂಗದಲ್ಲಿ ಮತ್ತು ಸಾಹಿತ್ಯಾದಿ ಕಲಾರಂಗಗಳಲ್ಲಿಯೂ ಅದು ತನ್ನ ನಿಗೂಢ ಕಾರ್ಯದಲ್ಲಿ ತೊಡಗಿರುವದನ್ನು ಹೊಕ್ಕು ನೋಡಿದರೆ ಕಾಣುತ್ತೇವೆ.

ದ್ರೌಪದಿಯ ಶ್ರೀಮುಡಿ, ಮುಂದಿನ ಸಾಹಿತ್ಯದಲ್ಲಿ, ಪುಟ ೮೭-೮

೫೩೫

ಇಬ್ಬರೂ ರೋಗಿಗಳೆಂದು ಆರೋಗ್ಯವನ್ನೇ ಹಳಿಯುವುದೂ, ಇಬ್ಬರೂ ಸುಳ್ಳುಗಾರರೆಂದು ಸತ್ಯವನ್ನೇ ಅಲ್ಲಗಳೆಯುವುದೂ, ನಿದರ್ಶನಗಳು ಅಪೂರ್ವವೆಂದು ಆದರ್ಶವನ್ನೇ ತಿರಸ್ಕರಿಸುವುದೂ ಪ್ರೇಮದ ದಿವ್ಯತೆಗೆ ಲಕ್ಷಣವಲ್ಲ. ಮತ್ತು ಬಹುಸಂಖ್ಯೆಯ ಜನರು ಅನುಸರಿಸಲಾರದ ಮಾತ್ರಕ್ಕೆ ಬಹುಕಾಲದಿಂದ ಸಮೆದುಬಂದ ಒಂದು ದಾರಿಯನ್ನೇ ತ್ಯಜಿಸುವುದು ಕ್ಷೇಮಂಕರ ಬುದ್ಧಿಯಲ್ಲ. ಎತ್ತರಗಳಿರುವುದು ಎಲ್ಲರೂ ಹತ್ತುತ್ತಾರೆಂದಲ್ಲ, ಎಲ್ಲರೂ ಹತ್ತಬೇಕೆಂದು.

ತಪೋನಂದನ, ಮಹಾಶ್ವೇತೆಯ ತಪಸ್ಸು, ಪುಟ ೨೫

೫೩೬

ವ್ಯಾಧರಿಹರವರ ಸಹವಾಸ ನಿಮಗಲ್ಲ :
ಹೋದ ಹೃದಯರ ಸಂಗ ನಿಮಗೊಳ್ಳಿತಲ್ಲ.
ಪಂಡಿತರ ಬಲೆಯೊಳಗೆ ಸಿಲುಕದಿರಿ ನೀವು :
ಖಂಡಿಪರು ಶೋಧಿಸಲು ; ನಮಗಹುದು ಸಾವು !

ಮೇಘಪುರ, ಹಕ್ಕಿಗಳು, ಪುಟ ೧೩

೫೩೭

ಯಾವ ಕವಿಯಲ್ಲಿಯೆ ಆಗಲಿ, ಯಾವ ಕಾವ್ಯದಲ್ಲಿಯೆ ಆಗಲಿ, ಸಮಗ್ರ ಕಥೆಯೂ ಸರ್ವಕಾಲವೂ ಭವ್ಯತಾ ಶಿಖರನಿವಾಸಿಯಾಗಿರಬೇಕು ಎಂದರೆ ಆಗದ ಮಾತು ; ಆಗಾಗ ಅದು ಅಲ್ಲಿಗೆ ಪ್ರವಾಸಿಯಾದರೆ ಸಾಕು. ಉತ್ತುಂಗ ಶೃಂಗಗಳಿರುವುದು ಪ್ರವಾಸಕ್ಕಲ್ಲದೆ ನಿವಾಸಕ್ಕಲ್ಲ. ಆ ಬಿಳಿಕುಳಿರ ಕೈವಲ್ಯದಲ್ಲಿ ಚಿರನಿವಾಸಿಯಾಗುವ ಆಧ್ಯಾತ್ಮಿಕ ಸಾಮರ್ಥ್ಯ ಅರ್ಹಂತನೊಬ್ಬನಿಗೇ !

ತಪೋನಂದನ, ಪಂಪನಲ್ಲಿ ಭವ್ಯತೆ, ಪುಟ ೪೭

೫೩೮

ಅದು ನನ್ನಿ, ಇದು ನನ್ನಿ,
ಇಹುದೊಂದೆ ನನ್ನಿ.
ಚಲಿಸಲದು ! ನಿಲ್ಲಲಿದು !
ನನ್ನಿಗಳ ನನ್ನಿ !
ಅದನುಳಿದರಿದು ಸೊನ್ನೆ ;
ಇದನುಳಿದರದು ಸೊನ್ನೆ ;
ಒಂದನುಳಿದೊಂದಿರದು,
ಓ ಎನ್ನ ಚೆನ್ನೆ !

ಷೋಡಶಿ, ರಸಋಷಿ, ಪುಟ ೭೬-೭

೫೩೯

ಭಾವವು ಸಾಧಾರಣನಿಗೆ ಅನುಭವಾತೀತವಾಗಿರುವಂತೆಯೆ ಕವನದಲ್ಲಿರುವ ಆಲೋಚನೆಯೂ ಗಹನವಾಗಬಹುದು. ಆಗ ವಾಚಕನು ಕವಿಗೆ ವಿಮರ್ಶಕನಾಗಿರುವುದಕ್ಕಿಂತಲೂ ಶಿಷ್ಯನಾಗಿ ಮುಂದುವರಿಯುವುದೆ ಲೇಸು.

ಕಲಾಸುಂದರಿ, ಮುನ್ನುಡಿ, ಪುಟ XI

೫೪೦

ನೀವು ಮತ್ತು ನಿಮ್ಮಂತೆ ಇರುವ ಯುವಕರು ಪ್ರತಿಹಳ್ಳಿಗಳಿಗೂ ಹೋಗಿ, ಅಲ್ಲಿಯ ತರುಣ ವರ್ಗವನ್ನು ಸೇರಿಸಿ, (ಏಕೆಂದರೆ ವಯಸ್ಸಾದವರನ್ನು ಸೇರಿಸುವುದಕ್ಕೆ ಹೋದರೆ ಅವರು ಪರಿವರ್ತನೆ ಹೊಂದುವುದಕ್ಕೆ ಸಾಧ್ಯವಿಲ್ಲದೆ ಇರಬಹುದು. ಅಷ್ಟೇ ಅಲ್ಲದೆ ಅವರು ವಿರುದ್ಧವಾಗಿಯೂ ಹೋಗಬಹುದು.) ಒಂದು ರೀತಿಯ 'ವಿಚಾರ ವೇದಿಕೆ'ಗಳನ್ನು ನಿರ್ಮಿಸಬೇಕು, ಹಳ್ಳಿಹಳ್ಳಿಗೂ ಇಂಥ ಒಂದೊಂದು ವಿಚಾರ ವೇದಿಕೆ ಇರಬೇಕು. ಓದು ಬರಹ ಇದ್ದ ತರುಣರು ಕೂಡ ಅದಕ್ಕೆ ಸೇರಬಹುದು. ಆ ವಿಚಾರವೇದಿಕೆಗಳಲ್ಲಿ ತರುಣರಿಗೆ ಹಳೆಯ ನಂಬಿಕೆ ಆಚಾರಗಳನ್ನೆಲ್ಲ ಪ್ರಶ್ನಿಸುವುದನ್ನು ಕಲಿಸಬೇಕು. ಅವರ ಕಿವಿಗಳಿಗೂ ಹೊಸ ಕ್ರಾಂತಿಕಾರಕ ಘೋಷಣೆಗಳು ಬೀಳಬೇಕು. ಅಲ್ಲಿ ಅವರು ಕುರುಡು ನಂಬುಗೆಯ ಹಳೆಯ ಮೌಲ್ಯಗಳನ್ನೆಲ್ಲ ಬುದ್ಧಿಯ ಒರೆಗೆ ಹಚ್ಚಿ ಚರ್ಚಿಸುವಂತಾಗಬೇಕು.

ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಅದೇ ಹೆಸರಿನ ಲೇಖನ, ಪುಟ ೧೨-೩

೫೪೧

ಸಾಹಸವೆ ಸವಿ ಬಾಳು !
ಸಂದೆಯವೆ ಕಹಿ ಕೂಳು !
ನಂಬುಗೆಯ ಸುಗ್ಗಿಯನು ನೆಟ್ಟು ಸಂದೆಯದ ಮಾಗಿಯನು ಕೀಳು !

ಪಾಂಚಜನ್ಯ, ಮಲ್ಲಗೀತೆ, ಪುಟ ೫೦

೫೪೨

ನೀನೆನ್ನ ಬಳಿಬಂದು ಕೆಳೆತನದ ನೇಹದಲಿ ನನ್ನೊಡನಾಡಿ
ದಂದು ನಾನಿನ್ನ ಮಹಿಮೆಯನು ತಿಳಿಯದಾದೆ.
ನೀನೆನ್ನನಪ್ಪಿ ಮುದ್ದಿಸಲು ತನುಪುಳಕದಾನಂದದಲಿ
ನನ್ನಂತೆಯೇ ನೀನೆಂದು ತಿಳಿದುಬಿಟ್ಟೆ.
ಬೆಟ್ಟ ಕಣಿವೆಗಳಲ್ಲಿ ಹೊಲಗದ್ದೆಗಳಲಿ ಕೆರೆ ತೊರೆಗಳ
ಬಳಿ ನೀನೆನ್ನ ಕೈಹಿಡಿದು ಕರೆದೊಯ್ದು ನನ್ನ ಕಿವಿಗಳಲಿ
ಕನಸುಗಳನುಸುರಲು, ಕೇಳಿ, ಮಂಕು ಕವಿದವನಂತೆ ಸುಮ್ಮನಿದ್ದೆ.
ನಿನ್ನ ಪರಿಚಯ ಹೆಚ್ಚಿದಂತೆಲ್ಲ ನನ್ನೊಲುಮೆಗೆ
ನೀನು ದಾಸನಾಗಿರುವೆ ಎಂಬ ಹೆಮ್ಮೆಯಲಿ ನಾನುದಾಸೀನನಾದೆ.
ನೀನೆನ್ನ ಬಿಟ್ಟಿರಲಾರೆ ಎಂಬ ಗರ್ವದಿಂದುಬ್ಬಿದೆ.
ಆದರೇನಿದು, ಓ ನನ್ನ ಜೀವೇಶ ? ದಿನ ಕಳೆದಂತೆಲ್ಲ
ದೂರ ದೂರ ದೂರ ಹೋಗಿ ನೀನಿಂದು ದಿಗಂತದಲ್ಲಿ ನಿಂತಿರುವೆ.
ನನ್ನ ಗರ್ವ ತಲೆಬಾಗಿದೆ. ನನ್ನ ಬಿಂಕ ಹುಡಿಯಲ್ಲಿ
ಹೊರಳುತ್ತಿದೆ. ದಿಗಂತದಲಿ ನಿಂತಿರುವ ನೀನು ಕಣ್ಮರೆಯಾಗುವೆಯೋ
ಎಂದು ಎದೆ ಬೆದರಿ ಬೇಯುತ್ತಿದೆ.
ಮನ್ನಿಸೆನ್ನನು, ದೊರೆಯೆ. ಮತ್ತೊಮ್ಮೆ ಬಳಿಗೆ ಬಾ.
ನಾ ನಿನ್ನ ಕಾಲಡಿಯ ನೆಳಲಾಗಿ ನಿನ್ನನಾಲಂಗಿಸುವೆ.

ಕಿಂಕಿಣಿ, ಕಾಲಡಿಯ ನೆಳಲಾಗಿ, ಪುಟ ೪೫

೫೪೩

ಪ್ರಗತಿ, ಉದ್ಧಾರ, ಧ್ಯೇಯಸಿದ್ಧಿ ಇವು ನಾವು ಕಲ್ಪಿಸಿದಂತೆ ವಾಸ್ತವವಾಗುವುದೂ ಇಲ್ಲ; ನಾವು ಸಂಕಲ್ಪಿಸಿದ ರೀತಿಯಲ್ಲಿ ಕೈಗೂಡುವುದೂ ಇಲ್ಲ. ಪ್ರಪಂಚದ ಮಾನಸ ಶಕ್ತಿಸಮೂಹಗಳ ಸಂಘರ್ಷಣೆಯ ಫಲರೂಪವಾಗಿ ಅನಿರೀಕ್ಷಿತಗಳು ಬಂದೊದಗುತ್ತವೆ; ಅನಿವಾರ್ಯಗಳ ಅಡ್ಡಗಟ್ಟುತ್ತವೆ. ನಮ್ಮ ಪಯಣದ ದಾರಿ ಮಾತ್ರವಲ್ಲದೆ ದಿಕ್ಕೂ ಬದಲಾಯಿಸುವ ಸಂಭವವೂ ಉಂಟು.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮೂರನೆಯ ಮುದ್ರಣಕ್ಕೆ ಮುನ್ನುಡಿ, ಪುಟ V

೫೪೪

ಶ್ರೀ ರಾಮಕೃಷ್ಣ ವಿವೇಕಾನಂದರು ಜಗದ್ವ್ಯಕ್ತಿಗಳು, ಮಹದ್ವ್ಯಕ್ತಿಗಳು ಬೃಹದ್ವ್ಯಕ್ತಿಗಳು, ಶ್ರೀರಾಮಕೃಷ್ಣ ಮಹಾಸಂಘವು ಅವರ ಅನಂತವೂ ಅಪಾರವೂ ಅಸೀಮವೂ ಆದ ಮಹಾಶಕ್ತಿಯ ಒಂದು ಬಿಂದು ಮಾತ್ರವಾಗಿದೆ. ನಾಳೆ ಆ ಬಿಂದು ಮಾಯವಾದರೂ ಶಕ್ತಿಸಮುದ್ರಕ್ಕೆ ಒಂದಿನಿತೂ ಚ್ಯುತಿಯಿಲ್ಲ. ಅದು ಚಿರಂತನವಾಗಿರುತ್ತದೆ.

ಸ್ವಾಮಿ ವಿವೇಕಾನಂದ, ಪುಟ ೨೭೭

೫೪೫

ಭಾವನಾತೀತಕೆ ಅಚಿಂತ್ಯಕ್ಕೆ ರಸಕ್ಕಿಹುದೆ
ಕಾಲಮಾನದ ಸೂತ್ರ ಸಂಕೋಲೆ ?

ಶ್ರೀ ರಾಮಾಯಣ ದರ್ಶನಂ, ಇರ್ದುದು ಮಹೇಂದ್ರಾಚಲಂ, ಪುಟ ೩೮೮

೫೪೬

ಸತಿಗೆ ಪತಿಯೆ ದೇವರೆಂಬ
ನುಡಿಗೆ ಗುಡಿಯ ಕಟ್ಟಿಹೆ !
ಮಣಿದೆ ಮಣಿದೆ ಮರ್ತ್ಯನನೂ
ಅಮರ ಪದವಿಗಟ್ಟಿಹೆ !

ಚಂದ್ರಮಂಚಕೆ ಬಾ ಚಕೋರಿ, ನನ್ನನಮರಗೈದಿಹೆ, ಪುಟ ೬೮

೫೪೭

ನಾವು ಯಾವುದಾದರೊಂದು ಶಾಶ್ವತವಾದ ಮಹತ್ಕಾರ್ಯವನ್ನು ಸಾಧಿಸಬೇಕು ಎಂದು ಹೊರಟಾಗ, ನಮ್ಮ ಸಮಸ್ತ ಮನಶ್ಶಕ್ತಿ, ದೇಹಶಕ್ತಿ, ಆತ್ಮಶಕ್ತಿ ಎಲ್ಲವೂ ಆ ಮಹತ್ಕಾರ್ಯ ಸಾಧನೆಯಲ್ಲಿ ಕೇಂದ್ರೀಕೃತವಾಗದಿದ್ದರೆ ಆ ಕಾರ್ಯ ಸಿದ್ಧಿಯಾಗುವುದಿಲ್ಲ. ಸಿದ್ಧಿಯಾದರೂ ಅದರಲ್ಲಿ 'ಮಹತ್'ಇರುವುದಿಲ್ಲ.

ಷಷ್ಟಿನಮನ, ವಿಶ್ವಮಾನವ, ಪುಟ ೪೭

೫೪೮

ಯಾವ ಬರಹಗಾರನ ಎಲ್ಲ ಕೃತಿಗಳೂ ಸರ್ವ ಶ್ರೇಷ್ಠವಾಗಿ ಎಲ್ಲ ಕಾಲಕ್ಕೂ ಇರುವುದಿಲ್ಲ. ಆದರೆ ಉತ್ತಮವಾದುದನ್ನು ಗುರುತಿಸಬೇಕು.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೧೪

೫೪೯

ಆಪಾದಿತರನ್ನೆಲ್ಲಾ ನೀವು ಜೈಲಿನಲ್ಲಿ ಸಂಧಿಸಿದಾಗ ಅವರಲ್ಲಿ ಒಬ್ಬೊಬ್ಬರೂ ಸಂಭಾವಿತರೆ–ಯಾವುದೋ ಒಂದು ಕ್ಷಣಿಕವಾದ ಆವೇಶಕ್ಕೆ ಒಳಗಾಗಿ ಅಲ್ಲಿಗೆ ಬಂದು ಜೀವಮಾನಪರ್ಯಂತ ಅಲ್ಲಿ ಕೊಳೆಯುತ್ತಿರುತ್ತಾರೆ. ನಮ್ಮ ಭಾವಗಳು ತೀವ್ರವಾದಾಗ ಅವುಗಳನ್ನು ಸ್ವಲ್ಪ ಸಂಯಮ ಮಾಡಿಕೊಳ್ಳುವ ಶಕ್ತಿಯನ್ನು ನೀವು ನಾಲ್ಕು ಜನಕ್ಕೆ ದಯಪಾಲಿಸಿದರೆ ಅದರಿಂದ ಎಷ್ಟು ಕಷ್ಟಗಳು, ದುರಂತಗಳು ಕಡಿಮೆಯಾಗುತ್ತವೆ ! ಪೂರ್ತಿ ನಿಸ್ವಾರ್ಥೆಯನ್ನು ಸಾಧಿಸುವುದು ಕಷ್ಟ, ಅದು ಬೇಡ. ಆದರೆ ನಮ್ಮಲ್ಲಿರುವ ಸ್ವಾರ್ಥತೆಯನ್ನು ಕಡಿಮೆ ಮಾಡುವುದನ್ನು, ಅದಕ್ಕೊಂದು ಮಿತಿ ಕಲ್ಪಿಸುವುದನ್ನು ಕಲಿತರೂ ಎಷ್ಟು ಸಹಾಯವಾಗುತ್ತದೆ !

ಷಷ್ಟಿನಮನ, ಭಾರತ ವಿಶ್ವವಿದ್ಯಾನಿಲಯಗಳಲ್ಲಿ ಆಧುನಿಕ ಮನಃಶಾಸ್ತ್ರ, ಪುಟ ೧೪೦–೧

೫೫೦

ನಾನು ಹಿಡಿದಿದ್ದು ವಕ್ರಪಥವೊ ? ಅಥವಾ
ವಿಚಿತ್ರ ವೀಥಿಯೊ ? ಅಥವಾ ನನ್ನ ಭೈರವಯಾತ್ರೆ
ಇನ್ನುಳಿದವರಿಗಸದಳವೊ ?
ನನ್ನದು ಕಾವಿಯ ದಾರಿಯಲ್ಲಿ ; ಸಂಸಾರಿಯ
ದಾರಿಯಲ್ಲ. ನನ್ನದು ಮೂರನೆ ದಾರಿ : ನಾನು ಮುರಾರಿ !

ಕಿಂಕಿಣಿ, ನಾನು ಮುರಾರಿ, ಪುಟ ೧೯

೫೫೧

ಆಚಾರ್ಯ (ವಿನೋಬಾ)ರ ಕ್ರಾಂತಿ ಮೇಲೆ ಮೇಲೆ ತೋರುವಷ್ಟೇನೂ ಮುಗ್ಧವಾಗಿಲ್ಲ. ಅದು ಪರಿಣಾಮಕಾರಿಯಾದರೆ ಬುಡಮುಟ್ಟುವ ಕ್ರಾಂತಿಯೇ ಆಗುತ್ತದೆ. ಅದು ಅಹಿಂಸೆಯ ದಾರಿಯಲ್ಲಿ ಹೋಗುತ್ತಿರುವುದರಿಂದಲೆ ಅದರ ಉಗ್ರತೆ ದೃಗ್ಗೋಚರವಾಗುತ್ತಿಲ್ಲ, ಅಷ್ಟೆ. ಅದು ಬರಿಯ ಜಮೀನು ಹಂಚಿ ಕೈಬಿಡುವುದಿಲ್ಲ ; ಮತಾಚಾರದ ಹೆಸರಿನಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನೂ ತೊಡೆದು ಹಾಕುತ್ತದೆ. ನೀತಿಯ ನಡೆಯನ್ನು ತಿದ್ದುವಂತೆಯೆ ಜಾತಿಯ ಸಂಕುಚಿತ ಮನೋಭಾವಗಳಿಂದ ಉಂಟಾಗಿರುವ ತಾರತಮ್ಯಗಳನ್ನೂ ಸದೆಬಡಿಯುತ್ತದೆ. ಕಾರ್ಖಾನೆಯ ಮಾಲೀಕನ ಬೊಜ್ಜುಮೈಗೆ ಕೀ ಸುಳಿ ಹೊಡೆಯುವಂತೆಯೆ ದೇವಾಲಯದ ಸಂಪ್ರದಾಯಭ್ರಾಂತ ಪುರೋಹಿತನ ಡೊಳ್ಳಿಗೂ ಕನ್ನವಿಕ್ಕುತ್ತದೆ. ವ್ಯಾಪಾರಿಯ ಲೋಭಕಾರ್ಪಣ್ಯಗಳಿಗೆ ಕತ್ತರಿಯಿಕ್ಕುವಂತೆಯೆ ಪಾಶ್ಚಾತ್ಯ ವಿದ್ಯಾಪದ್ಧತಿಯ ವಿಶ್ವವಿದ್ಯಾನಿಲಯದಲ್ಲಿ ಪದವೀಧರನಾಗಿ ಅಟ್ಟಹಾಸದಿಂದ ಮೆರೆಯುತ್ತ ಮಲೆಯುತ್ತಿರುವ ವಸ್ತ್ರ ಮಾತ್ರ ಸಭ್ಯನಾದ ನಾಗರಿಕನ ಹಮ್ಮಿಗೂ ಹತ್ತರಿ ಹಾಕುತ್ತದೆ. ಅದು ಯಾರನ್ನು ಬಿಡುವುದಿಲ್ಲ ; ಯಾವುದನ್ನೂ ಬಿಡುವಂತಿಲ್ಲ.

ಷಷ್ಟಿನಮನ, ಶ್ರೀ ವಿನೋಬಾಜಿ, ಪುಟ ೧೪೯–೫೦

೫೫೨

ಬಿಸಿಲ ಬೇಗೆಗೆ ಬಳಲಿ ದಾರಿ ಬಳಿ ತೋಂಟದಲಿ
ಸ್ವಾದು ಚೂತದ ಫಲವ ಕೊಯ್ದುಂಬವಂಗೇಕೆ
ಹೊಲದ ಹೆಸರಿನ ಗೊಡವೆ ?

ಚಿತ್ರಾಂಗದಾ, ಮೂರನೆಯ ಪರ್ವಂ, ಪಾತ್ರ ಚಿತ್ರಾಂಗದೆ, ಪಂಕ್ತಿ ೧೧೭೪–೬, ಪುಟ ೪೩

೫೫೩

ಜೀವನ, ಮತಕ್ಕಿಂತಲೂ ಗಂಭೀರವಾದುದು; ತತ್ತ್ವಕ್ಕಿಂತಲೂ ಆಳವಾದುದು; ಕಲೆಗಳಿಗಿಂತಲೂ ಗುಹ್ಯವಾದುದು. ಅದರ ಬೃಹದ್ಗರ್ಭದಲ್ಲಿ ಮತ ತತ್ತ್ವಕಲೆಗಳಂತೆಯೆ ವಿಜ್ಞಾನ ರಾಜಕೀಯಗಳೂ ಪ್ರಧಾನಾಂಶಗಳಾಗಿವೆ. ಅಸಂಖ್ಯ ಮುಖವಾದ ಜೀವನ ಯಾವ ಒಂದು ಮುಖದ ಅತಿ ಪ್ರಾಶಸ್ತ್ಯವನ್ನೂ ಸಹಿಸದು. ಅದಕ್ಕೆ

ಎಲ್ಲ ಮುಖಗಳೂ ಬೇಕಾಗಿವೆ. ಅತಿಯಾಗಿ ಉತ್ಪ್ರೇಕ್ಷಿತವಾದ ಮುಖ ವಿಕಾರವಾಗುತ್ತದೆ. ಜೀವನ ಒಂದಲ್ಲ ಒಂದು ದಿನ ಅದನ್ನು ಖಂಡಿಸಿ ತಿರಸ್ಕರಿಸುತ್ತದೆ. ಅರ್ಧದೃಷ್ಟಿ ಅನರ್ಥಕಾರಿ. ಪೂರ್ಣದೃಷ್ಟಿಯಿಂದಲೇ ಶ್ರೇಯಸ್ಸು.

ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೩೧

೫೫೪

ಆತ್ಮಸಿರಿಯ ಮೀರಿದಾವ ಸಿರಿಯ ಬಲ್ಲೆವು ?
ನೆಲದ ಸಿರಿಯ, ಕೀರ್ತಿ ಸಿರಿಯ,
ಭೋಗಸಿರಿಯ, ಸರ್ವಸಿರಿಗಳನ್ನು ಮೀರಿದೆ ;

ಇಕ್ಷುಗಂಗೋತ್ರಿ, ಬೆಳ್ಳಿ ಹಬ್ಬದ ಕಬ್ಬದ ಬಳ್ಳಿ, ಪುಟ ೬೯

೫೫೫

ನಾನು ಸವ್ಯಸಾಚಿಯಾಗುವೆನೆಂಬುದು ಕೆಲಕಾಲ ನನ್ನ ಕನಸಾಯಿತು. ಒಂದು ಕೈಯ್ಯಲ್ಲಿ ಇಂಗ್ಲಿಷ್, ಮತ್ತೊಂದು ಕೈಯ್ಯಲ್ಲಿ ಕನ್ನಡ ನನ್ನ ಹಿಡಿಕೆಯಲ್ಲಿ ನಿಲ್ಲುವುದೆಂದು ನಾನು ಭಾವಿಸಿದ್ದೆ. ಆದರೆ ಕವಿತಾದೇವತೆ ಏಕಪತ್ನೀ ವ್ರತಸ್ಥನಂತೆ ವ್ಯವಹರಿಸುವವಳು. ಆದ್ದರಿಂದಲೆ ಎರಡನ್ನೂ ಮುಂದುವರಿಸಲು ನನ್ನನ್ನು ಬಿಡಲಿಲ್ಲ. ಸ್ವಭಾವ ಸಹಜವಾಗಿಯೆ ನಾನು ಕನ್ನಡದ ಕಣಕ್ಕಿಳಿದೆ. ಅದು ಕನ್ನಡದ ನವೋದಯವಾಗುತ್ತಿದ್ದ ಕಾಲ.

ಷಷ್ಟಿಸನ್ಮಾನ, ಭಾರತದಲ್ಲಿ ಇಂಗ್ಲಿಷಿನಸ್ಥಾನ, ಪುಟ ೧೧೨

೫೫೬

ಹುಡುಗಿ ಸೂಕ್ಷ್ಮಪ್ರಕೃತಿಯ ಬಾಲೆಯಲ್ಲದಿದ್ದರೆ....ತನಗಾಗುವ ಪ್ರೇಮಭಂಗವನ್ನೂ ನಿರಾಶೆಯನ್ನೂ ಪದ್ಧತಿ ಮತ್ತು ಅಭ್ಯಾಸಗಳ ಕಗ್ಗಲ್ಲಿನಲ್ಲಿ ತಿಕ್ಕಿ ತಿಕ್ಕಿ, ಮೊಂಡ ಮಾಡಿ, ಮರೆತು, ಕೆಲದಿನಗಳಲ್ಲಿಯೆ ಹೊಸ ಸನ್ನಿವೇಶಕ್ಕೆ ತಕ್ಕಹಾಗೆ ವರ್ತಿಸಲು ತೊಡಗಿ, ಜೀವನವನ್ನು ತಕ್ಕಮಟ್ಟಿಗೆ ನೆಮ್ಮದಿಯಾಗಿ ನಡೆಸುತ್ತಾಳೆ. ಆದರ ತರಳೆ ಭಾವಜೀವಿಯಾಗಿ ಸೂಕ್ಷ್ಮಹೃದಯದವಳಾಗಿದ್ದರೆ ಯಾವ ಪದ್ಧತಿಯಾಗಲಿ, ಯಾವ ಅಭ್ಯಾಸವಾಗಲಿ ಯಾವ ಸಮಾಜದ ಕಟ್ಟುನಿಟ್ಟುಗಳಾಗಲಿ, ಯಾವ ವಿವಾಹದ ಶಾಸ್ತ್ರೋಕ್ತ ಕರ್ಮಗಳಾಗಲಿ, ಆಕೆಯ ಪ್ರಥಮ ಪ್ರಣಯದ ವಿದ್ಯುನ್ಮುದ್ರೆಯನ್ನು ಅಳಿಸಲಾರದೆ ಹೋಗುತ್ತವೆ. ಅದಕ್ಕೆ ಬದಲಾಗಿ ಒದಗುವ ವಿಘ್ನದಿಂದ ಪ್ರಥಮ ಪ್ರೇಮದ ಮೊನೆ ಮತ್ತೂ ತೀಕ್ಷ್ಣವಾಗುತ್ತದೆ.

ಕಾನೂರು ಹೆಗ್ಗಡಿತಿ, ಪುಟ ೨೯-೩೦

೫೫೭

ಯುವಕನು ಸಂಪಾದನೆ ಮಾಡುವ ಸಾಮರ್ಥ್ಯವನ್ನು ಪಡೆಯುವ ಮೊದಲೆ ಮದುವೆ ಮಾಡಿಕೊಂಡಲ್ಲಿ ಒಡನೆಯೆ ಚತುಷ್ಪಾದಿಯಗುತ್ತಾನೆ. ಅವನ ಸ್ವತಂತ್ರ ಬುದ್ಧಿ, ನಿರಂಕುಶ ಮತಿ ಎಲ್ಲವೂ ಮಣ್ಣುಗೂಡುತ್ತವೆ. ಅವರಿವರ ಕೈ ಹಾರೈಸಿ,

ನಾಲ್ಕು ಕಾಸು ಸಂಪಾದನೆಗಾಗಿ ಅವರಿವರನ್ನು ಓಲಗಿಸಿ, ಅಧಿಕಾರಗಳ ಅಥವಾ ಸಾಹುಕಾರರ ಕಾಲಬಳಿ ಮೂಲಗಿಸಿ, ತನ್ನಲ್ಲಿರುವ ದಿವ್ಯಾತ್ಮವನ್ನು ಸಂಪೂರ್ಣವಾಗಿ ಅವಮಾನಪಡಿಸುತ್ತಾನೆ. ಆತನ ತಾರುಣ್ಯದ 'ದರ್ಶನ' ಜ್ಯೋತಿ ಸಾಂಸಾರಿಕ ಜೀವನದ ದಾಸ್ಯದಲ್ಲಿ, ಕೋಟಲೆಯಲ್ಲಿ, ಕಷ್ಟದಲ್ಲಿ ಧೂಳಿಧೂಮಗಳಲ್ಲಿ ನಂದಿಹೋಗುತ್ತದೆ ಅಥವಾ ನಂದಿಹೋಗುವಷ್ಟರ ಮಟ್ಟಿಗೆ ಮಾಸಿಹೋಗುತ್ತದೆ. ಕಡೆಕಡೆಗೆ ಅನೀತಿಕೂಡ ಹೀನವಾಗಿ ತೋರುವುದಿಲ್ಲ. ಅವನ ಔದಾರ್ಯದವಲಯ ಬರಬರುತ್ತಾ ಕಿರಿದಾಗಿ, ಕಡೆಗೆ ತಾನು, ತನ್ನ ಹೆಂಡತಿ, ತನ್ನ ಮಗು ಮೂವರನ್ನು ಮಾತ್ರ ಸುತ್ತುವರಿಯುತ್ತದೆ. ಅವರಿಗಾಗಿ ಏನನ್ನು ಬೇಕಾದರೂ ಮಾಡಲು ಹೇಸುವುದಿಲ್ಲ. ಹಾಗಾಗುವವರು ದೇಶದ ಪ್ರಗತಿಗೆ ಕಂಟಕಪ್ರಾಯರಾಗುತ್ತಾರೆ. ಆದ್ದರಿಂದ, ಮಿತ್ರರೇ, ನಿಮ್ಮ ಕಾಲ ಮೇಲೆ ನೀವು ನೆಮ್ಮದಿಯಾಗಿ ನಿಲ್ಲುವ ಶಕ್ತಿ ಬರುವ ಮೊದಲು ಮದುವೆಯಾಗ ಬೇಡಿ ; ಆತ್ಮಕ್ಕೆ ಅಗೌರವವನ್ನೂ ಮನಸ್ಸಿಗೆ ಯಾತನೆಯನ್ನೂ ದೇಶಕ್ಕೆ ಹಾನಿಯನ್ನೂ ತರಬೇಡಿ.

ಆತ್ಮಶ್ರೀಗಾಗಿ, ನಿರಂಕುಶಮತಿಗಳಾಗಿ; ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೩೧

೫೫೮

ಇನ್ನಿಲ್ಲವೊ ಅಹಮಹಮಿಕೆ,
ತರತಮಗಳ ವ್ಯಾಜ್ಯ !
ಉಣಿಸಿಗೆ ಮೇಣ್ ಉಡುಪಿಗೆ ಮೇಣ್
ಆರಾಗಲಿ ಆರಡಿಯನ್
ಹಿಡಿಯುವುದಿನ್ ತ್ಯಾಜ್ಯ !

ಇಕ್ಷುಗಂಗೋತ್ರಿ, ಶ್ರೀ'ಸಾಮಾನ್ಯ'ರ ದೀಕ್ಷಾಗೀತೆ, ಪುಟ ೨

೫೫೯

ಯಾವ ದೇಶದ ಕವಿಯಾಗಲಿ ತನ್ನ ಜನತೆಯ ಪ್ರಾಚೀನ ಸಂಸ್ಕೃತಿಯ ನೆಲದಲ್ಲಿಯೆ ಮೊಳೆತು ಬೇರುಬಿಟ್ಟು ಬೆಳೆಯತ್ತಾನೆ. ಭಾರತೀಯನಾದ ಕವಿಗೆ ವೇದ, ಉಪನಿಷತ್ತು, ಭಗವದ್ಗೀತೆ, ಷಡ್ದರ್ಶನಗಳು, ರಾಮಾಯಣ ಮಹಾಭಾರತಾದಿ ಮಹಾಕಾವ್ಯಗಳು, ಪುರಾಣಗಳು–ಇತ್ಯಾದಿ ಭಾರತೀಯ ದರ್ಶನ ಸಾಹಿತ್ಯಗಳು ಅವನ ಸಂಸ್ಕಾರಕೋಶವನ್ನು ಸಿದ್ಧಗೊಳಿಸುವ ಭಿತ್ತಿಯಾಗಿ ಪರಿಣಮಿಸುತ್ತವೆ.

ದ್ರೌಪದಿಯ ಶ್ರೀಮುಡಿ, ಕವಿಯ ಜೀವನದೃಷ್ಟಿ ಮತ್ತು ಕಾವ್ಯಸೃಷ್ಟಿ, ಪುಟ ೪೨

೫೬೦

ಹಳ್ಳಿಗಳಲ್ಲಿ ಪತ್ರಿಕೆಗಳೆಂದರೆ ವೇದಸಮವಾಗಿವೆ. ಪತ್ರಿಕೆಗಳಲ್ಲಿ ಬಂದಿದೆ ಎಂದರೆ ಏನನ್ನು ಬೇಕಾದರೂ ನಂಬುತ್ತಾರೆ, ವೇದ ಧರ್ಮಶಾಸ್ತ್ರಗಳಲ್ಲಿ ಹೇಳಿದೆ ಎಂದರೆ ಎಂತಹ ಕ್ರೂರಕರ್ಮವನ್ನಾದರೂ ಸರಿ ಎಂದು ನಂಬುವಂತೆ ! ಅಚ್ಚಿನಲ್ಲಿ ಅವರಿಗಷ್ಟು ಗೌರವ ; ನಮಗೆ ಸಂಸ್ಕೃತ ಶ್ಲೋಕಗಳಲ್ಲಿರುವಂತೆ. ದುಡ್ಡು ಇದ್ದರೆ ಸರಿ.

'ಮೊಲಕ್ಕೆ ಮೂರು ಕೊಂಬುಗಳ ತುದಿಯಲ್ಲಿ ಕಣ್ಣುಗಳಿವೆ' ಎಂದು ಬೇಕಾದರೂ ಅಚ್ಚು ಮಾಡಬಹುದು ಎಂಬ ಸಂಗತಿ ಪಾಪ, ಆ ಹಳ್ಳಿಗರಿಗೇನು ಗೊತ್ತು ?

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೬

೫೬೧

ಕವಿಯ ಶಾಂತಿ ಬರಿಯ ಭ್ರಾಂತಿ ;
ಅವನ ಬದುಕನಂತ ಕ್ರಾಂತಿ !

ಪ್ರೇಮಕಾಶ್ಮೀರ, ಕವಿಯ ಪ್ರೇಮ, ಪುಟ ೬೨

೫೬೨

ಬೃಹದ್ ಭಾವಗಳನ್ನು ವಸ್ತುಗೈದು ಮಹತ್ ಕೃತಿಗಳನ್ನು ರಚಿಸುವುದರಿಂದಲೇ ಜಗತ್ ಕವಿಗಳಾಗುತ್ತಾರೆ.

ತಪೋನಂದನ, ಪಂಪನಲ್ಲಿ ಭವ್ಯತೆ, ಪುಟ ೪೧

೫೬೩

ಸಾಹಸಂ
ಸ್ತುತ್ಯಂ. ವಿವೇಕಮದರಿಂದೆಯುಂ ಶ್ಲಾಘ್ಯಮ್ಮೆ.
ಸಾಹಸಂ ವೀರರಥಿ, ಸಾರಥಿ ವಿವೇಕಮಿತಿ.
ಮತಿವಲ್ಗೆ ಯಿಲ್ಲದಿರೆ ಸಾಹಸಂ ಗತಿಗೆಟ್ಟ
ತೇಜಿ.

ಶ್ರೀ ರಾಮಾಯಣ ದರ್ಶನಂ, ಇರ್ದುದು ಮಹೇಂದ್ರಾಚಲಂ, ಪಾತ್ರ ತಾರ, ಪುಟ ೩೯೬

೫೬೪

ಹೃದಯಕೆ ತೃಪ್ತಿಯಂ ತಂದ
ಗುರುದೇವ ಪರಮಹಂಸನ ಸಮನ್ವಯ ದೃಷ್ಟಿ,
ಮರ್ತ್ಯತತ್ತ್ವದ ಮನೋಮಯದ ರೀತಿಯೊಳಿಂದು
ತಾನಾಯ್ತು ತಾರ್ಕಿಕ ಸಮರ್ಪಕಂ, ನಿನ್ನ ಈ
ಲೋಕಲೋಕಂಗಳಂ ಲೋಕಾಂತರಂಗಳಂ
ತನ್ನ ಮುಷ್ಟಿಯೊಳಾಂತ ಪೂರ್ಣದೃಷ್ಟಿಯ ಕೃತಿಯ
ದರ್ಶನದಿ.

ಅಗ್ನಿಹಂಸ, ಶ್ರೀ ಅರವಿಂದರಿಗೆ, ಪುಟ ೮೯

೫೬೫

ನನ್ನಿಯನರಸಿ ತೆರಳುವರು
ನಾವು ; ನಮಗೇಳುವುದು ಬೀಳುವುದು ಗುರಿಯಲ್ಲ.
ಎದ್ದರೂ ಬಿದ್ದರೂ ನನ್ನಿಯೆಡೆಗೆಡೆಬಿಡದೆ
ಮೇಲೇರುವುದೆ ಗಮ್ಯ.

ನವಿಲು, ಜೋಗ, ಪುಟ ೪೦

೫೬೬

ತಪ್ಪಿದರೆ ಏನೊರ್ಮೆ ?
ಅನುಭವಕೆ ಅದೆ ಪೆರ್ಮೆ !
ತಪ್ಪಿದರೆ ತಪ್ಪಿಲ್ಲ ; ತಪ್ಪಿನೊಳಳುಕಿ ನಿಲ್ಲಲದುವೆ ಪಾಪ !

ಪಾಂಚಜನ್ಯ, ಮಲ್ಲಗೀತೆ, ಪುಟ ೪೩

೫೬೭

ಪ್ರತಿಯೊಬ್ಬ ಮಹಾಪುರುಷನ ಜೀವನದಲ್ಲಿಯೂ–ಬಹುಶಃ ಸಾಮಾನ್ಯನ ಜೀವನದಲ್ಲಿಯೂ–ಒಂದು ಸಂಧಿಕಾಲ ಬರುತ್ತದೆ. ಚಿಕ್ಕಂದಿನಲ್ಲಿ ತಂದೆ ತಾಯಿಗಳಿಂದಲೂ ಇತರರಿಂದಲೂ ವಿಮರ್ಶೆಯಿಲ್ಲದೆ ವಿಚಾರವಿಲ್ಲದೆ ಸಂಶಯವಿಲ್ಲದೆ ಸ್ವೀಕರಿಸಿದ ಭಾವ, ಆಲೋಚನೆ, ಶ್ರದ್ಧೆ, ಕಥೆ, ನಂಬುಗೆ ಇತ್ಯಾದಿಗಳ 'ಶ್ರುತಿ'ಗೂ ತರುವಾಯ ತಾರುಣ್ಯದಲ್ಲಿ ಬುದ್ಧಿ ಪ್ರಬುದ್ಧವಾದ ಮೇಲೆ ಮೂಡುವ ವಿಮರ್ಶೆಯ ವಿಚಾರದ ಸಂಶಯದ ಪ್ರತಿಭಟನೆಯ 'ಮತಿ'ಗೂ ಗದಾಯುದ್ಧವಾಗುವ ಕ್ರಾಂತಿಕಾಲದಿಂದ ಬುದ್ಧಿಯಿರುವವರು ಯಾರೂ ತಪ್ಪಿಸಿಕೊಳ್ಳಲಾರರು. ಅಂತಹ ಮಾನಸಿಕ ಕ್ರಾಂತಿ ಹೊಸಬಾಳಿಗೆ ಕಾರಣವಾಗುತ್ತದೆ. ಹಾಗೆ ಎರಡನೆಯ ಸಾರಿ ಹೊಸತಾಗಿ ಹುಟ್ಟಿದವರೆಲ್ಲರೂ ನಿಜವಾಗಿ ದ್ವಿಜರಾಗುತ್ತಾರೆ.

ಸ್ವಾಮಿ ವಿವೇಕಾನಂದ, ಪುಟ ೬೦

೫೬೮

ಸಾಂಸ್ಕೃತಿಕವಾಗಿ ದೇಶದ ಮನೋಮಂಡಲದಲ್ಲಿ ಯಾವುದು ಅನೇಕ ಶತಮಾನಗಳಿಂದಲೂ ಅಚ್ಯುತವಾದ ಭಾವಸತ್ಯವಾಗಿದ್ದಿತೊ ಅದು ಈಗ ಭೌಗೋಲಿಕವಾಗಿಯೂ ಸಿದ್ಧವಾಯಿತೆಷ್ಟೊ ಅಷ್ಟೆ. ಅದನ್ನು ಯಾವ ಹೆಸರಿನಿಂದ ಕರೆದರೂ ಅದು ನಿಮಗೆ ಕರ್ಣಾಟಕವೆ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೩

೫೬೯

ಸಂಸ್ಕೃತಿಯಿಲ್ಲದ ಮತ್ತು ಸಂಸ್ಕೃತಿಗಾಗಿಯಲ್ಲದ ವಿರಾಮ ನರಕಕ್ಕೆ ದಾರಿ.

ಕಾನೂರು ಹೆಗ್ಗಡಿತಿ, ಪುಟ ೬೧೨

೫೭೦

....ಗಹನವಾದ ವಿಷಯಗಳನ್ನು ಚೆನ್ನಾಗಿ ತಿಳಿಸಲು ಉಪನ್ಯಾಸದ ಮಾರ್ಗಕ್ಕಿಂತಲೂ ಸಂಭಾಷಣೆಯ ಮಾರ್ಗವೆ ಉತ್ತಮವಾದುದು. ಅದರಲ್ಲಿಯೂ ಧರ್ಮದ ವಿಚಾರದಲ್ಲಿ ಬೀದಿಯ ಡಂಗುರದಿಂದ ಒಂದಿನಿತೂ ಪ್ರಯೋಜನವಿಲ್ಲ.

ಸ್ವಾಮಿ ವಿವೇಕಾನಂದ, ಪುಟ ೧೬೭

೫೭೧

ಮಾಡುವುದನೆಲ್ಲ ತನ್ನಾತ್ಮಸಾಧನೆಯೆಂದು
ಕರ್ಮಗೈ ; ಅದುವೆ ಪೂಜೆಯ ಮರ್ಮವೈ

ಶಿವನ ಕಾರ್ಯದೊಳಾವು ಶಿರಬಾಗಿ ನೆರವಾಗೆ
ನಮಗದುವೆ ಪರಮಪಾವನ ಧರ್ಮವೈ.

ಪ್ರೇಮಕಾಶ್ಮೀರ, ಒಬ್ಬ ತಾಯಿಗೆ, ಪುಟ ೭

೫೭೨

ಆಯಾ ಪ್ರದೇಶದ ಸಾಮಾನ್ಯ ಜನತೆಯ ದೈನಂದಿನ ವ್ಯವಹಾರಕ್ಕೂ ಭಾವ ಹಾಗೂ ಬುದ್ಧಿ ಪುಷ್ಟಿಯ ಸಾಧನೆಗೂ ವಿಶೇಷವಾದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ವಿಕಾಸಕ್ಕೂ ಬೇಕಾದುದು ಆಯಾ ದೇಶಭಾಷೆಯೆ. ಆದ್ದರಿಂದ ಆಯಾ ದೇಶ ಭಾಷೆಗಳ ವಿಷಯದಲ್ಲಿ ಆಯಾ ಪ್ರದೇಶಗಳು ಎಷ್ಟು ಶ್ರಮಿಸಿದರೂ ಸಾಲದಾಗಿದೆ; ಎಷ್ಟು ಪ್ರೋತ್ಸಾಹಕೊಟ್ಟರೂ ಎಂದಿಗೂ ಅತಿರೇಕ ಎನ್ನಿಸಿಕೊಳ್ಳಲಾರದು. ಸರಕಾರ ಗಳಾಗಲಿ, ವಿದ್ಯಾಭ್ಯಾಸ ಇಲಾಖೆಗಳಾಗಲಿ, ವಿಶ್ವವಿದ್ಯಾನಿಲಯಗಳಾಗಲಿ, ಇತರ ಸಾಂಸ್ಕೃತಿಕ ಸಂಸ್ಥೆಗಳಾಗಲಿ, ಕಡೆಗೆ ವ್ಯಾಪಾರ ವಾಣಿಜ್ಯಾದಿ ಸಂಸ್ಥೆಗಳಾಗಲಿ ದೇಶಭಾಷೆಗೇ ಮೊತ್ತ ಮೊದಲನೆಯ ಸ್ಥಾನಕೊಡಬೇಕು. ಹಾಗೆ ಮಾಡದಿದ್ದರೆ ಪ್ರಜಾ ಪ್ರಭುತ್ವದ ಬುಡದ ಬೇರಿಗೆ ಬೆನ್ನೀರೆರೆದಂತಾಗುತ್ತಾದೆ; ದೇಶದ ಮಕ್ಕಳು ತಾವರಿಯದ ಇತರ ಭಾಷೆಗಳ ಹೊರೆಯನ್ನು ಹೊತ್ತು, ಯಾವುದನ್ನೂ ಸರಿಯಾಗಿ ಅರಿಯಲಾರದೆ, ಏನನ್ನೂ ಚೆನ್ನಾಗಿ ಅರಗಿಸಿಕೊಳ್ಳಲಾರದೆ, ಈಗಿರುವಂತೆಯೆ ಕುಂಟುತ್ತಾ ತಡವುತ್ತಾ, ನಿಂತವರು ನಿಲ್ಲಲಿ, ಬಿದ್ದವರು ಬೀಳಲಿ, ಸೋತವರು ಸೋಲಲಿ, ಪಯಣ ಹೊರಟ ನೂರರಲ್ಲಿ ತೊಂಬತ್ತೊಂಬತ್ತು ಹಿಂದುಳಿದು, ಆ ಕೊನೆಯ ಅದೃಷ್ಟಶಾಲಿಯೂ ಅರ್ಧಮಾತ್ರನಾಗಿ, ಏದುತ್ತಾ, ಗುರಿಯ ಬಳಿ ಸಾರುತ್ತಿರುವ ಇಂದಿನ ದುರ್ಗತಿಯನ್ನೇ ನಾವು ಪ್ರಗತಿ ಎಂದು ಕರೆದುಕೊಳ್ಳುತ್ತಾ ಆತ್ಮವಂಚಕರಾಗಿ ಸಾಗಬೇಕಾಗುತ್ತದೆ.

ಷಷ್ಠಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೧೪–೫

೫೭೩

ಇಂದ್ರಿಯದ ಲೋಕದೊಳ್
ಆತ್ಮಪತನಕೆ ಸಾಹಸದ ಸೋಗುಮೋರೊರ್ಮೆ
ನೆರಮಪ್ಪುದಯ್!

ಶ್ರೀ ರಾಮಾಯಣ ದರ್ಶನಂ, ಸಾಗರೋಲ್ಲಂಘನಂ, ಪಾತ್ರ ಅಶರೀರವಾಣಿ, ಪುಟ ೪೩೦

೫೭೪

ಬಹುಶಃ ವೆಂಕಣ್ಣಯ್ಯನವರು ಹೋಗದಿದ್ದ ಯಾವ ಸಾಹಿತ್ಯ ಸಮ್ಮೇಲನಕ್ಕೂ ನಾನು ಹೋಗಿಲ್ಲವೆಂದು ಕಾಣುತ್ತದೆ, ಅವರು ಬದುಕಿದ್ದಷ್ಟು ಕಾಲವೂ!

ಮನುಜಮತ ವಿಶ್ವಪಥ, ಅಹೇತುಕ ಆತ್ಮೀಯತೆ, ಪುಟ ೮೨

೫೭೫

ಸ್ವಾರ್ಥತಾ ಸೂತ್ರಂಗಳಿಂ ನೆಯ್ಯುತಿದೆ ಸೃಷ್ಟಿ
ಪರಾರ್ಥತಾ ಶುಭ್ರದೇವಾಂಗಮಂ.

ಕೃತ್ತಿಕೆ, ವಿಶ್ವಭಿಕ್ಷು, ಪುಟ ೫೨

೫೭೬

ಈ 'ಜನಪ್ರಿಯತೆ' ಎಂಬ ಪದ ಈಚೀಚೆಗೆ ಬಹಳ ಅನರ್ಥಕಾರಿಯಾಗುವಂತೆ ತೋರುತ್ತದೆ. 'ಜನಪ್ರಿಯತೆ' ಎಂದರೇನು? ಆ ಜನರಾದರೂ ಯಾರು? ಜನರೆಲ್ಲರೂ ಮೆಚ್ಚಿದ ಹೊರತು ಆ ಕಾವ್ಯ ಉತ್ತಮ ಕಾವ್ಯವಲ್ಲ ಎಂದು ಹೇಳುವುದಾದರೆ ಉತ್ತಮ ಕಾವ್ಯಗಳೆ ಅಸಾಧ್ಯ ಎಂದು ಹೇಳಬೇಕಾಗುತ್ತದೆ.

ಕಲಾಸುಂದರಿ, ಮುನ್ನುಡಿ, ಪುಟ vii

೫೭೭

ನಮ್ಮ ದೇಶಕೆ ಏನು ಬಂದರೇನಂತೆ?
ಕೊನೆಗೆ
ಕಮ್ಯೂನಿಸಂ ಏ ಬಂದರೂ:
ಹಾಕುವೆವು ಅದಕ್ಕೂ ಮೂರು ನಾಮ!
ಅದರ ಹೆಗಲಿಗೂ ಬೀಳುವುದು ಜನಿವಾರ!
ಅದಕ್ಕೂ ಕಟ್ಟುವೆವು ಲಿಂಗ!
ಕ್ರಾಸು ತಗುಲಿಸಿದರೂ ಆಶ್ಚರ್ಯವಿಲ್ಲ!
ಇಲ್ಲಿ ಕಮ್ಯೂನಿಸಂ ಊ ಕಿರಸ್ತಾನ!
ಕೊನೆಗೆ,
ಹಿಂದೂಸ್ಥಾನದಲ್ಲಿಯೂ ಅದು ಮುಸಲ್ಮಾನ!
ನಮ್ಮ ರಾಜ್ಯಾಂಗದಲ್ಲಿ ಮಾತ್ರ
ನಾವು ಧರಿಸಿಹುದು ಸೆಕ್ಯೂಲರ್ ಯಜ್ಞಸೂತ್ರ!

ಪ್ರೇತಕ್ಯೂ, ಅಲ್ಲಿ-ಇಲ್ಲಿ, ಪುಟ ೩೯-೪೦

೫೭೮

ಸ್ವಾತಂತ್ರ್ಯೋತ್ತರ ಭಾರತಕ್ಕೆ, ರಸಾಸ್ವಾದನವೀಯುವ ಸೃಜನಾತ್ಮಕ ಸಾಹಿತ್ಯದ ಸೃಷ್ಟಿಯಷ್ಟೇ ಆವಶ್ಯಕವಾಗಿ, ಅಥವಾ ಅದಕ್ಕಿಂತಲೂ ಹೆಚ್ಚು ಆವಶ್ಯಕವಾಗಿ, ಜ್ಞಾನ ವಿಜ್ಞಾನ ಪ್ರಧಾನವಾದ ವಿಚಾರಾತ್ಮಕ ವಾಙ್ಮಯದ ರಚನೆಯಾಗಬೇಕಾಗಿದೆ. ನಮ್ಮ ಮಕ್ಕಳ ಶಿಕ್ಷಣವೆಲ್ಲ ಆಯಾ ಪ್ರದೇಶ ಭಾಷೆಯಲ್ಲಿಯೆ ನಡೆದು, ಅವರು ಜ್ಞಾನ ವಿಜ್ಞಾನ ಬೋಧೆಯನ್ನು ಸುಲಭವಾಗಿ ಗ್ರಹಿಸುವಂತಾಗಿ, ಪ್ರತಿ ವರ್ಷವೂ ಅಧಿಕಾಧಿಕ ಸಂಖ್ಯೆಯಲ್ಲಿ ಅನುತ್ತೀರ್ಣರಾಗಿ ತಮಗೂ ರಾಷ್ಟ್ರಕ್ಕೂ ಉಂಟಾಗುತ್ತಿರುವ ಆರ್ಥಿಕ ಮತ್ತು ಮಾನಸಿಕ ರೂಪದ ಮಹಾನಷ್ಟವನ್ನು ತಪ್ಪಿಸಬೇಕಾದರೆ ಲೇಖಕವರ್ಗ

ಬೌದ್ಧಿಕ ಸಾಹಿತ್ಯ ಸೃಷ್ಟಿಗೆ ಆದ್ಯಗಮನ ಕೊಡಬೇಕಾಗಿದೆ. ಮಹತ್ ಪ್ರತಿಭಾಶಕ್ತಿಯಿಂದ ಹೊಮ್ಮುವ ಸೃಜನಾತ್ಮಕ ಸಾಹಿತ್ಯವು ಅದಮ್ಯ ಸ್ಫೂರ್ತಿಯಿಂದ ಪ್ರೇರಿತವಾಗುವುದರಿಂದ ಅದಕ್ಕೆ ಬಹುಮಾನ ಪ್ರಶಸ್ತಿ ಪ್ರಶಂಸೆ ಕೀರ್ತಿ ಮೆಚ್ಚುಗೆಗಳ ಬೆನ್ನುತಟ್ಟು ಇಲ್ಲದಿದ್ದರೂ ಅದರ ಅಭಿವ್ಯಕ್ತಿ ತಿರೋಹಿತವಾಗುವುದಿಲ್ಲ; ಅದರ ಪ್ರಕಾಶನಕ್ಕೆ ಚ್ಯುತಿ ಬರುವುದಿಲ್ಲ. ಆದರೆ ವೈಜ್ಞಾನಿಕವೂ ಬೌದ್ಧಿಕವೂ ಆದ ವೈಚಾರಿಕ ಸಾಹಿತ್ಯಕ್ಕೆ ಅಧಿಕೃತ ಪ್ರೋತ್ಸಾಹ ಆವಶ್ಯಕ; ಅದು ಫಲಾಪೇಕ್ಷಿಯಾದುದು: ಪ್ರಯೋಜನವನ್ನೂ ನಿರೀಕ್ಷಿಸುತ್ತದೆ. ಪ್ರಯೋಜನವೇ ಅದರ ಪರಮ ಗುರಿ. ಕಾವ್ಯಕ್ಕೆ ರಸವೇ 'ಸಕಲ ಪ್ರಯೋಜನಮೌಲಿಭೂತ'ವಾದದ್ದು ಎಂಬರ್ಥದಲ್ಲಿ.

ಮನುಜಮತ ವಿಶ್ವಪಥ, ಬಹುಜಿಹ್ವಾ ಭಾರತಿಗೆ ಐಕ್ಯತೆಯ ಆರತಿ, ಪುಟ ೪೫

೫೭೯

ನೀಂ ನಿಸರ್ಗದ ಮೂರ್ತಿ;
ಸಾಮಾನ್ಯತಾ ಕೀರ್ತಿ;
ಕವಿಗೆ ಸ್ವರ್ಗಸ್ಫೂರ್ತಿ,
ಸಹಧರ್ಮಿಣಿ!

ಜೇನಾಗುವಾ, ರಸದರ್ಶಿ, ಪುಟ ೫೧

೫೮೦

ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ,
ಬಡತನವ ಬುಡಮುಟ್ಟ ಕೀಳಬನ್ನಿ.
ಮೌಢ್ಯತೆಯ ಮಾರಿಯನು ಹೊರದೊಡಲ್ಕೆತನ್ನಿ,
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ.
ಓ, ಬನ್ನಿ, ಸೋದರರೆ, ಬೇಗ ಬನ್ನಿ!

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಓ ಬನ್ನಿ ಸೋದರರೆ ಬೇಗ ಬನ್ನಿ, ಪುಟ ೨೮

೫೮೧

ಹೇ ಮಧುರ ರಸಮಯ ರಸಾಲ ಧನುವಿಂದೆಸೆವ
ಅತನುದೇವ, ರತೀಶ, ಮಾವು ತಾವರೆಯಸುಗೆ
ನೀಲ ನೈದಿಲೆ ಮಲ್ಲಿಗೆಯ ನಿನ್ನ ಪೂಗಣೆಗೆ,
ಪೆಣ್ಣುಂಬಿಗಳ ಕೋದು ಕಯ್ಗಯ್ದ ನಿನ್ನಿಂಪು
ಸಿಂಜಿನಿಯ ಸವಿದನಿಗೆ ಎದೆಸೋಲದಿಹರೋಳರೆ
ಈ ಬೃಹದ್ಬ್ರಹ್ಮ ಸೃಷ್ಟಿಯಲಿ?

ಚಿತ್ರಾಂಗದಾ, ಎರಡನೆಯ ಪರ್ವಂ, ಪಂಕ್ತಿ ೪೧೬–೨೧, ಪುಟ ೧೬

೫೮೨

ರಸಚಿತ್ ತಪೋಬಲಕೆಲ್ಲೆ ತಾನೊಳದೆ
ಪೇಳ್, ಕಲಾಲಕ್ಷ್ಮಿ ?

ಶ್ರೀ ರಾಮಾಯಣ ದರ್ಶನಂ, ಕವಿಕ್ರತು ದರ್ಶನಂ, ಪುಟ ೧೮

೫೮೩

ಒಲ್ಮೆ ತಾಂ
ಬಾಳ್ಗಿಡಕೆ ಪೂವೆಂದೆಯುಲ್ತೆ ? ದಿಟಮಾದೊಡಂ,
ಮರಕೆ ಮಲರಲ್ಲದೆಯೆ ಹಣ್ಣು ಗುರಿಯಪ್ಪಂತೆ,
ಪ್ರಣಯ ಸಾಧನೆಗೆ ಶಿಶುವಾತ್ಸಲ್ಯಂ ತಾಂ ಸಿದ್ಧಿ !

ಚಿತ್ರಾಂಗದಾ, ಐದನೆಯ ಪರ್ವಂ, ಪಾತ್ರ ಶ್ರೀಮೂರ್ತಿ, ಪಂಕ್ತಿ ೧೮೨೮–೩೧, ಪುಟ ೬೭

೫೮೪

ಕ್ರೌರ್ಯಮೇ ಲೇಸು ಔದಾಸೀನ್ಯಕಿಂತಲೂ !

ಕೃತ್ತಿಕೆ, ಆಸ್ಪತ್ರೆ, ಪುಟ ೬೬

೫೮೫

ದುಃಖ ಮಲಗಿಹುದೆಮ್ಮ ಸುಖದ ಎದೆಯಲ್ಲಿ !
ಪಾಪವಡಗಿಹುದೆಮ್ಮ ಪುಣ್ಯದೆದೆಯಲ್ಲಿ !

ಹೊನ್ನಹೊತ್ತಾರೆ, ಮಂತ್ರಾಕ್ಷತೆ, ಪುಟ ೬೦

೫೮೬

'ನಾನು' ಎಂಬ ಭಾವವೇ ನಾವು ಆರಾಧಿಸುವ ಒಂದು ಮಹಾಮೂರ್ತಿ. ಆ ಮೂರ್ತಿಭಂಜನೆಯಲ್ಲಿಯೆ ಸತ್ಯಸಾಕ್ಷಾತ್ಕಾರವಿರುವುದು ; ಎಂದರೆ ಮೂರ್ತಿಭಜನೆ ಮೂರ್ತಿಭಂಜನೆಯಿಂದಲೇ ಸಾರ್ಥಕವಾಗುವುದು. ಭಕ್ತನು ಸ್ಥೂಲ ವಿಗ್ರಹಗಳ ಆರಾಧನೆಯಿಂದ ಸೂಕ್ಷ್ಮ ವಿಗ್ರಹಗಳ ಆರಾಧನೆಗೆ ಏರಿ, ತುತ್ತತುದಿಗೆ ಮೂರ್ತಿ ಪೂಜೆಯಿಂದ ಉತ್ತೀರ್ಣನಾಗಿ ಅತೀತವನ್ನು ಸೇರುತ್ತಾನೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೫೦

೫೮೭

ಪೂರ್ವಿಕರ ಮೂಢತನಕಾದಿಯೆಂಬುವುದೆಲ್ಲಿ ?
ಅಂತವೆಂಬುವುದೆಲ್ಲಿ ?

ಜಲಗಾರ, ಪಾತ್ರ ಮೊದಲನೆಯ ತರುಣ, ಪುಟ ೧೬–೭

೫೮೮

ಕಣ್ಣೆದುರಿರ್ಪ ನೋವು ತಾನದೆ ಸೊಗಂ
ಕಾಣದಿಹ ಸಾವಿಗಂ. ಮೇಣ್, ಮರ್ದ್ದಲ್ತು, ಕೊಲೆ
ವಿರಹಕ್ಕೆ.

ಚಿತ್ರಾಂಗದಾ, ಐದನೆಯ ಪರ್ವಂ, ಪಾತ್ರ ಶ್ರೀಮೂರ್ತಿ, ಪಂಕ್ತಿ ೧೮೨೩-೫, ಪುಟ ೬೭

೫೮೯

ನನ್ನೀ ಕೃತಿಯನೋದುವಾತ್ಮರಾ
ದಾರಿದ್ರ್ಯಮಂ ಪರಿಹರಿಸಿ, ಓ ಸರಸ್ವತಿಯೆ,
ನೆಲಸಲ್ಲರಸಿಯಾಗಿ, ಸಹೃದಯ ಸರಸಲಕ್ಷ್ಮಿ!

ಶ್ರೀ ರಾಮಾಯಣ ದರ್ಶನಂ, ಕುಣಿದಳುರಿಯ ಉರ್ವಶಿ, ಪುಟ ೧೫೪

೫೯೦

'ರಸಾಂತರಂಗಳಂ ಮುಟ್ಟನುಡಿ'ಯುವ ಶಕ್ತಿ ಸ್ವಾಭಾವಿಕವಾಗಿಯೆ ಬರಬೇಕು. ಸುಮ್ಮನೆ ನಾಲ್ಕು ನುಡಿಗಳನ್ನು ಹೊಸೆದ ಮಾತ್ರದಿಂದ ಯಾವನೂ ಕವಿಯಾಗಲಾರನು. ಪ್ರತಿಭೆಯಿಂದ ಹೊರಸೂಸದ ಕವಿತೆ ಪದ್ಯವಲ್ಲ : ಹುಚ್ಚು ಹಿಡಿದ ಗದ್ಯ!

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೧೨

೫೯೧

ಪ್ರಣಯಾಗ್ನಿ
ಎದೆಯನಾವರಿಸೆ ಕತ್ತಲೆಯಿಹುದೆ ಕಂಗಳಿಗೆ?

ಚಿತ್ರಾಂಗದಾ, ಎರಡನೆಯ ಪರ್ವಂ, ಪಾತ್ರ ಚಿತ್ರಾಂಗದೆ, ಪಂಕ್ತಿ, ೬೩೭-೮, ಪುಟ ೨೩

೫೯೨

ಸಾವೆ ಹೊಸಬಾಳಿಗಾಧಾರ ಮಾಗಿರ್ಪುದು.
ನಾಶಮೇ ನವಸೃಷ್ಟಿಗುತ್ಸಾಹಮಾದಪುದು!

ಶ್ಮಶಾನ ಕುರುಕ್ಷೇತ್ರಂ, ಪಾತ್ರ, ಕಲಿ, ಪುಟ ೭

೫೯೩

ನಿಮ್ಮ ಧರ್ಮಂ ನಿಮಗೆ; ನನ್ನ ಧರ್ಮಂ ನನಗೆ.
ಪಲವು ಬಟ್ಟೆಗಳಲ್ತೆ ಭಗವದಿಚ್ಛೆಯ ಮನೆಗೆ?

ಬೆರಳ್ ಗೆ ಕೊರಳ್, ಶ್ರೀಯವರಿಗೆ

೫೯೪

ಕಲೆಗಾಗಿ ಕಲೆ, ಜೀವನಕ್ಕಾಗಿ ಅಲ್ಲ, ಅಂತ ತಿಳಿದುಕೊಂಡಿರುವುದರಿಂದಲೆ ಸಾಹಿತ್ಯ ಬದುಕಿನಿಂದ ದೂರ ದೂರ ಸರಿಯುತ್ತದೆ. ಸಾಹಿತ್ಯ ಪರಂಪರೆಯಲ್ಲಿ ಬೇರೂರಲೇ ಬೇಕು. ಜನಜೀವನದಲ್ಲಿ ಅದು ನೆಲೆಸಬೇಕು. ಜನಜೀವನವನ್ನು

ಮೇಲಕ್ಕೆ ಎತ್ತಬೇಕು. ಜನಜೀವನವನ್ನು ಮೇಲಕ್ಕೆ ಎತ್ತುವುದು ಅಂತ ಹೇಳಿದರೆ, ಲೇಖಕ ಮೊದಲು ತನ್ನ ಜೀವನವನ್ನು ಮೇಲಕ್ಕೆ ಎತ್ತಿಕೊಳ್ಳಬೇಕು. ತನ್ನ ಜೀವನವನ್ನು ಮೇಲಕ್ಕೆ ಎತ್ತಿಕೊಳ್ಳದೆ ಜನಜೀವನವನ್ನು ಮೇಲಕ್ಕೆ ಎತ್ತುವುದು ಸಾಧ್ಯವಾಗುವುದಿಲ್ಲ.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೨೩

೫೯೫

ಹುಸಿಮಮತೆ,
ಇಂದ್ರಿಯ ಲೋಲುಪತೆ,
ಮೌಢ್ಯದ ಸಂತೃಪ್ತಿ,
ಅಜ್ಞಾನದ ಸುಪ್ತಿ ;
ಭಕ್ತಿಯ ಹೆಸರನು ಧರಿಸುತೆ ಮೆರೆಯುವ ಚಿತ್ತದ ದಾಸ್ಯ ;
ದೇವರ ಗುಡಿ ಎಂಬುವ ಸೆರೆಯಲ್ಲಿ
ಸ್ವಾತಂತ್ರ್ಯದ ಶವಸಂಸ್ಕಾರದ ಪರದೆಯ ಮರೆಯಲ್ಲಿ
ಪೂಜೆಯ ನಕಲಿಯ ಪರಿಹಾಸ್ಯ !
ಶಾಸ್ತ್ರದ ಆಚಾರದ ಧರ್ಮದ ಕಬ್ಬಿಣನೇಣು,
ಸಿಲುಕಿಹುದದರಲಿ ಮಾನವನಮೃತಾತ್ಮದ ಗೋಣು !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ದೇವರು ಪೂಜಾರಿ, ಪುಟ ೭೩

೫೯೬

ಜೀವಿತ ಪಥವಾಗಲಿ ನಿನಗಿವರೆಲ್ಲರ
ಆಶೀರ್ವಾದದ ರಥರೇಖೆ,
ಕವಿ ಋಷಿ ಗುರುವರ ದೇವ ಮಹಾತ್ಮರ
ಜೀವಜ್ಯೋತಿಯ ಧ್ರುವರೇಖೆ !

ಪ್ರೇಮ ಕಾಶ್ಮೀರ, ಹುಟ್ಟಿದ ಹಬ್ಬದ ಹರಕೆ, ಪುಟ ೭೨

೫೯೭

ಮೇಧಾಶಕ್ತಿಯಿಂದಾಗಲಿ ಪ್ರವಚನದಿಂದಾಗಲಿ ಬಹುಶ್ರುತಿಯಿಂದಾಗಲಿ ಆತ್ಮವು ಏಕೆ ಸಾಕ್ಷಾತ್ಕಾರವಾಗುವುದಿಲ್ಲ ಎಂದರೆ ಅದು ಇಂದ್ರಿಯ, ಮನಸ್ಸು ಮತ್ತು ಬುದ್ಧಿಗಳಿಗೆಲ್ಲ ಆಧಾರವಾಗಿದೆ ; ಅತೀತವಾಗಿದೆ. ಕಣ್ಣು ನೋಡುತ್ತದೆ, ಆದರೆ ನೋಡಿಕೊಳ್ಳಲಾರದು. ಕಿವಿ ಕೇಳುತ್ತದೆ ಆದರೆ ಕೇಳಿಕೊಳ್ಳಲಾರದು. ಯಾವುದರ ಆಧಾರದಿಂದ ಮನಸ್ಸು ಚಿಂತಿಸಲು ಸಮರ್ಥವಾಗಿದೆಯೋ ಅಥವಾ ಯಾವುದರಿಂದ ಮನಸ್ಸು ಮನಸ್ಸಾಗಿದೆಯೋ ಅದನ್ನು ಮನಸ್ಸು ಅರಿಯಲಾರದು. ಅಂಶವು ಪೂರ್ಣವನ್ನೆಂದಿಗೂ ಗ್ರಹಿಸಲಾರದು.

ಇತ್ಯಾದಿ, ಉಪನಿಷತ್ತಿನ ಋಷಿಯ 'ದರ್ಶನ', ಪುಟ ೭೬

೫೯೮

ರಸವೊಂದೆ
ನಿಯತಿಕೃತ ನಿಯಮ ರಹಿತನ್ ಕವಿಯೆನಗೆ ನೀತಿ ;
ಹ್ಲಾದವೆ ಪರಮಧರ್ಮವುಳಿದುದೆಲ್ಲಂ ಭೀತಿ !

ಕೃತ್ತಿಕೆ, ರಸವೊಂದೆ ಕವಿಗೆ ನೀತಿ, ಪುಟ ೧೬

೫೯೯

ರಾಜಕೀಯ ಪ್ರಪಂಚದಲ್ಲಿ ಪಾಶ್ಚಾತ್ಯ ದೇಶಗಳ ಪ್ರಾಬಲ್ಯವೂ ಸರ್ವಶಕ್ತವೂ ಸರ್ವವ್ಯಾಪಿಯೂ ಆಗಿರುವ ಈ ಯುಗದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ, ಸಾಹಿತ್ಯದ ಮತ್ತು ವಿಜ್ಞಾನದ ಪ್ರಭಾವದಿಂದ ದೂರವಾಗುವುದಾಗಲಿ ತಪ್ಪಿಸಿಕೊಳ್ಳುವುದಾಗಲಿ ಸಾಧ್ಯವೂ ಅಲ್ಲ, ಶ್ರೇಯಸ್ಸೂ ಅಲ್ಲ. ಈಗಾಗಲೆ ಇಂಗ್ಲಿಷ್ ವಿದ್ಯೆಯ ಥೇಮ್ಸ್ ನದಿ ಸಂಸ್ಕೃತದ ಭಾಗೀರಥಿ ಮತ್ತು ಕನ್ನಡದ ಕಾವೇರಿಗಳೊಡನೆ ಸಂಗಮಿಸಿ ಹರಿಯ ತೊಡಗಿದೆ. ಹೊಸ ನೀರಿನ ಮಹಿಮೆಯಿಂದ ಹೊಸ ಹೊಸ ಪೈರು ಹಸುರಾಗಿ ಹುಲುಸಾಗಿ ಬೆಳೆಯಲಾರಂಭಿಸಿದೆ. ಕೊಯ್ಲಿನ ಪರಿಶೀಲನೆ ಮುಂದೆ ಬರುವವರಿಗಿರಲಿ.

ಸಾಹಿತ್ಯ ಪ್ರಚಾರ, ಕನ್ನಡ ಸಾಹಿತ್ಯ, ಪುಟ ೬೨

೬೦೦

ನಮಗಿಂದಿಗೆ ಬೇಕಾದದು
ಉದ್ಧಾರದ ಆಸಕ್ತಿ.
ಮತಿವಂತನೆ, ಓ ಮಾನವ,
ಕಟಿಬಂಧನಗೈ, ನಿಲ್ಲು !
ಯುಗದೊಳ್ಪಿಗೆ ಜಗದೊಳ್ಪಿಗೆ
ನಿನ್ನೊಳ್ಪನೆ ನೀಂ ಗೆಲ್ಲು !

ಅಗ್ನಿಹಂಸ, ಶತಮಾನದ ಸಂಧ್ಯೆ, ಪುಟ ೮೭

೬೦೧

'ವಿದ್ಯೆ' ಎನ್ನುವುದು ಸಾಮಾನ್ಯ ಮನುಷ್ಯನನ್ನು ಮೃಗತ್ವದಿಂದ ದೇವತ್ವಕ್ಕೆ ಎತ್ತುವ ಒಂದು ಸಾಧನ ಮತ್ತು ವಿಧಾನ.

ಷಷ್ಠಿನಮನ, ವಿಶ್ವವಿದ್ಯಾ ಮತ್ತು ಪ್ರಸಾರಾಂಗ, ಪುಟ ೧೫೯–೬೦

೬೦೨

ಸೌಂದರ್ಯಕಿಂತಲೂ ಸೌಶೀಲ್ಯ ಹೆಚ್ಚು !

ಕಲಾಸುಂದರಿ, ವನಸುಂದರಿ, ಪುಟ ೭೧

೬೦೩

ಕಾಯಮೆಂದಿಗು ಜೀವನಲ್ಲವು !
ಮಾಯವೆಂಬುದ ನರರುಮರಿಯದೆ,

ಕಾಯ ಜೀವರು ಅಗಲಿ ಪೋದೊಡೆ
ಬಾಯ ಬಿಡುವರು ಸುಮ್ಮನೆ!

ಅಮಲನ ಕಥೆ, ಪುಟ ೨೦

೬೦೪

ಬಿಡು ಸಾಕೀ ಹುಡುಗಾಟದ ದೃಷ್ಟಿ;
ಕಾಮರಾಜ್ಯದಲ್ಲಿ ದೃಷ್ಟಿಯೆ ಸೃಷ್ಟಿ:

ಕದರಡಕೆ, ದೃಷ್ಟಿ ವಿಷಾಹಿ, ಪುಟ ೮೬

೬೦೫

ಒಂದೊಂದು ಕವನವೂ ಅದರ ಅಂಗಾಂಗದಲ್ಲಿ ಎಂತೋ ಅಂತೆ ಅದರ ಸಮಗ್ರತೆಯಲ್ಲಿಯೂ ಒಂದು ಸಾಂಗೋಪಾಂಗವಾದ ಅಖಂಡ ಪ್ರತಿಮೆಯೆ ಆಗಿರುವುದರಿಂದ, ಆ ಪ್ರತಿಮಾ ಚೈತನ್ಯ ಪದಪದಗಳಲ್ಲಿಯೂ ಪ್ರವೇಶಿಸಿ, ಪದಪುಂಜ ಕಾವ್ಯಾದಿಗಳಲ್ಲಿ ಪ್ರವಹಿಸುತ್ತದೆ. ಆ ದೃಷ್ಟಿಯಲ್ಲಿ ಸಮೀಕ್ಷಿಸಿದರೆ ಉತ್ತಮ ಕವನದಲ್ಲಿ ಒಂದೊಂದು ಪದವೂ ರೂಪಕವೆ ಆಗಿರುತ್ತದೆ. ಉತ್ತಮ ಕಾವ್ಯದಲ್ಲಿ ಉಚಿತ ಸ್ಥಾನದಲ್ಲಿ ನಿಂತಾಗ ನಿಘಂಟುವಿನಲ್ಲಿ ಸಾಮಾನ್ಯವಾಗಿ ತೋರುವ ಪದಕ್ಕೂ ರೂಪಕತ್ವ ಉಂಟಾಗುತ್ತದೆ ಎಂದ ಮೇಲೆ, ಜಾತಿಯಲ್ಲಿ ರೂಪಕವೆ ಆಗಿರುವ ಪದಕ್ಕೆ ಆ ರಮಣೀಯತೆ ಇಲ್ಲವಾಗುತ್ತದೆಯೆ? ಹಾಗೇನಾದರೂ ಇಲ್ಲವಾಗಿ ತೋರಿದರೆ ಅದು ಕವಿಯ ಶಕ್ತಿ ಶೂನ್ಯತೆಯನ್ನೊ, ತಪ್ಪಿದರೆ ಸಹೃದಯನ ಸಾಮರ್ಥ್ಯ ರಿಕ್ತತೆಯನ್ನೊ, ಸೂಚಿಸುತ್ತದೆ ಅಷ್ಟೆ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೭೨

೬೦೬

"ಸರ್ವರಿಗೆ ಸಮಬಾಳು! ಸರ್ವರಿಗೆ ಸಮಪಾಲು!"
ಎಂಬ ನವಯುಗವಾಣಿ ಘೋಷಿಸಿದೆ ಕೇಳಿ!
ಯುಗಯುಗದ ದಾರಿದ್ರ್ಯಭಾರದಿಂ ಬೆನ್‌ಬಾಗಿ
ಗೋಳಿಡುವ ಬಡಜನರೆ, ಏಳಿರೈ ಏಳಿ!
ಶ್ರೀಮಂತರಡಿಗಳಡಿಹುಡಿಯಲ್ಲಿ ಹೊರಳಾಡಿ
ಕುಸಿದು ಕುಗ್ಗಿದರೆಲ್ಲ ಸಂತಸವ ತಾಳಿ!
ಕಂಗೆಟ್ಟ ಸೋದರರೆ, ಬರುತಿಹಳು ಕಾಣಿರೈ
ದಾನವರ ಸೀಳಿ ಅದೊ ವಿಪ್ಲವದ ಕಾಳಿ!

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಹೊಸಬಾಳಿನ ಗೀತೆ, ಪುಟ ೨೯

೬೦೭

ಸೂಕ್ಷ್ಮತಮ ಚೇತನವಾದರೆ ಅದಕ್ಕೆ ನೆರಳೆಲ್ಲಿ? ಸರ್ವಜ್ಯೋತಿಗೂ ಆಧಾರವಾದ ಜ್ಯೋತಿಗೆ ಛಾಯೆಯುಂಟೆ?

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೪೯

೬೦೮

ಭಕ್ತಿ ಶ್ರದ್ಧೆ ಅಭೀಪ್ಸೆ ಇಂಥವುಗಳೆಲ್ಲಾ ನಿತ್ಯ ಮೌಲ್ಯಗಳು. ಆದರೆ ಆ ಮೌಲ್ಯಗಳ ಹೆಸರನ್ನು ಹೇಳಿ ಅವನ್ನು ಏತಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ ? ದೇವರ ಹೆಸರಿನಲ್ಲಿ ಧರ್ಮದ ಹೆಸರಿನಲ್ಲಿ ಭಕ್ತಿಯ ಪೂಜೆಯ ಹೆಸರಿನಲ್ಲಿ ತಿರುಪತಿಯ ಹೆಸರಿನಲ್ಲಿ ಉಡುಪಿಯ ಹೆಸರಿನಲ್ಲಿ ಧರ್ಮಸ್ಥಳದ ಹೆಸರಿನಲ್ಲಿ ಜನರನ್ನು ಹೆದರಿಸಿ ಯಾವ ರೀತಿ ಸುಲಿಗೆ ಮಾಡುತ್ತಿದ್ದಾರೆ ? ಮೋಸ ಮಾಡುತ್ತಿದ್ದಾರೆ ? ಅದನ್ನೆಲ್ಲ ವಿವರಿಸಿ ತಿಳಿಯ ಹೇಳಬೇಕು.

ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಅದೇ ಹೆಸರಿನ ಲೇಖನ, ಪುಟ ೧೫

೬೦೯

ಮಲೆಯ ಹೆಣ್ಣೊ ? ಬಯಲ ಹೆಣ್ಣೊ ?
ಒಲುಮೆ ಇದ್ದರೆದೆಯಲಿ
ಎಲ್ಲ ಚೆನ್ನು, ಎಲ್ಲ ಹೊನ್ನು !
ಭೇದವಿಹುದೆ ಬೆದೆಯಲಿ ?

ಪಕ್ಷಿಕಾಶಿ, ಭಾದ್ರಪದದ ಬಯಲು ಸೀಮೆ, ಪುಟ ೩೭

೬೧೦

ಹೊಟ್ಟೆ ಬಟ್ಟೆಗಳಗೆ ಕಷ್ಟವಿಲ್ಲದಿರುವ ಶ್ರೀಮಂತ ಕುಮಾರರನೇಕರಿಗೆ ವಿದ್ಯಾ ನಿಕೇತನಗಳೆಂದರೆ ಲಘುಜೀವನದ ಕ್ರೀಡಾ ಶಾಲೆಗಳಾಗಿವೆ; ಒಂದು ತರಹದ 'ಕ್ಲಬ್ಬು'ಗಳಾಗಿವೆ. ಒಂದೇ ತರಗತಿಯಲ್ಲಿ ಅವರು ನಾಲ್ಕಾರು ವರ್ಷಗಳಾದರೂ ನೆಮ್ಮದಿಯಿಂದಿರುತ್ತಾರೆ. ಅಂತಹವರ ಭಾಗಕ್ಕೆ ವಿದ್ಯಾನಿಲಯ ಆಟದ ಮೈದಾನಕೊ ಅಥವಾ ತಿಂಡಿಯ ಹೋಟೆಲಿಗೊ ತಗುಲಿಕೊಂಡಿರುವ ಒಂದು ಕಟ್ಟಡ ಮಾತ್ರ. ಎಷ್ಟೋ ಅಲಸಮನಸ್ಕರು ಬರಿಯ ಪೊಳ್ಳಾಗಿರುವ ತಮ್ಮ ಲಘು ಪ್ರಕೃತಿಗೆ ಲೀಲಾಶೀಲತೆ ಎಂಬ ಅಭಿಧಾನದ ಸೋಗು ತೊಡಿಸಿ ಮೆರೆಯುತ್ತಾ, ತಮ್ಮ ಸಹಾಧ್ಯಾಯಿ ಗಳಾದ ಗುರು ಪ್ರಕೃತಿಯ ವಿದ್ಯಾರ್ಥಿಗಳನ್ನು ಮಂದಹಾಸ್ಯದಿಂದ ಹೀಯಾಳಿಸುತ್ತಾರೆ. ಟೀಕು ಟಾಕಾದ ಪೋಷಾಕಿಗೂ ಕೋಲಾಹಲ ಕಂಠಕ್ಕೂ ಮನ್ನಣೆ ದೊರೆಯುವುದನ್ನು ನೋಡಿ ಗೌರವಮತಿಯ, ಮೌನ ಪ್ರಕೃತಿಯ ಗಂಭೀರ ವಿದ್ಯಾರ್ಥಿಯೂ ತನ್ನ ಮತಿಯ ಗೌರವದ ವಿಚಾರದಲ್ಲಿ ಸಂಶಯಪಟ್ಟುಕೊಳ್ಳುವಂತಾಗುತ್ತದೆ. ಅಂತಹ ಗುರುಪ್ರಕೃತಿಯ ವಿದ್ಯಾರ್ಥಿಯನ್ನು ಸಮರ್ಥಿಸಿ, ಆತನ ಬೆನ್ನುತಟ್ಟಿ, ಧೈರ್ಯ ಹೇಳದೆ ಹೋದರೆ ಆತನೂ ಬಹುಸಂಖ್ಯೆಯ ಆಶ್ರಯದಲ್ಲಿ ರಕ್ಷಣೆ ಹೊಂದುವ ಅನರ್ಥಕ್ಕೆ ಗುರಿಯಾಗುವ ಸಂಭವವಿದೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಲ್ಲಿ ಮತಿಗೌರವದ ಆವಶ್ಯಕತೆ, ಪುಟ ೩೩

೬೧೧

ನಾ ನಿನ್ನ ನೀನೆನ್ನ ನೋಡೆ !
ಚೆಲುವೆ, ಶರಣಾದೆ ನೀನೆನ್ನನೊಪ್ಪಿ !
ಸಂಪೂರ್ಣನಾದೆ ನಾ ನಿನ್ನನಪ್ಪಿ !

ಜೇನಾಗುವಾ, ಜೇನಿರುಳು ಅಥವಾ ಪ್ರಥಮ ಮಿಲನ, ಪುಟ ೪

೬೧೨

ಈಗ ಅವರು (ಬಸವಲಿಂಗಪ್ಪನವರು) ಯಾವ ದೃಷ್ಟಿಯಿಂದ ಹಾಗೆ ಹೇಳಿದರು ಎಂದು ವಿಚಾರಮಾಡಿ. ಹರಿಜನರ ಉದ್ಧಾರವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಗೆ ಹೇಳಿದರು. ಈ ದೃಷ್ಟಿಯಿಂದ ಹೇಳತಕ್ಕಂತಹ ಸಾಹಿತ್ಯ ಕನ್ನಡದಲ್ಲಿ ಹೆಚ್ಚಿಲ್ಲ. ಆದ್ದರಿಂದ ಬೂಸಾಸಾಹಿತ್ಯ ಅಂದರು. ಕನ್ನಡದಲ್ಲೂ ಹರಿಜನೋದ್ಧಾರ ದೃಷ್ಟಿಯಿಂದಲೂ ಬೂಸಾ ಸಾಹಿತ್ಯವಲ್ಲದ ಸಾಹಿತ್ಯ ಸ್ವಲ್ಪ ಹುಟ್ಟಿದೆ. ನನ್ನ ಬರವಣಿಗೆಯಲ್ಲಿಯೆ ಅವರ ದೃಷ್ಟಿಯಿಂದಲೂ ಬರಿಯ ಬೂಸಾ ಅಲ್ಲದೆ ಸಾಹಿತ್ಯ ಬಂದಿದೆ : 'ಜಲಗಾರ' ನಾಟಕದಲ್ಲಿ, 'ಶೂದ್ರ ತಪಸ್ವಿ'ಯಲ್ಲಿ ಕಾನೂರು ಹೆಗ್ಗಡತಿಯಲ್ಲಿ, ಮಲೆಗಳಲ್ಲಿ ಮದುಮಗಳಲ್ಲಿ, ಕೆಲವು ಸಣ್ಣಕತೆಗಳಲ್ಲಿ, ಅನೇಕ ಕವನಗಳಲ್ಲಿ. ಬಸವಲಿಂಗಪ್ಪನವರೂ ಹೇಳಲಾರದಂತಹದ್ದೂ ಇನ್ನೂ ನೂರು ವರ್ಷದ ಆಚೆಗೆ. ಗೊತ್ತಾಯಿತೆ ?

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೬೫

೬೧೩

'ಬ್ರಾಹ್ಮಣ', 'ಶೂದ್ರ', 'ಮಣ್ಣಿನವಾಸನೆ', 'ಅಮೂರ್ತ ಭಾವನೆ' ಇತ್ಯಾದಿ ಈ ಮಾತುಗಳೆಲ್ಲ ಮತ್ತೆ ಪುರೋಹಿತಷಾಹಿಯ ಪಿತೂರಿಯ ಟಂಕ ಶಾಲೆಯ ನಾಣ್ಯಗಳೆ. ನಿಮ್ಮನ್ನು ದಿಕ್ಕತಪ್ಪಿಸಿ ಬದುಕಿನ ಋಜುಮಾರ್ಗದಿಂದ ಕಂಟಕಿತ ಮಾರ್ಗಕ್ಕೆ ತಳ್ಳುವ ಉಪಾಯದಿಂದಲೆ ಅವರು ಅವನ್ನು ಹುಟ್ಟಿಸಿದ್ದಾರೆ. ನೀವೂ ಹಿಂದಿನಂತೆಯೆ ಇಂದೂ ಬೆಪ್ಪುಗಳಾಗಿ ಅದಕ್ಕೆ ವಶರಾಗಿ, ಜನರ ಬದುಕನ್ನು ಮತಮೌಢ್ಯದಿಂದ ಪಾರುಮಾಡಿ ಅವರನ್ನು ವೈಚಾರಿಕ ಬುದ್ಧಿ ಮತ್ತು ವೈಜ್ಞಾನಿಕ ದೃಷ್ಟಿ ಸಂಪನ್ನರಾಗಿ ಪರಿವರ್ತಿಸಿ ಅವರ ಮನಸ್ಸು ಮತ್ತು ಹೃದಯಗಳನ್ನು ಬೆಳಗುವ, ಅವರ ಸೋತ ಹೃದಯಗಳನ್ನು ಹುರಿದುಂಬಿಸುವ, ಮತ್ತು ವರ್ಣ ಜಾತಿ ಭೇದಭಾವನೆಗಳನ್ನೆಲ್ಲ ಕಸದಬುಟ್ಟಿಗೆ ತೂರಿ ಅವರನ್ನು ಸಮಾನತಾವಾದಿಗಳನ್ನಾಗಿ ಪರಿವರ್ತಿಸುವ ಸಾಹಿತ್ಯ ಸೃಷ್ಟಿ ಮಾಡುವ ಬದಲು, ಗುಂಪುಗಾರಿಕೆಗಲ್ಲದೆ ಮತ್ತೆ ಯಾರಿಗೂ ಬೇಡದ ಮತ್ತು ಯಾರಿಗೂ ಅರ್ಥವಾಗದ 'ನವ್ಯ' ನಾಮಕ ವಿಕಾರಸೃಷ್ಟಿಗೆ ಮರುಳಾಗಿ ಹೋಗಿದ್ದೀರಿ. ಅಂತಹ ಕೃತಕ ಅನುಕರಣೀಯ ಪಂಥಗಳನೆಲ್ಲ ನಿಮ್ಮ ಹೃದಯದಿಂದ ಕಿತ್ತೊಗೆದು, ನಿಮ್ಮವರ ಬದುಕನ್ನು ನೇರವಾಗಿ ನೋಡಿ ಅದರಿಂದ ಉದ್ಭವಿಸುವ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಅವರನ್ನು

ಮೇಲಕ್ಕೆತ್ತುವ ಧೀರ ಭಾವಗಳನ್ನೂ ಕ್ರಿಯಾಶೀಲ ಆದರ್ಶಗಳನ್ನೂ ನಿಮ್ಮ ಬರವಣಿಗೆಗಳಲ್ಲಿ ನೀಡಬೇಕಾಗಿರುವುದು ಸದ್ಯದ ನಿಮ್ಮ ಆದ್ಯ ಕರ್ತವ್ಯ. ಪುರೋಹಿತಷಾಹಿಯ ಮೆಚ್ಚುಗೆಗೂ ಹೊಗಳಿಕೆಗೂ ಹಾತೊರೆದು ಬಾಯಿ ಬಿಟ್ಟು ನಿಮ್ಮ ಪೌರುಷ ತೇಜಸ್ಸುಗಳಗೆ ಅಪಮಾನ ಮಾಡಿಕೊಳ್ಳುವುದನ್ನು ಒಡನೆಯೆ ನಿಲ್ಲಿಸಿಬಿಡಿ.

ವಿಚಾರ ಕ್ರಾಂತಿಗೆ ಆಹ್ವಾನ, ಪ್ರಶ್ನೆಗಳಿಗೆ ಉತ್ತರಗಳು, ಪುಟ ೧೧೫

ಗೌಡರೆ...ನಿಮ್ಮ ಜಾತಿಯವರು ಎಲ್ಲಿಯವರೆಗೆ ಬ್ರಾಹ್ಮಣರ ಪಾದತೊಳೆದು, ಅದನ್ನು ತೀರ್ಥವೆಂದು ಕುಡಿಯುವುದನ್ನೇ ತಮ್ಮ ಧರ್ಮ ಜೀವನ ಸರ್ವಸ್ಯ ಎಂದು ಭಾವಿಸುವುರೋ ಅಲ್ಲಿಯವರೆಗೆ ನಿಮಗೆ, ನಾಮಧಾರಿಗೌಡರಿಗೆ ಮತ್ತು ಇತರ ಬ್ರಾಹ್ಮಣೇತರ ವರ್ಗದವರಿಗೆ, ಉದ್ಧಾರವಿಲ್ಲ; ಉಳಿಗತಿಯಿಲ್ಲ. ನಿಮ್ಮ ಮೂಢಾಚಾರಗಳು ಬ್ರಾಹ್ಮಣರ ಜೀವನೋಪಾಯಕ್ಕೆ, ಸಂಪಾದನೆಗೆ, ಬಂಡವಾಳ ಸ್ವರೂಪವಾಗಿವೆ. ನಿಮ್ಮನ್ನು ಅವರು ನಾಯಿಗಳನ್ನು ಕಂಡ ಹಾಗೆ ಕಾಣುತ್ತಾರೆ. ಮುಟ್ಟುವುದಿರಲಿ ಹತ್ತಿರ ಬಂದರೂ ಅವರಿಗೆ ಮೈಲಿಗೆ. ಬ್ರಾಹ್ಮಣರೆಲ್ಲ ಬ್ರಹ್ಮನ ಮುಖದಿಂದ ಬಂದವರೆಂದೂ ಶೂದ್ರರು ಅವನ ಕಾಲಡಿಯಿಂದ ಬಿದ್ದವರೆಂದೂ ಕಟ್ಟುಕಥೆ ಕಟ್ಟಿದ್ದಾರೆ. ಅವರೇ ಅವರ ಅನುಕೂಲಕ್ಕಾಗಿ ಬರೆದುಕೊಂಡಿರುವ ಪುರಾಣ ಕಥೆಗಳನ್ನು, ನಿಜವಾಗಿ ನಡೆದವೆಂಬಂತೆ ನಿಮಗೆ ಹೇಳಿ, ನಿಮ್ಮನ್ನು ಮರುಳುಮಾಡಿ ದ್ದಾರೆ. ಶೂದ್ರರು ವೇದ ಓದಬಾರದಂತೆ! ಓದುವುದಿರಲಿ, ಯಾರಾದರೂ ಓದುವುದನ್ನು ಆಲಿಸಿದರೂ ನರಕದಲ್ಲಿ ಶೂದ್ರನ ಕಿವಿಗೆ ಕಾಯಿಸಿದ ಕಬ್ಬಿಣವನ್ನು ಹೊಯ್ಯುತ್ತಾರಂತೆ! ಶತಶತಮಾನಗಳಿಂದಲೂ ನಿಮ್ಮನ್ನು ಈ ಮೂಢಸ್ಥಿತಿಯಲ್ಲಿ ಇಟ್ಟು, ನಿಮ್ಮಿಂದ ಸೇವೆ ಸಲ್ಲಿಸಿಕೊಂಡು, ಸುಖಜೀವನ ನಡೆಸುತ್ತಿದ್ದಾರೆ...ಕ್ರೈಸ್ತಧರ್ಮದಲ್ಲಿ ಜಾತಿಭೇದವಿಲ್ಲ. ಎಲ್ಲರೂ ದೇವರ ಇದಿರಿನಲ್ಲಿ ಸಮಾನರು. ನಾನು ಕೇಳಿಕೊಳ್ಳುವುದಿಷ್ಟೆ : ನೀವು ಕ್ರಿಸ್ತ ಮತಕ್ಕೆ ಸೇರಿ, ಬಿಡಿ, ಅದು ಅಷ್ಟು ಮುಖ್ಯವಲ್ಲ; ಆದರೆ ಕ್ರೈಸ್ತಧರ್ಮದ ಉದಾರ ತತ್ವಗಳನ್ನೂ ಸೇವಾ ಮನೋಧರ್ಮವನ್ನೂ ಸರ್ವಸಮಾನತಾ ದೃಷ್ಟಿಯನ್ನೂ ಉನ್ನತ ಆದರ್ಶಗಳನ್ನೂ ನಿಮ್ಮ ಮಾರ್ಗದರ್ಶನ ಜ್ಯೋತಿಯನ್ನಾಗಿ ಮಾಡಿಕೊಂಡು, ಬ್ರಾಹ್ಮಣ್ಯದ ದುರ್ಮುಷ್ಟಿಯಿಂದ ಬಿಡಿಸಿಕೊಳ್ಳುವುದು ಮಾತ್ರ ನಿಮ್ಮ ಜನಾಂಗದ ಪ್ರಗತಿಗೆ ಅತ್ಯಂತ ಆವಶ್ಯಕವಾದ ಆದ್ಯ ಕರ್ತವ್ಯಕರ್ಮ!

ಮಲೆಗಳಲ್ಲಿ ಮದುಮಗಳು, ಪಾತ್ರ ರೆವರೆಂಡ್ ಲೇಕ್‌ಹಿಲ್, ಪುಟ ೮೩೦-೧

೬೧೫

ದರ್ಶನಕೆ ಕಬ್ಬಿಗನ ಮೈ
ಹೊಳೆಯಂತೆ, ನೀರಂತೆ, ಬಾನಂತೆ, ಬನದಂತೆ
ಪುಲಕಿತಂ, ಪರವಶಂ, ಪಸುಳೆವೋಲ್ ತಕ್ಕತ್ಯೆ!

ಕೃತ್ತಿಕೆ, ಸಿಬ್ಬಲುಗುಡ್ಡೆ, ಪುಟ ೪೫

೬೧೬

ಲೋಕ ಸಾಹಸಗಳನ್ನು ಕೈಕೊಳ್ಳುವವರು ತಮ್ಮನ್ನು ತಾವು ಪ್ರಕಟಿಸಿಕೊಳ್ಳುವಂತೆ ಪ್ರದರ್ಶಿಸಿಕೊಳ್ಳುವಂತೆ ಪ್ರಶಂಸಿಸಿಕೊಳ್ಳುವಂತೆ ಘೋಷಿಸಿಕೊಳ್ಳುವಂತೆ ಅಧ್ಯಾತ್ಮ ಸಾಹಸಿಗಳಾದವರು ತಮ್ಮನ್ನು ತಾವು ಮೆರೆಯುವುದಿಲ್ಲ. ತಮ್ಮನ್ನು ತಾವು ಮರೆಯುವುದೆ ಅವರ ಸಹಜ ಸ್ವಭಾವ ಮತ್ತು ವಿಶೇಷ ಲಕ್ಷಣ. ಜೊತೆಗೆ ತಮ್ಮನ್ನು ತಾವು ಮುಚ್ಚಿಕೊಳ್ಳುವ ಪ್ರವೃತ್ತಿಯೂ ಅವರಲ್ಲಿ ಬೇರೂರಿರುವುದರಿಂದ ಅವರ ಇರವು ಬಹಿರಂಗಕ್ಕೆ ಬರುವುದೆ ಕಷ್ಟ. ಒಂದುವೇಳೆ ಬಂದರೂ ಅದಕ್ಕೆ ಬಹುಕಾಲ ಬೇಕಾಗುತ್ತದೆ. ಅಷ್ಟರಲ್ಲಿ, ಅನೇಕವೇಳೆ, ಅವರು ತಮ್ಮ ಇಹಲೋಕದ ದೈಹಿಕಯಾತ್ರೆಯಿಂದ ಬಿಡುಗಡೆ ಹೊಂದಿಯೂ ಇರುತ್ತಾರೆ. ತಮ್ಮನ್ನು ತಾವೆ ಇಲ್ಲಗೈಯುವುದನ್ನೆ ಸಾಧನೆಯ ಸರ್ವೋಚ್ಚಗಂತವ್ಯವನ್ನಾಗಿ ಮಾಡಿಕೊಂಡಿರುವ ಅವರಿಗೆ ತಮ್ಮ ಅನೇಕ ಜನ್ಮಗಳ ಅಸಂಖ್ಯನಾಮಗಳಲ್ಲಿ ಯಾವುದೊ ಒಂದು ಮಾತ್ರವಾಗಿರುವ ಈ ಜನ್ಮದ ಈ ಒಂದು ಹೆಸರಾಗಲಿ, ಅದರ ಕೀರ್ತಿಯಾಗಲಿ, ಅದನ್ನು ಪೋಷಿಸುವ ಅಥವಾ ಶಾಶ್ವತಗೈಯುವ ಪ್ರಯತ್ನವಾಗಲಿ, ಕನಿಷ್ಠವನ್ನೆ ಹೇಳುವುದಾದರೆ, ಅತ್ಯಂತ ಅಪ್ರಕೃತವಾಗುತ್ತದೆ.

ಷಷ್ಟಿನಮನ, ಮಹಾಪುರುಷ ಸ್ವಾಮಿ ಶಿವಾನಂದರು, ಪುಟ ೨೩೫

೬೧೭

ಪ್ರೇಮಭಂಗವು ಅನೇಕಸಾರಿ ತೆರತೆರನಾದ ಉನ್ಮಾದಗಳಲ್ಲಿ ಪರ್ಯವಸನವಾಗುತ್ತದೆ. ಅಥವಾ ರೋಗಗಳಲ್ಲಿಯೂ ಕೊನೆಗಾಣಬಹುದು. ತರುಣನೊಬ್ಬನಲ್ಲಿ ನೈಸರ್ಗಿಕವಾಗಿ ಪ್ರೇಮವಿಟ್ಟಿರುವ ಹುಡುಗಿಯನ್ನು ಆಕೆಯ ತಂದೆ ತಾಯಿಗಳು ಹಣಕ್ಕಾಗಿಯೋ ಕುಲಕ್ಕಾಗಿಯೋ ಸಮಾಜ ಮರ್ಯಾದೆಗಾಗಿಯೊ ಅಥವಾ ಮಾತುಕೊಟ್ಟಿದ್ದಕ್ಕಾಗಿಯೋ ಬೇರೊಬ್ಬನಿಗೆ ವಿವಾಹ ಮಾಡಿದರೆ ಆಕೆಯಲ್ಲಿ ಉತ್ಪನ್ನವಾಗುವ ಜುಗುಪ್ಸೆ ದುಃಖ ನಿರಾಶೆಗಳು ನಾನಾ ವೇಷಗಳನ್ನು ತಾಳಿ ತಮ್ಮ ಇಚ್ಛೆಯನ್ನು ನೆರವೇರಿಸಿಕೊಳ್ಳಬಹುದು. ಆಕೆಯ ನಿಜವಾದ ಪ್ರೇಮ ಪ್ರೀತಿಸಿದವನಲ್ಲಿ ಇರುತ್ತದೆಯೇ ಹೊರತು ಮದುವೆಮಾಡಿಕೊಂಡವನಲ್ಲಿ ಇರುವುದಿಲ್ಲ. ಅಂತಹ ಸಮಯಗಳಲ್ಲಿ ಹುಡುಗಿಯ ಸುಪ್ತಚಿತ್ತ ಮದುವೆಯಾದವನ ಸಂಗದಿಂದ ತಪ್ಪಿಸಿಕೊಳ್ಳಲು ವಿವಿಧೋಪಾಯಗಳನ್ನು ಹೂಡಬಹುದು. ಅದು ಅನ್ಯೈಚ್ಛಿಕವಾಗಿಯೆ ನಡೆಯುತ್ತದೆ. ಹುಡುಗಿಗೆ ಅದು ಗೊತ್ತಿರುವುದಿಲ್ಲ. ಗಂಡನ ಸಾನ್ನಿಧ್ಯದ ಸೂಚನೆಯ ಮಾತ್ರದಿಂದಲೆ ಹುಡುಗಿ ದೆವ್ವಹಿಡಿದವಳಾಗಿ ಭಯಂಕರವಾಗಿ ವರ್ತಿಸಬಹುದು. ಅಥವಾ ಉನ್ಮಾದ ಶಾಶ್ವತವಾದರೂ ಆಗಬಹುದು. ಅಥವಾ ಯಾವುದಾದರೂ ಭಯಂಕರ ವ್ಯಾಧಿ ನಿರ್ಮಾಣವಾಗುವುದೂ ಉಂಟು. ಆತ್ಮಹತ್ಯ ಮಾಡಿಕೊಳ್ಳುವುದೂ ಅಪೂರ್ವವಲ್ಲ.

ಕಾನೂರು ಹೆಗ್ಗಡಿತಿ, ಪುಟ ೨೬೯

೬೧೮

ತಾಯಿಯೊಲ್ಮೆಗೆ ಮಗನ ಮೇಲ್ಮೆಗಿಂ
ಬಯಕೆ ಬೇರುಂಟೆ ? ನಿಃಸ್ವಾರ್ಥದಾ ಬಯಕೆಗಿಂ
ಪೆರತು ಕಣ್ಣೇನೊಳದೆ ಧರ್ಮಕ್ಕೆ ?

ಶ್ರೀ ರಾಮಾಯಣ ದರ್ಶನಂ, ಭರತಮಾತೆ, ಪಾತ್ರ ಕೈಕೆ, ಪುಟ ೧೨೦

೬೧೯

ಭಾರತೀಯ ಭಾಷೆಗಳಿಗೆಲ್ಲಾ ಸಂಸ್ಕೃತ ತಾಯಿನೆಲೆಯಾಗಿ ಹಿಂದೆ ನಿಂತಿದೆ. ಕನ್ನಡ ಚೆನ್ನಾಗಿ ತಿಳಿದವರೆಂದರೆ ಸಂಸ್ಕೃತ ಬಹುಮಟ್ಟಿಗೆ ತಿಳಿದವರೆಂದೇ ಅರ್ಥ.

ಷಷ್ಟಿನಮನ, ಭಾರತದಲ್ಲಿ ಇಂಗ್ಲಿಷಿನ ಸ್ಥಾನ, ಪುಟ ೧೧೨

೬೨೦

ಮಹತ್ತಾದ ಕಲೆಗೆ ಅತಿಸ್ಪಷ್ಟತೆ ಒಂದು ನ್ಯೂನತೆ; ಅತಿ ಅಸ್ಪಷ್ಟತೆ ಒಂದು ದೋಷ.

ತಪೋನಂದನ, ಮಹಾಶ್ವೇತೆಯ ತಪಸ್ಸು, ಪುಟ ೨

೬೨೧

ನಾನಳಿವೆ, ನೀನಳಿವೆ,
ನಮ್ಮೆಲುಬುಗಳ ಮೇಲೆ
ಮೂಡುವುದು, ಮೂಡುವುದು
ನವಭಾರತದ ಲೀಲೆ !

ಪಾಂಚಜನ್ಯ, ಪಾಂಚಜನ್ಯ, ಪುಟ ೫

೬೨೨

ಕರ್ಮ ಸಮೆಯಲೆಂದು ಸೃಷ್ಟಿ
ಜನಿಸಲಿಲ್ಲ ;
ಜನಿಸೆ, ಕರ್ಮ ಸಮೆವುದಷ್ಟೆ,
ಬೇರೆಯಲ್ಲ !

ಕಲಾಸುಂದರಿ, ಏಕೆ, ಪುಟ ೪೧

೬೨೩

ನಮ್ಮೆದೆಗಳನು ಕುಕ್ಕಿ
ನೋಡಿದರೆ ಕಾಣುವುದು ಮಕ್ಕಳೆಲುಬಿನ ರಾಶಿ !
ಒಂದೊಂದು ಹೃದಯವೂ ಕಂಸಶಿಲೆ : ನೂರಾರು
ಹೊಂಗನಸಿನಾದರ್ಶಶಿಶುಗಳಾಯೆಡೆ ಚೂರು.

ಚೂರಾದರೇನ್ ? ತುದಿಗೆ ಗೆಲುವನಸುರದ್ವೇಷಿ
ಧ್ವಂಸಗೈದಾ ದೇವವೈರಿಯಂ.–ಬಾಲ್ಯದಿಂ
ಕಟ್ಟುವೆವು, ಕೆಡಹುವೆವು ; ಹಳಿವೆವೊಲಿವೆವು ಮತ್ತೆ ;
ಕಿಚ್ಚಿಟ್ಟೊಲುಮೆ ಬೂದಿಯಾಗೆ ಮತ್ತೊಂದೊಲಮೆ
ಮೋಹಿಪುದು ಬಿಗಿದಪ್ಪಿ. ರುಚಿಯ ಚಾಪಲ್ಯದಿಂ
ತುಟಿಯಿಡುವೆವಾ ಕೊಳಕೆ ಈ ಕೊಳದ ನೀರ್ ಬತ್ತೆ.–
ಕೃಷ್ಣನೈತರ್ಪನ್ನೆಗಂ ಕಂಸನೆದೆ ಕುಲುಮೆ !

ಕೃತ್ತಿಕೆ, ಕಂಸಶಿಲೆ, ಪುಟ ೫೮

೬೨೪

ನೂರಕ್ಕೆ ತೊಂಬತ್ತರಷ್ಟು ಅನಕ್ಷಕರಿರುವ ದೇಶದಲ್ಲಿ ಅದೆಂತಹ ಪ್ರಜಾಸತ್ತೆ ಸಾಧ್ಯವಾದೀತು ? ಅದರಲ್ಲಿಯೂ ನಮ್ಮ ದೇಶ ಯಾವತ್ತೂ ಪ್ರಜಾಸತ್ತೆಯ ಗಾಳಿಯನ್ನೂ ಮೂಸಿನೋಡದಿದ್ದ ದೇಶ. ರಾಜರನ್ನು ಪ್ರತ್ಯಕ್ಷದೇವರೆಂದು ಪೂಜಿಸಿದ ದೇಶ ; ಪುರೋಹಿತರನ್ನು ಭೂಸುರರೆಂದು ಆರಾಧಿಸಿದ ದೇಶ ! ಮತಮೌಢ್ಯ ಎಂಬ ನಿತ್ಯರೋಗವು ಅದರ ನಾಡಿನಾಡಿಗಳಲ್ಲಿ ಮಾತ್ರವಲ್ಲದೆ ಎಲುಬಿನಲ್ಲಿಯೂ ಐದು ಸಾವಿರ ವರ್ಷಗಳಿಂದ ಸರ್ವವ್ಯಾಪಿಯಾಗಿದ್ದು ವರ್ಗ ವರ್ಣ ಮತ ಜಾತಿ ಪಂಥ ಪಂಗಡ ಎಂಬ ನೂರಾರು ಭೇದಗಳಿಂದ ನರಳುತ್ತಿರುವ ದೇಶ ! ಇಲ್ಲಿ "ಡೆಮಾಕ್ರಸಿ (Democracy) ಬರಿಯ "ಮಾಕರಿ" (Mockery) ಆಗಿದೆ.

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೪–೫

೬೨೫

ಮುಪ್ಪಿಗೆ ಇರುಳೆಂದರೆ ಅನಿವಾರ್ಯವಾದ ಒಂದು ಮಹಾ ಈತಿ ಬಾಧೆ. ಸಾವಿನ ಅನಂತ ನಿದ್ರೆ ಬಳಿಸಾರುವುದರಿಂದಲೋ ಏನೋ ಬಾಳೆಲ್ಲ ದುಃಸ್ವಪ್ನವೆಂಬಂತೆ ಆಯಾಸಕರವಾಗಿ ಪರಿಣಮಿಸುತ್ತದೆ. ಇಷ್ಟವಿರಲಿ ಬಿಡಲಿ ಮರಣಕ್ಕೆ ಮುಳುಗಲೇ ಬೇಕಾಗುತ್ತದೆ ಎಂಬ ಅರಿವಿನಿಂದ ಮೈದೋರುವ ಆತ್ಮದ ಅಶಾಂತಿ ನಿರಾಕಾರವಾಗಿದ್ದರೂ ಸಾಂಸಾರಿಕವಾದ ನೂರಾರು ಕೋಟಲೆಗಳ ಆಕಾರ ತಾಳಿ ನಿದ್ದೆಯನ್ನೆಲ್ಲಾ ಕದಡಿ ಬಿಡುತ್ತದೆ.

ಮಲೆಗಳಲ್ಲಿ ಮದುಮಗಳು, ಪುಟ ೩೯

೬೨೬

ವಿಶ್ವವಿದ್ಯೆ ನಮಗೆ ಬರಬೇಕು. ಈ ವಿದ್ಯೆಯಿಂದ ವಿಶ್ವಪ್ರಜ್ಞೆ ಉಂಟಾಗಬೇಕು. ಜಗತ್ತೆಲ್ಲ ಒಂದಾಗುತ್ತಿರುವ ಈ ಸಮಯದಲ್ಲಿ, ಯುದ್ಧವನ್ನು ಯಾವ ದೇಶವಾದರೂ ಬಯಸಿದರೆ ಎಲ್ಲ ದೇಶಗಳೂ ಸರ್ವನಾಶವಾಗುವ ಈ ಸಮಯದಲ್ಲಿ, ಈ ವಿಶ್ವ ವಿದ್ಯೆ ಅದರಿಂದ ಉಂಟಾಗುವ ವಿಶ್ವಪ್ರಜ್ಞೆ, ಅದರಿಂದ ಉಂಟಾಗುವ ವಿಶ್ವಮೈತ್ರಿ– ಇದು ಎಲ್ಲದಕ್ಕಿಂತಲೂ ಅತ್ಯಂತ ಆವಶ್ಯಕವಾಗಿದೆ. ಎಲ್ಲ ಶಕ್ತಿಗಳಿಗಿಂತಲೂ ಅತ್ಯಂತ ಆವಶ್ಯಕವಾಗಿರುವ ಶಕ್ತಿ, ನಮ್ಮ ಪ್ರಪಂಚವನ್ನು ಬದುಕಿಸುವ ಶಕ್ತಿ ವಿಶ್ವಮೈತ್ರಿ ಈ

ವಿಶ್ವವಿದ್ಯೆಯಿಂದ ವಿಶ್ವಪ್ರಜ್ಞೆ, ಅದರಿಂದ ಈ ವಿಶ್ವಮೈತ್ರಿ, ಅಂಥ ವಿಶ್ವಮೈತ್ರಿಯನ್ನು ಪಡೆದ ಮಾನವ ವಿಶ್ವಮಾನವ. ಇಂಥ ವಿಶ್ವಮಾನವನನ್ನು ಸೃಷ್ಟಿಸುವ ನಿಲಯಗಳೆ ವಿದ್ಯಾನಿಲಯಗಳಾಗಬೇಕು. ಇದು ನಮ್ಮ ಆದರ್ಶ ; ನಮ್ಮಗುರಿ.

ಷಷ್ಟಿನಮನ, ವಿಶ್ವಮಾನವ, ಪುಟ ೫೦

೬೨೭

ಆಶೆ ಅಲಕಾವತಿ ಅಮರಾವತಿಗಳನ್ನು ಪ್ರವೇಶಿಸಿ ಅಲ್ಲಿಯ ಐಶ್ವರ್ಯಗಳನ್ನೆಲ್ಲ ಸೂರೆಗೊಳ್ಳುತ್ತದೆ ; ಅಲ್ಲಿಯ ನಂದನವನಗಳಲ್ಲಿ ಹರಿಯುವ ದೇವಗಂಗೆಯಲ್ಲಿ ಮೀಯುತ್ತದೆ ; ಕಲ್ಪವೃಕ್ಷಗಳ ಅನುರಾಗಪೂರ್ಣವಾದ ಧವಳ ಛಾಯೆಗಳಲ್ಲಿ ಕುಳಿತು ಚಿತ್ರ ವಿಚಿತ್ರವಾದ ಇಚ್ಛೆಗಳನ್ನು ನೆರವೇರಿಸಿಕೊಳ್ಳುತ್ತದೆ ; ಕಾಮಧೇನುಗಳ ಕೊಡಗೆಚ್ಚಲುಗಳಿಗೆ ಬಾಯಿ ಹಾಕಿ ಕಡೆಯ ಹನಿಯವರೆಗೂ ಆನಂದಾಮೃತವನ್ನು ಹೀರಲೆಳಸುತ್ತದೆ.

ಕಾನೂರು ಹೆಗ್ಗಡತಿ, ಪುಟ ೨೨೩

೬೨೮

'ಪ್ರತಿಮೆ' ಯಾವ ಒಬ್ಬ ವ್ಯಕ್ತಿಯ ಬಂದು ಮನಸ್ಸಿನ ರಚನೆಯಲ್ಲ ; ಅದು ಒಂದು ಧರ್ಮಕ್ಕೆ ಸೇರಿದ ಒಂದು ಜನಾಂಗದ ಸಮಷ್ಟಿ ಮನಸ್ಸಿನ ಸಾಮೂಹಿಕ ಸೃಜನೆ, ಉದ್ಭವರೂಪ ಸೃಷ್ಟಿ, ಅವಿಚಾರಕ ಆವಿರ್ಭೂತಿ. ಅದು ಅತೀತದ ಆವಶ್ಯಕವಾದ ಒತ್ತಡದಿಂದ ಅವಶವಾಗಿ ಮೈದೋರುವ ಸಂಭೂತಿ. ಅದರ ಹಿಂದೆ ಋತ ಚಿತ್ತಿನ ಸತ್ಯಸಂಕಲ್ಪವಿರುವುದರಿಂದ ಅದೊಂದು ನಿಗ್ರಹಾನಿಗ್ರಹ ಸಮರ್ಥ ವಾದ ದೇವತಾ ವಿಭೂತಿ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೩೮

೬೨೯

ನನ್ನಿಯನುಳಿಯಬೇಡ ; ಸಲಹಿದೊಡೆಯಗೆ ಮರಳಿ
ದ್ರೋಹವನೆಣಿಸಬೇಡ ; ದೀನರನು ತುಳಿಯದಿರು ;
ಧೂರ್ತರಿಗೆ ಮಣಿಯದಿರು. ಕಾಳೆಗದೊಳಿರುವಾಗ
ಧರ್ಮಯುದ್ಧವನೆಂದೂ ನೀಗದಿರು. ಅರಿಗಳಿಗೆ
ಮೈಸೋತು ಹಿಮ್ಮೆಟ್ಟದಿರು. ಸಿಂಹದೊಲು ಬಾಳು !
ಅದುವೆ ನೀನೆನಗೀವ ಗುರುದಕ್ಷಿಣೆ !

ಕಾನೀನ, ಪಾತ್ರ ಪರುಶುರಾಮ, ಪುಟ ೨೬

೬೩೦

ಆಯಾ ಪ್ರಾಂತಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳಿಗೆ ಪ್ರಥಮಸ್ಥಾನ ಸಲ್ಲಬೇಕು. ಅಂತರ ಪ್ರಾಂತೀಯ ವ್ಯವಹಾರ ದೃಷ್ಟಿಯಿಂದ ಮತ್ತು ಕೇಂದ್ರದ ಆಡಳಿತ

ದೃಷ್ಟಿಯಿಂದ ಅಖಿಲ ಭಾರತೀಯವಾದ ಸಂಯುಕ್ತ ಭಾಷೆಗೆ ಎರಡನೆ ಸ್ಥಾನ ಕೊಡಬೇಕು. ಅಂತರರಾಷ್ಟ್ರೀಯವಾದ ಭಾಷೆಗೆ ಅಥವಾ ಭಾಷೆಗಳಿಗೆ ಐಚ್ಛಿಕ ಸ್ಥಾನಕೊಡಬೇಕು. ಆಯಾ ಪ್ರಾಂತಗಳಲ್ಲಿ ಆಯಾ ದೇಶಭಾಷೆಗಳೆ ಆಡಳಿತ ಭಾಷೆಗಳಾಗಿರಬೇಕು. ಅಲ್ಲಿಯ ಶಿಕ್ಷಣವೆಲ್ಲ ಎಲ್ಲ ಮಟ್ಟಗಳಲ್ಲಿಯೂ ದೇಶಭಾಷಾ ಮಾಧ್ಯಮದಲ್ಲಿಯೆ ಸಾಗಬೇಕು.

ಷಷ್ಠಿನಮನ, ನಮಗೆ ಬೇಕಾಗಿರುವ ಇಂಗ್ಲಿಷ್, ಪುಟ ೮೩–೪

೬೩೧

ದುಃಖ ಸುಖದ ದಡದ ನಡುವೆ
ಹೊಳೆಹರಿವುದು ಬಾಳಿದು.

ಜೇನಾಗುವಾ, 'ಬಾಳ್ವುದು', ಪುಟ ೧೨

೬೩೨

ಸಾಹಿತ್ಯ ವಿಮರ್ಶೆಯಂತಹ ಭಾವನಿಷ್ಠವಾದ ಮೀಮಾಂಸೆಯ ಕ್ಷೇತ್ರದಲ್ಲಿ ತಮ್ಮ ತಮ್ಮ ರುಚಿ, ಪಕ್ಷಪಾತ, ಸಾಮರ್ಥ್ಯಗಳಿಗನುಗುಣವಾಗಿ ಸಂಭವಿಸುವ ಅಭಿಪ್ರಾಯಗಳನ್ನೆ ಸಿದ್ಧಾಂತಗಳೆಂದು ಪ್ರತಿಪಾದಿಸುವುದರಿಂದಾಗುವ ಅನಿಷ್ಟದಿಂದ ವಿಮರ್ಶಕರು ಪಾರಾಗದಿದ್ದರೆ ಸಮಕಾಲೀನ ಸಾಹಿತ್ಯಕ್ಕೆ ಭಯಂಕರ ಅಪಕಾರ ವಾಗುವುದರಲ್ಲಿ ಸಂದೇಹವೆ ಇಲ್ಲ.

ರಸೋ ವೈ ಸಃ, ರಸೋ ವೈ ಸಃ, ಪುಟ ೧೨೧

೬೩೩

ಈ ಒಂದು ವಿಷಯದಲ್ಲಿ–ವೈಜ್ಞಾನಿಕ ದೃಷ್ಟಿ ಮತ್ತು ವಿಚಾರ ಬುದ್ಧಿಯಲ್ಲಿ– ಮಾತ್ರ ರಾಜಕೀಯ ಮತ್ತು ಸಾರ್ವಜನಿಕ ರಂಗದಲ್ಲಿರುವ ಇತರರಾರೂ ಶ್ರೀ ನೆಹರೂ ಅವರಿಗೆ ಹೆಗಲೆಣೆಯಾಗುವುದಿರಲಿ ಅವರ ಮೊಣಕಾಲೆತ್ತರಕ್ಕೂ ಬರಲಾರರು.

ಷಷ್ಠಿನಮನ, ಶ್ರೀ ನೆಹರೂ : ವೈಜ್ಞಾನಿಕ ದೃಷ್ಟಿ ಮತ್ತು ವಿಚಾರಬುದ್ಧಿ, ಪುಟ ೨೭೨

೬೩೪

ಪ್ರಕೃತಿಜೀವನವು ವಿಶೇಷತೆಯನ್ನು ಸಂಪಾದಿಸುವುದು ಸಂಪತ್ ಸೂಚಕವಾದ ವಸ್ತುಗಳ ಸಂಯೋಜನದಿಂದ. ಕಲೆ ಅದನ್ನು ಪ್ರತಿಬಿಂಬಿಸಿದರೆ ಆ ವಿಧಾನವೆ ಪ್ರತಿಕೃತಿ. ಸದೃಶಭಾವ ಪ್ರಚೋದಕಗಳಾದ ಇತರ ವಸ್ತುಗಳ ಸಂಸರ್ಗದಿಂದ ಪ್ರಕೃತವಸ್ತುವಿನಲ್ಲಿ ಭಾವಪುಷ್ಟಿಯಾಗುವಂತೆ ಮಾಡುವ ವಿಧಾನವೆ ಉಪಮಾ. ಅದನ್ನೇ ಮಹತ್ತಾಗಿ ಸಾಧಿಸುತ್ತದೆ ಮಹೋಪಮಾ.

ತಪೋನಂದನ, ಪಂಪನಲ್ಲಿ ಭವ್ಯತೆ, ಪುಟ ೫೦

೬೩೫

ಸೋದರನೆ, ಶಾಸ್ತ್ರಿಗಳ ಕಂಗಳಿಗೆ ನಾನು
ನೋಡಲು ಕುರೂಪಿಯಾಗಿದ್ದೆ. ಆದರಿಂದ

ಚೆಲ್ವಾಂತ ತಣ್ಗದಿರನೊಡವೆ ಮಾಡಿದರೆನಗೆ !
ಅವರ ಭಾಗಕೆ ನಾನು ಪಾಪಿಯಾಗಿದ್ದೆ.
ಅದರಿಂದ ಗಂಗೆಯನು ತೊಡಿಸಿದರು ತಲೆಯಲ್ಲಿ,
ತೊಳೆದೆನ್ನ ಶುದ್ಧಮಾಡಲು ಎಂದು ! ಅಸ್ಪೃಶ್ಯನ್
ಆಗಿದ್ದೆ ! ಅದರಿಂದ ಹಣೆಗಣ್ಣ ಮುಡಿಸಿದರು,
ಸುಟ್ಟೆನ್ನ ಶುಚಿಮಾಡಲೆಂದು ! ರೌದ್ರತೆಯನ್
ಈಯಲೆಂದೆನಗೆ ಉರಗಗಳ ಸುತ್ತಿದರು
ಕೊರಳಲ್ಲಿ. ಜೋಯಿಸರ ಭಾಗಕ್ಕೆ ಶಿವನು
ಮುಟ್ಟದವನಾಗಿಹನು.

ಜಲಗಾರ, ಪಾತ್ರ ಶಿವ, ಪುಟ ೩೩

೬೩೬

ಒಮ್ಮೆ ಬೇಲೂರು ಮಠದ ಒಂದು ಮರದಡಿಯಲ್ಲಿ ಅಡ್ಡಾಡುತ್ತಿದ್ದಾಗ ಸ್ವಾಮಿ ವಿವೇಕಾನಂದರು ಹೇಳಿದಂತೆ : 'ಇಂದು ಇಲ್ಲಿ ಸ್ಥಾಪಿತವಾದ ಈ ಸಂಘರೂಪದ ಶಕ್ತಿ ಇನ್ನು ಐನೂರು ವರ್ಷಗಳವರೆಗೂ ಚ್ಯುತಿಯಿಲ್ಲದೆ ಅವ್ಯಾಹತವಾಗಿ ಮುಂಬರಿಯುತ್ತದೆ' ಎಂದು. ನಮಗನ್ನಿಸುತ್ತದೆ 'ಮ' ಅವರ 'ಶ್ರೀ ರಾಮಕೃಷ್ಣ ವಚನವೇದ' ಮೇರುಕೃತಿ ಮನುಷ್ಯತ್ವವಿರುವವರೆಗೆ, ಅದು ದೇವತ್ವವನ್ನು ಬಯಸುತ್ತಿರುವವರೆಗೆ ಚಿರಸ್ಥಾಯಿಯಾಗಿ, ಜೀವಂತ ಶಕ್ತಿಯಾಗಿರುತ್ತದೆ ಎಂದು. ಕಟ್ಟಡ ಸಂಸ್ಥೆಗಳು ಕಾಲವಶವಾಗಿ ಗತಿಸಬಹುದು ; ಸರಸ್ವತಿ ಅಮರೆ !

ಷಷ್ಟಿನಮನ, ಶ್ರೀ ರಾಮಕೃಷ್ಣ ವಚನವೇದ, ಪುಟ ೧೦೦

೬೩೭

ಕಾವ್ಯ ಕಲಾರಂಗದ ಭವ್ಯತಾ ಅನುಭವದಲ್ಲಿ ಲೋಕಾನುಭವ ರೂಪದ ಭೂಮಾನುಭೂತಿ ಆಂಶಿಕವಾಗಿಯಾದರೂ ಇದ್ದೆ ಇರುತ್ತದೆ. ಅದು ಇದ್ದಷ್ಟೂ ಭವ್ಯತಾ ಅನುಭವದ ಪುರುಷಾರ್ಥಕತೆ ಉನ್ನತವಾಗುತ್ತದೆಯೆ ಹೊರತು ಅವನತವಾಗುವುದಿಲ್ಲ.

ರಸೋ ವೈ ಸಃ, ಭೂಮಾನುಭೂತಿ, ಪುಟ ೯೨

೬೩೮

ನಾನೇರಿದೆತ್ತರವ ನೋಡಿ
ಚಿತ್ತ ಹಿಗ್ಗುತಿದೆ ;
ಬೀಳುವೆನೊ ಎಂಬಳುಕು ಮೂಡಿ
ಮತ್ತೆ ಕುಗ್ಗುತಿದೆ.

ಕಲಾಸುಂದರಿ, ತಾವರೆಯ ತೇರು, ಪುಟ ೨೭

೬೩೯

ಒಬ್ಬನ ಮಿತ್ತು
ಮತ್ತೊಬ್ಬನೇಳಿಗೆಗೆ ತುತ್ತಲ್ತೆ ?

ಕೃತ್ತಿಕೆ, ದೇಶಭಕ್ತನ ಉತ್ತರವಾಣಿ, ಪುಟ ೭೩

೬೪೦

ನಡೆವುದೆಲ್ಲಮುಂ
ನಡೆವುದೊಳ್ಳಿಗೆ : ಸರ್ವಶಕ್ತಿಯುಂ ಜ್ಞಾನಮುಂ
ಮತ್ತೆ ಕಲ್ಯಾಣಮುಂ ತಾನಪ್ಪ ಕೃಪೆ ತಾನೆ
ಪಿಡಿದಿದೆ ಜಗದ್‌ರಥವನೆಳೆವ ಶಕ್ತ್ಯಶ್ವಕುಲ
ವಾಘೆಯಂ !

ಶ್ರೀ ರಾಮಾಯಣ ದರ್ಶನಂ, ಮಮತೆಯ ಸುಳಿ ಮಂಥರೆ, ಪಾತ್ರ ರಾಮ, ಪುಟ ೮೮

೬೪೧

ಕೆಲವರಿಗೆ ತಮ್ಮ ಅಭ್ಯುದಯಕ್ಕಿಂತಲೂ ಮತ್ತೊಬ್ಬರ ಅವನತಿಯಲ್ಲಿ ಹೆಚ್ಚು ಸುಖವಿರುತ್ತದೆ.

ಕಾನೂರು ಹೆಗ್ಗಡಿತಿ, ಪುಟ ೩೪೮

೬೪೨

ದೇಹಾತ್ಮ ಭೇದಮಂ ಪೇಳ್ ಮಿಥ್ಯೆಗೊಳಿಸದೆ ರಸದ ದೃಷ್ಟಿ.

ಶ್ರೀ ರಾಮಾಯಣ ದರ್ಶನಂ, ಮಮತೆಯ ಸುಳಿ ಮಂಥರೆ, ಪುಟ ೬೭

೬೪೩

ಬ್ರಾಹ್ಮಣನು ಶೂದ್ರನನ್ನು ಬಹುವಚನದಲ್ಲಿ ಮಾತನಾಡಿಸುವುದು ಶಾಪಕ್ಕೆ ಸಮಾನವೆಂದೂ, ಏಕವಚನದಲ್ಲಿ ಮಾತಾಡಿಸುವುದು ಅನುಗ್ರಹಕ್ಕೆ ಸಮಾನವೆಂದೂ ಭಾವಿಸಿ ವೇದಮೂರ್ತಿಗಳೆಲ್ಲ ಮಾ॥ರಾ॥ಶ್ರೀಗಳನ್ನು 'ಅವನು' 'ನೀನು' ಎಂದೇ ಸಂಬೋಧಿಸುತ್ತಿದ್ದುದು ಆ (ಮಲೆ)ನಾಡಿನ ವಾಡಿಕೆಯಾಗಿತ್ತು.

ಕಾನೂರು ಹೆಗ್ಗಡಿತಿ, ಪುಟ ೭೩

೬೪೪

ಸಿದ್ಧಿಯ ಪ್ರಯೋಜನದ ದೃಷ್ಟಿಯಿಂದ ಉಳಿದ ದಾರಿಗಳಿಗೆ ಒಂದಿನಿತೂ ಕೀಳಲ್ಲವಾದರೂ ರಸಲೋಲುಪವೂ ಸುಖಪ್ರಿಯವೂ ಆದ ನರಚೇತನಕ್ಕೆ ಸೌಂದರ್ಯದ ದಾರಿಯೆ ಅತ್ಯಂತ ಮಧುರವೂ ಆಹ್ಲಾದಕರವೂ ಆಕರ್ಷಣೀಯವೂ ಆಗಿ ಪರಿಣಮಿಸಿದೆ.

ರಸೋ ವೈ ಸಃ, ಭೂಮಾನುಭೂತಿ, ಪುಟ ೮೪

೬೪೫

ಇಂದಿನ ಕನಸು ನಾಳೆಯ ನನಸು. ಮಹಾತ್ಮರ ಮಹಾಸ್ವಪ್ನಗಳಿಂದಲೆ ಭವಿಷ್ಯತ್ತಿನ ವಾಸ್ತವ ಸಿದ್ಧವಾಗುತ್ತದೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೭೮

೬೪೬

ಮೈಸೂರಿನ ಎಲ್ಲೆ ರಾಜಕೀಯದಿಂದ ಭೌಗೋಲಿಕವಾಗಿ ನಿರ್ಣಯವಾಗಿದ್ದರೂ ಕರ್ಣಾಟಕದ ಸಾಂಸ್ಕೃತಿಕ ಮೇರೆ ನಮ್ಮೆಲ್ಲರಿಂದ ಮಾನಸಿಕವಾಗಿ ನಿರಂತರವೂ ನಿರ್ಣಯವಾಗುತ್ತಿರುತ್ತದೆ. ಕನ್ನಡಿಗರ ಸಂಸ್ಕೃತಿಗೆ ಪ್ರತಿಮಾ ರೂಪವಾಗಿರುವ ಕರ್ಣಾಟಕದ ವಿಸ್ತಾರ ನಿರ್ದಿಗಂತವಾದದ್ದು; ಅದರ ಔನ್ನತ್ಯ ನಿಶ್ಶಿಖರವಾದದ್ದು. ಅಂತಹ ಸಂಸ್ಕೃತಿ ಕರ್ಣಾಟಕದ ಸ್ಥಾಪನೆ, ರಕ್ಷಣೆ, ಪೋಷಣೆ ಮತ್ತು ವಿಸ್ತರಣೆಗಳಿಗಾಗಿಯೆ ಸಹೃದಯ ಸಮಷ್ಟಿರೂಪವಾದ ಸಾಹಿತ್ಯ ಪರಿಷತ್ತು ನಿರಂತರವೂ ತಪಸ್ವಿಯಾಗಿ ದುಡಿಯಬೇಕಾಗಿದೆ. ಏಕೆಂದರೆ ಭೌಗೋಲಿಕವಾಗಿ ಕರ್ಣಾಟಕ ರಾಜ್ಯ ಸ್ಥಾಪನೆಯಾಯಿತು ಎಂದು ನಾವು ಸಡಿಲ ಬಾಳಿಗರಾಗಿ ಸುಮ್ಮನಾದರೆ ರಾಜ್ಯ ಸ್ಥಾಪನೆಯ ಮೂಲೋದ್ದೇಶವೆ ವಿಫಲವಾಗುತ್ತದೆ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೫

೬೪೭

ಇಂದು ಜಗಜ್ಜೀವನದಲ್ಲಿ ಒಂದು ಸಂಧಿಕಾಲವೊದಗಿದೆ. ಮಾನವ ಜೀವನ ಕುಲುಮೆಯ ಮೇಲೆ ಮೂಸೆಯಲ್ಲಿರುವ ಅದುರಿನಂತೆ ಕುದಿಯುತ್ತಿದೆ. ಈ ಕುದಿದಾಟಕ್ಕೆ ಕಾರಣವಾದ ಮುಖ್ಯ ಶಕ್ತಿಗಳು ಎರಡಿವೆ: ಒಂದು ವೈಜ್ಞಾನಿಕ, ಮತ್ತೊಂದು ರಾಜಕೀಯ. ಹಿಂದೆ ಪ್ರಬಲವಾಗಿದ್ದು ಅಗ್ರಸ್ಥಾನದಲ್ಲಿದ್ದ ಇತರ ಶಕ್ತಿಗಳು–ಮತ, ತತ್ತ್ವ, ಕಾವ್ಯ, ಚಿತ್ರ, ಶಿಲ್ಪ, ಇತ್ಯಾದಿ–ಇಂದು ಗೌಣ ಸ್ಥಾನದಲ್ಲಿವೆ. ಹಲಕೆಲವರ ದೃಷ್ಟಿಯಲ್ಲಿ ಅವುಗಳು ಈಗಲೂ ಹಿಂದಿದ್ದಂತೆಯೆ ವಂದ್ಯವಾಗಿ ಆನಂದದಾಯಕವಾಗಿ ಆತ್ಮೋದ್ಧಾರಕವಾಗಿದ್ದರೂ ಬಹು ಸಂಖ್ಯಾಕ ಮನುಷ್ಯಗಣದ ದೃಷ್ಟಿಯಲ್ಲಿ ಅವುಗಳೆಲ್ಲ ಅಮುಖ್ಯವಾಗಿ ತೋರತೊಡಗಿವೆ. ಜೀವನ ಸಂಗ್ರಾಮದಲ್ಲಿ ವಿಜ್ಞಾನವೂ ಅರ್ಥಶಾಸ್ತ್ರವನ್ನೊಳಗೊಂಡ ರಾಜಕೀಯವೂ ಆವಶ್ಯಕವಾಗಿರುವಷ್ಟು ಮತ, ಕಲೆಗಳು ಆವಶ್ಯಕವಾಗಿ ತೋರುತ್ತಿಲ್ಲ. ಅಷ್ಟೇ ಅಲ್ಲದೆ ಅವುಗಳಿಂದ ವೈಜ್ಞಾನಿಕ ಪ್ರಗತಿಗೂ ರಾಜಕೀಯ ಸಂಗತಿಗೂ ಅಡಚಣೆಯಾಗುತ್ತದೆ ಎಂದೂ ಕೆಲವರು ಅಭಿಪ್ರಾಯ ಪಡುತ್ತಿದ್ದಾರೆ.

ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೨೯–೩೦

೬೪೮

ದುಃಖವೆಂಬುದು ಸುಖದ ಕಿಂಕರನು.

ಜಲಗಾರ, ಪಾತ್ರ ಜಲಗಾರ, ಪುಟ ೨೨

೬೪೯

ಒಂದಲ್ಲ ಒಂದುದಿನ ನೀನೆಲ್ಲ ತೊರೆವೆ;
ಒಂದೆದೆಯೊಳೊಮ್ಮನದೊಳೆನ್ನೆದೆಗೆ ಬರುವೆ!

ಅಗ್ನಿಹಂಸ, ಅಂತರ್ವಾಣಿ, ಪುಟ ೧೫

೬೫೦

ಅತೀಂದ್ರಿಯ ಭಾವ
ಪಂಜರಮೆ ತಾನಾಧಾರಮಲ್ತೆ ಸೇಂದ್ರಿಯ ಸೃಷ್ಟಿ
ರಚನೆಗೆ ?

ಶ್ರೀ ರಾಮಾಯಣ ದರ್ಶನಂ, ಮರಣಮಥವಾ ಶರಧಿತರಣಂ, ಪಾತ್ರ ವರುಣ, ಪುಟ ೫೯೪

೬೫೧

ತುತ್ತತುದಿಯ ಮೌನಕೇಕೆ
ಇಷ್ಟು ದೊಡ್ಡ ಮುನ್ನುಡಿ ?
ರೂಪವಿಲ್ಲದಾತ್ಮಕೇಕೆ
ಜಗದ ರನ್ನಗನ್ನಡಿ ?

ಕದರಡಕೆ, ಮುನ್ನುಡಿ, ಪುಟ ೭೬

೬೫೨

ಕವಿ ಲಕ್ಷಣಶಾಸ್ತ್ರಕ್ಕೆ ಲಕ್ಷ್ಯಗಳನ್ನು ತಯಾರುಮಾಡುವ ಕೂಲಿಯ ಕಮ್ಮಾರನಲ್ಲ.

ಇತ್ಯಾದಿ, ಉಪಮಾಲೋಲ ಲಕ್ಷ್ಮೀಶ, ಪುಟ ೩೩

೬೫೩

ಬಾಂಧವ್ಯದ ಜೊತೆಗೆ ಸ್ನೇಹವೂ ಬೆರೆತರೆ ಕೇಳಬೇಕೆ ?

ಕಾನೂರು ಹೆಗ್ಗಡಿತಿ, ಪುಟ ೧೭

೬೫೪

ಬಹುಮಂದಿ ನಡೆದ ಹಾದಿಯಲ್ಲಿ ನಡೆದರೆ ಕಾಲಿಗೆ ಮುಳ್ಳು ಚುಚ್ಚುವುದಿಲ್ಲವಷ್ಟೆ ?

ಕಾನೂರು ಹೆಗ್ಗಡಿತಿ, ಪುಟ ೪೧೮

೬೫೫

ಮುನ್ನೆ ತಾಂ ನೋಂತುದಲ್ಲದೆ, ಪೇಳ್
ಬರಿದೆ ಬಯಸಿದೊಡೆ ಬಂದಪುದೆ ?

ಚಂದ್ರಹಾಸ, ಪಾತ್ರ ಳನೆಯ ಪುಳಿಂದಿ, ಪುಟ ೩೧

೬೫೬

ಪಾಶ್ಚಾತ್ಯರಲ್ಲಿ ಅತ್ಯಂತ ಉನ್ನತವಾದವನು ನಿಂತರೂ ಆಲ್ಪ್ಸ್ ಪರ್ವತದ ಮೇಲೆ ನಿಲ್ಲುತ್ತಾನೆ; ನಮ್ಮಲ್ಲಿ ಅತ್ಯಂತ ಕುಬ್ಜನಾದವನು ನಿಂತರೂ ಹಿಮಾಲಯದ ಶಿಖರದ ಮೇಲೆ ನಿಲ್ಲುತ್ತಾನೆ! ಆದ್ದರಿಂದ ಎಂದಿದ್ದರೂ ನಾವು ಅವರಿಗಿಂತ ಎತ್ತರ ವಾಗಿಯೆ ಇರುತ್ತೇವೆ. ಅದು ನಮ್ಮ ಪಿತ್ರಾರ್ಜಿತವಾದ ವೈಶಿಷ್ಟ್ಯ. ಆದ್ದರಿಂದ ಆ

ವಿಚಾರದಲ್ಲಿ ತಿಳಿದವರು ಯಾರೂ ನಮ್ಮ ಭಾಷೆಗೆ ಬಡತನವಿದೆ, ದೌರ್ಬಲ್ಯವಿದೆ ಎಂಬ ಮಾತುಗಳನ್ನು ಆಡಲಾರರು.

ಮನುಜಮತ ವಿಶ್ವಪಥ, ಕದನಕ್ಕೆ ಸಜ್ಜು, ಪುಟ ೫೭

೬೫೭

ಈ ಶತಮಾನ ಭರತಖಂಡದಲ್ಲಿ ಮಾತ್ರವಲ್ಲ, ಇಡೀ ವಿಶ್ವದಲ್ಲಿಯೆ ಒಂದು ವಿಶೇಷ ಶತಮಾನ, ಅಸಾಧಾರಣ ಘಟ್ಟದ ಶತಮಾನ.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೧೦

೬೫೮

ಯಾರನೊ ಹುಡುಕುತಲಿರುವರು ಎಲ್ಲಾ ;
'ಯಾರನು' ಎಂದರೆ ತಿಳಿದವರಿಲ್ಲ;
ಎಂದೋ ಯಾರನೊ ಅಗಲಿದೆವೆಂದು
ಅರಸುತಲಿರುವರು ಕಲ್ಪಗಳಿಂದ !

ಷೋಡಶಿ, ಪ್ರಣಯದ ದೂರದಾಸೆ, ಪುಟ ೩೬

೬೫೯

ಕೃತಿರಚನೆಯಂತೆಯೆ ಕೃತಿಯ ರಸಾಸ್ವಾದನೆಯೂ ಒಂದು ಸೃಷ್ಟಿಕಾರ್ಯ. ಸೃಷ್ಟಿಕಾರ್ಯವಲ್ಲದ ಸರ್ವಕರ್ಮಗಳೂ ನೀರಸವಾಗುತ್ತವೆ. ಅಂತಹ ಕರ್ಮಗಳಿಂದ ನಮಗೆ ಒದುಗುವುದು ಆನಂದವಲ್ಲ, ಬೇಸರ.

ಕಾನೂರು ಹೆಗ್ಗಡಿತಿ, ಅರಿಕೆ, ಪುಟ iii

೬೬೦

ಹೊಸತೆಂದರೇನು ? ಹಳೆಯದರ ನಿಷೇಧವಲ್ಲ. ಹಳತಿಲ್ಲದ ಸಂಪೂರ್ಣವಾದ ಹೊಸತು ಸೃಷ್ಟಿಯಲ್ಲಿ ಎಲ್ಲಾದರೂ ಉಂಟೆ ? ತರುಣರಾದ ನಾವು ಕೂಡ ಎಂದೋ ಎಲ್ಲಿಯೋ ಮುದುಕರಾಗಿ ಮಡಿದು ಮರಳಿ ಬಂದವರೆಂದು ಶಾಸ್ತ್ರಗಳೂ ಹೇಳುವು ದಿಲ್ಲವೆ ? ಹಳೆಯದರ ತಳಹದಿಯಿಂದ ರೂಪಾಂತರವಾಗಿ ಹೊಸತು ಮೂಡುತ್ತದೆ. ಇಷ್ಟೆ ಹೊರತು ಹೊಸತಕ್ಕೂ ಹಳೆಯದಕ್ಕೂ ನಿಜವಾಗಿಯೂ ಹೋರಾಟವಿಲ್ಲ.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೭

೬೬೧

ಮಹಾಪುರುಷರ ಜ್ಯೋತಿರ್ಮಯ ಜೀವನದ ಅಸ್ತಿಭಾರದ ರಹಸ್ಯವನ್ನು ಅರಿಯಬೇಕಾದರೆ ನಮ್ಮ ದೃಷ್ಟಿ ಅವರ ಶೈಶವ ಕೈಶೋರ ಕೌಮಾರ್ಯಗಳ ಕಡೆಗೆ ತಿರುಗಬೇಕು. ಅವರ ಬಾಳನ್ನು ತಿದ್ದಿದ ಬಾಲ್ಯಕಾಲದ ಮುದ್ದಾದ ಸನ್ನಿವೇಶಗಳನ್ನು ಪರಿಶೀಲಿಸಬೇಕು. ಅವರ ಮಾತಾಪಿತೃಗಳ ಬಂಧು ಮಿತ್ರರ ಸುಸ್ನೇಹಮಯವಾದ ಆವರಣ ಸನ್ನಿವೇಶ ಪ್ರವೇಶಮಾಡಿ ನೋಡಬೇಕು, "ಮಕ್ಕಳ ಸ್ಕೂಲ್ ಮನೇಲಲ್ವೆ?"

ಸ್ವಾಮಿ ವಿವೇಕಾನಂದ, ಪುಟ ೨೫

೭೭೨

ಒಬ್ಬ ಕವಿಯ ಬೇರೆ ಬೇರೆ ತರಹದ ಕೃತಿಗಳಲ್ಲಿ ಒಂದು ತತ್ತ್ವ ಮತ್ತೆ ಮತ್ತೆ ತಲೆಯೆತ್ತುವಂತೆ ತೋರಿದರೂ ಕವಿಗೂ ಆ ತತ್ತ್ವವು ಪ್ರಜ್ಞಾಪೂರ್ವಕವಾಗಿಯೆ ಮಾನ್ಯವಾಗಿತ್ತು ಎಂದು ಊಹಿಸಿದರೆ ಅದು ಅತಂತ್ರವೂ ಆಗುವುದಿಲ್ಲ, ಅತರ್ಕವೂ ಆಗುವುದಿಲ್ಲ. ಒಂದು ವೇಳೆ ಕವಿಯಲ್ಲಿ ಆ 'ದರ್ಶನ'ವು 'ಬುದ್ಧಿಪೂರ್ವಕ'ವಾಗಿ ಇರದಿದ್ದರೂ, ನಾವು ನೆನಪಿನಲ್ಲಿಡಬೇಕು, ನಮ್ಮ ಸಿದ್ಧಾಂತಕ್ಕೆ ಚ್ಯುತಿ ಬರುವುದಿಲ್ಲ: ಏಕೆಂದರೆ 'ದರ್ಶನ'ವು 'ಬುದ್ಧಿಪೂರ್ವ'ವಾದ ಸಿದ್ಧಿ.

ತಪೋನಂದನ, ಕಾವ್ಯ ವಿಮರ್ಶೆಯಲ್ಲಿ ಪೂರ್ಣದೃಷ್ಟಿ, ಪುಟ ೧೪೦

೭೭೩

ಪದ್ಧತಿಯ ಹೊರೆಯಿಲ್ಲ,
ಕಾಯಿದೆಯ ಕಟ್ಟಿಲ್ಲ,
ಶಾಸ್ತ್ರಗಳ ವಿಧಿಯಿಲ್ಲ,
ಕರುಬುವರ ಕಣ್ಣಿಲ್ಲ,
ಬನ ಬೆಟ್ಟದಲ್ಲಿ!
ಇಲ್ಲಿ ಪ್ರೇಮವೆ ನೀತಿ,
ಇಲ್ಲಿ ಧರ್ಮವೆ ಪ್ರೀತಿ,
ಇಲ್ಲಿಯೊಲ್ಮೆಯೆ ಕಟ್ಟು,
ಇಲ್ಲಿ ಬೇಟವೆ ಗುಟ್ಟು,
ಮಾಡಿದುದೆ ಮಾಟ!
ಇಲ್ಲಿ ಕೇಳುವರಿಲ್ಲ,
ಆಡಿದುದೆ, ಆಟ!

ಷೋಡಶಿ, ರಸಋಷಿ, ಪುಟ ೭೩

೭೭೪

ಯಾವಾತನ ಮೊಗದಲ್ಲಿ ತೇಜಸ್ಸು
ತೋರುವುದೊ, ಯಾವನೊಳು ಬಾಂದಳದ ಗಾಂಭೀರ್ಯ
ಮೆರೆಯುವುದೊ, ಯಾವನು ಸದಾ ಸತ್ಯವಾಡುವನೊ,
ಅವನೆಲ್ಲಿಯೆ ಇರಲಿ, ಅವನಾರೆ ಆಗಿರಲಿ,
ಬ್ರಾಹ್ಮಣನು!

ಕಾನೀನ, ಪಾತ್ರ ಪರುಶುರಾಮ, ಪುಟ ೨೧

೭೭೫

ನಾಸ್ತಿಕತೆ
ನಷ್ಟ ಹಾನಿಯ ದುಷ್ಟ ಮೌಢ್ಯಕಿಂತತಿ ಲೇಸು!

ಕೃತ್ತಿಕೆ, ಚಂದ್ರಗ್ರಹಣ ಮತ್ತು ಸಾಕ್ರೆಟೀಸ್, ಪುಟ ೫೭

೬೬೬

ಮಹದ್ಭಾವಗಳನ್ನೂ ಮಹದಾಲೋಚನೆಗಳನ್ನೂ ಮಹದನುಭವಗಳನ್ನಾಗಿ ಪರಿವರ್ತಿಸಿ ಆತ್ಮಶ್ರೀಯನ್ನು ಪ್ರೋಜ್ವಲವಾಗಿ ಮಾಡುವ ಸಾಧನ ವಿಧಾನವೆ ಧ್ಯಾನ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ, ಪುಟ ೫೭

೬೬೭

ಕಾಲ, ಆಕಾಶ, ಸಾಗರ, ಮಹಾರಣ್ಯ ಶ್ರೇಣಿ, ಮಹೋನ್ನತ ಪರ್ವತ ಪಂಕ್ತಿ, ತಿಮಿಂಗಿಲ, ಆನೆ, ಸಿಂಹ, ಘಟಸರ್ಪ ಮೊದಲಾದ ನೈಸರ್ಗಿಕ ವಸ್ತುಗಳಲ್ಲಿ ಮತ್ತು ಪ್ರಾಣಿಗಳಲ್ಲಿ ಮೈದೋರುವ ಮಹತ್ತಿಗೆ ಅವುಗಳ ಬೃಹತ್ತೆ ಕಾರಣವಾಗಿರುವಂತೆ ತೋರಿದರೂ ಭವ್ಯತಾ ಅನುಭವಕ್ಕೆ ಬಾಹ್ಯಕವಾದ ಬೃಹತ್ತು ಅನಿವಾರ್ಯವಾಗಿ ಆವಶ್ಯಕವಾದುದೇನಲ್ಲ. ವಸ್ತು ಅನಂತತೆಯ ಭಾವೋದಯಕ್ಕೆ ಕಾರಣವಾದರೆ ಸಾಕು. ತಾನೆ ಅಪಾರವಾಗಿರಬೇಕಾಗಿಲ್ಲ.

ರಸೋ ವೈ ಸಃ, ಭೂಮಾನುಭೂತಿ, ಪುಟ ೧೧೪

೬೬೮

ನಮ್ಮ ನಮ್ಮಂತಃಕಲಹದಿಗ್ನಿ ತಾಂ
ಸುಟ್ಟುರುಹದಿಹುದೆ ನಾಡನಿತುಮಂ ?

ಶ್ರೀ ರಾಮಾಯಣ ದರ್ಶನಂ, ಊರ್ಮಿಳಾ, ಪಾತ್ರ ರಾಮ, ಪುಟ ೯೫

೬೬೯

ಶ್ರೀಅರವಿಂದರು ಯಾವುದೇ ರೀತಿಯಾದ ಸಂನ್ಯಾಸ, ತ್ಯಾಗ ಮೊದಲಾದ ಬಾಹ್ಯರೀತಿಯ ನಿಯಮಗಳನ್ನು ಹೇಳಲಿಲ್ಲ. ಅವರ ದೃಷ್ಟಿ ಆಂತರಿಕವಾದ ಸಾಧನೆಯ ಕಡೆಗೆ. ಈ ಆಂತರಿಕ ಸಾಧನೆಯನ್ನು ಅವರದೇ ಆದ ಯೋಗಮಾರ್ಗದಲ್ಲಿ ವರ್ಣಿಸಿದ್ದಾರೆ.

ಷಷ್ಟಿನಮನ, ಶ್ರೀ ಅರವಿಂದರ ಕಾವ್ಯದರ್ಶನ, ಪುಟ ೧೮೫

೬೭೦

ರಸಋಷಿಯಾದ ಕವಿಯ ಪೂರ್ಣದೃಷ್ಟಿಗೆ ಪ್ರಕೃತಿ ಪರಮಾತ್ಮನ ಚಿನ್ಮಯ ದಿವ್ಯ ಶರೀರವಾಗಿ ತೋರುತ್ತದೆ. ಇಂದ್ರಿಯ ವ್ಯಾಪಾರಗಳೆಲ್ಲ ಪೂಜೆಯಾಗಿ ಪರಿಣಮಿಸುತ್ತವೆ.

ವಿಭೂತಿ ಪೂಜೆ, ಕವಿಯ ದೃಷ್ಟಿಯಲ್ಲಿ ಪ್ರಕೃತಿ, ಪುಟ ೨೯

೬೭೧

ಅತೀತದ ಸಿದ್ಧಪುರುಷರ ವಿಚಾರವಾಗಿ ಹೇಳುವುದಾದರೆ ಪ್ರಾರ್ಥಿಸಿದವರಿಗೆ ಅವರ ಸಿದ್ಧಹಸ್ತ ಎಂದಿಗೂ ಒಲ್ಲೆ ಎನ್ನುವುದಿಲ್ಲ. ಎಂತಹ ಪತನಸ್ಥಿತಿಯಲ್ಲಿಯೂ ಕರೆದವರಿಗೆ ಓ ಕೊಳ್ಳದೆ ಇರುವುದಿಲ್ಲ. ಈ ಕರೆ ನಿರಾಡಂಬರವಾಗಿ ನಿರಪೇಕ್ಷಣೀಯವಾಗಿ ನಡೆಯುವಂಥದು.

ಷಷ್ಟಿನಮನ, ಶ್ರೀ ಅರವಿಂದರ ಕಾವ್ಯದರ್ಶನ, ಪುಟ ೧೯೨

೬೭೨

...ವೇದ ಎಂಬುದು ಎಂದೋ ಮುಗಿದ ಒಂದು ಗ್ರಂಥದ ಅಥವಾ ಗ್ರಂಥ ರಾಶಿಯ ಹೆಸರಲ್ಲ. ವೇದದ ಮಹಾಗ್ರಂಥಕ್ಕೆ ಕಾಲಕಾಲಕ್ಕೂ ಯುಗಯುಗಕ್ಕೂ ಹೊಸ ಹೊಸ ಅಧ್ಯಾಯಗಳೂ ಪ್ರಕರಣಗಳು ಸೇರುತ್ತಲೆ ಹೋಗುತ್ತಿವೆ. ಅವುಗಳಲ್ಲಿ ಆಧುನಿಕ ವಿಜ್ಞಾನ ಶಾಸ್ತ್ರಗಳಿಗೂ ಗೌರವ ಸ್ಥಾನವಿದೆ. ನಮ್ಮ ಅನುಭವಗಳು ವಿಸ್ತರಿಸಿದಂತೆಲ್ಲ, ಹೊಸ ಹೊಸ ಸಾಕ್ಷಾತ್ಕಾರಗಳೂ ಸಿದ್ಧಿಗಳೂ ಮೈದೋರಿದಂತೆಲ್ಲ ವೇದವೂ ವಿಸ್ತರಣಗೊಳ್ಳುತ್ತದೆ. ಸದ್ಯಕ್ಕೆ ಅತೀತವಾಗಿರುವ 'ವೇದ'ದ ವಿರಾಟ್ ಜಗತ್ತಿನಲ್ಲಿ 'ಲೋಕ'ಕ್ಕೆ ಇಳಿಯಬಹುದಾದ, ಇಳಿಯಲಿರುವ ಮತ್ತು ಇಳಿಯಲೇ ಬೇಕಾಗಿರುವ ಇನ್ನೆಷ್ಟೆಷ್ಟು ವಿಸ್ಮಯಗಳೂ ಆಶ್ಚರ್ಯಗಳೂ ಕಾಲಲಬ್ಧಿಯನ್ನು ಕಾಯುತ್ತಿವೆಯೊ ಹೇಳಬಲ್ಲವರಾರು ?

ಷಷ್ಟಿನಮನ, ಶ್ರೀ ರಾಮಕೃಷ್ಣ ವಚನವೇದ, ಪುಟ ೧೦೪

೬೭೩

ಶ್ರೀ ವಿನೋಬಾಜಿಯವರೇನೊ, ವಿಶ್ವಮಾನವರಾಗಿ, ಸಮಗ್ರ ಭರತಖಂಡಕ್ಕಾದರೂ ಏಕಲಿಪಿಯನ್ನು ಸಾಧಿಸುವುದರಿಂದ ಭಾವೈಕ್ಯವನ್ನು ಸಾಧಿಸಲು ಸುಲಭವಾಗುತ್ತದೆ ಎಂದು ಹಾರೈಸುತ್ತಾರೆ. ಆದರೆ ಏಕಲಿಪಿ, ಏಕಭಾಷೆ ಮತ್ತು ಏಕಮತ ಇವು ಯಾವುವೂ ಭಾವೈಕ್ಯವನ್ನು ಸಾಧಿಸಲಾರದೆ ಸೋತಿರುವುದಕ್ಕೆ ಇತಿಹಾಸದ ಉದ್ದಕ್ಕೂ ಸಾಕ್ಷಗಳು ಚೆಲ್ಲಿ ಬಿದ್ದಿವೆಯಲ್ಲಾ !? ಯೂರೋಪಿನ ಏಕಮತ–ಕ್ರೈಸ್ತ ಮತ–ಅದರ ಐಕ್ಯಮತ್ಯ ಸಾಧಿಸಲಾರದೆ ಯುದ್ಧಗಳ ಪರಂಪರೆಯನ್ನೆ ಹೊತ್ತಿಸಿತು. ಹಾಗೆಯೆ ಪಾಕಿಸ್ತಾನದ ಏಕಮತವೂ ! ಬಂಗಾಳದ ಏಕಭಾಷೆ ಭಾರತದ ವಿಭಜನೆಯ ಕಾಲದಲ್ಲಿ ಅದು ಒಡೆಯುವುದನ್ನು ತಡೆಯಲಿಲ್ಲ. ಮತ ಮತ್ತು ಭಾಷೆಗಳಿಗಿಂತಲೂ ಅನೈಕ್ಯಕ್ಕೆ ಬಲಿಷ್ಠವಾದ ಸಾಕ್ಷಿಯಾಗಿದೆ–ಏಕಲಿಪಿ ! ರೋಮನ್ ಲಿಪಿ, ಅರಬ್ಬೀ ಲಿಪಿ, ಮತ್ತು ಸಂಸ್ಕೃತದ ದೇವನಾಗರಿ ಲಿಪಿಗಳೆಲ್ಲ ಒಂದೇ ಕಥೆ ಹೇಳುತ್ತಿವೆ. ಈಗ ನಡೆಯುತ್ತಿರುವ ಆಂಧ್ರ–ತೆಲಂಗಾಣದ ಘರ್ಷಣೆ ಮತ್ತೊಂದು ಸದ್ಯೋಜಾತ ನಿಷ್ಠುರ ನಿದರ್ಶನವಾಗುತ್ತದೆ. ನನಗನ್ನಿಸುತ್ತದೆ : ಭಾಷೆಯೂ ಅಲ್ಲ ; ಲಿಪಿಯೂ ಅಲ್ಲ ; ಮತವೂ ಅಲ್ಲ ; ಸರ್ವೋದಯಕ್ಕೆ ಭದ್ರವಾದ ಆಧಾರ ಮತ್ತು ಬಲಿಷ್ಠ ಅಸ್ತಿಭಾರವಿರುವುದು 'ಸರ್ವರಿಗೆ ಸಮಪಾಲು ಸರ್ವರಿಗೆ ಸಮಬಾಳು' ಎಂಬ ಆರ್ಥಿಕ ಸಮತೆಯಲ್ಲಿ ಎಂದು. ಆದರೂ ಆರ್ಥಿಕ ಸಮತೆಯ ಅನಂತರ ಮತ, ಲಿಪಿ ಮತ್ತು ಭಾಷೆಗಳು ಭಾವೈಕ್ಯಕ್ಕೆ ಸಹಾಯಕ ಕಾರಣ ಗಳಾಗುತ್ತವೆ. ಆ ದೃಷ್ಟಿಯಿಂದ ನಾಗರಿ ಲಿಪಿಯ ಪ್ರಯೋಗ ಸಾಧುವಾಗುತ್ತದೆ. ಆ ಸಾಧ್ಯತೆ, ಸದ್ಯದ ಭಾರತದ ಪರಿಸ್ಥಿತಿಯನ್ನು ಅವಲೋಕಿಸಿದರೆ, ಬಹುದೂರದ ದಿಗಂತ ಧ್ಯೇಯವೊ ಏನೋ ಎನಿಸುತ್ತದೆ.

ವಿಚಾರ ಕ್ರಾಂತಿಗೆ ಆಹ್ವಾನ, ಲಿಪಿ ಭಾಷೆ ಮತ್ತು ಭಾವೈಕ್ಯತೆ, ಪುಟ ೧೧೦–೧

೬೭೪

ನಾನು ನಿಮಗೆ ಹೇಳುತ್ತಿರುವುದು ನಮ್ಮ ಸಂಪ್ರದಾಯದ ವಿಚಾರದಲ್ಲಿ, ನಮ್ಮ ಚರಿತ್ರೆಯ ವಿಚಾರದಲ್ಲಿ ನಮಗೆ ಬಹಳ ಹೆಮ್ಮೆ ಎಂದು ಹೇಳುತ್ತಿದ್ದೀರಲ್ಲ, ಅದನ್ನು ಸ್ವಲ್ಪ ಸಾವಧಾನದಿಂದ ಕುಳಿತುಕೊಂಡು ಯೋಚನೆ ಮಾಡಿದಾಗ ಅಷ್ಟು ಹೆಮ್ಮೆ ಪಟ್ಟುಕೊಳ್ಳುವಂತಹ ವಿಷಯವೇನಲ್ಲ ಅದು ಎಂದು ಗೊತ್ತಾಗುತ್ತದೆ. ನಮ್ಮ ಗೌರವ ಉಳಿಸಿಕೊಳ್ಳುವುದಕ್ಕಾಗಿ ಹೊರಗಿನವರಿಗೆ ಬೇಕಾದರೆ ಹಾಗೆ ಹೇಳೋಣ. ಆದರೆ ನಮ್ಮನಮ್ಮಲ್ಲೇ ಕುರಿತು ಅದನ್ನು ಮಾತನಾಡುವಾಗ ನಮಗೆ ತಿಳಿಯುತ್ತದೆ : ಅದು ನಾವು ಅಷ್ಟೇನೂ ಹೆಮ್ಮೆಪಟ್ಟುಕೊಳ್ಳುವಂತಹ ವಿಚಾರವಾಗಿಲ್ಲ ಎಂದು.

ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಅದೇ ಹೆಸರಿನ ಲೇಖನ, ಪುಟ ೮

೬೭೫

ಆಹಾರ ಲಭಿಸದಿದ್ದುದರಿಂದ ಹೊಟ್ಟೆಗಿಲ್ಲದೆ ಸತ್ತರೆ ಅದನ್ನು ನಿರಶನವ್ರತವೆಂದಾಗಲಿ ಪ್ರಯೋಪವೇಶವೆಂದಾಗಲಿ ವಿಷಯ ತಿಳಿದವರಾರೂ ಕರೆಯುವುದಿಲ್ಲ. ಉಣಿಸು ಬಳಿಸಾರಿ ಉಣ್ಣೆಂದು ಬೇಡುತ್ತಿದ್ದರೂ ಹಸಿವೆಯ ಯಮಯಾತನೆಯನ್ನು ತಡೆದು ಕೊಂಡು ವ್ರತಾಚಾರಿಯಾಗಿರುವಾತನೆ ನಿಜವಾದ ವ್ರತಿ. ಪ್ರಲೋಭದ ಸೆಳೆತವಿಲ್ಲ ದಿದ್ದರೆ ಇಂದ್ರಿಯ ನಿಗ್ರಹವೂ ಜಡರೂಢಿಯಾಗಬಹುದು ; ಪಾತಿವ್ರತ್ಯವೂ ಪದ್ಧತಿಯಾಗಬಹುದು ; ವ್ಯಾಕುಲತೆಯೂ ಆಕಳಿಸಬಹುದು.

ತಪೋನಂದನ, ಮಹಾಶ್ವೇತೆಯ ತಪಸ್ಸು, ಪುಟ ೨೩-೪

೬೭೬

ದುಡಿಮೆಯನ್ನೆ ಕಡಮೆಗೊಳಿಸಿ :
ತೆರಿಗೆ ಗೋಳಿದೇಕೆ ?
ಕೊಡವ ಮೊದಲೆ ಕಡಿದುಕೊಳ್ಳಿ :
ಕೊಟ್ಟು ಕೊರೆವುದೇಕೆ ?
ತೆರಿಗೆಯಿರುವ ನಾಕವೂ
ನರಕಲೋಕವೆ !
ತೆರಿಗೆಯಿರದ ನರಕವೂ
ನಿಜದಿ ನಾಕವೆ !

ಪ್ರೇತಕ್ಯೂ, ತೆರಿಗೆನಾಯಿ, ಪುಟ ೪೬

೬೭೭

ಗಿಡದ ಪ್ರಾಣಸರ್ವಸ್ವದ ಸಾರಶಿಶುವಾಗಿ ಹೊಮ್ಮುತ್ತದೆ ಹೂವು. ಅದು ಗಿಡದ ಮಹೋದ್ದೇಶದ ಮನೋಹರಮೂರ್ತಿ. ಅದನ್ನು ಗಿಡದ ಬಾಳಿನ ಸಾರ ಸರ್ವದ ಚಾರುನಿಧಿ ಎಂದೂ ಕರೆಯಬಹುದು. ಏಕೆಂದರೆ ಗಿಡ ಮಡಿದ ಮೇಲೆಯೂ ಅದರ ಪ್ರಕೃತಿಯನ್ನು ಅನಂತವಾಗಿ ಮುಂದೆ ಸಾಗಿಸುವ ಬೀಜ ಆ

ಹೂವಿನಿಂದ ಉಂಟಾಗುತ್ತದೆ. ಆ ಬೀಜದ ಅನಂತರಾಳದಲ್ಲಿ, ಜೀವದ ಪರಿಣಾಮ ಪಥದಲಿ ಗಣನೆಯಿಲ್ಲದ ಗಿಡಗಳು ಕಲಿತ ವಿದ್ಯೆ ಮತ್ತು ಪಡೆದ ಅನುಭವಗಳೆಲ್ಲ, ನಮ್ಮ ಬುದ್ಧಿಗೆ ಅಗೋಚರವಾದ ರೀತಿಯಲ್ಲಿ, ಪ್ರಚ್ಛನ್ನ ಸ್ಮೃತಿರೂಪದಲ್ಲಿ ಅವ್ಯಕ್ತವಾಗಿರುತ್ತವೆ. ನಿಜವಾದ ನವೀನ ಮಾನವನು ಆ ಹೂವಿನಂತಿರಬೇಕು : ಮಾನವನ ಪ್ರಾಚೀನ ಸಂಸ್ಕೃತಿಯ ಸಾರಸರ್ವಸ್ವಕ್ಕೂ ಚಿರನಿಧಿಯಾಗಿ, ಆಗಾಮಿಕ ಸಂಸ್ಕೃತಿಗೆ ಬೀಜರೂಪವಾಗಿ, ಅದ್ಯತನ ಜೀವನದ ವಿದ್ಯೆ ಕಲೆ ಸಂಸ್ಕೃತಿಗಲ್ಲಿ ಸಿದ್ಧಿಹೊಂದಿ ಅದರ ತುಂಗಶಿಖರದಲ್ಲಿ ನಿಂತಿರಬೇಕು. ಎಂದರೆ ಕವಿ ಅಥವಾ ರಸಋಷಿಯಾಗಿರಬೇಕು.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೪೪-೫

೬೭೮

"ಹೆಸರಿನಲ್ಲೇನಿದೆ?" ಎಂದು ಯಾರಾದರೂ ಕೇಳಬಹುದು. ನಾನು ಹೇಳುತ್ತೇನೆ, "ಹೆಸರಿನಲ್ಲಿ ಎಲ್ಲವೂ ಇದೆ" ಎಂದು.

ವಿಚಾರ ಕ್ರಾಂತಿಗೆ ಆಹ್ವಾನ, ಕರ್ಣಾಟಕ : ಇಟ್ಟ ಹೆಸರು ಕೊಟ್ಟ ಮಂತ್ರ, ಪುಟ ೮೯

೬೭೯

ಮುನ್ನಮಾಲೋಚಿಸಿದ ತೆರದಿ
ನೆಗಳಲಾರೇನ್ ಸಮರ್ಥರೆ, ಸಿದ್ಧಿಯೊಳ್ ಮುಳುಗೆ
ಬುದ್ಧಿ ? ಇಂತೆಯೆ ನಡೆವೆನಿಂತೆಯೆ ನುಡಿವೆನೆಂಬ
ಕೃತಕ ಮರ್ಯಾದೆಯನಿತುಂ ಮರೆತುದಾನಂದ
ಸಹಜವರ್ತನೆಗೆ ಶರಣಾಗಿ !

ಶ್ರೀ ರಾಮಾಯಣ ದರ್ಶನಂ, ತಪಸ್ಸಿದ್ಧಿ, ಪುಟ ೮೭೩

೬೮೦

....ಈ ವಿಚಿತ್ರ ಬೇಟೆಯಲ್ಲಿ (ಈ ಸಂದರ್ಭದಲ್ಲಿ) ಮೊದಲು ಗುಂಡು ತಗುಲಬೇಕಾದದ್ದು ಹುಲಿಯ ತಲೆಗಲ್ಲ, ನಿಮ್ಮ ತಲೆಗೇ ! ತಲೆ.....ತಲೆ.....ತಲೆ, ಮೊದಲು ತಲೆಯಲ್ಲಿರುವ ಮೆದುಳನ್ನು ಕ್ಲೀನ್ ಮಾಡಬೇಕು. ಅವರಿಗಲ್ಲ. ಆ ಪುರೋಹಿತ ವರ್ಗದವರಿಗಲ್ಲ. ನಿಮಗೆ !

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೭೩

೬೮೧

ಮೌನವಿದು ಬಿರಿದೊಡೆದು ಬಹುಗಾನ ತಾನಾಗಿ
ಪ್ರವಹಿಸಲಿ ಸುಪ್ರೇಮದಮರಸಿಂಧು !
ನಿಶ್ಚಲತೆ ನರ್ತಿಸಲಿ ಪ್ರೇಮತಾಂಡವನಾಗಿ ;
ಬಾರಯ್ಯ, ಚಿರ ರಸ ನವೀನ ಬಂಧು !

ಪ್ರೇಮ ಕಾಶ್ಮೀರ, ಏಕಾಂತವಿದು ಸಹಿಸಲಾರದಿದೆ, ಪುಟ ೧೫

೬೮೨

ಕೇಳ್,
ತಾಯ್ಮಡಿಲೊಳಾರಾದೊಡೇಂ ತಾಂ ಬರಿ ಶಿಶುಗಳಲ್ತೆ!

ಶ್ರೀ ರಾಮಾಯಣ ದರ್ಶನಂ, ಶಬರಿಗಾದನು ಅತಿಥಿ ದಾಶರಥಿ, ಪುಟ ೨೮೮

೬೮೩

ಹೆತ್ತಮ್ಮಗಿಂ ಮತ್ತೊಳರೆ? ತಾಯಹಳೆ ರಂಭೆ?

ಕೃತ್ತಿಕ, ಕವಿಶೈಲ ೧, ಪುಟ ೮

೬೮೪

ವೈಯಾರಿಯಂತೆ, ಕನ್ನಂಬಾಡಿ,
ಚೆಲುವೆ ನೀನಪ್ಪೊಡೇನ್? ಇದು ಪಾಣ್ಬೆಯರ ಗಾಡಿ.
ಗರತಿ ಗೌರವವಿಲ್ಲದಿದು ರುಚಿ ಲಘುತ್ವಕ್ಕೆ.
ಕಲೆಯ ಪಾಂಗಿನಿತಿಲ್ಲವಿಲ್ಲಿ: ತಿರುಗತ್ತಕಡೆ;
ನೋಡುವಂ ನೀರು ನಿಂತಾ ಗಭೀರವನು; ನಡೆ!

ಕೃತ್ತಿಕೆ, ಕನ್ನಂಬಾಡಿ: ಬೃಂದಾವನ, ಪುಟ ૩૯

೬೮೫

ಬಿಂಕಕ್ಕೆ ಡೊಳ್ಳೀವುದದು ವಿದ್ಯೆಯೆ? ಅವಿದ್ಯೆ!
ತವಿಪುದಾವುದೊ ಅಹಂಕಾರಮಂ ಅದು ವಿದ್ಯೆ;
ಮಿಕ್ಕುದೆಲ್ಲಂ ಅವಿದ್ಯೆ!

ಬೆರಳ್‌ಗೆ ಕೊರಳ್, ಪಾತ್ರ ದ್ರೋಣ, ಪುಟ ೩೨

೬೮೬

ಪ್ರವೃತ್ತಿ ಪ್ರೇರಕವಾದ ಆಧಾರ ಸ್ಥಂಭಗಳೆಲ್ಲಾ ಉರುಳಿದರೆ ಮುಪ್ಪು ಬೇಸತ್ತೇ ಸತ್ತು ಹೋಗುತ್ತದೆ.

ಮಲೆಗಳಲ್ಲಿ ಮದುಮಗಳು, ಪುಟ ೪೭-೮

೬೮೭

ದೊಡ್ಡವರ ಮಹಿಮೆ ದೊಡ್ಡ ದೊಡ್ಡ ಕಾರ್ಯಗಳಲ್ಲಿ ಹೇಗೆ ಪ್ರಕಾಶಕ್ಕೆ ಬರುವುದೊ ಹಾಗೆಯೆ ಅವರು ಮಾಡುವ ಸಣ್ಣ ಸಣ್ಣ ಕಾರ್ಯಗಳಿಂದಲೂ ಅದು ಬಯಲಿಗೆ ಬೀಳುವುದು.

ಸ್ವಾಮಿ ವಿವೇಕಾನಂದ, ಪುಟ ೨೩೮

೬೮೮

ದಾಸ್ಯಮತಿ ಸೈತಾನ್; ನಿರಂಕುಶಮತಿಯೆ ಯೇಸು

ಕೃತ್ತಿಕೆ, ಚಂದ್ರಗ್ರಹಣ ಮತ್ತು ಸಾಕ್ರೆಟೀಸ್, ಪುಟ ೫೬

೬೮೯

ನೀ ಹೇಳೆ ನಾ ಬರೆದೆ,
ನೀ ಹಾಡೆ ನಾನೊರೆದೆ!
ನನ್ನ ತಪ್ಪೇನು ?
ನೀ ಕುಣಿಸೆ ನಾ ಕುಣಿದು,
ನೀ ನಲಿಸೆ ನಾ ನಲಿದೆ,
ನನ್ನ ತಪ್ಪೇನು ?

ಕಲಾಸುಂದರಿ, ಕವಿತೆಯಲ್ಲಿ, ಪುಟ ೨೬

೬೯೦

ಇಂಗ್ಲಿಷ್ ಭಾಷೆಯ ಯೋಗ್ಯತೆ, ಅದರ ವ್ಯಾಪ್ತಿ, ಅದರಿಂದೊದಗುವ ಪ್ರಜ್ಞಾವೈಶಾಲ್ಯ, ಅದು ನಮ್ಮಲ್ಲಿ ಪ್ರಚೋದಿಸಿರುವ ವಿಚಾರ ಬುದ್ಧಿ, ಅದರಿಂದ ಮುಂದೆ ಎಂದೆಂದಿಗೂ ನಮಗೆ ಲಭಿಸಲಿರುವ ಸಂಪರ್ಕ ಸಹಾಯ ಮೊದಲಾದವುಗಳನ್ನೆಲ್ಲ ಅರಿತವರಾರೂ ಬ್ರಿಟಿಷ್‌ರನ್ನು ಓಡಿಸಿದಂತೆ ಇಂಗ್ಲಿಷ್ ಭಾಷೆಯನ್ನೂ ಓಡಿಸಬೇಕೆಂದು ಹೇಳುವ ಅವಿವೇಕಕ್ಕೆ ಹೋಗಲಾರರು. ಹಾಗೆ ಹೇಳುವವರನ್ನು ಪ್ರಚ್ಛನ್ನ ದೇಶ ದ್ರೋಹಿಗಳೆಂದು ಕರೆಯಬೇಕಾಗುತ್ತದೆ. ಆದ್ದರಿಂದ ಇಂಗ್ಲಿಷ್ ನಮ್ಮೊಡನೆ ಉಳಿಯಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿರುವುದಕ್ಕೆ ಅವಕಾಶವೆ ಇಲ್ಲ.

ಷಷ್ಠಿನಮನ, ನಮಗೆ ಬೇಕಾಗಿರುವ ಇಂಗ್ಲಿಷ್, ಪುಟ ೭೫

೬೯೧

ಕವಿತೆ ವಿಶ್ವದ ಶಿವ ಸತ್ಯ ಸೌಂದರ್ಯಗಳನ್ನು ಅನುಭವಿಸುವ ರಸಿಕನ ಎದೆಯ ವೀಣೆಯಿಂದ ಮೂಡಿ ಬರುವ ಮಂಜುಳಗಾನ! ಅದು ನಮ್ಮ ಹೃದಯವನ್ನು ವಿಕಸಿತವಾಗುವಂತೆ ಮಾಡಿ ಜಗತ್ತನ್ನು ನಮಗೆ ಒಲಿಸುತ್ತದೆ. ಅದರ ದಿವ್ಯ ಸ್ಪರ್ಶದಿಂದ ಸರ್ವವೂ ಮನೋಹರವಾಗಿ ಪರಿಣಮಿಸುತ್ತದೆ; ಮಿಂಚಿ ಮಾಯ ವಾಗುವ ಪರಮಾನಂದವು ಅವಿಚ್ಛಿನ್ನವಾಗುವಂತೆ ಮಾಡುತ್ತದೆ. ಮೃತ್ಯುರೋಗ ಮೊದಲಾದ ಭಯಂಕರ ವ್ಯಾಪಾರಗಳೂ ಕೂಡ ಕವಿತೆಯ ಮುಂದೆ ಸೌಮ್ಯವಾಗುತ್ತವೆ. ವಿಶ್ವವೆಂಬ ಮಹಾ ಸ್ವರಮೇಳದಲ್ಲಿ ಅವುಗಳೆಲ್ಲ ಹೋರಾಟವಿಲ್ಲದೆ ಸಂಗಮಿಸಿ ಹರಿಯುತ್ತವೆ. ಹೆಚ್ಚೇನು? ಕವಿತೆ ನಮ್ಮ ಬಾಳಿಗೆ ಬಹು ಮುಖ್ಯವಾಗಿರುವ ಆನಂದದ ಆಗರ; ಶಾಂತಿಯ ನೆಲೆಮನೆ.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೧೦

೬೯೨

ಇಂದಿನ ಪ್ರಪಂಚದ ಸಮಸ್ಯೆಗಳೆಲ್ಲ ಎರಡು ಪ್ರಧಾನ ಚಿತ್ತವೃತ್ತಿಗಳ ಮೇಲೆ ನಿಂತಂತಿವೆ: ಒಂದು ಯುದ್ಧಭೀತಿ; ಮತ್ತೊಂದು ಶಾಂತಿಪ್ರೀತಿ. ಗಮನಿಸಬೇಕಾದ ಮತ್ತೊಂದು ವಿಚಿತ್ರವೆಂದರೆ, ಒಂದರಿಂದ ಮತ್ತೊಂದು ಉದ್ಭವಿಸಿ, ಒಂದರಿಂದ

ಮತ್ತೊಂದು ಪ್ರೇರಿತವಾಗಿ, ಒಂದು ಮತ್ತೊಂದಕ್ಕೆ ಕಾರಣವಾಗಿ, ಒಂದಕ್ಕೊಂದು ಮಾರಣವಾದಂತಿದೆ!

ವಿಭೂತಿ ಪೂಜೆ, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪುಟ ೫೭

೬೧೩

ಸ್ವಾತಂತ್ರ್ಯ ಪೂರ್ವದಲ್ಲಿ ರಾಜಕೀಯವೂ ತ್ಯಾಗಶೀಲವಾಗಿತ್ತು. ಸ್ವಾತಂತ್ರ್ಯೋತ್ತರದಲ್ಲಿ ಅದು ಒಂದು ರೀತಿಯ ಭೋಗಾಭಿಲಾಷೆಯಾಗಿ ಪರಿಣಮಿಸುತ್ತಿದೆ. ಅಂದು ರಾಜಕೀಯಕ್ಕೆ ಪ್ರವೇಶಿಸುವುದೆಂದರೆ, ಮುಖ್ಯವಾಗಿ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗಾಂಧೀಜಿ ಅಂತಹವರ ನೇತೃತ್ವದಲ್ಲಿ ತಿತಿಕ್ಷಾ ಜೀವನ ನಡೆಸುವುದಾಗಿತ್ತು, ಕಷ್ಟ ಸಂಕಟ ಮನಃಕ್ಲೇಶ ತ್ಯಾಗ ಕಾರಾಗೃಹವಾಸ ದೈಹಿಕಶ್ರಮ ಇತ್ಯಾದಿ ರೂಪವಾದ ಸಾಧನ ರಂಗದಲ್ಲಿ ವ್ಯಕ್ತಿ ಸಾಧಕನಾಗಬೇಕಾಗಿತ್ತು. ಇಂದು ರಾಜಕೀಯಕ್ಕೆ ಪ್ರವೇಶಿಸುವುದೆಂದರೆ ಸ್ವಾರ್ಥತೆ, ಸ್ವಪ್ರತಿಷ್ಠೆ, ಸ್ವಜಾತಿ, ಸ್ವಪಕ್ಷಗಳ ಉದ್ಧಾರದ ನೆವದಲ್ಲಿ ಪಕ್ಷಪ್ರತಿಪಕ್ಷಗಳನ್ನು ಕಟ್ಟಿಯೋ ಸೇರಿಯೋ ಎದುರಾಳಿಯನ್ನೂ ಎದುರು ಪಕ್ಷವನ್ನೂ ಸದೆ ಬಡಿಯುವುದು, ಏನಕೇನ ಪ್ರಕಾರೇಣ 'ಅಖಿಲ ಭಾರತ ಧುರೀಣನಾಗುವುದು, ಅಧಿಕಾರ ಧನ ಮಾನ ಸಂಪಾದನೆ ಇತ್ಯಾದಿ, ಇತ್ಯಾದಿ,

ಷಷ್ಟಿನಮನ, ಕೊಲಂಬೊ ಇಂದ ಆಲ್ಮೋರಕೆ, ಪುಟ ೨೨೨

೬೧೪

ಲೋಕದಲ್ಲಿ ನಾವು ಒಂದು ಸನ್ನಿವೇಶದಲ್ಲಿ ಭಾಗಿಗಳಾದಾಗ ಸ್ವಾರ್ಥ ಮೂಲವಾದ ರಾಗದ್ವೇಷಾದಿ ಪ್ರತಿಕ್ರಿಯೆಗಳಿಂದ ದೂರವಾಗಲೂ ಪಾರಾಗಲೂ ಸಾಧ್ಯವಾಗುವುದಿಲ್ಲ. ಅಲ್ಲಿ ನಮ್ಮ ಪ್ರತಿಕ್ರಿಯೆ ಅನಿವಾರ್ಯವಾಗಿ ಸ್ಥಾಯಿಭಾವಾತ್ಮಕವಾಗಿ ಲೌಕಿಕ ಕಾವ್ಯರೂಪಕ್ಕೆ ತಿರುಗುತ್ತದೆ. ನಿಸ್ಸಂಗವಾದ ಅಥವಾ ಸಂಗ ದೂರವಾದ ಧ್ಯಾನದ ಜಿಹ್ವೆಯಲ್ಲಿ ಅದು ಚರ್ವಿತವಾಗುವುದಕ್ಕೆ ಅವಕಾಶವೆ ಇರುವುದಿಲ್ಲ. ಆದ್ದರಿಂದ ಅಲ್ಲಿ ಭಾವೋದ್ರೇಕಕ್ಕಲ್ಲದೆ ರಸಾನುಭವಕ್ಕೆ ಎಡೆ ಇರುವುದಿಲ್ಲ. ಕಲಾಕೃತಿಯಲ್ಲಿ ಅಂತಹ ಲೌಕಿಕ ಪ್ರಯೋಜನ ಅಪೇಕ್ಷೆ ನಿರರ್ಥಕ; ಆದ್ದರಿಂದಲೆ ಅಲ್ಲಿ ಸಾಕ್ಷಿ ಪ್ರಜ್ಞೆಯ ಸಂಗದೂರತೆ ಸುಲಭಸಾಧ್ಯ; ಅಷ್ಟೇ ಅಲ್ಲ, ಸ್ವತಃ ಸಿದ್ಧ ಮತ್ತು ಅನಿವಾರ್ಯ ಎಂದೂ ಹೇಳಿದರೆ ತಪ್ಪಾಗುವುದಿಲ್ಲ.

ರಸೋ ವೈ ಸಃ, ರಸೋ ವೈ ಸಃ, ಪುಟ ೧೨೫

೬೧೫

ವಿರಾಟ್ ಅಹಂಕಾರವಿರುವಾಗಲೇ ವಿರಾಟ್ ಮನದಲ್ಲಿ ಅನಂತ ಭಾವತರಂಗವು ತೋರುವುದು. ಆ ಮಹಾ ಭಾವತರಂಗದಲ್ಲಿ ಸಣ್ಣ ಸಣ್ಣ ಭಾವತರಂಗಗಳು ತೋರಿದಾಗಲೇ ನಾವು ಬಹಿರ್ಜಗತ್ತನ್ನೂ ಕ್ಷುದ್ರಕ್ಷುದ್ರ ಅಹಂಕಾರಗಳನ್ನೂ ಅವುಗಳ ಪರಸ್ಪರ ಕ್ರಿಯೆ ಪ್ರತಿಕ್ರಿಯೆಗಳನ್ನೂ ನೋಡುತ್ತೇವೆ. ಸಣ್ಣ ಸಣ್ಣ "ನಾನು"ಗಳು 'ದೊಡ್ಡ ನಾನನ್ನು" ನೋಡದಿರುವಾಗ ಭ್ರಾಂತಿಯಿಂದ ತಾವು ಸ್ವತಂತ್ರರೆಂದು ತಿಳಿಯುತ್ತೇವೆ.

"ದೊಡ್ಡ ನಾನನ್ನು"ನೋಡಲು ಎಲ್ಲವೂ ಅದರ ಕ್ರಿಯೆ ಎಂಬುದು ಗೊತ್ತಾಗುತ್ತದೆ. ಈ ಸಣ್ಣ "ನಾನು"ಗಳ ಭ್ರಾಂತಿಯೆ ಅವಿದ್ಯೆ ಎಂದು ಶಾಸ್ತ್ರದಲ್ಲಿ ಪ್ರಸಿದ್ಧವಾಗಿದೆ. ನಿಸ್ತರಂಗ ವಿರಾಟವೆ ನಿರ್ಗುಣ ಬ್ರಹ್ಮ; ಸತರಂಗ ವಿರಾಟವೆ ಸಗುಣ ಬ್ರಹ್ಮ. ನಿರ್ಗುಣ ಸಗುಣಗಳ ಮಧ್ಯೆ ಇರುವ ವಿರಾಟ್ ಅಹಂಕಾರವೆ "ಭಾವಮುಖ".

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೫೭

೬೯೬

ಬಾ ನೀರೆ, ಬಾ ಕವಿತೆ
ಕಬ್ಬಿಗನ ಕಣ್ಣೆ!
ಸೌಂದರ್ಯವಿಹುದಿಲ್ಲಿ,
ಸ್ವಾತಂತ್ರ್ಯವಿಹುದಿಲ್ಲಿ,
ಏಕಾಂತವಿಹುದಿಲ್ಲಿ,
ಸಂಗೀತವಿಹುದಿಲ್ಲಿ,
ಮಲೆನಾಡಿನಲ್ಲಿ!

ಷೋಡಶಿ, ರಸಋಷಿ, ಪುಟ ೬೨

೬೯೭

...ರಾಜಕೀಯ ಆರ್ಥಿಕ ಸಾಮಾಜಿಕ ಪ್ರಪಂಚಗಳಲ್ಲಿ ಕ್ರಾಂತಿಕಾರಕವಾದ ಸಿದ್ಧಾಂತಗಳೂ ಪ್ರಯೋಗಗಳೂ ಮಿಂಚಿನ ವೇಗದಿಂದ ಸಾಗುತ್ತಿರುವ ಈ ಸಮಯದಲ್ಲಿ ಹೊಸ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ, ಹೊಸ ತತ್ತ್ವಗಳನ್ನು ಒಪ್ಪಿಕೊಳ್ಳುವಂತೆ, ಹೊಸರೀತಿಯ ತ್ಯಾಗಗಳಿಗೆ ಸಿದ್ಧವಾಗುವಂತೆ, ಹಳೆಯ ದಂಭ ದರ್ಪಾಚಾರಗಳನ್ನು ತ್ಯಜಿಸಿ ಹೊಸ ನಿಯಮಗಳನ್ನು ಮರ್ಯಾದೆಯಿಂದ ಅಂಗೀಕರಿಸುವಂತೆ ಬುದ್ಧಿಯನ್ನೂ ಹೃದಯವನ್ನೂ ತಿದ್ದಬೇಕಾದುದು ಅಗತ್ಯ. ಈ ಕೆಲಸವನ್ನು ಸಾಧಿಸುವುದರಲ್ಲಿ ಕೆಲವು ರಾಷ್ಟ್ರಗಳು ಮೊದಮೊದಲು ಲೇಖನಿಗಿಂತಲೂ ಹೆಚ್ಚಾಗಿ ಕತ್ತಿಯನ್ನೆ ನೆಚ್ಚಿ, ಕಾರ್ಯ ಸಾಧನೆಯಲ್ಲಿ ಸ್ವಲ್ಪಮಟ್ಟಿಗೆ ಶೀಘ್ರವಿಜಯಿಗಳಾದಂತೆ ತೋರಿದರೂ, ಅಪಖ್ಯಾತಿಗೂ ಲೋಕನಿಂದೆಗೂ ಸಾಮೂಹಿಕ ಸಂಶಯಕ್ಕೂ ಪಕ್ಕಾಗಿ, ಕೊನೆಗೆ ಲೇಖನಿಯ ನೆರವನ್ನೆ ನೆಮ್ಮಬೇಕಾಯಿತು.

ಷಷ್ಠನಮನ, ಸಂಸ್ಕೃತಿ ಕರ್ಣಾಟಕ, ಪುಟ ೧೨

೬೯೮

ಕವಿಗೆ ಕರ್ಣಂ ಪ್ರಮಾಣಂ
ವ್ಯಾಕರಣ ಮಲ್ತು:
ವ್ಯಾಕರಣಮೇಕೆಂಬೆಯೇಂ?
ಮರೆವುದಕೆ ಕಲ್ತು!

ಮಂತ್ರಾಕ್ಷತೆ, ಪುಟ ೧೨

೧೯೯

ಯಾವಾತನು ತನ್ನ ಪುಣ್ಯವಶದಿಂದ ಅಂತರಾತ್ಮನ ದಿವ್ಯವಾಣಿಯ ಮಂಜುಳಗಾನಕ್ಕೆ ನಿಮಿತ್ತಮಾತ್ರವಾದ ಕೊಳಲಾಗುವನೋ ಆತನೇ ಕವಿ. ಆ ಮಹಿಮಾನಂದಮಯವಾದ ವಿಶ್ವವಾಣಿ ತನ್ನಿಂದ ಎಡೆಬಿಡದೆ ತಡೆಯಿಲ್ಲದೆ ಹೊರಸೂಸುವಂತೆ, ತನ್ನ ಅಂತರಂಗವನ್ನು ಪರಿಶುದ್ಧತೆ ಎಂಬ ಗಂಗೆಯ ಅಮಲತೀರ್ಥಜಲದಲ್ಲಿ ಸದಾ ಮೀಯಿಸುವುದೇ ಕಬ್ಬಿಗನ ಸಾಧನೆಯಾಗಿರಬೇಕು!

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೧೧

೨೦೦

ನೆನಪು ಬಾಳಿನ ಬುತ್ತಿ; ಅನುಭವಗಳ ಅಕ್ಷಯ ನಿಧಿ. ಜೀವನಯಾತ್ರೆ ಬೇಸರವಾದಾಗ, ಜೀವನದಲ್ಲಿ ನವೀನತೆ ಮೊಳೆಯದೆ ಮಂಕು ಕವಿದಾಗ, ಜೀವನದಲ್ಲಿ ಬಿಸಿಲ ಬೇಗೆ ಹೆಚ್ಚಿ ಬಳಲಿದಾಗ, ಹಾದಿಯ ಬಳಿ ದಟ್ಟವಾಗಿ ಸೊಂಪಿಡಿದು ಬೆಳೆದ ಮರದ ತಣ್ಣೆಳಲಿನ ತಂಪಿನಲ್ಲಿ, ಮೊರೆದು ಹರಿಯುವ ತೊರೆಯ ಮಂಜುಳನಾದವನ್ನು ಆಲಿಸುತ್ತಾ ಆ ಬುತ್ತಿಯನ್ನು ಬಿಚ್ಚಿ ಉಣಬಹುದು; ತಣಿಯಬಹುದು! ದಣಿವಾರಿಸಿಕೊಳ್ಳಬಹುದು.

ಮಲೆನಾಡಿನ ಚಿತ್ರಗಳು, ಮುನ್ನುಡಿ, ಪುಟ iii

೨೦೧

ಭೂಮದ ಅವತರಣವಿಲ್ಲದೆ ಸೌಂದರ್ಯದ ಉತ್ಕರ್ಷ ಮಾತ್ರದಿಂದಲೆ ಭವ್ಯತೆ ಸಿದ್ಧಿಸುವುದಿಲ್ಲ. ಭವ್ಯತೆ ಸೌಂದರ್ಯದ ಒಂದು ವಿಶೇಷ ಪ್ರಕಾರ ಎನ್ನುವುದಕ್ಕಿಂತಲೂ ಸೌಂದರ್ಯದಲ್ಲಿ ಆವಿರ್ಭವಿಸುವ ಭೂಮದ ಒಂದು ವಿಶೇಷ ಪ್ರಕಾರ ಎನ್ನುವುದ ಹೆಚ್ಚಿನ ಸತ್ಯವಾಗುತ್ತದೆ. ಭವ್ಯತಾ ಆವಿರ್ಭಾವಕ್ಕೆ ಸೌಂದರ್ಯ ಒಂದು ಅನಿವಾರ್ಯವೂ ಆವಶ್ಯಕವೂ ಆದ ಮೂಲಭಿತ್ತಿಯಾಗಿರಲೇಬೇಕಾಗುತ್ತದೆ. ಸೌಂದರ್ಯದ ಚೌಕಟ್ಟಿನ ಹೊರಗೆ ನಿಲ್ಲುವ ಭೂಮದ ಅನುಭೂತಿ ಎಷ್ಟು ಮಹಿಮಾಸ್ಪದವಾದುದಾಗಿರಲಿ ಎಷ್ಟು ಪವಿತ್ರವಾದುದಾಗಿರಲಿ ಎಂತಹ ಪರಮ ಪುರುಷಾರ್ಥ ಸಾಧಕವಾದು ದಾಗಿರಲಿ ಅದು ಭವ್ಯತೆ ಆಗುವುದಿಲ್ಲ.

ರಸೋ ವೈ ಸಃ, ಭೂಮಾನುಭೂತಿ, ಪುಟ ೧೦೬

೨೦೨

ದೇವರ ರಾಜ್ಯದವರಾದ ಮಕ್ಕಳು ಸೈತಾನನ ಅನುಯಾಯಿಗಳಾದ ದೊಡ್ಡವರ ಮತ ಭೇದವನ್ನೇನೆಂದು ಬಲ್ಲರು! ಮಕ್ಕಳಿಗೆ ಪ್ರೇಮವೇ ಜಾತಿಯನ್ನು ನಿರ್ಣಯಿಸುವ ಸಾಧನ. ಯಾರು ಹೆಚ್ಚಾಗಿ ತಮ್ಮನ್ನು ಪ್ರೀತಿಸುವುದಿಲ್ಲವೋ ಅವರೇ ಅಧಮಜಾತಿಯವರು!

ಮಲೆನಾಡಿನ ಚಿತ್ರಗಳು, ಮಲೆನಾಡಿನ ಗೋಪಾಲಕರು, ಪುಟ ೭೨

೨೦೩

ಕವಿತೆ ಅಥವಾ ಸಾಹಿತ್ಯ ಸ್ವರೂಪತಃ ಕೆಟ್ಟದ್ದೂ ಅಲ್ಲ, ಒಳ್ಳೆಯದೂ ಅಲ್ಲ: ಅದೊಂದು ಶಕ್ತಿ, ಪ್ರಯೋಗಿಸುವವರ ಮತ್ತು ಉಪಯೋಗಿಸುವವರ ಪ್ರಜ್ಞಾನುಗುಣವಾಗಿ ಪರಸ್ಪರ ವಿರುದ್ಧವಾದ ಫಲಿತಾಂಶಗಳನ್ನು ಉಂಟುಮಾಡಬಲ್ಲದು. ಕಾಲದಿಂದ ಕಾಲಕ್ಕೆ ಅದನ್ನು ಪರಿಶೀಲಿಸಿ ಆ ಶಕ್ತಿ ನಮ್ಮನ್ನು ತಪ್ಪುದಾರಿಗೆ ಕರೆದೊಯ್ಯದಂತೆ ನೋಡಿಕೊಳ್ಳಬೇಕಾಗುತ್ತದೆ. ಲೋಕಹೃದಯದ ಆಚಾರ್ಯಪ್ರಜ್ಞೆ, ಆ ಪ್ರಜ್ಞೆ ವ್ಯಕ್ತಿ ವ್ಯಕ್ತಿಗಳಲ್ಲಿ ಪ್ರಕಟಗೊಂಡರೂ ಅದು ವ್ಯಷ್ಟಿನಿಷ್ಠವಾಗಿರದೆ ಸಮಷ್ಟಿ ರೂಪದಲ್ಲಿ ಅಭಿವ್ಯಕ್ತವಾಗುತ್ತದೆ. ರಾಜ್ಯ ರಾಜ್ಯಗಳಲ್ಲಿ ಪ್ರಾತಿನಿಧಿಕವಾಗಿರುವ ಇಂತಹ ಮಹಾಸಭಾ ಸಂಸ್ಥೆಗಳು ಆ ಆಚಾರ್ಯ ಪ್ರಜ್ಞೆಯ ಮುಖಪಾತ್ರಗಳಾಗುತ್ತವೆ.

ಮನುಜಮತ ವಿಶ್ವಪಥ, ಬಲಾತ್ಕಾರದ ಇಂಗ್ಲಿಷ್: ಪ್ರಚ್ಛನ್ನ ಭ್ರಷ್ಟಾಚಾರ, ಪುಟ ೪

೨೦೪

ಕೊನೆಗಂಡಿತೊ ಓರೊರ್ವರ ಗರ್ವದ ಕಾಲ,
ಇದು ಸರ್ವರ ಕಾಲ!
"ಸರ್ವೋದಯ!" "ಸರ್ವೋದಯ!"
ಸರ್ವೋದಯ ಯುಗಮಂತ್ರ!
ಸರ್ವೋದಯವೇ ಸ್ವಾತಂತ್ರ್ಯದ ಶ್ರೀತಂತ್ರ!

ಇಕ್ಷುಗಂಗೋತ್ರಿ, 'ಶ್ರೀಸಾಮಾನ್ಯ'ರ ದೀಕ್ಷಾಗೀತೆ, ಪುಟ ೧

೨೦೫

ನನ್ನ ಕವಿತೆಯ ನಾನು ದಿನವೂ
ಮುಗಿಲಿನಲಿ ಮೈ ತಬ್ಬುವೆ!
ಮಿಂಚುವೊಳೆಯಲಿ ಮುಳುಗಿ ಮಿಂದು,
ಸಿಡಿಲಿನೂಟವನುಂಡು ಬಂದು
ನನ್ನವಳ ನಾ ತಬ್ಬುವೆ!

ಕಲಾಸುಂದರಿ, ನನ್ನ ಕವಿತೆ, ಪುಟ ೧೩

೨೦೬

ಪಡೆವುದೆಲ್ಲಂ ಕೊಡುವುದಕ್ಕಲ್ತೆ, ಆರ್ಯ? ಮೇಣ್,
ಪೂರ್ಣಮಂ ಕೊಡದೆ ಪಡೆದಪವೆಂತು ಪೂರ್ಣಮಂ?

ಬೆರಳ್ ಗೆ ಕೊರಳ್, ಪಾತ್ರ ಏಕಲವ್ಯ, ಪುಟ ೪೮

೨೦೭

ಶಕ್ತಿಯು ದೇಹದ ಕರ್ತವ್ಯ;
ಭಕ್ತಿಯ ಹೃದಯದ ಕರ್ತವ್ಯ;
ಮುಕ್ತಿಯು ಆತ್ಮದ ಕರ್ತವ್ಯ!

ಹೊನ್ನಹೊತ್ತಾರೆ, ಮಂತ್ರಾಕ್ಷತೆ, ಪುಟ ೬೦

೭೦೮

ನಿಜವಾದ ತಾರುಣ್ಯ ಬರಿಯ ಸಂವತ್ಸರಗಳಿಂದ ನಿರ್ಣಯವಾಗುವ ವಸ್ತುವಲ್ಲ. ಅದು ಆಂತರಿಕವಾದುದು. ಅದರ ಉಸಿರಿರುವುದು ಹೃದಯದಲ್ಲಿ. ಅದು ಆತ್ಮಕ್ಕೆ ಸೇರಿದ ಒಂದು ರಸದಶೆ. ಇಪ್ಪತ್ತು ವರ್ಷದ ಹೃದಯದಲ್ಲಿ ಎಪ್ಪತ್ತರ ಮುಪ್ಪು ಮೂಲೆ ಹಿಡಿದು ತಲೆದೂಗಿಯಾಗಿರಬಹುದು. ಎಪ್ಪತ್ತು ವರ್ಷದ ಹೃದಯದಲ್ಲಿ ಇಪ್ಪತ್ತರ ತಾರುಣ್ಯ ತೂಗುಯ್ಯಾಲೆಯಾಡುತ್ತಿರಬಹುದು.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೪೩

೭೦೯

ನಮ್ಮ ಕಾರ್ಯ ಅಪಾರವಾಗಿದೆ. ಸಾಹಿತ್ಯದೇವಿಗೆ ಎಷ್ಟು ಜನ ದಾಸರಿದ್ದರೂ ಸಾಲದಾಗಿದೆ.

ಸಾಹಿತ್ಯ ಪ್ರಚರ, ಸಾಹಿತ್ಯ ಪ್ರಚಾರ, ಪುಟ ೨೮

೭೧೦

ಕಡೆಯದೆಯೆ ಕೇಳ್ ಬೆಣ್ಣೆ
ಹೊಮ್ಮುವುದೆ ? ಮೂಡುತಿರ್ದುವೆ ಮಹಾರತ್ನಗಳ್, ಪೇಳ್,
ಮಥಿಸದಿರೆ ಮಂಥರೆಯ ವಾಸುಕಿಮಹಾಮಮತೆ ತಾಂ
ಕೈಕಮನ್ದರದಿಂದಮಾ ತ್ರೇತಾ ಸಮುದ್ರಮಂ ?

ಶ್ರೀ ರಾಮಾಯಣ ದರ್ಶನಂ, ಮಮತೆಯ ಸುಳಿ ಮಂಥರೆ, ಪುಟ ೬೮

೭೧೧

ನಿಜವಾದ ಯೋಗ್ಯತೆಯ ಪರಿಚಯವಾಗುವುದಕ್ಕೂ ಒಂದು ಯೋಗ್ಯತೆ ಬೇಕು.

ಮಲೆನಾಡಿನ ಚಿತ್ರಗಳು, ಮುನ್ನಡಿ, ಪುಟ vi

೭೧೨

ಬಲಿದಾನುಕುಂಟೆ ಕೊನೆ ?
ಬಲಿಪರಂಪರೆಯಲ್ತೆ ಸ್ವಾತಂತ್ರ್ಯ ಜೀವನಂ !

ಬಲಿದಾನ, ಪಾತ್ರ ಭಾರತಾಂಬೆ, ಪುಟ ೬೨

೭೧೩

ದೊಡ್ಡದೆಲ್ಲಾ ದೇವರೇ !

ಕಾನೂರು ಹೆಗ್ಗಡಿತಿ, ಪಾತ್ರ ಹೂವಯ್ಯ, ಪುಟ ೧೭೯

೭೧೪

ತನುವಿನ ಭೀಮತೆಗೆ ಮನದ ಭೂಮತೆಯೆ
ಕಾರಣಂ. ಕಾಯ ಕಾಂತಿಗೆ ತಾಯಿ ತಂದೆಯರ
ಮೆಯ್ಯ ತೇಜಂ ಮಾತ್ರಮಲ್ತಾತ್ಮದೋಜಮುಂ
ಕಾರಣಂ.

ಜೇನಾಗುವಾ, ತನುಜಾತನಹುದಾತ್ಮಜಾತನುಂ, ಪುಟ ೩೪

೭೧೫

ಸಂಸಾರದ ನೂರಾರು ಕೋಟಲೆಗಳ ಕಣಿವೆಗಳ ನಿಮ್ನತೆಯಿಂದ ಸ್ವಚ್ಛತರವೂ ಸ್ವಾತಂತ್ರ್ಯಪೂರ್ಣವೂ ಆಗಿರುವ ಗಿರಿವನಗಳ ಔನ್ನತ್ಯಕ್ಕೇರಿದರೆ ಯಾವ ಜೀವಿಯ ಆತ್ಮತಾನೇ ಗಗನಸ್ಪರ್ಶಿಯಾಗುವುದಿಲ್ಲ ?

ಕಾನೂರು ಹೆಗ್ಗಡಿತಿ, ಪುಟ ೩೮೪

೭೧೬

ಬಡವರಿಗೆ ಬಡವರಲ್ಲದೆ ಬೇರೆ ಗತಿಯುಂಟೆ ?

ಜಲಗಾರ, ಪಾತ್ರ ಜಲಗಾರ, ಪುಟ ೧೯

೭೧೭

ಸ್ವಪ್ನಮಲ್ಪಾಯು ;
ದೀರ್ಘಾನುಭವರೂಪಿಯಲ್ತೆ ಸತ್ಯಂ.

ಶ್ರೀ ರಾಮಾಯಣ ದರ್ಶನಂ, ಅಶ್ರುಗಂಗೋತ್ರಿ, ಪಾತ್ರ ಸೀತೆ, ಪುಟ ೫೧೭

೭೧೮

ತಾಯಿ ಗುರುವಲ್ಲ : ವಾತ್ಸಲ್ಯಕೆಂದೂ
ನಿಯಮ ನಿರ್ಬಂಧವಿಲ್ಲ !

ಮೇಘಮರ, ಒಡನಾಟ, ಪುಟ ೧೫

೭೧೯

ಆಶ್ಚರ್ಯ ಪಡುವ ಶಕ್ತಿಯನು
ಕಳೆದುಕೊಂಡರೆ ನೀನು ನಿರ್ಜೀವ !

ಮಂತ್ರಾಕ್ಷತೆ, ಪುಟ ೪೪

೭೨೦

ನಾನು ಯೋಚನೆಮಾಡಿದೆ, ನಮ್ಮ ಕನ್ನಡ ಸಾಹಿತ್ಯ ಚರಿತ್ರೆ ಓದುವವರು ಆಧುನಿಕ ಕಾಲಕ್ಕೆ ಬರುವವರೆಗೆ ಇಂಗ್ಲಿಷ್ ಸಾಹಿತ್ಯಕ್ಕೂ ನಮಗೂ ಏನೂ ಸಂಬಂಧವಿಲ್ಲ, ಪ್ರಭಾವದಲ್ಲಿ...ಆದರೂ ನಮ್ಮ ಪ್ರಮುಖ ಕವಿಗಳನ್ನಾದರೂ ಕುರಿತು ಬರಿಯುವಾಗ, ಅಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ತುಲನಾತ್ಮಕವಾಗಿ ತಮ್ಮ ಸಾಹಿತ್ಯದ ಈ ಪ್ರಾಚೀನತೆಯ ಪ್ರಜ್ಞೆ ಮನದಟ್ಟಾಗುವಂತೆ ಮಾಡಬೇಕಾದುದು ಅವಶ್ಯಕ. ಹಾಗೆ ಮಾಡಿದರೆ, ನಮ್ಮವರಿಗೆ ನಮ್ಮ ಸಾಹಿತ್ಯದ ಪ್ರಾಚೀನತೆಯನ್ನು ಗಮನಿಸಿ ಅದರ ಮಹೋನ್ನತಿಯನ್ನು ಅನುಭವಿಸುವುದಕ್ಕೆ ಸಾಧ್ಯವಾಗುತ್ತದೆ.

ವಿಚಾರ ಕ್ರಾಂತಿಗೆ ಆಹ್ವಾನ, ಸಾಹಿತ್ಯ ಚರಿತ್ರಕಾರರಿಗೆ ಸಲಹೆಗಳು, ಪುಟ ೨೭

೭೨೧

ಸಾವಿನ ಮೌನಕಿಂತಲು ಬಾಳಿನ ಗೋಳೆ ಲೇಸಲ್ತೆ?

ಶ್ಮಶಾನ ಕುರುಕ್ಷೇತ್ರಂ, ಪಾತ್ರ ಮಾತೆ, ಪುಟ ೧೩

೭೨೨

ನಾವ್ ಮರೆಯುತ್ತಿಹ ತವರೂರಿಂದೆ
ಸಾವಿನ ತೆರೆಯೋಸರಿಸುತೆ ಬಂದೆ ;
ನೆನಹಿನ ಉರಿಗೋಲ್ ನೀನ್ನೈತಂದೆ
ಮುದ್ದು ಕಂದನಾ ತೆರದಿಂದೆ !

ಜೇನಾಗುವಾ, ಸ್ವಾಗತ ನಿನಗೆಲೆ ಕಂದಯ್ಯ, ಪುಟ ೩೦

೭೨೩

ನಿನ್ನ ಬಾಂದಳದಂತೆ
ನನ್ನ ಮನವಿರಲಿ ;
ನಿನ್ನ ಸಾಗರದಂತೆ
ನನ್ನ ಎದೆಯಿರಲಿ.

ಕೊಳಲು, ಪ್ರಾರ್ಥನೆ, ಪುಟ ೪೧

೭೨೪

ಸಹೃದಯನಾದವನಿಗೆ ಅಲಂಕಾರ, ವಸ್ತು ಮತ್ತು ರಸಧ್ವನಿಗಳನ್ನು ಗ್ರಹಿಸುವುದರ ಜೊತೆಗೆ ದರ್ಶನ ಧ್ವನಿಯನ್ನೂ ಗ್ರಹಿಸುವ ಮನೋವಿಜ್ಞಾನ ಸಂಪನ್ನವಾದ ಒಂದು ತಾತ್ತ್ವಿಕ ದೃಷ್ಟಿ ಇರಬೇಕಾಗುತ್ತದೆ. ಆ ಕಾಣುವ ದೃಷ್ಟಿ ಮತ್ತು ಅನುಭವಿಸುವ ಸಾಮರ್ಥ್ಯ ಇವುಗಳಿಂದ ಕಾವ್ಯದ ಕಣ್ಣಾಗಿರುವ ಕವಿಯ ದರ್ಶನಕ್ಕೆ ಪ್ರವೇಶ ದೊರೆಯುತ್ತದೆ. ಆ ಕವಿದರ್ಶನದಿಂದ ದೀಪ್ತವಾದ ಸಹೃದಯ ಪ್ರಜ್ಞೆ ಕಾವ್ಯದಲ್ಲಿ ದರ್ಶನಧ್ವನಿಯನ್ನು ಗ್ರಹಿಸಿ, ಅನುಭವಿಸಿ, ಅದರ ಶಕ್ತಿ, ಆನಂದ, ಮತ್ತು ರಸ ಇವುಗಳಿಂದ ಪುಷ್ಟವಾಗಿ, ಕ್ರಮೇಣ ಲೋಕರಂಗದಲ್ಲಿಯೂ ಬ್ರಹ್ಮರಸವನ್ನು ಆಸ್ವಾದಿಸಲು ಕಲಿಯುತ್ತದೆ.

ರಸೋ ವೈ ಸಃ, ರಸೋ ವೈ ಸಃ, ಪುಟ ೧೩೩–೪

೭೨೫

ಎಷ್ಟೇ ಆದರೂ ನಾವು ಹುಟ್ಟಿ ಬೆಳೆದ, ಬಾಳಿ ಬದುಕಿದ ಮನೆ ಮಠಗಳಲ್ಲಿ ಒಂದು ಮೋಹ ಒಂದು ಮಮತೆ ಬೆಳೆದಿರುತ್ತದೆ.

ಷಷ್ಟಿನಮನ, ಮಾನಸ ಗಂಗೋತ್ರಿ, ಪುಟ ೬೨

೭೨೬

....ನನ್ನ ಕ್ಷೇತ್ರದಲ್ಲಿ ಮತ್ತು ನನ್ನ ರೀತಿಯಲ್ಲಿ ಕೈಲಾದ ಮಟ್ಟಿಗೆ ಕೊನೆಯ ಸಿರು ಇರುವವರೆಗೂ ದುಡಿಯುತ್ತೇನೆಂದೂ ಭರವಸೆ ಕೊಡುತ್ತೇನೆ.

ಮನುಜಮತ ವಿಶ್ವಪಥ, ಬಲಾತ್ಕಾರದ ಇಂಗ್ಲಿಷ್ : ಪ್ರಚ್ಛನ್ನ ಭ್ರಷ್ಟಾಚಾರ, ಪುಟ ೬

೭೨೭

ಇತಿಹಾಸವು ಅವತಾರ ಪುರುಷರ ಆವಿರ್ಭಾವವನ್ನು ಅಲೌಕಿಕತೆಯಿಂದ ಆವರಿಸಿ ಬಿಟ್ಟಿದೆ. ವಿವರಣೆಯ ಭಾರ ಮನಃಶಾಸ್ತ್ರದ್ದು. ನೂತನ ಜ್ಞಾನ ತನಗೆ ಅವೇದ್ಯವಾದುದರಿಂದ ಅಸತ್ಯವೆಂದು ಶಿಶು ಹಳಿದರೆ ಅವಿವೇಕವಾಗುವುದು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೮

೭೨೮

ನಿನ್ನ ಕೇಕೆಯೊಳಿಹುದು ಸರ್ವಾಧಿಕಾರ ;
ನಿನ್ನಾಜ್ಞೆ ಮೀರದೈ ವಿಶ್ವದಾಧಾರ !
ನಿನ್ನ ನಿರ್ಲಕ್ಷತೆಯ ಧೈರ್ಯವೆನಗಿರಲಿ ;
ನಿನ್ನ ಮಂಗಳ ಮುಕುತಿಯಾನಂದ ಬರಲಿ !

ಮೇಘಪುರ, ಶಿಷ್ಯ, ಪುಟ ೫

೭೨೯

ಪದಗಳಿಗೆ ಖಚಿತ, ಸ್ಪಷ್ಟ, ನಿಷ್ಕೃಷ್ಟ ಮತ್ತು ಅಚಂಚಲವಾದ ಅರ್ಥವಿದ್ದರೆ ಶಾಸ್ತ್ರೀಯವಾದ ವೈಜ್ಞಾನಿಕ ಪರಿಭಾಷೆ ಸಿದ್ಧವಾಗಲು ಸಾಧ್ಯವಾಗುತ್ತದೆ. ಆಧುನಿಕ ವಿಜ್ಞಾನ ಶಾಸ್ತ್ರಗಳೆಲ್ಲ ಬಹುಮಟ್ಟಿಗೆ ಅಂತಹ ಪರಿಭಾಷೆಯನ್ನೆ ಸಿದ್ಧಮಾಡಿಕೊಂಡಿವೆ. ಒಂದು ಪದ ಯಾವುದೆ ಶಾಸ್ತ್ರದಲ್ಲಿ ಪ್ರಯೋಗವಾದರೂ ಎಲ್ಲೆಡೆಯೂ ಒಂದೆ ಖಚಿತಾರ್ಥವನ್ನು ಕೊಡುವುದಾದರೆ ಅದು ಆದರ್ಶಪ್ರಾಯವಾದ ಪರಿಭಾಷೆಯಾಗುತ್ತದೆ ; ಹಾಗಲ್ಲದೆ ಬೇರೆ ಬೇರೆಯ ಶಾಸ್ತ್ರಗಳಲ್ಲಿ ಬೇರೆ ಬೇರೆಯ ಅರ್ಥವಾಗುವುದಾದರೆ ಗಲಿಬಿಲಿಗೆ ಅವಕಾಶವಾಗುತ್ತದೆ. ವೈದ್ಯಶಾಸ್ತ್ರದಂತಹ ಪ್ರಯೋಗ ವಿಜ್ಞಾನ ಕ್ಷೇತ್ರದಲ್ಲಿ ಅನಾಹುತವೂ ಆಗುತ್ತದೆ.

ರಸೋ ವೈ ಸಃ, ರಸೋ ವೈ ಸಃ, ಪುಟ ೧೨೦

೭೩೦

ಕಾಡಿನ ಕೊಳಲಿದು, ಕಾಡ ಕವಿಯು ನಾ,
ನಾಡಿನ ಜನರೊಲಿದಾಲಿಪುದು.
ಬೃಂದೆಯ ನಂದ ಕಂದನೆ ಬಂದು
ಗೊಲ್ಲನ ಕೊಳಲಲಿ ನಿಂದಿಹನೆಂದು
ಭಾವಿಸಿ ಮನ್ನಿಸಿ ಲಾಲಿಪುದು.

ಕೊಳಲು, ಗೊಲ್ಲನ ಬಿನ್ನಹ, ಪುಟ ೧

೭೩೧

ಆಕ್ರಮಿಸು ಬಂದೆನ್ನ ಅಲ್ಪತ್ವಮಂ
ಓ ಅನಂತ,
ಬಾಳರಳಿ ಬರ್ದುಕುರುಳಿ ಸಿದ್ಧಿಸುವವೋಲ್
ನಿರ್ದಿಗಂತ !

ಅಗ್ನಿಹಂಸ, ಆಕ್ರಮಿಸು, ಪುಟ ೯೪

೭೩೨

ಪುರಾಣಗಳೆಂದರೆ ಸೂಕ್ಷ್ಮತರವಾದ ನಿತ್ಯಸತ್ಯಗಳಿಗೆ ಮಾನವ ಮತಿ ಕೆತ್ತಿರುವ ಸ್ಥೂಲವೂ ಸದೋಷವೂ ಆದ ಕಥಾಪ್ರತಿಮೆಗಳು.

ಶೂದ್ರತಪಸ್ವಿ, ಮುನ್ನುಡಿ, ಪುಟ ೪೩

೭೩೩

ಗೃಹಂ
ಪ್ರಾಕಾರ ವಸ್ತ್ರಾದಿಗಳ್ ಮಾನಿನಿಯ ಮಾನಮಂ
ರಕ್ಷಿಪ್ಪವೇಂ ? ತನ್ನ ಶೀಲ ಶುಭ್ರಾಂಬರಮೆ,
ಬರಿಯರುವೆಮರೆಯಲ್ತು, ಮಾನಯವನಿಕೆಯಲ್ತೆ
ಮಾನಿನಿಗೆ ? ಮೇಣ್, ವ್ಯಸನದೊಳ್ ಕಷ್ಟದೊಳ್ ಮತ್ತೆ
ಸಂಗ್ರಾಮದೊಳ್ ಸ್ವಯಂವರ ಸಮಯದೊಳ್ ಸ್ತ್ರೀಗೆ
ನಿರ್ದೋಷಮಯ್ ದೃಷ್ಟಿ.

ಶ್ರೀ ರಾಮಾಯಣ ದರ್ಶನಂ, ರಯ್‌ಗೆ ಕರೆದೊಯ್ ಓ ಅಗ್ನಿ, ಪಾತ್ರ ರಾಮ, ಪುಟ ೮೪೮

೭೩೪

ದಿಟಂ, ಮನಸಿಗಲ್ಲದೆ ವಿಕೃತಿ
ಬಾಹ್ಯಪ್ರಕೃತಿಗುಂಟೆ ?

ಶ್ರೀ ರಾಮಾಯಣ ದರ್ಶನಂ, ಅಗ್ನಿಯಾತ್ರೆ, ಪಾತ್ರ ಭರತ, ಪುಟ ೧೨೬

೭೩೫

'ತತ್ತ್ವಮಸಿ !' 'ತತ್ತ್ವಮಸಿ' ನೀನಿಂದು, ಓ ಗುರುವೆ !
ತತ್ತ್ವಮೆಂತೋ ಏನೊ ? ಅಂತು ನೀಂ 'ತತ್ತ್ವಮಸಿ !'
'ತತ್ತ್ವಮಸಿ' ನಾನಾಗುವನ್ನೆಗಂ ನಿನ್ನಡಿಗೆ 'ತತ್ತ್ವಮಸಿ'
ಎಂದೆರಗುವೆ.

ಅಗ್ನಿಹಂಸ, ಮುಕ್ತ ಮಹಾಪುರುಷನಿಗೆ, ಪುಟ ೫೪

೭೩೬

ಹಾ ಜೀವನ ದುರಂತತೆಯೆ,
ತಂದೆ ತಾಯಂದಿರಂ ನಲ್ಲರಂ ಮಕ್ಕಳಂ
ಪೂಜ್ಯರಂ ಮೇಣೆರ್ದೆಯೊಲಿದರಂ ಕಳೇಬರಂ
ಮಾಡಿ ತೋರುವ ನಿನ್ನ ನಿಷ್ಠುರತೆಯಂ ಸುಡಲಿ !

ಶ್ರೀ ರಾಮಾಯಣ ದರ್ಶನಂ, ಅಗ್ನಿಯಾತ್ರೆ, ಪುಟ ೧೩೦

೭೩೭

ಯೋಗವನು ಕಾಲ್ದೊಡಿದು ಭೋಗಮಾರ್ಗದಿ ನಡೆದು
ತ್ಯಾಗವನು ಸಾಧಿಪುವುದು ನಮ್ಮ ದಾರಿ.

ಚಂದ್ರಮಂಚಕೆ ಬಾ ಚಕೋರಿ, ವಿಜಯ ಸೇತು, ಪುಟ ೪೮

೭೩೮

ಸಾಹಿತ್ಯ ಭೂಮಿಕೆಯಲ್ಲಿ ಮಾತ್ರವಲ್ಲ; ಎಲ್ಲ ಭೂಮಿಕೆಗಳಲ್ಲೂ ಮನುಷ್ಯ ಪರಸ್ಪರೋಪಜೀವಿ. ಆದರೂ ಪ್ರತಿಯೊಬ್ಬ ವ್ಯಕ್ತಿಯೂ ಯಾವುದೊ ಒಂದು ರೀತಿಯಲ್ಲಿ ಅನನ್ಯ ಸಾಧಾರಣ; ಒಬ್ಬೊಬ್ಬನೂ ಇನ್ನೊಬ್ಬನಲ್ಲವಾಗಿರುವಷ್ಟು ಮಟ್ಟಿಗೆ ವಿಶೇಷ ವ್ಯಕ್ತಿ; ಮನುಷ್ಯತ್ವದಿಂದ ಸರ್ವಸಾಧಾರಣನಾದರೂ ವ್ಯಕ್ತಿತ್ವದಿಂದ ವಿಶೇಷ; ಸಾಧಾರಣತೆಯ ಪರತಂತ್ರತೆಯಲ್ಲಿ ವ್ಯಕ್ತಿತ್ವದ ವಿಶೇಷತೆಯನ್ನು ಪ್ರಕಟಿಸುವುದೆ ಅನನ್ಯ ಪರತಂತ್ರತೆ. ಅತ್ಯಂತ ಸ್ವತಂತ್ರ ಎನಿಸಿಕೊಳ್ಳುವ ನಮ್ಮ ಮೂಲ ಸೃಷ್ಟಿಯ ಪರಮಾವಧಿ ಈ ಅನನ್ಯಪರತಂತ್ರತೆಯೆ ವಿನಾ ಸಂಪೂರ್ಣ ಸ್ವಾತಂತ್ರ್ಯ ಎಂಬುದು ಇಲ್ಲವೆ ಇಲ್ಲ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೩೨

೭೩೯

ಸ್ವಪ್ನಕ್ಕೂ ಉನ್ಮಾದಕ್ಕೂ ಹೆಚ್ಚೇನೂ ವ್ಯತ್ಯಾಸವಿಲ್ಲ. ಅವೆರಡಕ್ಕೂ ಆಧಾರ ಸಾಮಾನ್ಯವಾಗಿದೆ.

ಕಾನೂರು ಹೆಗ್ಗಡಿತಿ, ಪುಟ ೨೬೮

೭೪೦

....ನಿಜವಾದ ಶಕ್ತಿಯ ಸ್ಥಾನದ ಅರಿವಿರುವುದಿಲ್ಲ ತಾರುಣ್ಯ ಸಹಜವಾದ ಬಹಿರ್ ಮುಖತೆಗೆ.

ವಿಭೂತಿ ಪೂಜೆ, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪುಟ ೪೫

೭೪೧

ನೈರಾಶ್ಯೆಗುಂ ದಲ್
ನೆಯ್ದಿರ್ಪುದೊಂದಂಚು; ತನ್ನ ಪೊನ್ನೆಳೆಗಳಿಂ
ಕಣ್‌ಸೆಳೆದು ಮನಮೋಹಿಪುದು ಮೊದಮೊದಲ್; ಸಿಲ್ಕಿ
ಮೋಹಕ್ಕೆ ಮುನ್ ನಡೆಯೆ, ಕೊಂಡೊಯ್ವುದತಿಥಿಯಂ
ನರಕ ಕೇಂದ್ರಕ್ಕೆ.

ಶ್ರೀ ರಾಮಾಯಣ ದರ್ಶನಂ, ಇರ್ದುದು ಮಹೇಂದ್ರಾಚಲಂ, ಪಾತ್ರ ಮೈಂದ, ಪುಟ, ೩೯೦

೭೪೨

ಸಾಮಾಜಿಕ ಮತ್ತು ರಾಜಕೀಯ ಕ್ರಾಂತಿಕಾರಕವಲ್ಲದ ಕೆಲವನ್ನು ಆಕಾಶವಾಣಿಯಲ್ಲಿ ಮಾತ್ರ ಸೋಬಾನೆ ಹಾಡು ಹಾಡಿಸುತ್ತಾರೆ. ಪುರಂದರದಾಸರ ಕೀರ್ತನೆ ಹಾಡಿದ ಹಾಗೆ ಹಾಡುತ್ತಾರೆ. ಈ ತರದ ಕ್ರಾಂತಿಕಾರಕ ವೀರಸಾಹಿತ್ಯವನ್ನು ಯಾರೂ ಈಗ ವೇದಿಕೆಗಳಿಂದ ಘೋಷಿಸುವುದಿಲ್ಲ. ಅವೆಲ್ಲ ಸತ್ತೇಹೋಗಿ ಬಿಟ್ಟಿವೆ, ಅವರಿಗೆ. ಮೊನ್ನೆ ನೋಡ್ತೀನಿ, "ನೂರು ದೇವರನೆಲ್ಲ ನೂಕಾಚೆ ದೂರ" ಹಾಡಿಸುತ್ತಾ ಇದ್ದಾರೆ ಆಕಾಶವಾಣಿಯಲ್ಲಿ. ಆದರೆ ಯಾವ ತರವಾಗಿ? ಪುರಂದರದಾಸರ ದೈನ್ಯದ ಭಕ್ತಿಗೀತೆ ಇದೆಯಲ್ಲಾ ಆ ತರಾ. ಅದನ್ನು ನನಗೆ ಹೇಳೋಕು ಬರೋದಿಲ್ಲ

ಯಾವ ಥರಾ ಹಾಡುತ್ತಾರೆ ಅಂತ. ಅಸಹ್ಯವೋ ಅಸಹ್ಯ. ಅದರಲ್ಲಿಯೂ ಏನು ಮಾಡಿದ್ದಾರೆ? ನೀವು ರೇಡಿಯೋ ವಿಚಾರ ಏನೋ ಹೇಳುತ್ತಾ ಇದ್ದಿರಿ. ಈ ರೇಡಿಯೋ ಕೂಡ ಈ ವಿಚಾರದಲ್ಲಿ ಈ ಹಳದಿಪತ್ರಿಕೆಗಳ ವರ್ಗಕ್ಕೆ ಸೇರುತ್ತದೆ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೬೬

೭೪೩

ಸತ್ತಮೇಲೆ ಎಲ್ಲರೂ ಮಹಾತ್ಮರೇ ಅಲ್ಲವೆ?

ಮಲೆನಾಡಿನ ಚಿತ್ರಗಳು, ಜೇನುಬೇಟೆ, ಪುಟ ೮೭

೭೪೪

ಪಾಲ್ಗೊಂಡು ಬೇರೆ ನಿಲ್ಲುವ ನೀರ್ಗೆ ಪರಮಗತಿ
ಪಾಚಿ; ಹೊಳೆಗಿಳಿಯಲ್ಕೆ ತಾನೆ ಸಂಜೀವ ಸುಧೆ:
ಕೋಟಿ ವೀಚಿಗಳೊಡನೆ ಕುಣಿಯುವಾನಂದವಿದೆ;

ಕೃತ್ತಿಕೆ, ಪೂರ್ಣಯೋಗಿಯೆ ಪರಮಭೋಗಿ, ಪುಟ ೪೯

೭೪೫

ಭಾಷೆ ಲೋಕೋಪಯೋಗಿದಾಗ ಅದು ಲೋಕಸಂವಾದವನ್ನು ನಿರೀಕ್ಷಿಸುತ್ತದೆ, ಅಪೇಕ್ಷಿಸುತ್ತದೆ; ಭಾವೋಪಯೋಗಿಯಾದಾಗ ಅದು ಮುಖ್ಯವಾಗಿ ಭಾವ ಸಂವಾದವನ್ನೆ ಅಪೇಕ್ಷಿಸುತ್ತದೆ. ಭಾಷೆಯ ಆ ಉಪಯೋಗ ಸಾಹಿತ್ಯದಲ್ಲಿ ಮಾತ್ರವಲ್ಲ, ಲೋಕದಲ್ಲಿಯೂ ಅನ್ವಯವಾಗುತ್ತದೆ. ಈ ರಹಸ್ಯವನ್ನು ನಾವು ಸ್ಪಷ್ಟವಾಗಿ ಗ್ರಹಿಸದಿದ್ದರೆ, ಅರ್ಥಮಾಡಿಕೊಳ್ಳದಿದ್ದರೆ, ವೈಜ್ಞಾನಿಕ ಮನೋಧರ್ಮದ ಹೆಸರಿನಲ್ಲಿ ನಾವು ಪರಿಪೂರ್ಣವಾಗಿ ವಂಚಿತರಾಗುತ್ತೇವೆ, ಸಾಹಿತ್ಯವೀಯುವ ರಸಾನುಭವದ ಪುರುಷಾರ್ಥವನ್ನು ಅಸತ್ಯವೆಂಬ ಕಾರಣದಿಂದ ತಿರಸ್ಕರಿಸಿ.

ದ್ರೌಪದಿಯ ಶ್ರೀಮುಡಿ, ಭಾಷೆ: ಲೋಕೋಪಯೋಗಿ ಮತ್ತು ಭಾವೋಪಯೋಗಿ, ಪುಟ ೭೬

೭೪೬

ಜನರಿಗೆ ಸವಿಯುವ ಎದೆಯಿದೆ; ನೋಡುವ ಕಣ್ಣಿದೆ: ಕೆಲಸ ಮಾಡುವ ಶಕ್ತಿಯಿದೆ; ಮಾಡಲು ಉತ್ಸಾಹವಿದೆ; ಆದರೆ ಸಾಕಾದಷ್ಟು ತಿಳಿವಿಲ್ಲ, ಆ ತಿಳಿವನ್ನು ಪ್ರಚಾರಕರು ದಯಪಾಲಿಸಬೇಕು.

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೨೫

೭೪೭

ನೆಮ್ಮದಿ, ಸಂಸ್ಕೃತಿ, ಶಾಂತಿ–ಇವುಗಳೆ ಲೌಕಿಕ ಜೀವನದ ಗಂತವ್ಯ. ಅದನ್ನು ಸಾಧಿಸಲೂ ಸಾಧಿಸಿದ್ದನ್ನು ಹೃದಯ ಹೃದಯಕ್ಕೆ ನಿವೇದಿಸಲೂ ಕವಿತೆ ಸಾಹಿತ್ಯ ಕಲೆಗಳೆ ಅಗ್ರಗಣ್ಯ ಸಾಧನಗಳಾಗಿವೆ.

ಮನುಜಮತ ವಿಶ್ವಪಥ, ಬಲಾತ್ಕಾರದ ಇಂಗ್ಲಿಷ್: ಪ್ರಚ್ಛನ್ನ ಭ್ರಷ್ಟಚಾರ, ಪುಟ ೪

೭೪೮

ನಿನ್ನ ಪೂಜಿಪ ಭಕ್ತರೀ ಧರೆಯ ಬಡಜನಗಳಂ
ಬರದಿಂದ ಪೊರೆಯದೆಯೆ, ಘೃತತೈಲವಾಹಿನಿಗಳಿಂ
ನಿನಗೆ ಜಳಕಂ ಗೈವುದಂ ಕಂಡು ಧರ್ಮಮುನಿಸಿಂ
ಪರಿಹಾಸ್ಯಮಾಡಿ ನಸುನಗುತಲಿಹೆ, ಗೋಮಟೇಶ!
ಹಂಗಿಸುತ ಕಾಲನಂ, ಚಾಳಿಸುತ ಸೃಷ್ಟಿಯಂ,
ಲಯವನಣಕಿಸುತ ನಿಂತಿರುವೆ ನೀನು.

ಕೊಳಲು, ಗೋಮಟೇಶ್ವರ, ಪುಟ ೩೯–೪೦

೭೪೯

ಅವ್ಯಕ್ತವೂ ನಿರ್ಗುಣ ನಿರಾಕಾರವೂ ಆಗಿರುವ ಪರತತ್ತ್ವವು ಪ್ರಕಾಶವಾಗಬೇಕಾದರೆ ವ್ಯಕ್ತವೂ ಸಗುಣ ಸಾಕಾರವೂ ಆಗಿರುವ ಸೌಂದರ್ಯವಾಗಬೇಕು. ಏಕವೂ ಅಖಂಡವೂ ಆಗಿರುವ ಬ್ರಹ್ಮವು ಬುದ್ಧಿಯ ದೃಷ್ಟಿಗೆ ಸತ್ಯದಂತೆಯೂ ಭಾವದ ದೃಷ್ಟಿಗೆ ಸೌಂದರ್ಯದಂತೆಯೂ ತೋರುತ್ತದೆ. ಸತ್ಯಸೌಂದರ್ಯಗಳ ಸಂಗಮವೆ ಪರಮ ಸಿದ್ಧಿ. ಆ ಅನುಭವದಲ್ಲಿ ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨೧

೭೫೦

ಕೀರ್ತಿ ಮಹತ್ತಿಗೆ ಸಾಕ್ಷಿಯಲ್ಲ. ಎಲ್ಲರ ಕಣ್ಣಿಗೂ ದಿನದಿನವೂ ಬೀಳುವ ಸೂರ್ಯನು ಕಣ್ಣಿಗೆ ಕಾಣದ ಬಹುದೂರದ ನೀಹಾರಿಕೆಗಿಂತ ದೊಡ್ಡವನಲ್ಲ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨೬

೭೫೧

ಆರ್ಯರಾಗಿಹ ನಾವು
ನಿನ್ನ ಮೊಲೆವಾಲ ಸವಿಯಿಲ್ಲದೆಯೆ ಬದುಕುವೆವೆ?
ನೀನಿಲ್ಲದೆಲ್ಲಿಯದು ಭರತಖಂಡದ ಬದುಕು,
ಸಂಪತ್ತು, ಸಂಸ್ಕೃತಿ?

ನವಿಲು, ಸಂಸ್ಕೃತ ಮಾತೆ, ಪುಟ ೮೩

೭೫೨

ಮೋಹವೆಂಬ ತೃಣದ ಕಣವ
ಜ್ಞಾನದಗ್ನಿಯಲ್ಲಿ ದಹಿಸಿ
ಯೋಗಿಯಾದ ಪರಮಗುರುವು
ಕುರಿಯ ಮರಿಯ ಮೋಹದಿಂದ
ನೋಡುತಿದ್ದುದನ್ನು ಕಂಡು
ನಯನದೊರತೆಯೊಡೆದು. ನೀರು

ಸುರಿದು ಹರಿದು ಹೋಯಿತು!
ಪೂತ ಪೊದೆಯೊಳಡಗಿ ನಾನು
ಮಹಿಮೆ ಮಯದ ನೋಟವನ್ನು
ನೋಡಿ ನಲಿದೆನು!

ಕಲಾಸುಂದರಿ, ಶಂಕರಾಚಾರ್ಯ, ಪುಟ ೧೬-೭

೭೫೩

ಯಂತ್ರದ ದಯೆಯು ಮೃಗದ ನಿಷ್ಕರುಣೆಗಿಂತಲೂ
ಕ್ರೂರತರವಾದುದೈ! ಎದೆಯಿಲ್ಲದುಪಕಾರ,
ಕತ್ತಲೆಯ ಭಯದಂತೆ, ಭೀಷಣ, ನಿರಾಕಾರ!

ಕೃತ್ತಿಕೆ, ಆಸ್ಪತ್ರೆ, ಪುಟ ೬೬

೭೫೪

ಈ ದೀರ್ಘಯಾತ್ರೆ ಎಂದಿಗೆ ಮುಗಿಯುವುದೊ
ನಾನರಿಯೆ. ಆ ಪುಣ್ಯಕ್ಷೇತ್ರ ಎಂದಿಗೆ ದೊರೆಯುವುದೊ
ನಾನರಿಯೆ. ಅಂತೂ ನಾನೇನೊ ಯಾತ್ರೆ ಹೊರಟಿರುವೆ.
ತಪ್ಪದೆ ಹಾದಿ ನಡೆಯುತ್ತಿರುವೆ. ಎಲ್ಲಿಯೂ ನಿಲ್ಲದೆಯೆ,
ಎತ್ತಲೂ ನೋಡದೆಯೆ ಹಾದಿ ನಡೆಯುತ್ತಿರುವೆ.

ಕಿಂಕಿಣಿ, ನಾನು ಮುರಾರಿ, ಪುಟ ೧೮

೭೫೫

ನೊಣಮೀಸೆಯ ಹುಳುಹೆಜ್ಜೆಯ
ಎಣಿಸುವ ಬಿಜ್ಜೆಯ ಬಲ್ಲ;
ತನ್ನಾತ್ಮವ ತಾನರಿಯುವ
ಸಾಧನೆಯೊಂದನು ಒಲ್ಲ!
ಅನ್ವೇಷಣೆ! ಅನ್ವೇಷಣೆ!
ಸುಖಿಸಲು ಪುರಸತ್ತಿಲ್ಲ!
ತಿಳಿದೂ ತಿಳಿದೂ ತಿಳಿದೂ
ಕಡೆಗೇನೂ ಗೊತ್ತಿಲ್ಲ!

ಅಗ್ನಿಹಂಸ, ಶತಮಾನ ಸಂಧ್ಯೆ, ಪುಟ ೮೫

೭೫೬

ಕತ್ತಲೆಯ ಗವಿಯಯ್ಯ ಕವಿಹೃದಯದಾ ಗುಹ್ಯ;
ಬಯಲು ಬತ್ತಲೆಗಣ್ಣಿಗದು ಅಸಹ್ಯ.

ಅನಿಕೇತನ, ಕಷ್ಟವಯ್ಯಾ ಹೊಗಲು ಕವಿಹೃದಯಕೆ, ಪುಟ ೨

೭೫೭

ಒಂದು ದೃಷ್ಟಿಯಲ್ಲಿ ಭಾಷಾಂತರ ಕಾರ್ಯ ಮೂಲಸೃಷ್ಟಿ ಕಾರ್ಯಕ್ಕಿಂತ ಕಷ್ಟತರ. ಏಕೆಂದರೆ ಮೂಲಸೃಷ್ಟಿಗೆ ಒಂದು ಭಾಷೆ ತಿಳಿದಿದ್ದರೆ ಸಾಕು. ಭಾಷಾಂತರಕ್ಕೆ ಎರಡು ಭಾಷೆಯ ವಿಶೇಷ ಜ್ಞಾನ ಆವಶ್ಯಕ.

ಷಷ್ಟಿನಮನ, ಭಾರತದಲ್ಲಿ ಇಂಗ್ಲಿಷಿನ ಸ್ಥಾನ, ಪುಟ ೧೨೧

೭೫೮

ಸಮಯವಿಹುದಿನ್ನೂ, ಅವಸರವು ಬೇಡ,
ತುದಿಯ ಕಾಣದ ಕಾಲ ಮುಂದಿರುವುದು
ಗುರಿಯು ಇರೆ ದೂರ, ಕಠಿನವಿರೆ ದಾರಿ,
ಯುಗ ಯುಗಗಳುಳಿದಿಹವು ಭೀತಿಯೇಕೆ ?

ಕೊಳಲು, ಅವಸರವು ಬೇಡ, ಪುಟ ೪೯

೭೫೯

ನಿನಗಾಗಿ ಜಗದುದಯ ಜೋಜೋ !
ನಿನಗಾಗಿ ಜಗದಲಯ ಜೋಜೋ !

ಮರಿವಿಜ್ಞಾನಿ, ಜೋಗುಳ, ಪುಟ ೧೭

೭೬೦

....ಮದುವೆ ಮಾಡಿಕೊಳ್ಳುವವರೂ, ಮಾಡಿಸುವವರೂ, ಮುಂದಿನ ದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಜಾಗರೂಕತೆಯಿಂದ ವರ್ತಿಸುವುದು ಒಳ್ಳೆಯದು. ಮದುವೆಗೆ ಮದುವೆಯ ಸಂಭ್ರಮವೇ ಗುರಿಯಲ್ಲ ; ಮುಂದಿನ ಸುಖ, ಸಮಾಜಸೇವೆ ಇತ್ಯಾದಿಗಳು ಅದರ ಗುರಿ. ವಿವಾಹವು ನಡೆಯುವ ಹಾದಿಯೆ ಹೊರತು, ಸೇರುವ ಮನೆಯಲ್ಲ. ಆದ್ದರಿಂದ ಜನರು ವಿವಾಹ ಕಾಲದಲ್ಲಿ ಆಗುವ ದುಂದನ್ನು ಕಡಿಮೆ ಮಾಡಿ, ದಂಪತಿಗಳ ಜೀವನ ಮುಂದೆ ಋಣಭಾರದಿಂದ ಕುಗ್ಗಿ ಪಾತಾಳಗತವಾಗದಂತೆ ನೋಡಿಕೊಳ್ಳಬೇಕು.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೨೨-೩

೭೬೧

ನೋಡುತ ನೋಡುತ ನೋಡುತ್ತಿದ್ದೆ ;
ನೋಡುತ್ತಿರೆಯಿರೆ ಬೆಚ್ಚಿ ಬಿದ್ದೆ :
ಬಡಬಗ್ಗರ ಜಠರಾಗ್ನಿಯು ಎದ್ದು
ಗುಡಿಸಿಲುಗಳಿಗೇ ಬೆಂಕಿಯು ಬಿದ್ದು
ಧಗಧಗ ಧಗಧಗ ಹೊತ್ತಿದುದು,
ಭುಗಿಭುಗಿಲೆನ್ನುತ ಮುತ್ತಿದುದು !
ಮುಗಿಲಿನವರೆಗೂ ಬಾನಿನವರೆಗೂ

ದಿಕ್ಕುದಿಕ್ಕುಗಳ ಜುಟ್ಟಿನವರೆಗೂ
ಬಡವರ ಬೆಂಕಿಯು ನಾಲಗೆ ಚಾಚಿ
ಶ್ರೀಮಂತರನಪ್ಪಿತು ಚಾಚಿ!
ಬಡವರ ಸಿಟ್ಟದು ಏನು ಪಿಶಾಚಿ?
ಬಡಬಾಗ್ನಿಯೆ ತಲೆತಗ್ಗಿತು ನಾಚಿ!
ಶ್ರೀಮಂತರ ಸೌಧಂಗಳ ನೆತ್ತಿ
ಸೀದುದು ಬಡಹೊಟ್ಟೆಯ ಉರಿಹೊತ್ತಿ!
ದೂರದ ಆ ಗಿರಿ ಶಿಖರದ ಮೇಲೆ
ನನಗೂ ತಟ್ಟಿತು ಬೆಂಕಿಯ ಜ್ವಾಲೆ!
ಕೇಳಿಸಿತೊಡನೆಯೆ ಹಾಹಾಕಾರ!
ಮಕ್ಕಳು ಮರಿಗಳ ಚೀತ್ಕಾರ!
ಗರ್ಭಿಣಿ ಸ್ತ್ರೀಯರು, ಬಾಣಂತಿಯರು,
ನವ ವಧುಗಳು ಮೇಣ್ ಶ್ರೀಮಂತೆಯರು;
ಹುಡುಗರು, ಮುದುಕರು, ಕುಂಟರು, ಕಿವುಡರು:
ಬಡವರ ಗೋಳನು ಕೇಳದ ಕಿವುಡರು:
ಹೊಟ್ಟೆಯ ಪಾಡಿಗೆ ಕಾವಿಯನುಟ್ಟು
ಬಡವರ ಹಸಿವೆಗೆ ಮೌಢ್ಯವಕೊಟ್ಟು
ಸುಖಸಂಪತ್ತನು ಕೊಂಡವರು,
ಮೃಷ್ಟಾನ್ನವನೇ ಉಂಡವರು;
ಗುರುಗಳು ಶಿಷ್ಯರು ಮನೆಗಳು ಮಠಗಳು
ಎಲ್ಲರು ಬೆಂದರು ಬಡಬಾಗ್ನಿಯಲಿ,
ಬಡವರ ಬಗ್ಗರ ಜಠರಾಗ್ನಿಯಲಿ!
ಬಡವರ ಜಠರಾಗ್ನಿಯೆ ಬಡಬಾಗ್ನಿ!
ಬಡವನೆ ಕಲಿಯುಗದಂತ್ಯದ ಕಲ್ಕಿ!

ಪಾಂಚಜನ್ಯ, ಕಲ್ಕಿ, ಪುಟ ೬೬–೭

೭೬೨

ಹಿರಿಯರಿಗೆ ಹಿರಿಯ ಕೋಟಲೆ ಹಿರಿದೆ? ಕಿರುಕುಳರ
ಕಿರುಕುಳಮೆ ಪಿರಿದು! ಮೃಗರಾಜನೇಂ ಮದಕರಿಯ
ದಂತಮಂ ಲೆಕ್ಕಿಪನೆ? ನೊರಜು ನುಸಿಗಳ ಕಿರಿಯ
ಕಿರಿಕಿರಿಗೆ ರೋಸಿದಪನಲ್ತೆ?

ಶ್ರೀ ರಾಮಾಯಣ ದರ್ಶನಂ, ಲಂಕೇಶನೊಲಿಸಿದನು ಮಾರೀಚನು, ಪಾತ್ರ ಲಂಕೇಶ, ಪುಟ ೨೨೭

೭೬೩

ಧರ್ಮಜೀವನದಲ್ಲಿ ಶ್ರದ್ಧೆ ಉಚ್ಛ್ವಾಸದಂತಿದ್ದರೆ ಸಂದೇಹ ನಿಃಶ್ವಾಸದಂತೆ.

ತಪೋನಂದನ, ಮಹಾಶ್ವೇತೆಯ ತಪಸ್ಸು, ಪುಟ ೨೧

೭೬೪

ಲೋಕದ ಪ್ರಲೋಭನೆಗಳು ಸಾಧಕನಿಗೆ ದೊಡ್ಡ ಅಡಚಣೆ. ಅವುಗಳಿದ್ದರೆ ಆದರ್ಶದ ಪರವಾಗಿ ಏಕಾಗ್ರತೆ ಅಸಾಧ್ಯ. ಒಮ್ಮನಸ್ಸಿಲ್ಲದಿದ್ದರೆ ಸಾಮಾನ್ಯ ವಿಚಾರಗಳಲ್ಲಿಯೆ ಜಯ ಹೊಂದುವುದು ಕಠಿನ ಎಂದಮೇಲೆ ಅತ್ಯಮೂಲ್ಯವಾದ ಸತ್ಯವಾದರೂ ದೊರಕುವುದು ಹೇಗೆ? ಜೊತೆಗೆ ನಿತ್ಯಾನಿತ್ಯ ವಿವೇಕ ವಿಚಾರವೂ ಸತ್ಯಸಂದರ್ಶನಕ್ಕಾಗಿ ತೀವ್ರ ವ್ಯಾಕುಲತೆಯೂ ಅಭೀಪ್ಸೆಯೂ ಬೇಕು. ಇವುಗಳಿಂದ ಒಡಗೂಡಿದ ಸಾಧಕನು ಹತಾಶನಾಗದೆ ಬೇಸರ ಪಡದೆ ಉದಾಸೀನನಾಗದೆ ಅವಿಶ್ರಾಂತಿ ಸಾಹಸ ಮಾಡಿದರೆ ತುತ್ತತುದಿಯಲ್ಲಿ ಲಭಿಸುವುದು ಸಿದ್ಧಿ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೩೯–೪೦

೭೬೫

ಕೋಟಿ ಧನವಿದ್ದರೂ ಪಟ್ಟಣವು ಗೋಳು;
ಕಾಸಿಲ್ಲದಿದ್ದರೂ ಸುಖ ಹಳ್ಳಿಬಾಳು!
ಕಷ್ಟವಿದ್ದರು ಸರಿಯೆ, ಇರಲಿ ಸ್ವಾತಂತ್ರ್ಯ;
ಸುಖವಿದ್ದರೂ ಹೀನವೈ ಪಾರತಂತ್ರ್ಯ;
ಸ್ವಾತಂತ್ರ್ಯವಿಲ್ಲದವಗಾನಂದವೆಲ್ಲಿ?
ಸ್ವಾತಂತ್ರ್ಯಕಾವಾಸವಾಗಿಹುದು ಹಳ್ಳಿ!

ಹಾಳೂರು, ಪಂಕ್ತಿ ೧೨೯–೩೪, ಪುಟ ೮

೭೬೬

ಕೊಡುವವನ ಹರಸುವುದು; ಕೊಳ್ಳುವನ ಸಲಹುವುದು!
ಕರುಣೆಯೆಂಬೈಶ್ವರ್ಯಂ ಅಳಿದೊಡಂ ಉಳಿದೊಡಂ,
ಪೋದೊಡಂ ಬಂದೊಡಂ, ಪಡೆದವನದಾವಗಂ
ಶ್ರೀಮಂತನಾಗಿರ್ಪನ್! ಪಡೆದು ಕೊಡುವರ್ಗೆ ಅದು
ಮುಕ್ತಿಗೆ ಮಹಾದ್ವಾರಂ; ಮೇಣೀಸಿಕೊಂಬರ್ಗೆ
ಸ್ವರ್ಗಕ್ಕೆ ಸೋಪಾನಂ!

ಶ್ಮಶಾನ ಕುರುಕ್ಷೇತ್ರಂ, ಪಾತ್ರ ಧರ್ಮರಾಯ, ಪುಟ ೨೫

೭೬೭

ಲಕ್ಷ್ಮೀಯ ಸ್ವರೂಪವೆ ಹಾಗೆ: ಸ್ವಲ್ಪ ಕಷ್ಟ ಸಾಧ್ಯವಾದರೂ ಗಳಿಸಿಕೊಳ್ಳಬಹುದು; ಆದರೆ ಉಳಿಸಿಕೊಳ್ಳುವುದು ಮಾತ್ರ ದುಷ್ಪ ಸಾಧ್ಯವೆ!

ಮಲೆಗಳಲ್ಲಿ ಮದುಮಗಳು, ಪುಟ ೨೭೭

೨೬೮

ಕವಿ ಇತರ ಎಲ್ಲ ವಿಭೂತಿಗಳಿಗೂ ಪ್ರಣಾಳಿಕಾರೂಪವಾಗಿ ಆವಿರ್ಭವಿಸುವ ವಿಭೂತಿ. ಸರ್ವಚೇತನಗಳ ಸಮಷ್ಟಿ ಚೇತನ ರೂಪವಾಗಿ ಸರ್ವ ದೇವತಾ ಶಕ್ತಿಗಳ ಸಮಷ್ಟಿ ದೇವತಾ ಶಕ್ತಿರೂಪನಾಗಿ ಆವಿರ್ಭವಿಸುವ ಮಹಾಕವಿ ಇತರ ಎಲ್ಲ ವಿಭೂತಿಗಳಿಗೂ ಪ್ರಣಾಳಿಕಾ ರೂಪದಲ್ಲಿ ಅವತರಿಸುವ ಲೋಕಮೋಹಕ ವಿಭೂತಿ.

ವಿಭೂತಿ ಪೂಜೆ, ಕವಿಯಲ್ಲಿ ವಿಭೂತಿ, ಪುಟ ೬

೨೬೯

ರಸತೀರ್ಥದಲಿ ಮಿಂದವಗೆ ಭವದ ಭಯವೇಕೆ ?
ಪುಣ್ಯದಾಲಯ ಪೃಥ್ವಿ! ಸ್ವರ್ಗವದು ಪರದೇಶಿ ?

ಪಕ್ಷಿಕಾಶಿ, ಕೆಂದಳಿರು, ಪುಟ ೧೮

೨೭೦

....ಯಾವ ಆಭರಣವನ್ನೂ ಬಿಸಾಡದೆ ಕರಗಿಸಿ, ನಾವು ನಮಗೆ ಬೇಕಾದಂತೆ ಮಾಡಿಕೊಳ್ಳುತ್ತೇವೆಯೊ ಹಾಗೆಯೆ ಉತ್ತಮ ಕಾವ್ಯಗಳನ್ನು ತಿರಸ್ಕರಿಸದೆ ನಮಗೆ ಒಪ್ಪುವ ರೀತಿಗೆ ಪರಿವರ್ತಿಸಿಕೊಳ್ಳಬೇಕು. ಈಗ ಕುಮಾರವ್ಯಾಸ ಇದ್ದಾನೆ. ಅವನು ಬ್ರಾಹ್ಮಣ. ಅವನು ಬ್ರಾಹ್ಮಣ ಸಂಸ್ಕೃತಿಯನ್ನು ಹೊರತು ಬೇರೆ ಬರೆಯಲಾರ. ಹಾಗೆಂದು ಕುಮಾರವ್ಯಾಸ ಬರೆದದ್ದೆಲ್ಲ ಬೇಡ ಅಂತ ಹೇಳಿಬಿಟ್ಟರೆ ಶುದ್ಧ ಅವಿವೇಕ ವಾಗುತ್ತದೆ. ಆಗ ಏನು ಮಾಡಬೇಕಾಗುತ್ತದೆ ? ನಾನು ಅದಕ್ಕೋಸ್ಕರವೆ ಪ್ರತಿಕೃತಿ ಮತ್ತು ಪ್ರತಿಮಾ ಸಿದ್ಧಾಂತವನ್ನು ತಂದೆ. ಹೇಗಾದರೂ ಮಾಡಿ ಈ ಮಹಾಕಾವ್ಯಗಳನ್ನು ಮುಂದಿನ ಪೀಳಿಗೆಗೆ ರಕ್ಷಿಸಿಕೊಳ್ಳಬೇಕು. ಆದ್ದರಿಂದ ಅವನ್ನು ನೀವು ಪ್ರತಿಕೃತಿ ದೃಷ್ಟಿಯಿಂದ ಓದಬೇಡಿ ; ಪ್ರತಿಮಾ ದೃಷ್ಟಿಯಿಂದ ಓದಿ, ಮತ್ತು ದರ್ಶನ ಧ್ವನಿಯಿಂದ ವ್ಯಾಖ್ಯಾನಮಾಡಿ, ಬೇಡವಾದುದನ್ನು ಬಿಟ್ಟು ಬಿಟ್ಟು, ಒಳ್ಳೆಯ ಸೊಗಸಾದ ಕಾವ್ಯವನ್ನು ತಿರಸ್ಕರಿಸಬೇಡಿ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೬೯

೨೭೧

ಅಂತರಾತ್ಮಪ್ರಚೋದನೆಯಿರದ
ಬುದ್ಧಿ ತಾನುಂ ಸೋಲದೇನಿಂದ್ರಿಯದ ಹಿತದ
ಲೌಕಿಕಕೆ ?

ಶ್ರೀ ರಾಮಾಯಣ ದರ್ಶನಂ, ರಸಮಲ್ತೆ ರುದ್ರದೃಷ್ಟಿಗೆ ರೌದ್ರಮುಂ, ಪುಟ ೬೯೧

೨೭೨

ಭಾವೋಪಯೋಗಿಯಾದ ಈ ಭಾಷೆಯ ಪ್ರಯೋಜನ ನಮ್ಮಲ್ಲಿ ಒಂದು ಭಾವವನ್ನೊ ಚಿತ್ತಿಭಂಗಿಯನ್ನೊ ಪ್ರಚೋದಿಸುವುದು ಮಾತ್ರವಾಗಿದ್ದರೆ, ಅದಕ್ಕಿಂತಲೂ ಹೆಚ್ಚಿನದೇನನ್ನೂ ಅದು ನೀಡಲಾರದುದಾಗಿದ್ದರೆ, ಎಲ್ಲ ಕಾವ್ಯದ ಪ್ರಯೋಜನವೂ

ಒಂದು ಹೃದಯ ವಿಲಾಸ ಅಥವಾ ಚಿತ್ತೋಲ್ಲಾಸದಲ್ಲಿ ಮಾತ್ರ ಕೊನೆಗೊಳ್ಳುತ್ತದೆ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಬರಿಯ ಭಾವವಿಲಾಸದಿಂದ ನಮಗೊದಗುವ ತೃಪ್ತಿಯೆ ಅದರ ಪರಮ ಪ್ರಯೋಜನ ಮತ್ತು ಪುರುಷಾರ್ಥ. ನಮ್ಮ ನಮ್ಮ ಭಾವ ವಿಲಾಸವಲ್ಲದೆ ಇನ್ನಾವ ವಿಧವಾದ ವಸ್ತುಸಂವಾದವೂ ಅದಕ್ಕಿರುವುದೂ ಇಲ್ಲ, ಅದರಿಂದೊದಗುವುದೂ ಇಲ್ಲ. ಸಾಧ್ಯವಾಗುವುದೂ ಇಲ್ಲ.

ದ್ರೌಪದಿಯ ಶ್ರೀಮುಡಿ, ಭಾಷೆ : ಲೋಕೋಪಯೋಗಿ ಮತ್ತು ಭಾವೋಪಯೋಗಿ, ಪುಟ ೮೫

೭೭೩

ಅಹಂಕಾರದೊಂದು ಛದ್ಮನೆಯಲ್ತೆ
ಕೀರ್ತಿಯೆಂಬಾ ಪೆಸರ ಪೇಸರಾಸೆ ?

ಬೆರಳ್ ಗೆ ಕೊರಳ್, ಪಾತ್ರ ದ್ರೋಣ, ಪುಟ ३೨

೭೭೪

ಧರಣಿಯೊಳಗಿಹ ಜೀವರೊಳಗೆ,
ಇರುಳು ಚಲಿಸುವ ಅಸುರರೊಳಗೆ
ನರನು ಪರಮನು ಎಂದು ಉಸುರಲು
ಕರುಣೆ ಎಂಬುದೆ ಸಾಕ್ಷಿಯು !

ಅಮಲನ ಕಥೆ, ಪುಟ ೧೬

೭೭೫

ಆನಂದಮಯ ಈ ಜಗ ಹೃದಯ :
ಏತಕೆ ಭಯ ? ಮಾಣೊ !
ಸೂರ್ಯೋದಯ ಚಂದ್ರೋದಯ
ದೇವರ ದಯ ಕಾಣೊ !

ಪಕ್ಷಿಕಾಶಿ, ಆನಂದಮಯ ಈ ಜಗಹೃದಯ, ಪುಟ ೨

೭೭೬

ಬರಿಯ ಬುದ್ಧಿವಾದದಿಂದ ಯಾರು ತಾನೆ ತಿದ್ದು ಪಡೆಯುತ್ತಾರೆ ? ಅನುಭವ ಮಾಗಿದಾಗ ಚಿಕ್ಕದೊಂದು ನುಡಿ ಬಾಳಬಟ್ಟೆಯನ್ನೇ ಬದಲಾಯಿಸಲು ಸಮರ್ಥ ವಾಗುತ್ತದೆ.

ತಪೋನಂದನ, ಮಹಾಶ್ವೇತೆಯ ತಪಸ್ಸು, ಪುಟ ೨೦

೭೭೭

ಕಷ್ಟಮಿಷ್ಟಂ, ಸುಖಮೆ ಸಂಕಟಂ,
ಬಂಧು ಮಿತ್ರರ್ ದುರ್ದಶೆಯೊಳಿರಲ್.

ಶ್ರೀ ರಾಮಾಯಣ ದರ್ಶನಂ, ಸುಗ್ರೀವಾಜ್ಞೆ, ಪಾತ್ರ ಸುಗ್ರೀವ, ಪುಟ ३೭३

೭೭೮

ಭಗವದ್ಗೀತೆಯ ಪ್ರಣೀತವಾದ ಪೂರ್ಣ ದೃಷ್ಟಿಯ ಪೂರ್ಣದರ್ಶನಕ್ಕೆ ತನ್ನ ಸಮಗ್ರ ಜೀವನವನ್ನೆ ನಿದರ್ಶನವನ್ನಾಗಿ ಒಡ್ಡಿದ್ದಾನೆ ಶ್ರೀಕೃಷ್ಣ. ಶ್ರೀಮದ್ ಭಗವದ್ಗೀತೆ ಶ್ರೀಕೃಷ್ಣನ ವಾಙ್ಮಯ ಶರೀರ ; ಶ್ರೀಕೃಷ್ಣ ಶ್ರೀಮದ್ ಭಗವದ್ಗೀತೆಯ ಚಿನ್ಮಯ ಕಳೇವರ ! ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿ–ಈ ತತ್ತ್ವಗಳು ನಮ್ಮ ಲೋಕದ ಭವಿತವ್ಯದ ಬಾಳಿಗೆ ಮಾರ್ಗದರ್ಶಕ ದೀಪಗಳಾಗಬೇಕಾದರೆ ಭಗವದ್ಗೀತೆಯ ವ್ಯೋಮ ವಿಶಾಲ ವಕ್ಷವನ್ನು ಆಶ್ರಯಿಸಿದಲ್ಲದೆ ಗತ್ಯಂತರವಿಲ್ಲ.

ದ್ರೌಪದಿಯ ಶ್ರೀಮುಡಿ, ಶ್ರೀಕೃಷ್ಣಜನ್ಮಾಷ್ಟಮಿ, ಪುಟ ೪೦

೭೭೯

ಹೆರರ ಜಸವನು ಸಹಿಸಲಾರದವನಾ ನರನು.

ಕಾನೀನ, ಪಾತ್ರ ಕೌರವ, ಪುಟ ೨೯

೭೮೦

ಒಲವು ಬಳಿಯಿರೆ ಚೆಲುವು ಬೇಟಮಂ
ಕೊನರಿಸುವುದಲ್ತೆ ?

ಶ್ರೀ ರಾಮಾಯಣ ದರ್ಶನಂ, ಪಾದುಕಾ ಕಿರೀಟಿ, ಪಾತ್ರ ರಾಮ, ಪುಟ ೧೬೫

೭೮೧

ಮನುಷ್ಯ ಸಾಮಾನ್ಯರೂ ಇವನು ನೂರು ವರ್ಷ ಬದುಕಿದ್ದಾನೆ, ನೂರೈವತ್ತು ವರ್ಷ ಬದುಕಿದ್ದಾನೆ ಅಂದರೆ–ಸ್ವಲ್ಪ ಗಮನಕ್ಕೆ ಬರುತ್ತಾರೆ ಅಲ್ಲವೆ ? ಅಂಥವರು ತೀರಿಕೊಂಡಾಗ ವಾರ್ತೆ ಪತ್ರಿಕೆಗಕಲ್ಲಿ ಕೂಡ ಬರುತ್ತದೆ. ಆದ್ದರಿಂದ ನೂರಾರು ನೂರೇಳು ವರ್ಷ ಬದುಕಿದರೆ ಅದು ಏನೋ ಒಂದು ಹಿರಿತನ ಪ್ರಾಪ್ತವಾಗಿ ಗೌರವಕ್ಕೆ ಕಾರಣವಾಗುತ್ತದೆ. ಬಹುಶಃ ನಾವೂ ಬದುಕೇವೋ ಎಂಬ ಆಸೆಯೆ ಕಾರಣ ಎಂದು ತೋರುತ್ತದೆ.

ವಿಚಾರ ಕ್ರಾಂತಿಗೆ ಆಹ್ವಾನ, ಸಾಹಿತ್ಯ ಚರಿತ್ರಕಾರರಿಗೆ ಸಲಹೆಗಳು, ಪುಟ ೩೧

೭೮೨

'ಕಲೆಗಾಗಿ ಕಲೆ'ಯು ಸಾಹಿತ್ಯವನ್ನೂ ಹೇಗೆ ಅಶ್ಲೀಲತೆಯ ರೊಚ್ಚೆಗೆಳೆಯ ಬಹುದೋ ಹಾಗೆಯೆ 'ಧರ್ಮಕ್ಕಾಗಿ ಕಲೆ' ಎಂಬ ಸೂತ್ರವೂ ಅದನ್ನು ನೀರಸಾಚಾರಗಳ ಶುಷ್ಕ ಸಂಪ್ರದಾಯದ ಮತಭ್ರಾಂತಿಯ ಮರು ಭೂಮಿಗೆ ಎಳೆದೊಯ್ದು, ಬಾಯಿಗೆ ನೀರನ್ನು ಬಿಡದೆ, ಕೊಂದುಹಾಕುವ ಸಂಭವವುಂಟು. ಸಂಭವದ ಮಾತಿರಲಿ ; ನಮ್ಮ ಭಾಗಕ್ಕೆ ಅದು ಕೊಂಚಮಟ್ಟಿಗೆ ನಿತ್ಯಾನುಭವವೂ ಆಗಿಬಿಟ್ಟಿದೆ. ನಮ್ಮ ಸಾಹಿತ್ಯ ಸಹ್ಯಾದ್ರಿಯ ಶಿಖರಗಳಲ್ಲಿ ಕಾಮನಬಿಲ್ಲಿನ ಬಣ್ಣದ ಸೀರೆಯ ದೇವ ಕಾಮಿನಿಯರು ನರ್ತನ ಮಾಡುತ್ತಿರುವರಾದರೂ ಆ ಗಿರಿಪಂಕ್ತಿಯ ಸಾನುಪ್ರದೇಶದ ಅರಣ್ಯಗಳಲ್ಲಿ ಸ್ವಮತಭ್ರಾಂತಿಯ ಮತ್ತು ಪರಮತ ಖಂಡನೆಯ

ಮುಳ್ಳುಹಂದಿಗಳು ಕಣೆನಿಮಿರಿಕೊಂಡು ಗುದ್ದಾಡಿಕೊಳ್ಳುತ್ತಿವೆ. ಅಲ್ಲಿಗೆ ತಿರುಗಾಡಲು ಹೋಗುವವನ ಹೆದರುಗಣ್ಣು ಪ್ರಕೃತಿ ಸೌಂದರ್ಯದ ಕಡೆಗೆ ಹೇಗೆ ತಾನೆ ಹರಿದೀತು ? ಭ್ರಾಂತಿಯ ಕಣೆ ಹಂದಿಗಳು ಕಾದಾಡುವಲ್ಲಿ ಕಲೆಯ ಕಣ್ಣಿಗೆ ಶಾಂತಿಯೆಲ್ಲಿ?

ಸಾಹಿತ್ಯ ಪ್ರಚಾರ, ಕನ್ನಡ ಸಾಹಿತ್ಯ, ಪುಟ ೫೮–೯

೭೮೩

ಅನುಭವ ಸ್ಥವಿರೆಯಾದರೂ ಸರ್ವದಾ ಪ್ರಗತಿಶೀಲೆ ; ಸಂಪ್ರದಾಯ ಸುಸ್ಥಿರೆಯಾದರೂ ನಿರಂತರ ಕ್ರಾಂತದರ್ಶಿನಿ ; ಪ್ರಾಚೀನೆಯಾದರೂ ನಿತ್ಯನೂತನೆ : ಸಾಹಿತ್ಯ ಲಕ್ಷ್ಮಿ ಸ್ವಭಾವತಃ ನವನವೋನ್ಮೇಷಶಾಲಿನಿ.

ವಿಭೂತಿ ಪೂಜೆ, ಇಂದಿನ ಹೊಸಗನ್ನಡ ಕವಿತೆ, ಪುಟ ೧೯

೭೮೪

ಸತ್ತಂತೆ ಬದುಕುವುದಕಿಂತ
ಸತ್ತು ಬದುಕುವುದೆ ಲೇಸು.

ಹೊನ್ನಹೊತ್ತಾರೆ, ಮಂತ್ರಾಕ್ಷತೆ, ಪುಟ ೬೦

೭೮೫

ಜನರ ಮಾತನು ನಂಬಿ,
ಪ್ರೀತಿಸದೆ ಕೊಡುವವರ ಕೀರ್ತಿಯ ಸವಿಯಲಮ್ಮೆ.
ಹೆಸರಿಗಿಂತಲು ಹಿರಿದು ತಾಯಿಯೊಲ್ಮೆಯು ನನಗೆ.

ಕೃತ್ತಿಕೆ, ಮಲೆನಾಡಿಗೆ, ಪುಟ ೩೪

೭೮೬

'ಶ್ರೀ ರಾಮಕೃಷ್ಣ ವಚನವೇದ'ವು ಪರಮಹಂಸರ ಅಂದಂದಿನ ಮಾತುಕತೆಗಳ ಯಥಾವತ್ತಾದ ದಿನಚರಿಯ ಬೃಹತ್‌ವರದಿ. ಅದರ ಭಾಷೆ ಆಡುನುಡಿ ; ಅದರ ರೀತಿ ಅತ್ಯಂತ ಸರಳ. 'ಶ್ರೀ ರಾಮಕೃಷ್ಣ ಲೀಲಾಪ್ರಸಂಗ'ವಾದರೋ ಶ್ರೀ ಶ್ರೀಠಾಕೂರರ ನಿಧನಾನಂತರ ಅವರ ಅತ್ಯಂತ ಸಮೀಪದ ಶಿಷ್ಯವರೇಣ್ಯರಲ್ಲಿ ವಿಶೇಷಮಾನ್ಯರಾಗಿ, ತತ್ತ್ವವೇತ್ತರಾಗಿ, ಪ್ರಾಚ್ಯ ಪಾಶ್ಚಾತ್ಯ ನವೀನ ವಿದ್ಯಾಭ್ಯಾಸದ ಪೂರ್ಣಪ್ರಭಾವವನ್ನು ಪಡೆದವರಾಗಿ, ತರ್ಕಬುದ್ಧಿಯನ್ನೂ ವೈಜ್ಞಾನಿಕದೃಷ್ಟಿಯನ್ನೂ ಚೆನ್ನಾಗಿ ಅಳವಡಿಸಿಕೊಂಡವರಾಗಿ, ಶಾಸ್ತ್ರಾಭ್ಯಾಸದಿಂದಲೂ ಸ್ವಂತಸಾಧನೆಯಿಂದಲೂ ಆಧ್ಯಾತ್ಮಿಕ ವಿಚಾರಗಳನ್ನು ಬೋಧಿಸಲೂ ಶೋಧಿಸಲೂ ಅಧಿಕಾರೀಪುರುಷರಾಗಿ, ಬಹುಜನ ಪೂಜಾಗೌರವಭಾಜನರಾಗಿ ಇದ್ದವರೊಬ್ಬರು ಸಪ್ರಮಾಣವಾಗಿ ಸಾವಧಾನವಾಗಿ ವಿಚಾರ ಪೂರ್ವಕವಾಗಿ, ಚೆನ್ನಾಗಿ ಆಲೋಚಿಸಿ ಮಥಿಸಿ ಸಂಶೋಧಿಸಿ, ವಿದ್ವಜ್ಜನ ಸಮ್ಮತವಾಗುವಂತೆ ಬರೆದಿರುವ ಮಹಾಗ್ರಂಥ.

ಷಷ್ಟಿನಮನ, ಶ್ರೀ ರಾಮಕೃಷ್ಣ ಲೀಲಾಪ್ರಸಂಗ, ಪುಟ ೨೬೪–೫

೭೮೭

ಅಯ್ಯಯ್ಯೊ
ಏನು ಬಂದಿದೆ ನಿಮಗೆ ಅಲ್ಲಿ ಆತಂಕ ?
ಕಾದಿರದೆ ನಿಮಗಿಲ್ಲಿ ಘೋರತರ ನರಕ ?

ಪ್ರೇತ-ಕ್ಯೂ, ಪ್ರೇತ-ಕ್ಯೂ, ಪುಟ ೭೫

೭೮೮

ಆವ ಧರ್ಮಕೆ ಸಾವನಪ್ಪುವೆವೂ ಪೊರೆವುದಾ
ಧರ್ಮಮೀ ಲೋಕಮಂ. ನಿನ್ನ ಸತಿಸುತರೊಂದು
ಹೊರತೆ ?

ಶ್ರೀ ರಾಮಾಯಣ ದರ್ಶನಂ, ರಣವ್ರತರ್ ವಹ್ನಿರಂಹರ್, ಪಾತ್ರ ವಹ್ನಿ, ಪುಟ ೩೩೬

೭೮೯

ಇಂದಿನ ಕಿಶೋರ ಕವಿಗಳ ಬರಹದಲ್ಲಿ ಬಹು ಪಾಲು ಅನುಕರಣವಾದರೂ ಅದು ಸ್ವಾಭಾವಿಕವಾಗಿರುವುದರಿಂದ ಚಿಂತೆಗೆ ಎಡೆಗೊಡುವಂತಹ ವಿಷಯವೇನಲ್ಲ. ಆದರೆ ಹಲವರಲ್ಲಿ ತೋರುವ ಒಂದು ಅತಿಲಘು ಮನೋಧರ್ಮವೂ ಸುಲಭಪ್ರಶಂಸೆಗೆ ಹಾತೊರೆಯುವ ಶ್ರಮವಂಚನಬುದ್ಧಿಯೂ ಮತಿಗೌರವ ಸಾಲದ ಸ್ವಾತಂತ್ರ್ಯ ಭ್ರಾಂತಿ ಮಾತ್ರವಾಗಿರುವ ಅತಂತ್ರತೆಯೂ ನೆಲದಲ್ಲಿ ಸರಿಯಾಗಿ ಬೇರೂರುವ ಮುನ್ನವೆ, ಪ್ರಾಚೀನ ಕಮಿನೋಫಲವತ್ ಕಾವ್ಯ ಕ್ಷೇತ್ರಗಳಲ್ಲಿ ಸುಪ್ರತಿಷ್ಠರಾಗಿ ಸರ್ವರಸಗ್ರಗಣ ಸಾಮರ್ಥ್ಯವನ್ನೂ ರಸತಪಶ್ಶಕ್ತಿಯನ್ನೂ ಸಂಪಾದಿಸುವ ಮೊದಲೆ, ಆಕಾಶಕ್ಕೆ ಬೆಳೆದು ಲೋಕನೇತ್ರ ಕೇಂದ್ರಗಳಾಗಿ ನಿಲ್ಲಬೇಕೆಂಬ ವಟೋಪಮವಾದ ವಟುಮಹತ್ವಾಕಾಂಕ್ಷೆಯೂ ಪ್ರಶಂಸನೀಯವಾದರೂ ಬುಡಭದ್ರತೆಗೆ ಕೊಡಲಿ ಹಾಕಿಕೊಳ್ಳುವ ಆತ್ಮವಿಧ್ವಂಸನೀಯವಾದ ಬಾಲಕಾತುರತೆಯೂ ಕನ್ನಡ ಸಾಹಿತ್ಯ ಶ್ರೇಯೋಕಾಂಕ್ಷಿಗಳಿಗೆ ಅಧೈರ್ಯ ತರವಂತಿದೆ.

ವಿಭೂತಿ ಪೂಜೆ, ಇಂದಿನ ಹೊಸಗ್ಗನ್ನಡಕವಿತೆ, ಪುಟ ೨೨-೩

೭೯೦

ನಾ ಸಾವಿಗೆ ಅಂಜುವೆನೆಂದಲ್ಲ,
ಅದರರ್ಥವ ತಿಳಿಯದನೆಂದಲ್ಲ ;
ನಿನ್ನಾ ಸಂಗಕ್ಕೆ ಕೊರಗುವೆನು ;
ಶ್ರೀ ಗುರುದೇವನ ಪಾದವ ಸೇರಿದೆ ;
ಬಲ್ಲೆನು ನಾನೂ ಸೇರುವೆನು.
ಮಾಡುವ ಕೆಲಸವ ಮುಗಿಯಿಸಿ ಬೇಗನೆ
ಬಲ್ಲೆನು ನಾನೂ ಸೇರುವೆನು.

ಕೊಳಲು, ಗೊಲ್ಲನ ಬಿನ್ನಹ, ಪುಟ ೫

೭೯೧

ಈಗ ಜನ ಅರ್ಥಶಾಸ್ತ್ರ ರಾಜಕೀಯಶಾಸ್ತ್ರ ವಿಜ್ಞಾನಾದಿ ವಿಚಾರಗಳನ್ನು ಸ್ವಪಕ್ಷ ಸಮರ್ಥನೆಯ ಚುನಾವಣಾಪ್ರಚಾರದ ಭಾಷಣಗಳಿಂದಲಾದರೂ ಅರಿಯತೊಡಗಿದ್ದಾರೆ. ದೇಶದ ಜಮೀನುದಾದರೂ ಶ್ರೀಮಂತರೂ ಬಂಡವಾಳಗಾರರೂ ದಿನದಿನವೂ ಉಚ್ಚಕಂಠದಿಂದ ಘೋಷಿತವಾಗಿ ಮನೆಯ ಬಾಗಿಲೊಳಗೂ ನುಗ್ಗಿಬರುತ್ತಿರುವ ಈ ಹೊಸ ಹೊಸ ತತ್ತ್ವಗಳ ನ್ಯಾಯಕ್ಕೆ ಹೊಂದಿಕೊಳ್ಳಲಾರದೆ ಅದನ್ನು ಒಂದು ರೀತಿಯ ದರೋಡೆ ಎಂದೆ ಭಾವಿಸುತ್ತಾರೆ. ಅದು ದರೋಡೆಯಲ್ಲ; ಹಿಂದೆ ಧಾರ್ಮಿಕ ಉಪಾಯಗಳಿಂದ ಮಾಡಿದ್ದ ದರೋಡೆಯನ್ನು ಈಗ ಕಾರ್ಮಿಕ ಉಪಾಯಗಳಿಂದ ಹಂಚುವ ವಿಧಾನ ಎಂಬುದನ್ನು ಅವರಿಗೆ ಮನದಟ್ಟು ಮಾಡಿಕೊಡಬೇಕು. ಯಾವುದನ್ನು ಆಧ್ಯಾತ್ಮಿಕವಾಗಿ ಎಲ್ಲರೂ ಒಪ್ಪಿಕೊಳ್ಳುತ್ತಾ ಬಂದಿದ್ದಾರೊ ಅದನ್ನು ಲೌಕಿಕವಾಗಿಯೂ ಸಾಧಿಸುವುದಕ್ಕೆ ಆವಶ್ಯಕವಾದ ಮಾನಸಿಕ ಹಿನ್ನೆಲೆಯನ್ನೂ ಹೃದಯದ ಪರಿವರ್ತನೆಯನ್ನೂ ಉಂಟುಮಾಡಬೇಕು. ಆ ದಿಕ್ಕಿನಲ್ಲಿ ಸಾಹಿತ್ಯ ಮಾಡಬೇಕಾಗಿರುವ ಕೆಲಸ ಅತ್ಯಂತ ಮಹತ್ತಾದುದಾಗಿದೆ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೩೭

೭೯೨

ಸೃಷ್ಟಿ ಸೌಂದರ್ಯದೊಲ್ಮೆಯೆ ಸೃಷ್ಟಿಕರ್ತಂಗೆ
ಪೂಜೆಯಯ್. ರಸಜೀವನಕೆ ಮಿಗಿಲ್ ತಪಮಿಹುದೆ?
ರಸಸಿದ್ಧಿಗಿಂ ಮಿಗಿಲೆ ಸಿದ್ಧಿ? ಪೊಣ್ಮಿದೆ ಸೃಷ್ಟಿ
ರಸದಿಂದೆ; ಬಾಳುತಿದೆ ರಸದಲ್ಲಿ; ರಸದೆಡೆಗೆ ತಾಂ
ಪರಿಯುತಿದೆ; ಪೊಂದುವುದು ರಸದೊಳೈಕ್ಯತೆವೆತ್ತು
ತುದಿಗೆ. ರಸಸಾಧನಂಗೆಯ್ಯದಿರುವುದೆ ಮೃತ್ಯು.
ಆನಂದರೂಪಮಮೃತಂ ರಸಂ!

ಶ್ರೀ ರಾಮಾಯಣ ದರ್ಶನಂ, ಶಿಲಾತಪಸ್ವಿನಿ, ಪಾತ್ರ ವಿಶ್ವಾಮಿತ್ರ, ಪುಟ ೪೪

೭೯೩

ನಿನ್ನನೆನಿತು ಮುದ್ದಿಸಿದರೂ ನನಗೆ ತಣಿವಿಲ್ಲ.
ನಿನ್ನನೆನಿತು ಬಿಗಿಯಪ್ಪಿದರೂ ನನಗೆ ದಣಿವಿಲ್ಲ.
ನೀನೆನ್ನ ಚಿನ್ನ, ರನ್ನ, ಸ್ವಾಮಿ, ಸ್ವರ್ಗ, ದೇವರು;
ನನ್ನ ಸರ್ವಸ್ವವೂ ನೀನೆ!
ನೀನೆನ್ನ ರಾಧೆ, ಕೃಷ್ಣ, ಪ್ರೇಮ, ಪ್ರಾಣ;
ನನ್ನ ಜೀವನದ ಜೀವ!
ನಾನಿಲ್ಲ, ನಾನಿಲ್ಲ!
ನೀನೆ ಇರುವುದೆಲ್ಲ, ಓ ನನ್ನ ನಲ್ಲ!

ಕಿಂಕಿಣಿ, ಸಮರ್ಪಣ, ಪುಟ ೬೩

೭೯೪

ಮನುಷ್ಯನ ಜಾಗ್ರದವಸ್ಥೆಯ ಜೀವನ ಮಹಾದ್ಭುತವಾಗಿದೆ. ಆದರೆ ಸ್ವಪ್ನ ಜಗತ್ತು ಅದ್ಭುತತರವಾದುದು. ಕೋಟ್ಯನುಕೋಟಿ ಮಾನವರು ಪ್ರತಿ ದಿವಾ ರಾತ್ರಿಗಳಲ್ಲಿಯೂ ನಿದ್ದೆಮಾಡುವಾಗಲೆಲ್ಲ ಗಣನೆಯಿಲ್ಲದಷ್ಟು ಕನಸುಗಳನ್ನು ಕಾಣುತ್ತಾರೆ. ಅವುಗಳಾದರೂ ಎಷ್ಟು ಚಿತ್ರವಿಚಿತ್ರವಾಗಿರುತ್ತವೆ ? ಕಲ್ಪನೆಗೂ ಅಸಾಧ್ಯವಾಗುವಂತಹ ಸನ್ನಿವೇಶಗಳೂ ಚಿತ್ರಗಳೂ ಘಟನೆಗಳೂ ಸ್ವಪ್ನರಾಜ್ಯದಲ್ಲಿ ನಿರಂಕುಶವಾಗಿ ನಿಯಮಾತೀತವಾಗಿ ಅಥವಾ ನಿಯಮ ವಿರೋಧವಾಗಿ ಸಾಗಿಹೋಗುತ್ತವೆ.

ಎಲ್ಲ ದೇಶದ ಕವಿಗಳೂ ತಮ್ಮ ತಮ್ಮ ಕಾವ್ಯ ಪುರಾಣ ಕಟ್ಟುಕಥೆಗಳಲ್ಲಿ ಚಿತ್ರಿಸಿರುವ ಯಕ್ಷ, ರಾಕ್ಷಸ, ದೇವತೆ, ಕಿನ್ನರ, ಪಿಶಾಚಿ, ಭೂತ, ಸ್ವರ್ಗ, ನರಕ ಮೊದಲಾದ ವಿಷಯಗಳಿಗೆ ಸ್ವಪ್ನವೇ ಬಹುಮಟ್ಟಿಗೆ ಕಾರಣವಾಗಿದೆ ಎಂದರೆ ತಪ್ಪಾಗುವುದಿಲ್ಲ.

ಕಾನೂರು ಹೆಗ್ಗಡಿತಿ, ಪುಟ ೨೬೭

೭೯೫

ಬಾಳಿತು ನಮ್ಮೀ ನಾಗರಿಕತೆ ಸಿರಿ
ಮಣ್ಣುಣಿ ನೇಗಿಲಿನಾಶ್ರಯದಿ ;
ನೇಗಿಲ ಹಿಡಿದಾ ಕೈಯಾಧಾರದಿ
ದೊರೆಗಳು ದರ್ಪದೊಳಾಳಿದರು.
ನೇಗಿಲ ಬಲದೊಳು ವೀರರು ಮೆರೆದರು,
ಶಿಲ್ಪಗಳೆಸೆದರು, ಕವಿಗಳು ಬರೆದರು.

ಕೊಳಲು, ನೇಗಿಲಯೋಗಿ, ಪುಟ ೨೮

೭೯೬

ಮರುವುಟ್ಟಲಾ ಮಹಿಮೆಯಂ,
ರಸಮಂ, ಪರಾತ್ಪರವವನುಭವಿಸಿದಾತ್ಮರಿಗೆ :
ಮಹದ್‌ವ್ಯಕ್ತಿ ಸನ್ನಿಧಿಯೊ ? ಮಹತ್ ಕಾವ್ಯ ಪರಿಚಯವೊ ?
ಮಹಾರುದ್ರವೀಣಾ ಮಹದ್ ಗಾನದನುಭವವೊ ?
ಮಹಾವಾನರನ ವನಧಿ ಲಂಘನವೋ ? ಭೇದಮೇಂ ?
ಪುನರ್‌ಜನ್ಮವೈಸಲೆ ರಸಸ್ನಾತ ಚೇತನಕೆ !

ಶ್ರೀ ರಾಮಾಯಣ ದರ್ಶನಂ, ಸಾಗರೋಲ್ಲಂಘನಂ, ಪುಟ ೪೨೨

೭೯೭

ನೀವು ಒಪ್ಪಿರುವ ತತ್ವಗಳನ್ನು ಲೋಕಕ್ಕೆ ಒಳ್ಳೆಯದು ಮಾಡುವ ಯಾರೇ ಮಾಡಿದರೂ ನೀವು ಅದಕ್ಕೆ ಬೆಂಬಲಕೊಡಬೇಕು, ಸಹಕರಿಸಬೇಕು. ನೀವು ಒಪ್ಪಿರುವ ತತ್ವಗಳನ್ನೆ ಆಚರಿಸ ಹೊರಡುವವರನ್ನು ವಿರೋಧಿಗಳೆಂದು ಹೇಳುವುದು ಅವಿವೇಕ. ಒಳ್ಳೆಯ ಕೆಲಸ ಎಲ್ಲಿ ನಡೆಯುತ್ತದೆಯೋ ಅದನ್ನು ನೀವು

ಒಪ್ಪಿಕೊಳ್ಳಬೇಕು. ಬೆಂಬಲಕೊಡಬೇಕು. ಅದನ್ನು ಪ್ರಚೋದಿಸಬೇಕು. ಪ್ರಚಾರ ಮಾಡಬೇಕು. ಯಾವುದನ್ನೂ ವಿರೋಧಪಕ್ಷವೆಂದು ಮಾಡಿಕೊಳ್ಳಬೇಡಿ. ಅದು ವಿರೋಧ ತತ್ವಕ್ಕೆ ಮಾತ್ರ ಸೀಮಿತವಾಗಿರಲಿ ಅಷ್ಟೆ. ವಿರೋಧ ತತ್ವವನ್ನು ವಿರೋಧಿಸಿ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ, ಪುಟ ೮೧

೭೯೮

ಹುಡುಗನಾಗಿದ್ದಾಗ, ಏನೊ ಪಾಪ, ತಂದೆತಾಯಿಗಳಿಲ್ಲ, ಎಂದು ಅನ್ನ ಹಾಕಿದ್ದಕ್ಕೆ ದೊಡ್ಡವನಾದ ಮೇಲೆಯೂ ಸ್ವತಃ ದುಡಿದು ತಿನ್ನದೆ ಇನ್ನೊಬ್ಬರ ಕೈ ಹಾರೈಸಿದರೆ ಯಾರಿಗೆ ತಾನೆ ಸಹಿಸಲಾಗುತ್ತದೆ.

ನನ್ನ ದೇವರು ಮತ್ತು ಇತರ ಕಥೆಗಳು, ವೈರಾಗ್ಯದ ಮಹಿಮೆ, ಪುಟ ೯೦

೭೯೯

ಯೌವನದ ಕಂಗಳಿಗೆ
ಮನ್ಮಥನಪರಿಚಿತನೆ ? ಬಂಡುಣಿಗೆ ತಾವರೆಯ
ಹೃದಯ ಕಳಶದ ಜೇನಿನೌತಣಕೆ ಕರೆ ಬೇಕೆ ?

ಚಿತ್ರಾಂಗದಾ, ಎರಡನೆಯ ಪರ್ವಂ, ಪಂಕ್ತಿ ೭೧೦-೨, ಪುಟ ೨೬

೮೦೦

ನನ್ನ ವಿದ್ಯಾರ್ಥಿದಶೆಯಲ್ಲಿ ಕನ್ನಡವೆಂಬುದು ಏನೋ ಪರೀಕ್ಷೆಗಾಗಿ ಓದುವ ಒಂದು ವಿಷಯವಾಗಿತ್ತು; ತನ್ನ ಅಭಿಮಾನವೆಲ್ಲ ಇಂಗ್ಲಿಷಿಗೆ ಮೀಸಲಾಗಿತ್ತು. ಬಹುಶಃ ನಿಮಗಾರಿಗೂ ಎಂದೂ ಇಲ್ಲದೆ ಇರುವಷ್ಟು ತಿರಸ್ಕಾರ (ಹಾಗೆಂದರೆ ಪ್ರಶಂಸೆಯಾದೀತೊ ಏನೊ !) ಅಥವಾ ಉದಾಸೀನವಿತ್ತು, ನನಗೆ ಕನ್ನಡದ ಮೇಲೆ.

ಷಷ್ಟಿನಮನ, ಭಾರತದಲ್ಲಿ ಇಂಗ್ಲಿಷಿನ ಸ್ಥಾನ, ಪುಟ ೧೧೦

೮೦೧

ಯಾವುದನ್ನು ನೇರವಾಗಿ ಹೇಳಬಾರದೊ, ಹೇಳಿದರೆ ಪರಿಣಾಮಕಾರಿಯಾಗುವುದಿಲ್ಲವೊ ಅದನ್ನು ಅನ್ಯ ವಿಧಾನಗಳಿಂದ ಸಾಧಿಸುತ್ತದೆ ಸಮಾಜದ ಸೌಜನ್ಯ, ದಾಕ್ಷಿಣ್ಯ ಮತ್ತು ಸಭ್ಯತೆ.

ಮಲೆಗಳಲ್ಲಿ ಮದುಮಗಳು, ಪುಟ ೨೪೪

೮೦೨

ಹಳ್ಳಿಯಿಲ್ಲದ ದೇಶವದು ನಿತ್ಯರೋಗಿ,
ಕೊಳೆಯುವುದು ನಿರ್ಜೀವ ಶವದಂತೆಯಾಗಿ.

ಹಾಳೂರು, ಪಂಕ್ತಿ ೫೩೧-೨, ಪುಟ ೨೩

೮೦೩

ನಿನ್ನ ಕರಗಳು, ತಾಯೆ,
ನನ್ನ ಸೆರೆಗೈದಿಹವು.

ಇನ್ನು ನಾನದ ಸಹಿಸೆ!
ಲೋಕವಿದು ಸಾಕು ಆ
ನಾಕ ಬೇಕಮ್ಮಾ.

ಮೇಘಪುರ, ಮೇಘಪುರ, ಪುಟ ೨೩

೮೦೪

ವ್ಯಕ್ತಿತ್ವಕ್ಕೆ ತಕ್ಕ ಆತ್ಮಗೌರವ ಬೇಡವೆ! ವೇಷವನ್ನು ನೋಡಿದರೆ ದೊಡ್ಡ ದೊಡ್ಡ ಪಟ್ಟೆನಾಮದ ವನಾಚಾರ್ಯ! ಆಚಾರವನ್ನು ನೋಡಿದರೆ ಅತಿಹೀನ. ಬರಿಯ ಕುಹಕ, ಠಕ್ಕು, ಠೌಳಿ, ಮೋಸ. ಕಳ್ಳರು ಕೂಡ ನಾಚಿಕೆ ಪಟ್ಟುಕೊಳ್ಳುವಂತಹ ಕೀಳು ನಡತೆ. ನನಗೇನೋ ಖಂಡಿತ ಸಮರ್ಪಕವಾಗಿಲ್ಲ ಹುಲಿಗಳ ನಡತೆ.

ಮಲೆನಾಡಿನ ಚಿತ್ರಗಳು, ಬಂದನಾ ಹುಲಿರಾಯನು, ಪುಟ ೩೯

೮೦೫

ಪಕ್ಕದವನು ಸ್ವಲ್ಪ ಮೇಲಕ್ಕೇರಿದ ಅಂದರೆ ಅವನನ್ನು ನೋಡಿ ಸಂತೋಷ ಪಡುವಂತೆ ಭಗವಂತನ ಅನುಗ್ರಹವನ್ನು ಪಡೆದರೆ, ಅವನ ಸಂತೋಷದ ಜೊತೆಗೆ ನಮ್ಮ ಸಂತೋಷವೂ ಸೇರಿ, ಇಬ್ಬರ ಸಂತೋಷವೂ ಇಮ್ಮಡಿಗೊಳ್ಳುತ್ತದೆ. ಹಾಗಲ್ಲದಿದ್ದರೆ, ನನಗೂ ಸಂತೋಷ ಇಲ್ಲ, ಅವನಿಗೂ ಸಂತೋಷವಿಲ್ಲ; ಬರಿಯ ಕರುಬು ಬದುಕನ್ನೇ ಬೇಯಿಸುತ್ತದೆ. ಆದ್ದರಿಂದ ಕರುಬುವ ನಾನೇ ಕುಬ್ಜನಾದ ಹಾಗಾಗುತ್ತದೆ.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೧೬

೮೦೬

....ನವ್ಯರೆಂದು ಹೇಳಿಕೊಳ್ಳುವವರ ಕೆಲವು ವಿಮರ್ಶೆಗಳನ್ನು ಓದಿದರೆ,– ಅವರ ಕೆಲವು ಕಾವ್ಯಗಳನ್ನು ಓದಿದರೆ ಅರ್ಥವಾಗುವುದಿಲ್ಲವಲ್ಲಾ ಹಾಗೆ–ಏನು ಹೇಳುತ್ತಿದ್ದಾರೆ ಎಂಬುದೇ ಅರ್ಥವಾಗುವುದಿಲ್ಲ. ಮಾತೆತ್ತಿದರೆ "ಇಲ್ಲಿ ಭಾಷೆ ಸೋಲುತ್ತದೆ"–ಎಂದು ಬಿಡುತ್ತಾರೆ. ಹಾಗೆಂದರೇನಪ್ಪಾ, "ಇಲ್ಲಿ ಭಾಷೆ ಸೊಲುತ್ತದೆ" ಅಂತ ಅಂದರೆ? ವಿಮರ್ಶೆ ಎಂದರೆ ಏನು? ಸಂಪೂರ್ಣವಾಗಿ ವೈಯಕ್ತಿಕವಾದ ಒಬ್ಬನ ಅನುಭವ, ನನಗೆ ಹಾಗೆ ಅನಿಸುತ್ತದೆ. ಅಂದಮಾತ್ರಕ್ಕೆ, ಭಾಷೆ ಸೋಲುತ್ತದೆ ಅಂದರೇನು? ಎಲ್ಲರಿಗೂ ಭಾಷೆ ಸೋಲುತ್ತದೆಯೆ? ಇವೆಲ್ಲ ಬರಿಯ Slogan 'ಎಂಜಲು ಮಾತು' ಅಷ್ಟೆ. "ಇದು ಸಂಸ್ಕೃತ ಭೂಯಿಷ್ಠವಾಗಿದೆ" ಎನ್ನುವುದು ಮತ್ತೊಂದು ಎಂಜಲು ಮಾತು. ಸಂಸ್ಕೃತ ಭೂಯಿಷ್ಠವಿರಬಹುದು. ಇರಬಾರದೇಕೆ? ಭಾವಾಭಿವ್ಯಕ್ತಿಗೆ ಸಂಸ್ಕೃತ ಭೂಯಿಷ್ಠತೆಯ ಅತ್ಯಾವಶ್ಯಕವಾಗಬಹುದಲ್ಲಾ?

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೧೫

೮೦೭

....ಈ 'ನವ್ಯ' ಎಂದು ಬರೆಯುತ್ತಿರುವವರಲ್ಲಿ ನಿಜವಾಗಿಯೂ ಬಹಳ ಮೇಲ್ಮಟ್ಟದ ಕೃತಿಗಳೂ ಇವೆ; ಇಲ್ಲ ಎಂದು ನಾನು ಹೇಳುತ್ತಾ ಇಲ್ಲ. ಆದರೆ ಇವು

ಗಳನ್ನು ನೆವವಾಗಿಸಿಕೊಂಡು ದುರುಪಯೋಗ ಆಗುತ್ತಾ ಇದೆ. ಹೆಸರು ಏನಾದರೂ ಇಟ್ಟುಕೊಳ್ಳಿ ನೀವು. ಆದರೆ ಅದು ಜನಜೀವನಕ್ಕೆ ಸಂಬಂಧಪಟ್ಟಿರಬೇಕು. ಅಷ್ಟೆ.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೨೩

೮೦೮

ಈಗ ನಮ್ಮ ರಾಜಕೀಯ ರಂಗ ಹೇಗಾಗಿದೆ ಎಂದರೆ ಪ್ರಾಮಾಣಿಕರೂ ಸಂಭಾವಿತರೂ ಸುಸಂಸ್ಕೃತರೂ ಯಾರೂ ಅದರ ಹತ್ತಿರ ಸುಳಿಯಲೂ ಅಂಜುತ್ತಾರೆ. ಚುನಾವಣೆಯ ರೀತಿಯನ್ನೆ ಬದಲಾಯಿಸದಿದ್ದರೆ ಮಾನಮರ್ಯಾದೆಯುಳ್ಳ ಯಾವ ಪ್ರಾಮಾಣಿಕ ಯೋಗ್ಯನೂ ಅದರಲ್ಲಿ ಪಾಲುಗೊಳ್ಳುವ ಸಂಭವವಿಲ್ಲ.

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೬

೮೦೯

...ನಾನು ಮಾತ್ರ ಹಿಂದುಳಿದುಬಿಟ್ಟೆ, ಅಪ್ರಸಿದ್ಧನಾದೆ, ಆದ್ದರಿಂದ ಕೆಲಸಕ್ಕೆ ಬಾರದವನಾದೆ ಎಂದು ಕೈ ಹಿಸುಕಿಕೊಳ್ಳುವುದು ಬೇಡ. ಹೆಸರು, ಹೊರತಿಲ್ಲದೆ, ಎಲ್ಲಾ ಕಾಲದಲ್ಲಿಯೂ ಯೋಗ್ಯತೆಗೆ ಅಳತೆಯಾಗುವುದಿಲ್ಲ. ಅಲ್ಲದೆ ಒಮ್ಮೆಮ್ಮೆ ಅಯೋಗ್ಯತೆಗೆ ಅಳತೆಯಾಗುವುದೂ ಉಂಟು. ನಿಮಗೆ ನಿಜವಾದ ಸಿಂಹಾಸನ ಬೇಕಾದರೆ ಈ ನಾಟಕದ ಸಿಂಹಾಸನಗಳಿಗಾಗಿ ಪರದಾಡಬೇಡಿ. ಅನಾಮಧೇಯವಾದ ಅಜ್ಞಾತದ ಅಖ್ಯಾತಿಯ ನೀರವ ಪರ್ಣಶಾಲೆಯಲ್ಲಿ ನಿರಾಲಸ್ಯದಿಂದ ತಪೋಜೀವನದಲ್ಲಿ ನಿರತರಾದರೆ ಮುಂದೆ ನಿಮಗೆ ರಸಸಿದ್ಧಿ ಕಟ್ಟಿಟ್ಟ ಬುತ್ತಿಯಂತೆ ಕೈಗೂಡುತ್ತದೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಲ್ಲಿ ಮತಿಗೌರವದ ಆವಶ್ಯಕತೆ, ಪುಟ ೩೪

೮೧೦

ರಾಜಕೀಯವಾಗಿ ನೀವು ಒಪ್ಪಿ, ಬಿಡಿ, ಈಗ ಈ ತುರ್ತು ಪರಿಸ್ಥಿತಿಯ ದೆಸೆಯಿಂದ ಏನೋ ಇಪ್ಪತ್ತು ಅಂಶದ ಕಾರ್ಯಕ್ರಮಗಳು ಎಂದು ಹಾಕಿಕೊಂಡಿದ್ದಾರಲ್ಲ, ಇವುಗಳೆಲ್ಲ ನಿಜವಾಗಿಯೂ ಸಮರ್ಪಕವಾಗಿ ನಡೆದರೆ ಖಂಡಿತ ಸ್ವಲ್ಪ ಮಟ್ಟಿಗಾದರೂ ಪ್ರಯೋಜನವಾಗುತ್ತದೆ. ಜನ ಸಾಮಾನ್ಯ ವರ್ಗಕ್ಕೆ ನೀವು ರಾಜಕೀಯ ದೃಷ್ಟಿಯಿಂದ ನೋಡಿದಾಗ ಬೇರೆತರಹ ಕಾಣಿಸಬಹುದು. ಆದರೆ ಮುಂದೆ ದೇಶ ಮುಂದುವರಿಯ ಬೇಕಾದರೆ ಬಹುಶಃ ಈ ತರಹದ ಕಾರ್ಯಕ್ರಮಗಳನ್ನು ಇಟ್ಟುಕೊಂಡು ಜನತೆಯ ಪ್ರಜ್ಞೆಯನ್ನು ನಾವು ಎಚ್ಚರಿಸಬೇಕಾಗುತ್ತದೆ.

ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಅದೇ ಹೆಸರಿನ ಲೇಖನ, ಪುಟ ೧೪

೮೧೧

ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ ? ಎಂಬ ಪ್ರಶ್ನೆಗೆ ಉತ್ತರ : ಆತ್ಮಶ್ರೀ ಇಲ್ಲದ ವಿದ್ಯೆ ಶ್ರೀ ರಾಮನಿಲ್ಲದ ಅಯೋಧ್ಯೆ !

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ, ಪುಟ ೬೨

೮೧೨

ಕವಿತೆಗೆ ಕಲ್ಪನಾಪ್ರತಿಭೆ ಬೇಕೇಬೇಕು ; ಭಾವವೆ ಅದರ ಆತ್ಮ, ಶಬ್ದಗಳೆ ಅದರ ದೇಹ. ಅದು ಆತ್ಮವು ತನಗೆ ತಾನೆ ಆಡಿಕೊಳ್ಳುವ ಮಾತು. ಅದಕ್ಕೆ ಸದಸ್ಯರು ಬೇಕಿಲ್ಲ. ಅದು ಎಂದಿಗೂ ಉಪದೇಶಕ್ಕೆ ಹೊರಡದು. ಕೇಳುವವರನ್ನು ಮೈಮರೆಸಿ ವಶಮಾಡಿ ಕೊಳ್ಳುತ್ತದೆ. ಅದು ಬರಿಯ ಬುದ್ಧಿಯ ಕಾರ್ಯವಲ್ಲ. ಪಾಂಡಿತ್ಯದಿಂದ ಅದು ಲಭಿಸು ವುದಿಲ್ಲ. ಪೃಥಕ್ಕರಣದೃಷ್ಟಿ ಬುದ್ಧಿಯ ಕಾರ್ಯ ; ಏಕೀಕರಣ ದೃಷ್ಟಿ ಪ್ರತಿಭೆಯ ಕಾರ್ಯ.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೯–೧೦

೮೧೩

ಆಶ್ಚರ್ಯಗಳ ಮಧ್ಯೆ
ಪ್ರಶ್ನಚಿಹ್ನೆ ;
ಸರ್ವವನು ಸುತ್ತಿಹುದು
ಒಂದು ಸೊನ್ನೆ !

ಮಂತ್ರಾಕ್ಷತೆ, ಅವಿದ್ಯಾ, ಪುಟ ೧೫

೮೧೪

ಪೂರ್ವಯುಗದನುಭವದ ತಳಹದಿಯ ಮೇಲೆಯೇ
ಬರುವ ಕಾಲದ ಭವ್ಯಮಂದಿರವ ನಿರ್ಮಿಪೆನ್.

ಶ್ಮಶಾನ ಕುರುಕ್ಷೇತ್ರಂ, ಪಾತ್ರ ಕಲಿ, ಪುಟ ೮

೮೧೫

ನಾನು ಎಂದು 'ಶ್ರೀ ರಾಮಾಯಣ ದರ್ಶನಂ'ಎಂಬ ಮಹಾಕಾವ್ಯವನ್ನು ಬರೆಯಬೇಕೆಂದು ಈಶ್ವರೀ ಸಂಕಲ್ಪದಿಂದ ನಿಶ್ಚಯಿಸಿದೆನೋ ಅಂದಿನಿಂದ ಸುಮಾರು ೧೦–೧೨ ವರ್ಷಗಳ ಕಾಲ ವಲ್ಮೀಕ ಪ್ರವೇಶ ಮಾಡಿದ್ದೆ. ವಲ್ಮೀಕ ಎಂದರೆ ಹುತ್ತ ; ಹುತ್ತ ಹೊಕ್ಕಿದ್ದೆ ಎಂದು ಅರ್ಥ.

ಷಷ್ಟಿನಮನ, ವಿಶ್ವಮಾನವ, ಪುಟ ೪೬

೮೧೬

....ಭ್ರಷ್ಟಾಚಾರವನ್ನು ನಿರ್ಮೂಲಮಾಡುವ ಮತ್ತು ನಿಜವಾದ ಪ್ರಜಾಸತ್ತೆಯನ್ನು ರಕ್ಷಿಸುವ ಇಚ್ಛೆ ನಿಮಗಿದ್ದರೆ ಇಂದಿನ ರೀತಿಯ ಧನಾಶ್ರಿತ ಚುನಾವಣೆಯ ಪದ್ಧತಿ ಯನ್ನೆ ಬದಲಾಯಿಸಿ ಅದನ್ನು ಗುಣಾಶ್ರಿತವನ್ನಾಗಿ ಪರಿವರ್ತಿಸುವ ಕರ್ತವ್ಯ ನಿಮ್ಮ ಹೆಗಲಮೇಲೆ ಬೀಳುತ್ತದೆ. ಉಗ್ರಕ್ರಾಂತಿಯಿಂದಲಾದರೂ ನೀವು ಚುನಾವಣೆಯನ್ನು ಸಾತ್ತ್ವಿಕ ಮಾರ್ಗಕ್ಕೆ ತಿರುಗಿಸದಿದ್ದರೆ ಸ್ವಾರ್ಥಿಗಳೂ ಸಮಯಸಾಧಕರೂ ಗೂಂಡಾ ಗಳೂ, ಕಳ್ಳಸಂತೆಖೋರರೂ, ಕಳ್ಳಸಾಗಣೆಯ ಖದೀಮರೂ, ಚಾರಿತ್ರ ಹೀನರೂ ಪ್ರಜಾಸತ್ತೆಯ ಹುಸಿಹೆಸರಿನ ಹಿಂದೆ ಪ್ರಚ್ಛನ್ನ ಸರ್ವಾಧಿಕಾರ ನಡೆಸುತ್ತಾರೆ.

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೬

೮೧೭

ಸನ್ನಿವೇಶದಿಂದ ದುರಾತ್ಮನು ಮಹಾತ್ಮನಾಗಬಹುದು, ಮಹಾತ್ಮನು ದುರಾತ್ಮನಾಗಬಹುದು.

ಕಾನೂರು ಹೆಗ್ಗಡಿತಿ, ಪುಟ ೪೧೭

೮೧೮

ಬೇಡುತಿಹೆನಡಿಗಡಿಗೆ ನಿನ್ನಡಿಗೆ ಮುಡಿಚಾಚಿ :
ತಿಳಿಯದವರಾಡಿಕೊಳಲತಿಯೆಂದು ! ಬಲ್ಲೆನಾಂ
ಮುಂದಿರುವ ಯಾತ್ರೆಯ ಮಹದ್ದೂರಮಂ, ಬೃಹದ್
ಭಾರಮಂ, ರುಂದ್ರ ಪಾರಾವಾರಮಂ : ಹಸುಳೆ
ಹೆಗ್ಗಾಡಿಗಳುಕುವೋಲಳುಕಿದಸುಶಿಶು ಹೆದರಿ
ಬೇಡುತಿದೆ ನಿನ್ನನಡಿಗಡಿಗಿಂತು, ಓ ತಾಯೆ !

ಶ್ರೀ ರಾಮಾಯಣ ದರ್ಶನಂ, ಕುಣಿದಳುರಿಯ ಉರ್ವಶಿ, ಪುಟ ೧೫೪

೮೧೯

ದ್ವಿತೀಯ ಶ್ರೇಣಿಯಲ್ಲಿ ತೇರ್ಗಡೆಯಾಗುವುದನ್ನು 'ಉತ್ತಮ' ಎಂದು ವರ್ಣಿಸಿದುದಕ್ಕೆ ಈಗ ಯಾರಾದರೂ ನಗಬಹುದು. ಆದರೆ ನನ್ನ ಅಧ್ಯಯನದ ರೀತಿಯಲ್ಲಿ, ವಸ್ತುವಿನಲ್ಲಿ ಮತ್ತು ಉದ್ದೇಶದಲ್ಲಿ ಪರೀಕ್ಷೆಯ ಫಲಿತಾಂಶ ಎಂದೂ 'ಗಮ್ಯ'ವಾಗಿರಲಿಲ್ಲ ಎಂಬುದನ್ನು ಭಾವಿಸಿದರೆ ಸೆಕೆಂಡ್ ಕ್ಲಾಸಿನಲ್ಲಿ ಪಾಸಾಗಿದ್ದುದನ್ನು ಉತ್ತಮ ಎಂದೇ ಭಾವಿಸಬೇಕು.

ಮನುಜಮಥ ವಿಶ್ವಪಥ, ಆ ಅಮೃತ ಕ್ಷಣ, ಪುಟ ೬೮

೮೨೦

ಮಹತ್ಕಾರ್ಯಮದೆ ಮಹಾಶಕ್ತಿದಾಯಕಮಾಗೆ
ವಾನರರೊಳಲ್ಪರುಂ ಕಲ್ಪನೆ ಬೆದರ್ವವೋಲ್
ಬಲ್ ಗೆಯ್ಮೆಗೆಯ್ಯರೇಂ ?

ಶ್ರೀ ರಾಮಾಯಣ ದರ್ಶನಂ, ದಶಶಿರ ಕನಕಲಕ್ಷ್ಮಿ, ಪಾತ್ರ ಆಂಜನೇಯ, ಪುಟ ೪೩೯

೮೨೧

'ರಸ'ವು 'ಲೋಕ ಉತ್ತರ'ವಾದದ್ದು ; ರಸಾನುಭವ ಲೋಕಾನುಭವಕ್ಕೆ ಅಥವಾ ಭಾವಾನುಭವಕ್ಕೆ ಅತಿಕ್ರಾಂತವಾದದ್ದು. ರಸ ಯಾವಾಗಲೂ ಕಲಾನುಭವವೆ ; ಅದೆಂದಿಗೂ ಲೋಕಾನುಭವವಾಗುವುದಿಲ್ಲ.

ರಸೋ ವೈ ಸಃ, ರಸೋ ವೈ ಸಃ, ಪುಟ ೧೨೩

೮೨೨

ಬಾಳ ಬೇವು ಬೆಲ್ಲವಹುದೆ
ನಾವು ಮುನಿದ ಮಾತ್ರದಿ ?

ಅಳೆಯಲಹುದೆ, ತೂಗಲಹುದೆ,
ಕಟ್ಟಲಹುದೆ ಬಹುಜೀವರ
ಜಗಜ್ಜೀವ ನಾಟಕವನು
ನಮ್ಮ ಸುಖದ ಸೂತ್ರದಿ !

ಜೇನಾಗುವಾ, 'ಬಾಳ್ವುದು', ಪುಟ ೧೨

೮೨೩

ವೀರಶೈವಧರ್ಮಕ್ಕೆಂತೊ ಅಂತೆ ವಚನಸಾಹಿತ್ಯಕ್ಕೂ ಬಸವೇಶ್ವರರನ್ನು ಆಚಾರ್ಯಪುರುಷರೆಂದು ಪರಿಗಣಿಸಬಹುದು. ಆದರೆ ಅವರು ಪ್ರಧಾನವಾಗಿ ಆಚಾರ್ಯರು, ಗೌಣವಾಗಿ ವಚನಕಾರರು ಎಂಬುದನ್ನು ಮರೆಯಬಾರದು. ಅವರನ್ನು ವಚನಕಾರ ಮಾತ್ರರೆಂದು ಪರಿಭಾವಿಸಿದರೆ, ಮರವನ್ನು 'ಎಲೆಗಳನ್ನು ಸಿಕ್ಕಿಸಿಕೊಂಡಿರುವ ಕೋಲು' ಎಂದು ವರ್ಣಿಸಿದಂತಾಗುತ್ತದೆ. ಅವರು ಸಾಹಿತಿಯಲ್ಲ. ಸಾಹಿತ್ಯ ಸೃಷ್ಟಿಮಾಡಲೆಂದು ಅವರು ವಚನರಚನೆಗೆ ಕೈಹಾಕಲಿಲ್ಲ. ಅವರ ವಚನಗಳೂ ಅವರಂತೆಯೆ ಪ್ರಧಾನತಃ ಧರ್ಮ ಬೋಧನೆ ಮಾಡುವ ಪ್ರಭು ಸಮ್ಮಿತಗಳು ಇಲ್ಲವೆ ಮಿತ್ರಸಮ್ಮಿತಗಳು ; ರಸಾನುಭವದಾನಮಾಡುವ ಕಾಂತಾಸಮ್ಮಿತಗಳಲ್ಲ. ಅಲ್ಲಲ್ಲಿ ಸಾಹಿತ್ಯಾಂಶದಿಂದ ರಸಾನುಭವವನ್ನುಂಟುಮಾಡುವನಿತು ರಮಣೀಯವಾಗಿದ್ದರೂ ಅವು ಒಟ್ಟಿನಲ್ಲಿ ಶುದ್ಧ ಸಾಹಿತ್ಯ ಜಾತಿಗೆ ಸೇರುವುದಿಲ್ಲ. ಹೀಗೆ ಹೇಳುವುದರಿಂದ ಅವರ ವಚನಗಳ ಹಿರಿಮೆಯನ್ನಾಗಲಿ ಅವುಗಳ ಸುಭಗತೆಯನ್ನಾಗಲಿ ಅಲ್ಲಗಳೆದಂತಾಗುವುದಿಲ್ಲ. ಅವುಗಳ ಉಗಮದ ಕಾರಣ ಉದ್ದೇಶ ಪ್ರಯೋಜನಗಳನ್ನು ನಿರ್ದೇಶಿಸಿದಂತಾಗುತ್ತದೆ ಅಷ್ಟೆ.

ವಿಭೂತಿ ಪೂಜೆ, ವಚನಕಾರ ಬಸವೇಶ್ವರರು, ಪುಟ ೩೭-೮

೮೨೪

ಕ್ರಾಂತದರ್ಶಿಯಾದ ಕವಿಮನಸ್ಸಿನ ಆಕಾಂಕ್ಷೆ, ಆಲೋಚನೆ, ಅನುಭವ ಇವುಗಳು ಸಾಮಾನ್ಯರ ಮಂದಗಾಮಿಯಾದ ದೃಷ್ಟಿಗೆ ಅತಿ ಪರಕೀಯವಾಗಿ ಕಾಣುತ್ತವೆ. ಒಮ್ಮೊಮ್ಮೆ ತಮ್ಮ ಮನಸ್ಸಿಗೂ ಕವಿಮನಸ್ಸಿಗೂ ಏನೇನೂ ಸಂಬಂಧವಿರದಂತೆಯೂ ತೋರಬಹುದು. ಜನತೆ ಕವಿಕೃತಿಯನ್ನು ವಿದೇಶೀಯವಾದೆಂದೂ ವಿನೂತನವಾದುದೆಂದೂ ಅಲ್ಲಗಳೆಯಲೂ ಹಿಂಜರಿಯುವುದಿಲ್ಲ. ಬಹು ಜನರು ಹಾಗೆ ಆಲೋಚಿಸುವುದಿಲ್ಲ, ಇವನೊಬ್ಬನು ಆಲೋಚಿಸಿದರೇನಂತೆ ಎಂದು ತಿರಸ್ಕರಿಸಬಹುದು. ವಿರುದ್ಧವಾಗಿ ಬೊಬ್ಬೆಯೆಬ್ಬಿಸಲೂಬಹುದು. ಅಲ್ಪಸಂಖ್ಯೆಯ ವಿವೇಕದ ಕಿರುದನಿಯನ್ನು ಬಹುಸಂಖ್ಯೆ ತನ್ನ ಬೊಬ್ಬೆಯಬ್ಬರದಿಂದ ಮುಳುಗಿಸಲು ಪ್ರಯತ್ನಿಸಿದರೆ, ಈಟಿಯನ್ನು ಹಿಂದೆಮುಂದಾಗಿ ಹಿಡಿದು ವೈರಿಯನ್ನಿರಿಯುವುದಕ್ಕೆ ರಭಸದಿಂದ ನುಗ್ಗುವ ಗಾಂಪನಿಗಾಗುವಂತೆ ಸರ್ವನಾಶವಾಗುತ್ತದೆ. ಅವನು ತನ್ನ ರಭಸದಿಂದಲೇ ತಾನು ಹತನಾಗುತ್ತಾನೆ. ಬಹುಜನರು ಹೇಳಿದುದೇ ಬಹಳ ಸತ್ಯವಾಗುವುದಿಲ್ಲ. ಗಾತ್ರ ಪ್ರಾಧಾನ್ಯವೇ ಪಾತ್ರಪ್ರಾಧಾನ್ಯವಲ್ಲ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೪೭-೮

೮೨೫

ಪ್ರತಿಮಾದೃಷ್ಟಿಗೆ ವಸ್ತುವಿಗಿಂತಲೂ ಆ ವಸ್ತು ಪ್ರಚೋದಿಸುವ ಅನುಭವವೇ ವಿಶೇಷವಾಗಿ ಮಾನ್ಯವಿಷಯ. ಅಲ್ಲದೆ, ವಸ್ತುವಿಗಿಂತಲು ಆ ವಸ್ತುವಿಗೆ ಕಾರಣವಾದ ಅಥವಾ ಪ್ರೇರಣವಾದ ಶಕ್ತಿ ಅಥವ ಚೈತನ್ಯವೇ ಪ್ರತಿಮಾದೃಷ್ಟಿಗೆ ಅಗ್ರಗಣ್ಯವಾದ ಪರಮ ಪ್ರಯೋಜನದ ಕಲಾವಿಷಯ. ಪ್ರತಿಕೃತಿ ವಿಧಾನವು ಪ್ರಧಾನವಾಗಿ ವಸ್ತು ನಿಷ್ಠವಾದುದಾದರೆ ಪ್ರತಿಮಾವಿಧಾನವು ತತ್ತ್ವನಿಷ್ಠ. ಪ್ರತಿಕೃತಿ ವಿಧಾನದ ಆಶಯ ಸೇಂದ್ರಿಯವೂ ವೈಷಯಿಕವೂ ತತ್ಕಾಲಗತ ಘಟನಾಪ್ರಧಾನವೂ ಆಗಿರುವ ಬಾಹ್ಯ ಸತ್ಯ; ಅಥವಾ ತಾದ್ರೂಪಕಸತ್ಯ. ಪ್ರತಿಮಾವಿಧಾನದ ಆಶಯ ಅತೀಂದ್ರಿಯವಾಗಿ, ವಿಷಯಕ್ಕೆ ಕಾರಣ ಸ್ವರೂಪವೂ ಪ್ರಯೋಜನಸ್ವರೂಪವೂ ಆಗಿ, ಕಾಲಿಕಮಾತ್ರ ವಾಗಿರದೆ ಧ್ಯೇಯಾತ್ಮಕವೂ ಆಗಿರುವ ಭಾವಸತ್ಯ; ಅಥವಾ ತಾದಾತ್ಮ್ಯಕಸತ್ಯ.

ಪ್ರತಿಕೃತಿಯ ದೃಷ್ಟಿ, ಲೌಕಿಕ ದೃಷ್ಟಿ; ಅದರ ಪ್ರಯೋಜನವೂ ಸಾಮಾನ್ಯವಾಗಿ ಬಹುಮಟ್ಟಿಗೆ ಲೌಕಿಕವೇ. ಪ್ರತಿಮಾದೃಷ್ಟಿ ಅಪೂರ್ವವಾಗಿ ಲೌಕಿಕವಾಗಿದ್ದರೂ ಸಾಧಾರಣವಾಗಿ ಅಲೌಕಿಕ; ಅದರ ಪ್ರಯೋಜನದ ವಿಚಾರವಾಗಿಯೂ ಆ ಮಾತೇ ಸಲ್ಲುತ್ತದೆ.

ತಪೋನಂದನ, ನಾಟಕ ಕಲೆಯಲ್ಲಿ ಪ್ರತಿಕೃತಿ ಮತ್ತು ಪ್ರತಿಮಾ ವಿಧಾನಗಳು, ಪುಟ ೧೦೬

೮೨೬

ಕೆಲವರಿರುತ್ತಾರೆ, ಅವರಿಗೆ ಜಗತ್ತನ್ನು ತಮ್ಮ ಅಭಿಲಾಷೆಯ ಅಗ್ನಿಯಲ್ಲಿ ಕರಗಿಸಿ, ಇಚ್ಛೆಯ ಎರಕದಲ್ಲಿ ಹೊಯ್ದು, ತಮ್ಮ ಇಷ್ಟದ ಜೀವನ ಮೂರ್ತಿಯನ್ನು ನಿರ್ಮಿಸಿಕೊಳ್ಳಬೇಕೆಂಬ ಉತ್ಕಟಾಕಾಂಕ್ಷೆ. ಅವರು ಪ್ರಪಂಚವನ್ನು ಅನುಸರಿಸುವುದಕ್ಕಿಂತಲೂ ಹೆಚ್ಚಾಗಿ ಪ್ರಪಂಚವೇ ತಮ್ಮ ಮನೋರಥಗಳಂತೆ ನಡೆದುಕೊಳ್ಳಬೇಕೆಂದು ಬಯಸುತ್ತಾರೆ. ಆ ಬಯಕೆ ಕೈಗೂಡದಿದ್ದರೆ ನಿಷ್ಠುರ ಪ್ರಪಂಚದಿಂದ ಹೇಗಾದರೂ ಪಾರಾಗಲು ಪ್ರಯತ್ನಿಸುತ್ತಾರೆ. ಆ ಪ್ರಯತ್ನ ಅನೇಕ ರೂಪಗಳನ್ನು ತಾಳಬಹುದು. ಕಲೆಯ ಸುರುಚಿರ ಕೃತಿಗಳಿಂದ ಹಿಡಿದು ಹಗಲುಗನಸು, ಅರೆಮರುಳು, ಹುಚ್ಚು, ಮೂರ್ಛೆ, ವೈರಾಗ್ಯ, ಆತ್ಮಹತ್ಯೆ–ಇತ್ಯಾದಿಗಳವರೆಗೂ ಆ ಪ್ರಯತ್ನದ ವ್ಯಾಪನೆಯಿದೆ. ಕಲೆ ಮತ್ತು ವೈರಾಗ್ಯಗಳಿಂದ ಲೋಕಸಂಗ್ರಹವಾಗಬಹುದು; ಹಗಲುಗನಸು, ಮರುಳು, ಮೂರ್ಛೆ, ಆತ್ಮಹತ್ಯೆ–ಇಂಥವುಗಳಿಂದ ಲೋಕಪೀಡನೆಯಾಗಬಹುದು.

ಕಾನೂರು ಹೆಗ್ಗಡಿತಿ, ಪುಟ ೪೪೭

೮೨೭

ಸತ್ ಸೃಷ್ಟಿಯಾಗಲಿ ಅಸತ್ ಸೃಷ್ಟಿಯಾಗಲಿ 'ಮಂತ್ರ' (ಎಂದರೆ ಶಕ್ತಿ ಪೂರ್ಣವಾದ ಭಾವನೆಗಳು) ನಿಷ್ಪಕ್ಷಪಾತವಾಗಿ ನೆರವಾಗುತ್ತದೆ. ಅದಕ್ಕೆ ಅಧೀನವಾಗಿ ಆವಶ್ಯಕವಾದ

'ತಂತ್ರ' ಸಿದ್ಧವಾಗುತ್ತದೆ ; ಅದನ್ನಾಶ್ರಯಿಸಿ ಶಾಸ್ತ್ರವಿಜ್ಞಾನ 'ಯಂತ್ರ'ಗಳನ್ನು ಕಂಡು ಹಿಡಿದು ಒದಗಿಸುತ್ತದೆ.

ವಿಭೂತಿ ಪೂಜೆ, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪುಟ ೫೬

೮೨೮

ಓ ಬೆಪ್ಪ,
ತುಪ್ಪವನು ಬೆಂಕಿಗೆಸೆಯಲು ಶಮನವಾಗುವೊಡೆ ಗ್ರಹದ ಪೀಡೆ
ಪುಷ್ಪನಪ್ಪಾ ಪುರೋಹಿತನನಾಹುತಿ ಮಾಡೆ
ಮತ್ತಷ್ಟು ಪರಿಹಾರ ದೊರೆಯದೇನ್, ಕೇಡೆ ?

ಪ್ರೇತ–ಕ್ಯೂ, ಮೌಢ್ಯಮೇಧ, ಪುಟ ೪೭

೮೨೯

ಲೋಕದಲಿ ದುಃಖವಿರೆ
ಆ ದುಃಖದೊಳಗರ್ಧ ಹೃದಯದಾರಿದ್ರ್ಯದಿಂ
ಬಂದಿಹುದು ! ಆ ಹೀನ ದೀನ ದಾರಿದ್ರ್ಯಮಂ
ಪರಿಹರಿಸಿ 'ದರ್ಶನ'ವ ದಯಗೈಯೆ ಕಲೆಯಿಹುದು.

ಪಕ್ಷಿಕಾಶಿ, ಪ್ರಕೃತಿ ಉಪಾಸನೆ, ಪುಟ ೨೩

೮೩೦

ಸರ್ವರಾ ಸರ್ವ ಕರ್ಮಗಳ
ಪಾಸುಪೊಕ್ಕಿನ ಜಟಿಲ ಜಾಲಮೆ ಕೃತಿಪುದಲ್ತೆ
ನಡೆವೀ ಜಗನ್ನಾಟ್ಯಮಂ!

ಶ್ರೀ ರಾಮಾಯಣ ದರ್ಶನಂ, ಅಶ್ರುಗಂಗೋತ್ರಿ, ಪಾತ್ರ ಸೀತೆ, ಪುಟ ೫೨೭

೮೩೧

ಸ್ತ್ರೀಯ ಮನೋಮಯ ಕೋಶವು ಪುರುಷನ ಮನೋಮಯ ಕೋಶಕ್ಕಿಂತಲೂ ಹೆಚ್ಚು ಅಸ್ಪಷ್ಟವಾದುದು, ಮಂಜಾದುದು. ಅದರಲ್ಲಿಯೂ ಮದುವೆಯಾಗುವುದಕ್ಕೆ ಮೊದಲು ಅಮೂರ್ತವಾಗಿಯೆ ಇರುತ್ತದೆ ; ಅಸಂಖ್ಯ ಮೂರ್ತವಾಗಿರುತ್ತದೆ ಎಂದರೂ ತಪ್ಪಾಗದು. ಆದ್ದರಿಂದಲೆ ಮುಕ್ಕಾಲು ಮೂರುವೀಸ ಪಾಲು ಸ್ತ್ರೀಯರು ತಮ್ಮ ಪಾಲಿಗೆ ಬಂದದ್ದರಲ್ಲಿ ತೃಪ್ತಿರಾಗಿ ತಮಗೂ ನೆಮ್ಮದಿ ತಂದುಕೊಳ್ಳುತ್ತಾರೆ. ತಮ್ಮ ಜೀವನದಲ್ಲಿ ಭಾಗಿಯಾಗುವವರಿಗೂ ನೆಮ್ಮದಿಯಾಗುತ್ತರೆ. ಎಲ್ಲಿಯೊ ಸಾವಿರಕ್ಕೆ ಒಬ್ಬಿಬ್ಬರಿಗೆ ಮಾತ್ರ ಏಕಾಗ್ರತೆ ಅಥವಾ ಏಕವಿಗ್ರಹತೆ ಇರುತ್ತದೆ. ಅಂತಹರಿಂದ ಮಾನವನ ಜೀವನಕ್ಕೆ ಅನಂತ ಕಲ್ಯಾಣವೂ ಆಗುತ್ತದೆ ; ತಪ್ಪಿದರೆ ಅಪಾರಕ್ಲೇಶವೂ ದೊರೆಯುತ್ತದೆ.

ನನ್ನ ದೇವರು ಮತ್ತು ಇತರ ಕಥೆಗಳು, ಮೀನಾಕ್ಷಿಯ ಮನೇಮೇಷ್ಟರು, ಪುಟ ೭೧

೮೩೨

ಓ ಗುರುವೆ, ಕೊಲ್ಲದಿರು ಸ್ವಾತಂತ್ರ್ಯವನು ಕೊಟ್ಟು;
ಮೊದಲು ಬೇಕೆನಗದನು ಹಿಡಿದು ನಡೆಸುವ ಶಕ್ತಿ.
....
ಸ್ವಾತಂತ್ರ್ಯದಪರಾಧಕಿಂತಲೂ, ಓ ದೊರೆಯೆ,
ಧರ್ಮದೀ ದಾಸ್ಯವೇ ಲೇಸೆನಗೆ ನೂರುಮಡಿ !

ಕೃತ್ತಿಕೆ, ಸ್ವಾತಂತ್ರ್ಯ, ಪುಟ ೮೨

೮೩೩

ಹೇಳಿದರೆ ಹಾಳಾಗುವುದೊ ಈ ಅನುಭವದ ಸವಿಯು ;
ಹೇಳದಿರೆ ತಾಳಲಾರನೊ ಕವಿಯು !

ಪಕ್ಷಿಕಾಶಿ, ಉಭಯ ಸಂಕಟ, ಪುಟ ૩

೮೩೪

ಆಂತರ್ಯದ ಅಹಂಕಾರ ಬಲಿತಷ್ಟೂ ಅನಿವಾರ್ಯವಾಗಿ ಬಲಿಯುತ್ತದೆ, ಪರರಲ್ಲಿ ತಿರಸ್ಕಾರ. ತಿರಸ್ಕಾರಕ್ಕೆ ತಿರಸ್ಕಾರ ಪ್ರತೀಕಾರವಾಗುತ್ತದೆ. ಅಸೂಯೆ, ಆತ್ಮ ಪ್ರಶಂಸೆ, ಪರನಿಂದೆಗಳು ಇಕ್ಕೆಲಗಳಲ್ಲಿಯೂ ಮಲೆಯುತ್ತವೆ.

ಮಲೆಗಳಲ್ಲಿ ಮದುಮಗಳು, ಪುಟ ೪೮

೮೩೫

ಆನ್ ಬರಿಯ ತತ್ವಗಳ ಗುಂಪಲ್ಲ ; ಮೇಣಾನ್
ಬರಿಯ ವ್ಯಕ್ತಿಯುಮಲ್ಲ ; ರಸಪೂರ್ಣಮಾಗಿರ್ಪ
ಜಗದಾದಿ ಚೈತನ್ಯ ವ್ಯಕ್ತಿತ್ವಮೆಂದರಿ !

ಶ್ಮಶಾನ ಕುರುಕ್ಷೇತ್ರಂ, ಪಾತ್ರ ಕೃಷ್ಣ, ಪುಟ ೧೯

೮೩೬

ಇತರ ದೇಶಗಳು ಶತಮಾನಗಳ ವಿಕಾಸದಿಂದ ಸಾವಧಾನವಾಗಿ, ಆದರೂ ಸುದೃಢವಾಗಿ ಸಾಧಿಸಿದ್ದನ್ನು ನಾವು ತಕ್ಷಣವೆ ಸಾಧಿಸಲು ಹೊರಟಿದ್ದು ನಮಗೊದಗಿರುವ ಅಪಘಾತಕ್ಕೆ ಮೂಲಕಾರಣವಾಯಿತು.

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೪

೮೩೭

ಎಲ್ಲಕ್ಕೂ ಬಹು ಮುಖ್ಯವಾದುದು ಸಹಾನುಭೂತಿ. ಅದಿಲ್ಲದಿದ್ದರೆ ನಂದನವೂ ಮರುಭೂಮಿಯಾಗುತ್ತದೆ.

ಕಾನೂರು ಹೆಗ್ಗಡಿತಿ, ಅರಿಕೆ, ಪುಟ iii

೮೩೮

ಭೋಗಗಳ ಪಡೆಯಲಾರದ ಜನರು
ಯೋಗವನು ನಟಿಸುವರು !

ಬಿರುಗಾಳಿ, ಪಾತ್ರ ರುದ್ರನಾಯಕ, ಪುಟ ೩೮

೮೩೯

ನನ್ನ ಕವಿಪ್ರತಿಭೆಯನ್ನು ಕನ್ನಡದ ಕಡೆಗೆ ತಿರುಗಿರಿಸಿದ ನಿಮಿತ್ತಮಾತ್ರ ವ್ಯಕ್ತಿ ಒಬ್ಬ ವಿದೇಶೀಯ ಕವಿಯಾದರೂ, ಅದಕ್ಕೆ ಮೆಚ್ಚುಗೆಯ ಪ್ರೋತ್ಸಾಹ ತೀರ್ಥವನ್ನು ತಳಿದು ನಿದರ್ಶನ ಮಾತ್ರದಿಂದಲೆ ನನಗೆ ಮಾರ್ಗದರ್ಶಕರಾಗಿ, ಅದರ ಬೆಳೆಗೆ ಬೇಕಾದ ವಿದ್ವದ್ಬಲವನ್ನು ಶೇಖರಿಸಲು ಕಾರಣವಾದ ವ್ಯಕ್ತಿಗಳಲ್ಲಿ ಶ್ರೀಯವರು ಅಮಿತ ಗಣ್ಯರಾಗಿದ್ದಾರೆ.

ಇತ್ಯಾದಿ, ದಿವಂಗತ 'ಶ್ರೀ'ಯವರು, ಪುಟ ೯೧

೮೪೦

ಕವಿಗೆ ಚಿತ್‌ತಪನ್ ಶಕ್ತಿಯಿದ್ದು ಪ್ರತಿಭೆ ನವೋನವವಾಗಿದ್ದರೆ ರೂಪಕ ಸಾಮಗ್ರಿ ಪ್ರಾಚೀನವೊ ಪೌರಾಣಿಕವೊ ನವೀನವೊ ನೈಸರ್ಗಿಕವೊ ವೈಜ್ಞಾನಿಕವೊ ಯಾವುದೆ ಆಗಿರಲಿ ಸ್ವತಃ ಸಿದ್ಧವಾಗಿರುತ್ತದೆ ನಿತ್ಯನೂತನವಾದ ರಸಪ್ರತೀತಿ. ಕುಕವಿಯ ಕೈಯಲ್ಲಿ ಸಿಕ್ಕಿ ಮೃತರೂಪಕವೆಂದು ಅಪಖ್ಯಾತಿಗೊಳಗಾದ ರೂಪಕ ಪ್ರತಿಮೆಯೂ ಸತ್ಕವಿಯ ಅಮೃತಹಸ್ತ ಸ್ಪರ್ಶವಾದೊಡನೆ, ಸಾಧಕ ಭಕ್ತನ ಆವೇಶದ ಆವೇಗಕ್ಕೆ ಕಲ್ಲಿನ ವಿಗ್ರಹವೂ ಜಾಗ್ರನ್ಮೂರ್ತಿಯಾಗುವಂತೆ, ಭಾವಮಯ ದೇವತೆಯಾಗಿ ಉಜ್‌ಜ್ವಲ ಚೈತನ್ಯದಿಂದ ರಸದೇದೀಪ್ಯವಾಗುತ್ತದೆ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೭೦

೮೪೧

ಮನುಷ್ಯನೂ ತಪಶ್ಶಕ್ತಿಯನ್ನು ಆರ್ಜಿಸಿದಲ್ಲದೆ ಮಹಾಕಾರ್ಯವನ್ನು ನೆರವೇರಿಸುವುದು ಅಸಾಧ್ಯ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೭೫

೮೪೨

ಸೃಷ್ಟಿಯೊಂದನಂತ ಚಲನೆ,
ಅಖಂಡ ಪ್ರಾಣವಾಹಿನಿ.
ಕ್ಷಣವ ಕನವನರಿವ ಬುದ್ಧಿ
ಕಾಲದೇಶನದಿಯೊಳದ್ದಿ
ಹೊಕ್ಕು ಹರಿದು ತಿಳಿಯಲರಿದು :
ಅಗಮ್ಯವದಕೆ ವಾಹಿನಿ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಮೈಸೂರು–ಬೀಹಾರ, ಪುಟ ೮–೯

ಲ೪೩

ನಾವು ಜಗತ್ತಿನ ಸಾಹಿತ್ಯವನ್ನೂ ನೋಡಬೇಕು, ನಮ್ಮದರ ಮಿತಿ ಏನು ಅಂತಲೂ ತಿಳಿದುಕೊಳ್ಳಬೇಕು ; ಎಲ್ಲಾ ತಿಳಿದುಕೊಳ್ಳಬೇಕು; ಆದರೆ ಈ ತರದ ಒಂದು ಪರಪ್ರಶಂಸಾಧೀನತೆ–ಪರಪ್ರತ್ಯಯನೇಯ ಬುದ್ಧಿ ಅಂತ ಹೇಳುತ್ತಾರಲ್ಲ ಅದು–ಅತಿಯಾಗಬಾರದು ಅಂತ ನಾನು ಹೇಳುತ್ತಾ ಇರುವುದು.

ವಿಚಾರ ಕ್ರಾಂತಿಗೆ ಆಹ್ವಾನ, ಸಾಹಿತ್ಯ ಚರಿತ್ರಕಾರರಿಗೆ ಸಲಹೆಗಳು, ಪುಟ ೩೭

ಲ೪೪

ನಾನು ಟಿಪ್ಪಣಿ ಹಾಕುತ್ತಿರಲಿಲ್ಲ. ಆದರೆ ಟಿಪ್ಪಣಿಗಳು ಎಷ್ಟುಹೆಚ್ಚಾಗಿದ್ದರೆ ಲೇಖನವೂ ಅಷ್ಟುಮಟ್ಟಿಗೆ ಹೆಚ್ಚು ಪ್ರೌಢವಾಗುತ್ತದೆ ಎಂದು ಅನೇಕ ವಿದ್ವಾಂಸರ ನಂಬಿಕೆಯಾಗಿರುವುದರಿಂದ ಹಾಗೆ ಮಾಡಬೇಕಾಯಿತು.

ನನ್ನ ದೇವರು ಮತ್ತು ಇತರ ಕಥೆಗಳು, 'ಗಂಟು' ಅಥವಾ ಗುಪ್ತಧನ, ಪಾತ್ರ ಕಥಾನಾಯಕ, ಪುಟ ೪೭

ಲ೪೫

ಬಲಾತ್ಕಾರಕಾಗಿ ಮಾತ್ರವೆ ಹೊರತು ಈ ರೋಷ
ಭಾಷೆಗಾಗಿಯೆ ನಮ್ಮ ದ್ವೇಷವೇನಿಲ್ಲ.

ಪ್ರೇತ–ಕ್ಯೂ, ಸಾಕು ಈ ಬಲಾತ್ಕಾರ, ಪುಟ ೬೦

ಲ೪೬

ಕನ್ನಡ ಮಾಧ್ಯಮ ಸಂಪೂರ್ಣವಾಗಿ ಯಶಸ್ವಿಯಾಗಿ ಪ್ರತಿಷ್ಠಾಪಿತವಾಗುವ ತನಕ ಕನ್ನಡಿಗರಿಗೆ ಉದ್ಧಾರವಿಲ್ಲ, ಮೋಕ್ಷವಿಲ್ಲ.

ವಿಚಾರ ಕ್ರಾಂತಿಗೆ ಆಹ್ವಾನ, ಕರ್ಣಾಟಕ ಇಟ್ಟ ಹೆಸರು ಕೊಟ್ಟ ಮಂತ್ರ, ಪುಟ ೯೧

ಲ೪೭

ಮಾತಿನಿಂದೇನು ? ಮಂತ್ರದಿಂದೇನು ? ಮಾತು
ಮಂತ್ರಗಳೆಲ್ಲ ಬರಿನೆವಗಳೆಮಗೆ.
ನನ್ನ ನಿನ್ನಯ ಮಧುರ ಮಿಲನವು ಮಾತುಗಳರಿಯದ
ಮಂತ್ರಗಳಳೆಯದ ಹಿರಿಯಾಳದಲಿ ಶಾಶ್ವತವಾಗಿದೆ.
ಏಕೆಂದರೆ, ನನಗೂ ನಿನಗೂ ಭೇದವಿಲ್ಲ:
ಏಕೆಂದರೆ, ಪ್ರೇಮ ಅದ್ವೈತಿ !

ಕಿಂಕಿಣಿ, ಪ್ರೇಮಾದ್ವೈತ, ಪುಟ ೪೨

ಲ೪೮

ಬುದ್ಧಿಯರಿಯದ ಎಷ್ಟೊ
ತತ್ತ್ವಗಳನಾತ್ಮ ಸಿದ್ಧಿಯಿಂದರಿತಿಹುದು.

ಯಮನ ಸೋಲು, ಪಾತ್ರ ಯಕ್ಷ, ಪುಟ ೪೩

೭೪೯

ಮೊದಲಠಕ್ಕನು ಮೊದಲ ಬೆಪ್ಪನಂ ಸಂಧಿಸಲು
ಸಂಭವಿಸಿತೆಂಬರೀ ಮತ ಎಂಬ ಮತಿವಿಕಾರಂ.
ದೊರೆಪುರೋಹಿತರ್ ಅವಳಿಮೊಲೆಯೂಡಿ ಸಾಲಹಿದರದಂ.
ಮತದ ಮದಿರೆಯನೀಂಟಿ ಮಂಕು ಬಡಿದಿದೆ ಜನಕೆ.

ಜಲಗಾರ, ಪಾತ್ರ ಎರಡನೆ ತರುಣ, ಪುಟ, ೧೬

೭೫೦

ಬಾ, ನಮಸ್ಕರಿಸು,
ಸೌಂದರ್ಯರೂಪಿ ಭಗವಂತನಿಲ್ಲಿ ಪುಷ್ಪವೇಷಿ :
ಬಣ್ಣ ಬಣ್ಣವಾಶೀರ್ವದಿಸೆ,
ಬರಿಯ ಉದ್ಯಾನವಲ್ತೊ ಇದು ಪುಷ್ಪಕಾಶಿ !

ಅನಿಕೇತನ, ಉದ್ಯಾನದಲ್ಲಿ ಧ್ಯಾನಯೋಗಿ, ಪುಟ ೨೯

೭೫೧

ಮಹಿಮೆ ತಾಂ ಮಾಳ್ಪುದನಿತುಂ ಮಹತ್‌ಕಲೆಯಲ್ತೆ !

ಶ್ರೀ ರಾಮಾಯಣ ದರ್ಶನಂ, ಪಾದುಕಾ ಕಿರೀಟಿ, ಪುಟ ೧೬೬

೭೫೨

ಜನಜೀವನವನ್ನು ಎಚ್ಚರಿಸುವ ತೂರ್ಯಧ್ವನಿ ಸಾಹಿತ್ಯದಿಂದ ಬರುತ್ತದೆ. ಸಾಹಿತ್ಯ ಜನಜೀವನದ ಇಂದಿನ ಸ್ಥಿತಯನ್ನು ವರ್ಣಿಸಿ ಮುಂದಿನ ಗತಿಯನ್ನು ನಿರ್ಣಯಿಸುತ್ತದೆ. ಕೃತವಿದ್ಯರಾದ ಯುವಕರು ತಮ್ಮ ಆಶೆ ಆಕಾಂಕ್ಷೆಗಳನ್ನು ಬರೆದು ಓದಿ, ಮತ್ತೆ ಮತ್ತೆ ಹೇಳಿ ಹೇಳಿ, ಜನರ ಹೃದಯಗಳಲ್ಲಿ ಕಿಡಿಗಳನ್ನು ಬಿತ್ತಬೇಕು.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೧೪

೭೫೩

ಪಾಶ್ಚಾತ್ಯ ಸಾಹಿತ್ಯ ವಿಮರ್ಶೆ ಕ್ರಿಸ್ತಮತದ ತತ್ತ್ವಗಳ ಮೇಲೆ ನಿಲ್ಲುತ್ತದೆ. ಆ ತತ್ತ್ವಗಳ ಎಲ್ಲ ಉಪಾಧಿಗಳಿಂದಲೂ ಅದು ಬದ್ಧವಾಗಿ, ಅತ್ಯಂತ ಪರಿಮಿತವೂ ಸಂಕುಚಿತವೂ ಆಂಶಿಕವೂ ಆಗುತ್ತದೆ. ಅದರ ಆ ನ್ಯೂನತೆಯಿಂದ ನಾವು ಪಾರಾಗಿ, ಸರ್ವತೋಮುಖವೂ ಸರ್ವಗ್ರಾಸಿಯೂ ಆಗಿರುವ ನಮ್ಮ ಋಷಿದರ್ಶನದ ಪೂರ್ಣದೃಷ್ಟಿಯ ಮೇಲೆ ನಿಲ್ಲಬೇಕಾಗುತ್ತದೆ.

ದ್ರೌಪದಿಯ ಶ್ರೀಮುಡಿ, ಇದಾವ ನ್ಯಾಯ ? ಪುಟ ೬೩

೭೫೪

ತುಳಿ ! ತುಳಿ ! ಹತ್ತಿ ತುಳಿ !
ಮತ್ತೆ ತುಳಿ, ಒತ್ತಿ ತುಳಿ,
ಅಹಂಕಾರವಳಿಯಲಿ !

ನಾನು ಎಂಬುದೆಲ್ಲ ಉದುರಿ
ನೀನು ಮಾತ್ರ ಉಳಿಯಲಿ !

ಅಗ್ನಿಹಂಸ, ಶ್ರೀ ಗುರು ಚರಣಕೆ, ಪುಟ ೯೩

೮೫೫

ನಿಂದೊಂದು ಮುತ್ತು, ನಂದೊಂದು ಮುತ್ತು ;
ಅಪ್ಪಿದರೆ, ಮೊತ್ತ ?–ವಿತ್ತೇಶನೆತ್ತ !
ನಾನೊಂದು ಬೇಸರ, ನೀನೊಂದು ಆಸರ :
ಸಂಗಮಿಸೆ ನಾವು,–ಆನಂದ ಕಾಸಾರ !

ಅನುತ್ತರಾ, ಪ್ರೇಮ ಗಣಿತ, ಪುಟ ೨೭

೮೫೬

....ಯೋಗಮಂ
ಧರ್ಮ ಸಾಧನೆಗೆ ವಿನಿಯೋಗಿಸಿದರೇನದಕೆ
ಮೈಲಿಗೆಯೆ ? ಧರ್ಮ ಮೇ ದೇವರೆಂಬುದೆ ಬುದ್ಧಿಯಯ್ !

ಶ್ರೀ ರಾಮಾಯಣ ದರ್ಶನಂ, ಇರ್ದುದು ಮಹೇಂದ್ರಾಚಲಂ, ಪಾತ್ರ ಜಾಂಬವ, ಪುಟ ೪೧೨

೮೫೭

ನೋಡಿ, ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಆ ಬರ್ಟ್ರಾಂಡ್‌ರಸಲ್, ಹಕ್ಸ್ಲಿ ಮುಂತಾದವರು ಎಷ್ಟು ಬರೆದರು ; ಏನು ಕೆಲಸ ಮಾಡಿದ್ದಾರೆ ; ಆದರೂ ಈ ಪುರೋಹಿತಶಾಹಿ ವರ್ಗದವರಿದ್ದಾರಲ್ಲ ಅವರು ತಮ್ಮ ತಮ್ಮ ಕೆಲಸ ಮಾಡುತ್ತಲೇ ಇದ್ದಾರೆ. ಆದರೆ ಅಷ್ಟೇನೂ ಹಿಂದಿನಂತೆ ಆಗುತ್ತಾ ಇಲ್ಲ. ಆದರೆ ನೀವು ಇನ್ನೂ ಅದಕ್ಕಿಂತಲೂ ಭಯಂಕರ ಕೆಲಸ ಮಾಡಬೇಕಾಗಿದೆ. ಏಕೆಂದರೆ ನಮ್ಮ ಈ ಅಜ್ಞಾನ, ಮೌಢ್ಯ ಸಾವಿರಾರು ವರ್ಷಗಳಿಂದ ತುಂಬಿದೆ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೭೦

೮೫೮

ವೇದಾಂತವು ಕೆಲವು ಮತವಾದಗಳ ಸಮಷ್ಟಿ ಮಾತ್ರವಲ್ಲ. ಅದು ಸಾಧಕ ಜೀವನದಲ್ಲಿ ವಿಭಿನ್ನಾವಸ್ಥೆಗಳಿಂದ ಅನುಭೂತವಾದ ಸತ್ಯಸಮೂಹ. ಆದ್ದರಿಂದ ಅವುಗಳು ಪರಸ್ಪರ ವಿರೋಧಿಗಳಲ್ಲ ; ಪರಸ್ಪರ ಪೂರಕಗಳು. ನಿಜವಾದ ತತ್ತ್ವಜ್ಞಾನ ಬರಿಯ ಸಿದ್ಧಾಂತಗಳ ಮಂದೆಯಲ್ಲ ; ಅದು ಸುವ್ಯವಸ್ಥಿತವಾದ ಅನುಭಗಳ ಶ್ರೇಣಿ.

ಸ್ವಾಮಿ ವಿವೇಕಾನಂದ, ಪುಟ ೧೩೩

೮೫೯

ಸಾವು ಬಾಳುಗಳೆಂದರೆ ಆಕಸ್ಮಿಕ ಪ್ರಸಂಗಗಳು. ಅವುಗಳಿಂದಲೆ ಆತ್ಮದ ಯೋಗ್ಯತೆಯನ್ನು ಪರೀಕ್ಷಿಸಬಾರದು.

ಕಾವ್ಯವಿಹಾರ,. ಕುಮಾರವ್ಯಾಸನ ದುರಂತ ಕರ್ಣ, ಪುಟ ೩೪

೮೬೦

ಕವಿ ಜನರು ಆಲೋಚಿಸುವುದನ್ನೆ ತನ್ನ ಕೃತಿಗಳಲ್ಲಿ ಪ್ರತಿಬಿಂಬಿಸುತ್ತಾನೆ ಎಂದಾಗಲಿ, ಜನರು ಕವಿ ಆಲೋಚಿಸುವುದನ್ನೆಲ್ಲ ಆಲೋಚಿಸುತ್ತಾರೆ ಎಂದಾಗಲಿ ಊಹಿಸಬಾರದು. ಈಟಿಯೆಲ್ಲವೂ ಅದರ ಮೊನೆಯಲ್ಲ; ಮೊನೆಯಿಲ್ಲದಿದ್ದರೆ ಈಟಿ ಯಾಗುವುದು ಇಲ್ಲ. ಮೊನೆ ಮಾತ್ರಕೆ ಗುರಿ ಭೇದಿಸುವ ಶಕ್ತಿ ಬರುವುದಿಲ್ಲ. ಅದಕ್ಕೆ ಈಟಿಯ ಗಾತ್ರದ ಸಹಾಯ ಬೇಕು. ಹಾಗೆಯೆ ಮೊನೆಯಿಲ್ಲದಿದ್ದರೆ ಈಟಿಯ ಗಾತ್ರದಿಂದೇನು ಪ್ರಯೋಜನ? ಈಟಿಯಲ್ಲಿ ಮೊನೆಗೆ ಮುಖ್ಯ ಪಾತ್ರ ಸಿಕ್ಕಿರುವುದು ಅದರ ಪ್ರಧಾನ ಗಾತ್ರದಿಂದಲ್ಲ, ಅದರ ಕರ್ತವ್ಯ ಮಹಿಮೆಯಿಂದ ಈಟಿ ಚುಚ್ಚಿ ಮುಂದೆ ನುಗ್ಗುತ್ತಿರುವಾಗ ಅದರ ಮೂಲ ಅದರ ಮೊನೆಯಿಂದ ದೂರವಿರುತ್ತದೆ. ಹಾಗೆಯೆ, ಕವಿ ಮನಸ್ಸಿನ ಆಲೋಚನೆಯ ಮೊನೆ ಭವಿಷ್ಯತ್ತನ್ನು ಕ್ರಾಂತಿಕಾರಕವಾಗಿ ಭೇದಿಸಿಕೊಂಡು ಮುಂದುವರಿಯುತ್ತಿರುವಾಗ ಸಾಮಾನ್ಯ ಜನಮನಸ್ಸು ಆ ಸಾಹಸ ದಿಂದ ಬಹು ದೂರವಾಗಿರುತ್ತದೆ. ಆದರೂ ತಾನರಿಯದಿದ್ದರೂ ಜನಮನಸ್ಸು ಕವಿಮನಸ್ಸಿಗೆ ಬೆಂಬಲವಾಗುತ್ತದೆ, ಈಟಿಯ ಮೈ ಅದರ ಮೊನೆಗೆ ಬೆಂಬಲವಾಗಿರುವಂತೆ. ಕವಿ ಮನಸ್ಸೂ ಜನಮನಸ್ಸಿನ ಪ್ರಗತಿಗೆ ದಾರಿಮಾಡಿಕೊಡುತ್ತದೆ, ಈಟಿಯ ಮೊನೆಯಂತೆ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೪೭

೮೬೧

ಸಾಮಾನ್ಯ ಮನುಷ್ಯ ವರ್ಗವೊಂದರಿಂದಲೆ ಮನುಷ್ಯತ್ವವೆಲ್ಲ ಮುಗಿದುಬಿಡುವು ದಿಲ್ಲ. ವಿಶೇಷ ವ್ಯಕ್ತಿಗಳೂ ಇರುತ್ತಾರೆ. ಅಲ್ಲದೆ ಪಂಚೇಂದ್ರಿಯ ಲೋಕಸತ್ಯವನ್ನು ಮೀರಿದ ಅತೀಂದ್ರಿಯ ಮತ್ತು ಅತಿಮನೋಗ್ರಾಹ್ಯವಾದ ಅನ್ಯಲೋಕಸತ್ಯಗಳೂ ಇವೆ.

ರಸೋ ವೈ ಸಃ, ಕವಿನಿರ್ಮಿತಿಯಲ್ಲಿ ನಿಯತಿಕೃತ ನಿಯಮರಾಹಿತ್ಯ, ಪುಟ ೬

೮೬೨

ತನ್ನನೇ ತಾ ಮೀರಿ
ಮುಂಬರಿಯದಿಹ ಬಾಳು ಮಳಲ ಬಯಲಿನ ಬಾಳು.

ನವಿಲು, ಜೋಗ, ಪುಟ ೪೦

೮೬೩

ತೆರೆದಿದೆ ಮನೆ, ಓ, ಬಾ ಅತಿಥಿ!
ಹೊಸಬೆಳಕಿನ ಹೊಸಗಾಳಿಯ ಹೊಸಬಾಳನು ತಾ, ಅತಿಥಿ!

ಪ್ರೇಮಕಾಶ್ಮೀರ, ತೆರೆದಿದೆ ಮನೆ ಓ ಬಾ ಅತಿಥಿ, ಪುಟ ೫೩

೮೬೪

....ನಾನು ಯಾವ ಜಾತಿಯ ವಿರುದ್ಧವಾಗಿ ಅಥವಾ ದ್ವೇಷದಿಂದ ಯಾವ ಮಾತನ್ನೂ ಆಡಲಾರೆ. ಏಕೆಂದರೆ ನನಗೆ ಯಾವ ಜಾತಿಯೂ ಇಲ್ಲ. ಆದ್ದರಿಂದ

ಜಾತಿ ದ್ವೇಷವೂ ಇಲ್ಲ....ಹಾಗೆಯೆ ನನ್ನ ಜೀವನ ದೃಷ್ಟಿ ಒಂದು ರೀತಿಯಲ್ಲಿ ಸಮಾನತಾವಾದಿಯ ದೃಷ್ಟಿ. ನಾನು ಸಮಾನತಾವಾದಿ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೪೯

೮೬೫

ವಸ್ತುಕಾವ್ಯದಲ್ಲಿ ಭವ್ಯತಾಪ್ರಕಾಶನಕ್ಕಿರುವ ಪರೋಕ್ಷತೆಗೆ ಬದಲಾಗಿ ಭಾವ ಕಾವ್ಯದಲ್ಲಿ ಕವಿಯ ಸ್ವಾನುಭವದ ಅಪರೋಕ್ಷತೆಗೆ ಅಗ್ರಪಟ್ಟ ದೊರೆಯುತ್ತದೆ.

ರಸೋ ವೈ ಸಃ, ಭೂಮಾನುಭೂತಿ, ಪುಟ ೯

೮೬೬

ಜಗತ್ತು, ಅದರಲ್ಲಿಯೂ ನಮಗೆ ಪ್ರಕೃತವಾಗಿರುವ ಭಾರತೀಯ ಜಗತ್ತು, ಭಯಂಕರ ಸಮಸ್ಯೆಗಳ ಜಟಿಲ ಕಂಟಕಮಯ ಸಂಕಟದಲ್ಲಿ ಸಿಕ್ಕಿ ದಿಕ್ಕುಗಾಣದೆ ದಾರಿ ತಪ್ಪಿ ತೊಳಲುತ್ತಿರುವಾಗ ಯಾರು ತಾನೆ ಏನು ಉಪದೇಶ ಭಾಷಣಮಾಡಿ ನಿಮ್ಮ ಮನಸ್ಸನ್ನು ಆಶಾವಾದದತ್ತ ಕರೆದೊಯ್ಯಲು ಸಾಧ್ಯ? "ಸರ್ವನಾಶದಲ್ಲಿಯು ಆಶಾವಾದಿ" ಎಂದು ತನ್ನನ್ನು ತಾನೆ ಬಣ್ಣಿಸಿಕೊಳ್ಳುತ್ತಿದ್ದ ಕವಿಯ ಚೇತನವೂ ಕಿಬ್ಬಿಯಂಚಿನಲಿ ತತ್ತರಿಸುತ್ತಾ ನಿಂತಂತಿದೆ.

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೧

೮೬೭

ಸುಖಮದೊರ್ವನದು ಸಕಲರ ದುಃಖಕಾರಣಂ
ತಾನಪ್ಪೊಡದು ನಿಂದನೀಯಂ, ನೃಪನದಾದೊಡಂ.

ಶ್ರೀ ರಾಮಾಯಣ ದರ್ಶನಂ, ಅತ್ತಲಾ ದೈತ್ಯ ಸಭೆಯೊಳ್, ಪಾತ್ರ ಹಿರಣ್ಯಕೇಶಿ, ಪುಟ ೭೧

೮೬೮

ಮೊದಲನೆಯ ಮಿಲನವೇನ್ ?
ಅಹುದು ಈ ಜನ್ಮದಲಿ !
ಇಲ್ಲದಿರೆ, ಮರೆತ ಚಿರ ಪರಿಚಿತೆಯನಿನ್ನೊಮ್ಮೆ
ಇದಿರುಗೊಂಡಂತಾದುದೇಕೆ ?
ಜನ್ಮ ಜನ್ಮಾಂತರದ ನಲ್ಲೆಯಾಕೆ!

ಜೇನಾಗುವಾ, ಜೇನಿರುಳು ಅಥವಾ ಪ್ರಥಮ ಮಿಲನ, ಪುಟ ೪

೮೬೯

ನಮ್ಮ ನಾಡಿನ ಲಕ್ಷಾಂತರ ಮಕ್ಕಳ ಉದ್ಧಾರ ಅಥವಾ ಅಧೋಗತಿ ನಮ್ಮ ನಿರ್ಣಯಗಳ ಮೇಲೆ ನಿಂತಿದೆ. ವಿವೇಚನೆಯಿಂದ ನಡೆದುಕೊಂಡರೆ ವಿದ್ಯಾರ್ಜನೆಯ ಹೆಸರಿನಲ್ಲಿ ಹಾಳಾಗುತ್ತಿರುವ ಕೋಟ್ಯಂತರ ರೂಪಾಯಿಗಳನ್ನು ಸಾರ್ಥಕಗೊಳಿಸ ಬಹುದು. ನಾನು ಪ್ರಾಧ್ಯಾಪಕನಾಗಿದ್ದಾಗ ಈ ವಿಚಾರ ಅರ್ಥವಾಗುತ್ತಿರಲಿಲ್ಲ.

ವೈಸ್‌ಛಾನ್ಸಲರ್ ಆದಮೇಲೆ ಪ್ರತಿ ಪರೀಕ್ಷೆ ನಡೆದಾಗಲೂ ಆಗುವ ಆರ್ಥಿಕ ಮಾನಸಿಕ ನಷ್ಟವನ್ನು ಕಂಡು, ನಮ್ಮ ದೇಶದ ದುಃಸ್ಥಿತಿಯನ್ನು ನೋಡಿ ಮರುಗುವಂತಾಗಿದೆ.

ಷಷ್ಟಿನಮನ, ಭಾರತದಲ್ಲಿ ಇಂಗ್ಲಿಷಿನ ಸ್ಥಾನ, ಪುಟ ೧೧೩-೪

೮೭೦

ವಸ್ತುಕಾವ್ಯದಲ್ಲಿ ಅಭಿವ್ಯಕ್ತವಾಗುವ ಭವ್ಯತೆ ಕವಿಯ ನೇರವಾದ ಭೂಮಾನುಭೂತಿ ಆಗಬೇಕಾಗಿಲ್ಲ ; ಅದು ಮುಖ್ಯವಾಗಿ ಪಾತ್ರದ ಭೂಮಾನುಭೂತಿ ಅಥವಾ ಪಾತ್ರಪಾತ್ರಗಳ ವ್ಯವಹಾರ ಚಿತ್ರಣದಿಂದ ಸಮುದ್ಭವಿಸುವ ಭೂಮಾನುಭೂತಿ. ಅಲ್ಲಿ ಕವಿಪ್ರಜ್ಞೆ ಆವಶ್ಯಕವಾದರೂ ನಿಮಿತ್ತಮಾತ್ರ ; ಅದು ಭೂಮವು ಅವತರಿಸುವುದಕ್ಕೆ ಅರ್ಹತೆಯುಳ್ಳ ಒದಗೆ ಮಾತ್ರ.

ರಸೋ ವೈ ಸಃ, ಭೂಮಾನುಭೂತಿ, ಪುಟ ೯೯

೮೭೧

ಪ್ರೇಮವೆಶಿವ, ಶಿವನೇ ಪ್ರೇಮ :
ಪ್ರೀತಿಸುವುದೆ ಪ್ರಾಣದ ನೇಮ !

ಮಂತ್ರಾಕ್ಷತೆ, ಪುಟ ೮

೮೭೨

ವಿರಹಕಿಂತ ನರಕವಿಲ್ಲ
ಮಿಲನಕಿಂತ ನಾಕವಿಲ್ಲ
ಒಲಿದ ಉಸಿರಿಗೆ!

ಮಂತ್ರಾಕ್ಷತೆ, ಪುಟ ೨೧

೮೭೩

ಮೂಡಲಿ ನಿನ್ನಿಂದೊಳ್ಳಿಗೆ ಕೋಡು ;
ತಿಳಿಯಲಿ, ಹೊಳೆಯಲಿ, ನಮ್ಮೀ ನಾಡು ;
ತೊಲಗಲಿ ಕತ್ತಲೆ, ಬತ್ತಲೆ, ಕೇಡು ;
ಮಂಗಳನಾಗಯ್ ಲೋಕಕ್ಕೆ !

ಜೇನಾಗುವಾ, ಸ್ವಾಗತ ನಿನಗೆಲೆ ಕಂದಯ್ಯ, ಪುಟ ೩೧

೮೭೪

ಈ ಪ್ರಪಂಚದಲ್ಲಿ ಆದರ್ಶ ಪ್ರಪಂಚವನ್ನು ಹುಡುಕುವವರಿಗೆಲೋಕ, ಕಟ್ಟಕಡೆಗೆ ಗೌರವತೋರಿದರೂ, ಮೊದಮೊದಲು ಅವರನ್ನು ನಿಷ್ಠುರವಾಗಿ ಪೀಡಿಸುತ್ತದೆ. ಆದ್ದರಿಂದ ಆದರ್ಶದ ಹೂವಿನ ಹಾಸಗೆಗೆ ಹೋಗಲೆಳಸುವವರು ಮುಳ್ಳಿನ ಬೇಲಿಯನ್ನು ದಾಟಲು ಸಿದ್ಧರಾಗಿರಬೇಕು. ಹಾಗೆ ಸಿದ್ಧರಾದವರಿಗೆಲ್ಲ ಹೂವಿನ ಹಾಸಗೆ ಲಭಿಸಿಯೆ ಲಭಿಸುತ್ತದೆ ಎಂಬುದೂ ನಿಶ್ಚಯವಲ್ಲ. ಎಷ್ಟೋ ಸಾಹಸಿಗಳು ದಾರಿಯಲ್ಲಿಯೇ ಮಡಿಯಬೇಕಾಗುತ್ತದೆ.

ಕಾನೂರು ಹೆಗ್ಗಡಿತಿ, ಪುಟ ೪೪೭

೮೭೫

ಮನವ ತೇಲಿಸುತಿಹುದು ನೆನಪಿನ ದೋಣಿ
ಕಾಲವಾಹಿನಿಯ ಆ ದೂರತೀರಕ್ಕೆ.
ವಿಸ್ಮೃತಿಯ ವೈತರಣಿಯೊಳ್ ಮುಳುಗಿದ್ದ ಆ ಅನುಭವಂ
ಪೂರ್ವಜನ್ಮ ಸ್ಮರಣೆಯಂತೆ ಮೈದೋರುತಿಹುದಿಂದು.

ಚಂದ್ರಹಾಸ, ಪಾತ್ರ ಚಂದ್ರಹಾಸ, ಪುಟ ೬೩

೮೭೬

ಕವಿಕೃತಿಯಾದ ಕಾವ್ಯವು ತನ್ನದೇ ಆದ ಒಂದು ಸ್ವಾತಂತ್ರ್ಯವನ್ನೂ ಶಕ್ತಿಯನ್ನೂ ಪಡೆದಿದೆ. ಅದೂ ಒಂದು ಪ್ರತಿಮಾಲೋಕ. ವಿಶ್ವವು ಹೇಗೆ ಋತಚಿತ್ ಸತ್ಯಾರ್ಥ ಪ್ರಕಾಶನದ ಒಂದು ವಿರಾಟ್ ಪ್ರತಿಮೆಯೋ ಹಾಗೆಯೆ ಮಹಾ ಕಾವ್ಯವೂ ಮಹಾಕವಿಯ 'ದರ್ಶನ' ಪ್ರಕಾಶನದ ಒಂದು ಮಹಾಪ್ರತಿಮೆ. ಆ 'ದರ್ಶನ'ದ ಉಜ್ವಲತೆಗೂ ಉದಾತ್ತತೆಗೂ ಅನುಗುಣವಾಗಿ, ಅನುರೂಪವಾಗಿ, ಪ್ರತಿಮೆ ಸಿದ್ಧವಾಗುತ್ತದೆ. ಆ 'ದರ್ಶನ'ದ ಶಕ್ತಿ, ಅಶಕ್ತಿ, ಶ್ರೀ, ಅಶ್ರೀ–ಇತ್ಯಾದಿಗಳೆಲ್ಲವೂ ಪ್ರತಿಮೆಯಲ್ಲಿ ಪ್ರತಿಫಲವಾಗುತ್ತವೆ. ನಾವು ಪ್ರತಿಮೆಯಿಂದ ಅದಕ್ಕೆ ಮೂಲಕಾರಣವೂ ಉದ್ದೇಶವೂ ಪ್ರಯೋಜನವೂ ಆಗಿರುವ 'ಕವಿದರ್ಶನ'ಕ್ಕೆ ಹೋಗಿ, ಅದನ್ನು ಒಪ್ಪಬಹುದು, ಬಿಡಬಹುದು; ಅದು ಹೀಗಿರಬಹುದಾಗಿತ್ತು, ಹಾಗಿರಬಹುದಾಗಿತ್ತು ಎಂದು ತಿದ್ದುಪಡಿ ಸೂಚಿಸಬಹುದು. ಅಥವಾ ಸಮಗ್ರ ಪ್ರತಿಮೆಯ ಆವಿರ್ಭಾವದ ವಿಚಾರವಾಗಿ, ಅದರ ಅಂಗೋಪಾಂಗಗಳ ರಚನೆಯ ಮತ್ತು ಜೋಡಣೆಯ ವಿಚಾರವಾಗಿ, ಅನ್ಯ ಪ್ರಕಾರಗಳನ್ನು ಸೂಚಿಸಬಹುದು. ಆದರೆ ಪ್ರತಿಮಾ ಲೋಕವನ್ನು ಪ್ರವೇಸಿದ ಮೇಲೆ ಅಲ್ಲಿ ಖಂಡದೃಷ್ಟಿಯನ್ನು ತಂದು ಹಾಕುವುದರಿಂದ ಪ್ರಯೋಜನವಿಲ್ಲ. ಪೂರ್ಣಪ್ರತಿಮೆಯನ್ನು ಪೂರ್ಣದೃಷ್ಟಿಯಿಂದ ಪೂರ್ಣವಾಗಿಯೆ ಗ್ರಹಿಸಬೇಕು. ಇಲ್ಲದಿದ್ದರೆ ರಸಾನುಭವ ಅಸ್ರೋತವಾಗಿ ಬರಿಯ ವಾದವಿವಾದದ ಬುದ್ಧಿಕಾರ್ಯದ ಕೆಸರುಸುಬು ಕಲ್ಲುಮಣ್ಣುಗಳಲ್ಲಿ ಕಾಲಾಡಬೇಕಾಗುತ್ತದೆ.

ತಪೋನಂದನ, ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ, ಪುಟ ೧೨೨–೩

೮೭೭

ಪ್ರೀತಿಯ ಪುಸ್ತಕಗಳನ್ನು ಕೊಂಡುಕೊಳ್ಳುವುದಕ್ಕಾಗಿ ಹಸಿದಿರಬೇಕಾಗುತ್ತದೆ; ಅವುಗಳನ್ನೋದಿ ಜಯಿಸುವುದಕ್ಕಾಗಿ ನಿದ್ದೆಗೆಡಬೇಕಾಗುತ್ತದೆ; ಬೆವರು ಸುರಿಸ ಬೇಕಾಗುತ್ತದೆ; ಎಣ್ಣೆ ಉರಿಸಬೇಕಾಗುತ್ತದೆ; ಎಷ್ಟೋ ಮನೋರಂಜನೆಗಳನ್ನೂ ತ್ಯಾಗಮಾಡಿ ಅಧ್ಯಯನ ತಪಸ್ಸಿನಲ್ಲಿ ಮಗ್ನವಾಗಬೇಕಾಗುತ್ತದೆ. ವ್ಯಾಕರಣದ ನೀರಸತೆಯನ್ನು ಸಹಿಸಿ, ನಿಘಂಟುವಿನ ಹೇರಡವಿಯಲ್ಲಿ ಬೇಸರಗೊಳ್ಳದೆ ತೊಳಲಿ, ಟೀಕೆ ಟಿಪ್ಪಣಿ ವಿಮರ್ಶೆ ವ್ಯಾಖ್ಯಾನಗಳನ್ನು ತಡಕಿ ಹುಡುಕಿ ಸಂಗ್ರಹಿಸಬೇಕಾಗುತ್ತದೆ. ಇಷ್ಟನ್ನೂ ಹಲ್ಲು ಕಚ್ಚಿಕೊಂಡು ದೃಢಮನಸ್ಸಿನಿಂದ ಸಾಧಿಸುವ ಮತಿಗೌರವ

ವಿಲ್ಲದಿದ್ದರೆ, ಸಾಮಾನ್ಯ ಬುದ್ಧಿಯ ಮಾತಂತಿರಲಿ, ಪ್ರತಿಭೆಯೂ ಕೂಡ, ಮರುಳುಗಾಡಿನಲ್ಲಿ ಅರತು ಹೋಗುವ ಮಹಾನದಿಯಂತೆ, ಕೃಷಿಯಿಲ್ಲದೆ ಕೃಶವಾಗಿ ವ್ಯರ್ಥವಾಗುತ್ತದೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಲ್ಲಿ ಮತಿಗೌರವದ ಆವಶ್ಯಕತೆ, ಪುಟ ೩೯–೪೦

೮೭೮

ಮಾನವನೆ, ನಾರಾಯಣನು ಗುಡಿಯೊಳಿಲ್ಲ
ಫಲಪುಷ್ಪವನು ಕೊಟ್ಟರದು ಭಕ್ತಿಯಲ್ಲ.
ಬಡ ನರನೆ ದೇವನಿಹ ದೇಗುಲವು, ಮುಕ್ತಿ ;
ಬಡಜನರ ಸೇವೆಯನು ಮಾಡುವುದೆ ಭಕ್ತಿ ;

ಹಾಳೂರು, ಪಂಕ್ತಿ, ೪೧೫–೮, ಪುಟ ೧೮

೮೭೯

ಯಾವಾಗಲೂ ಇತರರಿಗೆ ಆಶ್ರಯಕೊಡುತ್ತಾ ಬಾಳಿದವರಿಗೆ ಆಶ್ರಿತರು ದೂರವಾದರೆ ಆಶ್ರಯವೇ ತಪ್ಪಿದಂತಾಗುತ್ತದೆ. ಮುಪ್ಪು ಎಳೆತನಕ್ಕೆ ಆಶ್ರಯ ಮಾತ್ರವಲ್ಲ ; ಆಶ್ರಿತವೂ ಹೌದು.

ಮಲೆಗಳಲ್ಲಿ ಮದುಮಗಳು, ಪುಟ ೪೭

೮೮೦

ಮನ್ಮನೋಮಂದಿರಕೆ, ಓ,
ಲೋಕಗುರುಗಳೆಲ್ಲ ಬನ್ನಿ!
ಬನ್ನಿ, ಬನ್ನಿ, ಬನ್ನಿ, !–
ತುಳಿಯೆ ನಿಮ್ಮ ಪದತಲ
ದಲ ದಲ ದಲ ಅರಳ್ವುದೆನ್ನ
ಶಿರಃಕಮಲ ಕುಟ್ಮಲ!
ತಮೋತಿಮಿರವಳಿಯಲಲ್ಲಿ
ಪರಂಜ್ಯೋತಿ ಬೆಳಗಲಿ ;
ಋತದ ಶಿವದ ಆನಂದದ
ಚಿದ್‌ವಿಭೂತಿ ತೊಳಗಲಿ.

ಅಗ್ನಿಹಂಸ, ಮನ್ಮನೋಮಂದಿರಕೆ, ಪುಟ ೯

೮೮೧

ಸೌಂದರ್ಯ ಯೋಗಿಯೌ,
ಎಲೆ ಸುಂದರಿಯೆ, ನಾನು:
ನೀನು ಬರಿ ರವಿಯುದಯ,
ಸೊಬಗು ನನಗೆ!

ಸೊಬಗಿರುವ ತಾವೆಲ್ಲ
ಗುಡಿಯು ನನಗೆ!

ಷೋಡಶಿ, ಸೌಂದರ್ಯಯೋಗಿ, ಪುಟ ೫೩

೮೮೨

ಇಹವಿಲ್ಲದೆ ಪರವಿಲ್ಲದೆ
ತೊತ್ತಾಗಿಹ ಶೋಚ್ಯರಿಗೆ,
ನಡತೆಗೆ ಸ್ಮೃತಿ, ಚಿಂತೆಗೆ ಶ್ರುತಿ
ದೇವರೆ ಗತಿ ಪ್ರಾಚ್ಯರಿಗೆ!

ಅಗ್ನಿಹಂಸ, ಶತಮಾನ ಸಂಧ್ಯೆ, ಪುಟ ೮೬

೮೮೩

ಸ್ವಂತ ಮುಕ್ತಿಯನ್ನು ಸಾಧಿಸುವುದಕ್ಕಾಗಲಿ, ಲೋಕ ಸಂಗ್ರಹ ಕಾರ್ಯಕ್ಕಾಗಲಿ ಸ್ಥಿತಪ್ರಜ್ಞತೆ ಬೇಕು. ತನ್ನ ಆತ್ಮದಲ್ಲಿಯೇ ಅಸ್ಥಿರವಾದವನು ಜನರಿಗೆ ಯಾವ ಶಾಶ್ವತ ಉಪಕೃತಿಯನ್ನೂ ಮಾಡಲಾರನು. ಅಂತರಂಗದಲ್ಲಿ ಘನ ತಪಸ್ಸಿದ್ದರೆ ಬಹಿರಂಗ ದಲ್ಲಿ ಮಹತ್ಕಾರ್ಯಗಳು ಸಾಧ್ಯವಾಗುತ್ತವೆ. ಒಳಗೆ ಟೊಳ್ಳಿದ್ದರೆ ಬರಿಯ ಬುಡು ಬುಡುಕೆಯಾಗುತ್ತದೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೭೫

೮೮೪

ಬಸವಣ್ಣನವರು ನಮ್ಮ ಮನೆಯ ಗುಡಿಯ ದೇವರಡಿಯ ತಣ್ಜೊಡರು. ನಮ್ಮ ಕತ್ತಲೆಯನ್ನು ಬೆಳಗಲು ಸಾಕು ಆ ಪ್ರದೀಪ. ಅದರ ಪುಣ್ಯ ಜ್ಯೋತಿಗೆ ಕೈಮುಗಿದು ಧನ್ಯರಾಗುವವರು ಮತ್ತೊಂದಕ್ಕೆ ಖಂಡಿತ ಕರುಬಬೇಕಾಗಿಲ್ಲ. ಏಕೆಂದರೆ ಎಲ್ಲೆಲ್ಲಿಯೂ ಇರುವಂತೆ ಇಲ್ಲಿಯೂ ಇರುವುದೆಲ್ಲ. ಅನಂತವು ಪೂರ್ಣದಲ್ಲಿ ಎಂತೋ ಅಂತೆ ಅಂಶದಲ್ಲಿಯೂ ಪೂರ್ಣವಾಗಿಯೆ ಅನಂತ!

ವಿಭೂತಿ ಪೂಜೆ, ವಚನಕಾರ ಬಸವೇಶ್ವರರು, ಪುಟ ४೨

೮೮೫

ಪ್ರತಿಕೃತಿಯಿಂದ ಸಾಧ್ಯವಲ್ಲದಿರುವಾಗ ಪ್ರತಿಮೆಯ ಮೂಲಕ ಸತ್ಯಸ್ಯ ಸತ್ಯವಾದ ಅನುಭೂತಿಯನ್ನು ಸಹೃದಯರಲ್ಲಿ ಮೂಡಿಸುತ್ತದೆ ಕವಿಕೃತಿ.

ತಮೋನಂದನ, ಪ್ರತಿಮಾ ಮತ್ತು ಪ್ರತಿಕೃತಿ, ಪುಟ ೩೩

೮೮೬

ಮನೆಬಾಗಿಲಿಗೆ ನಾಕವೊಲಿದು ಬರೆ
ನಾವ್ ಲೆಕ್ಕಿಸುವುದಿಲ್ಲ ಕಣ್ಣೆತ್ತಿ! ತರುವಾಯ
ಹುಡುಕುವೆವು ತೊಳತೊಳಲಿ ತೀರ್ಥಯಾತ್ರೆಗಳಲ್ಲಿ
ಸುತ್ತಿ.

ಪಕ್ಷಿಕಾಶಿ, ಕ್ರೌಂಚ ಪಂಕ್ತಿ, ಪುಟ ೭೭

೮೮೭

ಜೀವನದ ಮೇಲೆ ಮೇಲೆಯೆ ತೇಲಿಹೋಗುವ ಅನೇಕರಿಗೆ ಗಹನ ವಿಷಯಗಳು ಹಿಡಿಸುವುದಿಲ್ಲ. ಆದ್ದರಿಂದ ರುಚಿಸುವುದೂ ಇಲ್ಲ. ಅಂತಹರನ್ನೂ ಕೂಡ ಅಂತರ್ಮುಖಿಗಳನ್ನಾಗಿ ಮಾಡಿ, ಬಾಳಿನ ತಿರುಳನ್ನವರು ಸವಿಯುವಂತೆ ಎಸಗುವುದು ಕವಿತೆ ತೊಟ್ಟಿರುವ ದೀಕ್ಷೆ. ವಿಜ್ಞಾನ ಶಾಸ್ತ್ರಜ್ಞನು ಹುಡಿಯೊಂದರ ಹೃದಯದಲ್ಲಿ ಸುಪ್ತವಾಗಿರುವ ಮಹಾಭಯಂಕರ ಶಕ್ತಿಯ ಅರಿವನ್ನು ಜನರಿಗೆ ಉಂಟುಮಾಡಿಕೊಡುವಂತೆ ಕವಿಯಾದವನು ಸಮಸ್ತ ಸೃಷ್ಟಿಯ ಅಂತರಾಳದಲ್ಲಿರುವ ಆತ್ಮನ ಆನಂದವನ್ನು ಜನರಿಗೆ ಪರಿಚಯ ಮಾಡಿಕೊಡಬೇಕು. ಎಂದರೆ ಹೃದಯದ ಜಡತನವನ್ನು ನೀಗುವಂತೆಯೆ ಮನಸ್ಸಿನ ಸೋಮಾರಿತನವನ್ನೂ ಪರಿಹರಿಸಬೇಕು. ಜನರೂ ಕೂಡ ಈ ವಿಷಯವನ್ನು ಮನಸ್ಸಿಗೆ ತಂದುಕೊಂಡು ಯಾವುದಾದರೊಂದು ಕವನ ಮೊದಮೊದಲು ಅರ್ಥವಾಗದಿದ್ದರೂ ಭಾವವಾಗದಿದ್ದರೂ ಅದನ್ನು ತಿರಸ್ಕರಿಸಿದೆ ಸ್ವಲ್ಪ ಪ್ರಯತ್ನಪಡುವುದು ಲೇಸು.

ಕಲಾಸುಂದರಿ, ಮುನ್ನುಡಿ, ಪುಟ ix

೮೮೮

ಲೋಕಸಂಗ್ರಹ ಕಾರ್ಯ ಮಾಡುವವರು ನಿಸ್ಸಂಗಿಗಳಾಗಿರಬೇಕು. ಎಂತಹ ಮಹತ್ಕಾರ್ಯವಾಗಲಿ ಫಲಾಪೇಕ್ಷೆಯಿಲ್ಲದೆ ರಾಗವಿಲ್ಲದೆ ಕೆಲಸದಲ್ಲಿ ತೊಡಗಬೇಕು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೯೭

೮೮೯

ರುಚಿಗೆ ಕೈಕೊಂಡುದಂ
ಭಲಕೆ ಮುಂಬರಿಪುದೇಂ ಸುಖವೆ, ಸರಸವೆ, ಮತಿಯೆ,
ಸಚ್ಚರಿತ್ರವೆ, ...? ಪತಿವ್ರತೆಯ
ಸುವ್ರತನ ಮಹಿಮೆಯಿಂ ಸಂಯಮವನೆರ್ದೆಗೊಳಲ್
ಸೋಲೆಂಬರೇನದಂ ಸುಕೃತಮತಿಗಳ್ ? ಶಿವಕೆ
ಶರಣಾದರದು ಸೋಲೆ ? ಆ ಗೆಲ್ಗೆ ಮಿಗಿಲೊಳದೆ
ಬೇರೆ ಗೆಲ್ಲಂ ? ಇಂದ್ರವಿಜಯಿಗಿಂ ನೂರುಮಡಿ
ವೀರವಿಕ್ರಮಿಯಲ್ತೆ ಇಂದ್ರಿಯ ವಿಜಯಿ ? ಬರಿಯ
ಈ ಬಿಂಕದಂಕಮಂ ತೊರೆ. ಸೋಲು ಸತ್ಯಕ್ಕೆ ;
ನಮಗದುವೆ ಗೆಲ್. ಸೋಲು ಧರ್ಮಕ್ಕೆ ; ನಮಗದುವೆ
ಗೆಲ್. ಸೋಲ್ ಒಲವಿಗದುವೆ ಸಾಮ್ರಾಜ್ಯಸಂಪದಂ
ನಮಗೆ ದಲ್ !

ಶ್ರೀ ರಾಮಾಯಣ ದರ್ಶನಂ, ಕನಕಲಂಕಾನ್ವೇಷಣಂ, ಪಾತ್ರ ಮಂಡೋದರಿ, ಪುಟ ೪೭೫–೬

೮೯೦

ದೇವಿ ಸರಸ್ವತಿಯನ್ನು ಪ್ರಾರ್ಥಿಸಿದ ಋಷಿ ಕೊನೆಯಲ್ಲಿ 'ಮಾತರ್ ಮಾತರ್ ನಮಸ್ತೇ', ಎಂದು ಎರಡುಬಾರಿ ಕರೆದು 'ದಹ ದಹ ಜಡತಾಂ ದೇಹಿ ಬುದ್ಧಿಂ ಪ್ರಶಾಂತಾಂ', ಎಂದು ಎರಡುಬಾರಿ ಕೇಳಿಕೊಂಡಿದ್ದಾನೆ–ತಾಯೆ, ತಾಯೆ, ನಿನಗೆ ನಮಸ್ಕಾರ; ನಮ್ಮ ಜಡತ್ವವನ್ನು ದಹಿಸು ದಹಿಸು, ಪ್ರಶಾಂತವಾದ ಬುದ್ಧಿಯನ್ನು ಕೊಡು – ಎಂದು ಪ್ರಾರ್ಥಿಸಿದ್ದಾನೆ. ಬುದ್ಧಿಗೂ ಅನೇಕ ಗುಣಗಳಿರಬಹುದಲ್ಲ; ಆದ್ದರಿಂದಲೆ ಪ್ರಶಾಂತವಾದ ಬುದ್ಧಿಯನ್ನು ಕೊಡು, ನಮ್ಮ ಜಡತ್ವವನ್ನು ಸುಡುವಂತಹ ಬುದ್ಧಿಯನ್ನು ಕೊಡು ಎಂದು ಪ್ರಾರ್ಥಿಸಿಕೊಂಡಿದ್ದಾನೆ ಆ ಋಷಿಕವಿ. ಸರಸ್ವತಿಯ ಚರಣಪೀಠಗಳಾದ ಈ ನಮ್ಮ ವಿದ್ಯಾಕ್ಷೇತ್ರಗಳು, ವಿಶ್ವವಿದ್ಯಾನಿಲಯಗಳು, ಈ ಎರಡು ಕೆಲಸವನ್ನೂ ಮಾಡಬೇಕು; ಇದು ನನ್ನ ಹಾರೈಕೆ.

ಷಷ್ಟಿನಮನ, ಮಾನಸ ಗಂಗೋತ್ರಿ, ಪುಟ ೫೮–೯

೮೯೧

ಹಳ್ಳಿಗ ಪಟ್ಟಣಿಗ, ಸಾಕ್ಷರ ನಿರಕ್ಷರ, ದರಿದ್ರ ಶ್ರೀಮಂತ, ಬಡವ ಬಂಡವಾಳಗಾರ, ಆಳು ಒಡೆಯ, ಅವರು ಇವರು ಎಂಬ ಭೇದವಿಲ್ಲದೆ ಎಲ್ಲರನ್ನೂ ಆಕ್ರಮಿಸಿದೆ ಈ ರಾಜಕೀಯದ ಜ್ವರ. ದಿನ ಬೆಳಗಾದರೆ ಪತ್ರಿಕೆಗಳು ಈ ಜ್ವರವನ್ನು ಮನೆಮನೆಗೂ ಮನಮನಕ್ಕೂ ಹಂಚುವ ಶೀಘ್ರ ಸಾಧನಗಳಾಗಿವೆ. ಆ ಪತ್ರಿಕೆಗಳ ಬಹುಭಾಗವನ್ನೆಲ್ಲಾ ವ್ಯಾಪಿಸಿರುತ್ತದೆ ಈ ರಾಜಕೀಯದ ಸುದ್ದಿ ಮತ್ತು ಬೇಗೆ. ಜೊತೆಗೆ ಚುನಾವಣೆ ಬೇರೆ ಈ ರಾಜಕೀಯ ಜ್ವರ ಒಂದರೆನಿಮಿಷವೂ ಯಾರ ಮೆದುಳನ್ನೂ ಬಿಟ್ಟು ಹೋಗದಂತೆ ನೋಡಿಕೊಳ್ಳುತ್ತಿದೆ. ಮಹಾಚುನಾವಣೆ! ಅದಾಯಿತು ಉಪಚುನಾವಣೆ! ಅಷ್ಟರಲ್ಲಿ ಉಪಚುನಾವಣೆಯ ಕೇಸುಗಳು. ಅವಿನ್ನೂ ಮುಗಿಯುವುದರೊಳಗೆ ಜಿಲ್ಲಾ ಚುನಾವಣೆ ಪ್ರಾರಂಭ. ಅವುಗಳಿಗೆ ಪುಚ್ಛಭೂತವಾಗಿ ಪೌರಸಭೆಗೊ ಗ್ರಾಮಪಂಚಾಯಿತೊ ಮಣ್ಣಿಗೊ ಮಸಣಕ್ಕೊ ಮತ್ತೆ ಚುನಾವಣೆ! ಸರಿ, ಇದೆಲ್ಲ ಪೂರೈಸುವುದರೊಳಗೆ ಮತ್ತೆ ಮಹಾಚುನಾವಣೆ ಸಮೀಪಿಸುತ್ತದೆ. ಸರಿ, ಮತ್ತೆ ಅದಕ್ಕೆ ಪೂರ್ವಸಿದ್ಧತೆ ಬೇಡವೆ? ವ್ಯೂಹರಚನೆ ಬೇಡವೆ ಯುದ್ಧಕ್ಕೆ ಮುನ್ನ?–ಹೀಗೆ ಒಂದಲ್ಲ ಹಲವು ತೆರಗಳಲ್ಲಿ ಕಲೆ ಸಂಸ್ಕೃತಿ ಧರ್ಮ ಅಧ್ಯಾತ್ಮ ಇವುಗಳ ಕಡೆಯಿಂದ ರಾಜಕೀಯದ ಕಡೆಗೆ ತಿರುಗುವ ಜನಮನಸ್ಸು ಅದನ್ನೇ ಬಹು ಮುಖ್ಯವೆಂದೂ ಪರಮಪುರುಷಾರ್ಥವೆಂದೂ ಭಾವಿಸುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಆಗಿರುವಂತೆ ರಾಜಕೀಯ ವ್ಯಕ್ತಿಯೇ ಪರಮಗಣ್ಯನೂ ಪೂಜ್ಯನೂ ಆಗುತ್ತಾನೆ. ರಾಜಕೀಯವಲ್ಲದ ಜೀವನವ್ಯಾಪಾರಕ್ಕೆ ಪುರಸತ್ತೆಲ್ಲಿ ಎಂಬ ಆತ್ಮವಂಚನೆಯ ಕಾರಣ ಸಿದ್ಧವಾಗುತ್ತದೆ. ಕೊನೆಗೆ ಯಾವ ವಿಶೇಷ ಲಕ್ಷಣದಿಂದ ನಮ್ಮ ಭಾರತೀಯತೆ ಲೋಕಗೌರವಕ್ಕೆ ಭಾಜನವಾಗಿತ್ತೊ ಆ ಲಕ್ಷಣವೇ ನಮ್ಮ ಜೀವನದಿಂದ ದೂರವಾಗುವ ದುರ್ಗತಿ ನಮಗೊದಗುತ್ತದೆ.

ಷಷ್ಟಿನಮನ, ಕೊಲಂಬೊ ಇಂದ ಆಲ್ಮೋರಕೆ, ಪುಟ ೨೨೨–೩

೮೯೨

ನೀನೇರಬಲ್ಲೆಯ ನಾನೇರುವೆತ್ತರಕೆ ?
ನೀ ಹಾರಬಲ್ಲೆಯಾ ನಾ ಹಾರುವಗಲಕ್ಕೆ ?
ನೀ ಮುಳುಗಬಲ್ಲೆಯಾ ನಾ ಮುಳುಗುವಾಳಕ್ಕೆ ?
ಇಲ್ಲ ? ನಡೆ, ದೂರಸರಿ ! ಹೌದು ? ಬಾ, ಹತ್ತಿರಕೆ !
ನಿನ್ನ ನಾಡಿಯಲಿ ಕೆನ್ನೆತ್ತರು ಹಸುರ್ಗಟ್ಟಿ
ನೋಡುತಿರೆಯಿರೆ ನೀನೆ ನೋಡುವಾ ಮರವಾಗಿ
ತೆಂಗಾಳಿಯಲಿ ತಳಿರ ತೊಂಗಲ ತಲೆಯ ತೂಗಿ
ನಲಿವನ್ನೆಗಂ ದೂರ ? ಬಳಿಕ ಬಾ ಮೈಮುಟ್ಟಿ,
ಭಾವ ಬುದ್ಧಿಗಳಮಲ ವಿದ್ಯುದಾಲಿಂಗನಕೆ,
ಹೃದಯಾಗ್ನಿ ಸ್ಪರ್ಶಕ್ಕೆ, ಜಡವೆಲ್ಲ ಕಿಡಿಯಾಗಿ
ಹುಡಿಮಣ್ಣು ಮಿಂಚುವುದೆ ಚೇತನದ ಗುಡಿಯಾಗಿ ?–
ಎನಿತು ಹಿರಿದಾದರೂ ನಿನ್ನ ಪಂಡಿತ ತನಕೆ
ನಿಲುಕೆನ್ನೈ : ನಾನು ಆನಂದ – ಉನ್ಮಾದಿನಿ,
ದಿವ್ಯಾನುಭೂತಿ ಸಂಭೂತ ರಸವಾಹಿನಿ !

ಕೃತ್ತಿಕೆ, ನನ್ನ ಕವಿತೆ ತನ್ನ ವಿಮರ್ಶಕನಿಗೆ, ಪುಟ ೩೦

೮೯೩

ಇನ್ನು ಮುಂದೆಯಾದರೂ ನೀವು ಆಧ್ಯಾತ್ಮವನ್ನು ಉಳಿಸಿಕೊಂಡು ಮತ ಮತ್ತು ಅದರಿಂದ ಜನ್ಯವಾದ ಮತಭ್ರಾಂತಿ ಮತ್ತು ಮತಮೌಢ್ಯಗಳನ್ನು ನಿರಾಕರಿಸದಿದ್ದರೆ ನಿಜವಾದ ಪ್ರಜಾಸತ್ತೆಯಾಗಲಿ ಸಮಾಜವಾದವಾಗಲಿ ಸಮಾನತಾಭಾವ ಸ್ಥಾಪನೆಯಾಗಲಿ ಎಂದೆಂದಿಗೂ ಸಾಧ್ಯವಾಗುವುದಿಲ್ಲ.

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೭

೮೯೪

ಹೆಣ್ಣಿಗತಿ ಕುತೂಹಲಂ ತಗದು !

ಚಂದ್ರಹಸ, ಪಾತ್ರ ದುಷ್ಟಬುದ್ಧಿ, ಪುಟ ೫೬

೮೯೫

ಏರಿದವರನು ಕೆಳಗೆ ತಳ್ಳುವುದು ;
ಬಾಲವಲ್ಲಾಡಿಸುವ ಕುನ್ನಿಗಳನೆತ್ತುವುದು ;
ಗೊಂಬೆಗಳ ತೆರದಿಂದ ಅಧಿಕಾರಗಳನೆಲ್ಲ
ತನ್ನ ತಾಳಕೆ ತಕ್ಕ ರೀತಿಯಲಿ ಕುಣಿಸುವುದು ;
ಇತ್ಯಾದಿ ರಾಜ್ಯತಂತ್ರದ ಮರ್ಮಗಳು....

ಬಿರುಗಾಳಿ, ಪಾತ್ರ ಭೈರವ, ಪುಟ ೧೯

೪೯೬

ಅದೇನು ದುರದೃಷ್ಟಿ ಎಂದರೆ, ಉಪನಿಷತ್ತಿನಲ್ಲಿ ಪ್ರಣೀತವಾದಂತಹ ದಿವ್ಯಜ್ಞಾನ ವಿದೆಯಲ್ಲ ಅದು ಬರಲಿಲ್ಲ ನಮ್ಮವರಿಗೆ ; ಅದನ್ನು ಅನುಸರಿಸಲಿಲ್ಲ. ಪುರಾಣಗಳಲ್ಲಿ ಅಲ್ಲಿ ಇಲ್ಲಿ ಇರುವ ಲೋಕಾಚಾರ, ಕಾಲಾಚಾರ ಇವುಗಳನ್ನು ಅನುಸರಿಸಿಕೊಂಡು ಬಂದು ದೇಶವನ್ನು ಈ ಸ್ಥಿತಿಗೆ ತಂದಿಟ್ಟಿದ್ದಾರೆ. ಅದಕ್ಕೋಸ್ಕರ ನೀವು ಬರಹಗಾರರು ಇದನ್ನೆಲ್ಲ ಮಾಡಬೇಕಾದರೆ, ನೀವು ಎಷ್ಟು ಅಧ್ಯಯನ ಮಾಡಬೇಕು ಅಂತ ನೋಡಿ. ಬರೀ ಪತ್ರಿಕೆಯಲ್ಲಿ ಅಲ್ಲೊಂದು ಇಲ್ಲೊಂದು ಕಾಗದ ಬರೆದ ಮಾತ್ರಕ್ಕೆ ಪ್ರಯೋಜನ ವಿಲ್ಲ. ಮೊದಲು ಟೀಕೆ ಮಾಡಬೇಕೆಂದರೆ ಇವನ್ನೆಲ್ಲ ಚೆನ್ನಾಗಿ ಅರಿತಿರಬೇಕು.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೭೦-೧

೪೯೭

ಮಾಡಿದ ತಪ್ಪನೊಪ್ಪಿಕೊಳ್ವುದೆ ಲೌಕಿಕದ
ಬೀರಕ್ಕೆ ಸಲ್ಲಕ್ಷಣಂ.

ಶ್ರೀ ರಾಮಾಯಣ ದರ್ಶನಂ, ನೀಂ ಸತ್ಯವ್ರತನೆ ದಿಟಂ, ಪಾತ್ರ ರಾಮ, ಪುಟ ೩೨೯

೪೯೮

ಸ್ವಭಾವತಃ ಹಿಂಜರಿದು ಮರೆಸೇರುವ ಪ್ರವೃತ್ತಿಯವನಾಗಿದ್ದ ನನ್ನನ್ನು ಬಯಲಿನ ಕಣಕ್ಕೆ ಎಳೆದು ನೂಕಿದ ಹಿರಿಯರಲ್ಲಿ ಸ್ವಾಮಿ ಸಿದ್ಧೇಶ್ವರಾನಂದಜಿ, ನಾ. ಕಸ್ತೂರಿ ಅವರನ್ನು ಬಿಟ್ಟರೆ ವೆಂಕಣ್ಣಯ್ಯ ಕೃಷ್ಣಶಾಸ್ತ್ರಿಗಳಿಗೆ ಪ್ರಧಾನಸ್ಥಾನ ಮೀಸಲಾಗುತ್ತದೆ.

ಮನುಜಮತ ವಿಶ್ವಪಥ, ಅಹೇತುಕ ಆತ್ಮೀಯತೆ, ಪುಟ ೮೦

೪೯೯

ಇಳಿತಂದುದು ಈ ಭೂಮಿಗೆ
ಅವತಾರದ ಮೇಲವತಾರ !
ಆದುದ್ಧಾರಕೆ ಸಾವಿರ ಮಡಿ
ಇಹುದಾಗುವ ಉದ್ಧಾರ !

ಅಗ್ನಿಹಂಸ, ಶತಮಾನ ಸಂಧ್ಯೆ, ಪುಟ ೮೭

೫೦೦

ಕಾವ್ಯವಾಚಕನಿಗೆ ಸರಸ ಹೃದಯ, ಸಮಾನಾನುಭವ, ಸಹಾನುಭೂತಿ ಇವುಗಳ ಜೊತೆಗೆ ನವಾನುಭವ ಸಾಧನ ಶಕ್ತಿಯೂ, ಎಂದರೆ, ಹಳೆಯ ಅನುಭವಗಳನ್ನು ಮೆಲುಕು ಹಾಕುವ ಶಕ್ತಿಯೊಂದೇ ಅಲ್ಲದೆ ಹೊಸ ಹೊಸ ಅನುಭವಗಳನ್ನೂ ಹೊಸ ಹೊಸ ಆಲೋಚನೆಗಳನ್ನೂ ಬರಮಾಡಿಕೊಳ್ಳುವ ಶಕ್ತಿಯೂ ಇರಬೇಕು. ಇದು ಸಾಧ್ಯವಾಗಬೇಕಾದರೆ ಪುರಾತನದಲ್ಲಿರುವ ಅಂಧ ಪುರಸ್ಕಾರವೂ ನೂತನದಲ್ಲಿರುವ ಮಂದ ತಿರಸ್ಕಾರವೂ ಮನಸ್ಸಿನಿಂದ ತೊಲಗಬೇಕು.

ಕಲಾಸುಂದರಿ, ಮುನ್ನುಡಿ, ಪುಟ XI

೬೦೧

ತನ್ನ ಗೌರವ ಕೆಡದ ರೀತಿಯಲ್ಲಿ ನಡೆವವನು,
ತನ್ನ ಜಾಗಕೆ ತಾನೆ ಬಲು ಹೆಮ್ಮೆ ಪಡದವನು,
ಮರೆಯದೆಯೆ ಹಡೆದ ಮಾತೆಯ ಸೇವೆಯನು ಮಾಡಿ
ಮೌನದಿಂ ಮಡಿವವನು ಧನ್ಯ ಸತ್ಯಾಗ್ರಹಿ!
ಕಲಿಯುಗದ ಪ್ರಚ್ಛನ್ನ ಕಲ್ಕಿ ಸತ್ಯಾಗ್ರಹಿ!

ಪಾಂಚಜನ್ಯ, ಸತ್ಯಾಗ್ರಹಿ, ಪುಟ ೨೧

೬೦೨

ಅಂತೇ? ಅಂತೇ? ಯಾಕಂತೆ?
ತತ್ತ್ವವೆಂಬುದಂತೆಯ ಸಂತೆ!

ಕೊಳಲು, ಅಂತೆ, ಪುಟ ೫೮

೬೦೩

ನಿಯಮಗಳ ಜಾಲದಲಿ ನಾನೆಲ್ಲಿ ಸಿಲುಕುವೆನೊ
ಎಂದಳುಕಿ ಎದೆನಡುಗಿ ಹಿಂಜರಿದು ನಿಂತೆ!

ನವಿಲು, ಕೇಶಿರಾಜ, ಪುಟ ೭೫

೬೦೪

ಉತ್ತಮ ಕವಿತೆಯಲ್ಲಿ ಆಳವಾದ ಆಲೋಚನೆ ಇರಲೇಬೇಕು. ಅದರಲ್ಲಿಯೂ ಕಾವ್ಯವೂ ವ್ಯಂಜಕವಾದರಂತೂ ಹಾಗಿರುವುದು ಅತ್ಯಾವಶ್ಯಕ. ಶ್ರೇಷ್ಠ ಪ್ರತಿಭಾ ಸಂಪನ್ನವಾದ ಕವಿ ಸೃಷ್ಟಿಸಮುದ್ರದ ತಳದವರೆಗೂ ನುಗ್ಗಿ ಅತ್ಯುತ್ತಮವಾದ ಭಾವಚಿಂತಾ ರತ್ನಗಳನ್ನು ತನ್ನ ಕಲ್ಪನೆಯ ತಟ್ಟೆಯಲ್ಲಿಟ್ಟು ಬದುಕಿಗೆ ನಿವೇದಿಸ ಬೇಕು; ಮೇಲೆ ತೇಲುವ ಬರಿಯ ಬೆಳ್ನೊರೆಯನ್ನು ಮಾತ್ರ ಸಂಗ್ರಹಿಸಿದರೆ ಸಾಲದು.

ಕಲಾಸುಂದರಿ, ಮುನ್ನುಡಿ, ಪುಟ V

೬೦೫

ದೇಹಮಂ
ಕಾಣ್ಕೆಗೈದಿರಿ ದೇವ ಧನ್ವಂತರಿಯ ಗುಡಿಗೆ;
ಪ್ರಾಣಮಂ ಕೊಂಡೊಯ್ದು ಭಾಗೀರಥಿಯ ತಡಿಗೆ
ಮೀಯಿಸಿದಿರದನು ಗುರುಮಂತ್ರದಿಂ. ಸ್ನೇಹಮಂ
ಸವಿಯೊಡ್ಡಿ, ಶಿವಲಲಾಟಾಕ್ಷಿಯೊಳ್ ಅಭೀತಿಯಿಂ
ಚರಿಸುವಂತೆಸಗಿಹಿರಿ.

ಇಕ್ಷುಗಂಗೋತ್ರಿ, ಸ್ವಾಮಿಜಿಗೆ

೯೦೬

ಸತ್ಯವೂ ಶಿವವೂ ಸೌಂದರ್ಯದ ಮೂಲಕವೇ ನಮ್ಮ ಅನುಭವಕ್ಕೆ ಬರಬೇಕು ಎಂದೇನೂ ನಿಯತಿಯಿಲ್ಲ. ಸತ್ಯಕ್ಕೆ ಶಿವಕ್ಕೆ ಸೌಂದರ್ಯವಲ್ಲದ ಬೇರೆ ದಾರಿಗಳೂ ಇವೆ. ಹಾಗಿಯೆ ಭೂಮವೂ ಸೌಂದರ್ಯದ ಮಾಧ್ಯಮದಲ್ಲಿಯೇ ನಮಗೆ ಗೋಚರವಾಗಬೇಕು ಎಂದೇನೂ ನಿಯತಿಯಿಲ್ಲ. ಭೂಮಕ್ಕೆ ಸೌಂದರ್ಯವಲ್ಲದ ಬೇರೆ ದಾರಿಗಳಿವೆ. ಪ್ರಪಂಚದ ವಿವಿಧ ಮತಗಳೂ ವಿವಿಧ ಯೋಗಮಾರ್ಗಗಳೂ ತಮ್ಮ ತಮ್ಮ ಸಾಧಕರನ್ನು ಸತ್ಯದ ನೆಲೆಗೂ ಶಿವದ ನೆಲೆಗೂ ಭೂಮಕ್ಕೂ ಕೊಂಡೊಯ್ದಿವೆ ಎಂಬುದಕ್ಕೆ ಅನೇಕ ನಿದರ್ಶನಗಳಿವೆ.

ರಸೋ ವೈ ಸಃ, ಭೂಮಾನುಭೂತಿ, ಪುಟ ೮೩

೯೦೭

ನಿರ್ಲಕ್ಷಿಸುತೆ ದೈವಮಂ, ಪ್ರತಿಭಟಿಸಿ
ದೈವೀಪರಂಗಳಂ ಶಕ್ತಿಯಂ, ನೆಮ್ಮುತ್ತೆ
ತನ್ನಹಂಕಾರಮಂ ಸ್ವಬಲಮಂ ಸ್ವಾರ್ಥಮಂ,
ಚಲದಿಂ ವಿರೋಧಿಸಲ್ ವೈರಭಾವವನಾಂತ
ಆಸುರೀ ಸಾಧನೆಯ ದೈವೀವಿಮುಖಮಪ್ಪ
ಲೌಕಿಕ ಪರಾಕ್ರಮದ ಶಿಕ್ಷಾ ರಕ್ಷೆಗಿನ್ನಿಹುದೆ,
ಪೇಳ್, ಕೃಪಾಬಾಣಕ್ಕೆ ಬೆನ್ನಲ್ಲದನ್ಯಲಕ್ಷ್ಯಂ
ತುದಿಗೆ ?

ಶ್ರೀ ರಾಮಾಯಣ ದರ್ಶನಂ, ನೀ ಸತ್ಯವ್ರತನೆ ದಿಟಂ, ಪುಟ ೩೨೫

೯೦೮

ಜಾಲದೊಳು ಸಿಲುಕಿರುವುದೀ ಜಗದ ಬಾಳು
ಯಾರ ಕಷ್ಟವನಾರು ಬಲ್ಲರದ ಹೇಳು ?

ಹಾಳೂರು, ಪಂಕ್ತಿ ೧೮೩-೪, ಪುಟ ೧೦

೯೦೯

ಯಾರ ವಿಚಾರ ಮತ್ತು ವಿಜ್ಞಾನ ಅವರ ಮತಿಯನ್ನೆ ಪ್ರವೇಶಿಸಿ ಪರಿವರ್ತಿಸಿದೆಯೊ ಅಂಥವರನ್ನು ಮಾತ್ರ ವೈಜ್ಞಾನಿಕ ದೃಷ್ಟಿ ಸಂಪನ್ನರೆಂದು ಕರೆಯುತ್ತೇವೆ. ಬರಿಯ ಲೌಕಿಕ ಸೃಷ್ಟಿಯಿಂದಲ್ಲದೆ ಅವರು ದೃಷ್ಟಿಯಿಂದಲೂ ವಿಜ್ಞಾನಿಗಳಾಗಿರಬೇಕು; ವಿಚಾರಮತಿಗಳಾಗಿರಬೇಕು. ಶ್ರೀ ನೆಹರೂ ಅಂತಹ ವೈಜ್ಞಾನಿಕ ದೃಷ್ಟಿಯ ಧೀಮಂತರಾಗಿದ್ದರು.

ಷಷ್ಟಿನಮನ, ಶ್ರೀ ನೆಹರೂ : ವೈಜ್ಞಾನಿಕ ದೃಷ್ಟಿ ಮತ್ತು ವಿಚಾರ ಬುದ್ಧಿ, ಪುಟ ೨೬೭

೯೧೦

ಎಲ್ಲರೂ ಪಟ್ಟಣಗಳಲ್ಲಿ ಸೇರಿಬಿಟ್ಟರೆ ಹಳ್ಳಿಯನ್ನು ಉದ್ಧಾರ ಮಾಡುವವರಾರು? ನಮ್ಮ ದೇಶ ಹಳ್ಳಿಗಳ ದೇಶ, ಎಲ್ಲರೂ ಗ್ರಾಮಗಳಿಗೆ ಮರಳಿದರೇ ದೇಶೋದ್ಧಾರ ವಾಗುವುದು.

ನನ್ನ ದೇವರು ಮತ್ತು ಇತರ ಕಥೆಗಳು, ಆದರ್ಶ ಸಾಧನೆ, ಪಾತ್ರ ಕಥಾ ನಾಯಕ, ಪುಟ ೨೬

೯೧೧

ಈ ಮಹಾಬ್ರಹ್ಮಾಂಡ ಭಿತ್ತಿಯಲಿ ನಾನಿಹೆನು
ಕ್ಷುದ್ರದಲಿ ಕ್ಷುದ್ರತಮ ನರನಾಗಿ, ಎಲ್ಲವನು
ನನ್ನ ಮನಸಿನ ಭಾವಜಾಲದಲಿ ಸೆರೆಗೈದು !
ಅಣೋರಣೀಯನು ನಾನು ಮಹತೋ ಮಹೀಯವನು
ನುಂಗಿಹೆನು : ನನ್ನ ಚೇತನ ಜಲಧಿಯಲಿ ತೇಲಿ
ಬಾಳುತಿಹುದೀ ವಿಶ್ವ, ಸ್ವಪ್ನಮಾಯೆಯ ಹೋಲಿ !
ಕನಸಿನಾಕಾಶವದು ಎನಿತು ಹಿರಿದಾದರೇನು ?
ಹಿರಿಯನಲ್ಲವೆ ಅದಕೆ ಕನಸು ಕಾಣುವ ನಾನು ?

ಕಲಾಸುಂದರಿ, "ನಾನು", ಪುಟ ೬೭

೯೧೨

ಕನ್ನಡ ನಾಡುನುಡಿಗಳಿಗೆ ಸೇವೆ ಸಲ್ಲಿಸಿದವರಿಗೆ ಕನ್ನಡ ನಾಡಿನ ವಿಶ್ವವಿದ್ಯಾನಿಲಯಗಳಲ್ಲದೆ ಅನ್ಯರು ಏಕೆ ಗೌರವ ತೋರಿಸುತ್ತಾರೆ ? ಅನ್ಯ ಭಾಷೆಯವರಿಗೆ ಆ ಸೇವೆ ಗೊತ್ತಾಗುವುದಾದರೂ ಹೇಗೆ ? ಆದ್ದರಿಂದಲೆ ಕನ್ನಡ ನಾಡಿನ ಸಾಹಿತಿ ಸಂಶೋಧಕ ಕಲಾವಿದರುಗಳಿಗೆ ಅವರ ರಚನಾತ್ಮಕ ಕಾರ್ಯದಲ್ಲಿ ಧನರೂಪದ ನೆರವಿತ್ತು ಪ್ರೋತ್ಸಾಹಿಸುವುದರ ಜೊತೆಗೆ ಅವರ ಅತ್ಯುತ್ತಮ ಕೃತಿಗಳಿಗೆ ಮಾನರೂಪದ ಗೌರವವನ್ನು ತೋರುವುದೂ ಪೂರ್ವೋಕ್ತ ವೈಶಿಷ್ಟ್ಯ ರಕ್ಷಣೆಯ ಮಾರ್ಗದಲ್ಲಿ ಒಂದು ಮುಖ್ಯ ಮೈಲಿಕಲ್ಲಾಗುತ್ತದೆ.

ಮನುಜಮತವಿಶ್ವಪಥ, ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ, ಪುಟ ೨೧

೯೧೩

ದೇವಾಲಯಗಳೂ ವಿದ್ಯಾನಿಲಯಗಳೂ ಕ್ರೀಡಾಮಂದಿರಗಳೂ ಪ್ರಮೋದ ವನಗಳೂ ಕರ್ಮಸೌಧಗಳೂ ಕಾರ್ಖಾನೆಗಳೂ ರಾಜಪ್ರಾಸಾದಗಳೂ ತಮ್ಮ ಭಾರವನ್ನೆಲ್ಲಾ ರೈತನ ಎದೆಯಮೇಲೆ ಹಾಕಿ, ಸಂಸ್ಕೃತಿ ಮತ್ತು ನಾಗರಿಕತೆ ಎಂಬ ಕೀರ್ತಿಯಿಂದ ಮೆರೆಯುತ್ತಿವೆ !

ನನ್ನ ದೇವರು ಮತ್ತು ಇತರ ಕಥೆಗಳು, ಧನ್ವಂತರಿಯ ಚಿಕಿತ್ಸೆ, ಪುಟ ೮೮

೯೧೪

ಹಳ್ಳಿಗಳ ಲೆಕ್ಕಿಸದ ಹಾಳು ಸರಕಾರ
ತನ್ನಾತ್ಮಹತ್ಯಕ್ಕೆ ತಾನೆಯಾಧಾರ.

ಹಾಳೂರು, ಪಂಕ್ತಿ ೩೭೭–೮, ಪುಟ ೧೭

೯೧೫

ವಿಶ್ವಗರ್ಭದ ನಿಗೂಢ ಅಂತರಾಳದಲ್ಲಿ ಸರ್ವದಾ ಸುಪ್ತವಾಗಿದ್ದರೂ ಚಿರ ಜಾಗ್ರತವಾಗಿರುವ ತ್ರೈಲೋಕ್ಯಕಂಪನಕಾರಿಯಾದ ಮಹಾಚೈತನ್ಯಶಕ್ತಿ ಭರತವರ್ಷದಲ್ಲಿ ಗಂಗಾಪುಣ್ಯಜಲಪ್ಲಾವಿತ ವಂಗದೇಶದಲ್ಲಿ ದ್ವಿರೂಪ ಧಾರಣೆಮಾಡಿ ಅವತರಿಸಿತು: ಆ ಮಹಾ ಚೈತನ್ಯಶಕ್ತಿಯ ಮೂಲ ಮೂರ್ತಿಯೆ ಶ್ರೀ ರಾಮಕೃಷ್ಣ ಪರಮಹಂಸರು; ಉತ್ಸವಮೂರ್ತಿಯೆ ಸ್ವಾಮಿ ವಿವೇಕಾನಂದರು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೫

೯೧೬

ಭೂತಾರಾಧನೆಯಿಂದ ಧನನಷ್ಟವೊಂದೇ ಅಲ್ಲದೆ ಆತ್ಮನಾಶವೂ ಆಗುತ್ತದೆ ಎಂಬುದನ್ನು ಮರೆಯಿರಿ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೨೩

೯೧೭

'ಕೀಳುವುದು' ಎಂದರೆ ಏನು ? 'ಕೀಳುವುದು' ಎಂದರೆ ಕೀಳುವುದು ! ಇದೊಳ್ಳೆಯ ಅರ್ಥ ಹೇಳುವ ರೀತಿ ಎಂದು ನಗಬೇಡಿ. ಅನೇಕ ಸ್ಕೂಲುಗಳಲ್ಲಿ ಕನ್ನಡ ಪದ್ಯಗಳಿಗೆ ಇದಕ್ಕಿಂತಲೂ ಹೆಚ್ಚು ಅರ್ಥ ಹೇಳುತ್ತಾರೆಂದು ತಿಳಿದಿರೇನು ? "ಜನಮೇಜಯ ರಾಯ–ಜನಮೇಜಯ ರಾಯನೇ, ಕೇಳು ಕೇಳು" ಎಂದು ಮೊದಲಾಗಿ ಅರ್ಥ ಹೇಳುವುದನ್ನು ವಿದ್ಯಾರ್ಥಿಗಳಾಗಿದ್ದವರೂ ಆಗಿರುವವರೂ ಎಲ್ಲರೂ ಬಲ್ಲರು. ಅಷ್ಟೇ ಅಲ್ಲ ; ಕೆಲವು ಸಾರಿ 'ಅರಗಿಳಿ' ಎನ್ನುವುದಕ್ಕೆ 'ರಾಜಕೀರ' ಎಂದೂ, 'ಬೆಳು' ಎನ್ನುವುದಕ್ಕೆ 'ದೀಪ್ತಿ' ಎಂದೂ ಅರ್ಥ ಹೇಳುತ್ತಾರೆ. ಕಾರಣವೇನೆಂದರೆ–ಹುಡುಗರ ದಾರಿಗೆ ಇನ್ನೆಲ್ಲಿಯಾದರೂ 'ದೀಪ್ತಿ ರಾಜಕೀರ'ಗಳು ಅಡ್ಡಹಾಯ್ದುರೆ 'ಬೆಳಕು ಅರಗಿಳಿ'ಗಳು ಬಂದು ಕಾಪಾಡಲಿ ಎಂದು.

ನನ್ನ ದೇವರು ಮತ್ತು ಇತರ ಕಥೆಗಳು, 'ಗಂಟು' ಅಥವಾ ಗುಪ್ತಧನ, ಪಾತ್ರ ಕಥಾನಾಯಕ, ಪುಟ ೪೬

೯೧೮

'ಸೋಹಂ ! ಸೋಹಂ !' ಗರ್ಜನೆಯಿಂದ
ಜಗದಾರಣ್ಯವ ತಲ್ಲಣಿಸೊ !
'ಬ್ರಹ್ಮಾಸ್ಮಿ' ಎಂಬುದು ಮರುದನಿಗೈಯಲಿ
ಅಂಬರಕೇರಲಿ 'ತತ್ತ್ವಮಸಿ !'

ಕೊಳಲು, ವೇದಾಂತ ಕೇಸರಿ, ಪುಟ ೬೧

೯೧೯

ಕಲೆಯಿಂದ ಜಡವು ಚೇತನವಾಗಿ, ಜೀವನದ
ನೀರಸತೆ ಕಿಡಿಯಾಗಿ, ಪ್ರವಹಿಪುದು ನೂತನತೆ
ಚಿರವಾಗಿ.

ಪಕ್ಷಿಕಾಶಿ, ಪ್ರಕೃತಿ ಉಪಾಸನೆ, ಪುಟ ೨೩

೬೨೦

ಹೃದಯವನ್ನು ವಿಸ್ತಾರವಾಗಿಟ್ಟುಕೊಂಡು, ಹೊರಗಿನ ಬೆಳಕು ಒಳಗೆ ಬರದಂತೆ ಮನಸ್ಸಿನ ಬಾಗಿಲನ್ನು ಕಿರಿದುಮಾಡದೆ, ಮುಚ್ಚದೆ, ಬೆಳಕು ಮೂಡುವ ಕಡೆಗೆಲ್ಲಾ ತಿರುಗಿ ತಲೆಬಾಗಿ, ಶಿಷ್ಯಬುದ್ಧಿಯಿಂದ ಕಾಂತಿಯನ್ನು ಸ್ವೀಕರಿಸಿ ಕತ್ತಲೆಯನ್ನು ಹೋಗಲಾಡಿಸಿಕೊಂಡು, ಕಡೆಗೆ ನಾವೇ ಬೆಳಕಿನ ಆಗರವಾಗುವಂತೆ ಈಗಿನಿಂದಲೂ ಪ್ರಯತ್ನಿಸಬೇಕು. ನಮ್ಮ ಅದ್ಯತನರಾದ ಹಿರಿಯ ಕವಿಗಳ ಉತ್ತಮ ಕೃತಿಗಳನ್ನು ಗೌರವ ಬುದ್ಧಿಯಿಂದ, ವಿಮರ್ಶಕ ದೃಷ್ಟಿಯಿಂದ ಚೆನ್ನಾಗಿ ಓದಿ, ಅವರ ಮಾರ್ಗದ ಗುಣಾವಗುಣಗಳನ್ನು ತಿಳಿದು, ಅತಿಶಯೋಕ್ತಿಗೆ ಮಣಿಯದೆ ಯೋಗದೃಷ್ಟಿಯಿಂದ ಮುಂದುವರಿಯಬೇಕು.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೧೩-೪

೬೨೧

ಜೀವನದ ಸಂಪತ್ತು ಅದರ ಅನುಭವಗಳಲ್ಲಿದೆ. ನೆನಹು ಆ ಅನುಭವಗಳ ನಿಧಿ. ನೆನಹಿನಲ್ಲಿ ಮಹತ್ತಾದ ವಿಷಯಗಳನ್ನಾಗಲಿ ಚಿತ್ರಗಳನ್ನಾಗಲಿ ದೃಶ್ಯಗಳನ್ನಾಗಲಿ ವ್ಯಕ್ತಿಗಳನ್ನಾಗಲಿ ತುಂಬಿಕೊಳ್ಳದ ನರನ ಆತ್ಮ ದಾರಿದ್ರ್ಯದ ಸೀಮೆ. ಸ್ಮೃತಿ ಮಂದಿರದಲ್ಲಿ ಆರಾಧನೆಯ ದೇವತೆಗಳು ಹೆಚ್ಚಿದಷ್ಟೂ ಮನುಷ್ಯ ಶ್ರೀಮಂತನಾಗುತ್ತಾನೆ, ಪವಿತ್ರನಾಗುತ್ತನೆ, ಪೂಜ್ಯನಾಗುತ್ತಾನೆ.

ಮಲೆನಾಡಿನ ಚಿತ್ರಗಳು, ಮುನ್ನುಡಿ, ಪುಟ iv

೬೨೨

ಆಧುನಿಕ ಪ್ರಪಂಚದ ಕ್ಷೇಮಸೂತ್ರಗಳನ್ನು ಅಚಂಚಲ ಮುಷ್ಟಿಗಳಲ್ಲಿ ಹಿಡಿದು ಮಾರ್ಗದರ್ಶನ ಮಾಡುತ್ತಿರುವ ಮಹಾಶಕ್ತಿಗಳಲ್ಲಿ ಅಗ್ರ ಪಂಕ್ತಿಗೇ ಸೇರಿದ ವಿಭೂತಿ ಶ್ರೀ ವಿನೋಬಾಜಿ.

ಷಷ್ಟಿನಮನ, ಶ್ರೀ ವಿನೋಬಾಜಿ, ಪುಟ ೧೪೪

೬೨೩

ಕವಿಗರಸುಗಿರಸುಗಳ ಋಣವಿಲ್ಲ !
ಅವನಗ್ನಿಮುಖಿ !
ಪ್ರಲಯಶಿಖಿ !

ಪಾಂಚಜನ್ಯ, ಕವಿ, ಪುಟ ೩೬

೬೨೪

ಒಂದು ರೀತಿಯಲ್ಲಿ ನೋಡಿದರೆ ಸಾಹಿತ್ಯವೆಲ್ಲವೂ ಪ್ರಧಾನವಾಗಿ ಪ್ರತಿಮಾ ಕ್ಷೇತ್ರವೆ. ಶುದ್ಧ ಪ್ರತಿಕೃತಿ ಎಂಬುದು ಸಾಹಿತ್ಯದಲ್ಲಿ ಇಲ್ಲವೆ ಇಲ್ಲ. ಆದರೆ ಕೃತಿಕಾರನ ಸಂಕಲ್ಪವನ್ನು ಗಮನಿಸಿ, ಪ್ರತಿಕೃತಿ ಪ್ರಯತ್ನನಡೆದಿದ್ದರೆ, ಅದನ್ನು ಉಪಚಾರಕ್ಕಾಗಿ ಪ್ರತಿಕೃತಿ ಸಾಹಿತ್ಯ ಎಂದು ಕರೆಯುತ್ತೇವೆ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೩೯

೯೨೫

ಭಕ್ತಿಕೋಮಲಸಾಧನೆಯಾದರೆ, ಜ್ಞಾನ ಕಠೋರ ಸಾಹಸ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೭೪

೯೨೬

ಋಷಿಯಲ್ಲದಾತನಾ ಕವಿತೆ ಮಿಥ್ಯೆಯಾದೊಡಂ
ಋಷಿಯಾದ ಕವಿಯ ಕಾವ್ಯಂ ಸತ್ಯಾಮೇಗಳಂ !

ಬಲಿದಾನ, ಪಾತ್ರ ಭಾರತಾಂಬೆ, ಪುಟ ೭೦

೯೨೭

ಮಂತ್ರೋಪದೇಶವೆನೆಗೇಕ ಬೇಡ :
ಲೀಲೆಯಿದು ವಿದ್ಯೆಯಲ್ಲ !
ಮುಕ್ತಚೈತನ್ಯದಿಂ ಪೊರಮಡುವ ಲೀಲೆಯಂ
ಬಂಧಿಪೆಯ ಜಡ ಶಾಸ್ತ್ರನಿಯಮದಿಂದ ?

ಮೇಘಪುರ, ಒಡನಾಟ, ಪುಟ ೧೫

೯೨೮

ಸಾಧಾರಣ ಮಾನವರಲ್ಲಿರುವ ಅಲೌಕಿಕತಾ ಪ್ರೇಮವೂ ಕಲ್ಪನಾಶಕ್ತಿಯೂ ಮಹಾಪುರುಷರ ಜನ್ಮಕಥೆಗಳನ್ನು ಬಣ್ಣದ ಬಲೆಗಳಿಂದ ನೆಯ್ದಿದ್ದರೂ ಇರಬಹುದು. ಆದರೂ ಅವುಗಳನ್ನು ಸಂಪೂರ್ಣವಾಗಿ ಸುಳ್ಳೆಂದು ಅಲ್ಲಗಳೆಯುವುದು ಅಷ್ಟೇನೂ ವೈಜ್ಞಾನಿಕವಾದುದಲ್ಲ. ಅಂತಹ ವಿಷಯಗಳಲ್ಲಿ ಸಂದೇಹವು ನಿರ್ಣಯಕ್ಕಿಂತ ಹೆಚ್ಚು ಶ್ರೇಯಸ್ಕರವಾದುದು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೮

೯೨೯

ವಿಜ್ಞಾನದ ಕಾರ್ಯ ಸತ್ಯಶೋಧನೆ. ಕಾವ್ಯದ ಕಾರ್ಯ ಸೌಂದರ್ಯ ಸಾಧನೆ. ವಿಚಾರಮಾಡಿ ನೋಡಿದರೆ ಅಂತಿಯ ಸಿದ್ಧಿಯು ವಿಜ್ಞಾನ ಮತ್ತು ಕಾವ್ಯಗಳಿಗೆ ತದತೀತವಾದ ಆ ಸತ್ಯ ಮತ್ತು ಸೌಂದರ್ಯಗಳ ತದಾತ್ಮ್ಯತೆಯಲ್ಲಿದೆ ; ಮತ್ತು ಅದರಿಂದ ಪ್ರಾಪ್ತವಾಗುವ ಪರಮ ಸಾಯುಜ್ಯದಲ್ಲಿ ನೆಲೆಗೊಂಡಿದೆ. ಆ ಸ್ಥಿತಿಯಲ್ಲಿ ಸತ್ಯವು ಸೌಂದರ್ಯದ ಆಚಾರವಾಗಿರುತ್ತದೆ ; ಸೌಂದರ್ಯವು ಸತ್ಯದ ಆಚಾರ್ಯನಾಗಿರುತ್ತದೆ ; ಸತ್ಯ ಸೌಂದರ್ಯಗಳಿಗೆ ಅಭೇದ ಭಾವ ಉಂಟಾಗುತ್ತದೆ.

ಇತ್ಯಾದಿ, ಉಪಮಾಲೋಲ ಲಕ್ಷ್ಮೀಶ, ಪುಟ ೧೭

೯೩೦

ಒಟ್ಟುಗೂಡಿದ ನಾಡಿನ ಹೆಸರು ಅಧಿಕೃತವಾಗಿ ಕರ್ಣಾಟಕ ಎಂದಾಗಬೇಕೆಂದೂ, ಸರಕಾರ ಕನ್ನಡವನ್ನು ಅಧಿಕೃತ ಭಾಷೆಯೆಂದು ಘೋಷಿಸಬೇಕೆಂದೂ, ರಾಜ್ಯಾಂಗದ ಪ್ರಕಾರ ರಾಜ್ಯಪಾಲರ ನೇಮಕವಾಗಬೇಕೆಂದೂ ಮತ್ತು ವಿಶ್ವ

ವಿದ್ಯಾನಿಲಯದ ಮಟ್ಟದಲ್ಲಿ, ಸದ್ಯಕ್ಕೆ ಇಂಗ್ಲಿಷಿನ ಜೊತೆಗೆ, ಪ್ರಾದೇಶಿಕ ಭಾಷೆಯೂ ಶಿಕ್ಷಣ ಮಾಧ್ಯಮವಾಗಬೇಕೆಂದು. (ನಾಲ್ಕು ಗುರುತರ ಉಪಾಧಿಗಳು)

ಮನುಜಮತ ವಿಶ್ವಪಥ, ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ, ಪುಟ ೧೫

೬೩೧

ಛಂದೋ ಬದ್ಧವಾಗಿರುವ ಭಾಷೆಯೆಲ್ಲವೂ ಕವಿತೆಯೇ ಎಂದೂ ಯಾರಾದರೂ ಕೇಳಬಹುದು. ಎಂದಿಗೂ ಅಲ್ಲ. ಕವಿಗೂ ಪದ್ಯರಚಕನಿಗೂ ತುಂಬ ಅಂತರವುಂಟು. ಭಾವ ಮೈಗೊಳ್ಳುವುದಕ್ಕೆ ಪದ್ಯರಚನಾಕೌಶಲ ಆವಶ್ಯಕವಾದರೂ, ಅದು ಕವಿತೆಯ ಅತ್ಯಂತ ಮುಖ್ಯಾಂಗವಲ್ಲ. ಶಬ್ದವೈಚಿತ್ರ್ಯ ಕಲಾಕೋವಿದನನ್ನು ಸೂಚಿಸುವುದೇ ಹೊರತು ಅದು ರಸಋಷಿಯ ಆತ್ಮಕ್ಕೆ ಸಾಕ್ಷಿಯಲ್ಲ. ಪ್ರತಿಯೊಬ್ಬ ಕವಿಯೂ ಪದ್ಯರಚಕನೆ ; ಆದರೆ ಪದ್ಯರಚಕರೆಲ್ಲ ಕವಿಗಳಲ್ಲ ! ಯಾವ ಪದ್ಯರಚನೆಯಲ್ಲಿ ಮಾಧುರ್ಯ, ಶಕ್ತಿ, ಋಜುಭಾವ, ವೈವಿಧ್ಯ ಮೊದಲಾದವು ತುಂಬಿತುಳುಕುವುವೋ ಅದನ್ನು ಕವಿತೆಯೆಂದು ಕರೆಯಬಹುದು.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೧೦-೧

೬೩೨

ಶತ್ರುಗಳ ಕಾಟವಾದರು ಬೇಕು ; ನಮಗಾಗಿ
ಮಿತ್ರರೆಂಬುವನೆವದಿ ಮರುಕ ತೋರುವ ಜನರ
ಕೃತ್ರಿಮದ ಕಾಟ ಬೇಡ !

ಜಲಗಾರ, ಪಾತ್ರ ಜಲಗಾರ, ಪುಟ ೧೯

೬೩೩

ಹಸುಗೂಸಿನ ಕನಸದು ಬಲು ಆಳ :
ಅದಕಿಲ್ಲವು ಆದ್ಯಂತ್ಯದ ಕಾಲ !
ಕಿರುಕವನದೊಳಿರಲಾರದೆ, ಹೇಳ,
ಗಾನದ ಕೊನೆಗಾಣದ ಅರ್ಥ ?

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಕೂಸಿನ ಕನಸು, ಪುಟ ೫೯

೬೩೪

ರಾಜಕೀಯ ದೃಷ್ಟಿಯಿಂದ ಭೌಗೋಲಿಕ ಕರ್ನಾಟಕವು ಹರಿಹಂಚಿ ಹೋಗಿದ್ದರೂ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಇವುಗಳ ದೃಷ್ಟಿಯಿಂದ ನೋಡಿದರೆ ಆತ್ಮಗೋಲಕ್ಕೆ ಸೇರಿರುವ ಸೂಕ್ಷ್ಮವೂ ಶಾಶ್ವತತರವೂ ಆದ ಕನ್ನಡನಾಡಿನ ನಿಜ ಬೆಸುಗೆ ಇನ್ನೂ ಬಿಚ್ಚಿ ಬಿರಿದಿಲ್ಲ. ಕನ್ನಡ ನೆಲವು ನಾಲ್ಕಾರು ಸರಕಾರಗಳ ಬೇರೆ ಬೇರೆ ಆಧಿಪತ್ಯಕ್ಕೆ ಈಡಾಗಿ ಬಿರಿದಿದ್ದರೂ ಕನ್ನಡಿಗರೊಲವು ಏಕಚ್ಛತ್ರಾಶ್ರಯದಲ್ಲಿದೆ. ಕರ್ನಾಟಕಕ್ಕೆ ಅಖಂಡವಾದ ಭೂಸಾಮ್ರಾಜ್ಯವಿನ್ನೂ ಸಿದ್ಧವಾಗದಿದ್ದರೂ ಸಾಹಿತ್ಯ ಸಾಮ್ರಾಜ್ಯವೇನೋ ಸಿದ್ಧವಾಗಿದೆ. ಎಲ್ಲಿಯವರೆಗೆ ಕನ್ನಡಿಗರೆಲ್ಲರೂ, ಅವರು

ಎಲ್ಲಿಯೇ ಇರಲಿ, ಪಂಪ ರನ್ನ ನಾಗವರ್ಮ ರಾಘವಾಂಕ ನಾರಣಪ್ಪ ಲಕ್ಷ್ಮೀಶ ಮೊದಲಾದ ಕವಿವರ್ಯರ ಸಾಹಿತ್ಯಸಿಂಹಾಸನಕ್ಕೆ ತಲೆಬಾಗುತ್ತಾರೋ ಅಲ್ಲಿಯವರೆಗೆ ಕನ್ನಡ ಸಾಮ್ರಾಜ್ಯಕ್ಕೆ ಚ್ಯುತಿಯಿಲ್ಲ. ನುಡಿಯೊಲ್ಮೆಯೊಂದಿದ್ದರೆ ದೇಶದೇವಿಯ ಗುಡಿಯ ಕಟ್ಟಡದ ಕಲ್ಲುಗಳ ಬೆಸುಗೆಗೆ ವಜ್ರಗಾರೆಯಾಗುತ್ತದೆ. ಆ ಒಲ್ಮೆ ಮಡಿದಂದು ಕಟ್ಟಡದ ಕಲ್ಲುಗಳು ಸಡಿಲಗೊಂಡು ಗುಡಿ ಕೆಳಕ್ಕುರುಳಿ ನೆಲಸಮವಾಗುತ್ತದೆ. ಸೊಡೆಟಾನ್ ಪ್ರಾಂತವು ಜರ್ಮನೇತರ ಸರ್ಕಾರಕ್ಕೆ ಇಪ್ಪತ್ತು ವರ್ಷಗಳಿಂದ ಸೇರಿಹೋಗಿದ್ದರೇನಂತೆ ? ಎಲ್ಲಿಯವರೆಗೆ ಆ ಪ್ರಾಂತದ ಜರ್ಮನರು ತಮ್ಮ ಭಾಷೆ, ತಮ್ಮ ಸಾಹಿತ್ಯ, ತಮ್ಮ ಸಂಸ್ಕೃತಿ, ತಮ್ಮ ಗಯಟೆ, ತಮ್ಮ ಷಿಲರ್ ಎಂಬ ಅಭಿಮಾನವನ್ನು ಸಜೀವವಾಗಿಟ್ಟುಕೊಂಡಿದ್ದರೋ ಅಲ್ಲಿಯವರೆಗೆ ಅವರು ಸೂಕ್ಷ್ಮವೂ ಶಾಶ್ವತತರವೂ ಆದ ನೈಜ ಜರ್ಮನ್ ಸಾಮ್ರಾಜ್ಯಕ್ಕೆ ಸೇರಿದವರಾಗಿಯೇ ಇದ್ದರು. ಕೃತಕವಾದ ರಾಜಕೀಯ ವಿಭಜನೆಯು ನೈಜವಾದ ಸಂಸ್ಕೃತಿಯ ಏಕತೆಯನ್ನು ಎಂದಿಗೂ ಶಾಶ್ವತವಾಗಿ ನಾಶಮಾಡಲಾರದು. ಇಂದಲ್ಲ ನಾಳೆ ನೈಜಕ್ಕೆ ಜಯವಿದೆ, ಕೃತಕಕ್ಕೆ ಪತನವಿದೆ. ಆದ್ದರಿಂದ ವಿವಿಧ ರಾಜಕೀಯ ವಿಭಾಗಗಳಲ್ಲಿ ಹರಿಹಂಚಿಹೋದ ಕರ್ನಾಟಕದ ಉದಾರ ಹೃದಯದ ಜನರಲ್ಲಿ ನುಡಿಯೊಲ್ಮೆಯ ಕಿಡಿ ಕೆಡದಂತೆ ನಿರಂತವೂ ಸಾವೇಶಪ್ರೋತ್ಸಾಹವೀಯಬೇಕಾದುದು ಕರ್ನಾಟಕದ ಪುನರುತ್ಥಾನಕ್ಕಾಗಿ ದುಡಿಯಲು ದೀಕ್ಷೆಗೊಂಡ ತಪಸ್ವಿಗಳೆಲ್ಲರ ಕರ್ತವ್ಯ. ಏಕೆಂದರೆ, ನುಡಿ ಬಿಟ್ಟರೆ ನಾಡು ಬಿಟ್ಟಂತೆ. ಭಾಷೆಗೇಡಿ ದೇಶಗೇಡಿಯೂ ಆಗುತ್ತಾನೆ, ಅನಿವಾರ್ಯ

ಸಾಹಿತ್ಯ ಪ್ರಚಾರ, ದೇಶದೇವಿಯ ಪೂಜೆಗೆ ಬನ್ನಿ, ಪುಟ ೬೯–೭೦

೯೩೫

ಮೊದಲನೆಯದಾಗಿ, ಆಶಾಜನಕವೂ ಬಲಕಾರಿಯೂ ಆಗಿರುವ ಉಪನಿಷತ್ತುಗಳ ಧೀರಸಂದೇಶವನ್ನು ಮನೆ ಮನೆಗೂ ಗುಡಿಸಲು ಗುಡಿಸಲಿಗೂ ಹೋಗಿ ಸಾರಬೇಕು. ಜನಗಳ ಹೃದಯಕ್ಕೆ ವಜ್ರಸಾಣೆಯನ್ನು ಕೊಟ್ಟು 'ಮನುಷ್ಯ'ರನ್ನಾಗಿ ಮಾಡಬೇಕು. ಏಕೆಂದರೆ, ಹೃಚ್ಛಕ್ತಿಯಿಲ್ಲದೆ ಶ್ರೇಯಸ್ಸಿಲ್ಲ.

ಎರಡನೆಯದಾಗಿ, ಸಂಕುಚಿತ ಭಾವಗಳನ್ನು ತೊಡೆದುಹಾಕಿ ಪರಮಹಂಸರಿಂದ ಪ್ರಣೀತವಾದ ಸರ್ವಧರ್ಮಸಮನ್ವಯವನ್ನು ಸಾರಿ ವಿಶಾಲ ದೃಷ್ಟಿಯನ್ನು ದಯಪಾಲಿಸಬೇಕು. ಏಕೆಂದರೆ, ಭರತಖಂಡದ ಅವನತಿಗೆ ಭಿನ್ನಬುದ್ಧಿಯೆ ಮೂಲಕಾರಣವಾಗಿದೆ.

ಮೂರನೆಯದಾಗಿ, ವಿವೇಕಪೂರ್ವಕವಾದ ಮತ್ತು ಆರ್ಯಸಂಸ್ಕೃತಿಗೆ ಹಾನಿಕರವಲ್ಲದ ಸಮಾಜಸುಧಾರಣೆಯನ್ನು ಕೈಗೊಳ್ಳಬೇಕು. ಬದಲಾವಣೆಗಿಂತಲೂ ಬೆಳವಣಿಗೆಯೆ ಹಿತಕರವಾದುದು. ಸಂಪ್ರದಾಯ ಶರಣರನ್ನು ಖಂಡಿಸಿ ನಿಂದಿಸಿ ಮೈಮೇಲೆ ಬೆಳಕಿನ ಹಾದಿಗೆ ಕರೆತರಬೇಕು. ಬೆಳಕು ಬಂದರೆ ಕತ್ತಲೆ ತನಗೆ ತಾನಾಗಿ ತೊಲಗುತ್ತದೆ.

ನಾಲ್ಕನೆಯದಾಗಿ, ವಿದ್ಯಾಪ್ರಚಾರ. ಅದಿಲ್ಲದೆ ದೇಶಕ್ಕೆ ಮುಕ್ತಿಯಿಲ್ಲ. ಮಾನವನಲ್ಲಿ ಮಲಗಿರುವ ಪೂರ್ಣತೆ ವಿಕಾಸವಾಗುವಂತೆ ಮಾಡುವುದೇ ಬೋಧನೆಯ ಗುರಿ.

ಬರಿಯ ವಿಷಯಸಂಗ್ರಹಣೆ ಮಾಡಿ ಮೆದುಳನ್ನೊಂದು ಉಗ್ರಾಣದಂತೆ ಮಾಡಿಕೊಂಡರೆ ಅದು ವಿದ್ಯೆಯಲ್ಲ. ಜೀವನಪೋಷಕವೂ ಪೌರುಷಕಾರಿಯೂ ಸೌಶೀಲ್ಯಜನಕವೂ ಆದ ಭಾವಸಮನ್ವಯಕರಣವೇ ನಿಜವಾದ ವಿದ್ಯೆ.

ಐದನೆಯದಾಗಿ, ಸಾಮಾನ್ಯಜನರ ಅಥವಾ 'ಮಂದಿ'ಯ ಉತ್ಥಾಪನೆ. ಮಂದಿಯ ಅಧೋಗತಿಯೇ ಭಾರತವರ್ಷದ ದಾಸ್ಯ ದುಃಸ್ಥಿತಿಗಳಿಗೆ ಮುಖ್ಯಕಾರಣ. ಉಚ್ಚವರ್ಗದವರು ಅವರನ್ನು ಮೂಲೆಗೆ ತಳ್ಳಿ ತುಳಿದುದರಿಂದ ಅವರೆಲ್ಲರೂ ಕ್ರಿಮಿಗಳಾಗಿದ್ದಾರೆ. ಕ್ರಿಮಿಗಳನ್ನೂ ಪುನಃ ದೇವತೆಗಳನ್ನಾಗಿ ಮಾಡಬೇಕು. ಭಾರತಾಂಬೆಯ ವಾಸಸ್ಥಾನವು ರಾಜನ ಅರಮನೆಯಲ್ಲ ; ಬಡವನ ಗುಡಿಸಲು. ಬಡವನ ನೋವಿಗೆ ಯಾರೆದೆ ಕುದಿಯುತ್ತದೆಯೋ ಆತನೇ ಮಹಾತ್ಮನು ; ಉಳಿದವರೆಲ್ಲ ದುರಾತ್ಮರು.

ಆರನೆಯದಾಗಿ ಸ್ತ್ರೀಯರ ಉತ್ಥಾಪನೆ. ಭರತಖಂಡದ ಆದರ್ಶಸ್ತ್ರೀ ಸತಿಯಲ್ಲ, ಮಾತೆ. ಅವರು ವಿದ್ಯಾರ್ಜನೆಮಾಡುವಂತೆ ಅವಕಾಶ ಕಲ್ಪಿಸಿಕೊಟ್ಟರೆ, ಅವರ ಸಮಸ್ಯೆಗಳನ್ನು ಅವರೇ ಪರಿಹರಿಸಿಕೊಳ್ಳಲು ಸಮರ್ಥರಾಗುತ್ತರೆ. ಭಾವೀ ಭಾರತ ಸ್ತ್ರೀಯರು ಸೀತೆ, ಸಾವಿತ್ರಿ, ದಮಯಂತಿ, ಮೀರಾಬಾಯಿ ಮೊದಲಾದ ಪುಣ್ಯ ಮಾತೆಯರ ತನುಜಾತರಾಗುವಂತೆ ಮಾಡುವುದು ನಮ್ಮ ಕರ್ತವ್ಯ. ಸ್ತ್ರೀ ಪಾಕಶಾಲೆಯ ಮೂದೇವಿಯಲ್ಲ, ಆರ್ಯಾವರ್ತದ ಮಹಾದೇವಿ.

ಏಳನೆಯದಾಗಿ, ಜಾತಿಪದ್ಧತಿಯ ಸಮಸ್ಯೆ. ವರ್ಣಾಶ್ರಮಧರ್ಮವು ಹಿತಕಾರಿ ; ಆದರೆ ಜಾತಿಪದ್ಧತಿ ಲಯಕಾರಿ. ಧರ್ಮಪ್ರಪಂಚದಲ್ಲಿ ಜಾರಿ ಪದ್ಧತಿಯಿಲ್ಲ. ಕೀಳು ಜಾತಿಯವನೂ ಮೇಲುಜಾತಿಯವನೂ ಸಂನ್ಯಾಸ ಸ್ವೀಕಾರ ಮಾಡಿದಾಗ ಸಮಾನರಾಗುತ್ತಾರಲ್ಲವೆ ? ಜಾತಿಪದ್ಧತಿ ವೇದಾಂತ ಮತಕ್ಕೆ ವಿರುದ್ಧವಾದುದು. ಅದು ಒಂದು ಸಾಮಾಜಿಕ ವ್ಯವಸ್ಥೆ ಮಾತ್ರ. ಮಹಾಪುರುಷರೆಲ್ಲರೂ ಅದನ್ನು ಪ್ರತಿಭಟಿಸಿದ್ದಾರೆ. ವರ್ಣಾಶ್ರಮಧರ್ಮವು ಜಾತಿಪದ್ಧತಿಯಲ್ಲ. ವರ್ಣಾಶ್ರಮವಿಲ್ಲದ ದೇಶವಿಲ್ಲ. ಗುಣಸಂಸ್ಕಾರಗಳ ಮೇಲೆ ನಿಲ್ಲಬೇಕಾದ ವರ್ಣಾಶ್ರಮವು ಹಕ್ಕುಬಾಧ್ಯತೆಗಳ ಮೇಲೆ ನಿಂತು ಜಾತಿಪದ್ಧತಿಯಾಗಿ ಹೋಗಿದೆ. ಹಕ್ಕುಬಾಧ್ಯತೆಗಳಿಗೆ ಪರದಾಡುವುದನ್ನು ತ್ಯಜಿಸಿ, ಗುಣಸಂಸ್ಕಾರಗಳ ಆರ್ಜನೆಯಿಂದ ಎಲ್ಲರೂ ಬ್ರಾಹ್ಮಣ್ಯಕ್ಕೆ ಎಳಸಬೇಕು. ಬ್ರಾಹ್ಮಣ್ಯವು ನಮ್ಮ ಆದರ್ಶ. ಪಂಡಿತನ ಮಗನು ಪಂಡಿತನಾಗದಿರಬಹುದು ; ಹಾಗೆಯ ಬ್ರಾಹ್ಮಣನ ಮಗನು ಬ್ರಾಹ್ಮಣನಾಗದಿರಬಹುದು. ಆದ್ದರಿಂದ ಹಕ್ಕು ಬಾಧ್ಯತೆಗಳಿಗಾಗಿ ಹೊಡೆದಾಡುವ ಅನಿಷ್ಟವಾದ ಜಾತಿಪದ್ಧತಿಯನ್ನು ಉತ್ತರಿಸಿ, ಗುಣಸಂಸ್ಕಾರಗಳ ಸಾಧನೆಯಿಂದ ಶ್ರೇಯಸ್ಕರವಾಗುವ ವರ್ಣಾಶ್ರಮಧರ್ಮವನ್ನು , ಕೈಕೊಂಡು ಎಲ್ಲರೂ ಬ್ರಾಹ್ಮಣರಾಗಬೇಕು.

ಎಂಟನೆಯದಾಗಿ, ಆರ್ಯಸಂಸ್ಕೃತಿಯ ಸಂರಕ್ಷಣೆ ಮತ್ತು ಪ್ರಚಾರ. ಆರ್ಯಸಂಸ್ಕೃತಿ ಸಜೀವ ಸಂಸ್ಕೃತಿಗಳಲ್ಲೆಲ್ಲ ಅತ್ಯಂತ ಪುರಾತನವಾದುದು, ಶಕ್ತಿಪೂರ್ಣ

ವಾದುದು ಮತ್ತು ಸರ್ವಗ್ರಾಸಿಯಾದುದು. ಅದರಲ್ಲಿ ಔದಾರ್ಯವಿರುವಂತೆಯೆ ವೈಶಿಷ್ಟ್ಯವೂ ಇದೆ. ಆದ್ದರಿಂದ ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆಗೆ ಕೈ ಹಾಕದೆ, ಅದರಲ್ಲಿರುವ ಸತ್ಯಾಂಶಗಳನ್ನು ಹೀರಿಕೊಂಡು ನಮ್ಮ ಲೌಕಿಕ ಜೀವನವನ್ನು ಉದ್ಧಾರ ಮಾಡಿಕೊಳ್ಳುವುದಲ್ಲದೆ, ವಿನಿಮಯವಾಗಿ ಯಂತ್ರ ಪಿಶಾಚಗ್ರಸ್ತರಾಗಿ ಲೋಭಾಗ್ನಿಯಿಂದ ಬೆಂದು ನರಳುತ್ತಿರುವ ಅವರಿಗೆ ಉಪನಿಷತ್ ಪ್ರಣೀತವಾದ ಆತ್ಮದ ಸಂದೇಶವನ್ನು ದಾನಮಾಡಿ ಜಗತ್ತಿನಲ್ಲಿ ಸೌಹಾರ್ದವೂ ನೆಮ್ಮದಿಯೂ ಶಾಂತಿಯೂ ನೆಲಸುವಂತೆ ಕೈಯಲ್ಲಾದ ಸೇವೆ ಮಾಡುವುದು ನಮ್ಮ ಕರ್ತವ್ಯ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨೩೩ ರಿಂದ ೨೩೫

೬೩೬

ಕಲ್ಲು ದೇವರು ಎಂದು ದೂರದೆ
ಪೊಳ್ಳು ವಿಗ್ರಹವೆಂದು ಜರೆಯದೆ
ಕಲ್ಲು ಮುಳ್ಳಲ್ಲಿರುವ ನನ್ನನು
ಎಲ್ಲಿಯು ನೀ ಪೂಜಿಸು !

ಅಮಲನ ಕಥೆ, ಪಾತ್ರ ದೇವರು, ಪುಟ ೩೬

೬೩೭

......ಹಿಂದೆ ನಡೆದ ಆ ಸ್ವಾತಂತ್ರ್ಯ ಸಂಗ್ರಾಮದ ಜೀವನವನ್ನು ಮುಂದೆ ಬರುವ ಕಾದಂಬರಿಕಾರರು, ಕತೆಗಾರರು, ನಾಟಕಕಾರರು ಮತ್ತು ಕವಿಗಳು ತಮ್ಮ ತಮ್ಮ ಕೃತಿವಸ್ತುವನ್ನಾಗಿ ಆರಿಸಿಕೊಂಡು ಚಿತ್ರಿಸಬೇಕು. ಖಂಡಿತ ಚಿತ್ರಿಸುತ್ತಾರೆ ಎಂಬ ಭರವಸೆ ನನಗಿದೆ. ಅಲ್ಲಿ ಸಾಹಿತ್ಯಕ್ಕೆ ಸಾಮಗ್ರಿ ಬೇಕಾದಷ್ಟಿದೆ.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೨೪

೬೩೮

ಚೆಲುವೆ ದೇವರು, ಒಲವೇ ಪೂಜೆ ;
ಎಂಬುದೇ ರಸಜೀವನದೋಜೆ.

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಹೂವು–ದೇವರು, ಪುಟ ೭೭

೬೩೯

ಪೆಣ್ಣೊಲಿದ ನಲ್ಲನಿರೆ, ಗಂಡೊಲಿದ ನಲ್ಲೆಯಿರೆ,
ಸಿರಿಬಾಳ್ತೆ ಸಿಂಗಾರಸೊಗಕೆ ಹೊಯಿಕ್ಕೈಯಿಹುದೆ ಪೇಳ್
ಬದುಕಿನಲಿ ?

ಶ್ರೀ ರಾಮಾಯಣ ದರ್ಶನಂ, ಮಮತೆಯ ಸುಳಿಮಂಥರೆ, ಪುಟ ೬೬

೯೪೦

ಮುಯ್ಗೆ ಮುಯ್ಯಂ ತೀರ್ಚಿಕೊಳ್ವುದು ಜಸಮಲ್ತು !
ದಂಡನೆ ದೊಡ್ಡವರ ಕಾರ್ಯಮಾಗದು ; ಕ್ಷಮೆಯೆ
ಪುಣ್ಯಾತ್ಮರಿಗೆ ಪಿರಿಯ ಪೊಂದೊಡಿಗೆ.

ಬಿರುಗಾಳಿ, ಪಾತ್ರ ಭೈರವ, ಪುಟ ೮೫

೯೪೧

ಅಂತೂ ಹೇಗಾದರೂ ದೈಹಿಕವಾಗಿಯೊ ಮಾನಸಿಕವಾಗಿಯೊ ಅಂತರ್ಮುಖ ಬಹಿರ್ಮುಖ ಪ್ರವಾಸೋಪಾಯಗಳಿಂದ ಹೊಸ ಹೊಸ ಉನ್ಮೇಷನವನ್ನು ಸಾಧಿಸುತ್ತಾರೆ. ಈ ಹೊಸಹೊಸದಾಗುವಿಕೆ ಬದುಕಿಗೆ ಅತ್ಯಂತ ಆವಶ್ಯಕ. ಅದು ನಿಂತೊಡನೆಯೆ ಬದುಕು ಮುಗಿದಂತೆಯೇ.

ಷಷ್ಟಿನಮನ, ತೀರ್ಥಯಾತ್ರೆ, ಪುಟ ೮೪

೯೪೨

ಬಾಳಿನೊಳ್ ದುಃಖಗಳ್
ಬರ್ಪುದೇಂ ಪೊಸತಲ್ತು

ಬಿರುಗಾಳಿ, ಪಾತ್ರ ಜಯದೇವ, ಪುಟ ೩೮

೯೪೩

ರವಿ ಉದಯಿಸುವುದು ನಿನಗಾಗಿ
ಉಡುಗಣವೆಸೆವುದು ನಿನಗಾಗಿ ;
ನಿಯಮಗಳೆಲ್ಲಾ ನಿನಗಾಗಿ
ಕೆಲಸದಿ ತೊಡಗಿವೆ ಬಾಗಿ ತಲೆ ;
ಕೋಕಿಲೆಯುಲಿವುದು ನಿನಗಾಗಿ ;
ಲೋಕವೆ ಜನಿಸಿದೆ ನಿನಗಾಗಿ !
ಸರ್ವವು ನಿನಗಾಗಿರುವುದೊ ಮೂರ್ತಿ ;
ನೀನೆ ಅನಂತನು ಚಿನ್ಮಯಮೂರ್ತಿ !

ಮರಿವಿಜ್ಞಾನಿ, ಅಮ್ಮನ ಮೂರ್ತಿ, ಪುಟ ೨೪

೯೪೪

ಮಲೆನಾಡಿನ ನಿರ್ಜನ ನೀರವ ವಸಂತ ವನಗಳ
ನಡುವೆ ಪ್ರಭಾತ ಸಮಯದಲಿ ಹೆಮ್ಮರವೊಂದರ ನಡುನೆತ್ತಿಯ
ಮೇಲೆ ಕುಳಿತುಕೊಂಡು ಸಮನೋಹರವಾಗಿ ರಾಗಾಲಾಪನೆ
ಮಾಡುತ್ತ ಗಾನಗೈಯುವ ಕಾಜಾಣ ಪಕ್ಷಿಯಂತೆ ಸದಸ್ಯ
ನಿರಪೇಕ್ಷಣೀಯವಾದ ಆತ್ಮಾನಂದದಿಂದ ಹಾಡುವುದನು
ಕಲಿಸೆನಗೆ, ಓ ಸ್ವರಯೋಗಿ !

ಕಿಂಕಿಣಿ, ಸದಸ್ಯ ನಿರಪೇಕ್ಷಣೀಯ, ಪುಟ ೧೩

೯೪೫

ದೇವರು ಈ ಜಗತ್ತನ್ನೆಲ್ಲಾ ಸೃಷ್ಟಿಮಾಡಿದ್ದಾನೆ. ಅವನು ಎಲ್ಲೆಲ್ಲಿಯೂ ಇದ್ದಾನೆ. ಇಲ್ಲಿಯೂ ಇದ್ದಾನೆ. ನಾನು ನೀನು ಆಡುತ್ತಿರುವ ಈ ಮಾತುಗಳನ್ನೂ ಕೇಳುತ್ತಿದ್ದಾನೆ. ಅವನು ಏನು ಬೇಕಾದರೂ ಮಾಡಲು ಶಕ್ತನು. ನಾವು ಅವನನ್ನು ಪ್ರೀತಿಸಬೇಕು. ಅದನ್ನೇ 'ಭಕ್ತಿ' ಎಂದು ಕರೆಯುತ್ತಾರೆ....ಅವನು ಈ ಜಗತ್ತನ್ನು ಮಾಡಿ, ದೂರ ಓಡಿಹೋಗಿ ಕೂತುಕೊಂಡಿಲ್ಲ. ಅದರಲ್ಲಿ ಐಕ್ಯವಾಗಿದ್ದಾನೆ. ಸೇರಿಕೊಂಡಿದ್ದಾನೆ–ಸಕ್ಕರೆಯನ್ನು ನೀರಿಗೆ ಹಾಕಿದರೆ ಕರಗಿ ಸೇರಿಕೊಳ್ಳುವಂತೆ! ಬೆಳಿಗ್ಗೆ ಸೂರ್ಯನಾಗಿ ಮೂಡಿಬರುತ್ತಾನೆ. ರಾತ್ರಿ ಕತ್ತಲೆಯ ರೂಪದಿಂದ ಬರುತ್ತಾನೆ. ಅವನೇ ಗಾಳಿಯಾಗಿ ಬೀಸುತ್ತಾನೆ. ಮಳೆಯಾಗಿ ಸುರಿಯುತ್ತಾನೆ. ಮಿಂಚಾಗಿ ಹೊಳೆಯುತ್ತಾನೆ........

ಕಾನೂರು ಹೆಗ್ಗಡಿತಿ, ಪಾತ್ರ ಹೂವಯ್ಯ, ಪುಟ ೧೭೮

೯೪೬

ಅನುರಾಗ–
ವಿದ್ದಲ್ಲಿ ವೈಕುಂಠ. ಪ್ರೇಮವೆಲ್ಲಿರುವುದೋ
ಅಲ್ಲಿ ಕೈಲಾಸ. ಎದೆಯೊಲ್ಮೆ ಎಲ್ಲಿಹುದೊ
ಅಲ್ಲಿಹುದು ಮುಕ್ತಿ. ನಾಕವೆಂದರೆ ಏನು ?
ನರಕವೆನಲೇನು ? ನಾಕ ನರಕಗಳೆರಡ
ಸೃಜಿಸಬಲ್ಲುದು ಮನಸು.

ಯಮನ ಸೋಲು, ಪಾತ್ರ ಸಾವಿತ್ರಿ, ಪುಟ ೩೯

೯೪೭

ನನ್ನ ಜೀವನದಲ್ಲಿ ನಾನು ಕೈಕೊಂಡಿರುವ ವೃತ್ತಿಯ ವಲಯ ಅಷ್ಟೇನೂ ಹೆಚ್ಚು ವಿಸ್ತಾರವಾದುದಲ್ಲ; ಅದರಲ್ಲಿ ಲಭಿಸುವ ಅನುಭವಗಳೂ ಹೇಳಿಕೊಳ್ಳುವಷ್ಟು ಬಹುಮುಖವಾಗಿಲ್ಲ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೧೭

೯೪೮

ತತ್ಕಾಲದಲ್ಲಿ ಸ್ವಾರ್ಥತಾವಿಮುಕ್ತವೂ ಸಂಗದೂರವೂ ಆಗಿರುವ ದರ್ಶನಧ್ವನಿ ಸಮರ್ಥವಾದ ಸಹೃದಯ ಪ್ರಜ್ಞೆ ಭವ್ಯತಾ ಆವಿರ್ಭಾವಕ್ಕೆ ಆವಶ್ಯಕವೂ ಅನಿವಾರ್ಯವೂ ಆಗಿರುವ ಪೂರ್ವಭಿತ್ತಿ.

ರಸೋ ವೈ ಸಃ, ಭೂಮಾನುಭೂತಿ, ಪುಟ ೧೧೫

೬೪೯

ಇಲ್ಲಿ, ನಮ್ಮ ನೆಲದಲ್ಲಿ ಬೇರೂರಲಾರದ ವಿದೇಶೀಯ ಸಸ್ಯವೊಂದನ್ನು ತಂದು ಇಟ್ಟುಕೊಳ್ಳಬಹುದು. ನೆಲಕ್ಕೆ ಹಾಕುವುದಕ್ಕೆ ಆಗಿರುವುದಿಲ್ಲ. ಕುಂಡದಲ್ಲಿ ಅದನ್ನು ಬೇಕುಬೇಕಾದ ಕಡೆಗೆ ಸಾಗಿಸಿ ಅದನ್ನು ಪ್ರದರ್ಶಿಸಬಹುದು. ಅದಕ್ಕೆ ಶೀಘ್ರ ಪ್ರಸಿದ್ಧಿ ದೊರೆಯುವಂತೆಯೂ ಮಾಡಬಹುದು. ಕ್ಷಣಿಕ ಮನೋರಂಜನೆಯೊದಗಿಸ ಬಹುದು. ಆದರೆ ಅದು ಬೆಳೆಯುವುದು ಮಾತ್ರ ಕುಂಡದಲ್ಲಿಯೆ, ನೆಲದಲ್ಲಲ್ಲ.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೨೧

೬೫೦

ಸಾಮಾನ್ಯವಾಗಿ ಸಂಘವನ್ನೂ ಅದರ ಸಂನ್ಯಾಸಿಗಳನ್ನೂ ಅವರು ಮಾಡುವ ಲೋಕಸೇವೆಯಗಾತ್ರಕ್ಕೆ ತಕ್ಕಂತೆ ಪ್ರಶಂಸಿಸುವುದು ವಾಡಿಕೆಯಾಗಿದೆ. ಆದರೆ ಆ ಸೇವೆಗೆ ಅತ್ಯಾವಶ್ಯಕವಾದ ಅಸೀಮಸ್ಫೂರ್ತಿಯೂ ನಿರಂತರೋತ್ಸಾಹವೂ ಅಕ್ಷಯ ಶಕ್ತಿಯೂ ಇರುವುದೆಲ್ಲಿ ? ಅವರ ಕರ್ಮಮಯ ಜೀವನದ ಹಿಂದಿರುವ ಧರ್ಮ ಜೀವನದಲ್ಲಿ ! ಅವರ ಧ್ಯಾನದಲ್ಲಿ ! ಅವರ ತಪಸ್ಸಿನಲ್ಲಿ ! ಇವುಗಳು ಹೊರಗಿನ ಜನರಿಗೆ ಕಾಣುವುದಿಲ್ಲ. ಆದ್ದರಿಂದ ಇಲ್ಲವೆಂದಲ್ಲ. ಸೇವಾಕಾರ್ಯವು ಅವರಿಗೆ ಗೌಣವಾದುದು. ಆತ್ಮದ ಸಾಧನೆಗೆ ಅದು ಅಡ್ಡ ಬಂದರೆ ಅದನ್ನು ತ್ಯಜಿಸಿ ಬಿಡಲೂ ಸಿದ್ಧರಾಗಿದ್ದಾರೆ. ಆದ್ದರಿಂದಲೆ ಅವರು ಸರದಿಯಂತೆ ಕೆಲವು ಕಾಲ ಕೆಲಸದಿಂದ ನಿವೃತ್ತರಾಗಿ, ಆಲ್ಮೋರ ಮೊದಲಾದ ಪ್ರಶಾಂತ ಪ್ರದೇಶಗಳಿಗೆ ಹೋಗಿ ಧ್ಯಾನ ಮಗ್ನರಾಗಿ, ತಪೋಧನರಾಗಿ ಹಿಂದಿರುಗಿ ಕರ್ಮರಂಗಕ್ಕೆ ಹೊಸ ಹುರುಪಿನಿಂದ ನುಗ್ಗುತ್ತಾರೆ. ಪಾವನ ಭಾವನೆಯಿಂದ ಮಾಡಿದ ಸೇವಾಕಾರ್ಯಕ್ಕೂ ಬೆಲೆ ಕಟ್ಟಿ ತಲೆದೂಗುವ ಮಾನವಕಾರ್ಪಣ್ಯವು ಒಂದಿನಿತು ಎಚ್ಚರಿಕೆಯಿಂದಿರುವುದು ಲೇಸು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨೩೯–೪೦

೬೫೧

ಬ್ರಹ್ಮವಸ್ತುವನ್ನು ಪೂರ್ಣವಾಗಿ ಗ್ರಹಿಸಲು ಬುದ್ಧಿಗೆ ಅಸಾಧ್ಯವಾಗಿರುವಂತೆಯೆ ಭಾವಸತ್ಯವನ್ನು ಖಚಿತಗೊಳಿಸುವ ಸಾಹಸ ವಿಫಲವಾಗುವುದರಲ್ಲಿ ಸಂದೇಹವಿಲ್ಲ. ಸಫಲವಾರೆ ಅವು ಸತ್ತಂತೆಯೆ : ಅಂತಹ ವಿಫಲತೆಯಲ್ಲಿ ಮುಂದುವರಿಯುತ್ತಿರು ವುದೆ ಜೀವದ ನಿರಂತದ ಸ್ರೋತದ ಜೀವತ್ವದ ಲಕ್ಷಣವಾಗುತ್ತದೆ. ಖಚಿತಗೊಳಿಸು ವುದೆಂದರೆ ಸ್ಥಗಿತಗೊಳಿಸಿದಂತೆಯೆ.

ರಸೋ ವೈ ಸಃ, ರಸೋ ವೈ ಸಃ, ಪುಟ ೧೧೮

೬೫೨

ಭಾವ, ಕಲ್ಪನೆ ಮತ್ತು ಆಲೋಚನೆಗಳ ಸಮನ್ವಯವೇ ಪ್ರತಿಭೆ. ನಿಜವಾದ ಕವಿ ಪ್ರತಿಭಾಶಾಲಿ.

ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೩೫

೯೫೩

ಸಮರವೆ ಜೀವನದ ತಿರುಳು ; ಹೋರಾಟವೆ
ಜೀವನದ ಚಿಹ್ನೆ. ಆದರ್ಶ ಪ್ರಾಪ್ತಿಯೆ ಜೀವನ
ಪರಿಸಮಾಪ್ತಿ.

ಕಿಂಕಿಣಿ, ಬಾನೆಡೆಗೇರು ಓ ಆತ್ಮಪಕ್ಷಿ, ಪುಟ ೨೭

೯೫೪

ಜಾಗ್ರಚ್ಚಿತ್ತದ ತರ್ಕವೊಂದೇ ತರ್ಕವಲವಷ್ಟೆ? ತರ್ಕವೂ ಬಹುರೂಪಿ, ಅಸಂಖ್ಯ ವೇಷಿ!

ಕಾನೂರು ಹೆಗ್ಗಡಿತಿ, ಪುಟ ೪೯೬

೯೫೫

ದೇಶ ನನ್ನದು, ನನ್ನದು ನಾಡು
ಎನ್ನದ ಮಾನವನೆದೆ ಸುಡುಗಾಡು!

ಕಥನಕವನಗಳು, ಪ್ರತಾಪ ಸಿಂಹ, ಪುಟ ೯೦

೯೫೬

ಇನ್ನು ಮುಂದೆ ದೇಶ ದೇಶಗಳು ಪರಸ್ಪರ ಯುದ್ಧಮಾಡಿ ತಾವು ಸಂಪಾದಿಸಿದ್ದು, ಉತ್ಪತ್ತಿಮಾಡಿದ್ದು ಎಲ್ಲವನ್ನೂ ಮದ್ದು ಗುಂಡಿಗೆ, ವಿಮಾನ, ಟ್ಯಾಂಕು ಮುಂತಾದವಕ್ಕೆ ವ್ಯಯಮಾಡಿಕೊಂಡು, ಒಬ್ಬರನ್ನೊಬ್ಬರು, ಕೊಲೆಮಾಡಿಕೊಂಡು ನಾಶವಾಗುವುದು ಬೇಡ ; ಬದಲಾಗಿ ಒಬ್ಬರಿಗೊಬ್ಬರು ಸಹಾಯವಾಗಿ, ಮೈತ್ರಿಯಿಂದ ಬಾಳಬೇಕು ಅನ್ನುವುದನ್ನು ಎಲ್ಲಾ ದೇಶಗಳ ಚಿಕ್ಕ ಮಕ್ಕಳಿಗೆ ಮಾತ್ರವಲ್ಲ ಎಲ್ಲರಿಗೂ ಕಲಿಸಬೇಕು. ಆದ್ದರಿಂದ ಹಳೆಯ ಮೌಲ್ಯಗಳನ್ನು ಕುರಿತು ನೀವು ಬರೆಯುವಾಗ ಈ ಹೊಸ ದೃಷ್ಟಿಗೆ ಅನುಗುಣವಾಗುವಂತೆ ಅವನ್ನು ಪರಿವರ್ತಿಸಿ ಬರೆಯಬೇಕು.

ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಮಕ್ಕಳ ಸಾಹಿತ್ಯಕ್ಕೆ ಆಧುನಿಕ ಮೌಲ್ಯಗಳು, ಪುಟ ೫೦–೧.

೯೫೭

ಅನುಭವಕ್ಕೆ ಸಾಂಕೇತಿಕವಾದ ಪ್ರತಿಮಾರಚನೆ ಸುಪ್ತಚಿತ್ತದಲ್ಲಿ ಸಾಗುವ ಗುಪ್ತ ಕರ್ಮ. ವಾಸನಾ ಸಂಸ್ಕಾರಗಳಿಗೆ ಪ್ರತಿಮಾ ಲೋಕಗಳನ್ನು ಸೃಜಿಸುವ ಸ್ವಪ್ನವು ಹೇಗೆ ನಮ್ಮ ಜಾಗ್ರತ್ತಿನ ಬುದ್ಧಿಗೆ ಒಳಗಾಗುವುದಿಲ್ಲವೋ ಹಾಗೆಯೆ ಕಾವ್ಯದಲ್ಲಿ ಕವೀಂದ್ರನ ಮಹದನುಭವಗಳಿಗೆ ಪ್ರತಿಮಾಭುವನಗಳನ್ನು ಕೃತಿಗೆಯ್ಯುವ ಕಲಾಪ್ರತಿಭೆಯೂ ಬುದ್ಧಿತಂತ್ರವಾಗಿರುವುದಿಲ್ಲ. ಹಾಗೆ ಬುದ್ಧಿತಂತ್ರವಲ್ಲದಿರುವುದರಿಂದಲೇ ಜನ್ಮತಃ ವರಕವಿಯಲ್ಲದ ಯಾವನೂ ಪಾಂಡಿತ್ಯಬಲದಿಂದ ಪ್ರಯತ್ನಪೂರ್ವಕವಾಗಿ ಮಹತ್ಕಾವ್ಯಗಳ

ನ್ನಾಗಲಿ ಅಥವಾ ಇನ್ನಾವ ಕಲಾವಲಯದ ಮಹತ್ ಪ್ರತಿಮೆಗಳನ್ನಾಗಲಿ ಸೃಷ್ಟಿಸಲು ಅಸಮರ್ಥನಾಗುತ್ತಾನೆ.

ತಪೋನಂದನ, ಪ್ರತಿಮಾ ಮತ್ತು ಪ್ರತಿಕೃತಿ, ಪುಟ ೩೪

೯೫೮

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ ;
ಮತಿಯಿಂದ ದುಡಿಯಿರೈ ಲೋಕಹಿತಕೆ.
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ.
ಓ, ಬನ್ನಿ, ಸೋದರರೆ, ವಿಶ್ವಪಥಕೆ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಓ ಬನ್ನಿ ಸೋದರರೆ ಬೇಗ ಬನ್ನಿ, ಪುಟ ೨೮

೯೫೯

ದುರ್ದಮ ನಿಯಂತೃ ವಿಧಿ ತಾಂ
ತಂದೊಡ್ಡಿದೀ ಮಹತ್ ಕ್ಲೇಶಮಂ ಬುದ್ಧಿಯಿಂ
ಪರಿಹರಿಸೆ ಯತ್ನಗೈ. ರೋದಿಸಿದರೇಂ ಫಲಂ
ಭಾವದಾವೇಶದಿಂ ? ಪಳಯಿಸಿದ ಮಾತ್ರದಿಂ
ದೊರೆಕೊಂಡಪುದೆ ಮಂಗಳದ ಸಿದ್ಧಿ ?

ಶ್ರೀ ರಾಮಾಯಣ ದರ್ಶನಂ, ಅಗ್ನಿಯಾತ್ರೆ, ಪಾತ್ರ ವಸಿಷ್ಠ, ಪುಟ ೧೨೯

೯೬೦

ಎಂಜಲಿಗಂಜಲಿಯೊಡ್ಡಿದ ಕವಿಯಿಂ
ಬಯಸುವಿರೇನನ್ನು ?
ತಿಂಗಳ ತಲುಬಿಗೆ ತೊತ್ತಾದವನಿಂ
ಪಡೆಯುವಿರೇನನ್ನು ?

ಪ್ರೇತ-ಕ್ಯೂ, ಪತಿಯ ಕವಿಯ ಪ್ರಾರ್ಥನೆ, ಪುಟ ೭

೯೬೧

ಪದ ಪರಿಚಯವೊಂದರಿಂದಲೆ ಕಾವ್ಯಖನಿಯ ವಿಪುಲೈಶ್ವರ್ಯ ಹಸ್ತಗತವಾಗದು. ಪದವು ಭಾವವು ಧರಿಸುವ ಸಂಕೇತ ರೂಪ. ಆದ್ದರಿಂದ ಭಾವಗ್ರಹಣ ಶಕ್ತಿ ಕಾವ್ಯ ರಸಾಸ್ವಾದನೆಗೆ ಅತ್ಯಾವಶ್ಯಕ. 'ಸಚಲನಿಘಂಟು'ಗಳಾಗಿ ಬಿಟ್ಟ ಮಾತ್ರಕ್ಕೆ ಕವಿಯೊಡನೆ ಅಂತರಿಕ್ಷದಲ್ಲಿ ಹಾರಾಡುವ ಸಾಮರ್ಥ್ಯಲಭಿಸುವುದಿಲ್ಲ. ಆದ್ದರಿಂದ ಕವಿಯ ಭಾವ ಗಳನ್ನು ಹೊಸ ರೂಪದಿಂದ ಅವತರಿಸಿದಾಗ ಅನೇಕರಿಗೆ ಅವುಗಳ ಪರಿಚಯ

ವಾಗುವುದಿಲ್ಲ. ಆ 'ಅಪರಿಚಯತಾಭಾಸ'ವನ್ನು ಮೊದಮೊದಲು ಸ್ವಲ್ಪ ಪ್ರಯತ್ನ ದಿಂದ ಪರಿಹರಿಸಿ ಕೊಳ್ಳಬೇಕು.

ಕಲಾಸುಂದರಿ, ಮುನ್ನುಡಿ, ಪುಟ x

೯೬೨

ದಾರಿದ್ರ್ಯಮಲ್ತೆ ಆ ನಾಗರಿಕ ಜೀವನಂ
ಈ ವನ್ಯ ಸಂಸ್ಕೃತಿಯ ಮುಂದೆ ?

ಶ್ರೀ ರಾಮಾಯಣ ದರ್ಶನಂ, ಶಿಲಾತಪಸ್ವಿನಿ, ಪಾತ್ರ ರಾಮ, ಪುಟ ೪೪

೯೬೩

ಅನುಭವವಲಯವನ್ನು ಅಗಲಗೊಳಿಸಿ, ಆಳಗೊಳಿಸಿ, ಅದಕ್ಕೆ ಅರ್ಥ ಗಾಂಭೀರ್ಯವನ್ನು ದಯಪಾಲಿಸುವ ಬಹಿರ್ಮುಖಕರ್ಮಗಳೂ ವಿದ್ಯಾರ್ಥಿಯ ಮತಿಗೌರವವನ್ನು ಹೆಚ್ಚಿಸುತ್ತವೆ. ವಾಸ್ತವದ ದವಡೆಯಲ್ಲಿ ಚೆನ್ನಾಗಿ ಕಡಿದು ಮೆಲಕು ಹಾಕುವುದರಿಂದ ಕಲ್ಪನೆಯಲ್ಲಿ ಮೇದ ಮೇವು ಮೈಗೆ ಹಿಡಿಯುತ್ತದೆ. ಗ್ರಾಮಸೇವೆ, ಭಾಷಾಸೇವೆ, ಜ್ಞಾನಪ್ರಸಾರ, ಸಾಹಿತ್ಯಪ್ರಚಾರ, ವೈದ್ಯಸಹಾಯ, ರೋಗ ಶುಶ್ರೂಷೆ ಇತ್ಯಾದಿ ಅಲಘುಕಾರ್ಯಗಳಲ್ಲಿ ಪಾಲುಗೊಳ್ಳುವ ವಿದ್ಯಾರ್ಥಿಯ ಮತಿ ಸಜೀವವೂ ಸುಪುಷ್ಟವೂ ಆಗುತ್ತದೆ; ಮುಂದಿನ ಜೀವನ ಸಂಗ್ರಾಮದಲ್ಲಿ ಕೆಚ್ಚಿನಿಂದ ಭಾಗವಹಿಸಲು ಅವನು ಹೆಚ್ಚು ಹೆಚ್ಚು ಸಜ್ಜುಗೊಳ್ಳುವಂತಾಗುತ್ತದೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಲ್ಲಿ ಮತಿಗೌರವದ ಆವಶ್ಯಕತೆ, ಪುಟ ೩೬–೭

೯೬೪

ಬಡತನವಿರಲಿ, ದಾಸ್ಯವೆ ಇರಲಿ,
ಸಂಕಟವಿರಲಿ, ಏನೇ ಇರಲಿ,
ನಮ್ಮಾತಿಥ್ಯಕೆ ಕುಂದಿಲ್ಲ.
ಈ ಸ್ಥಿತಿಯಲ್ಲೂ ಈ ಗತಿಯಲ್ಲೂ
ಪುಣ್ಯಭೂಮಿಯೀ ಮಕ್ಕಳು ಕೊಡುವಾ
ದಿವ್ಯಾತಿಥ್ಯಕೆ ಸಮನಿಲ್ಲ ;
ಬೇರೆ ನಾಡುಗಳಿಗೆಲ್ಲಿಗೆ ಹೋಗು
ವಂಚನೆ ಕೋಟಲೆ ಹಿಂಸೆಯ ಕೂಗು !

ಅಗ್ನಿಹಂಸ, ಗಣೇಶಗಾಥಾ, ಪುಟ ೩೭

೯೬೫

ಯಾವುದು ನಡೆದಾಗ ತತ್ಸಮಯದಲ್ಲಿ ಬಹುಮುಖ್ಯವಾಗಿ ತೋರುತ್ತದೆಯೋ ಅದು ಸ್ವಲ್ಪಕಾಲ ಕಳೆಯುವುದರೊಳಗೆ ಅಮುಖ್ಯವಾಗಿ ತೋರತೊಡಗಿ ಕಡೆಗೆ

ಮನದಿಂದಲೆ ಮಾಸಿಹೋಗುತ್ತದೆ. ಹಳೆಯ ನೀರು ಕೊಚ್ಚಿ ಹೋಗುವಂತೆ ಹೊಸ ನೀರು ನುಗ್ಗುತ್ತದೆ. ಇತರ ಘಟನೆಗಳು, ತತ್ಕಾಲದಲ್ಲಿ ಬಹಳ ಮುಖ್ಯವಾಗಿ ತೋರುವ ಸಂಗತಿಗಳು, ಹಳೆಯ ನೆನಪುಗಳನ್ನು ತಳ್ಳಿ ಅವು ಬಿಟ್ಟ ಜಾಗವನ್ನು ಆಕ್ರಮಿಸುತ್ತವೆ.

ಮಲೆಗಳಲ್ಲಿ ಮದುಮಗಳು, ಪುಟ ೭೨

೯೬೬

ಈ ಚಂದ್ರೋದಯದ, ಈ ವಿಪಿನಗಳ, ಈ ಚಂದ್ರಿಕೆಯ, ಈ ದೃಶ್ಯದ ವರ್ಣನೆ ಮಾಡಲೆಳಸುವವನೇ ಹುಚ್ಚ; ಮಾಡಿದರೂ ಸಂಪೂರ್ಣವಾಗಿ ಬಣ್ಣಿಸಿ ಬಿಟ್ಟೆನೆಂದುಕೊಳ್ಳುವವನು ಶುದ್ಧಮೂರ್ಖ!

ಮಲೆನಾಡಿನ ಚಿತ್ರಗಳು, ಕಾಡಿನಲ್ಲಿ ಕಳೆದ ಒಂದಿರುಳು, ಪುಟ ೨೦

೯೬೭

ಪರಿವ್ರಾಜಕ ಜೀವನವು ಸನ್ಯಾಸಿಗಳಿಗೆ ಯೋಗ್ಯವಾದುದು. ಅದರಲ್ಲಿಯೂ ದೇಶಸೇವೆಯಲ್ಲಿ ನಿರತರಾಗಲಿರುವ ತ್ಯಾಗಿಗಳಿಗೆ ಅದರಿಂದ ಮಹೋಪಕಾರವಿದೆ.

ಸ್ವಾಮಿ ವಿವೇಕಾನಂದ, ಪುಟ ೧೦೪

೯೬೮

ವಿಶ್ವಮಂ ವ್ಯಾಪಿಸಿಹ ಆತ್ಮವಾನಂದ
ವಿಶ್ವಸೃಷ್ಟಿಯ ಮೂಲಕಾರಣಾನಂದ
ವಿಶ್ವದಳಿವುಳಿವು ತಳಹದಿಯು ಆನಂದ
ವಿಶ್ವಾತ್ಮನಾದೆನ್ನ ಆತ್ಮವಾನಂದ.

ಕೊಳಲು, ಎನಗಾಗಿ ಎನ್ನ ಆನಂದ, ಪುಟ ೬೭

೯೬೯

ಮೊದಲನರಿಯದಾದಿಯಿಂದ
ಆದಿ ತಿಮಿರದುದರದಿಂದ
ಮೂಡಿ ಬಂದೆನು ;
ಯಾರ ಬಯಕೆ ಎಂಬುವದರಿಯೆ ;
ಏಕೆ ಎಲ್ಲಿಗೆಂಬುದರಿಯೆ ;
ಮುಂದೆ ಹರಿಯುವೆ !

ಕೊಳಲು, ಮುಂದಕೆಲ್ಲಿಗೆ, ಪುಟ ೧೨

೯೭೦

ನಾವು
ಕನ್ನಡಿಗರಭಿಮಾನ ಶೂನ್ಯರೆಂಬುದು ಗೊತ್ತು :
ನಮ್ಮ ಹೆಮ್ಮೆಯ ಬರ್ಹಿಚೂಡವೊ, ಹೆರರ ಹೊರೆಹೊತ್ತು,

ನಮ್ಮ ದೌರ್ಬಲ್ಯವನೆ ಔದಾರ್ಯವೆಂಬವರ
ಹೊಗಳಿಕೆಗೆ ಬಾಯ್ಬಿಟ್ಟು, ನಮ್ಮತನವನೆ ತೆತ್ತು,
ಕೆಂಬೂತ ಕುಣಿತ ಕುಣಿತ ಕುಣಿಯುವುದೆ !....ಕನ್ನಡಿಗರಿರ

ಪ್ರೇತ–ಕ್ಯೂ, ರಾಜ್ಯಪಾಲರಿಗೆ ಅಭಿನಂದನೆ, ಪುಟ ೬೮

೯೭೧

ಇರಲಿ ಹೂವಿನ ಮಾಲೆ, ಇರಲಿ ರೇಶ್ಮೆಯ ವಸನ,
ಇರಲಿ ಮುತ್ತಿನ ಹಾರ ! ಕೈಗೆತ್ತಿ ಬರಲಿ !
ಇರಲಿ ಹೊಸ ಹೆಣ್ಣು ಮದುವೆಯ ಸೊಗಸು ಶೃಂಗಾರ ;
ಬರಲಿ ಕಾರಾಗಾರ ! ಮೃತ್ಯುವೈತರಲಿ !
ರಕ್ತ ಹೃದಯದ ಬಿಸಿಯ ರಕ್ತತರ್ಪಣವಿತ್ತು
ತಣಿಸಿರೈ ಸತ್ತರಾ ಬಯಕೆ ತೆತ್ತು ;
ಇಲ್ಲದಿರೆ ನಿಮಗಾಗಿ ಸತ್ತೆಮಗೆ ಸೊಗವಿಲ್ಲ,
ಬದುಕಿರುವ ನಿಮಗುಮಾ ಬದುಕೆ ಮಿತ್ತು !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ರಕ್ತತರ್ಪಣ, ಪುಟ ೩೨

೯೭೨

ಶ್ರದ್ಧೆಯಿರುವುದೆ ನಾಕ, ಅಶ್ರದ್ಧೆಯೇ ನರಕ ;
ಶ್ರದ್ಧೆಯಿದ್ದರೆ ಕೋಟಿ ದೇವರೆಮಗಾಳಯ್ಯ !

ಪಾಂಚಜನ್ಯ, ಆತ್ಮಶ್ರದ್ಧೆ, ಪುಟ ೪೧

೯೭೩

ರವಿಯುದಯ ? ಶಶಿಯುದಯ ?
ಹೂದಿಂಗಳುದಯ ?
ಕೃತಿಯ ಮಧುರಸದುದಯ ?
ನೀನವಕೆ ಹೃದಯ !
ಕಲೆ, ಕೀರ್ತಿ, ಸಿರಿಯೆಲ್ಲ
ನೀನಲ್ಲದಿನ್ನಿಲ್ಲ ;
ನೀನೆ ನನಗೆಲ್ಲ !

ಜೇನಾಗುವಾ, ನನ್ನವಳು, ಪುಟ ೧೭

೯೭೪

ತ್ಯಾಗಕಿಂತ ಭೋಗವಿಲ್ಲ,
ಭೋಗಕಿಂತ ತ್ಯಾಗವಿಲ್ಲ ;
ಪೂರ್ಣ ತ್ಯಾಗ ಪರಮ ಭೋಗ
ಪ್ರೇಮಾಮೃತ ಲೋಕದಿ !

ರಸಪ್ರಣಯ ಪರಸ್ಪರತೆ
ಪುರುಷಾರ್ಥಂ ಬತ್ತದೊರತೆ
ದಾಂಪತ್ಯದ ನಾಕದಿ!

ಪ್ರೇಮಕಾಶ್ಮೀರ, ಕವಿಯ ಪ್ರೇಮ, ಪುಟ ೬೧

೯೭೫

ಚಪ್ಪಾಳೆ
ಮೂಗದಾರವನಿಕ್ಕಿ ನಡೆಯಿಸಿದರದು ಬಾಳೆ
ಹಿರಿಯ ಸಿರಿ ಚೇತನಕೆ?

ಕೃತ್ತಿಕೆ, ಪಂಚೆಯವರಿಗೆ, ಪುಟ ೫೪

೯೭೬

ವೇದಾಂತಿಯ ದೃಷ್ಟಿಗೆ ಜಗತ್ತು ಎಷ್ಟರಮಟ್ಟಿಗೆ ಮಾಯೆಯೋ ಸಾಧಕನ ಭಕ್ತಿಯಿಂದ ಮೂಡುವ ಭಾವಮಯ ದರ್ಶನಗಳೂ ಅಷ್ಟರಮಟ್ಟಿಗೇ ಮಾಯೆ. ಆದ್ದರಿಂದ ಮಾಯೆಯನ್ನು ಸೀಳಿ ಬ್ರಹ್ಮಸಾಕ್ಷಾತ್ಕಾರ ಮಾಡಲೆಳಸುವ ಸಾಧಕನು, ಇನ್ನೊಂದು ಸೂಕ್ಷ್ಮತರದ ಮಾಯೆಯಿಂದ ಮೂಡುವ ಅದ್ಭುತದರ್ಶನಗಳನ್ನು ಸೀಳಿ ಮುಂಬರಿಯಬೇಕು. ಮೋಹವಶನಾಗಿ ಮುಂಬರಿಯಲಂಜಿದರೆ ಅವಿದ್ಯೆಯನ್ನು ಸಂಪೂರ್ಣವಾಗಿ ದಾಟಿದಂತಾಗುವುದಿಲ್ಲ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೭೪

೯೭೭

ತಾರುಣ್ಯವು ತನ್ನನ್ನು ಯಾವುದು ಬೆರಗುಗೊಳಿಸುವುದೊ ಅದಕ್ಕೆ ಮಾತ್ರ ಬಹು ಬೇಗನೆ ಮಾರುವೋಗುತ್ತದೆ: ಪ್ರಸಿದ್ಧಿಯನ್ನೆ ಅದು ಸಿದ್ಧಿಗೆ ಲಕ್ಷಣವನ್ನಾಗಿ ಭಾವಿಸುತ್ತದೆ; ಬೆಳ್ಳಗಿರುವುದೆ ಅದಕ್ಕೆ ಹಾಲು; ಹೊಳೆಯುವುದೆ ಅದಕ್ಕೆ ಹೊನ್ನು: ಬಹುಜನರ ಸ್ತುತಿಗೂ ಗೌರವಕ್ಕೂ ಪಾತ್ರನಾಗಿರುವಾತನೆ ಅದಕ್ಕೆ ಆದರ್ಶಪುರುಷ ಪತ್ರಿಕಾ ಪ್ರಕಟಣೆಯ ಕೀರ್ತಿಯನ್ನೆ ಅಂತಸ್ಸತ್ವವೆಂದು ಅದು ನಂಬಿಬಿಡುತ್ತದೆ. ಅದಕ್ಕೆ ಆಧ್ಯಾತ್ಮಿಕ ಮೌಲ್ಯದ ಸ್ವರೂಪವನ್ನರಿಯುವ ಶಕ್ತಿ ಇನ್ನೂ ಕಣ್ದೆರೆದಿರುವುದಿಲ್ಲ. ಬಾಹ್ಯ ವೈಭವವನ್ನೆ ಅಂತರೈಶ್ವರ್ಯಕ್ಕೆ ಸಂಕೇತ ಎಂದು ಅದು ಭ್ರಮಿಸುತ್ತದೆ. ಅದಕ್ಕೆ ಪ್ರಶಾಂತತೆ, ನೀರವತೆ, ವಿವಿಕ್ತತೆ, ನಿರಾಡಂಬರತೆ ಇವುಗಳ ಹಿಂದೆ ಮರೆಯಲ್ಲಿರುವ ನೈಜ ಆಧ್ಯಾತ್ಮಿಕ ವಿಭೂತಿಯನ್ನು ಗುರುತಿಸುವ ಸಾಮರ್ಥ್ಯವೂ ಇರುವುದಿಲ್ಲ, ತಾಳ್ಮೆಯೂ ಇರುವುದಿಲ್ಲ.

ಮನುಜಮತ ವಿಶ್ವಪಥ, ದೀಕ್ಷಾಯಾತ್ರೆ, ಪುಟ ೧೦೦

೯೭೮

ಬರಿಯ ಚದರಮೈಲಿಗಳಲ್ತು ಕರ್ಣಾಟಕದ ದೇಶ ವಿಸ್ತೀರ್ಣಂ;
ನೆನೆ, ನೆನೆ, ಮನೋಮಯದ ಸಂಸ್ಕೃತಿಯ ಕೋಶವಿಸ್ತೀರ್ಣಮಂ.

ಮರೆಯದಿರು ಚದರಸಂವತ್ಸರದ ಶತಮಾನಗಳ ಕಾಲ ವಿಸ್ತೀರ್ಣಮಂ,
ಪ್ರಾಣಮಯ ಭಾವಪ್ರದೇಶ ವಿಸ್ತೀರ್ಣಮಂ,
ಚಿದಾಕಾಶ ವಿಜ್ಞಾನ ವಿಸ್ತೀರ್ಣಮಂ !

ಇಕ್ಷುಗಂಗೋತ್ರಿ, ಕರ್ಣಾಟಕ ರಾಜ್ಯೋದಯ ಶ್ರೀಗೀತೆ, ಪುಟ ೭೮

೯೭೯

ಎಲ್ಲಿ ಯಾವುದೇ ಗುಣದ ಪರಿಮಿತಿ ಅಥವಾ ಅಲ್ಪತೆ ತನ್ನ ವಿಚಾರ ಬಾಹುಳ್ಯದಿಂದ ವಿಭೂತಿ ಪ್ರಮಾಣಕ್ಕೇರಿ, ಭೂಮವೊ ಆ ವಿಭೂತಿ ಪ್ರಮಾಣದಲ್ಲಿಯೆ ಆವಿರ್ಭಾವವಾಗಿ ನಮ್ಮ ಪ್ರಜ್ಞೆಯನ್ನು ಆಕ್ರಮಿಸುತ್ತದೆಯೊ ಅಲ್ಲೆಲ್ಲ ಭವ್ಯತೆ ಮೂಡುತ್ತದೆ.

ರಸೋ ವೈ ಸಃ, ಭೂಮಾನುಭೂತಿ, ಪುಟ ೧೧೦

೯೮೦

ಅಂತವನಂತವ ಸೇರ್ವಲ್ಲಿ,
ದಾರಿಗಳೆಲ್ಲವು ಸೇರ್ವಲ್ಲಿ,
ದಾರಿಗರೆಲ್ಲರು ಸೇರ್ವಲ್ಲಿ,
ನಿಂತಹೆ ನಾನಲ್ಲಿ !
ನಾ ನಿಂತಿಹೆನಾನಂದದಲಿ ;
ನಾ ನಿಂತಿರುವೆನು ಶಾಂತಿಯಲಿ ;
ನಿಂತಿಹೆ ನಚ್ಚಿನ ನೆಚ್ಚಿನಲಿ ;
ಮೌನದ ಕೆಚ್ಚಿನಲಿ !

ಕಲಾಸುಂದರಿ, ಮೌನಿ, ಪುಟ ೩೩

೯೮೧

ನೀಡಯ್ಯ, ಓ ಗುರುವೆ, ಋಜು ದರ್ಶನವನೆನಗೆ ;
ಮೂಢತೆಯ ಮುರಿವ ಸದ್ಬುದ್ಧಿಯಂ ಧೈರ್ಯಮಂ ;
ಗೂಢ ಚೈತನ್ಯಮಂ ಸವಿಯೆ ರಸದೃಷ್ಟಿಯಂ ; ಯುಕ್ತಿಯಂ
ವ್ಯವಹಾರಕೆ.
ಹೃದಯ ದೌರ್ಬಲ್ಯಮಂ ಪರಿಹರಿಸಿ, ಯೋಗಮಂ
ಮಧುರ ಸಾಧನೆಗೈವ ಧೀರ ವೈರಾಗ್ಯಮಂ,
ಸುಧೆವೆರಸಿ ನೀಡಯ್ಯ ಮೃತ್ಯುಮಾಧುರ್ಯಮಂ, ಮುಕ್ತಿಯಂ
ಪರಮಾರ್ಥಕೆ !

ಅಗ್ನಿಹಂಸ, ಮುಕ್ತ ಮಹಾಪುರುಷನಿಗೆ, ಪುಟ . ೫೭

೯೮೨

ಉಪಮೆ ಸಾಧಿಸಲರಿಯದ ಮಹತ್ತು ರೂಪಕಕ್ಕೆ ಮಾತ್ರ ಸಾಧ್ಯ. ಕಾವ್ಯವೆಲ್ಲ ಪ್ರತಿಮಾ ಜಗತ್ತೆ ಆಗಿರುವುದರಿಂದ ಅಲ್ಲಿ ಅನಿವಾರ್ಯವಾಗಿ ರೂಪಕಕ್ಕೆ ಅಗ್ರಸ್ಥಾನ. ಕಾಲದಿಂದ ಕಾಲಕ್ಕೆ ಜನರಿಂದ ಜನಕ್ಕೆ ರುಚಿಯಿಂದ ರುಚಿಗೆ ಏನೆ ಬದಲಾವಣೆ

ನಡೆಯಲಿ ಕಾವ್ಯ ಸಾಮ್ರಾಜ್ಯದಲ್ಲಿ ಪ್ರತಿಮಾ ವಿಧಾನದ ಒಂದು ಪಾದದಂತಿರುವ ರೂಪಕದ ಸ್ಥಾನಮಾನ ಅಧಿಕಾರಗಳಿಗೆ ಎಂದಿಗೂ ಕುಂದಿಲ್ಲ. ಏಕೆಂದರೆ ಕಾವ್ಯದಲ್ಲಿ ರೂಪಕ ಕವಿಚೇತನದ ಶಕ್ತಿಮಾಪಕ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೬೬

೯೮೩

ನೋಂಪಿಯ ಮುಡಿಗೆ
ಪರಿಮಳದ ಪೂವಲ್ತೆ ಮೈತ್ರಿ!

ಶ್ರೀ ರಾಮಾಯಣ ದರ್ಶನಂ, ಪಂಚವಟಿಯ ಪರ್ಣಕುಟಿ, ಪಾತ್ರ ರಾಮ, ಪುಟ ೨೧೮

೯೮೪

ಸಂಘಗಳ ಸ್ಥಾಪನೆಯಾಗಲು ಅನುಕೂಲವಿಲ್ಲದ ಗ್ರಾಮಾಂತರಗಳಲ್ಲಿರುವ ನಮ್ಮ ಜನರಿಗೆ ಸಾಹಿತ್ಯಾಭಿರುಚಿಯುಂಟಾಗಬೇಕಾದರೆ ಸಾಹಿತ್ಯ ಪ್ರೇಮಿಗಳು ಹಳ್ಳಿಗಳಲ್ಲಿ ಆಗಾಗ್ಗೆ ಸಮಯ ದೊರೆತಾಗ ಸಂಚರಿಸಿ ಹಳ್ಳಿಗರು ಒಂದೆಡೆ ನೆರೆಯುವಂತೆ ಮಾಡಿ ಅವರಿಗೆ ಕಾವ್ಯಗಳನ್ನು ಓದಿ ಹೇಳಬೇಕು..... ಸ್ವಲ್ಪ ಹಾಗೆಮಾಡಿದರೆ, ತರುವಾಯ ಹಳ್ಳಿಗರೇ ಸಾಹಿತ್ಯವನ್ನು ಹುಡುಕಿಕೊಂಡು ಹೋಗಿ ಓದುವರು ಅಥವಾ ಕೇಳುವರು.

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೨೬

೯೮೫

ಚವರಿವಿಡಿದರೆ ಮೇಲೆ ? ಪೊರಕೆವಿಡಿದರೆ ಕೀಳೆ ?
ಮಾಳ್ವ ಕೆಲಸಗಳೆಲ್ಲ ನೈವೇದ್ಯವಾಗೆ !
ರಸಭೇದವಿಹುದೆ ಸುಖದುಃಖಗಳಿಗಾಟದಲಿ
ಜೀವಭಾವವೆ ಸಚ್ಚಿದಾನಂದವಾಗೆ ?

ಅಗ್ನಿಹಂಸ, ಕರ್ಮಯೋಗಿ, ಪುಟ ೧೯

೯೮೬

ನನ್ನ ಜೀವನವೆಲ್ಲ ಕಲ್ಪನೆ ಸ್ಮೃತಿಗಳ ಕೃಪೆಯಿಂದ ಸುಖಶಾಂತಿ ಪೂರ್ಣವಾಗಿದೆ. ನಾನು ಮನುಷ್ಯ ನಿರ್ಮಿತ ದೇವಾಲಯಗಳಿಗೆ ಹೋಗಬೇಕಾಗಿಲ್ಲ. ಪ್ರಕೃತಿ ಅಲ್ಲಲ್ಲಿ ಆಗಾಗ ದಾನಮಾಡಿರುವ ಭವ್ಯಸುಂದರ ದೃಶ್ಯಗಳು ನನ್ನ ಕಲ್ಪನೆಯಲ್ಲಿ ಸೆರೆಯಾಗಿರುವುದರಿಂದ ನಾನು ಬಯಸಿದಾಗ ಅವುಗಳ ದರ್ಶನವಾಗುತ್ತದೆ. ಆ ದರ್ಶನಗಳ ಮುಂದೆ ನರನಿರ್ಮಿತ ದೇವಾಲಯಗಳು ಕ್ಷುದ್ರವಾಗುತ್ತವೆ. ಉಳಿದ ಹಿರಿಮನೆ ಅರಮನೆಗಳ ಮಾತಂತಿರಲಿ !

ಮಲೆನಾಡಿನ ಚಿತ್ರಗಳು, ಮುನ್ನುಡಿ, ಪುಟ iv-v

೯೮೭

ಬೆಲೆ ಬರುವಲ್ಲಿಗೆ ನೀ ನೆಗೆವೆ ;
ನೆಲೆ ಇಲ್ಲದ ನೀ ಬೆಲೆವೆಣ್ಣು !

ನಾನಿರುವಲ್ಲಿಗೆ ಬೆಲೆ ಬಹುದು ;
ನೆಲೆಯಾಗಿಹ ನಾ ನೆಲವೆಣ್ಣು!

ಮಂತ್ರಾಕ್ಷತೆ, ಹೊನ್ನಿನ ಪ್ರಶ್ನೆಗೆ ಮಣ್ಣಿನ ಉತ್ತರ, ಪುಟ ೨೬

೯೮೮

ನಾನು ಸಾಹಿತ್ಯ ಚರಿತ್ರೆಯ ವಿಷಯ ಮಾತ್ರ ಹೇಳುತ್ತಾ ಇದ್ದೇನೆ. ಅಷ್ಟೇ ಸಾಲದು. ಸಾಹಿತ್ಯಗಳಿಗೆ ಪ್ರೇರಕವಾಗುವ ಜಗತ್ತಿನ ಬೇರೆ ಚರಿತ್ರೆಯ ಐತಿಹಾಸಿಕ ಮಹದ್ ಘಟನೆಗಳು ನಡೆಯುತ್ತವೆಯಲ್ಲ ಅವುಗಳ ಸಂಕ್ಷೇಪ ಭಿತ್ತಿಯನ್ನೂ ನಮ್ಮವರು ಕೊಡಬೇಕಾಗುತ್ತದೆ.

ವಿಚಾರ ಕ್ರಾಂತಿಗೆ ಆಹ್ವಾನ, ಸಾಹಿತ್ಯ ಚರಿತ್ರಕಾರರಿಗೆ ಸಲಹೆಗಳು, ಪುಟ ೩೬

೯೮೯

ಕಾದಂಬರಿ ಕರತಲ ರಂಗಭೂಮಿ : ಅಂಗೈಮೇಲಣ ನಾಟಕಶಾಲೆ. ಆದ್ದರಿಂದ ಕಾದಂಬರಿಯನ್ನು ಓದುವ ವಾಚಕರು ನಾಟಕವನ್ನು ನೋಡುವ ಪ್ರೇಕ್ಷಕರೂ ಆಗ ಬೇಕಾಗುತ್ತದೆ.

ಕಾನೂರು ಹೆಗ್ಗಡಿತಿ, ಅರಿಕೆ, ಪುಟ iii

೯೯೦

ಸ್ವಾನುಭವ, ದೇಶದ ಸಂಸ್ಕೃತಿ, ಪಡೆದ ವಿದ್ಯೆ, ತಾನು ಹುಟ್ಟಿದ ಮತ್ತು ಬೆಳೆದ ಸುತ್ತಣ ಸನ್ನಿವೇಶ, ಮಹಾಪುರುಷ ಸಂಶಯ ಮೊದಲಾದವುಗಳ ಪ್ರಭಾವದಿಂದ ಮೂಡುವ ಬುದ್ಧಿಸ್ಥಿತಿಯನ್ನು ಜೀವನದೃಷ್ಟಿ ಎಂದು ಸಂಕೇತಿಸಬಹುದು. ಅಂತಹ ಜೀವನದೃಷ್ಟಿ ರಸಾನುಭೂತಿಗೇರಿದರೆ 'ದರ್ಶನ'ವಾಗುತ್ತದೆ.

ದ್ರೌಪದಿಯ ಶ್ರೀಮುಡಿ, ಕವಿಯ ಜೀವನದೃಷ್ಟಿ ಮತ್ತು ಕಾವ್ಯಸೃಷ್ಟಿ, ಪುಟ ೪೧

೯೯೧

ಮಹತ್ತಾದ ಸಹ್ಯಾದ್ರಿಶ್ರೇಣಿಗಳ ಅಜ್ಞಾತ
ಶಿಖರವೊಂದರಲಿ ತಲೆಯೆತ್ತಿ ನಿಂತಿರುವ ಕರಿಯ ಹೆಬ್ಬಂಡೆಯ
ಮೇಲೆ, ಬಿತ್ತರದ ಬಾನಿಗೆದುರಾಗಿ, ಮಹಾ ವಿಶ್ವಸಮ್ಮುಖದಲಿ
ಕಾಳೊಂದನು ಕಚ್ಚಿಕೊಂಡು ಎಡೆಬಿಡದೆ ದುಡಿಯುತ್ತ
ಹರಿಯುವ ಸಣ್ಣ ಇರುವೆಯೊಂದರಂತೆ ಉತ್ಸಾಹದಿಂದ
ಕೆಲಸಮಾಡುವುದನು ನನಗೆ ಕಲಿಸು, ಓ ಕರ್ಮಯೋಗಿ!

ಕಿಂಕಿಣಿ, ಸದಸ್ಯ ನಿರಪೇಕ್ಷಣೀಯ, ಪುಟ ೧೩

೯೯೨

ಸಾಹಿತ್ಯದೇವಿಯ ಸೇವೆಗೆ ಸರ್ವರಿಗೂ ಅವಕಾಶವಿದೆ. ಅಲ್ಲಿ ದೇವಾಲಯ ಪ್ರವೇಶದ ಸಮಸ್ಯೆಯಿಲ್ಲ. ಆಕೆಯ ಪೂಜೆಗೆ ಯಾರು ಬೇಕಾದರೂ ಹಣ್ಣು ಕಾಯಿ ತರಬಹುದು. ನುಡಿಗುಡಿಯ ಬಾಗಿಲು ಇಚ್ಛೆ ಆಸಕ್ತಿ ಭಕ್ತಿಗಳಿರುವ ಎಲ್ಲರಿಗೂ ಯಾವಾ

ಗಲೂ ತೆರೆದಿರುತ್ತದೆ. ಜಾತಿ ಮತ ಅಂತಸ್ತುಗಳ ಭೇದವಾಗಲಿ, ದೊಡ್ಡವರು ಚಿಕ್ಕವರು ಎಂಬ ತಾರತಮ್ಯವಾಗಲಿ ಅಲ್ಲಿಲ್ಲ. ಭಕ್ತಿ ಮತ್ತು ಸೇವಾಸಕ್ತಿಗಳಿದ್ದರಾಯಿತು. ಹೊಸ ಸಾಹಿತ್ಯದ ಸೃಷ್ಟಿ ಮಾತ್ರವೇ ಆಕೆಯ ಸೇವೆ ಎಂದು ಭಾವಿಸಬಾರದು. ಸಾಹಿತ್ಯ ಪ್ರಚಾರ, ಸಾಹಿತ್ಯಾಧ್ಯಯನ, ಜನಪದ ಸಾಹಿತ್ಯ ಇತ್ಯಾದಿಗಳ ಸಂಗ್ರಹ ಕಾರ್ಯ, ಸಾಹಿತ್ಯ ಪ್ರೋತ್ಸಾಹಕ್ಕಾಗಿ ನೀಡುವ ಧನಸಹಾಯ ಇವುಗಳೆಲ್ಲವೂ ದೇವಿಯ ಪೂಜೆ. ಆದ್ದರಿಂದ ಆ ಪೂಜೆಯಲ್ಲಿ ವಿದ್ಯಾರ್ಥಿಗಳು, ವಿದ್ವಾಂಸರು, ಹಣವಂತರು, ಬಡವರು, ವರ್ತಕರು, ಜಮೀನುದಾರರು ಸರ್ವರೂ ತಮ್ಮ ತಮ್ಮ ರೀತಿಯಲ್ಲಿ ಭಾಗಿಗಳಾಗಿ ಧನ್ಯರಾಗಬಹುದು.

ಸಾಹಿತ್ಯ ಪ್ರಚಾರ, ಕನ್ನಡ ಸಾಹಿತ್ಯ, ಪುಟ ೬೩

೯೯೩

ಲೋಕಲೀಲೆಗೊಪ್ಪಿಗೆಯಿತ್ತು
ಆ ಲೋಕಕ್ಕೈತರಲ್, ಲೀಲೆ ಕೊನೆಗೊಳ್ಳುವಾ
ಮುನ್ನಮಲ್ಲಿಂದನ್ಯಲೋಕಕಾಶಿಸುವವನೆ
ನಿತ್ಯ ಬದ್ಧಂ ! ಲೋಕಮಾವುದಾದೊಡಮೇನ್ ?
ಪೆರ್ಚ್ಚು ಕಡಮೆಗಳೊಳವೆ ಸಚ್ಚಿದಾನಂದದೀ
ಲೀಲಾ ವಿನೋದದೊಳ್ ?

ಶ್ರೀ ರಾಮಾಯಣ ದರ್ಶನಂ, ಮಡಿದನಿಂದ್ರಜಿತು ಐಂದ್ರಾಸ್ತ್ರದಿಂ, ಪಾತ್ರ ಆಂಜನೇಯ, ಪುಟ ೭೩೩

೯೪೪

ಕ್ರಿಯಾಶಕ್ತಿ ಬುದ್ಧಶಕ್ತಿ ಭಾವಶಕ್ತಿಗಳಿಂದ ಕೂಡಿದ ಮನುಷ್ಯನು ಅವುಗಳಲ್ಲಿ ಯಾವುದಾದರೂ ಒಂದರಿಂದ ಸಚ್ಚಿದಾನಂದವನ್ನು ಸಂಪೂರ್ಣವಾಗಿ ಅನುಭವಿಸಲಾರನು. ಕ್ರಿಯೆಯಿಂದ ಸದಂಶವನ್ನೂ ಬುದ್ಧಿಯಿಂದ ಚಿದಂಶವನ್ನೂ ಭಾವದಿಂದ ಆನಂದಾಂಶವನ್ನೂ ತಾತ್ಕಾಲಿಕವಾಗಿ ಮತ್ತು ಆಂಶಿಕವಾಗಿ ಗ್ರಹಿಸಬಲ್ಲನು. ಆದರೆ ಪರತತ್ತ್ವವು ಸತ್, ಚಿತ್ ಮತ್ತು ಆನಂದಗಳ ರಾಶಿಯಲ್ಲ. ಅದು ಅಖಂಡವೂ ಅದ್ವೈತವೂ ಆದ ಸಚ್ಚಿದಾನಂದ. ಹೀಗಿರಲು ಅದನ್ನು ಆಂಶಿಕವಾಗಿ ಆಕ್ರಮಿಸುವುದು ಅಸಾಧ್ಯ. ಪೂರ್ಣವು ಪೂರ್ಣದಿಂದಲೇ ಗ್ರಹೀತ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨೨

೯೯೫

ಬರೆದುದನ್ನು ರಸವತ್ತಾಗಿ ಓದಲು ಕಲಿಯಬೇಕು. ಏಕೆಂದರೆ ಸರಿಯಾಗಿ ಓದಲು ಬಾರದಿದ್ದರೆ ಕಾವ್ಯದ ಅರ್ಥ ಸ್ವಾರಸ್ಯ ಓದುಗರಿಗೆ ದೊರಕುವುದೇ ಇಲ್ಲ. ಕವನಗಳಾಗಲಿ, ನಾಟಕಗಳಾಗಲಿ, ಬರಿಯ ಭಾವಗಳು ಮಾತ್ರವೇ ಅಲ್ಲ; ಭಾವಲಯಬದ್ಧವಾದ ಭಾಷೆಯಲ್ಲಿ ಮೈವೆತ್ತ ರಸಕಾರ್ಯಗಳು. ಹೇಳುವ ವಿಷಯ

ಮಾತ್ರವಲ್ಲದೆ, ಹೇಳುವ ರೀತಿಯೂ ನಮ್ಮನ್ನು ಮೋಹಿಸುವುದು. ಕೆಲವು ಸಾರಿ ವಿಷಯ ಹೇಳುವ ರೀತಿಯಿಂದಲೇ ಮಹತ್ತಾಗಬಹುದು. ಆದ್ದರಿಂದ ಸಾಹಿತ್ಯ ಪ್ರೇಮಿಗಳು ಕಾವ್ಯವಾಚನ ಕಲೆಯನ್ನು ಅಭ್ಯಾಸ ಮಾಡಬೇಕು.....ಸಾಹಿತ್ಯ ಪ್ರಚಾರಕರು ಆದಷ್ಟು ಮಟ್ಟಿಗೆ ಕಾವ್ಯವಾಚನಶಕ್ತಿಯನ್ನು ಸಂಪಾದಿಸಬೇಕು.

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೨೫

೯೯೬

ಸತಿಯಲ್ಲಿ ಸ್ವಲ್ಪವಾದರೂ ಭೋಗವಾಸನೆ ಇರುವುದು; ತಾಯಿಯಾದರೋ ತ್ಯಾಗಮೂರ್ತಿ. ಮಾತೆಯೇ ಗೃಹದೇವತೆ.

ಸ್ವಾಮಿ ವಿವೇಕಾನಂದ, ಪುಟ ೨೮

೯೯೭

ತಿಳಿಯೆ ನೋವಿರೆ, ತಿಳಿಯದಿರುವುದೆ ಜಾಣ್ಮೆ!

ಪಕ್ಷಿಕಾಶಿ, ಹೋಗುವೆನು ನಾ, ಪುಟ ೪೮

೯೯೮

ಬಾಳುವುದೇತಕೆ? ನುಡಿ, ಎಲೆ ಜೀವ:
ಸಿರಿಗನ್ನಡದಲಿ ಕವಿತೆಯ ಹಾಡೆ!
ಸಿರಗನ್ನಡದೇಳಿಗೆಯನು ನೋಡೆ!
ಕನ್ನಡ ತಾಯಿಯ ಸೇವೆಯ ಮಾಡೆ!

ನನ್ನ ಮನೆ, ಕನ್ನಡ, ಪುಟ ೫

೯೯೯

ರೆಂಕೆಗೆ ರಥದ ಹಂಗೆ? ಪಥಋಣವೆ ಕಲ್ಪನೆಗೆ?
ಕಾವ್ಯಯಾತ್ರೆಗೆ ತೇರುಕುದುರೆಯ ನೆರಂ ಬೇಕೆ?
ಧರೆಯ ನಿಮ್ನೋನ್ನತಂಗಳ ತಡಬೆಯೇನೊಳದೆ
ಪ್ರತಿಭೆಯ ವಿಮಾನ ಯಾನಕ್ಕೆ? ಪರಿವಾರದಾ
ಸಂಸಾರ ಭಾರ ಬಂಧನವಿಹುದೆ ದುರ್ದಮ್ಯ,
ನಿಸ್ಸೀಮ, ವಿಶ್ವಸಂಚಾರ ಶಕ್ತಿಯುಕ್ತ, ಕವಿ
ವೈನತೇಯನ ಮಹಾ ಪಕ್ಷ ವಿಸ್ಫಾಲನೆಗೆ?

ಶ್ರೀ ರಾಮಾಯಣ ದರ್ಶನಂ, ಚಿತ್ರಕೂಟಕೆ, ಪುಟ ೧೩೭-೮

೧೦೦೦

ಎಂತಾದರರಿದಲಿ ದಿಟ! ಮಾನವರು ನಮಗೆ ನ-
ಮ್ಮಂತೆ ಹರಿ: ದೇವತ್ವವಿಹ ನರಂ ಪತ್ರಿಮೆ ತಾಂ
ಚಿಂತೆಯಂ ಮೀರಿಹ ನಿರಾಕೃತಿಗೆ! ಇನ್ನೆಲ್ಲ ತೋರೀಶ್ವರಾದರ್ಶವು?

ಅದರಿಂದ ಮಾನವನು ಮಾನವನ ಪೂಜೆಯಲಿ
ಮೊದಲಿಂದೆ ತೊಡಗಿಹನು. ತಪ್ಪಿಲ್ಲವದರೊಳಗೆ.
ಅದು ಪಥವೆ ಹೊರತು ಗತಿಯಲ್ಲ. ಯುಕ್ತಿಯೊಳೇನು ?
ಭಕ್ತಿಯಲ್ಲಿದೆ ಹರ್ಷವು

ಅಗ್ನಿಹಂಸ, ಮುಕ್ತ ಮಹಾಪುರುಷನಿಗೆ, ಪುಟ ೫೫

೧೦೦೧

...ಶೂದ್ರರನ್ನು ಗುಲಾಮರನ್ನಾಗಿ ಮಾಡಿ ಮೂಢ ಪಶುಗಳಿಗಿಂತಲೂ ಕೀಳು ಮಟ್ಟದಲ್ಲಿಟ್ಟು, ಅವರ ದುಡಿಮೆಯಿಂದ ತಾವು ಸುಖ ಭೋಗಿಗಳಾಗಿರುವ ಆಚಾರ್ಯ ನಾಮಕ ನೀಚರನ್ನು ವಿಚಾರ ವೇದಿಕೆಯ ಸಾಕ್ಷಿ ಪೆಟ್ಟಿಗೆಯಲ್ಲಿ ನಿಲ್ಲಿಸುವ ಧೈರ್ಯ ದೃಢತೆಗಳನ್ನು ನಮ್ಮ ತರುಣರಿಗೆ ಕಲಿಸಬೇಕು. ಯುವಕರೇ ಒಂದು ಕಡೆ ಸೇರಿ ಚರ್ಚೆಮಾಡಿ ಸ್ವತಂತ್ರ ನಿರ್ಣಯ ತೆಗೆದುಕೊಳ್ಳುವಂತಾಗಬೇಕು. ಹಳೆಯ ಶಾಸ್ತ್ರ, ಬೂಸಲು ಧರ್ಮ, ಕೇಡಿ ಜಗದ್ಗುರು, ಸ್ವಾರ್ಥಶೀಲ ಆಚಾರ್ಯ ಇವರನ್ನೆಲ್ಲ ಮುಲಾಜಿಲ್ಲದೆ ಧಿಕ್ಕರಿಸುವಂತಾಗಬೇಕು.

ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಅದೇ ಹೆಸರಿನ ಲೇಖನ, ಪುಟ ೧೩

೧೦೦೨

ದೇವರು ಸೆರೆಯಾಳ್, ದೇಗುಲ ಸೆರೆಮನೆ,
ಕಾವಲು ಪೂಜಾರಿ !
ನೀನಾವಾಗಲು ನನ್ನಯ ಬಳಿಯಿರೆ
ಬಲು ತೊಂದರೆ ಎಂದು
ಗಿರಿಶಿಖರದೊಳತಿದೂರದಿ ಕಟ್ಟಿದೆ
ಗುಡಿಯನು ನಿನಗೊಂದು :
ಕಲ್ಲಿನ ಗೋಪುರ, ಕಲ್ಲಿನ ಗೋಡೆ,
ದುರ್ಗದವೊಲೆ ಬಲು ದುರ್ಗಮ ನೋಡೆ !
ಸೆರೆಯನು ತಪ್ಪಿಸಿಕೊಳ್ಳದ ತೆರದಲಿ
ಅರ್ಚಕ ರಕ್ಷೆಯಿದೆ ;
ತೆಂಗಿನ ಕಾಯೊಳೆ ತಲೆಯನು ಬಡಿಯುವ
ಪೂಜೆಯ ಶಿಕ್ಷೆಯಿದೆ !
ಪುರಸತ್ತಾದರೆ ಕೆಲಸದೊಳಿಲ್ಲ
ಬೇಸರ ಪರಿಹಾರಕ್ಕೆ ಬಹೆನಲ್ಲಿ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ದೇವರು ಸೆರೆಯಾಳ್, ಪುಟ ೭೬

೧೦೦೩

ಸರೋವರಕೆ ಜೀವನದೆ !
ರಸಾವೇಶ ಭಾವವಿದೆ !
ಪಡಿನೆಳಲ್ಗಳದರ ಚಿಂತೆ !

ಕೆರೆಯ ಹೃದಯಕುಸಿರಿದೆ !
ನನ್ನ ಬಾಳೊಳೆಂತುಟಂತೆ
ಹಳದಿ ಕೆಂಪು ಹಸುರಿದೆ !

ಕಲಾಸುಂದರಿ, ಕುಕ್ಕನಹಳ್ಳಿ ಕೆರೆಯ ಮೇಲೆ, ಪುಟ ೬೫

೧೦೦೪

ಗಾಢಪ್ರೇಮವಿದ್ದಲ್ಲಿ ಸಂಪ್ರದಾಯದ ಸಂಕೋಲೆಗಳು ಕರಗಿ ಹೋಗುತ್ತವೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೫೦

೧೦೦೫

ಎಲ್ಲಿ ಸಾಧನೆ ಇರುವುದೋ ಅಲ್ಲಿ ಗುರುವಿನ ನೇತೃತ್ವ ಇದ್ದೇ ತೀರಬೇಕು.

ಸ್ವಾಮಿ ವಿವೇಕಾನಂದ, ಪುಟ ೧೬೭

೧೦೦೬

ವಿಜ್ಞಾನ ಹೊಸ ಹೊಸ ಸುಖ ಸೌಕರ್ಯಗಳನ್ನು ಗೆದ್ದುಕೊಡುತ್ತಿದೆ. ವೈರಿ ವಿನಾಶಕ್ಕೆ ನವ ನವ ಮಾರ್ಗಗಳನ್ನು ಕಲ್ಪಿಸುತ್ತಿದೆ. ಧೂಳೀಕಣದ ಒಳಗಿರುವ ರಹಸ್ಯದಿಂದ ಹಿಡಿದು ಅಮಿತ ಸಂಖ್ಯೆಯ ಜ್ಯೋತಿರ್ವತ್ಸರಗಳಾಚೆ ಇರುವ ತಾರೆ ನೀಹಾರಿಕೆಗಳ ಗುಟ್ಟಿನವರೆಗೂ ಜ್ಞಾನ ಜ್ಯೋತಿಯನ್ನು ಬೀರಿ ವಿಶ್ವದ ಮಹಾದ್ಭುತಗಳನ್ನು ನಿರ್ದಾಕ್ಷಿಣ್ಯವಾಗಿ ಪ್ರದರ್ಶಿಸುತ್ತಿದೆ ; ಉತ್ಸಾಹದಿಂದ ಆವಿಷ್ಕಾರಗೊಳಿಸುತ್ತಿದೆ ; ಸ್ವಲ್ಪವೂ ಅಧೀರವಾಗದೆ ಅನ್ವೇಷಿಸುತ್ತಿದೆ. ಅಂತಹ ಶ್ರೀಮಂತ ಸಾಹಸದ ಎದುರಿನಲ್ಲಿ ಕಾವ್ಯಾದಿ ಕಲೆಗಳ, ಮತ ಮತ್ತು ತತ್ತ್ವಗಳ ದರಿದ್ರ ದೀನತೆ ಹೊಯಿಕೈಯಾಗಬಲ್ಲದೆ ?

ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೩೦

೧೦೦೭

ಇದೂ ಲೇಸು ಅದೂ ಲೇಸು.
ಇದೂ ಅದೂ ಯಾವುದು ?
ಇದನು ಅದನು ಮೀರುವ ಹದನು
ಪರಮ ಲೇಸು : ತಿಳಿವುದು !

ಕಲಾಸುಂದರಿ, ಗುಟ್ಟನರಿತು ಸುಮ್ಮನಿರು, ಪುಟ ೫೯

೧೦೦೮

ಶಿವ ಗುಡಿಯ ಶಿವನು ಜೋಯಿಸರ ಶಿವನಂತೆ ;
ನನ್ನ ಶಿವನೀ ಮಣ್ಣಿನಲ್ಲಿಹನು. ನನ್ನ ಶಿವ
ಕೊಳೆತ ಕಸದೊಳಗಿಹನು. ಕಪ್ಪುರದೊಳಿಲ್ಲ ;
ಮಂಗಳಾರತಿಯೊಳಿಲ್ಲ ; ಹೂವುಗಳಲಿಲ್ಲ.
ಯಾವೆಡೆಯೊಳಾನಿಹೆನೊ ಅವನಲ್ಲಿಯೇ ಇಹನು.

ನನ್ನೆದೆಯೆ ದೇಗುಲ ; ನನ್ನೊಲ್ಮೆಯದೆ ಪೂಜೆ.
ನಾನೆಲ್ಲಿ ಭಕ್ತಿಯಿಂ ಕೈಮುಗಿವೆನೋ ಅಲ್ಲಿ
ತಾನಿಹನು. ನಾನೆಲ್ಲಿ ಸತ್ಕರ್ಮವೆಸಗುವೆನೊ
ಅಲ್ಲಿ ಮೈದೋರುವನು. ಶಿವಗುಡಿಯದೆನಗೇಕೆ?

ಜಲಗಾರ, ಪಾತ್ರ, ಜಲಗಾರ, ಪುಟ ೧೦

೧೦೦೯

ತನ್ನ ಸೌಂದರ್ಯ ಪ್ರಶಂಸೆಗಿಂತಲೂ ಹೆಚ್ಚಿನ ಪ್ರಲೋಭನೆಯಾಗಲಿ ದೌರ್ಬಲ್ಯವಾಗಲಿ ಹೆಂಗಸಿಗೆ ಮತ್ತೊಂದು ಇರಲಾರದು.

ಮಲೆಗಳಲ್ಲಿ ಮದುಮಗಳು, ಪುಟ ೭೯೩

೧೦೧೦

ಪ್ರಕೃತಿ ನಮ್ಮ ಹುಟ್ಟಿನೊಡನೆ ಸಿದ್ಧವಾಗಿ ಬರುತ್ತದೆ. ಸಂಸ್ಕೃತಿ ನಮ್ಮ ದುಡಿಮೆಯಿಂದ ಮಾತ್ರ ಸಿದ್ಧವಾಗುತ್ತದೆ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸದೃಷ್ಟಿ, ಪುಟ ೪೫

೧೦೧೧

ಮಹಿಮೆ ಮಹಿಮೆಯ ಕಣ್ಗೆ ಮರೆಯಹುದೆ

ಶ್ರೀ ರಾಮಾಯಣ ದರ್ಶನಂ, ಶಿಲಾತಪಸ್ವಿನಿ, ಪಾತ್ರ ವಿಶ್ವಾಮಿತ್ರ, ಪುಟ ೫೨

೧೦೧೨

ಚೇತೋಹಾರಿಯಾದ ಪರ್ವತಾರಣ್ಯ ನಿಸರ್ಗ ದೃಶ್ಯವನ್ನೊ ಸೂರ್ಯಾಸ್ತವನ್ನೊ ಚಂದ್ರೋದಯವನ್ನೊ ಸಮುದ್ರವನ್ನೊ ಆಕಾಶದ ಮೇಘ ಪಂಕ್ತಿಗಳನ್ನೊ ಯಾವ ಲೌಕಿಕ ಪ್ರಯೋಜನದ ಆಶೆ ಭಯ ಆಶಂಕೆಗಳ ಗೊಂದಲವೂ ಇಲ್ಲದೆ ಸಂಗದೂರವೆಂಬಂತಿರುವ ಧ್ಯಾನ್ಯಮಯ ಪ್ರಜ್ಞೆಯಿಂದ ಕವಿ ಹೃದಯವುಳ್ಳವರು ಯಾರೆ ಆಗಲಿ ವೀಕ್ಷಿಸುತ್ತಿರುವಾಗ ದೊರೆಕೊಳ್ಳುವ ಸೌಂದರ್ಯಾನುಭವದ ಆನಂದವು ರಸಾನುಭವಕ್ಕಿಂತ ಯಾವ ವಿಧದಲ್ಲಿಯೂ ಭಿನ್ನವಾದುದಲ್ಲ.

ರಸೋ ವೈ ಸಃ, ರಸಾನುಭವದ ಅಲೌಕಿಕತೆ, ಪುಟ ೩೨

೧೦೧೩

ಹುಡುಗರ ಲೋಕದಲ್ಲಿ ಯೋಚನೆ ಮಾಡಿದ್ದೆಲ್ಲ ಆಗಿಯೇ ಆಗುತ್ತದೆ.

ಮಲೆನಾಡಿನ ಚಿತ್ರಗಳು, ರಾಮರಾವಣರ ಯುದ್ಧ, ಪುಟ ೯೫

೧೦೧೪

ಧರ್ಮಸ್ಥಳದಲ್ಲಿ ಒಂದೊಂದು ತಲೆಗೆ ನೂರು ನೂರೈವತ್ತು ರೂಪಾಯಿಗಳ ವರೆಗೂ ಕಾಣಿಕೆ ತೆಗೆದುಕೊಂಡಿದ್ದರೂ ಕೂಡ ಯಾರೊಬ್ಬರಿಗೂ ದುಃಖವಾಗಲಿಲ್ಲ. ಅಥವಾ ಆದವರು ಬಾಯಿಬಿಟ್ಟು ಹೇಳಿದರೆ ದೇವರಿಗೆ ಮುನಿಸಾಗುತ್ತದೆಂದು ಹೇಳಲಿಲ್ಲ ! ಒಲ್ಲದ ಹೆಂಡಿರನ್ನು ಒಲಿಸಿಕೊಡುವುದಕ್ಕಿಂತಲೂ ಶ್ರೇಷ್ಠತರವಾದ ಕಾರ್ಯ

ಇನ್ನಾವುದಿದೆ ಆ ದೇವರಿಗೆ? ಅವನು ಹಾಗೆ ಮಾಡುತ್ತ ಬರಲಿ: ನಾಸ್ತಿಕರೆಲ್ಲ ಆಸ್ತಿಕರಾಗುತ್ತಾರೆ!

ಕಾನೂರು ಹೆಗ್ಗಡಿತಿ, ಪುಟ ೫೫೦

೧೦೧೫

ಯಾವನಾದರೊಬ್ಬನು ಶಕ್ತಿಶಾಲಿಯದ ಮಹಾ ಪುರುಷನೆಂದು ತಿಳಿದೊಡನೆಯೆ ಆತನು ಹೇಳಿದುದನ್ನೆಲ್ಲ ನಿರ್ವಿಚಾರವಾಗಿ ಸ್ವೀಕರಿಸಿ ಬಿಡುವುದು ಸಾಮಾನ್ಯ ಮನುಷ್ಯರ ಸ್ವಭಾವ.

ಸ್ವಾಮಿ ವಿವೇಕಾನಂದ, ಪುಟ ೬೮-೯

೧೦೧೬

ಸ್ವಾತಂತ್ರ್ಯಪೂರ್ವದಲ್ಲಿ ಮಹಾತ್ಮಾ ಗಾಂಧೀಜಿಯ ಆತ್ಮಶ್ರೀಯ ತೇಜಸ್ಸಿಗೊಳಗಾಗಿ ಸ್ವಾರ್ಥತ್ಯಾಗದ ಮತ್ತು ಸರಳ ಜೀವನದ ಧ್ಯೇಯಜ್ಯೋತಿಯಿಂದ ದೀಪ್ತವಾಗಿ ಇಷೀಕಾಸ್ತ್ರಗಳಾಗಿದ್ದ ಜೀವರುಗಳೆಲ್ಲ ಇಂದು ಮತ್ತೆ ತಮ್ಮ ನಿಜ ಸ್ವರೂಪದ ಹುಲ್ಲುಕಡ್ಡಿಗಳಾಗಿವೆ. ಎಲ್ಲರೂ ಹಾಗಾಗಿಲ್ಲ, ನಿಜ. ಗಾಂಧೀಜಿಯ ಅನುಯಾಯಿಗಳಾಗಿದ್ದ ವಿನೋಬಾಜಿ, ಜಯಪ್ರಕಾಶ ನಾರಾಯಣರಂತಹ ಕೆಲವರಾದರೂ ಆ ಧ್ಯೇಯಜ್ಯೋತಿಯನ್ನು ಬೆಳಗುತ್ತಾ ನಾಡನ್ನು ಎಚ್ಚರಿಸುವ ಮತ್ತು ಮುನ್ನಡೆಸುವ ಕ್ಲಿಷ್ಟಕಾರ್ಯದಲ್ಲಿ ತೊಡಗಿದ್ದಾರೆ. ಆದರೆ ಅಲ್ಪಸಂಖ್ಯಾತರಾಗಿರುವ ಆ ಗುಂಪಿನವರು ರಾಜಕೀಯ ರಂಗದಲ್ಲಿ ಅಧಿಕಾರದಲ್ಲಿರುವ ಬಹುಸಂಖ್ಯಾತರೊಡನೆ ಹೋರಾಡಬೇಕಾಗಿ ಬಂದಿರುವ ದುರಂತ ದುಃಸ್ಥಿತಿಯೊದಗಿದೆ, ನಮ್ಮ ನಾಡಿಗೆ.

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೨

೧೦೧೭

ಯಾವಾತನು ತನ್ನ ಭಾವದ ಇಂದ್ರಜಾಲದಿಂದ ಕವಿತೆಯೆಂಬ ಮಿಂಚಿನ ಮಧುರವಾದ ಕೂರಸಿಯಿಂದ, ಜೀವರ ಅಶಕ್ತಿಯನ್ನು ಕತ್ತರಿಸಿ, ಬಾಳಿಗೆ ಹೊಸ ರಸವನ್ನು ನೀಡಿ, ಭೂಮಿಯನ್ನು ವೈಕುಂಠವನ್ನಾಗಿ ಮಾಡುವನೊ ಆತನೆ ಸಹಜ ರಸಋಷಿ. ಇದೇ ಕವಿಗಳ ಅತ್ಯುನ್ನತ ಆದರ್ಶ.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೧೩

೧೦೧೮

ಭಯಕೆ ಕಾರಣ ದೇವ;
ಕೈವಲ್ಯದಾನಂದ
ಮೋಕ್ಷವೈಕುಂಠಗಳು
ಕಾರಣವು ಜಡತನಕೆ:
ದೈನ್ಯಭಾವದ ತತ್ತ್ವದಿಂದಹುದು ಹೃದಯದೌರ್ಬಲ್ಯ!

ಹೊನ್ನಹೊತ್ತಾರೆ, ಸಂದೇಹ, ಪುಟ ೬

೧೦೧೯

ಮಹತ್ತಾದುದೆಲ್ಲ ಭವ್ಯವಾಗಿರುತ್ತದೆ.

ರಕ್ತಾಕ್ಷಿ, ಪಾತ್ರ ಬಸವಯ್ಯ, ಪುಟ ೩೦

೧೦೨೦

ಸಣ್ಣ ಬಾಲಕರಿಗೂ ಪ್ರಕೃತಿಗೂ ಇರುವ ಪ್ರೇಮದ ತತ್ತ್ವವನ್ನು ತಿಳಿಯುವುದು ಬಹುಕಠಿನ : ಅಸಾಧ್ಯವೆಂದರೂ ಎನ್ನಬಹುದು. ಏಕೆಂದರೆ ಬಾಲಕರು ತಮ್ಮ ಆಂತರ್ಯ ಭಾವನೆಗಳನ್ನು ಅರಿಯರು. ತಮ್ಮ ಅಂತರ್ಭಾವಗಳನ್ನು ಪರಿಶೀಲನಪೂರ್ವಕವಾಗಿ ವಿಚಾರಮಾಡುವುದನ್ನು ಕಲಿಯುವುದರೊಳಗೆ ಅವರಿಗೆ ಬಾಲ್ಯಾವಸ್ಥೆ ಪೂರೈಸುವುದು. ಆದರೂ ಸದ್ಯದಲ್ಲಿ ಅದು ಮನೋಗಮ್ಯವಾಗಿರದಿದ್ದರೂ ಹೃದಯಗ್ರಾಹ್ಯವಾಗಿರುವುದೇನೋ ಸತ್ಯ. ಆದ್ದರಿಂದಲೆ ಅದು ನಮ್ಮ ಜೀವಮಾನಕ್ಕೆ ಅಮೃತಸಮಾನವಾಗಿ ಪರಿಣಮಿಸುವುದು. ಆದುದರಿಂದಲೆ ಮಾನವರು ತಮ್ಮ ಜನ್ಮದ ಇತರ ಎಲ್ಲಾ ಅವಸ್ಥೆಗಳಲ್ಲಿಯೂ ಕಂಬನಿಗೆರೆಯುತ್ತಾ ಪ್ರೇಮ ವಿಷಾದಗಳಿಂದ ಬಾಲ್ಯದ ಕಡೆಗೆ ಉತ್ಕಂಠತೆಯಿಂದ ತಿರುಗಿನೋಡುವರು. ಅಂತಹ ಆಂತರ್ಯಾವಲೋಕದಲ್ಲಿಯೆ ನಮ್ಮ ಆನಂದವು ನೆಲೆಯಾಗಿರುವುದು. ಕೌಮಾರ ಯೌವನ ವೃದ್ಧಾಪ್ಯಗಳೆಂಬ ಅವಸ್ಥೆಗಳು ಬಾಲ್ಯವನ್ನು ಪುನಃ ಪುನಃ ಮನಸ್ಸಿನಲಿಯೇ ಅನುಭವಿಸಿ ಆನಂದಪಡುತ್ತವೆ.

ಇತ್ಯಾದಿ, ಪ್ರಕೃತಿಸೌಂದರ್ಯ, ಪುಟ ೩–೪

೧೦೨೧

ಹೇಳಲೇಬೇಕು ! ನನಗೇನೊ ಹೇಳಬೇಕೆನ್ನುವ ಹುಚ್ಚು ಹಿಡಿದಿದೆ ! ಕೇಳುವ ಹುಚ್ಚಿದ್ದವರು ಕೇಳಲಿ ! ಉಳಿದವರು ಪುಸ್ತಕವನ್ನಾಚೆಗೆ ಬಿಸಾಡಲಿ !

ಮಲೆನಾಡಿನ ಚಿತ್ರಗಳು, ಮುನ್ನುಡಿ, ಪುಟ v

೧೦೨೨

ಪ್ರಕೃತಿಯನೆ
ಕೃತಿಗೆಯ್ದವಗೆ ನಿನ್ನ ಕೃತಿ ಭಿಕ್ಷೆಯೇನ್ ರಸಕೆ ?

ಕೃತ್ತಿಕೆ, ವಿಶ್ವಭಿಕ್ಷು, ಪುಟ ೫೨

೧೦೨೩

ನೋಡು,.....ಅಲ್ಲಿ !
ಪನಿ ತಳ್ತ ಶಾದ್ವಲ ಶ್ಯಾಮವೇದಿಕೆಯಲ್ಲಿ
ತೃಣಸುಂದರಿಯ ಮೂಗುತಿಯ ಮುತ್ತುಪನಿಯಂತೆ
ಮಿರುಮಿರುಗಿ ಮೆರೆವಾ ಹಿಮನ ಬಿಂದು ! ಜ್ವಲಿಸುತಿದೆ
ನೋಡೆಂತು ಬಣ್ಣದೆಣ್ಣೆಯ ಹಣತೆ ಸೊಡರಂತೆ
ಸಪ್ತರಾಗೋಜ್ವಲಂ ! ಸರ್ವಸೃಷ್ಟಿಯ ದೃಷ್ಟಿ ತಾಂ

ಸೆರೆಯಾಗಲೊಪ್ಪಿರುವುದಾ ಹನಿಯ ಹೃದಯದಾ
ಪುಟ್ಟ ಜೋತಿಯಲಿ! ದೇವರ ಮುಖದ ದರ್ಶನಕೆ
ಸಾಲದೇನಾ ಹನಿಯ ಕಿರುದರ್ಪಣಂ?

ಶ್ರೀ ರಾಮಾಯಣ ದರ್ಶನಂ, ಪಂಚವಟಿಯ ಪರ್ಣಕುಟಿ, ಪಾತ್ರ ರಾಮ, ಪುಟ ೨೧೩

೧೦೨೪

ತನುವು ನಿನ್ನದು, ಮನವು ನಿನ್ನದು,
ಎನ್ನ ಜೀವನ ಧನವು ನಿನ್ನದು:
ನಾನು ನಿನ್ನವನೆಂಬ ಹೆಮ್ಮೆಯ
ಋಣವು ಮಾತ್ರವೆ ನನ್ನದು!
ನೀನು ಹೊಳೆದರೆ ನಾನು ಹೊಳೆವೆನು;
ನೀನು ಬೆಳೆದರೆ ನಾನು ಬೆಳೆವೆನು;
ನನ್ನ ಹರಣದ ಹರಣ ನೀನು,
ನನ್ನ ಮರಣದ ಮರಣವು!
ನನ್ನ ಮನದಲಿ ನೀನೆ ಯುಕ್ತಿ,
ನನ್ನ ಹೃದಯದಿ ನೀನೆ ಭಕ್ತಿ,
ನೀನೆ ಮಾಯಾಮೋಹ ಶಕ್ತಿಯು,
ನನ್ನ ಜೀವನ ಮುಕ್ತಿಯು!

ಅಗ್ನಿಹಂಸ, ತನುವು ನಿನ್ನದು, ಪುಟ ೭೫

೧೦೨೫

ವಾದಿಸುವ ಒಣ ವೇದಪಂಡಿತರ ನೋಡಿ ನೋಡಿ
ದರ್ಶನಗಳಾಚಾರ್ಯರಾಟೋಪಮಂ ಕಂಡು ನೀಂ
ನಿರ್ವಾಣ ತಾನನಿರ್ವಚನೀಯಮೆಂಬ ನಿಜಮಂ
ತಿಳಿಸಲೆಂ ಮೌನವ್ರತವಾಂತೆಯೋ, ಮೌನಿವರ್ಯ?

ಕೊಳಲು, ಗೊಮಟೇಶ್ವರ, ಪುಟ ೩೮

೧೦೨೬

ಭವ್ಯತೆಯ ಭಾವದಾವೇಶದಿಂ
ರೋಮಾಂಚವಾಗುತಿಹುದೆನ್ನ ಮೈ! ಅಮೃತದಲಿ
ಮುಳುಗಿ ಮೃತವಾಗುತಿದೆ ನಾನೆಂಬ ವ್ಯಕ್ತಿಕ್ರಿಮಿ!

ಅಗ್ನಿಹಂಸ, ಶ್ರವಣಬೆಳ್ಗೊಳದ ಗೋಮಟೇಶ್ವರ ಸಾನ್ನಿಧ್ಯದಲ್ಲಿ, ಪುಟ ೬೪

೧೦೨೭

ದುಃಖಬಂದರೆ ಕಣ್ಣೀರು ಸುರಿಸುತ್ತೇವೆ. ಸಂತೋಷವಾದರೆ ಚೆನ್ನಾಗಿ ನಗುತ್ತೇವೆ. ಹಾಗೆಯೇ ಜೀವನದ ಸುಖ, ದುಃಖ; ಸೃಷ್ಟಿಯ ಸೌಂದರ್ಯ, ರಹಸ್ಯ;

ಸಮಸ್ತ ವಿಶ್ವದ ಹಿಂದಿರುವ ಒಂದು ಮಹಾ ಪವಿತ್ರ ವ್ಯಕ್ತಿತ್ವದಲ್ಲಿ ನಮಗುಂಟಾಗುವ ವೇದನಾಪೂರ್ವಕವಾದ ಪ್ರೇಮ, ಭಕ್ತಿ; ಇವೇ ಮೊದಲಾದ ದಿವ್ಯಭಾವಗಳು ಪ್ರತಿಭಾ ಸಂಪನ್ನನಾದ ಕವಿಯ ಎದೆಯಲ್ಲಿ ಉದ್ರೇಕವಾದಾಗ, ಹಸುರು ನೆಲದಿಂದ ಉಕ್ಕಿ ನೆಗೆಯುವ ಬುಗ್ಗೆಯಂತೆ ನಿರಂತರವಾಗಿ, ನಿರಾಯಾಸವಾಗಿ ಚಿಮ್ಮಿ ಹೊಮ್ಮುವ ಭಾವಾತ್ಮಕವಾದ ಲಲಿತಪದಗಳ ಮನೋಹರವಾದ ಇಂಪಾದ ವಸಂತ ನೃತ್ಯವೆ, ಸುಗ್ಗಿಯ ಕುಣಿತವೆ, ನಿಜವಾದ ಕವಿತೆ !

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೯

೧೦೨೮

ಒಲುಮೆ ಬರಲು ಕೈಯ ಚಾಚಿ
ಅದರ ಮೈಯ ತಬ್ಬಿ ಬಾಚಿ,
ಸ್ವಾರ್ಥತೆಯನೆ ತೇಲಿಬಿಟ್ಟು
ನನ್ನದೆಂಬುದೆಲ್ಲ ಕೊಟ್ಟು
ಅದರೊಳಾನು ಲೀನವಾಗಿ
ನನ್ನ ಮರೆಯೆ ಬರಿಯನಾಗಿ–
ಸ್ವರ್ಗವಲ್ಲಿದೆ ।
ಸ್ವರ್ಗವಲ್ಲಿದೆ !
ಸ್ವರ್ಗವಲ್ಲಿದೆ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಸ್ವರ್ಗವೆಲ್ಲಿದೆ, ಪುಟ ೩೮

೧೦೨೯

ಭೂತಕಾಲದ ಪ್ರಚೋದನೆ ಮಾತ್ರವಲ್ಲದೆ ಭವಿಷ್ಯತ್ಕಾಲದ ಆಕರ್ಷಣೆಯೂ ವರ್ತಮಾನದ ಚಲನ ವಲನಗಳನ್ನು ನಿರ್ಣಯಿಸುವ ಪ್ರಬಲ ಶಕ್ತಿಯಾಗಿರುತ್ತದೆ ಅಲ್ಲವೆ ?......

ಮಲೆಗಳಲ್ಲಿ ಮದುಮಗಳು, ಪುಟ ೬೪೯

೧೦೩೦

ತೃಪ್ತಿಯ ಕಮಲ ಕನ್ಯೆ.
ಕೀರ್ತಿಯ ಮದಿರೆಯಿಲ್ಲದೆಯೆ ಕರ್ಮಗೆಯ್ಯಲ್ಕೆ
ಚೈತನ್ಯವಿರದವರಿಗಿರಲಾ ದರಿದ್ರತಾ
ಪಾನ ಭೋಗಂ. ಪೊನ್ಗೆ ಮಣ್ಗೆ ಪೆಣ್ಗಿಂಮಿಗಲ್
ಕೀರ್ತಿ ಸಪ್ತಮ ವೈರಿ.

ಕೃತ್ತಿಕೆ, ಕೀರ್ತಿಶನಿ, ಪುಟ ೩೫

೧೦೩೧

ಮೇರೆಯಿದೆ ಮರ್ತ್ಯದ ಪರಾಕ್ರಮಕೆ.
ಮರ್ತ್ಯದಾಳ್ ಬಿದಿಯೊಡನೆ ತಾಂ ನಡೆಯುವನ್ನೆಗಂ

ಕಲಿ ; ಬಿಂಕದಿಂ ಬಿದಿಗಿದಿರ್ ಮಲೆಯೆ ಬಲಿ, ಕೂಡೆ
ತಾನದರ ಚಕ್ರಶ್ಶೈಲತೆಗೆ. ಪಾಯದಿರು ತಲೆ
ಬಲ್ಲಿತೆಂದರೆಬಂಡೆಯಂ.

ಶ್ರೀ ರಾಮಾಯಣ ದರ್ಶನಂ, ಊರ್ಮಿಳಾ, ಪಾತ್ರ ರಾಮ, ಪುಟ ೯೪–೫

೧೦೩೨

ಬುದ್ಧಿಮಯತೆ ಸಂಕೇತದ ಮುಖ್ಯ ಲಕ್ಷಣವಾದರೆ ಭಾವಮಯತೆ ಪ್ರತೀಕದ ಪ್ರಧಾನ ಲಕ್ಷಣ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೩೪

೧೦೩೩

ಮನುಷ್ಯ ಜಾತಿಯ ಗೌರವ ಅದರ ಬುದ್ಧಿಶಕ್ತಿಯಲ್ಲಿದೆ. ರಾಗ ಪ್ರೇಮ ಕ್ರೋಧ ದ್ವೇಷಗಳು ಸರ್ವ ಪ್ರಾಣಿಗಳಲ್ಲಿಯೂ ಸಾಮಾನ್ಯವಾಗಿವೆ. ಅವುಗಳೆಲ್ಲವೂ ನಮಗಿರುವ ಶಕ್ತಿಗಳೇ ಆದರೂ ಅವುಗಳನ್ನೆಲ್ಲ ಆಳುವ ಶಕ್ತಿ, ಎಂದರೆ ಬುದ್ಧಿ ಇಲ್ಲದೆ ಹೋದರೆ ಯಾವ ಪುರುಷಾರ್ಥವೂ ಕೈಗೂಡದು. ಅದಕ್ಕೆ ಬದಲಾಗಿ ಅನರ್ಥಕರವಾದರೂ ಆಗಬಹುದು. ಬುದ್ಧಿಯ ಈ ಉಪಯೋಗವು ವ್ಯಾವಹಾರಿಕ ಜಗತ್ತಿಗೆ ಸೇರಿದ್ದು. ವಾಸ್ತವ ಜಗತ್ತು ಮತ್ತು ವಾಸ್ತವ ಜೀವನಗಳನ್ನು ಬಿಟ್ಟು ಭಾವಜಗತ್ತು ಭಾವಜೀವನಗಳನ್ನೇ ತೆಗೆದುಕೊಂಡರೂ ಅಲ್ಲಿಯೂ ಬುದ್ಧಿಶಕ್ತಿಯ ಮಹಿಮೆ ಅಪ್ರತಿಹತವಾಗಿ ನಿಲ್ಲುತ್ತದೆ.

ಕಲಾಸುಂದರಿ, ಮುನ್ನುಡಿ, ಪುಟ v

೧೦೩೪

ಪಂಜರದ ಮೇರೆಯನೆ
ಸಂಚರಿಸಲಾರದಿಹ
ಗಿಳಿಗೆ ಬನದ ಬಯಲ
ಬಯಕೆಯೇಕೆ ?
ಸೆರೆಮನೆಯ ಕಿರಿತನವ
ಬಳಸಲಾರದ ನನಗೆ
ಬಿಡುಗಡೆಯ ಬಿತ್ತರವೆ
ಹಿರಿಯ ಸೆರೆಯು !

ಕಲಾಸುಂದರಿ, ಸೆರೆ, ಪುಟ ೩೬

೧೦೩೫

ಎದೆಮುಟ್ಟಿ
ಪ್ರಕೃತಿಯನು ಬ್ರಹ್ಮಮಯಿ ಎಂದರಿತು ಒಲಿದವಗೆ,
ಮೇಣು ಆನಂದಮಯಿ ಎಂದೊಲಿದು ಅರಿತವಗೆ

ದುಗುಡವೆತ್ತಣದು ? ಶರದಾಗಸದ ನೀಲಿ ನಗೆ
ನಮ್ಮೆದೆಯ ನೂರು ತಾಪವನಳಿಸಿ ಚಿರಶಾಂತಿ
ಔದಾರ್ಯಗಳ ನೀಡುವುದು ; ಮಾನಸಿಕ ಕ್ರಾಂತಿ
ತೊಲಗುವುದು.

ಕಲಾಸುಂದರಿ, ತುಂಗೆ, ಪುಟ ೭೦

೧೦೩೬

ಮನುಷ್ಯನ ಆತ್ಮವೂ ಕ್ರಿಯೆ ಬುದ್ಧಿ ಭಾವಗಳ ಬರಿಯ ರಾಶಿಯಲ್ಲ ; ಬ್ರಹ್ಮದಂತೆಯೆ ಅಖಂಡವಾದುದು. ಆದ್ದರಿಂದ ಅರಿವು ಇರವಾಗುವುದೇ ಸಾಕ್ಷಾತ್ಕಾರ. ಇದು ಭಾವಮಯವಾದ ಕಲೆಗೆ ಸುಲಭಸಾಧ್ಯ. ಆದ್ದರಿಂದಲೆ ಯುಕ್ತಿ ತುದಿಯಲ್ಲಿ ಭಕ್ತಿಯಾಗುವುದು. ಯುಕ್ತಿಯಾನದಲ್ಲಿ ತೊಳತೊಳಲಿ ಸೋತ ಆತ್ಮ ಭಕ್ತಿ ವಿಮಾನವನ್ನೇರುವುದು. ಇಂತಹ ಪರಾಜಯವೆ ಯುಕ್ತಿಗೆ ಪರಮಜಯ. ಪರಾಭಕ್ತಿ ಯುಕ್ತಿಗೆ ಅಪಕಾರಿಯಲ್ಲ ; ಸಹಕಾರಿ ಮತ್ತು ಉಪಕಾರಿ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨೨

೧೦೩೭

ಚಿನ್ಮಯಂ ತಾನಾಗುತಿರ್ಪುದೀ
ಮೃಣ್ಮಯಂ ಪೃಥಿವಿ. ಭಗವಾನ್ ಸಹಸ್ರಾಂಶುವುಂ
ತ್ಯಜಿಸುತಿಂದ್ರಿಯರೂಪ ಮರ್ತ್ಯ ತತ್ತ್ವಂಗಳಂ
ಪಿಂತಿರುಗುತಿರ್ಪ್ಪನಾತ್ಮಜ್ಯೋತಿಯೋಲ್ ಬ್ರಾಹ್ಮ
ವಿಜ್ಞಾನ ತತ್ತ್ವಕ್ಕೆ.

ಶ್ರೀ ರಾಮಾಯಣ ದರ್ಶನಂ, ಕುಂಭಕರ್ಣನನೆಬ್ಬಿಸಿಮ್, ಪಾತ್ರ ಮಹಾಪಾರ್ಶ್ವ, ಪುಟ ೬೭೨

೧೦೩೮

ಈ ರಾಮಾಯಣ ವಾಚನ, ಈ ರಾಮಾಯಣದ ಪ್ರಕಟನೆ, ಈ ರಾಮಾಯಣದ ಆರಾಧನೆ, ರಾಮಾಯಣದ ತತ್ತ್ವಶಕ್ತಿಗಳ ಉಪಾಸನೆ ಮತ್ತು ಸಾಧನೆ, ಇವು ಬರಿಯ ಆಧ್ಯಾತ್ಮಿಕ ಕ್ಷೇಮವನ್ನು ಮಾತ್ರ ತಂದುಕೊಡುತ್ತವೆ ಎಂದಲ್ಲ. ಧರ್ಮ, ಅರ್ಥ, ಕಾಮ, ಎಲ್ಲವನ್ನೂ ನಮಗೆ ತಂದುಕೊಡಬಲ್ಲವು. ಅಂದರೇನು ? ರಾಜಕೀಯವಾಗಿ ಹೊಸ ಹೊಸದಾಗಿ ಕಾನೂನು ಮೊದಲಾದುವುಗಳನ್ನು ಅಥವಾ ರಾಜ್ಯಾಂಗ ಘಟನೆಯನ್ನು ನಿರ್ಮಾಣಮಾಡಿದರೆ ಏನು ಕೆಲಸವಾಗುತ್ತದೆಯೊ ಅದಕ್ಕಿಂತಲೂ ಇನ್ನೂ ಅತಿಶಯವಾದ ಕಾರ್ಯ ಇಂತಹ ಮಹಾಕೃತಿಗಳಿಂದ ಆಗಬಲ್ಲುದು. ಏಕೆಂದರೆ ನಾವೇನೂ ಈಗ ರಾಜಕೀಯವಾಗಿ ಅಖಿಲ ಭರತಖಂಡವನ್ನು ಒಂದು ಮಾಡಿದ್ದೇವೆ ಎಂಬ ಅಭಿಪ್ರಾಯ ಇಟ್ಟುಕೊಂಡಿದ್ದೇವೆ. ಆದರೆ ಈ ರಾಜಕೀಯದ ಅಂತರಾಳದಲ್ಲಿ, ಎಂದರೆ ಅದರ ಮೂಲದಲ್ಲಿ, ಒಂದು ಸಾಂಸ್ಕೃತಿಕ ಐಕ್ಯತೆಯಿಲ್ಲದಿದ್ದರೆ ಎಷ್ಟು ಸೈನ್ಯವನ್ನು ಇಟ್ಟು ಈ ರಾಜಕೀಯ ಭದ್ರತೆಯನ್ನು ರಕ್ಷಿಸಬಲ್ಲಿರಿ ? ವಾಲ್ಮೀಕಿ, ವ್ಯಾಸ,

ಕಾಳಿದಾಸ, ವೇದ ಉಪನಿಷತ್ತುಗಳು, ದೇಶ ಭಾಷೆಗಳಲ್ಲಿ ಇವುಗಳನ್ನು ಪ್ರತಿಬಿಂಬಿಸುವ ಮತ್ತು ಪುಷ್ಟಿಗೊಳಿಸುವ ಇತರ ಹಲವಾರು ಕೃತಿಗಳು–ಇವು ನಮ್ಮ ನಿತ್ಯ ಮಂತ್ರಿ ಮಂಡಲಗಳಾಗಿ, ನಮ್ಮ ನಿತ್ಯ ಅಧ್ಯಕ್ಷರಾಗಿ ಭರತಖಂಡದ ಐಕ್ಯತೆಯನ್ನು ಸಾಧಿಸುತ್ತಾ ಇವೆ. ರಕ್ಷಿಸುತ್ತಾ ಇವೆ. ಆ ಶಕ್ತಿಗಳ ಪ್ರತೀಕಗಳಾಗಿ ಪ್ರತಿಮೆಗಳಾಗಿ ಮಹಾತ್ಮಾ ಗಾಂಧೀಜಿ, ನೆಹರು ಮೊದಲಾದವರು ಇರಬಹುದು. ಆದರೆ ಆ ಮೂಲ ಶಕ್ತಿಗಳು ಇಲ್ಲದಿದ್ದರೆ ಪಾಶ್ಚಾತ್ಯ ರಾಜಕೀಯ ಭಾವನೆಗಳಿಂದ ಮಾತ್ರವೇ ಇದನ್ನು ಸಂಘಟಿಸುತ್ತೇವೆ ಎನ್ನುವುದು ಬರಿಯ ಭ್ರಾಂತಿ.

ವಿಭೂತಿ ಪೂಜೆ, ಶ್ರೀ ರಾಮಾಯಣ ದಿವ್ಯಶಿಲ್ಪಿ, ಪುಟ ೧೩೧–೨

೧೦೩೯

ನಮ್ಮ ನಾಡಿನಲ್ಲಿ ಈಗೀಗ ಪದ್ಯರಚನೆಯ ಹವ್ಯಾಸ ಅತಿಯಾಗುತ್ತಿದೆ. ಹೊಸ ಛಂದಸ್ಸಿನ ಸೌಲಭ್ಯವೂ ಪುಡಿಗಬ್ಬಗಳ ಪ್ರಾಚುರ್ಯವೂ ಜನರಿಗೆ ಕವನಗಳಲ್ಲಿ ಹುಟ್ಟುತ್ತಿರುವ ಆದರವೂ ಹಲಕೆಲವರಿಗೆ ಒದಗಿರುವ ಅಗ್ಗದ ಕೀರ್ತಿಯೂ ಕವಿ ಎಂದು ಕರೆಯಿಸಿಕೊಳ್ಳಬೇಕೆಂಬ ಚಾಪಲ್ಯವೂ ಅದಕ್ಕೆ ಕಾರಣಗಳಾಗಿರಬೇಕು. ಯಾರನ್ನೂ ನಿರುತ್ಸಾಹಗೊಳಿಸಬೇಕೆಂದಲ್ಲ ನನ್ನ ಇಷ್ಟ. ಆದರೆ ಸಮಯೋಚಿತವಾದ ಎಚ್ಚರಿಕೆ ಹಿತಕಾರಿಯಾಗಬಹುದೆಂದು ನನ್ನ ಹಾರೈಕೆ. ಸಾವಿರ ಪದ್ಯರಚಕರಲ್ಲಿ ಉಳಿಯುವವನು ಒಬ್ಬ ಕವಿ. ಇಪ್ಪತ್ತನೆಯ ದರ್ಜೆಯ ಕವನಗಳನ್ನು ಬರೆಯುವುದಕ್ಕಿಂತ ಎರಡನೆಯ ದರ್ಜೆಯ ಗದ್ಯವನ್ನು ಬರೆಯುವುದು ಲೇಸು. ಶಾಶ್ವತ ಯಶಸ್ಸಿನ ಕಣ್ಣಿರುವುದು ಅದ್ಯತನ ಜನಸ್ತುತಿಯಲ್ಲಲ್ಲ; ಕೃತಿಯ ಅಂತಸ್ಸತ್ವದಲ್ಲಿ. ವಾಗ್ದೇವಿಯ ಕಿರೀಟದಲ್ಲಿ ರಾರಾಜಿಸುವುದು ಕವಿತೆ ಎಂಬ ಮಣಿಯೊಂದೇ ಅಲ್ಲ. ಅನೇಕ ಇತರ ಮಣಿಗಳೂ ಇವೆ. ಕುಶಲತೆಯಿಂದ ಯಾವ ಮಣಿಯನ್ನು ನಿರ್ಮಿಸಿದರೂ ದೇವಿಯ ಸೌಂದರ್ಯವೂ ಹೆಚ್ಚುತ್ತದೆ ; ಆಕೆಗೆ ತೃಪ್ತಿಯೂ ಆಗುತ್ತದೆ.

ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೩೭–೮

೧೦೪೦

ತಾರುಣ್ಯದ ಔದಾರ್ಯಕ್ಕೆ ಒಂದು ಎಚ್ಚರಿಕೆಯನ್ನು ಸ್ನೇಹ ಪೂರ್ವಕವಾಗಿ ಸೂಚಿಸುತ್ತೇನೆ. ಸಮುದ್ರ ಜಗದ್ವ್ಯಾಪಿಯಾಗಬೇಕೆಂದು ಪ್ರಯತ್ನಿಸಿದರೆ ಅದರ ಔದಾರ್ಯ ಹಾಸ್ಯಾಸ್ಪದವಾಗುವುದಿಲ್ಲ, ವ್ಯರ್ಥವಾಗುವುದಿಲ್ಲ. ನೀರನ್ನೆ ಕಾಣದ ಅನೇಕ ಮರುಭೂಮಿಗಳು ಫಲವತ್ತಾಗುವ ಸಂಭವವೂ ಉಂಟು. ಆದರೆ ಕೊಡ ಕಡಲಿನ ಔದಾರ್ಯವನ್ನು ಅನುಕರಿಸಲು ಹೊರಟರೆ ಹುಲಿಯ ಬಣ್ಣಕ್ಕೆ ನರಿ ಮೈ ಸುಟ್ಟುಕೊಂಡಂತೆ ಹಾಸ್ಯಾಸ್ಪದವಾಗುತ್ತದೆ : ಮರುಭೂಮಿ ಫಲವತ್ತಾಗುವುದಂತಿರಲಿ, ಯಾವ ಸಸ್ಯವೂ ಅದರಿಂದ ಉದ್ಧಾರವಾಗುವುದಿಲ್ಲ. ಹಾಗೆ ಮಾಡುವುದಕ್ಕೆ

ಬದಲಾಗಿ ಮನೆಯ ಅಂಗಳದ ಗಿಡಕ್ಕಾದರು ನೀರೆರೆದರೆ ಆ ಗಿಡಕ್ಕೂ ತೃಪ್ತಿ; ಕೊಡವೂ ಕೃತಾರ್ಥವಾಗುತ್ತದೆ ; ಮನೆಯವರಿಗೂ ಪ್ರಯೋಜನವಾಗಿರುತ್ತದೆ.

ಸಾಹಿತ್ಯ ಪ್ರಚಾರ, ಕನ್ನಡ ಸಾಹಿತ್ಯ, ಪುಟ ೬೪

೧೦೪೧

ಕಲಾಸುಂದರಿಯ ಅವತಾರಗಳಲ್ಲಿ ಸರ್ವ ಶ್ರೇಷ್ಠವಾದುದೆಂದರೆ ಕವಿತೆ. ಕವಿತೆ ಇತರ ಕಲೆಗಳಿಗಿಂತಲೂ ಅತಿಶಯವಾದ ಗೌರವಕ್ಕೆ ಪಾತ್ರವಾಗಿದೆ. ಅದು ವಾಙ್ಮಯ ಶರೀರಿಯಾಗಿರುವುದರಿಂದ ರಾಗ ರಸ ಭಾವಗಳನ್ನು ಉದ್ದೀಪನಮಾಡಿ ಪವಿತ್ರಗೈಯುವಂತೆಯೆ ಮನಸ್ಸಿಗೆ ಜ್ಞಾನ ಜ್ಯೋತಿಯನ್ನು ದಾನ ಮಾಡಿ ಆತ್ಮವನ್ನು ಅತ್ಯುನ್ನತ ಸ್ಥಿತಿಗೆ ಕೊಂಡೊಯ್ಯುತ್ತದೆ. ನಮ್ಮನ್ನು ವ್ಯಕ್ತದ ಅಂಚಿಗೆ ಎಳೆದೊಯ್ದು ಅವ್ಯಕ್ತದ ಗಂಭೀರತೆಯನ್ನು ವೀಕ್ಷಿಸುವಂತೆ ಮಾಡುತ್ತದೆ. ಕವಿತೆಯಲ್ಲಿ ವೇದ ಶಾಸ್ತ್ರ ಕಾವ್ಯಗಳೆಲ್ಲ ಐಕ್ಯವಾಗಿವೆ. ಕಲ್ಪನೆ, ಭಾವ, ಆಲೋಚನೆ ಎಲ್ಲವೂ ಅದರಲ್ಲಿ ಸಮರಸವಾಗಿರಬೇಕು.

ಕಲಾಸುಂದರಿ, ಮುನ್ನುಡಿ, ಪುಟ iii

೧೦೪೨

....ನಿರಂತರ ವಿದ್ಯಾತಪಸ್ಸಿನಲ್ಲಿ ತೊಡಗಿರುವ ಶ್ರದ್ಧಾತ್ಮರು ಕಿಂಚಿತ್ ಋಷ್ಯಂಶ ಸಂಭೂತರಾಗಿರುತ್ತಾರೆ. ಅಂತಹರು ಪಡೆದ ಜ್ಞಾನಗಂಗೆ ಅವರಲ್ಲಿಯೆ ನಿಲ್ಲದೆ ಅದು ಲೋಕ ಭೂಮಿಕೆಗೆ ಹರಿದು ಸಾಗಬೇಕಾಗಿದೆ. ಮೊದಲು ಗಂಗೆಯ ಉದ್ಭವ ಅಗತ್ಯ ; ಉದ್ಭವಿಸದೆ ಹರಿಯುವುದೆಲ್ಲಿ ಬಂತು ! ಅದೇ ನಮ್ಮ ಸಂಶೋಧನಾಂಗದ ಕಾರ್ಯಕ್ಷೇತ್ರ. ಆ ಸಂಶೋಧನೆ ಬೋಧನವಾಗಿ ವಿದ್ಯಾರ್ಥಿಗಳಲ್ಲಿ ಹರಿಯಬೇಕು ; ಅದು ಬೋಧನಾಂಗ ಕಾರ್ಯ. ಮೇಲಾಗಿ ನದೀಪಾತ್ರದಿಂದ, ಗಂಗೋತ್ರಿಯಿಂದ ಬಹುದೂರಗತರಾದ ಒಳನಾಡಿನ ಜನತೆಗೆ, ಕಾಲುವೆ ಕಾಲುವೆಯ ನೀರಾಗಿ ಹರಿದು ಅವರವರ ಮನೆಯ ಬಾಗಿಲಿಗೆ ಹೋಗಬೇಕು : ಅವರ ಜೀವನ ಕ್ಷೇತ್ರವನ್ನೆಲ್ಲ ಆರ್ದ್ರಗೊಳಿಸಿ ಹುಲುಸಾಗಿ ಬೆಳೆಸಬೇಕು ; ಶಕ್ತಿವತ್ತಾಗಿ ಮಾಡಬೇಕು : ಅದೇ ನಮ್ಮ ಪ್ರಸಾರಾಂಗದ ಕಾರ್ಯ. ಈ ಜ್ಞಾನಗಂಗೆ ಹೀಗೆ ಅವಸ್ಥಾತ್ರಯಗಳನ್ನು ಪಡೆದು ಸಂಶೋಧನಾಂಗ, ಬೋಧನಾಂಗ, ಪ್ರಸಾರಂಗಗಳಾಗಿ ವ್ಯವಹರಿಸುತ್ತಾಳೆ.

ಷಷ್ಟಿನಮನ, ಮಾನಸಗಂಗೋತ್ರಿ, ಪುಟ ೬೬–೭

೧೦೪೩

ಏನಿದು ಈ ದೃಶ್ಯ ?
ರಕ್ತದ ಜಲಪಾತ !
ನರಮಾಂಸದ ನಾತ !
ಧುಮುಧುಮುಕುತಲಿದೆ ರಕ್ತದ ರಣಧುನಿ !
ಹೊರ ಹೊಮ್ಮುತ್ತಿದೆ ನರರಾರ್ತಧ್ವನಿ !

ಗಗನವು ರಕ್ತ! ಭೂಮಿಯು ರಕ್ತ!
ನೋಡಿದರೆತ್ತಲು ರಕ್ತ! ರಕ್ತ!
ಅಯ್ಯೋ ರಕ್ತ!
ಧುಮುಕುವ ಶೋಣಿತ ಗಿರಿಝರಿಯಲ್ಲಿ
ನರ ರುಂಡಗಳು
ನರ ಮುಂಡಗಳು
ಮುಂಗಾರ್ಗಾಲದ ಬಲ್ಸರಿಯಲ್ಲಿ
ಆಲಿಯ ಕಲ್ಲುಗಳುರುಳುರುಳ್ವಂತೆ
ಧುಮುಕುತಲಿರುವುವು! ಬಂಡೆಗಳಂತೆ
ಧುಢುಂ ಧುಢುಂ ಧುಡುಮ್ಮನೆ ಬಿದ್ದು
ಹಾರುತಲಿವೆ ಬಿಸಿನೆತ್ತರು, ಸದ್ದು!
ಸುಂದರಿಯರ ತಲೆ ಮಂಡೆಗಳು,
ಶ್ರೀಮಂತರ ನೆಣದುಂಡೆಗಳು,
ಪಾಪದ ದೇಹ, ಪುಣ್ಯದ ದೇಹ,
ಗುಡಿಗೋಪುರಗಳು, ಧರ್ಮದ ಗೇಹ,
ತೇಲಿ, ತೇಲಿ, ತೇಲಿ, ತೇಲಿ
ನುಗ್ಗುತಲಿವೆ ಕಸಕಡ್ಡಿಯ ಹೋಲಿ!
ಯಾರವನಲ್ಲಿ? ದೂರದಲಿ,
ಧಾವಿಸಿ ಬರುವನು ಕ್ರೌರ್ಯದಲಿ!
ಅಸ್ಥಿಪಂಜರದಶ್ವವನೇರಿ,
ಬೆಳ್ಳಗೆ ಚಿಲಿಯುವ ದಾಡೆಯ ತೋರಿ,
ಅಸ್ಥಿಪಂಜರದಾಳವನು!
ಪ್ರೇತಸ್ವರೂಪಿ ಅದಾರವನು?
ಬಲಗಡೆ ಕೈಯಲಿ ಮಿಂಚಿನ ಕತ್ತಿ!
ಎಡಗಡೆ ಕೈಯಲಿ ಸಿಡಿಲಿನ ಬುತ್ತಿ!
ಎಲುಬಿನ ಕುದುರೆ! ಎಲುಬಿನ ಆಳು!
ಇವನೆಯೆ ಕಲ್ಕಿ? ಬಡವರ ಬಾಳು?
ಮೂರ್ತಿವೆತ್ತಿಹ ಬಡವರ ಗೋಳು!
ನೋಡುತಲಿದ್ದೆ,
ಕೇಳುತಲಿದ್ದೆ!
"ಹಸಿವೆ! ದಾಹಾ!" ಎನ್ನುತ ಬಂದು,
"ರಕ್ತ! ರಕ್ತ! ರಕ್ತ!" ಎಂದು

ನೆತ್ತರು ಹೊಳೆಯಲಿ ಧುಮುಕಿದನು,
ಕುದುರೆಯೊಡನೆ ಧುಮ್ಮಿಕ್ಕಿದನು !
ಕುಡಿದನು ರಕ್ತವ ಮೊಗೆಮೊಗದು,
ತಿಂದನು ತಲೆಗಳ ತೆಗೆತೆಗೆದು !
ಎಲುಬಿನ ಕುದುರೆಯು ಕೊನೆಯುತ್ತಿತ್ತು ;
ನಾದವು ಬೊಮ್ಮವ ಬಿರಿವಂತಿತ್ತು !
ಎಲುಬಿನ ಮೂರ್ತಿಯು ಗಹಗಹಿಸಿತ್ತು ;
ಗುಡುಗಿನ ಮಾಲೆಯೆ ಮೊರಮಡುತಿತ್ತು !
ಕುದುರೆಯು ಕುಡಿದೂ, ಆಳೂ ಕುಡಿದೂ,
ತಿಂದರು ಶವಗಳ ಲರಿಲರಿ ಕಡಿದೂ !
ಬತ್ತಿತು ರಣಧುನಿ : ಇನ್ನೂ ಹಸಿವೆ !
ಬಡವರ ಗಂಟಲ ಬೇಗೆಯ ದಾಹ !
ಬಡವರ ಹೊಟ್ಟೆಯ ಬೆಂಕಿಯ ಹಸಿವೆ !
ತುಂಬದು ಹೊಟ್ಟೆ !
ತುಂಬದೊ ಹೊಟ್ಟೆ !....
ಕೆಟ್ಟೆ ! ಕೆಟ್ಟೆ !
ಅಯ್ಯೋ ಕೆಟ್ಟೇ !
ನೋಡಿದನೆನ್ನಂ ಬೆಟ್ಟದ ಮೇಲೆ !
ಬರುತಿಹನಯ್ಯೋ ! ಒಲ್ಲೇ ! ಒಲ್ಲೇ !
ನೋಡಿತಲಿದ್ದೆ !
ಕಂಪಿಸಿ ಬಿದ್ದೆ !
"ಕಲ್ಕಿ ! ಕಲ್ಕಿ" ಎನ್ನುತ ಚೀರಿ

ಪಾಂಚಜನ್ಯ, ಕಲ್ಕಿ, ಪುಟ ೬೮ರಿಂದ೭

೧೦೪೪

ತಿರುಕನಂತೆ ತಿರುಪೆ ಬೇಡಿ
ತಿರುಗುತಿದ್ದೆನು.
ಉರಿವ ಮರುಳುಗಾಡಿನಲ್ಲಿ
ಗಂಗೆ ಹುಟ್ಟಿ ಹರಿಯುವಂತೆ,
ಕಣ್ಣನಿರಿವ ಕತ್ತಲಲ್ಲಿ
ಮಿಂಚು ಮೂಡಿ ನಿಲ್ಲುವಂತೆ,
ಬಿಸಿಲಿನಿಂದ ಬೆಂದ ಎದೆಗೆ

ತಂಪುಗಾಳಿ ಬೀಸುವಂತೆ
ಬಂದೆ, ರಮಣಿಯೆ !
ನಿನ್ನ ಸಂಗದಿಂದ ತಿರುಕ
ರಾಜನಾದನು !

ಕೊಳಲು, ಕವಿತೆಗೆ, ಪುಟ ೬

೧೦೪೫

ಕನ್ನಡ ಸಾಹಿತ್ಯ ಒಂದು ಸಾವಿರ ವರ್ಷಗಳಿಂದ ಬೆಳೆದುಬಂದಿದೆ. ಅನೇಕ ಕವಿಕೃತಿಗಳಿಂದ ವೈವಿಧ್ಯ ರಮಣೀಯವಾಗಿದೆ. ಆ ಸಾಹಿತ್ಯಕ್ಷೇತ್ರದ ಸುದೀರ್ಘ ಪಥದ ವಿಪುಲ ವಿಸ್ತೀರ್ಣದಲ್ಲಿ, ಒಂದರಿಂದೊಂದಕ್ಕೆ ಸುಮಾರು ೫೦೦ ವರ್ಷಗಳ ಅಂತರದ ದೂರದಲ್ಲಿ, ಎರಡೂ ಮಹಾ ಶಿಖರಗಳು ಶೋಭಿಸುತ್ತಿವೆ, ಆಕಾಶ ಚುಂಬಿಗಳಾಗಿ. ಬೃಹತ್ತಿನಲ್ಲಿ, ಮಹತ್ತಿನಲ್ಲಿ, ಮಹೋನ್ನತಿಯಲ್ಲಿ, ಭವ್ಯತೆಯಲ್ಲಿ ಅವೆರಡೂ ಒಂದರೊಡನೊಂದು ಹೊಯ್‌ಕಯ್ಯಾಗಿ ನಿಂತಿವೆ. ಅವುಗಳ ಸುತ್ತಲೂ, ಒಂದರಿಂದೊಂದಕ್ಕೆ ತೋರಣ ಕಟ್ಟಿದಂತೆ, ಮಲೆಗಳಿವೆ, ಬೆಟ್ಟಗಳಿವೆ, ಗುಡ್ಡಗಳಿವೆ, ಬೋರೆತಿಟ್ಟುಗಳಿವೆ. ಆದರೆ ಮೇರುಮಂದರ ಸದೃಶರಾಗಿರುವ ಪಂಪ ನಾರಣಪ್ಪರಿಗೆ ಹೆಗಲೆಣೆಯಾಗುವವರು ಅವರಲ್ಲಿ ಯಾರೊಬ್ಬರೂ ಇಲ್ಲ.

ವಿಭೂತಿ ಪೂಜೆ, ಕಲಿಯದವರಿಗೂ ಕಾಮಧೇನು, ಪುಟ ೧೫

೧೦೪೬

ನನ್ನ ಕವಿತೆಯು 'ನನ್ನ ಕವಿತೆ'
ನನ್ನವಳೆ ಎಂದೆಂದಿಗೂ !
ನನ್ನ ಕವಿತೆಯ ನೀನು ಕಾಣೆ ;
ದೇವರಾಣೆಗು ನೀನು ಕಾಣೆ :
ನನ್ನವಳೆ ಅವಳೆಂದಿಗೂ !

ಕಲಾಸುಂದರಿ, ನನ್ನ ಕವಿತೆ, ಪುಟ ೧೨

೧೦೪೭

ನನ್ನಾಸೆ ನಿನ್ನಿಚ್ಛೆಯಪ್ಪನ್ನೆಗಂ
ಸಲ್ಲದಿರಲಿ ;
ನನ್ನ ಸಾಹಸ ನಿನ್ನದಪ್ಪನ್ನೆಗಂ
ಗೆಲ್ಲದಿರಲಿ.
ಗೆಲ್ ಅಹಂಕಾರವನೆ ಬಲಿವನ್ನೆಗಂ
ಸೋಲೆ ಬರಲಿ ;
ಸುಖ ನಿನ್ನ ಮರೆವಂತೆ ಮಾಳ್ಪನ್ನೆಗಂ
ದುಃಖವಿರಲಿ.

ನನ್ನಿಷ್ಟದಿಷ್ಟ ನೀನಪ್ಪನ್ನೆಗಂ
ಕಷ್ಟಬರಲಿ ;
ಲಾಭ ಗುರುಲಾಭ ನೀನಪ್ಪನ್ನೆಗಂ
ನಷ್ಟ ಬರಲಿ !

ಅಗ್ನಿಹಂಸ, ನಿನ್ನಿಚ್ಛೆಯಪ್ಪನ್ನೆಗಂ, ಪುಟ ೮೧

೧೦೪೮

ಕಾವ್ಯಕ್ಕೂ ಅಲಂಕಾರಗಳಿಗೂ ಇರುವ ಪ್ರಣಯವು ಚಿತ್ರಕಲೆಗೂ ವರ್ಣಗಳಿಗೂ ಇರುವ ಪರಸ್ಪರಾನುರಾಗದಂತೆ ಚಿರಸಂಯುತವಾದುದು. ವರ್ಣ ಶಿಲ್ಪಿಯ ಭಾವಪ್ರಕಾಶನಕ್ಕೆ ಬಣ್ಣಗಳ ಸಹಕಾರ ಸ್ನೇಹಗಳು ಎಷ್ಟರಮಟ್ಟಿಗೆ ಆವಶ್ಯಕವೊ ಹಾಗೆಯೆ ಕವಿಯ ಆತ್ಮದ ಸುರಚಿರಾನುಭವಗಳ ಸುಂದರಾವಿರ್ಭಾವಕ್ಕೆ ಅಲಂಕಾರಗಳು ಆವಶ್ಯಕ. ಒಂದೇ ಮಾತಿನಲ್ಲಿ ಹೇಳುವುದಾದರೆ ಕಾವ್ಯವೆಂಬುದೆಲ್ಲ ಅಲಂಕೃತಾನುಭವ ಎಂದು ಹೇಳಬಹುದು.

ಇತ್ಯಾದಿ, ಉಪಮಾಲೋಲ ಲಕ್ಷ್ಮೀಶ, ಪುಟ ೧೭

೧೦೪೯

ಜೀವನ ವೃಕ್ಷದ ಕುಸುಮ ಸದೃಶವಾದ ಸಾಹಿತ್ಯ ಸರ್ವಗ್ರಾಸಿಯಾಗಿರಬೇಕು. ಕವಿಯ ದರ್ಶನ ಭೂಮವಾಗಿರಬೇಕು. ಇಲ್ಲದಿದ್ದರೆ ಶಾಂತಿಯಿಲ್ಲ.

ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೩೧

೧೦೫೦

ಬುದ್ಧಿ ತಣಿವನ್ನೆಗಂ ಸಿದ್ಧಿ ತಾಂ
ಸಂದಿಗ್ಧಮೈಸೆ ? ಮತಿಯನುಮತಿಯೆ ಸಾಧನೆಗೆ
ಅಗ್ನಿಸೋಪಾನಂ : ಆ ಜ್ಞಾನದಿಂ ಮೇಲಲ್ತೆ, ಪೇಳ್,
ದಿವ್ಯ ವಿಜ್ಞಾನ !

ಅಗ್ನಿಹಂಸ, ಶ್ರೀ ಅರವಿಂದರಿಗೆ, ಪುಟ ೮೯

೧೦೫೧

ಭಗವಂತನ ಐಶ್ವರ್ಯ ಮಾತ್ರದಿಂದ ಮೋಹಿತವಾದ ಭಕ್ತಿ ಉತ್ತಮ ಭಕ್ತಿಯಲ್ಲ. ಉತ್ತಮ ಭಕ್ತಿ ಅಹೇತುಕವಾದುದು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೪೦

೧೦೫೨

ಕವಿಯಾದರೋ ಸಚ್ಚಿದಾನಂದದ ಸತ್ಯ ಮತ್ತು ಶಿವಾಂಶಗಳನ್ನೂ ಸೌಂದರ್ಯ ಮುಖದಿಂದಲೇ ಆಸ್ವಾದಿಸಿ, ಸತ್ಯದ ಮತ್ತು ಶಿವದ ಅಮೃತಮಯ ಪುಷ್ಟಿಶಕ್ತಿಗಳನ್ನು ಸೌಂದರ್ಯದ ಕೆಚ್ಚಲಿನಿಂದಲೇ ರಸರೂಪದಲ್ಲಿ ಕರೆದು ಸ್ವಾದುಗೊಳಿಸಿ ನೀಡುವುದರಿಂದ ಸಾಧಾರಣವಾದ ಬಾಲಚೇತನಗಳಿಗೂ ಸುಲಭನೂ ಪ್ರಿಯನೂ ಮಧುಪ್ರಾಯನೂ

ಆಗುತ್ತಾನೆ. ಅಲ್ಲದೆ ತನ್ನಲ್ಲಿ ಭಾವಚರವಾಗುವ ನಿತ್ಯಸತ್ಯ ಮತ್ತು ಶಿವಶಕ್ತಿಗಳನ್ನು ರಸಾನುಭವವಾಗಿ ಪರಿವರ್ತಿಸಿ ಸಾಮಾನ್ಯರಿಗೆ ಆ ಅನುಭವವನ್ನು ದಾನಮಾಡಲು ಕವಿ ಕೈಕೊಳ್ಳುವ ವಿಧಾನಗಳೂ ಅವನ ಲೋಕಪ್ರಿಯತೆಗೆ ಬಹುಮಟ್ಟಿಗೆ ಕಾರಣಗಳಾಗಿವೆ. ಅಮರ್ತ್ಯ ಚೇತನಗಳಿಗೂ ಮರ್ತ್ಯಚೇತನಗಳಿಗೂ ಮಧ್ಯೆ ಕವಿಯ ಚೇತನ ರಸಸೇತುವೆಯಾಗಿ ಕಾಮನಬಿಲ್ಲಿನಂತೆ ಚೇತೋಹಾರಿಯಾಗಿ ವಂಕಿಮ ವಾಗಿ ನಿಲ್ಲುವುದರಿಂದ ಕವಿರೂಪದಲ್ಲಿ ಆವಿರ್ಭವಿಸುವ ಭಗವದ್‌ವಿಭೂತಿ ಲೋಕೋತ್ತರವೂ ಲೋಕಪ್ರಿಯವೂ ಲೋಕೋದ್ಧಾರಕವೂ ಆಗಿ ಜಗದ್ವಂದ್ಯವಾಗಿದೆ.

ವಿಭೂತಿ ಪೂಜೆ, ಕವಿಯಲ್ಲಿ ವಿಭೂತಿ, ಪುಟ ೫–೬

೧೦೫೩

ಆಳುವವರ ಬಲವೂ ಒಲವೂ ಇದ್ದರಲ್ಲವೆ ಮಂತ್ರಿ
ಕೆಲಸ ಮಾಡಬಲ್ಲನು ?

ರಕ್ತಾಕ್ಷಿ, ಪಾತ್ರ ಲಿಂಗಣ್ಣ, ಪುಟ ೧೬

೧೦೫೪

ಸ್ವಹಿತಕ್ಕೆ
ಪುಣ್ಯವರ್ಣಂ ಬಳಿದ, ಧರ್ಮನಾಮವನಿತ್ತು,
ತನ್ನ ಪಕ್ಷಕೆ ಲೋಕದನುಕಂಪಮಂ ಸೆಳೆದು,
ಬಲ ಸಂಗ್ರಹಂಗೈದು ಶತ್ರುವೈನಾಶ್ಯಮಂ
ಸಾಧಿಪ್ಪುದಲ್ತೆ ಪದ್ಧತಿ ರಾಜತಂತ್ರಕ್ಕೆ ?

ಶ್ರೀ ರಾಮಾಯಣ ದರ್ಶನಂ, ಸಫಲಮಾಯ್ತಾ ರಾಯಭಾರಂ, ಪಾತ್ರ ವಿಭೀಷಣ, ಪುಟ ೧೭

೧೦೫೫

ಕವಿಯ ಹೃದಯ ಜ್ವಾಲಾಮುಖಿ ;
ಪ್ರೇಮವದರ ಉದರ ಶಿಖಿ.

ಪ್ರೇಮಕಾಶ್ಮೀರ, ಕವಿಯ ಪ್ರೇಮ, ಪುಟ ೬೧

೧೦೫೬

ಮಾನವನಿಗೆ ಅಭ್ಯುದಯ, ಶ್ರೇಯಸ್ಸು ಎರಡೂ ಬೇಕು. ಹೊಟ್ಟೆ ಹಸಿದಾಗ ಸಂಗೀತ ಏಕೆ ? ಪ್ರಾಣಮಯಕೋಶದ ಅಭ್ಯುದಯಕ್ಕಾಗಿ ದುಡಿಯಬೇಕು, ನಿಜ. ಆದರೆ ಅದೇ ಸರ್ವಸ್ವವಲ್ಲ. ಅದು ಶ್ರೇಯಸ್ಸನ್ನು ಮರೆಸಬಾರದು. ಅಭ್ಯುದಯ ಸಾಧನೆಗೆ ವಿಜ್ಞಾನ, ಶ್ರೇಯಸ್ಸಿನ ಸಾಧನೆಗೆ ಕಲೆ ನೆರವಾಗುತ್ತವೆ. ಇವೆರಡರ ಸಾಧನೆಗೆ ಪೂರ್ವಭಾವಿಯಾಗಿ ವಿದ್ಯಾರ್ಜನೆ ಆವಶ್ಯಕ. ಕೇವಲ ಪುಸ್ತಕ ಕ್ರಿಮಿಯಾಗುವುದೂ ಸರಿಯಲ್ಲ. ಓದಿದುದನ್ನು ಅನುಷ್ಠಾನದಲ್ಲಿ ತರಬೇಕು.

ಷಷ್ಟಿನಮನ, ವಿದ್ಯಾರ್ಥಿ ಜೀವನವೂ ಒಂದು ತಪಸ್ಸೆ, ಪುಟ ೨೦೪–೫

೧೦೫೭

ಶೈಶವ, ಯೌವನ, ಜರಾ ಬರುವಂತೆ ವೈಸ್‌ಚಾನ್ಸಲರ್ ಪದವಿ ಎಂಬುದೂ ಬಂದು ಹೋಗತಕ್ಕ ವಿಷಯ. ಆದುದರಿಂದ ಹೀಗೆ ಕ್ಷಣಿಕವಾಗಿ, ಕ್ಷಣಭಂಗುರವಾಗಿ ಬಂದು ಹೋಗುವಂಥ ವಿಷಯಗಳನ್ನೆ ನಿತ್ಯಸತ್ಯವೆಂದು ಹಿಡಿದುಕೊಂಡು, ಯಾವುದು ಶಾಶ್ವತವೊ, ಸದಾ ಇರುತ್ತದೆಯೊ ಅದನ್ನು ಮರೆತರೆ ನಿವೃತ್ತನಾದ ಮೇಲೆ ರೈಲೆ ಕಂಬಿಯನ್ನೊ ಮರದ ಕೊಂಬೆಯನ್ನೊ ಆಶ್ರಯಿಸಬೇಕಾಗಿ ಬಂದೀತು.

ಷಷ್ಟಿನಮನ, ಭಾರತ ವಿಶ್ವವಿದ್ಯಾನಿಲಯಗಳಲ್ಲಿ ಆಧುನಿಕ ಮನಃಶಾಸ್ತ್ರ, ಪುಟ ೧೨೯

೧೦೫೮

ಕಾರ್ಖಾನೆಗಳು, ವೈಜ್ಞಾನಿಕ ತಾಂತ್ರಿಕ ಸಂಸ್ಥೆಗಳು, ಸಂಶೋಧನಾಲಯಗಳು ಇವುಗಳಷ್ಟರಿಂದಲೆ ವಿಜ್ಞಾನ ಸಿದ್ಧಿಸುವುದಿಲ್ಲ. ಲೌಕಿಕ ಅಭ್ಯುದಯಗಳ ಸಾಧನೆಯಿಂದಲೇ ವೈಜ್ಞಾನಿಕ ದೃಷ್ಟಿ ಬೆಳೆದಂತಾಗುವುದಿಲ್ಲ. ವಿಚಾರ ಮತ್ತು ವಿಜ್ಞಾನಗಳು ಮನೋಬುದ್ಧಿಗಳನ್ನು ಸಂಪೂರ್ಣವಾಗಿ ಪ್ರವೇಶಿಸಿ ಪರಿವರ್ತಿಸಿದಾಗಲೆ ವೈಜ್ಞಾನಿಕ ದೃಷ್ಟಿಗೆ ಅರ್ಥ ಬರುವುದು. ಶತಶತಮಾನಗಳಿಂದ ನಮ್ಮಲ್ಲಿ ಬೆಳೆದು ಬಂದಿರುವ ಜಾತಿ ಮತ ಆಚಾರ ಸಂಪ್ರದಾಯಗಳ ಹೆಸರಿನಲ್ಲಿ ನಡೆಯುತ್ತಿರುವ ಮೌಢ್ಯಮೂಲವಾದ ಅವೈಜ್ಞಾನಿಕ ಘಟನೆಗಳು ನಮ್ಮ ಪ್ರಗತಿಗೆ ಕಂಟಕಪ್ರಾಯವಾಗಿವೆ. ಆದಷ್ಟು ಬೇಗ ನಾವು ಇವುಗಳಿಂದ ಪಾರಾಗಬೇಕು. ಇದು ವೈಜ್ಞಾನಿಕ ದೃಷ್ಟಿ, ವಿಚಾರ ಬುದ್ಧಿಗಳಿಂದ ಮಾತ್ರ ಸಾಧ್ಯವೆ ಹೊರತು ಲೌಕಿಕ ಪ್ರಯೋಜನಕಾರಿಯಾದ ವಿಜ್ಞಾನ ವಿದ್ಯೆ ಮತ್ತು ಯಂತ್ರವಿದ್ಯೆಗಳಷ್ಟರಿಂದಲೆ ನಡೆಯುತ್ತದೆಂದು ಭಾವಿಸುವುದು ತಪ್ಪಾಗುತ್ತದೆ.

ಮನುಜಮತ ವಿಶ್ವಪಥ, ಕನ್ನಡ ನಾಡಿನ ರಾಜಧಾನಿಯಲ್ಲಿ, ಪುಟ ೫೨

೧೦೫೯

ಕಡಲೆ, ನಿನ್ನ ಮೈಮೆ ಎನ್ನ
ಬಾಳಿಗಾಗಲಿ !
ನಿನ್ನ ಬಿತ್ತರೆನಗೆ ಬರಲಿ !
ನಿನ್ನ ಚಿತ್ತವೆನೊಳಿರಲಿ !

ಕೊಳಲು, ಕಾಣದ ಕಡಲಿಗೆ, ಪುಟ ೨೭

೧೦೬೦

ಪರಿಣಾಮ ರಮಣೀಯತೆಯಲ್ಲದೆ ಅವಯವ ಸಾದೃಶ್ಯವಲ್ಲ ಉಪಮೆಯ ಗುರಿ !

ಇತ್ಯಾದಿ, ಉಪಮಾಲೋಲ ಲಕ್ಷ್ಮೀಶ, ಪುಟ ೩೩

೧೦೬೧

ಎಂತಹ ಗಾಯವೂ ಕಾಲಾಂತರದಲ್ಲಿ ಗುಣ ಹೊಂದುತ್ತದೆ. ಎಂತಹ ದುಃಖವನ್ನೂ ಕಾಲ ಮಾಸಿಬಿಡುತ್ತದೆ.

ಕಾನೂರು ಹೆಗ್ಗಡಿತಿ, ಪುಟ ೪೩೨

೧೦೬೨

ಶ್ರೀ ರಾಮಕೃಷ್ಣ ಮಹಾಸಂಘವೂ ಜಗತ್ತಿಗೆ ಆವಶ್ಯಕವಾಗಿರುವವರೆಗೆ ಬಾಳಿ ಆಮೇಲೆ ಕಾಲದ ಕಾಣದ ತಿಮಿರದಲ್ಲಿ ಲೀನವಾಗಬಹುದು. ಆದರೆ ಶ್ರೀ ರಾಮಕೃಷ್ಣ ವಿವೇಕಾನಂದರು ಸರ್ವಕಾಲವೂ ಪ್ರಜ್ವಲಿಸುವ ವಿಶ್ವಜ್ಯೋತಿಗಳಾಗಿರುತ್ತಾರೆ.

ಸ್ವಾಮಿ ವಿವೇಕಾನಂದ, ಪುಟ ೨೭೭

೧೦೬೩

ಸುವಾಸನೆಗಿಂತಲೂ ದುರ್ವಾಸನೆ ಬೇಗ ಹಬ್ಬುತ್ತದೆ; ಬೇಗ ಮೂಗಿಗೆ ಬೀಳುತ್ತದೆ; ಅನೇಕರಿಗೆ ಬೇಗ ಗೊತ್ತಾಗುತ್ತದೆ. ಸತ್ಕೀರ್ತಿ ಹಬ್ಬುವುದು ನಿಧಾನ; ದುಷ್ಕೀರ್ತಿ ಕಾಡುಕಿಚ್ಚಿನಂತೆ ಹರಡಿಕೊಳ್ಳುತ್ತದೆ.

ಮಲೆಗಳಲ್ಲಿ ಮದುಮಗಳು, ಪುಟ ೧೧

೧೦೬೪

ನನ್ನೊಲ್ಮೆ ಇದೊ ನಿನಗೆ.
ನಿನ್ನ ಋಷಿ ಜೀವನಕೆ–ನಿನ್ನ ನಿರ್ಮಲ ನೀತಿ,
ಜನರೊಲ್ಮೆ, ಶಾಂತಿ, ಕನಿಕರ, ದಯೆಗೆ–ಎಣೆಯಿಲ್ಲ.

ಕೃತ್ತಿಕೆ, ವರ್ಡ್ಸ್‌ವರ್ತ್, ಪುಟ ೫೩

೧೦೬೫

ಪ್ರಶಂಸೆ, ಪೂಜೆ, ಆರಾಧನೆ, ಉಪಾಸನೆ ಈ ಪದಗಳು ನಮ್ಮ ಮನಸ್ಸಿನ ಅಥವಾ ಬುದ್ಧಿಯ ಯಾವ ವ್ಯಾಪಾರಗಳನ್ನು ವರ್ಣಿಸುತ್ತವೆ ಎಂಬುದನ್ನು ಪರಿಶೀಲಿಸಿದರೆ ನಮ್ಮ ಚೇತನದ ಅತಿ ನಿಗೂಢವಾದ ಎರಡು ಪ್ರಧಾನ ಲಕ್ಷಗಳು ಗೋಚರವಾಗುತ್ತವೆ. ಒಂದು ಅದರ ಊರ್ಧ್ವಮುಖತೆ. ಮತ್ತೊಂದು ಅದರ ಊರ್ಧ್ವಯಾತ್ರೆ. ಅನ್ಯರಲ್ಲಿದ್ದು ಸದ್ಯಕ್ಕೆ ತನಗಿಲ್ಲದ ಆದರೂ ಪಡೆಯಲಾಶಿಸುವ ಮನೋಧರ್ಮ ಪ್ರಶಂಸೆಯ ರೂಪದಲ್ಲಿ ಮೊದಲು ಮೈದೋರುತ್ತದೆ. ಇಂದು ತಾನಾಗಿಲ್ಲದಿದ್ದರೂ ಮುಂದೆ ತಾನಾಗಲೆಬೇಕೆಂಬ ಎದೆ ಹಂಬಲ ತೀವ್ರವಾದಂತೆಲ್ಲ ಆ ಪ್ರಶಂಸೆ ಪೂಜಾ ರೂಪಕ್ಕೆ ತಿರುಗುತ್ತದೆ. ಪೂಜಾವಸ್ತು ಆದರ್ಶವಾಗಿ ಪರಿಣಮಿಸುತ್ತದೆ. ತನ್ನ ಆಕಾಂಕ್ಷೆಯ ಆತ್ಮಶ್ರೀಯನ್ನು ಪಡೆದಿರುವ ಆ ವ್ಯಕ್ತಿ ಪೂಜ್ಯನಾಗುತ್ತಾನೆ. ಬರಿಯ ಊರ್ಧ್ವಮುಖ ವಾಗಿರುವ ಆಕಾಂಕ್ಷೆ ಸಾಧನೆಯ ರೂಪಕ್ಕೆ ತಿರುಗಿ ಊರ್ಧ್ವಯಾತ್ರಾ ರೂಪಿಯಾದೊಡನೆ ಪೂಜೆ ಆರಾಧನೆಯಾಗುತ್ತದೆ. ಆರಾಧನಾ ಭಾವನೆ ಉಜ್ವಲವಾಗಿ ತಪಸ್ಯಾ ರೂಪಕ್ಕೆ ತಿರುಗಿದರೆ ಉಪಾಸನೆಯಾಗುತ್ತೆ. ಉಪಾಸನೆ ತುತ್ತತುದಿಗೆ ತಲ್ಲೀನತಾರೂಪದ ಸಾಕ್ಷಾತ್ಕಾರದಲ್ಲಿ ಪರ್ಯವಸಾನ ಹೊಂದುತ್ತದೆ. ಆಗ ಸಾಧಕನಿಗೆ ಸಿದ್ಧಿಯಾಯಿತೆಂದು ಹೇಳುತ್ತೇವೆ. ಸಿದ್ಧಿಯೆಂದರೆ ನಿಸ್ತರಂಗವಾದ ನಿರಪೇಕ್ಷಕವಾದ ಪೂರ್ಣತಾ ವಿಶಾಂತ್ರಿ, ತಾದಾತ್ಮ್ಯ, ಶಾಂತಿ.

ವಿಭೂತಿ ಪೂಜೆ, ಕವಿಯಲ್ಲಿ ವಿಭೂತಿ, ಪುಟ ೧

೧೦೬೬

ಶೋಕವಿರುವುದು ಪ್ರದರ್ಶನಕ್ಕಾಗಿಯೆ ?

ನನ್ನ ದೇವರು ಮತ್ತು ಇತರ ಕಥೆಗಳು, ನನ್ನ ದೇವರು, ಪಾತ್ರ ಭಾವ, ಪುಟ ೭

೧೦೬೭

ಮದಮತ್ತರ ಪಾಶ್ಚಾತ್ಯರ
ಎದೆಗೊಬ್ಬಿಸ ನೆಣಸೊಕ್ಕು
ಹೊತ್ತುತ್ತಿಹುದದರಿಂದಲೆ
ಧಗಿಸಿದೆ ಪಶ್ಚಿಮ ದಿಕ್ಕು !

ಅಗ್ನಿಹಂಸ, ಶತಮಾನ ಸಂಧ್ಯೆ, ಪುಟ ೮೪–೫

೧೦೬೮

ಯಾವಾತನು ಪರಮಾತ್ಮನೆಂದು ಕರೆಯಲ್ಪಡುವ ಆ ಮಹಾ ಜಗದಾದಿ ಚೈತನ್ಯದ ಸಾನ್ನಿಧ್ಯದಲ್ಲಿ ನೆಲಸಿ, ಆ ದಿವ್ಯತತ್ತ್ವದ ಶಕ್ತಿಯನ್ನು ಪಡೆದು, ಹರಿಯುವ ಜೀವರನ್ನು ಹಾರುವಂತೆ ಮಾಡಿ ಅವರಿಗೆ ತನ್ನ ಅಮರಗಾನದಿಂದ ಆತ್ಮಾನಂದ ವನ್ನು ದಾನಮಾಡುವನೊ ಆತನೆ ನಿಜವಾದ ಕವಿಗುರು.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೧೩

೧೦೬೯

ಯಾವುದು ಉಪನಿಷತ್ತು ಗೀತೆಗಳಲ್ಲಿ ಪ್ರಚುರವಾಗಿ ಬಂದಿತೊ ಆ ದರ್ಶನ ಶ್ರೀ ಅರವಿಂದರ ಪೂರ್ಣಯೋಗದಲ್ಲಿ ವೈಜ್ಞಾನಿಕವಾಗಿ ಒಂದು ಹೆಜ್ಜೆ ಮುಂದು ವರಿದು ಅವರ ಕೃತಿಗಳಲ್ಲಿ ಪ್ರಣೀತವಾಗಿದೆ. ಅವರ ದರ್ಶನದ ಬಾಹು ಐಹಿಕ ಪಾರಲೌಕಿಕ ಗಳೆರಡನ್ನೂ ಆಲಿಂಗಿಸಿದೆ.

ಷಷ್ಠಿನಮನ, ಶ್ರೀ ಅರವಿಂದರ ಕಾವ್ಯ ದರ್ಶನ, ಪುಟ ೧೮೪

೧೦೭೦

ನಾಕ ನರಕಗಳೆಲ್ಲ
ಪಾಪ ಪುಣ್ಯಗಳೆಲ್ಲ
ನಮ್ಮಾಶೆ ಭಯಗಳಲಿ ನಿಂತಿಹವು ತಮಗಿರದ ಕಾಲನೂರಿ !

ಪಾಂಚಜನ್ಯ, ಮಲ್ಲಗೀತೆ, ಪುಟ ೪೩

೧೦೭೧

ಪ್ರತಿ ಕವಿಯನ್ನೂ ಸ್ವಲ್ಪಮಟ್ಟಿಗೆ ಅವನ ಹಿನ್ನೆಲೆಯಲ್ಲಿಯೆ ನೋಡಿ ಬೆಲೆ ಕಟ್ಟಬೇಕು.

ವಿಚಾರ ಕ್ರಾಂತಿಗೆ ಆಹ್ವಾನ, ಸಾಹಿತ್ಯ ಚರಿತ್ರಕಾರರಿಗೆ ಸಲಹೆಗಳು, ಪುಟ ೪೬

೧೦೭೨

ಭಗವಂತನು ತನ್ನ ನಿಯಮಗಳನ್ನು ತಾನೇ ಉಲ್ಲಂಘಿಸುವುದಿಲ್ಲ. ತನ್ನ ಮನೆಗಾದರೂ ಅಕ್ರಮ ಪ್ರವೇಶ ಮಾಡುವುದು ಸೌಜನ್ಯದ ಚಿಹ್ನೆಯಲ್ಲ. ಲೋಕಾನು

ಗ್ರಹ ಮಾಡುವ ಮಾರ್ಗದರ್ಶಿಗಂತೂ ಅದು ಸ್ವಲ್ಪವೂ ಒಪ್ಪುವುದಿಲ್ಲ. ಒಂದು ವೇಳೆ ನಿಯಮೋಲ್ಲಂಘನೆಗೆ ನಮಗೆ ಅವಕಾಶವೀಯದೆ ತಾನೊಬ್ಬನೇ ಹಾಗೆ ಮಾಡಿದರೆ ಅದರಿಂದ ನಮಗೆ ಪ್ರಯೋಜನವೂ ಇಲ್ಲ; ಧರ್ಮ ಜೀವನದಲ್ಲಿ ಅದು ನಮ್ಮ ಲಕ್ಷ್ಯಕ್ಕೆ ಯೋಗ್ಯವೂ ಅಲ್ಲ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೪೧

೧೦೭೩

ಶ್ರೀ ವಿನೋಬಾ ಸ್ಥಿತಪ್ರಜ್ಞನಂತೆ ವರ್ತಿಸುತ್ತಾರೆ. ಲೋಕಸಂಗ್ರಹ ಕಾರ್ಯದಲ್ಲಿ ನಿರಂತರವಾಗಿ ತೊಡಗಿದ್ದರೂ ನಿಸ್ಸಂಗರಾಗಿದ್ದಾರೆ. ಸರ್ವೋದಯದ ಕಾರ್ಯ ಬೇಗನೆ ಫಲಕಾರಿಯಾಗಬೇಕೆಂದು ದುಡಿಯುತ್ತಿದ್ದರೂ ಅವರು ಫಲಾಸಕ್ತಿಯಿಂದ ಬದ್ಧ ಜೀವಿಯಾಗಿಲ್ಲ. ಅವರು ಅನಾಸಕ್ತಿಯೆ ಮೈವೆತ್ತಂತಿದ್ದಾರೆ, ಮುಕ್ತರಾಗಿದ್ದಾರೆ. ಅವರಿಗಿರುವ ಒಡಲೂ ಲೋಕ ದಾಕ್ಷಿಣ್ಯಕ್ಕಾಗಿ ನೆವಮಾತ್ರಕ್ಕಿರುವಂತೆ ತೋರುತ್ತದೆ. ಅವರು ನೆಲದ ಮೇಲೆ ನಡೆಯುತ್ತಿದ್ದರೂ ಬಾನಿನಲ್ಲಿ ತೇಲುವಂತೆ ತೋರುತ್ತಾರೆ. ಅವರ ಪಾದಯಾತ್ರೆಗೆ ಪ್ರತಿದಿನವೂ ಒಂದೊಂದು ಊರು ಗುರಿಯಾಗಿದ್ದರೂ ಅನಿಕೇತನರಾಗಿರುವ ಅವರು ಗುರಿಯೆ ಇಲ್ಲದೆ ಅಥವಾ ಯಾವ ಗುರಿಯಲ್ಲಿಯೂ ನಿಲ್ಲದೆ ಚಲಿಸುತ್ತಿರುವಂತೆ ತೋರುತ್ತದೆ. ಅಸಾಧಾರಣ ದೇವವಿನಯದಿಂದ ತಮ್ಮ ನೂತನ ಪರಿಚಯದ ವ್ಯಕ್ತಿಯನ್ನು ಸಂಭಾವಿಸಿದರೂ ಪ್ರತ್ಯೇಕ ನಾಮರೂಪದ ಯಾವೊಬ್ಬ ವ್ಯಕ್ತಿಯೂ ಅವರ ಲಕ್ಷ್ಯವಾಗಿರುವಂತೆ ತೋರುವುದಿಲ್ಲ. ಜನಜಂಗುಳಿಯ ನಡುವೆ ಯಿದ್ದರೂ ಅವರು ಏಕಾಂಗಿ. ಅವರ ಜಯಘೋಷ 'ಜಯ್ ಜಗತ್!'

ಷಷ್ಟಿನಮನ, ಶ್ರೀ ವಿನೋಬಾಜಿ, ಪುಟ ೧೫೨

೧೦೭೪

ಸ್ವತಂತ್ರಿ ಎಂಬುವ ಹೆಮ್ಮೆ
ಈ ಜನ್ಮದಲ್ಲಿ ನನಗೆ ಲಭಿಸಿದರೆ, ಮತ್ತೆನ್ನ
ಮರುವುಟ್ಟಿನಲ್ಲಾದೊಡಂ ಪೆತ್ತು ಈ ನಿನ್ನ
ಕಂದನ ಬಯಕೆಯಂ ಸಲಿಸಿ, ದೇವಿ, ಕೃಪೆದೋರು!
ಹುಟ್ಟಿಸೆನ್ನಂ ಮರಳಿ ಮರಳಿ,

ಕೃತ್ತಿಕೆ, ದೇಶಭಕ್ತನ ಬಯಕೆ, ಪುಟ ೬೧

೧೦೭೫

ನಮ್ಮದೇಶ ಏನಿದ್ದರೂ ನಮ್ಮ ಪೂರ್ವಿಕರು ಹಾಗಿದ್ದರು ಹೀಗಿದ್ದರು ಅಂತ ಹೇಳುತ್ತಿದ್ದಿರಲ್ಲ, ಅಂಥ ಪೂರ್ವಿಕರು, ನಮಗಿಂತಲೂ ಶುದ್ಧ ಶುಂಠರಾಗಿದ್ದರು ಎಂಬು ದನ್ನು ತಿಳಿಸಬೇಕಾಗುತ್ತದೆ. ಈಗ ರಾಮಾಯಣ ಮಹಾಭಾರತದಲ್ಲೇನೆ ಇಂತಹದು ಬೇಕಾದಷ್ಟು ಸಿಕ್ಕುತ್ತದೆ. ಅಲ್ಲಿ ಸಿಕ್ಕದೆ ಇರುವುದೂ ಬೇಕಾದಷ್ಟು ಬೇರೆ ಇದೆ. ನಮ ಗಿಂತಲೂ ಅವರು ಮೇಲ್ಮಟ್ಟದಲ್ಲಿರಲಿಲ್ಲ; ಖಂಡಿತ ಇರಲಿಲ್ಲ, ಅದರಲ್ಲೂ ಈಚೆಗೆ

ವಿಜ್ಞಾನ ದೃಷ್ಟಿ ವೈಚಾರಿಕತೆ ಇವೆಲ್ಲಾ ಬಂದಮೇಲೆ ಇದನ್ನೆಲ್ಲಾ ತಿಳಿದಂತಹ ಯುವಕರಿದ್ದಾರಲ್ಲ, ಅವರು ಆ ಹಿಂದಿನವರಿಗಿಂತಲೂ ಸಾವಿರ ಪಾಲು ಮೇಲ್ಮಟ್ಟದಲ್ಲಿದ್ದಾರೆ.

ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಅದೇ ಹೆಸರಿನ ಲೇಖನ, ಪುಟ ೩೨

೧೦೭೬

ತಕ್ಕಮಟ್ಟಿಗೆ ಬಹಿಃಸ್ವಾತಂತ್ರ್ಯವನ್ನೇನೊ ಸಾಧಿಸಿಕೊಂಡಿದ್ದೇವೆ. ಆದರೆ ಅಂತಃ ಸ್ವಾತಂತ್ರ್ಯದ ವಿಚಾರದಲ್ಲಿ ನವು ಸಿದ್ಧಿಸಿಕೊಳ್ಳಬೇಕಾದುದು ಬಹಳ ಇದೆ.

ಮನಜಮತ ವಿಶ್ವಪಥ, ಕದನಕ್ಕೆ ಸಜ್ಜು, ಪುಟ ೫೪

೧೦೭೭

ಕೊಡಗದು ಹಿರಿಮಲೆಗಳ ಸಿರಿನಾಡು ;
ಮೇಲಾಕಾಶವು, ಕೆಳಗಡೆ ಕಾಡು !
ಅಂತೆಯೆ ಇರುವುದು ನನ್ನಾ ಬೀಡು, ನಚ್ಚಿನ ಮಲೆನಾಡು !

ಷೋಡಶಿ, ಪೂವಮ್ಮ, ಪುಟ ೫೯

೧೦೭೮

ಪರದೇಶದೊಳ್ ಪರಿಚಿತರ್
ಕಾಣಲೊಡಮಳಿದಾಸೆ ತಾನುಸಿರೆಳೆದು ಮರುವುಟ್ಟು
ಪಡೆಯದೇನಾರ್ಗಾದೊಡಂ ?

ಶ್ರೀ ರಾಮಾಯಣ ದರ್ಶನಂ, ಸಂಸ್ಕೃತಿ ಲಂಕಾ, ಪುಟ ೩೩೯

೧೦೭೯

ನೆಮ್ಮದಿ ಎಂಬುದು ಬಹಿರ್ಭೂತ ವಸ್ತುವಲ್ಲ, ಅಂತರ್ನಿಹಿತ ಸಂಪತ್ತು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೬

೧೦೮೦

ಧರ್ಮಕ್ಕೆ ಬೇರೆ ಭೀತಿಯೆ ಸಲ್ಲದೈ

ಪಕ್ಷಿಕಾಶಿ, ಹೋಗುವೆನು ನಾ, ಪುಟ ೪೪

೧೦೮೧

ಕವಿಗೂ ಅವರೋಹಣಕ್ಕೆ ಮೊದಲು ಆರೋಹಣವುಂಟು. ಜನ್ನವೆತ್ತಿದಮೊದಲುಗೊಂಡು ಸುತ್ತಣ ಜನರಿಂದ, ಸನ್ನಿವೇಶಗಳಿಂದ, ಘಟನಾ ಪರಂಪರೆಗಳಿಂದ, ಪ್ರಕೃತಿಯಿಂದ, ಪುಸ್ತಕಗಳಿಂದ, ತನ್ನಲ್ಲಿಯೆ ಅಂತರ್ಗತವಾಗಿದ್ದು ಹೊರಗಣ ಘರ್ಷಣ ನಿಮಿತ್ತ ಮಾತ್ರದಿಂದ ಬಿರಿದೊಡೆದು ಹೊಳೆಯುವ ಆತ್ಮಾನುಭವಗಳಿಂದ ಅವನು ಅಸಂಖ್ಯ ಸಂಸ್ಕಾರಗಳನ್ನು ಪಡೆಯುತ್ತಾನೆ. ಆ ಸಂಸ್ಕಾರ ಸಮಷ್ಟಿಯ ಫಲರೂಪವಾಗಿಯೆ ಅವರ 'ದರ್ಶನ' ಸಿದ್ಧವಾಗುತ್ತದೆ.

ತಪೋನಂದನ, ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ, ಪುಟ ೧೨೫

೧೦೮೨

ನಾವೆಲ್ಲ
ಸೂತ್ರಧಾರನ ಕೈಲಿ ಬೊಂಬೆಗಳು. ಪಾತ್ರಗಳ
ವಹಿಸುವರು. ಕುಣಿಸಿದಂತೆಯೆ ಕುಣಿಯುತಿರುವೆವು.

ಕಾನೀನ, ಪಾತ್ರ ಗಂಗಾಮಾತೆ, ಪುಟ ೬

೧೦೮೩

ನಿನ್ನಾ ಬಾಳಿನ ಹೂವನು ಮುಡಿಯದೆ
ಮುದ್ದಿಸಿಯನುಭವಿಸಪ್ಪದಲೆ
ಹೋಗುವೆಯೆಂದಾಗರಿತಿರಲಿಲ್ಲ ;
ಸೊಬಗಿನ ಕುಸುಮವೆ ಉದುರಿದೆಯಾ ?
ಹೂವೇ, ತರಳೆಯೆ, ಕೊಯ್ಯುವ ಮುನ್ನ
ಕೊಂಡೊಯ್ದಿತೆ ಬಿರುಗಾಳಿಯು ನಿನ್ನ !
ಪೇರಲ ಮರದಡಿ ಒಲಿದೆನು ಅಂದು ;
ಒಲಿದಿಹೆ ನಾ ಮುಂದೆಂದೆಂದು.
ಎದೆದೋಟದೊಳಲರಿರದಿರಲೇನು ?
ನಿನ್ನಾ ನೆನಪೇ ಸಿರಿಯಲರು.
ಚಲಿಸುವ ಮನಸಿಗೆ ನೀ ಹೂಬೇಲಿ !
ಧರ್ಮದ ದಾರಿಯೊಳೆಳೆಯುವ ಕಾಳಿ !
ಸುಮರಹಿತಾತ್ಮಾರಾಮವ ಕಂಡು
ತಲ್ಲಣಿಪುದು ಮನವಾಗಾಗ ;
ನೆನೆಯಲು ನಿನ್ನನು, ಬಾಡಿದ ಹೂವೇ,
ತಲ್ಲಣ ತೊಲಗುವುದತಿ ಬೇಗ :
ಬೇರೆಯ ಹೂಗಳ ಮುಡಿಯೆನು ನಾನು ;
ಮರೆಯಾದರು ಮುಡಿಪಾಗಿಹೆ ನೀನು !

ಷೋಡಶಿ,-ಗೆ, ಪುಟ ೨೦-೧

೧೦೮೪

ನಮ್ಮ ಕೈ ಬುಟ್ಟಿಯಲಿ
ಸಿಡಿಲ ಗೂಡಿಹುದು !
ಹುಡುಕಿ ನೋಡಿದರಲ್ಲಿ
ಸುಮದ ಬೀಡಿಹುದು !
ಬೈಗು ಬೆಳಗುಗಳಲ್ಲಿ ;
ಬೆಳ್ದಿಂಗಳಿಹುದಲ್ಲಿ.

ಸಂಕ್ಷಿಪ್ತ ಬ್ರಹ್ಮವೈ
ನಮ್ಮ ಕೈ ಬುಟ್ಟಿ!
ಕಲ್ಪ ಕಲ್ಪಗಳಲ್ಲಿ
ಸಾಯುವುವು ಹುಟ್ಟಿ!

ನವಿಲು, ಕಬ್ಬಿಗರು, ಪುಟ ೭

೧೦೮೫

ಸಗ್ಗದ ಬಾಗಿಲು ಅಲ್ಲಿಹುದಣ್ಣಾ!
ನುಗ್ಗಿದರಲ್ಲೇ ತೆರೆಯುವುದಣ್ಣಾ!
ಹಕ್ಕಿಯ 'ಟುವ್ವಿ' ಯೊಳವಿತಿದೆಯಣ್ಣಾ,
ಹೂವಿನ ಬಣ್ಣದೊಳಡಗಿದೆಯಣ್ಣಾ.
ದುಡಿಯುವ ರೈತನ ನೇಗಿಲೊಳಡಗಿದೆ,
ಕಡಿಯುವ ಕೂಲಿಯ ಕತ್ತಿಯೊಳಡಗಿದೆ!

ಕೊಳಲು, ಸಗ್ಗದ ಬಾಗಿಲು, ಪುಟ ೭೮

೧೦೮೬

ಲೋಕದಲಿ ಕಂಬನಿಯನೊಂದನೊರಸಿದ ನರನೆ
ಧನ್ಯ! ನಿಟ್ಟುಸಿರನೊಂದ ಸಂತೈಸುವನೆ
ಮಾನ್ಯ! ಹಸಿದ ಹೊಟ್ಟೆಗೆ ಮರುಗಿತುತ್ತೊಂದ
ನೀಡುವನೆ ಶಿವನಿಗೆಣೆ! ಹೆರರ ಗೋಳನು ಕಂಡು,
ಎದೆ ಬೆಂದು, ಬಟ್ಟೆಗೆಟ್ಟೊಬ್ಬನನು ಕೈಹಿಡಿದು,
ಜೀವನದ ಕರಿಮಣಿಯ ಕತ್ತಲಲಿ ಕಿರಣವೊಂದನು
ತಂದು ಭರವಸೆಯ ನೀಯುವಾತನೆ ಋಷಿ!
ಅದೆ ಪೂಜೆ, ಧರ್ಮ, ಯೋಗ, ಭಕ್ತಿ!

ಜಲಗಾರ, ಪಾತ್ರ ಜಲಗಾರ, ಪುಟ ೧೯-೨೦

೧೦೮೭

ದೊಡ್ಡವರೆಲ್ಲರ ಹೃದಯದಿ ಕಟ್ಟಿಹ
ತೊಟ್ಟಿಲ ಲೋಕದಲಿ
ನಿತ್ಯಕಿಶೋರತೆ ನಿದ್ರಿಸುತಿರುವುದು
ವಿಸ್ಮೃತನಾಕದಲಿ :
ಮಕ್ಕಳ ಸಂಗದೊಳೆಚ್ಚರಗೊಳ್ಳಲಿ
ಆನಂದದ ಆ ದಿವ್ಯಶಿಶು ;
ಹಾಡಲಿ, ಕುಣಿಯಲಿ ; ಹಾರಲಿ ; ಏರಲಿ
ದಿವಿಜತ್ವಕೆ ಈ ಮನುಜ ಪಶು !

ಮೇಘಪುರ, ಶ್ರೀ ತಾರಿಣಿಗೆ, ಪುಟ ೪

೧೦೮೮

ಕೀರ್ತಿ ತಾಂ ಸ್ಫೂರ್ತಿಯಪ್ಪೊಡೆ ಅಲ್ಪಮಣುರೂಪಿ
ತಾನಾಗನೇನ್ ಅಭ್ರಂಕಷಂ ಬೃಹನ್ಮೂರ್ತಿ ?

ಶ್ರೀ ರಾಮಾಯಣ ದರ್ಶನಂ, ಇರ್ದುದು ಮಹೇಂದ್ರಾಚಲಂ, ಪುಟ ४೧४

೧೦೮೯

ಹಳೆಯರೂಪಗಳು ಸಾಲದಿದ್ದರೆ ಹೊಸ ರೂಪಗಳನ್ನು ಕಂಡುಕೊಳ್ಳುತ್ತದೆ, ಕಟ್ಟಿಕೊಳ್ಳುತ್ತದೆ. ಆದರೆ ಯಾವ ಶರೀರವಾಗಲಿ ರೂಪವಾಗಲಿ ಅನುಭವ ಅಭೀಪ್ಸೆಗಳ ಒತ್ತಡದಿಂದ ಸಹಜವಾಗಿಯೆ ಮಾಡಬೇಕಾದುದು ಮಾತ್ರ ಆವಶ್ಯಕ. ಏಕೆಂದರೆ ಸಾಹಿತ್ಯ ಶರೀರದಲ್ಲಿ ಎಂದರೆ ಅದರ ರೂಪಾಂಶದಲ್ಲಿ ಏನೇ ಪರಿವರ್ತನೆಗಳುಂಟಾದರೂ ಅದು ರಸಾಭಿವ್ಯಕ್ತಿಗೆ ಸಾಧನವಾಗದಿದ್ದರೆ ವ್ಯರ್ಥವಾಗುತ್ತದೆ. ಏಕೆಂದರೆ, ರಸವೆ ನಿತ್ಯಾಂಶ ; ಉಳಿದುದೆಲ್ಲವೂ ಅದರ ಹೊಮ್ಮಿಕೆಗೆ ಮೀಸಲಾಗಿರುವ ಲೀಲಾಂಶ.

ದ್ರೌಪದಿಯ ಶ್ರೀಮುಡಿ, ಮುಂದಿನ ಸಾಹಿತ್ಯದಲ್ಲಿ, ಪುಟ ೮೮

೧೦೯೦

ರಾಜಕಾರಣಂ, ಬರಿ ಗಂಡು
ಹಗರಣಂ ?

ಶ್ರೀ ರಾಮಾಯಣ ದರ್ಶನಂ, ಲಂಕೇಶನೊಲಿಸಿದನು ಮಾರೀಚನಂ, ಪಾತ್ರ ಲಂಕೇಶ, ಪುಟ ೨೨೬

೧೦೯೧

ದೇಹಕ್ಕೂ ಧ್ಯೇಯಕ್ಕೂ ಹೋರಾಟ ನಡೆದು, ಧ್ಯೇಯಕ್ಕಾಗಿ ದೇಹ ಸಮರ್ಪಿತವಾದಾಗ ಅಥವಾ ಶರಣಾದಾಗ ಆತ್ಮದ 'ದರ್ಶನ' ವ್ಯಕ್ತವಾಗುತ್ತದೆ.

ತಮೋನಂದನ, ಮಹಾಶ್ವೇತೆಯ ತಪಸ್ಸು, ಪುಟ ೫

೧೦೯೨

ಆತನಿಹನೆಂಬುದಕೆ, ಆತನನು ನಂಬಲ್ಕೆ
ಪವಾಡಗಳನರಸುತಿಹೆಯೇನು ?
ಆವುದಿದೆ ಪವಾಡವಲ್ಲದುದು ? ಅದನೆನಗೆ
ತೋರಿದಪೆಯಾ ನೀನು ?

ಕಿಂಕಿಣಿ, ಪವಾಡ ಸಾಕ್ಷಿ, ಪುಟ ೫೮

೧೦೯೩

ಲೇಸನೆಸಗುವ ವಿಧಿಗೆ
ಬಹುಪಥಗಳುಂಟು ನಡೆಯಲ್. ಇಂದಿನಿಷ್ಟಮೆಯೆ
ಮುಂದನಿಷ್ಟಕೆ ಹೇತುವಪ್ಪಂದದಿಂ, ಇಂದಿನ
ಅನಿಷ್ಟಮೆಯೆ ತೊಟ್ಟಿಲಾಗದೆ ಮುಂದಣಭ್ಯುದಯ
ಶಿಶುಗೆ ?

ಶ್ರೀ ರಾಮಾಯಣ ದರ್ಶನಂ, ಊರ್ಮಿಳಾ, ಪಾತ್ರ ರಾಮ, ಪುಟ ೮೩

೧೦೯೪

ದಾರಿಯ ಪರಿಚಯವಿಲ್ಲ ; ಸೇರುವ ಗುರಿಯ
ಪರಿಚಯವಿಲ್ಲ. ನಿನ್ನ ಪರಿಚಯವೊಂದೆ ನನಗೆಲ್ಲದರ
ಪರಿಚಯ.

ಕಿಂಕಿಣಿ, ಒಡನಾಡಿ, ಪುಟ ೧೨

೧೦೯೫

ಆರ್ಷೇಯ ಕಾಲದಿಂದಲೂ, ಭೌಗೋಲಿಕವಾಗಿ ಬೇರೆ ಬೇರೆ ಹೆಸರಿದ್ದ ಬಹು ರಾಜ್ಯಗಳಲ್ಲಿ ಹಂಚಿ ಹೋಗಿದ್ದಾಗಲೂ, ಯಾವ ಪ್ರದೇಶವನ್ನು ಕವಿಗಳೂ ಸಾಹಿತಿಗಳೂ ಮತಪ್ರಚಾರಕರೂ ಜಗದ್ಗುರುಗಳೂ ಮಹಾಜನರೂ ಇತಿಹಾಸಕಾರರೂ ವಿದೇಶೀಯ ಪ್ರವಾಸಿಗಳೂ 'ಕರ್ಣಾಟಕ' ಎಂದು ಕರೆದೂ ಕರೆದೂ ಅದನ್ನೊಂದು 'ಮಂತ್ರ'ವನ್ನಾಗಿ ಮಾಡಿ, ಅದಕ್ಕೆ 'ಶಕ್ತಿ' ನೀಡಿದ್ದಾರೆಯೊ ಆ ಪ್ರದೇಶಕ್ಕೆ ಕರ್ಣಾಟಕ ಎಂಬ ಹೆಸರು ಅತ್ಯಂತ ಸಮಂಜಸವೂ ಉಚಿತವೂ ಆಗಿರುವುದರಿಂದ ಇಂದೊ ನಾಳೆಯೊ ಅದು, ರಾಜಕೀಯದ ಸ್ವಾರ್ಥಭಾವದಿಂದಲ್ಲದೆ, ಸಾಂಸ್ಕೃತಿಕವಾದ ಮೈತ್ರಿಯಿಂದಲೆಯೆ ಸರ್ವ ಸಂತೋಷದಿಂದ ಸರ್ವಸಮ್ಮತವಾಗಿ ಘೋಷಿತವಾಗುತ್ತದೆ ಎಂಬುದು ಕವಿಯ ಶ್ರದ್ಧೆ.

ಮನುಜಮತ ವಿಶ್ವಪಥ, ಬಲಾತ್ಕಾರದ ಇಂಗ್ಲಿಷ್ : ಪ್ರಚ್ಛನ್ನ ಭ್ರಷ್ಟಾಚಾರ, ಪುಟ ೯

೧೦೯೬

ಫಲದ ಸಾಫಲ್ಯಕ್ಕೆ ಸುಮದ ಸೌಂದರ್ಯ ಬಲಿ
ತಾನಂತೆ ಬಲಿಯಹುದು ನೀರನೀರೆಯರೊಲುಮೆ
ಕಂದನಾನಂದಕೆ.

ಚಿತ್ರಾಂಗದಾ, ಐದನೆಯ ಪರ್ವಂ, ಪಾತ್ರ ಶ್ರೀಮೂರ್ತಿ, ಪಂಕ್ತಿ ೮೩೩-೫, ಪುಟ ೬೭

೧೦೯೭

ಜೀವನೋದ್ದೇಶ ತಾನಾತ್ಮ ಸಾಕ್ಷಾತ್ಕಾರ :-
ಬದ್ಧಜೀವಿಗೆ ತನ್ನ ಸಾನ್ನಿಧ್ಯದಾನಕಿಂ
ಮಿಗಿಲಿಹುದೆ ಸಿದ್ಧಗೆ ಪರೋಪಕಾರ ?

ಅನಿಕೇತನ, ಪೂಜಿಸುವರೆಲ್ಲರೂ ಪೂಜ್ಯರೆನಗೆ, ಪುಟ ೫೬

೧೦೯೮

ಮನದಲಿ ಕಾಮ ಬಾಯಲಿ ರಾಮ ;
ಕೈಲಾಗದಿದ್ದರು ಕಲಿಭೀಮ !

ಹೊನ್ನ ಹೊತ್ತಾರೆ, ಮಂತ್ರಾಕ್ಷತೆ, ಪುಟ ೬೦

೧೦೯೯

ವಿಮರ್ಶಕನ ಕರ್ತವ್ಯ ಕಥಾ ಪ್ರತಿಮೆಯಲ್ಲಿ ಧ್ವನಿತವಾಗುವ ಕವಿಯ 'ದರ್ಶನ'ವನ್ನು ತಿಳಿಯುವುದಾಗಿರಬೇಕೇ ಹೊರತು ತನ್ನ ಅಪ್ರಕೃತಾಶಯದ ಮಾನದಂಡದಿಂದ ಅದನ್ನು ಅಳೆಯ ಹೋಗುವುದಲ್ಲ ಎಂಬುದನ್ನು ಸೂಚಿಸ ಬಯಸುತ್ತೇನೆ.

ಶೂದ್ರ ತಪಸ್ವಿ, ಮುನ್ನುಡಿ, ಪುಟ ೪೦

೧೧೦೦

ನಮ್ಮ ದೇಶದ ಸಂಸ್ಕೃತಿಗೆ ಬೇರು ಸೇರುಗಳೆರಡೂ ಧರ್ಮ ಎಂದು ಹೇಳುತ್ತಾರೆ. ಪುರುಷಾರ್ಥಗಳಲ್ಲಿಯೂ ಧರ್ಮಕ್ಕೆ ಪ್ರಥಮ ಸ್ಥಾನವನ್ನೂ ಮೋಕ್ಷಕ್ಕೆ ಪರಮ ಸ್ಥಾನವನ್ನೂ ಕೊಟ್ಟಿದ್ದಾರೆ. ಆದಕಾರಣ ಸಂಸ್ಕೃತಿ ಕಣ್ಣಾಗಿರುವ ಸಾಹಿತ್ಯಕ್ಕೂ ಆ ಧರ್ಮ ಮೋಕ್ಷಗಳೆ ಜೀವದುಸಿರಾಗುವುದರಲ್ಲಿ ವಿಶೇಷವೇನಿಲ್ಲ. 'ಕಲೆಗಾಗಿ ಕಲೆ' ಎಂಬ ಸ್ವೈರ ಮಂತ್ರವನ್ನು ಹಾಡಿಕೊಂಡು ನಡೆದು ಕೊಚ್ಚೆಯುಸುಬಿನಲ್ಲಿ ಕಂತಿ ಹಾಳಾಗುವುದಕಿಂತಲೂ ಧರ್ಮ ಮೋಕ್ಷಗಳ ತೋಳ್ತೆರೆಯಲ್ಲಿ ಬೆಳೆದು ಬಾಳುವುದೆ ಸಾಹಿತ್ಯಕ್ಕೆ ಕ್ಷೇಮ, ಶ್ರೇಯಸ್ಸು. ಇಂದ್ರಿಯ ಚಪಲತೆಗೂ ಮನೋದೌರ್ಬಲ್ಯಕ್ಕೂ ಆತ್ಮದ ಪತನಕ್ಕೂ ಕಲೋಪಾಸನೆ ಎಂದು ಹೆಸರಿಟ್ಟ ಮಾತ್ರಕ್ಕೆ ಅದು ಕಲೆಯೂ ಆಗುವುದಿಲ್ಲ, ಉಪಾಸನೆಯೂ ಆಗುವುದಿಲ್ಲ.

ಸಾಹಿತ್ಯ ಪ್ರಚಾರ, ಕನ್ನಡ ಸಾಹಿತ್ಯ, ಪುಟ ೬೮

೧೧೦೧

ಸ್ವತಂತ್ರ ಜೀವಿಗಳಾದ ಬಾಲಕರಿಗೆ ಪಾಠಶಾಲೆ ಎಂದರೆ ಅದೊಂದು ಜೈಲು !

ಸ್ವಾಮಿ ವಿವೇಕಾನಂದ, ಪುಟ ೨೦

೧೧೦೨

ಪ್ರತಿಯೊಂದು ನಾಡಿನ ಜನಮನದ ಜೀವಸಾರಸ್ವರೂಪವಾದ ಸಂಸ್ಕೃತಿ ಚಿರಕಾಲ ಉಳಿಯಬೇಕಾದರೂ ಇತರ ದೇಶ ಮತ್ತು ಕಾಲದವರಿಗೆ ಅದು ತಿಳಿಯಬೇಕಾದರೂ ಅದರ ಸಾಹಿತ್ಯದೇವಿ ನುಡಿದಲ್ಲದೆ, ಅದರ ಸರಸ್ವತಿಯ ವೀಣೆ ಮಿಡಿದಲ್ಲದೆ, ಸಾಧ್ಯವಿಲ್ಲ.

ಸಾಹಿತ್ಯ ಪ್ರಚಾರ, ಕನ್ನಡ ಸಾಹಿತ್ಯ, ಪುಟ ೫೬-೭

೧೧೦೩

ಈಶ್ವರ ಕೃಪೆಗೆ
ನಾನಾ ಮುಖಂಗಳೊಳವು ; ನಖಂಗಳುಂ ಒಳವು.

ಚಂದ್ರಹಾಸ, ಪಾತ್ರ ಕೃಪಾದೇವಿ, ಪುಟ ೨

೧೧೦೪

ಮಾನವನೆ ದೇವತೆಯು ; ನರನೆ ನಾರಾಯಣನು ;
ನಮ್ಮ ವಿಶ್ವಕೆ ನಾವೆ ನಿರುಪಮಾದ್ಭುತವಯ್ಯ !

ಕ್ರಿಸ್ತ ಬುದ್ಧರು ಎಲ್ಲ 'ಅಹಮಸ್ಮಿ'ಸಾಗರದಿ
ಮಿಂಚಿ ಮುಳುಗುವ ಬರಿಯ ಕಿರಿಯ ಬುದ್ಬುದವಯ್ಯ!

ಪಾಂಚಜನ್ಯ, ಆತ್ಮಶ್ರದ್ಧೆ, ಪುಟ ೪೧

೧೧೦೫

ಬಾಳಿನಲಿ ಬೀಳುವುದು
ಸಹಜವಾಗಿರುವಂತೆ ಬಿದ್ದೇಳುವುದು ಸಹಜ.
ಸಾಧಕಗೆ ಬೀಳುವುದು ಏಳುವುದರಂತೆಯೇ
ಚಿಹ್ನೆಯು ಪುರೋಗತಿಗೆ.

ನವಿಲು, ಜೋಗ, ಪುಟ ೪೦

೧೧೦೬

ಕರ್ತನಂತೆಯೆ ಸೃಷ್ಟಿ!
ಕವಿಯಂತೆಯೇ ಕವಿತೆ! ಮನದಂತೆಯೇ ದೃಷ್ಟಿ!

ಕಾನೀನ, ಪಾತ್ರ ಕರ್ಣ, ಪುಟ ೩೪

೧೧೦೭

ಭೂಮಂಡಲ ಶತ ಶತ ಆಕಾಂಕ್ಷೆ,
ನರ ನರ ಹೃದಯದ ಕೋಟಿ ಅಭೀಪ್ಸೆ
ಹರಚರಣಕೆ ಏರುವ ಊರ್ಧ್ವಾಶೆ
ಈ ತೀರ್ಥ ಕ್ಷೇತ್ರಕೆ ಚಿರಯಾತ್ರಿ!
ಎಲ್ಲ ತತ್ತ್ವಗಳ ಮೂಲನಿಧಿ,
ಎಲ್ಲ ಚಿಂತನದ ವಾರಿನಿಧಿ,
ಎಲ್ಲ ನಂಬುಗೆಯ ಅಂಭೋಧಿ
ಈ ಮಧು ಗಂಗೋತ್ರಿ!

ಇಕ್ಷುಗಂಗೋತ್ರಿ, ಇಕ್ಷುಗಂಗೋತ್ರಿ, ಪುಟ ೮೨

೧೧೦೮

ನನ್ನ ವಾದ ಇಷ್ಟು: ನಮಗೆ ಬೇಕಾದುದು ತ್ರಿಭಾಷಾ ಸೂತ್ರವಲ್ಲ, ದ್ವಿಭಾಷಾ ಸೂತ್ರ: 'ಬಹುಭಾಷೆಗಳಲ್ಲಿ ದ್ವಿಭಾಷೆ' ಎಂಬುದೇ ನಮಗಿಂದು ಅತ್ಯಂತ ಕ್ಷೇಮಕರವೂ ಲಾಭದಾಯಕವೂ ಆದ ಸೂತ್ರ, ನಮ್ಮ ವಿದ್ಯಾರ್ಥಿಗಳ ಮುಂದೆ ಅನೇಕ ಭಾಷೆಗಳನ್ನಿರಿಸಿ, ಯಾವುದಾದರೂ ಎರಡು ಭಾಷೆಗಳನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ಅವರಿಗೇ ಕೊಡಬೇಕು. ತಮ್ಮ ಆವಶ್ಯಕತೆಗೆ, ಸಾಮರ್ಥ್ಯಕ್ಕೆ ತಕ್ಕಂತೆ ಅವರೇ ನಿರ್ಧರಿಸಿಕೊಳ್ಳಲಿ. ಇದರಿಂದ ಬಲಾತಾರ್ಕದ ಅಂಶ ತೊಲಗುತ್ತದೆ.

ವಿಚಾರ ಕ್ರಾಂತಿಗೆ ಆಹ್ವಾನ, ಕರ್ಣಾಟಕ: ಇಟ್ಟ ಹೆಸರು ಕೊಟ್ಟ ಮಂತ್ರ, ಪುಟ ೯೨

೧೧೦೯

ಅಲ್ಪ ನಾನು ಎಂದು ಕುಗ್ಗಿ
ಮುದುಗ ಬೇಡವೋ :
ಓ ಅಲ್ಪವೆ,
ಅನಂತದಿಂದ ಗುಣಿಸಿಕೊ ;
ನೀನ್ ಅನಂತವಾಗುವೆ !

ಮಂತ್ರಾಕ್ಷತೆ, ಪುಟ ೩೦

೧೧೧೦

ಅಯ್ಯೊ ನೆಹರೂ ಇದ್ದ ಕಾಲದಲ್ಲಿ ಇಂಗ್ಲಿಷ್ ವಿರುದ್ಧವಾಗಿ ಹೇಳಿದರೆ ದೇವರೇ ಗತಿ ; ಏಕೆಂದರೆ ನೆಹರೂ ಈ ವಿಚಾರಗಳಲ್ಲಿ ದೇಶಕ್ಕೆ ಭಯಂಕರವಾದ ಅಪಚಾರಗಳನ್ನು ಮಾಡಿಹೋಗಿದ್ದಾರೆ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೬೮

೧೧೧೧

ಈ ಪುರೋಹಿತರ ಗುಂಪೆಲ್ಲವೂ ಒಂದೇ ! ಸುಲಿಗೆ !! ಸುಲಿಗೆ !!!

ನನ್ನದೇವರು ಮತ್ತು ಇತರ ಕಥೆಗಳು, ಧನ್ವಂತರಿಯ ಚಿಕಿತ್ಸೆ, ಪಾತ್ರ ವಿಶ್ವಾಮಿತ್ರ, ಪುಟ ೮೬

೧೧೧೨

ಕೃತಿಯ ಸಜೀವತ್ವಕ್ಕೆ ಅನಿವಾರ್ಯವಾಗಿ ಬೇಕಾದುದು ಸ್ವಾನುಭವ, ತನ್ನದೆ ಆದ ಹೃದಯಾನುಭವ. ಆ ಅನುಭವನೈಜತೆ ಒಂದಿದ್ದರೆ ಅದು ಸ್ವತಂತ್ರಸೃಷ್ಟಿಯೇ. ಆ ಅನುಭವ ಹಿಂದಾರೂ ಪಡೆಯದ ಅನುಭವವಾಗಿರಬೇಕು ಎಂದೂ ಅಲ್ಲ. ಅದು ಕೃತಿಕಾರನ ನಿಜವಾದ ಅನುಭವವಾಗಿರಬೇಕು ಅಷ್ಟೆ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೩೩

೧೧೧೩

ಪೆಣ್ಗೆ ತನುವಲ್ತು ಹೃದಯಂ !

ಶ್ರೀ ರಾಮಾಯಣ ದರ್ಶನಂ, ಸಂಸ್ಕೃತಿ ಲಂಕಾ, ಪಾತ್ರ ಮಂಡೋದರಿ, ಪುಟ ೩೪೪

೧೧೧೪

ಗೋಡೆಗೋಡೆಯ ನಡುವಣೆಡೆ ಸಾರ್ಥಕಂ
ಗೋಡೆಯಿರ್ಪುದಕೆ :
ಬದುಕೆಲ್ಲ ಬದುಕಲ್ಕೆ ಬಿಯಮಾಗಲಾ
ಬದುಕೊಂದು ಬದುಕೆ ?

ಮಂತ್ರಾಕ್ಷತೆ, ಕೆಲಸ-ಬಿಡುವು, ಪುಟ ೧೪

೧೧೧೫

ಮಡಿದರವರು, ಹೋದರಿವರು, ಇವನು ಅಳನೇಕೆ ?
ಎಂದು ಅವರಿವರಾಡಿಕೊಂಬರು.

ಅಕ್ಕರೆ ಇಲ್ಲದವನು, ಕಂಬನಿಯಿಲ್ಲದವನು,
ಕಲ್ಲೆದೆಯವನು, ಎಂದೆಲ್ಲ ನುಡಿಯುವರು.
ಒಲವಿರುವುದೆನಗೆ, ಕಣ್ಣೀರಿಹುದೆನಗೆ,
ಮೆಲ್ಲೆದೆಯಿಹುದೆನಗೆ.
ಕಂಬನಿಯೆಲ್ಲವನು ನನ್ನ ಎದೆದಾವರೆಯೆಲೆಯಲಿ
ನಿನಗಾಗಿ ತುಂಬಿರುವೆನು,
ಕಾಲಾನಂತರದಲಿ ಒಂದೊಂದು ಕಂಬನಿಯೂ
ಒಂದೊಂದು ಸವಿಗಾನವಾಗಿ ಹೊರಹೊಮ್ಮಲು ಅವುಗಳನ್ನೆಲ್ಲ
ನಿನ್ನ ಚರಣತಲದಲಿ ನಿವೇದಿಸಿ ಸುಮ್ಮನಾಗುವೆನು.
ಅವರ ಕಂಬನಿಗಳೆಲ್ಲ ನಶ್ವರ ; ನಿನ್ನ ಚರಣತಲದಲ್ಲಿ
ಗಾನಮಣಿಗಳಾಗಿ ನಲಿಯುವ ನನ್ನ ಅಶ್ರು ಅವಿನಶ್ವರ !

ಕಿಂಕಿಣಿ, ಅಶ್ರು ಅವಿನಶ್ವರ, ಪುಟ ೧೫

೧೧೧೬

ಭಗವತ್ಕೃಪೆ ಸುಖದ ಗುರಿಗೆಮ್ಮನೊಯ್ಯಲ್
ಒಮ್ಮೊಮ್ಮೊ ನಿರ್ಮಿಪುದು ಕ್ಲೇಶಕಷ್ಟದ ಸೇತುವಂ.

ಚಂದ್ರಹಾಸ, ಪಾತ್ರ ಹೆಂಗಸು, ಪುಟ ೧೬

೧೧೧೭

ಆಭರಣದ ರೂಪ ಯಾವುದಾದರೂ ಇರಲಿ ಆಭರಣದ ವಸ್ತು ಇದೆಯಲ್ಲಾ ಅದು ತುಂಬಾ ಬೆಲೆಯುಳ್ಳದ್ದು, ಅದನ್ನು ಎಸೆದರೆ ಮೂರ್ಖರಾಗುತ್ತೀರಿ. ಹಾಗೆಯೆ ರಾಮಾಯಣ ಮಹಾಭಾರತ ಇತರ ಯಾವುದೇ ಕತೆಗಳಾಗಿರಲಿ ಅವನ್ನು ಬಿಸಾಡು ವುದಲ್ಲ, ಅವನ್ನು ಕರಗಿಸಿ ನಮ್ಮ ಹೊಸ ಧ್ಯೇಯ ಹೊಸ ಇಷ್ಟಗಳಿಗೆ ಅನುಸಾರವಾಗಿ ಅವುಗಳನ್ನು ನೀವು ನಿಮ್ಮ ಸಾಹಿತ್ಯದಲ್ಲಿ ಎರಕ ಹೊಯ್ಯಬೇಕು. ಏಕೆಂದರೆ ಆ ಎರಕಗಳ ಮೂಲಕ, ಆ ಕಥಾವ್ಯಕ್ತಿಗಳ ಮೂಲಕ ನೀವು ನಿಮ್ಮ ಧ್ಯೇಯಗಳನ್ನು ಪ್ರಸಾರ ಮಾಡಲು ತುಂಬಾ ಸುಲಭವಾಗುತ್ತದೆ. ಬೇಗ ಬೇಗ ಹಿಡಿಸುತ್ತದೆ ಜನಗಳಿಗೆ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೫೨

೧೧೧೮

ಹನಿಯೊಡಲಲಿ ಸಾಗರವಿದೆ ;
ಹುಡಿಯಲಿ ಕುಲಪರ್ವತವಿದೆ.
ನಿಮಿಷದಿ ಕಲ್ಪಾಂತರವಿದೆ ;
ಕಿಡಿಯಲಿ ಬ್ರಹ್ಮಾಂಡವಿದೆ.
ಹಿಂದಿನಲಿ ಮುಂದೆಯಿದೆ ;
ಇಂದಿನದಲಿ ನಿನ್ನೆಯಿದೆ.

ನನ್ನಾತ್ಮದಿ ಜಗದೊಡಲಿದೆ ;
ಜಗದಾತ್ಮದಿ ನನ್ನೊಡಲಿದೆ.
ಎಲ್ಲದರಲಿ ಎಲ್ಲವಿದೆ ;
ಬಲ್ಲವರಿಗೆ ಬೆಲ್ಲವಿದೆ !

ಕುಟೀಚಕ, "ಸರ್ವತ್ರ ಸರ್ವದಾ ಸರ್ವಂ", ಪುಟ ೧೫

೧೧೧೯

ನಾನು ನಾನು ನಾನು ! ನನ್ನದು, ನನ್ನದು, ನನ್ನದು !
ಎಂತಹ ಸವಿಮಾತುಗಳವು ! ಎಂತಹ ಮುದ್ದಿನ ಮಾತದು
"ನಾನು !" ಎಂತಹ ಸವಿಸುಳ್ಳದು "ನನ್ನದು!" ?
"ನಾನು" ಸೃಷ್ಟಿಗೆ ಕಾರಣ. "ನನ್ನದು" ಸ್ಥಿತಿಗೆ ಕಾರಣ.
"ನಾನು" "ನನ್ನದು" ಅಳಿದು "ನೀನು" ನಿನ್ನದು" ಆಗುವುದೆ
ಲಯಕ್ಕೆ ಕಾರಣ.
"ನಾನು" ಎಂಬುದು "ನೀನು" ಎಂಬುದಾಗಿ, ನಾನೆ
ನೀನಾಗಿ, ಮಾತು ಮೌನವಾಗಿ, ತನಗೆ ತಾನಾಗಿ,
ಕಡೆಗೆಲ್ಲವೂ ಬರಿದಾಗಿ, ಇದು ಅದಾಗಿ ಹೋಗುವುದು !
ಮಾಯಾವಿ, ಇಂತಹ ಮಹಾ ಘನ ವಿಶ್ವವನು
ಎಂತಹ ಸವಿಸುಳ್ಳಿನಲಿ ಕೆತ್ತಿರುವೆ !

ಕಿಂಕಿಣಿ, ದಿವ್ಯ ಮಿಥ್ಯೆ, ಪುಟ ೧೧

೧೧೨೦

ಮೈ ಚೆಲುವಿಗೆ ನೀನೊಲಿಯದಿರೆನ್ನ :
ಇಂದೋ ನಾಳೆಯೊ, ಓ ಮನದನ್ನ,
ಹಿಡಿವುದು ದೇಹಕೆ ಕಾಲದ ತುಕ್ಕು ;
ತೆರೆತೆರೆ ತೋಡುವುದೊಡಲಲಿ ಸುಕ್ಕು.
ತುಡಿಗೆಂಪಳಿವುದು ; ಬಾಡುವುದಕ್ಷಿ ;
ನರೆವುದು ಕೂದಲು; ಯೌವನ ಪಕ್ಷಿ
ಗರಿಯುದುರಿಸುವುದು. ಹಿಡಿವುದು ಮುಪ್ಪು –
ಬಾಳ್‌ಸೊಗದಾನೆಯ ಕೆಡಹುವ ಕಪ್ಪು.
ಕೊರಳಿನ ಇನಿದಿನಿ ಕರ್ಕಶವಾಗಿ,
ಗೂನಾಗುವುದೈ ನಿಡುಬೆನ್ ಬಾಗಿ :
ಅದರಿಂದೊಲಿವೊಡೆ, ಓ ಎದೆಯನ್ನ,
ಮೈ ಚೆಲುವಿಂಗಾಗೊಲಿಯದಿರೆನ್ನ.

ಪ್ರೇಮಕಾಶ್ಮೀರ, ಮೈ ಚೆಲುವಿಗೆ ನೀನೊಲಿಯದಿರೆನ್ನ, ಪುಟ ೪೩

೧೧೨೧

ಗಂಗೆ ಭಗೀರಥನನ್ನು ಹಿಂಬಾಲಿಸಿ ಭಾಗೀರಥಿಯಾದಂತೆ, ಜಹ್ನುವಿನೊಡಲ ಒಳಹೊಕ್ಕು ಕಿವಿಯಿಂದ ಹೊಮ್ಮಿ ಜಾಹ್ನವಿಯಾದಂತೆ, ಲೋಕವ್ಯಾಪಾರದ ಕಥಾವಸ್ತು ಕಿವಿಯಿಂದ ಕಿವಿಗೆ ಹರಿದು, ಜನಮನಸ್ಸನ್ನು ಹಿಂಬಾಲಿಸಿ ಬಂದು, ಯಾವನಾದರೊಬ್ಬ ಮಹಾಕವಿಯ ಪ್ರತಿಭಾಯಾಗಶಾಲೆಯನ್ನು ಹೊಕ್ಕು, ಅವನಿಂದ ಕುಡಿಯಪಟ್ಟು, ಮರಳಿ ಲೋಕಾನುಗ್ರಹಾರ್ಥವಾಗಿ ಆತನ ಜಹ್ನುಕರ್ಣ ಸದೃಶವಾದ ಕಲ್ಪನಾ ಜ್ಯೋತಿಮಾರ್ಗದಿಂದ ಛಂದಶ್ಶರೀರಿಯಾಗಿ ಹೊರಹೊಮ್ಮಿ ಅವಿನಾಶಿಯಾದ ಚಿರಕಾವ್ಯವಾಗಿ ಪರಿಣಮಿಸುತ್ತದೆ. ಅಂತಹ ಚಿರಕಾವ್ಯಗಳಲ್ಲಿ ಮೊಟ್ಟಮೊದಲನೆಯದು ಶ್ರೀಮದ್ ವಾಲ್ಮೀಕಿ ರಾಮಾಯಣ.

ತಪೋನಂದನ, ಋಷಿ ವಾಲ್ಮೀಕಿಯ ಕಾವ್ಯಜಾಹ್ನವಿ, ಪುಟ ೧೧೨

೧೧೨೨

ಅವ್ಯಕ್ತ ಬ್ರಹ್ಮವು ನಾನು ;
ವ್ಯಕ್ತ ಬ್ರಹ್ಮವು ನಾನು,
ಮಾಯೆಯು ನಾನು,
ಮಯಾತೀತನು ನನು,
ಕಾಲವು ನಾನು,
ದೇಶವು ನಾನು,
ನಿರ್ಗುಣಿ ನಾನು ;
ಸೃಷ್ಟಿಸ್ಥಿತಿಲಯವೆಲ್ಲವು ನಾನು !

ಪಾಂಚಜನ್ಯ, ವಿಪ್ಲವಮೂರ್ತಿ, ಪುಟ ೧೭

೧೧೨೩

ಹೇ ದೇವ, ವಿಶ್ವಭಕ್ತಿಯನೆಮಗೆ ಕೊಟ್ಟಿರುವೆ ;
ವಿಶ್ವದೊಲವನು ನಮ್ಮ ಹೃದಯದೊಳಗಿಟ್ಟಿರುವೆ ;
ವಿಶ್ವಶಕ್ತಿಯನೇಕೆ ದಯಪಾಲಿಸಿಲ್ಲ ?

ಯಮನ ಸೋಲು, ಪಾತ್ರ ಸಾವಿತ್ರಿ, ಪುಟ ೯

೧೧೨೪

ಇಂದ್ರ ಸಿಂಹಾಸನಕೆ ಬಂದಿಹುದು ಕೊನೆಗಾಲ ;
ಕಳಚಿ ಬೀಳುವುದಿಂದು ನಂದನದ ಬೇಲಿ !
ದೇವತೆಗಳಶ್ಲೀಲಮೋದಕ್ಕೆ ಬದಲಾಗಿ
ಗೋಚರಿಪುದಲ್ಲಿ ಮರ್ತ್ಯರ ಕೃಷಿಯ ಕೇಲಿ !
ದ್ರವ್ಯಾನುಕೂಲತೆಯ ಜಾತಿಯಾ ನೀತಿಯಾ
ಪಕ್ಷಪಾತವನೆಲ್ಲ ಕೊಚ್ಚುವುದು ಬುದ್ಧಿ :
ಮತ್ತೊಂದು ನಾಕವನೆ ನೆಯ್ಯುವರು ಲೋಕದಲಿ

ದೇವರನ್ಯಾಯವನು ಮಾನವರೆ ತಿದ್ದಿ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಹೊಸಬಾಳಿನ ಗೀತೆ, ಪುಟ ೨೯

೧೧೨೫

ಸನ್ಯಾಸಿ ಲೋಕದ ಭಾಗಕ್ಕೆ ಮೃತನಾದಂತೆಯೆ. ಸಂನ್ಯಾಸಿಯಾದವನು ಶ್ರಾದ್ಧ ಮೊದಲಾದ ಕಾಮ್ಯಕ್ರಿಯೆಗಳಲ್ಲಿ ಎಂದೆಂದಿಗೂ ಭಾಗಿಯಾಗಲಾರನು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೭೭

೧೧೨೬

ಕರುಣೆಯದುವೆ ದೇವರಲ್ತೆ ?
ಕಣ್ ಪನಿಯೆ ತೀರ್ಥಮಲ್ತೆ ?

ನವಿಲು, ಸಬಕ್ತಗೀನ್, ಪುಟ ೨೮

೧೧೨೭

ಪಾಪವಿಲ್ಲವು ಪುಣ್ಯವಿಲ್ಲವು
ರೂಪವೆಂಬುದನಿತ್ಯ ತಾನದು
ರೂಪದಲ್ಲಿಹ ಎನ್ನ ಸತ್ವಕೆ
ಪಾಪವೆಂಬುದನಿತ್ಯವು.

ಅಮಲನ ಕಥೆ, ಪುಟ ೪೦

೧೧೨೮

ನಿಜವಾದ ಪ್ರತಿಭೆಯನ್ನು ಅದು ಎಲ್ಲಿಯೆ ಇರಲಿ, ಯಾರಲ್ಲಿಯೆ ಇರಲಿ–ಕಾಣುವ ವಿಶಾಲ ಬುದ್ಧಿಯೂ ಗುರುತಿಸುವ ಉದಾರ ಹೃದಯವೂ ವೆಂಕಣ್ಣಯ್ಯನವರಿಗೆ ದೈವದತ್ತವಾಗಿದ್ದುವು ; ಸಣ್ಣ ಮನಸ್ಸು ಮತ್ತು ಸಂಕುಚಿತ ಭಾವ ಅವರ ಬಳಿ ಸುಳಿಯುತ್ತಿರಲಿಲ್ಲ. ಚೇತನಗಳಿಗೆ ಪ್ರೋತ್ಸಾಹದ ಗೊಬ್ಬರ ಹಾಕಿ, ಪ್ರಶಂಸೆಯ ನೀರೆರೆದು ನಿರ್ಮತ್ಸರವಾಗಿ ಘೋಷಿಸುತ್ತಿದ್ದರು. ಆದರೆ ಕಸಿಮಾಡುವ ಕತ್ತರಿಯನ್ನೂ ಹಿಡಿದಿರುತ್ತಿದ್ದರು, ರೋಗಿಷ್ಠ ರೆಂಬೆಗಳನ್ನು ನಿಷ್ಠುರವಾಗಿ ನಿರ್ದಾಕ್ಷಿಣ್ಯವಾಗಿ ತೆಗೆದು ಹಾಕಿ ಗಿಡ ಆರೋಗ್ಯವಾಗಿ ಸುದೃಢವಾಗಿ ಅಭಿವರ್ಧಿಸುವಂತೆ ಮಾಡಲು ಅವರ ಆ ಮಾತೃಲಕ್ಷಣದ ಹೊಂಬಿಸಲಲ್ಲಿ ಚಳಿಕಾಯಿಸಿಕೊಂಡು ಬದುಕಿ ಬಾಳಿದ ಅನೇಕ ಚೇತನಗಳಲ್ಲಿ ನಾನು ಒಬ್ಬನು.

ಮನುಜಮತ ವಿಶ್ವಪಥ, ಅಹೇತುಕ ಆತ್ಮೀಯತೆ, ಪುಟ ೮೦

೧೧೨೯

ಕೈಯೆತ್ತುವುದರಿಂದಲೂ ಕೈಚಪ್ಪಾಳೆಯಿಂದಲೂ ಓಟುಗಳಿಂದಲೂ ಶ್ರೇಷ್ಠತೆಯನ್ನು ಗೊತ್ತುಮಾಡುವ ಈ ಯುಗದಲ್ಲಿ ವೀಣೆಗಿಂತಲೂ ಡಮರುಗಳಿಗೇ ಶೀಘ್ರವಾಗಿ ಪಟ್ಟಾಭಿಷೇಕವಾಗುವುದರಲ್ಲಿ ಆಶ್ಚರ್ಯವೇನಿಲ್ಲ.

ಸ್ವಾಮಿ ವಿವೇಕಾನಂದ, ಪುಟ ೩೫

೧೧೩೦

ನೀನು ಅಂತರರಾಷ್ಟ್ರ ಕೀರ್ತಿಯಂ ಪೊತ್ತು ಗರ್ಜಿಸುವ
ಜಗತ್ ಪ್ರಸಿದ್ಧ ಹುಲಿಯೆ ?
ಇದೆಕೊ ನಿನಗೆನ್ನ ಭೋ ಪರಾಕು !
ನಾನು ಅಜ್ಞಾತ ಅಖ್ಯಾತ ಅನಾಮಕ ಅಲ್ಪ ಇಲಿಯೆ ?
ಇರಲಿ :
ಕನ್ನಡದ ಬೆನಕದೇರನ್ನೆಳೆವ ಈ ಧನ್ಯತೆಯೆ ಸಾಕು !

ಪ್ರೇತಕ್ಯೂ, ಬಲಾತ್ಕಾರದ ಭಾಷಾತ್ರಿಶೂಲ ! ಪುಟ ೬೩

೧೧೩೧

ನಾನು ಇನ್ನೂ ಇಂಗ್ಲಿಷಿನ ನೊಗದಿಂದಲೆ ಹೆಗಲು ಕಳಚಿಲ್ಲ; ಆಗಲೇ ಬೇರೊಂದು ನೊಗಕ್ಕೆ ಹೆಗಲು ಕೊಡಲು ಸಿದ್ಧರಾಗಿದ್ದೇವೆ. ಈ ದುರದೃಷ್ಟಕರ ಪರಿಸ್ಥಿತಿ ಕನ್ನಡ ನಾಡಿನಲ್ಲಲ್ಲದೆ ಬೇರೆ ಯಾವ ಕಡೆಯೂ ಇರಲಾರದು. ಕನ್ನಡಕ್ಕೆ ಎಂದೋ ದೊರೆಯಬೇಕಾಗಿದ್ದ ಗೌರವದ ಮನ್ನಣೆಯ ಸ್ಥಾನವನ್ನು ಕೊಡಲು ಇನ್ನೂ ಮೀನ ಮೇಷ ಎಣಿಸುತ್ತಿರುವ ನಾವು ಹಿಂದೀ ಮಾಧ್ಯಮದ ಬಗೆಗೆ ಕಾರರತೆ ತೋರುತ್ತಿರುವುದು ಒಂದು ಬಗೆಯ ವಿಪರ್ಯಾಸವೆ ಸರಿ. ಮುಂದೆ ಎಂದಾದರೂ ಹಿಂದೀ ಮಾಧ್ಯಮದ ತರಗತಿಗಳು ಬರಬಹುದು. ಆದರೆ ಕನ್ನಡ ನಮ್ಮ ಶಿಕ್ಷಣವನ್ನೂ ಸಮಸ್ತ ಜೀವನವನ್ನೂ ಸಂಪೂರ್ಣವಾಗಿ ಆವರಿಸಿಕೊಳ್ಳುವ ಮೊದಲೇ ಇದಕ್ಕೆ ಅವಕಾಶ ಕೊಡುವುದು ರಾಷ್ಟ್ರಘಾತುಕವಾಗುತ್ತದೆ ; ಅನ್ಯೈಕ್ಯತೆಗೆ ದಾರಿಮಾಡಿಕೊಟ್ಟಂತಾಗುತ್ತದೆ. ಈ ದಿಸೆಯಲ್ಲಿ ಕನ್ನಡಿಗರ ಔದಾರ್ಯ ಸಲ್ಲಕ್ಷಣಗಳು ಅಸಹಾಯಕತೆಯಾಗಬಾರದು ; ನಿರ್ವಿಣ್ಣತೆಯಾಗಬಾರದು.

ಮನುಜಮತ ವಿಶ್ವಪಥ, ಕನ್ನಡ ನಾಡಿನ ರಾಜಧಾನಿಯಲ್ಲಿ, ಪುಟ ೫೧

೧೧೩೨

ಕಾಲಗಗನದಿ ಹಾರಿಯಾಡುವ ಹಕ್ಕಿಗಳು ನಾವ್ ಬಾಲರು.
ಹೋಗಲೆಂದೇ ಬರುವೆವು,
ಹೋಗಿ ಮರಳ್ಳೆ ತರುವೆವು !
ನಿತ್ಯತೆಯ ಗರ್ಭದಲಿ ಜನಿಸುವ ನಾವು ಲೀಲಾಶೀಲರು.

ಜಲಗಾರ, ಪಾತ್ರ ಬಾಲಕರು, ಪುಟ ೨೮

೧೧೩೩

ಸಮಸ್ತ ಜಗತ್ತೇ ಒಂದು ಮಹಾ ಲೀಲೆ. ಬ್ರಹ್ಮದೃಷ್ಟಿಯಿಂದ ಸುಖ ದುಃಖ, ತಪಸ್ಸು, ಸಾಧನೆ, ಮುಕ್ತಿ ಸಂಪಾದನೆ ಎಲ್ಲವೂ ಬರಿಯ ಲೀಲೆ ಅಥವಾ ತೋರಿಕೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೪೦

೧೧೩೪

ಮನ್ನಿಸಮ್ಮಾ ; ಸಿಲ್ಕಿ
ಮಮತೆಯಲಿ ಒಮ್ಮೊಮ್ಮೊ ಕವಿಯಾಗುವನು ಕಲ್ಕಿ !

ಕೃತ್ತಿಕೆ, ಭಾರತಮಾತೆಗೆ, ಪುಟ ೮೦

೧೧೩೫

ನಮ್ಮ ದೇಶ ವಿಲಕ್ಷಣದೇಶ. ಇದು ವಿರೋಧಾಭಾಸಗಳ ಬೀಡು. ನಮ್ಮವರು ಭಗವಂತನ ನಿರಾಕಾರತ್ವವನ್ನು ಸಾರಿದಂತೆ ಬೇರೆ ಯಾರೂ ಸಾರಿಲ್ಲ. ದೇವ ದೇವಿಯರ ವಿಗ್ರಹ ಕೋಟಿಗಳನ್ನೂ ನಮ್ಮವರು ಸೃಜಿಸಿದಂತೆ ಬೇರೆ ಯಾರೂ ಸೃಜಿಸಿಲ್ಲ. ನಮ್ಮ ತತ್ತ್ವವೇತ್ತರು ಸ್ಥಾಪಿಸಿರುವಂತೆ ಅಭೇದತ್ವವನ್ನು ಬೇರೆ ಯಾರೂ ಸ್ಥಾಪಿಸಿಲ್ಲ. ವರ್ಣ ಮತ ಜಾತಿ ಪಂಥ ಪಂಗಡ ಆಚಾರಾದಿಗಳಲ್ಲಿ ನಮ್ಮಲ್ಲಿರುವಷ್ಟು ಭೇದ ಭಾವ ಮತ್ತಾರಲ್ಲಿಯೂ ಇಲ್ಲ. ಗಮ್ಯದ ಏಕತ್ವವನ್ನು ನಮ್ಮವರು ಬೋಧಿಸಿದಂತೆ ಅನ್ಯರಾರೂ ಬೋಧಿಸಿಲ್ಲ ; ರುಚಿವೈಚಿತ್ರ್ಯ ಮತ್ತು ಋಜು ಕುಟಿಲ ನಾನಾ ಪಥತ್ವಗಳನ್ನೂ ನಮ್ಮವರು ಹಟತೊಟ್ಟು ಸಾಧಿಸುತ್ತಿರುವಂತೆ ಅನ್ಯರಾರೂ ಸಾಧಿಸುತ್ತಿಲ್ಲ ! ಅಕ್ಷರಶಃ ನಮ್ಮದು ವಿಲಕ್ಷಣ ದೇಶವೆ ನಿಜ ; ಇಲ್ಲಿ ಏನು ಬೇಕಾದರೂ ನಡೆಯಬಹುದು ; ಯಾವುದಕ್ಕೂ ನಾವು ವಿಸ್ಮಯಪಡಬೇಕಾಗಿಲ್ಲ.

ಷಷ್ಟಿನಮನ, ತೀರ್ಥಯಾತ್ರೆ, ಪುಟ ೮೩

೧೧೩೬

ಈಗ ನಾವು ಮತ ಎಂದು ಕರೆದುಕೊಳ್ಳುವ ಆಚಾರ ಸಮೂಹ ಬರಿಯ ಸಾಮಾಜಿಕವಾದ ಕಟ್ಟು ಕಟ್ಟಳೆಗಳ ಕಾಟವಾಗಿದೆ. ಒಬ್ಬರನೊಬ್ಬರು ಮುಟ್ಟದಿರುವುದು, ನೋಡದಿರುವುದು ; ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು ; ನಾಮ ಹಾಕಿಕೊಳ್ಳುವುದು ; ವಿಭೂತಿ ಹಚ್ಚಿಕೊಳ್ಳುವುದು, ಮುದ್ರೆ ಹೊಡೆದುಕೊಳ್ಳುವುದು : ಶಿಲುಬೆ ಧರಿಸಿಕೊಳ್ಳುವುದು, ಕೆಲವರನ್ನು ಸಾರ್ವಜನಿಕವಾದ ಬಾವಿ ಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು ; ಕೆಲವರನ್ನು ದೇವಸ್ಥಾನದೊಳಕ್ಕೆ ಸೇರಿಸದಿರುವುದು ; ಮತ್ತೆ ಕೆಲವರನ್ನು ಗುಡಿಯೊಳಗೆ ಹತ್ತು ಮಾರು ಮಾತ್ರ ಬರಗೊಡಿಸುವುದು ; ಹಾಗೆ ಬರಗೊಡಿಸಬೇಕೆ ಬೇಡವೇ ಎಂದು ಚರ್ಚೆ ನಡೆಸುವುದು ; – ಇತ್ಯಾದಿ ಕೆಲಸಕ್ಕೂ ಬಾರದ, ಶ್ರೇಯಸ್ಕರವೂ ಅನ್ನದ ನೂರಾರು ಆಚಾರ ವ್ಯವಹಾರಗಳ ಸಮಷ್ಟಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ. ಉಪನಿಷತ್ತು, ಭಗವದ್ಗೀತೆ ಮತ್ತು ಮಹಾ ವಿಭೂತಿಗಳು ಸಾರಿದ ಮತ್ತು ಸಾರುತ್ತಿರುವ ಅಮೃತ ಸಂದೇಶ ಅರಣ್ಯರೋದನವಾಗಿದೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೩

೧೧೩೭

ಸನ್ನತಿಯ ಸತ್ಕೃತಿಗೆ ಶಾಸ್ತ್ರದ ನೆರಂ ಬೇಕೆ ?

ಶೂದ್ರತಪಸ್ವಿ, ಪಾತ್ರ ಶ್ರೀರಾಮ, ಪುಟ ೩೨

೧೧೩೮

ನಾವು ಮಾವುದೇ ಭಾಷೆಯನ್ನು ಕಡ್ಡಾಯಮಾಡಿ ಎಂದು ಹೇಳುವುದಿಲ್ಲ. ಯಾವುದಾದರೂ ಎರಡು ಭಾಷೆಗಳನ್ನು ಆಯ್ದುಕೊಂಡು ಅಭ್ಯಾಸಮಾಡಲು ಅವಕಾಶವಿರಬೇಕೆಂಬುದಷ್ಟೇ ನನ್ನ ಅಪೇಕ್ಷೆ.

ಮನುಜಮತ ವಿಶ್ವಪಥ, ಕನ್ನಡ ನಾಡಿನ ರಾಜಧಾನಿಯಲ್ಲಿ, ಪುಟ ೫೧-೨

೧೧೩೯

ಒಲಿದವರಿಗಾಗಿ ಕಾಯುವುದೊಂದು ಸವಿಗಜ್ಜ !

ಕಾನೀನ, ಪಾತ್ರ ಕೌರವ, ಪುಟ ೩೦

೧೧೪೦

ಕುಂಡದಲ್ಲಿ ಕಾವ್ಯ :
ಅಃ ಎನಿತು ಶ್ರಾವ್ಯ !
ದೇವನೊಂದು ದಿವ್ಯ ಕವನ
ಅವತರಣಕೆ ಈ ಭುವನ
ಭಿತ್ತಿ ಮಾತ್ರ !
ಅದನರಿಯಲೆ ಅದ ಸವಿಯಲೆ
ಕವಿಯ ಪಾತ್ರ :
ಕವಿಯೆ ಪಾತ್ರ !

ಮಂತ್ರಾಕ್ಷತೆ, ಪುಟ ೨೫

೧೧೪೧

ಮಕ್ಕಳು ದೇವರ ರಾಜ್ಯದ ಪ್ರಜೆಗಳು ;

ನನ್ನ ಗೋಪಾಲ, ಪಾತ್ರ ಗುರು, ಪುಟ ೨೫

೧೧೪೨

ಓ ಮಂಕು ನರಗುರಿಯೆ,
ಭೂಮಿ ಬರಿ ದೋಣಿ ಕಣೊ !
ತಾಯ ಮಡಿಲೆಂದೇಕೆ
ಬರಿದೆ ಬೆಮೆಗೊಂಡಿರುವೆ ?
ಜಡವು ಜಡವನು ಹೊತ್ತು
ಜಡವು ಜಡವನು ಹೆತ್ತು
ಜಡವು ಜಡದಲಿ ಮುಳುಗಿ

ಹೋಗುವುದೆ ಮಿತ್ತು!
ಹುಸಿ ಜಡವ ನಂಬುವರೆ
ಚೇತನಂಗೆತ್ತು ?

ಪಾಂಚಜನ್ಯ, ಜಡವಾದಿ, ಪುಟ ೩೦

೧೧೪೩

ಇಂದಲ್ಲಿ, ಪಶ್ಚಿಮದಿ
ಮಾನವೀಯತೆ ಮಾಣ್ದು ತಾಂಡವಂಗೈಯುತಿದೆ
ನೀಚ ರಾಕ್ಷಸತೆ, ಯಾಂತ್ರಿಕ ಕ್ರೌರ್ಯದಾ ರುದ್ರ
ರಣದಲ್ಲಿ. ಪೆಣ್ಗಳಂ ಮಕ್ಕಳು ಬಲಿಗೆಯ್ದು
ತಣಿಸುತಿರುವರು ಸಮರಚಂಡಿಯಂ. ಸೆಣಸುತಿವೆ
ಹಣೆಗೆ ಹಣೆ ಘಟ್ಟಿಸುತ್ತೆರಡು ದುಶ್ಯಕ್ತಿಗಳ್
ಲೋಕ ಚಕ್ರಾಧಿಪತ್ಯಕ್ಕೆ. ಆ ದುಷ್ಕರ್ಮ
ಶಕ್ತಿದ್ವಯಂಗಳುಂ ಹೇಳ ಹೆಸರಿಲ್ಲದೆಯೆ
ಒಂದರಿಂದೊಂದಳಿದು ಶೋಕವೊಂದುಳಿಯಲಾ
ಶೋಕಕೊಂದೊಳ್ಪಿನಾಕಾರಮಂ ನೀಡಲ್ಕೆ
ನೀಂ ಸತ್ಕೃತಿಯ ಲಸಚ್ಛೆಲ್ಪಿವರನಾಗೆಂದು
ಹರಸುವೆನು.

ಜೇನಾಗುವಾ, ಹೆಸರಿಟ್ಟು ಹರಸುವೆನು ಚೈತ್ರನಂ, ಪುಟ ೭೨

೧೧೪೪

ಪರಮ ಸಂಪೂರ್ಣತೆಯೆ ಕೋಮಲತೆಯೊಡಗೂಡಿ
ಸೌಂದರ್ಯರೂಪದಿಂದಿಳೆಗೆ ಬರಲದೆ ಹೆಣ್ಣು

ಕೃತ್ತಿಕೆ, ಹೆಣ್ಣು, ಪುಟ ೧೫

೧೧೪೫

ನೀ ಮೆಟ್ಟುವ ನೆಲ–ಅದೆ ಕರ್ನಾಟಕ ;
ನೀನೇರುವ ಮಲೆ–ಸಹ್ಯಾದ್ರಿ,
ನೀ ಮುಟ್ಟುವ ಮರ–ಶ್ರೀಗಂಧದ ಮರ ;
ನೀ ಕುಡಿಯುವ ನೀರ್–ಕಾವೇರಿ.

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಮೆಟ್ಟುವ ನೆಲ ಕರ್ನಾಟಕ, ಪುಟ ೪೩

೧೧೪೬

ತಪೋಮಹಿಮೆಗೆಣೆಯುಂಟೆ ?

ಶೂದ್ರತಪಸ್ವಿ, ಪಾತ್ರ ಶ್ರೀರಾಮ ಪುಟ ೨೭

೧೧೪೭

ಕಲಾಸುಂದರಿ ಆತ್ಮಾಹ್ಲಾದಕಾರಿಣಿಯೂ ಹೌದು, ಆತ್ಮೋದ್ಧಾರಕಾರಿಣಿಯೂ ಹೌದು.

ಕಲಾಸುಂದರಿ, ಮುನ್ನುಡಿ, ಪುಟ xi

೧೧೪೮

ಹಾರೈಸು ಹಾರೈಸು ಹಾರೈಸು ಜೀವ :
ಹಾರೈಸು ನೀನಾಗುವನ್ನೆಗಂ ದೇವ !

ಅಗ್ನಿಹಂಸ, ಹಾರೈಸು, ಪುಟ ೯೨

೧೧೪೯

ಸಗ್ಗವೆ ಮಣಿದು
ತಣಿಸದಿರುವುದೆ ತಿರಯನತಿತೀವ್ರದಾಕಾಂಕ್ಷೆ ತಾಂ
ಪಿಡಿದು ಜಗ್ಗಿಸಿ ಸೆಳೆಯೆ ? ಬಹುಜನರ ಪೆರ್ಬಯಕೆ
ಕಲ್ಪವೃಕ್ಷದ ಕೊಂಬೆಯನೆ ಕಚ್ಚಿ ಸೆಳೆದಿಳೆಗೆ
ಫಲದಮೃತಮಂ ಮಳೆಗರೆಯದಿಹುದೆ ? ಜನಮನಮೆ
ಯುಗಶಕ್ತಿಯಲ್ತೆ ? ತಾನಾ ಶಕ್ತಿ ಮೂರ್ತಿಗೊಳೆ
ನಾಮದನ್ನವತಾರಮೆಂದು ಪೂಜಿಪೆವಲ್ತೆ ಪೇಳ್,
ವ್ಯಷ್ಟಿರೂಪದಿನಿಳಿವ ಸೃಷ್ಟಿಯ ಸಮಷ್ಟಿಯಂ ?

ಶ್ರೀ ರಾಮಾಯಣ ದರ್ಶನಂ, ಕವಿಕ್ರತು ದರ್ಶನಂ, ಪುಟ ೨೩

೧೧೫೦

ಪ್ರತಿಮೆಯ ಪೌರಾಣಿಕತೆಯನ್ನಾಗಲಿ ರೂಪಕದ ಪ್ರಾಚೀನತೆಯನ್ನಾಗಲಿ ಕಾವ್ಯದ ನಿಸ್ಸಾರತೆಗೆ ಸರ್ವಕಾರಣವನ್ನಾಗಿ ಒಡ್ಡುವುದರಲ್ಲಿ ಅರ್ಥವಿಲ್ಲ. ಮುಖ್ಯ ಕಾರಣವಿರುವುದು ಕವಿಶಕ್ತಿಯಲ್ಲಿ, ಕವಿಪ್ರತಿಭೆಯಲ್ಲಿ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೭೦

೧೧೫೧

ಕೃತವಿದ್ಯರಾದ ಯುವಕರು ನಾಗರಿಕತೆಯ ಮೆರುಗಿಗೆ ಮನಸೋತು ಪಟ್ಟಣಗಳನ್ನು ಸೇರುತ್ತಿದ್ದಾರೆ. ಅಲ್ಲಿಯೂ ಕೂಡ ಅವರು ಕೈಕೊಳ್ಳುವ ವೃತ್ತಿ ಸ್ವಲ್ಪಹೆಚ್ಚುಕಡಿಮೆ 'ಉತ್ಪತ್ತಿಕಾರಕ'ವಾಗಿರುವುದಿಲ್ಲ ; 'ಸಂಗ್ರಹಕಾರಕ'ವಾಗಿರುತ್ತದೆ. ಹಾಗೆ ಮಾಡುವುದರಿಂದ ಹಲಕೆಲವರಿಗೆ ಅವರವರ ಮಟ್ಟಿಗೆ ನೆಮ್ಮದಿಯಾಗುಬಹುದು. ಆದರೆ ಎಲ್ಲರೂ ಎಷ್ಟು ಕಾಲ ತಾನೆ ಸಂಪತ್ತನ್ನು ಸೃಷ್ಟಿಸದೆ ಸಂಗ್ರಹಿಸುತ್ತಲೆ ಹೋಗಲಾಗುತ್ತದೆ ? ಆದ್ದರಿಂದ ಮೇಧಾವಿಗಳಾದ ಯುವಕರು ತಮಗೆ ನವನಾಗರಿಕತೆಯ ಮಾಯಾಸ್ಮಿತ ರುಚಿ ದೊರಕೊಳ್ಳದಿದ್ದರೂ ಚಿಂತೆಯಿಲ್ಲ ಎಂದುಕೊಂಡು, ಗ್ರಾಮಗಳಲ್ಲಿಯೆ ನಿಂತು

ಜನರ ಆಧ್ಯಾತ್ಮಿಕ ಅಜ್ಞಾನವನ್ನೂ ಆಧಿದೈವಿಕ ಮೌಢ್ಯವನ್ನೂ ಆಧಿಭೌತಿಕ ಕಷ್ಟನಷ್ಟಗಳನ್ನೂ ಪರಿಹರಿಸಲು ಪ್ರಯತ್ನಿಸುವ ತಪಸ್ಸನ್ನು ಕೈಕೊಳ್ಳಬೇಕು.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೧೦

೧೧೫೨

ಭಾರತ ತನ್ನ ಸ್ವಾತಂತ್ರ್ಯದ ರಜತೋತ್ಸವವನು ನಡೆಸುತ್ತಿರುವ ಈ ಸಮಯದಲ್ಲಿ ನಾವು ಬಡತನವನ್ನು ಎಷ್ಟರಮಟ್ಟಿಗೆ ಪರಿಹರಿಸಿದ್ದೇವೆ ? ಜಾತಿಮತಗಳ ಭೇದ ಬುದ್ಧಿಯನ್ನು ಎಷ್ಟರಮಟ್ಟಿಗೆ ತೊಡೆದು ಹಾಕಿದ್ದೇವೆ ? ಉಳ್ಳವರ ಇಲ್ಲದವರ ನಡುವಣ ಅಂತರವನ್ನು ಎಷ್ಟು ಕಡಿಮೆಮಾಡಿದ್ದೇವೆ ? ಸಾಮಾನ್ಯರಲ್ಲಿ ಸಮಾಜವಾದೀ ಪ್ರಜಾ ಪ್ರಭುತ್ವದ ಜ್ಞಾನೋದಯವಾಗಲು ಏನೇನು ಕ್ರಮಕೈಗೊಂಡಿದ್ದೇವೆ? ವೈಚಾರಿಕ ಬುದ್ಧಿ ಮತ್ತು ವೈಜ್ಞಾನಿಕ ದೃಷ್ಟಿ ಇವುಗಳನ್ನು ಸಾರ್ವಜನಿಕರ ಮನಸ್ಸಿನಲ್ಲಿ ಯಾವ ಪ್ರಮಾಣದಲ್ಲಿ ಬೆಳೆಸಿದ್ದೇವೆ ? ಎಂಬ ವಿಚಾರವಾಗಿ ಸಿಂಹಾವಲೋಕನ ಮಾಡುವುದರ ಜೊತೆಗೆ ಅನಕ್ಷರತೆಯನ್ನು ಎಷ್ಟರಮಟ್ಟಿಗೆ ನಿವಾರಿಸಿದ್ದೇವೆ ? ಅಕ್ಷರಸ್ಥರನ್ನಾಗಿ ಮಾಡಿದವರಿಗೆ ಓದಲು ಉಚಿತವಾಗುವಂತೆ ಎಂತಹ ಪುಸ್ತಕಗಳನ್ನು ಎಷ್ಟೆಷ್ಟು ಒದಗಿಸಿದ್ದೇವೆ...ಎಂಬುದನ್ನೂ ಪರಿಶೀಲಿಸಬೇಕಾಗುತ್ತದೆ.

ವಿಚಾರ ಕ್ರಾಂತಿಗೆ ಆಹ್ವಾನ, ಶ್ರೀಸಾಮಾನ್ಯ ಮತ್ತು ವಿಚಾರ ಕ್ರಾಂತಿ, ಪುಟ ೧೦೮

೧೧೫೩

ಕಾರ್ಯಭೂಮಿಕೆಯಲ್ಲಿ ಬರಿಯ ಭಾವಭ್ರಾಂತಿಯ ಬೆಡಗಿನ ವೈಖರಿ ನಡೆಯುವದಿಲ್ಲ. ಹಳೆಯ ನಂಬುಗೆಗಳ ಬೇಳೆ ಅಲ್ಲಿ ಬೇಯುವುದಿಲ್ಲ. ಭಾವಭ್ರಾಂತಿಗೆ ವಶರಾಗಿ ವಿಜ್ಞಾನದೃಷ್ಟಿಗೆ ವಿರುದ್ಧವಾದುದನ್ನು ಏನಾದರೂ ಮಾಡಿದೆವೊ ಒಡನೆಯೆ ದುಷ್ಫಲ ನಮ್ಮನ್ನು ಬಡಿದೆಚ್ಚರಿಸುತ್ತದೆ. ಏಕೆಂದರೆ ಯಂತ್ರ ಸರಿಯಾಗಿ ನಡೆಯುವುದು ಅಥವಾ ನಡೆಯದಿರುವುದು ರಾಹುಕಾಲ ಗುಳಿಕಕಾಲದಿಂದಲ್ಲವಷ್ಟೆ ? ವಿದ್ಯುದಾಗರದ ಕೆಲಸ ಸುಸೂತ್ರವಾಗಿ ಜರುಗದಿದ್ದರೆ ಅಷ್ಟಗ್ರಹಯಾಗವನ್ನಾಗಲಿ ಚಂಡೀಯಾಗವನ್ನಾಗಲಿ ವಿಜೃಂಭಣೆಯಿಂದ ಜರುಗಿಸುವ ಮೂರ್ಖತೆ ಅದನ್ನು ಸರಿಪಡಿಸುವುದಿಲ್ಲವಷ್ಟೆ ?

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮೂರನೆಯ ಮುದ್ರಣಕ್ಕೆ ಮುನ್ನುಡಿ, ಪುಟ vi

೧೧೫೪

ತಾಯಿಯ ಗರ್ಭಕೋಶದಲ್ಲಿ ಶಿಶು ಕೇವಲ ಒಂಬತ್ತು ತಿಂಗಳ ಅಂತರದಲ್ಲಿ, ಸಹಸ್ರಾರು ಶತಮಾನಗಳ ಕಾಲದಲ್ಲಿ ಪೃಥ್ವಿಯ ಮಹಾರಂಗದಲ್ಲಿ ಜೀವವು ಆಡಿದ ವಿಚಿತ್ರವಾದ ಭವ್ಯ ನಾಟಕವನ್ನೆಲ್ಲ ಪುನರಭಿನಯಿಸಿ, ಅದರಲ್ಲಿ ತೇರ್ಗಡೆ ಹೊಂದಿದ ಮೇಲೆಯೇ ಆಧುನಿಕವಾಗಿ ಹುಟ್ಟಲು ಅರ್ಹವಾಗುತ್ತದಂತೆ. ಪ್ರಕೃತಿಯೇ ಅಷ್ಟು ಕಠೋರ ಪರೀಕ್ಷಕಳಾಗಿದ್ದಾಳೆ ಎಂದಮೇಲೆ ಸಂಸ್ಕೃತಿಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ನಿಜವಾಗಿಯೂ ನವೀನ ಮಾನವರಾಗುವುದು ಅಷ್ಟೇನು ಸುಲಭದ ಮಾತಲ್ಲ.

ಏಕೆಂದರೆ,......ಸಂಸ್ಕೃತಿ ಬುದ್ಧಿಪೂರ್ವಕವಾದ ಪ್ರಯತ್ನ ಸಾಹಸ ಮಹದಾಕಾಂಕ್ಷೆ ಮತ್ತು ತ್ಯಾಗಪೂರ್ಣ ತಪಸ್ಸುಗಳಿಲ್ಲದೆ ಕೈಸೇರುವುದಿಲ್ಲ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೪೫

೧೧೫೫

ಪೂರ್ಣದೃಷ್ಟಿಯೇ ನಿಜವಾದ ಶಾಶ್ವತವಾದ ಸರ್ವೋತ್ಕೃಷ್ಟವಾದ 'ದರ್ಶನ'. ಅಂತಹ 'ದರ್ಶನ'ದಲ್ಲಿ ವಿಜ್ಞಾನ, ರಾಜಕೀಯ, ಮತ, ತತ್ತ್ವ, ಕಲೆ ಎಲ್ಲವೂ ಅಂಗಗಳಾಗಿರುತ್ತವೆ ; ಅಂಶಗಳಾಗಿರುತ್ತವೆ. ಸಮನ್ವಿತಗಳಾಗಿರುತ್ತವೆ. ಶ್ರೇಷ್ಠನಾದ ಕವಿಗೆ ಅಂತಹ 'ದರ್ಶನ'ವಿರಬೇಕು. ಅಂತಹನು ರಸಋಷಿಯಾಗುತ್ತಾನೆ. ಅಂತಹನ ವಾಣಿಯಲ್ಲಿ ವೇದ ಶಾಸ್ತ್ರ ಕಲೆಗಳೆಲ್ಲ ಸಂಗಮವಾಗಿ ಕಾವ್ಯತ್ರಿವೇಣಿ ಜೀವನ ಸಮಸ್ತವನ್ನೂ ರಸಮಯವಾಗಿ ಮಾಡಿ ಪ್ರವಹಿಸುತ್ತದೆ. ಆದ್ದರಿಂದಲೇ ಋಷಿಯಲ್ಲದವನಿಗೆ ಉತ್ತಮ ಕಾವ್ಯರಚನೆ ಸಾಧ್ಯವಿಲ್ಲ ಎಂದು ಹಿಂದಿನವರು ಹೇಳಿದ್ದಾರೆ.

ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೩೧

೧೧೫೬

ಕೆಲಸಗಾರರು ಒಟ್ಟುಗೂಡಿ ಭಾರವಾದ ತೊಲೆಗಳನ್ನೆತ್ತುವಾಗ 'ಹೋ ಹೋ' ಎಂದು ಕೂಗುವುದನ್ನು ನೀವೆಲ್ಲ ಕೇಳಿರಬಹುದು. ಹಾಗೆಯೇ ದೋಣಿಯನ್ನು ನಡೆಯಿಸುವಾಗ ಅಂಬಿಗರು ತಾಳಕ್ಕೆ ಸರಿಯಾಗಿ ಹಾಡುತ್ತಾ ಹುಟ್ಟು ಹೊಡೆಯುತ್ತಾರೆ. ಸೈನಿಕರು ಮರಣೋನ್ಮುಖರಾಗಿ ರಣರಂಗಕ್ಕೆ ತೆರಳುವಾಗ ರಣವಾದ್ಯದೊಡನೆ ವೀರಗೀತೆಗಳನ್ನು ಹಾಡಿಕೊಳ್ಳುತ್ತಾರೆ. ಪ್ರಯಾಣಿಕನೊಬ್ಬನೇ ನಿರ್ಜನ ಪ್ರದೇಶದಲ್ಲಿ ದೂರಹಾದಿ ನಡೆಯುವಾಗ ಬೇಸರ ಪರಿಹಾರಕ್ಕಾಗಿ ಹಾಡಿಕೊಂಡು ಹಾದಿ ಸಾಗಿಸುತ್ತಾನೆ. ಕೆಲಸಗಾರರ 'ಹೋ ಹೋ' ಎಂಬ ಕಾಕು ತೊಲೆಯನ್ನೆತ್ತುತ್ತದೆಯೇ ? ಅಂಬಿಗರ ಹಾಡು ಹುಟ್ಟು ಹಾಕುತ್ತದೆಯೇ ? ಸೈನಿಕರ ವೀರಗೀತೆ ಹಗೆಗಳನ್ನು ಕೊಲ್ಲುತ್ತದೆಯೇ ? ಪ್ರಯಾಣಿಕನ ಹಾಡು ಅವನನ್ನು ಎತ್ತಿಕೊಂಡು ಹೋಗುತ್ತದೆಯೇ ? 'ಇಲ್ಲ ! ಹೌದು !' ಇವೆರಡೂ ಉತ್ತರಗಳೇ ! ತೊಲೆಯನ್ನು ಎತ್ತುವುದೇನೋ ಕೈ. ಆದರೆ 'ಹೋ ಹೋ' ಎಂಬ ಕಾಕು ಆ ಕೈಗೆ ಬಲೋತ್ಸಾಹಗಳನ್ನು ನೀಡುತ್ತದೆ. ಜೀವನದಲ್ಲಿ ಕಾವ್ಯವೂ ಹಾಗೆಯೇ. ಅದು ರಣೋನ್ಮುಖ ಭಟನಿಗೆ ಉತ್ಸಾಹವೀಯುತ್ತದೆ. ಅವನು ಸಾಯುವಾಗ ಶಾಂತಿಯನ್ನೂ ದಯಪಾಲಿಸುತ್ತದೆ. ಜೀವನದಲ್ಲಿ ಬಳಲಿ ಬೇಸತ್ತವರಿಗೆ ಅದು ಸಮಾಧಾನವಾಗುತ್ತದೆ. ನೂರಾರು ತೊಡಕುಗಳಲ್ಲಿ ಸಿಕ್ಕಿ ಕಂಗೆಟ್ಟವರಿಗೆ ಕಣ್ಣಾಗುತ್ತದೆ ; ಎದೆ ಗೆಟ್ಟವರಿಗೆ ಎದೆಯಾಗುತ್ತದೆ ; ಜೀವವಿಲ್ಲದವರಿಗೆ ಅಮೃತ ಸಂಜೀವಿನಿಯಂತೆ ಜೀವವಾಗುತ್ತದೆ. ಆದ್ದರಿಂದ ಸಂಕುಚಿತವಾಗದ ಬೃಹಜ್ಜೀಯಾದ ಸಾಹಿತ್ಯ ಜೀವನ ವೃಕ್ಷದ ಶಾಖೋಪಶಾಖೆಗಳಲ್ಲಿ ಪ್ರಾಣರಸವಾಗಿ ಪ್ರವಹಿಸಿ ಜಡಕ್ಕೆ ಚೇತನವೀಯುತ್ತದೆ ; ಶುಷ್ಕಕ್ಕೆ ರಸದಾನ ಮಾಡುತ್ತದೆ. ಮಹಾಕಾವ್ಯಗಳು ವ್ಯಾಕುಲರಾದ ಲಕ್ಷೋಪಲಕ್ಷ ಮಾನವರಿಗೆ ಶಾಂತಿಯ ಸಂಜೀವನವಾಗಿ, ಸುಖದ

ಸುಧಾಂಜನವಾಗಿ ಪರಿಣಮಿಸಿರುತ್ತವೆ ಎಂಬುದು ದೇಶ ದೇಶಗಳ ಬಹುಕಾಲದ ಅನುಭವದಿಂದ ಗೊತ್ತಾಗಿದೆ. ಆದ್ದರಿಂದಲೇ ಕವಿತೆ ಮನುಷ್ಯ ಜೀವನದಲ್ಲಿ ಅನಿವಾರ್ಯವಾದ, ಅತ್ಯಾವಶ್ಯಕವಾದ, ಅಮರವಾದ, ಅಪ್ರತಿಹತವಾದ ಜೀವನ ದೇವತಾ ಮೂರ್ತಿಯಾಗಿ ಪ್ರತಿಯೊಬ್ಬನ ಹೃದಯ ಮಂದಿರದಲ್ಲಿಯೂ ಪ್ರತಿಷ್ಠಿತವಾಗಿದೆ.

ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೩೯

೧೧೫೭

ಆ ಕಡೆಗೋಲು ಕಂಬಕ್ಕೆ ಎಲ್ಲಿಯಾದರೂ ಮಾತಾಡುವ ಶಕ್ತಿ ಬಂದರೆ ಎಷ್ಟು ಗುಟ್ಟುಗಳು ರಟ್ಟಾಗಿ ಹೋಗುತ್ತವೆ! ಎಷ್ಟು ಸ್ನೇಹ ಪ್ರೇಮಗಳು ನುಚ್ಚುನೂರಾಗಿ ಮಣ್ಣುಗೂಡುತ್ತವೆ! ಎಷ್ಟು ದ್ವೇಷ ಮಾತ್ಸರ್ಯಗಳು ಹಾಳಾಗಿ, ಮತ್ತೆ ಸ್ನೇಹ ಶಾಂತಿಗಳು ಮೂಡುತ್ತವೆ! ಅದಕ್ಕೆಲ್ಲಿಯಾದರೂ ಬಾಯಿ ಬಂದರೆ ದೇವರೇ ಗತಿ! ರಾಮಾಯಣ ಮಹಾಭಾರತಗಳಿಂತಲೂ ದೊಡ್ಡ ಪುರಾಣವಾಗಿ ಹೋಗುತ್ತದೆ! "ಅಯ್ಯೋ ನಾವು ರಾಮ, ಸೀತೆ, ಹನುಮಂತ, ರಾವಣ, ಪಂಚಪಾಂಡವರು, ಕೃಷ್ಣ, ಕೌರವ, ದ್ರೌಪದಿ ಇವರುಗಳ ಕಥೆಯೇ ಹೆಚ್ಚೆಂದು ತಿಳಿದಿದ್ದೆವಲ್ಲಾ!" ಎಂದು ವಾಲ್ಮೀಕಿ ವ್ಯಾಸಾದಿ ಕವಿವರ್ಯರೂ ನಾಚಿ ತಲೆಬಾಗಬೇಕಾಗುತ್ತದೆ. ಸದ್ಯಕ್ಕೆ ಅದಕ್ಕೆ ಬಾಯಿಲ್ಲ; ಅಥವಾ ಇದ್ದರೂ ಇಲ್ಲದವರಂತೆ ನಟಿಸುತ್ತಿದೆ. ಆದ್ದರಿಂದ ಅವರೆಲ್ಲರೂ ಬದುಕಿಕೊಂಡಿದ್ದಾರೆ!

ಕಾನೂರು ಹೆಗ್ಗಡಿತಿ, ಪುಟ ೫೩

೧೧೫೮

....ಶಕ್ತಿವಿಶೇಷವನ್ನು ಸಂದರ್ಶಿಸಿದ ಸಾಮಾನ್ಯಚೇತನದಲ್ಲಿ ವಿಕಾಸಾಕಾಂಕ್ಷೆ ಪ್ರಶಂಸಾರೂಪದಲ್ಲಿ ಹೃದಯಚಾರಿಯಾಗಿ ಕಾಣಿಸಿಕೊಳ್ಳುತ್ತದೆ. ಈರ್ಷ್ಯೆ ಅಸೂಯೆ ಮಾತ್ಸರ್ಯಾದಿಗಳ ರೂಪದಲ್ಲಿಯೂ ಅನೇಕ ವೇಳೆ ತೋರುವುದುಂಟು. ಆದರೆ ಅದೂ ಪ್ರಶಂಸೆಯ ವಿಪರೀತ ಸ್ಥಿತಿಯೆ. ಜೀವದ ಅಜ್ಞಾನದಿಂದ ಆ ವಿಕಾರ ಒದಗುತ್ತದೆ. ಅಂತಹ ಮನೋವಿಕಾರಕ್ಕೆ ದೊರೆಕೊಳ್ಳುವ ಪ್ರತಿಫಲದ ಆಘಾತದಿಂದ ಚೇತನ ಇಂದಲ್ಲ ನಾಳೆ ಎಚ್ಚರುತ್ತದೆ; ತರುವಾಯ ಅಧೋಗಮನದ ಅಡ್ಡ ಹಾದಿಯನ್ನು ತ್ಯಜಿಸಿ ಋಜುಪಥಕ್ಕೆ ಬಂದು ಊರ್ಧ್ವಗಾಮಿಯಾಗುತ್ತದೆ.

ವಿಭೂತಿ ಪೂಜೆ, ಕವಿಯಲ್ಲಿ ವಿಭೂತಿ, ಪುಟ ೪-೫

೧೧೫೯

ರಸಾನುಭೂತಿ ಒಂದು 'ಮಿಂಚು'; ಬರಿಯ 'ತಯಾರಿಕೆ'ಯಲ್ಲ. ಪ್ರತಿಭಾಶಾಲಿಯಾದ ಕವಿಯಲ್ಲಿಯೆ ಆಗಲಿ ಅಥವಾ ಉತ್ತಮ ಸಂಸ್ಕಾರದ ಸಹೃದಯನಲ್ಲಿಯೆ ಆಗಲಿ ಉಪಮಾಸೃಷ್ಟಿ ಹೊಳೆಯುತ್ತದೆ; ಬೆಳೆಯುವುದಿಲ್ಲ. ಬೆಳೆಯುವುದೇ ಇಲ್ಲವೆಂದಲ್ಲ. ಸಂಸ್ಕಾರ ಪಕ್ವವಾಗಬೇಕಾದರೆ ಅನೇಕ ಅನುಭವಗಳು ಸೇರಿ ಭಾವಕೋಶ ಬೆಳೆದಿರಲೇಬೇಕು. ಆದರೆ ಆ ಬೆಳವಣಿಗೆ ಅಂತಶ್ಚಿತ್ತದಲ್ಲಿ ಗುಪ್ತವಾಗಿರುತ್ತದೆ; ಸುಪ್ತವಾಗಿರುತ್ತದೆ. ಮೆಟ್ಟಿದೊಡನೆ ಬುಸ್ಸೆಂದು ಹೆಡೆಯೆತ್ತುವ ನಾಗರಹಾವಿನಂತೆ

ಸುರಳಿ ಸುತ್ತಿಕೊಂಡಿರುತ್ತದೆ. ಬೆಳೆಯುವುದೆಲ್ಲ ಮನಶ್ಶಾಸ್ತ್ರದ್ದು; ಹೊಳೆಯುವುದೆಲ್ಲ ಕಾವ್ಯದ್ದು.

ತಪೋನಂದನ, ಮಹೋಪಮೆ, ಪುಟ ೬೫-೬

೧೧೬೦

ಪ್ರಸಿದ್ಧರಾದ ಆಧುನಿಕ ಲೇಖಕರೆಲ್ಲರೂ ಹಳಗನ್ನಡ ಸಾಹಿತ್ಯದಲ್ಲಿ ಪಾಂಡಿತ್ಯವನ್ನು ಸಂಪಾದಿಸಿದವರೇ. ಉತ್ತಮರಾದ ನಮ್ಮ ಪೂರ್ವಕವಿಗಳಲ್ಲಿ ಅವರಿಗೆ ಬಲು ಮಮತೆ. ಪೂರ್ವಕವಿಗಳ ಶ್ರೇಷ್ಠವಾದ ರಸಕೃತಿಗಳನ್ನು ಬಯಲಿಗೆ ಬೀರಲು ಅವರುಗಳು ನಾನಾವಿಧವಾಗಿ ಪ್ರಯತ್ನಪಡುತ್ತಿದ್ದಾರೆ.

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೨೩

೧೧೬೧

ಮೈಯೆಲ್ಲ ಕಜ್ಜಿಯಿರೆ ಮೊಗದ ಸಿರಿ
ಸೊಗಸುವುದೆ ? ಸಿಂಗರಿಸೆ ಬಣ್ಣದ ಹುಡಿಯನೆರಚಿ
ಕೆನ್ನೆಗೆ, ತುಟಿಗೆ ಕೆಂಪುರಂಗನು ಬಳಿದುಹಚ್ಚಿ,
ಮುಡಿಗೆ ಹೂ ಮುಡಿಸಿ, ಸುಕ್ಕಿನ ತೆರೆಗಳನು ಮುಚ್ಚಿ,
ಬಂದೀತೆ ನೈಜಸೌಂದರ್ಯದ ಸಹಜ ಸುರುಚಿ ?

ಕೃತ್ತಿಕೆ, ಕನ್ನಂಬಾಡಿ, ದಾರಿಯಹಳ್ಳಿ-೬, ಪುಟ ೪೪

೧೧೬೨

ಬಾರಿಸು ಕನ್ನಡ ಡಿಂಡಿಮವ,
ಓ ಕರ್ನಾಟಕ ಹೃದಯಶಿವ !
ಸತ್ತಂತಿಹರನು ಬಡಿದೆಚ್ಚರಿಸು ;
ಕಚ್ಚಾಡುವರನು ಕೂಡಿಸಿ ಒಲಿಸು.
ಹೊಟ್ಟೆಯಕಿಚ್ಚಿಗೆ ಕಣ್ಣೀರ್ ಸುರಿಸು ;
ಒಟ್ಟಿಗೆ ಬಾಳುವ ತೆರದಲಿ ಹರಸು !
ಕ್ಷಯಿಸೆ ಶಿವೇತರ ಕೃತಿಕೃತಿಯಲ್ಲಿ
ಮೂಡಲಿ ಮಂಗಳ ಮತಿಮತಿಯಲ್ಲಿ ;
ಕವಿ ಋಷಿ ಸಂತರ ಆದರ್ಶದಲಿ
ಸರ್ವೋದಯವಾಗಲಿ ಸರ್ವರಲಿ !

ಪ್ರೇತ ಕ್ಯೂ, ಕನ್ನಡ ಡಿಂಡಿಮ, ಪುಟ ೪೩

೧೧೬೩

ಪರ್ವತಶೃಂಗಗಳಿಂದ ಹರಿದು ಬರುವ ತಿಳಿನೀರಿನ ತರಂಗಿಣಿಗಳೂ, ಮನೋರಂಜಕವಾದ ಹಸುರು ಪತ್ರಗಳಿಂದ ಆಚ್ಛಾದಿತವಾದ ರಮ್ಯ ಅರಣ್ಯಗಳೂ, ವಿಶ್ವಮಾತೆಯ ಕಂಗಳ ನೀಲಕಾಂತಿಯೊ ಎಂಬಂತೆ ತೋರುವ ಆಕಾಶವೂ,

ಜಲಧಿಯ ಮಹಾತರಂಗಗಳಂತೆ ದಿಗಂತಪರ್ಯಂತ ಪಸರಿಸಿರುವ ಗಿರಿಗಳೂ, ಉದಯಿಸುತ್ತಿರುವ ರವಿಯ ಕಿರಣಗಳನ್ನು ಪ್ರತಿಬಿಂಬಿಸಿ ನಲಿಯುವ ಸರೋವರಗಳೂ, ಮನಸ್ಸನ್ನು ಮೋಹಗೊಳಿಸುವ ಹಸುರಾದ ಪೈರುಗಳಿಂದ ತುಂಬಿದ ಹೊಲಗದ್ದೆಗಳೂ, ಮೃದುಮಧುರವಾದ ಗಾಯನದಿಂದ ಕಠಿನಹೃದಯಗಳನ್ನು ಕೂಡ ಕರಗಿಸುವ ವಿಹಂಗಗಳೂ, ಅಡವಿ ಹೊಲ ಗದ್ದೆಗಳಲ್ಲಿ ಸ್ವೇಚ್ಛೆಯಾಗಿ ತಿರುಗಾಡುವ ಜಿಂಕೆ ನವಿಲು ಮೊದಲಾದ ಜೀವಜಂತುಗಳೂ–ಇವೇ ಮೊದಲಾದವುಗಳ ಸಮುದಾಯಕ್ಕೆ 'ಪ್ರಕೃತಿ' ಎಂದರ್ಥ. ಇವುಗಳ ಪೃಥಕ್ತ್ವಕ್ಕೆ ಪ್ರಕೃತಿ ಎಂದರ್ಥವಿಲ್ಲ; ಇವುಗಳ ಏಕತ್ವಕ್ಕೆ (ಸಮಷ್ಟಿ) ಪ್ರಕೃತಿ ಎಂದರ್ಥ.

ಇತ್ಯಾದಿ, ಪ್ರಕೃತಿಸೌಂದರ್ಯ, ಪುಟ ೧–೨

೧೧೬೪

ಕವಿಪ್ರತಿಭೆಯ ಸೂಕ್ಷ್ಮ ಸೌಂದರ್ಯಗಳನ್ನು ಅರಿಯಲು ವಿಮರ್ಶನ ಕಲೆ ಎಷ್ಟರ ಮಟ್ಟಿಗೆ ಆವಶ್ಯಕವೋ ಆ ಪ್ರತಿಭೆಯನ್ನು ಆಸ್ವಾದಿಸಲು ಗಮಕ ಕಲೆ ಅಷ್ಟೇ ಮಟ್ಟಿಗೆ ಆವಶ್ಯಕ. ವಿಮರ್ಶಕರು ಗಮಕಿಗಳಾಗಿ, ಗಮಕಿಗಳು ವಿಮರ್ಶಕರಾಗಿ ಅಥವಾ ವಿಮರ್ಶಕರಿಂದ ಗಮಕಿಗಳರಿತು, ಗಮಕಿಗಳಿಂದ ವಿಮರ್ಶಕರನುಭವಿಸಿ, ಒಬ್ಬರಿಗೊಬ್ಬರು ನೆರವಾಗಿ ಎರಡೂ ಕಲೆಗಳ ಉಪಾಸಕರು ಅನ್ಯೋನ್ಯತೆಯಿಂದ...ಸೇವೆಗೆ ಹೊರಟರೆ ಎಂತಹ ಆಶೀರ್ವಾದವಾದೀತು ಜನಜೀವನಕ್ಕೆ.

ವಿಭೂತಿ ಪೂಜೆ, ಕಲಿಯದವರಿಗೂ ಕಾಮಧೇನು, ಪುಟ ೧೭

೧೧೬೫

ನೀನಾರೆ ಆಗಿರಲಿ, ನೀನೆಲ್ಲೆಯೆ ಇರಲಿ, ನಿನಗಿದೋ
ನಮಸ್ಕಾರ! ಸಾಷ್ಟಾಂಗ ನಮಸ್ಕಾರ!
ಲೋಕದ ಕಣ್ಣಿಗೆ ನೀ ಬೀಳದಿರಬಹುದು. ಲೋಕ
ನಿನ್ನನು ಲೆಕ್ಕಿಸದಿರಬಹುದು. ಆದರೆ ಜಗದೀಶನ ಕಣ್ಣನೆಲ್ಲಾ
ನೀನೆ ತುಂಬಿರುವೆ! ಆತನ ಎದೆಯನೆಲ್ಲಾ ನೀನೆ ಆವರಿಸಿರುವೆ!
ನೀನೇನಾದರೂ ಆಗಿರು, ನೀನಾರಾದರೂ ಆಗಿರಿ,
ನೀನೆಲ್ಲಾದರೂ ಇರು, ಎಂತಾದರೂ ಇರು;
ಅಥವಾ ನೀನಿಲ್ಲದೆ ಮೃತನಾಗಿರು, ಮಣ್ಣಾಗಿರು;
ಅಜ್ಞಾತ ಮಹಾತ್ಮನೆ, ನಿನಗಿದೋ ನಮಸ್ಕಾರ! ಸಾಷ್ಟಾಂಗ
ನಮಸ್ಕಾರ; ಉದ್ದಂಡ ನಮಸ್ಕಾರ!

ಕಿಂಕಿಣಿ, ನಮಸ್ಕಾರ, ಪುಟ ೫೫

೧೧೬೬

ಕೆಲವೂ ಸ್ಥೂಲ, ಮತ್ತೆ ಕೆಲವು ಸೂಕ್ಷ್ಮ. ವೇದ ಕೊರಾನ್ ಬೈಬಲ್ಲುಗಳನ್ನಾಗಲಿ, ಚರ್ಚು ಮಸೀದು ದೇವಾಲಯಗಳನ್ನಾಗಲಿ, ಕ್ರಿಸ್ತ ಶಿವ ಮಹಮ್ಮದರನ್ನಾಗಲಿ

ಪವಿತ್ರವೆಂದು ಗೌರವಿಸುವುದೂ ಮೂರ್ತಿಪೂಜೆ. ಆದ್ದರಿಂದ ಎಲ್ಲ ಮತಗಳೂ ಎಲ್ಲ ಮಾನವರೂ–ಅಹಂಕಾರ ಎಂಬ ವಿಗ್ರಹವನ್ನು ನಾಶಮಾಡಿಕೊಂಡಿರುವ ಮುಕ್ತನ ಹೊರತು–ವಿಗ್ರಹಾರಾಧಕರೇ. ಅಹಂಭಾವವಿರುವವರೆಗೆ ಮನುಷ್ಯನ ಭಾಗಕ್ಕೆ 'ನಿರಾಕಾರ' ಎಂಬುದು ಒಂದು ಬರಿಯ ಮಾತು. ಎಂತಹ ಮೇಧಾವಿಗಾದರೂ ನಿರಾಕಾರವೂ ಆಲೋಚನೆಯ ವಸ್ತುವಾಗದು. ಕಡೆಗೆ ಆಕಾಶ ಕಾಲ ದೇಶಗಳಾದರೂ ಆತನ ಮನಸ್ಸಿನ ಮಹಾಮೂರ್ತಿಗಳಾಗಿ ಉಳಿಯುವುವು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೫೧

೧೧೬೭

ಸಮಗ್ರ ಕಾವ್ಯವೇ ಪ್ರತಿಮೆಯಾಗಿರುವಾಗ ಅದರ ಒಂದೊಂದು ಅವಯವವೂ ಆ ಪ್ರತಿಮಾಲಕ್ಷಣದಿಂದ ಬದ್ಧ. ಒಂದೊಂದು ಅವಯವವನ್ನೂ ಸಮಗ್ರ ಪ್ರತಿಮಾ ದೃಷ್ಟಿಯಿಂದ ಪರೀಕ್ಷಿಸಿದರೆ ಅದರದರ ಪೂರ್ಣಾರ್ಥವೂ ಪೂರ್ಣಪ್ರಯೋಜನವೂ ತಿಳಿಯುವುದಲ್ಲವೆ ಪರಸ್ಪರ ಸಾಪೇಕ್ಷತ್ವವೂ ಬೋಧವಾಗುತ್ತದೆ. ಒಂದಕ್ಕೊಂದು ಕಾರಣ ವಾಗಿ, ಒಂದಕ್ಕೊಂದು ಕಾರ್ಯವಾಗಿ, ಪೂರ್ಣದ ಪ್ರಯೋಜನವು ಒಂದೊಂದು ಅಂಶ ದಲ್ಲಿಯೂ ಪೂರ್ಣವಾಗಿರುವುದೂ, ಒಂದೊಂದು ಅಂಶದ ಪುರುಷಾರ್ಥದಲ್ಲಿ ಪೂರ್ಣದ ಪುರುಷಾರ್ಥವು ಸಾರತಃ ಪೂರ್ಣವಾಗಿಯೆ ಇರುವುದೂ ವೇದ್ಯವಾಗುತ್ತದೆ.

ತಪೋನಂದನ, ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ, ಪುಟ ೧೩೦

೧೧೬೮

ನಾನು ಹೇಳಿದೆನಲ್ಲ, ಹಾಡುವ ಕೆಲವು ಭಕ್ತಿಗೀತೆಗಳನ್ನು ಆಕಾಶವಾಣಿಯಲ್ಲಿ ಒಂದಿಷ್ಟು ಸೋಬಾನೆ ಹಾಡಿದ ಹಾಗೆ ರಾಗಹಾಕಿ ಹಾಡುತ್ತಾರೆ. ಈ ರೀತಿ ಭಕ್ತಿಗೀತೆ ಗಳಿಗೆ ಅಧ್ಯಾತ್ಮಗೀತೆಗಳಿಗೆ ಬೇಕಾದರೆ ಸರಿಹೋಗುತ್ತದೆ. ಆದರೆ ವೀರಗೀತೆಗಳಿಗೆ ಕ್ರಾಂತಿ ಕವನಗಳಿಗೆ ಸರಿಹೋಗುವುದಿಲ್ಲ. ಇಂಥದಕ್ಕೆಲ್ಲ ಸಂಗೀತ ಹಾಕಬಾರದು.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೬೬–೭

೧೧೬೯

ಆಕಾಶದ ನೀಲಗಭೀರ ಅನಂತತೆಯನು ನೋಡಿ,
ಸಮುದ್ರದ ಅಪಾರ ಸುನೀಲ ವಿಸ್ತೀರ್ಣವನು ನೋಡಿ,
ಮುಗಿಲವರೆಗೆ ತಲೆಯೆತ್ತಿ ಪರ್ವತ ಶಿಖರಗಳ
ಧೀರ ಪ್ರಶಾಂತ ಸ್ಥೈರ್ಯವನು ನೋಡಿ,
ಸೂರ್ಯ ಚಂದ್ರ ತಾರೆಗಳ ಚಿರಜ್ಯೋತಿಯನು ನೋಡಿ,
ಶ್ರಾವಣ ಸಮೀರಣನ ದುರ್ದಮ್ಯಧೀರತೆಯ ನೋಡಿ,
ವಸಂತ ವನರಾಜಿಯ ವಿವಿಧ ವಿಚಿತ್ರ
ಶತಸಹಸ್ರಸ್ವರ್ಣವರ್ಣಮಯ ಐಶ್ವರ್ಯವನು ನೋಡಿ,

ಎಲ್ಲೆ ಕಿರಿಯ ಹೂವೆ, ಬೆದರದಿರು ; ಬೆರಗಾಗದಿರು ;
ನಾಚದಿರು ; ಕರುಬದಿರು.

ಕಿಂಕಿಣಿ, ನಿರ್ಭರತೆ, ಪುಟ ೩೩

೧೧೭೦

ನಾವೀಗ ಮಾತೃಭಾಷೆಯ ತಳ್ಳಿ ದೂರ
ಪರಭಾಷೆಯನ್ನಪ್ಪಿ ಚುಂಬಿಪೆವು ಪೂರ !
ನಮ್ಮ ನಾಡಿನ ನುಡಿಯು ನಮಗೆ ಸೊಗಸಲ್ಲ
ಪರಭಾಷೆಯೆಂದರದು ನಮಗೆಲ್ಲ ಬೆಲ್ಲ.

ಹಾಳೂರು, ಪಂಕ್ತಿ ೭೧ರಿಂದ೭೪, ಪುಟ ೫

೧೧೭೧

ಮತಿ ಸರ್ವೋತ್ಕೃಷ್ಟವಾದ ಆಯುಧ. ನಿಜವಾದ ಭಕ್ತಿ ಜ್ಞಾನ ಮಿಶ್ರವಾಗಿರಬೇಕು. ಮತಿಹೀನವಾದ ದುಷ್ಪರಿಣಾಮಕಾರಿ. ವಿವೇಕವಿಚಾರ ವಿರಹಿತವಾದ ಬುದ್ಧಿವಿಹೀನತೆ, ಚಿತ್ತೋನ್ಮಾದ, ಹೃದಯೋದ್ರೇಕ ಅಥವಾ ಸ್ವಮತಭ್ರಾಂತಿಗೆ ಧರ್ಮಾವೇಶವೆಂದೂ ಶ್ರುತಿ ಭಕ್ತಿಯೆಂದೂ ಅಂತಃಸ್ಫೂರ್ತಿಯೆಂದು ಅಥವಾ ಈಶ್ವರವಾಣಿಯೆಂದೂ ಹೆಸರಿಟ್ಟುಕೊಂಡು ಮಂದಮತಿಗಳನೇಕರು ಮತದ ಹೆಸರಿನಲ್ಲಿಯೂ ದೇವರ ಹೆಸರಿನಲ್ಲಿಯೂ ಧರ್ಮದ ಹೆಸರಿನಲ್ಲಿಯೂ ನಾಗರಿಕತೆಗೆ ಹಾನಿಕರವಾದ ಅನೇಕ ಮಹಾಪರಾಧಗಳನ್ನು ಹಿಂದೆ ಮಾಡಿರುತ್ತಾರೆ; ಇಂದೂ ಮಾಡುತ್ತಿದ್ದಾರೆ; ಸನ್ನಿವೇಶವನ್ನು ಪರೀಕ್ಷಿಸಿದರೆ ಮುಂದೆಯೂ ಮಾಡುತ್ತಾರೆಂದು ತೋರುತ್ತದೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨೦೧

೧೧೭೨

ಹೊಟ್ಟೆಗಿಷ್ಟು ಹಿಟ್ಟು ಕೊಡಿ ;
ನನ್ನ ನನಗೆ ಬಿಟ್ಟು ಬಿಡಿ.
ಹಾಡೆ, ಕೇಳಿ, ಹರುಷಪಡಿ :
ಇಷ್ಟೆ ಕವಿಯ ಪ್ರಾರ್ಥನೆ.

ಕದರಡಕೆ, ಲೋಕಕ್ಕೆ ಕವಿಯ ಪ್ರಾರ್ಥನೆ, ಪುಟ ೮೨

೧೧೭೩

ಬಡಜನರ ಕಣ್ಣೆತ್ತಿ ನೋಡದಿಹ, ಮರುಗದಿಹ
ಹಾಳು ಪೂಜೆಯದೇಕೆ ?

ಜಲಗಾರ, ಪಾತ್ರ ಮೊದಲನೆಯ ತರುಣ, ಪುಟ ೧೭

೧೧೭೪

ನೂರು ವೇಷ, ನೂರು ಭಾವ ;
ನೂರು ರೀತಿ ಬಹನೊ ದೇವ !

ಪ್ರೇಮ ಕಾಶ್ಮೀರ, ಗೋಪಿ, ಪುಟ ೬

೧೧೭೫

ಭಗವಂತನ ಲೀಲೆಗೆ ಉದ್ದೇಶವಿಲ್ಲ. ಇದ್ದರೂ ಅಸಂವೇದ್ಯ.

ಸಂನ್ಯಾಸಿ ಮತ್ತು ಇತರ ಕಥೆಗಳು, ಸಂನ್ಯಾಸಿ, ಪಾತ್ರ ಚೈತನ್ಯ, ಪುಟ ೫

೧೧೭೬

ಹೊರಗಿನ ಸುಂದರ ಪ್ರಕೃತಿಮಯ ಜಗತ್ತೂ ಅಂತರಂಗದ ದಿವ್ಯ ಭಾವಗಳ ಪ್ರಪಂಚವೂ ಸರ್ವರಿಗೂ ಸುಲಭವಾದ ಮಹಾಪುರುಷರ ಕೃತಿಗಳಲ್ಲಿರುವ ಮಹದಾಲೋಚನೆಗಳೂ ನಮಗೆ ದೇವಸ್ಥಾನ, ಪೂಜೆ, ಗುರು, ಮಂತ್ರ ಇವುಗಳೆಲ್ಲವೂ ಆಗಲಿ; ಪ್ರಯತ್ನಿಸುವವರಿಗೆಲ್ಲ ಆ 'ದರ್ಶನ' ಲಭಿಸುವುದರಲ್ಲಿ ಸಂದೇಹವಿಲ್ಲ ; ಅದು ಸಿದ್ಧಿಸುವವರೆಗೂ ನಮಗಾಗಲಿ ನಮ್ಮ ದೇಶಕ್ಕಾಗಲಿ ಮೋಕ್ಷವಿಲ್ಲ ; ಸುಖವಿಲ್ಲ ; ಶಾಂತಿಯಿಲ್ಲ ; ದಾಸ್ಯದಿಂದ ಬಿಡುಗಡೆಯಿಲ್ಲ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೯

೧೧೭೭

ಪತ್ರಿಕೆಗಳಲ್ಲಿ ನವ್ಯಕಾವ್ಯದ ಹೆಸರಿನಲ್ಲಿ ಏನೇನೂ ಪ್ರಕಟವಾಗುತ್ತಿವೆ. ಅರ್ಥ ಸ್ಪಷ್ಟತೆ ಹುಡುಕಿದರೂ ಸಿಗುವುಲ್ಲ. ಗದ್ಯವೋ ಪದ್ಯವೋ ಏನೋ ಆಗುತ್ತದೆ. ಚಿತ್ರಗಳನ್ನೂ ಹಾಕಿರುತ್ತಾರೆ. ಅದರಲ್ಲೂ ವಿಶೇಷವಾಗಿ ಲೈಂಗಿಕ ಪ್ರಚೋದನೆಯೆ ಪ್ರಧಾನವಾಗಿರುತ್ತದೆ ಎಂಬುದು ಆ ಚಿತ್ರದ ಅಂತರಂಗ ಹೊಕ್ಕು ನೋಡಿದರೆ ಗೊತ್ತಾಗುತ್ತದೆ. ಅನಿಯತ ಕಾಲ ಪತ್ರಿಕೆ ವಾರಪತ್ರಿಕೆ ಮಾಸಪತ್ರಿಕೆ ಹೀಗೆ ಈಗ ಬೇಕಾದಷ್ಟು ಪತ್ರಿಕೆಗಳು ಹೊರಡುತ್ತಿವೆ. ಅವುಗಳಿಗೂ ಕೂಡ ಸಾಮಗ್ರಿ ಬೇಕು. ಏನೋ ಒಂದು ಆದರೆ ಸರಿ, ತೆಗೆದುಕೊಳ್ಳುತ್ತಾರೆ, ಹಾಕುತ್ತಾರೆ. ಅದರ ಜೊತೆಗೆ, 'ವಾಚಕರ ವಾಣಿ'ಗಳು ಬರುತ್ತವೆ. ಅದರಲ್ಲಿ ಇವರ ಸ್ನೇಹಿತರು ಯಾರೋ ಅದನ್ನು ಹೊಗಳುತ್ತಾರೆ, ಅದ್ಭುತವಾಗಿದೆ ಎಂದು. ಪಾಪ, ಸಾಮಾನ್ಯ ಜನಕ್ಕೆ "ಅದೇ ನಿಜ, ಇರಬಹುದು" ಎನಿಸುತ್ತದೆ. ಇತರರು ಅಷ್ಟೇನೂ ಅದ್ಭುತವಾಗಿಲ್ಲ, ಸ್ವಲ್ಪ ತಿದ್ದಿಕೊಳ್ಳಬೇಕಾಗುತ್ತದೆ ಎಂದರೆ, ಇವರು ಬೇರೆ ಪಂಗಡಕ್ಕೆ ಸೇರಿದವರು, ಬೇರೆ ಪಂಥಕ್ಕೆ ಸೇರಿದವರು, ನಮ್ಮ ವಿಚಾರದಲ್ಲಿ ಕೆಟ್ಟ ಮಾತು ಹೇಳುತ್ತಾ ಇದ್ದಾರೆ ಎಂದು ದೂರುತ್ತಾರೆ. ಹೀಗೆ ಇಂಥಾದ್ದೆಲ್ಲಾ ಏನೇನೊ ನಡೆಯುತ್ತದೆ. 'ಅಕಾವ್ಯ' ಎಂದು ಒಂದು ಪಂಥವಂತೆ ; ತೆಲುಗಿನ ಕಡೆ 'ದಿಗಂಬರ ಕಾವ್ಯ' ಎಂಬ ಹೆಸರಿನ ಒಂದು ಬೀದಿಯ ಸಾಹಿತ್ಯಪಂಥ ಹುಟ್ಟಿದೆಯಂತೆ. 'ಅನರ್ಥ ಕಾವ್ಯ' ಎಂದೂ ನಮ್ಮಲ್ಲಿ ಒಂದು ಪಂಥ ಹುಟ್ಟಬಹುದೇನೊ !–ಹೀಗೆ ಎಷ್ಟೆಷ್ಟೋ ಹೆಸರುಗಳು ಹುಟ್ಟುತ್ತಿವೆ. ಅಣಬೆಗಳಂತೆ ! ಕಡೆಕಡೆಗೆ ಯಾವುದು ಕಾವ್ಯ, ಯಾವುದು ಅಲ್ಲ ಎನ್ನುವ ಗೊಂದಲಕ್ಕೆ ಈಡಾಗುತ್ತೇವೆ.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೨೦

೧೧೭೮

ಬಡವನೆಂದುಸುರಲತಿನಾಚುವೆನು, ದೇವ,
ಪೊಡವಿಗಧಿಪತಿ ನೀನೆ ಹೃದಯದೊಳಗಿರಲು,

ಕೊಳಲು, ಬಡವನೆಂದುಸುರಲತಿ ನಾಚುವೆನು ದೇವ, ಪುಟ ೧೯

೧೧೭೯

ಕೀರ್ತಿಯೆಂಬುದು ಗಿರಿಯ ಕಂದರದ
ನೀಹಾರಮಿನನುದಯಕೆಂತು ಹಬ್ಬುವುದಂತು
ಕಿವಿಯಿಂದ ಕಿವಿಗೆ ನಾಲಗೆಯಿಂದ ನಾಲಗೆಗೆ
ನೆಗೆಯುವುದು ಹಿಂಜಿ ಹಸರಿಸಿ ಹಬ್ಬಿ. ಗಾತ್ರವದು
ಸೂತ್ರವಲ್ಲಾತ್ಮಕ್ಕೆ.

ಚಿತ್ರಾಂಗದಾ, ಮೂರನೆಯ ಪರ್ವಂ, ಪಾತ್ರ ಅರ್ಜುನ, ಪಂಕ್ತಿ ೯೫–೯, ಪುಟ ೩೭

೧೧೮೦

ಪ್ರಾಚ್ಯಪಾಶ್ಚಾತ್ಯ ಪ್ರಾಚೀನ ಅರ್ವಾಚೀನಗಳ ಸಾರ್ವಕಾಲಿಕ ಮತ್ತು ಸಾರ್ವಧಾರ್ಮಿಕ ಸಮಿಷ್ಟಿರೂಪದ ಯುಗಪ್ರಜ್ಞೆಯ ಆವಿರ್ಭೂತಿಯಂತಿರುವ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ವ್ಯಾವಹಾರಿಕವಾಗಿ 'ಕುವೆಂಪು ಕೃತಿ' ಎಂದು ಕರೆಯಲಾಗಿದ್ದರೂ ಪಾರಮಾರ್ಥಿಕವಾಗಿ ನೋಡಿದರೆ 'ಕುವೆಂಪು'ವನ್ನೆ ಅದು ಸೃಜಿಸಿದೆ. ಅದು ಯುಗ ಚೈತನ್ಯದ ಸಮಷ್ಟಿ ಪ್ರಜ್ಞೆಯ ಸೃಷ್ಟಿ. ಅದು ಶ್ರೀ ರಾಮಾಯಣದ ಅತ್ಯಂತ ಆಧುನಿಕ ಅವತಾರ; ಅದು ವೈದಿಕ ಸಂಪ್ರದಾಯದ ವಾಲ್ಮೀಕಿ ರಾಮಾಯಣಕ್ಕೆ ಋಣಿಯಾಗಿರುವಂತೆ ಜೈನ ಸಂಪ್ರದಾಯದ ರಾಮಾಯಣಗಳಿಗೂ ಋಣಿಯಾಗಿದೆ. ವ್ಯಾಸ, ವಾಲ್ಮೀಕಿ, ಪಂಪ, ನಾಗಚಂದ್ರಾದಿಗಳಿಗೆಂತೊ ಅಂತೆಯೆ ಹೋಮರ್, ವರ್ಜಿಲ್, ಡಾಂಟೆ, ಮಿಲ್ಟನ್ನರಿಗೂ ಋಣಿಯಾಗಿದೆ. ಅಲ್ಲಿ ಶ್ರೀ ರಾಮಕೃಷ್ಣ–ವಿವೇಕಾನಂದರ ಸಮನ್ವಯ ದರ್ಶನವನ್ನೆಂತೊ ಅಂತೆಯೆ ಗಾಂಧೀಜಿ–ವಿನೋಬಾಜಿಯವರಿಂದ ಪ್ರಣೀತವಾದ ಸರ್ವೋದಯ ಭಾವನೆಯನ್ನೂ, ಪಾಶ್ಚಾತ್ಯ ವಿಜ್ಞಾನದ ವಿಕಾಸವಾದವನ್ನೆಂತೊ ಅಂತೆ ಶ್ರೀ ಅರವಿಂದ ಪ್ರಣೀತವಾದ ಪೂರ್ಣಯೋಗ ದರ್ಶನವನ್ನೂ ಸಂದರ್ಶಿಸಬಹುದು. ಸಮನ್ವಯ, ಸರ್ವೋದಯ ಮತ್ತು ಪೂರ್ಣದೃಷ್ಟಿ–ಇವುಗಳ 'ಶ್ರೀ ರಾಮಾಯಣ ದರ್ಶನ'ದ ತ್ರಿಣೇತ್ರಗಳಾಗಿವೆ.

ಮನುಜಮತ ವಿಶ್ವಪಥ, ಬಹು ಜಿಹ್ವಾ ಭಾರತಿಗೆ, ಐಕ್ಯತೆಯ ಆರತಿ; ಪುಟ ೪೬–೭

೧೧೮೧

ನಿನ್ನ ಪದಕಮಲದಲಿ ಮನೆ ಮಾಡಿರುವ ನನಗೆ
ಆ ಸ್ಥಾನ ಈ ಸಾನ ಎಲ್ಲವಾಸ್ಥಾನ!
ಅಲ್ಲಿಲ್ಲಿ ಎನಲೇನು? ನೀನೆ ಅಡಿಯಿಡುವಲ್ಲಿ
ದಿವ್ಯ ಪದವಿಗಳಲ್ತೆ ಮಾನಾವಮಾನ?

ಅಗ್ನಿಹಂಸ, ನಿನ್ನ ಪದ ಕಮಲದಲಿ, ಪುಟ ೯೧

೧೧೮೨

ಬಲಹೀನನಿಂದೇಂ ಮಹತ್ಕಾರ್ಯ
ಸಿದ್ಧಿಯೆಂದೇಕೆ ಸಂದೆಯ ಪಡುವೆ ? ಶಿವಕೃಪೆಗೆ
ತೃಣಮೆ ಖಡ್ಗಂ ; ಪನಿ ಕಡಲ್, ಕಿಡಿ ಸಿಡಿಲ್. ಶ್ರದ್ಧೆ ತಾಂ
ಸಾಣೆಯಿರೆ, ತಾಳ್ಮೆಯೆ ತಪಂ. ಧರ್ಮಶಕ್ತಿಯುಂ
ಯೋಗಗೊಂಡಿರೆ, ಕರ್ಮಿಯಯ್ ಕಾಯ್ವಾತನುಂ. ಶಿಲ್ಪಿ
ಕೈಯಿಟ್ಟರಾ ಕಾಣ್ಬ ಕಾಡುಗಲ್ಲಿಂದುಣ್ಮದೇಂ
ಕಲಾಪ್ರತಿಮೆ ? ನಿಶ್ಯಬ್ದಿಯ್ಯೆ ಈಶ್ವರ ಕೃಪಾಬ್ಧಿ.
ಬರ್ಪುದನರಿಯಲಾರೆವಂತೆಯೆ ಮಹಾತ್ಕೃತಿ ತಾಂ
ಮಹನ್‌ಮೌನಿ. ನೀನರಿಯುವನಿತರೊಳೆ ನಿನ್ನಿಂದೆ
ಸಂಘಟಿಸಬಪ್ಪುದಘಟನ ಭಾವಿತಂ.

ಶ್ರೀ ರಾಮಾಯಣ ದರ್ಶನಂ, ಇರ್ದುದು ಮಹೇಂದ್ರಾಚಲಂ, ಪಾತ್ರ ಶರಗುಲ್ಮ, ಪುಟ ೪೦೪

೧೧೮೩

ಕಾಶಿಗೆ ಹೋದೆನು ಅಲ್ಲಿಲ್ಲಣ್ಣಾ,
ಮುಳುಗಿದೆ ಗಂಗೆಯೊಳಲ್ಲಿಲ್ಲಣ್ಣಾ ;
ಘಣಘಣ ಘಣಘಣ ಗಂಟೆಯ ಬಾರಿಸಿ,
ಮಣಮಣ ಮಣಮಣ ಮಂತ್ರವ ಹೇಳಿದೆ,
ಪೂಜೆಯ ಮಾಡಿದೆ, ಧೂಪವ ಹಾಕಿದೆ,
ದಕ್ಷಿಣೆಯಿತ್ತೆನು ಹಾರುವರಾಳಿಗೆ ;
ಪಂಡಿತವರ್ಯರ ಸೇವೆಯ ಮಾಡಿದೆ,
ವೇದವನೋದಿದೆ, ತರ್ಕವ ಮಾಡಿದೆ,
ಸಗ್ಗದ ಬಾಗಿಲು ಎಲ್ಲಿಯು ಇಲ್ಲ ;
ನುಗ್ಗಿದ ಕಡೆ ತಲೆ ತಾಗದೆ ಇಲ್ಲ !

ಕೊಳಲು, ಸಗ್ಗದ ಬಾಗಿಲು, ಪುಟ ೭೮

೧೧೮೪

ದುಂಬಿಗಳೆಲ್ಲಿ ? ಮಕರಂದ ಪಾನ ಮಾಡುವ ಮಧುಕರಗಳೆಲ್ಲಿ ?

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೯೮

೧೧೮೫

ಲೋಕರಂಗದಲ್ಲಿ ಎಂದರೆ ಬದುಕಿನಲ್ಲಿ ಸ್ವಾನುಭವಕ್ಕೆ ಸಿದ್ಧಿಸುವ ಭೂಮವೂ ಪರಮಪುರುಷಾರ್ಥ ವಸ್ತು. ಅದರ ಕಲಾಛಾಯೆ ಮೂಲಕ್ಕಿಂತಲೂ ಮೇಲು ಮಟ್ಟದ್ದಾಗಲಾರದು ; ಆದರೂ, ಅಪೂರ್ವವಾಗಿ, ಅತ್ಯಂತ ಮಹೋನ್ನತದ್ರಷ್ಟಾರನಾದ ಮಹಾಕವಿ ಋಷಿಯ ಭೂಮಾನುಭೂತಿಯ ಕಲಾಭಿವ್ಯಕ್ತಿಯಿಂದ ಸಹೃದಯೋತ್ತಮ

ನಲ್ಲಿ ಸ್ಫುರಿಸುವ ಭವ್ಯತಾ ಅನುಭವವೂ ಭೂಮಾನುಭೂತಿಯಾಗಿ ಪರಿಣಮಿಸ ಬಹುದೇನೊ !

ರಸೋ ವೈ ಸಃ, ಭೂಮಾನುಭೂತಿ, ಪುಟ ೯೨

೧೧೮೬

ಬಹಿರ್ಮುಖತೆಯಿಲ್ಲದ ಅಂತರ್ಮುಖತೆ ಭ್ರಾಂತಿವಿಲಾಸವಾಗುತ್ತದೆ. ವ್ಯಾಯಾಮ ಜನ್ಯವಾದ ದೃಢಾರೋಗ್ಯವಿಲ್ಲದವನ ಓದು ಮನೋವಿಕೃತಿಯಾಗಿ ಪರಿಣಮಿಸುತ್ತದೆ. ಪ್ರಕೃತಿ ಸಂಪರ್ಕವಿಲ್ಲದವನ ಕಾವ್ಯರಸಾಸ್ವಾದನ ಅಸ್ವಾಭಾವಿಕವಾದ ಅಸಹ್ಯ ಕರ್ಮ ವಾಗುತ್ತದೆ. ಅದರಿಂದ ತಾತ್ಕಾಲಿಕವಾಗಿ ಉಂಟಾಗುವ ಸುಖ ತನ್ನನ್ನು ಕೊಲ್ಲುವ ಕ್ಷಯ ಕ್ರಿಮಿಗಳಿಗೆ ತಾನೇ ಜನಕನಾಗುತ್ತದೆ. ಗಾಳಿ, ಬೆಳಕು, ಅರಣ್ಯ, ಆಕಾಶ, ಸೂರ್ಯ, ಚಂದ್ರ, ಹಕ್ಕಿ, ಚುಕ್ಕಿ ಮೊದಲಾದವುಗಳ ಸಂಗ ಸಹವಾಸವಿಲ್ಲದವನ ಓದಿನ ಮೊಟ್ಟೆಯಿಂದ ಗೂಬೆ ಮೂಡಬಹುದು; ಕೋಗಿಲೆ ಎಂದಿಗೂ ಹಾಡಲಾರದು.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಲ್ಲಿ ಮತಿಗೌರವದ ಆವಶ್ಯಕತೆ, ಪುಟ ೩೬

೧೧೮೭

ಪಂಪನನೋದುವ ನಿನ್ನಾ ನಾಲಗೆ
ಕನ್ನಡವೆ ಸತ್ಯ
ಕುಮಾರವ್ಯಾಸನನಾಲಿಪ ಕಿವಿಯದು
ಕನ್ನಡವೇ ನಿತ್ಯ
ಹರಿಹರ ರಾಘವರಿಗೆ ಎರಗುವ ಮನ,
ಹಾಳಾಗಿಹ ಹಂಪೆಗೆ ಕೊರಗುವ ಮನ,
ಪೆಂಪಿನ ಬನವಾಸಿಗೆ ಕರಗುವ ಮನ :–
ಬೆಳ್ಗೊಳ ಬೇಲೂರ್ಗಳ ನೆನೆಯುವ ಮನ,
ಜೋಗದ ಜಲಪಾತದಿ ಧುಮುಕುವ ಮನ,
ಮಲೆನಾಡಿಗೆ ಹೊಂಪುಳಿವೋಗುವ ಮನ :–
ಕಾಜಾಣಕೆ ಗಿಳಿ ಕೋಗಿಲೆಯಿಂಪಿಗೆ,
ಮಲ್ಲಿಗೆ ಸಂಪಿಗೆ ಕೇದಗೆ ಸೊಂಪಿಗೆ,
ಮಾವಿನ ಹೊಂಗೆಯ ತಳಿರಿನ ತಂಪಿಗೆ
ರಸರೋಮಾಂಚನಗೊಳುವಾತನ ಮನ
ಎಲ್ಲಿದ್ದರೆ ಏನ್ ? ಎಂತಿದ್ದರೆ ಏನ್ ?
ಎಂದೆಂದಿಗು ತಾನ್
ಕನ್ನಡವೇ ಸತ್ಯ !
ಕನ್ನಡವೇ ನಿತ್ಯ !
ಅನ್ಯವೆನಲದೆ ಮಿಥ್ಯಾ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಮೆಟ್ಟುವ ನೆಲ ಕರ್ನಾಟಕ, ಪುಟ ೪೩-೪

೧೧೮೮

ಕಾವ್ಯಕ್ಕೆ ಭಾವ ಆನಂದ ಆವೇಶಗಳೆ ಆತ್ಮ. ಉಪಮಾ ಮೊದಲಾದ ಅರ್ಥಾಲಂಕಾರಗಳೆ ಗುಣ. ಕೃತಕವಾಗಿರದೆ ಆತ್ಮ ಮತ್ತು ಗುಣಗಳಿಗೆ ವಿಧೇಯವಾಗಿ ಅವುಗಳನ್ನನುಸರಿಸಿಕೊಂಡು ಬರುವ ಸ್ವಾಭಾವಿಕ ಸರಳ ಪದಸರಣಿಯೆ ರೂಪ. ಗಾಯಕನ ಕಂಠದಿಂದ ಹೊರ ಮೂಡುವ ಸ್ವರ್ಗೀಯ ಸುಮಧುರವಾದ ಸ್ವರ ತರಂಗ ಮಾಲೆಗಳನ್ನು ಮುಚ್ಚಿ ಮುಸುಕಿ ನಾಯಕನಿಗಿಂತಲೂ ತಾನೆ ಪ್ರಧಾನವೆಂಬಂತೆ ಉಚ್ಚಘೋಷದಿಂದ ಮರ್ಯಾದೆ ಮೀರಿ ಒರಲಿ ಚೀರುವ ಹಾರ್ಮೋನಿಯಮ್ಮಿನಂತೆ ಕಾವ್ಯದ ಆತ್ಮ ಮತ್ತು ಗುಣಗಳನ್ನು ಹಿಂದಕ್ಕೆ ಮರೆಯಿಸಿ, ಮುಂದೆ ಮುಗ್ಗಿ, ಧಿಮಿ ಧಿಮಿ ಕುಣಿದು, ಅಂತರಂಗದ ವೈಭವದ ನಿದರ್ಶನಗಳಾಗುವ ನಮ್ರ ಕರ್ತವ್ಯಕ್ಕೆ ತಿಲಾರ್ಪಣವಿತ್ತು ಪಾಂಡಿತ್ಯ ಮಾತ್ರ ಪ್ರದರ್ಶಕಗಳಾಗಿ ಶಬ್ದಾಲಂಕಾರಗಳೆಂದು ಮೆರೆಯುವ ಶಬ್ದವ್ರಜವೆ ಭೂಷಣ. ಈ ಭೂಷಣವು ತನ್ನಳವರಿತು ವಿನೀತವಾಗಿ ನಾಗರಿಕವಾಗಿದ್ದರೆ ಸ್ಫುರದ್ರೂಪವಾಗಿ ಪರಿಣಮಿಸುವುದು. ಇಲ್ಲದಿದ್ದರೆ ಅಂಗೋಪಾಂಗಗಳಲ್ಲಿ ಬೀದಿವರಿವ ಕರ್ಪದಕಮಲಾಕೀರ್ಣವಾದ ಲಂಬಾಣಿ ಹೆಂಗಸರ ಅಶ್ಲೀಲವಾದ ಸೌಂದರ್ಯನಾಮಕ ವೇಷದಂತೆ ಅಸಹನೀಯವಾಗುವುದು.

ಇತ್ಯಾದಿ, ಉಪಮಾಲೋಲ ಲಕ್ಷ್ಮೀಶ, ಪುಟ ೧೯

೧೧೮೯

ಆಧುನಿಕ ಜಗಜ್ಜೀವನ ರಾಜಕೀಯಾಗ್ನಿಯಿಂದ ಕುದಿಯುತ್ತಿರುವಂತೆ ಮತ್ತಾವುದರಿಂದಲೂ ಕುದಿಯುತ್ತಿಲ್ಲ ಎಂದು ಧೈರ್ಯವಾಗಿ ಹೇಳಬಹುದು. ತಾವೂ ಸ್ವತಂತ್ರವಾಗಿದ್ದುಕೊಂಡು, ವಿಸ್ತಾರವಾದ ಸಾಮ್ರಾಜ್ಯವನ್ನೂ ಕಟ್ಟಿಕೊಂಡು ಹೊಟ್ಟೆತುಂಬಿರುವ ದೇಶಗಳು ಕಟ್ಟಿದ ಬುತ್ತಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಕಾತರತೆಯಿಂದ ಕತ್ತಿ ಮಸೆಯುತ್ತಿವೆ. ಸ್ವತಂತ್ರವಾಗಿದ್ದರೂ ಹಿಂದಿದ್ದ ಸಾಮ್ರಾಜ್ಯವನ್ನು ಕಳೆದುಕೊಂಡಿರುವ ದೇಶಗಳು ಮಾತ್ಸರ್ಯ, ಸ್ಪರ್ಧೆ ಮತ್ತು ಲಾಭ ದೃಷ್ಟಿ ಇವುಗಳಿಂದ ಪ್ರೇರಿತವಾಗಿ ಪುನಃ ಸಾಮ್ರಾಜ್ಯ ನಿರ್ಮಾಣ ಮಾಡಲೆಂದು ತೋಳು ತಟ್ಟಿ ಕಾಲು ಕೆರೆಯುತ್ತಿವೆ. ಬಂಡವಾಳದ ಜಿಗಣೆಯಿಂದ ನೆತ್ತರು ಹೀರಿಸಿಕೊಂಡು ಬಿಳಿಚಿ ಹೋಗಿರುವ ಸ್ವತಂತ್ರ ದೇಶಗಳು ಕೆಲಸ ಮಾಡುವವರಿಗೆ ಹೊಟ್ಟೆಗೆ ಹಿಟ್ಟು ಮೈಗೆ ಬಟ್ಟೆ ದೊರೆಯುವಂತೆ ಮಾಡುವ ಸರಕಾರದ ಸ್ಥಾಪನೆಗಾಗಿ ಹಲ್ಲು ಕಚ್ಚಿಕೊಂಡು ಹೋರಾಡುತ್ತಿವೆ. ಸ್ವಾತಂತ್ರ್ಯವನ್ನು ಕಳೆದುಕೊಂಡು, ಪ್ರಬಲರಾದ ಪರಕೀಯರ ಪದಾಘಾತಕ್ಕೆ ಸಿಕ್ಕಿ, ನರಳುತ್ತಿರುವ ದೇಶಗಳು ಸ್ವಾತಂತ್ರ್ಯ ಸಂಪಾದನೆಗಾಗಿ ಹಗಲಿರುಳೂ ಹಾರೈಸಿ ದುಡಿಯುತ್ತಿವೆ. ಅಂತೂ ಭೂಗೋಳದ ಯಾವ ಸ್ಥಾನದ ಮೇಲೆ ಬೆರಳಿಟ್ಟರೂ ಕೈಸುಡುತ್ತದೆ! ಕಗಲು ಬಾನುಗಳೂ ಹೊರತಾಗಿಲ್ಲ! ಭೂಗರ್ಭದಲ್ಲಿರುವ ಬೆಂಕಿ ಭೂ ನಿವಾಸಿಗಳ ಎದೆಗೆ ಏರಿದಂತಿದೆ! ರಾಷ್ಟ್ರೀಯತೆಯಂತೆ ಅಂತರ ರಾಷ್ಟ್ರೀಯತೆಯಂತೆ; ಸಾಮ್ರಾಜ್ಯವಾದವಂತೆ

ಸಮತಾವಾದವಂತೆ ; ಫ್ಯಾಸಿಸಂ ಅಂತೆ ನಾಜಿಸಂ ಅಂತೆ ; ಬಂಡವಾಳಗಾರರಂತೆ ಕೆಲಸಗಾರರಂತೆ ! ನೂರಾರು ಪಕ್ಷಪ್ರತಿಪಕ್ಷಗಳಿಗೆ ಹಣಾ ಹಣಿಯಾಗುತ್ತಿದೆ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೫೩

೧೧೯೦

ನಮ್ಮ ದೇಶ ನಮ್ಮದಾಗುವುದೊಂದೆ ತಡ, ಎಲ್ಲ ಶುದ್ಧೀಕರಣವೂ ಸಿದ್ಧಿಸುವುದೆಂದು ನಂಬಿದ್ದೆವು. ಭಾರತಕ್ಕೆ ಸ್ವಾತಂತ್ರ್ಯ ಬಂದ ಮರುದಿನವೆ ವಿಚಾರವಾದ ಮತ್ತು ವೈಜ್ಞಾನಿಕ ದೃಷ್ಟಿಯ ನವವಿಧಾನವು ಸಂಪೂರ್ಣವಾಗಿ ಸರ್ವತೋಮುಖವಾಗಿ ಪ್ರಯೋಗವಾಗತೊಡಗುವುದೆಂದೂ, ಭಾರತವು ತನ್ನೆಲ್ಲ ಆರ್ಥಿಕ ರಾಜಕೀಯ ಸಾಮಾಜಿಕ ಮತೀಯ ದೋಷ ದೌರ್ಬಲ್ಯಗಳಿಂದ ಬೇಗನೆ ಪಾರಾಗುವುದೆಂದೂ ಅನೇಕರ ದೃಢನಂಬುಗೆಯಾಗಿತ್ತು.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮೂರನೆಯ ಮುದ್ರಣಕ್ಕೆ ಮುನ್ನುಡಿ, ಪುಟ iv-v

೧೧೯೧

ಕಾಯುತಿದೆ ಮಲೆನಾಡು ತನ್ನ ಸರ್ವಸ್ವಮಂ
ಸೂರೆಗೊಳ್ಳುವ ವರ್ಣಶಿಲ್ಪಿಯಂ :– ಕವಿಯಾಗಿ,
ರಸದರ್ಶಿಯಾಗಿ, ರೋರಿಕನಂತೆ ಋಷಿಯಾಗಿ
ಬಣ್ಣದಮೃತದ ಸೆರೆಗೆ ಕಣ್ಣೆದೆಯ ವಿಶ್ವಮಂ
ನೈವೇದ್ಯಗೈವಾತನಂ. ಮುದ್ದು ತೇಜಸ್ವಿ,
ನೀನಪ್ಪೆಯೇನಾ ಆ ವರ್ಣಶಿಲ್ಪದ ತಪಸ್ವಿ ?

ಕೃತ್ತಿಕೆ, ಏಳುಸೀಳು ೨, ಪುಟ ೩೮

೧೧೯೨

ಯಾವ ಚಾಳಿಯಾಗಲಿ ಪದ್ಧತಿಯಾಗಲಿ ಏನಾದರೊಂದು ಆವಶ್ಯ ಕತೆಯಿಲ್ಲದೆ ಬಹುಕಾಲದಿಂದಲೂ ನಡೆದುಕೊಂಡು ಬರಲಾರದು.

ಷಷ್ಟಿನಮನ, ತೀರ್ಥಯಾತ್ರೆ, ೮೩–೪

೧೧೯೩

ಉದಯ ಅಸ್ತಾದ್ರಿಗಳ ಉದಯಾಸ್ತದೈಸಿರಿಗೆ
ನೀನೆ ಚೇತನದುಸಿರು, ಹೇ ಧ್ಯಾನಮಾಧುರಿಯೆ !
ಚೈತ್ರಕಾನನ ಕುಸುಮ ಮಂಜರಿಯ ಕೇಸುರಿಗೆ
ನೀನೆ ಮಿಂಚಿನ ಕಿಡಿಯು, ಕಾವ್ಯಶ್ರೀ ಸೋದರಿಯೆ !
ನಿನ್ನಿಂದೆ ಚಿರನವೀನೆಯು ಪ್ರಕೃತಿ ; ನಿನ್ನಿಂದೆ
ಕೈಗೂಡುತಿದೆ ಭುವನ ಜೀವನಕೆ ಸಾರ್ಥಕತೆ ;
ನೀನಿಲ್ಲದಿದ್ದರೆ ಬಾಳ್ಗೆ ಕಗ್ಗತ್ತಲೆಯೆ ಕಣ್ಣು !
ವಿಧುರ ವಿರಹದಲಿ ನೀನಾಸೆ ತೋರುವೆ ಮುಂದೆ

ಸುರಚಾಪ ಸ್ವರ್ಗವನಿತೀತದಲಿ ನಿರ್ಮಿಸುತೆ ;
ಮಧುರ ಮಿಲನದಿ ನೀನೆ ಹೆಣ್ಣುಟಿಯ ಸವಿಹಣ್ಣು !

ಕಲಾಸುಂದರಿ, ಕಲ್ಪನಾ ಸುಂದರಿ, ಪುಟ ೭೫

೧೧೯೪

"ತಿಳಿದವಂ
ತನ್ನ ನೆರಳಿಗೆ ತಾನೆ ಹೆದರುವನೆ ?" "ತಿಳಿದವಂ !
ತಿಳಿದೆ ಮೇಲಲ್ತೆ ?" "ಪೃಥ್ವಿಗೆ ರಾಹು ಬೇರೆಯೇಂ
ತನ್ನ ನೆಳಲಲ್ಲದೆಯೆ ?" "ಅದ್ರಿಯದೊಡಮೊರ್ಮೆ
ಭೂಮಿ ಕಂಪಿಸೆ ದೃಢತೆ ಹಿಂಗದಿರ್ದುದೆ........."

ಶ್ರೀ ರಾಮಾಯಣ ದರ್ಶನಂ, ಶಬರಿಗಾದನು ಅತಿಥಿ ದಾಶರಥಿ, ಪಾತ್ರಗಳು ಲಕ್ಷ್ಮಣ ರಾಮ, ಪುಟ ೨೮೦

೧೧೯೫

ಇಲ್ಲಿ ಬಾ ಸಂಭವಿಸು ಇಂದೆನ್ನ ಹೃದಯದಲಿ,
ನಿತ್ಯವೂ ಅವತರಿಪ ಸತ್ಯಾವತಾರ !
....
ಮೂಡಿ ಬಂದಿಂದೆನ್ನ ನರರೂಪ ಚೇತನದಿ
ನಾರಾಯಣತ್ವಕ್ಕೆ ದಾರಿ ತೋರ !

ಅಗ್ನಿಹಂಸ, ಜನ್ಮೋತ್ಸವ, ಪುಟ ೯೬

೧೧೯೬

ಜಗಕೆಲ್ಲ ಒಂದೆ ರಾಮಾಯಣವು ಎಂಬುದದು
ಹೆದ್ದಪ್ಪು. ಇಳೆಗೆಲ್ಲ ವಾಲ್ಮೀಕಿಯೊಬ್ಬನೇ
ಕವಿ ಎಂಬುದೂ ತಪ್ಪು. ತಿರೆಗೆಲ್ಲ ಶ್ರೀರಾಮ.
ನೊಬ್ಬನೇ ಎಂಬರೂ ಬೆಪ್ಪುಗಳೆ. ಹನುಮಂತ–
ರೆನಿತಿಹರು ಮಲೆಯ ಕಾಡುಗಳಲ್ಲಿ ! ಒಂದೊಂದು
ಹಳ್ಳಿಯಲ್ಲಿ ಒಬ್ಬೊಬ್ಬ ಜಸವಂತನಾಗದಿಹ
ವಾಲ್ಮೀಕಿ ನೆಲೆಸಿಹನು. ರಾಮಾಯಣಗಳಂತೂ
ಲೆಕ್ಕಕ್ಕೆ ಮಿತಿಯಿಲ್ಲ. ಕಣ್ದೆರೆದು ನೋಡಿದರೆ
ತೋರಿ ಬರುವುದು ನಿಜವು.

ಕಥನ ಕವನಗಳು, ಕರಿಸಿದ್ದ, ಪುಟ ೫

೧೧೯೭

ನಿಜವಾದ ಸಾಹಿತ್ಯ ಐಕ್ಯಕಾರಿ. ಸಾಮರಸ್ಯ, ಸಮನ್ವಯ, ಸಹಾನುಭೂತಿ, ಸರ್ವೋದಯ ಭಾವನೆ ಇವುಗಳನ್ನು ಪ್ರಚೋದಿಸುವುದು ದೈವೀ ಸಾಹಿತ್ಯದ ಲಕ್ಷಣ.

ಅಸೂಯೆ, ದ್ವೇಷ, ಸ್ವಾರ್ಥತೆ, ನಿಷ್ಕರುಣೆ, ಅನುಕಂಪನರಾಹಿತ್ಯ ಇತ್ಯಾದಿಗಳನ್ನು ಕೆರಳಿಸುವ ಬರೆಹ ಆಸುರೀಸಾಹಿತ್ಯವಾಗುವುದರಿಂದ ಅದು ದಮನಯೋಗ್ಯವಾಗುತ್ತದೆ.

ಮನುಜಮತ ವಿಶ್ವಪಥ, ಬಹುಜಿಹ್ವಾ ಭಾರತಿಗೆ ಐಕ್ಯತೆಯ ಆರತಿ, ಪುಟ ೪೦

೧೧೯೮

ಮಾಡಿರುವ ಕೆಲಸಕ್ಕೆ ಸಾವಿರ ಮಡಿಯಿದೆ ಮಾಡಬೇಕಾಗಿರುವ ಕೆಲಸ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೨೦

೧೧೯೯

ಕಲೆ ಅದೆಂತಹ ವೀರ ಪ್ರಕೃತಿ ನಿರ್ಮಾಣ ಶ್ರದ್ಧೆಯಿಂದ ಕೂಡಿದ್ದರೂ ತನ್ನ ಸಾಮಗ್ರಿಯನ್ನು ಆಯ್ಕೆಗೂ ಜೋಡಣೆಗೂ ಒಳಪಡಿಸದಿರಲು ಸಾಧ್ಯವಾಗುವುದಿಲ್ಲ. ಜೊತೆಗೆ ಭಾವದ ಬಣ್ಣದಿಂದ ಅನುಭವದ ವಿಷಯ ಅಲಂಕೃತವಾಗಿಯೆ ತೀರುತ್ತದೆ. ಚೇತನವಿಹೀನವಾದ ಶುಭ್ರ ದರ್ಪಣವು ಒಂದು ವಸ್ತುವನ್ನಾಗಲಿ ದೃಶ್ಯವನ್ನಾಗಲಿ ಪ್ರತಿಬಿಂಬಿಸುವಂತೆ ಆಶೆ ಅಪೇಕ್ಷೆ ರಾಗ ದ್ವೇಷ ಅಭಿಪ್ರಾಯ ಆದರ್ಶಗಳಿಂದ ಕೂಡಿರುವ ಮಾನವ ಮನಸ್ಸು ಬಾಹ್ಯ ಪ್ರಪಂಚವನ್ನು ಗ್ರಹಿಸುವುದಿಲ್ಲ. ಹಾಗೆ ಗ್ರಹಿಸುವುದೆ ಅಸಾಧ್ಯವಾಗಿರುವಾಗ ಇನ್ನು ಹಾಗೆಯೆ ಅಭಿವ್ಯಕ್ತಗೊಳಿಸುವುದು ಹೇಗೆ ತಾನೆ ಸಾಧ್ಯ? ಬದುಕಿನಲ್ಲಿಯೆ ಪ್ರತಿಕೃತಿಯ ವಿಧಾನ ನೈಜವಲ್ಲ; ಔಪಚಾರಿಕ. ಎಂದಮೇಲೆ ಕಲೆಯಲ್ಲಿ ಅದು ತಲೆದೋರುವುದೆಂತು? ಸಾಧ್ಯವಿಲ್ಲ.

ತಪೋನಂದನ, ನಾಟಕ ಕಲೆಯಲ್ಲಿ ಪ್ರತಿಕೃತಿ ಮತ್ತು ಪ್ರತಿಮಾ ವಿಧಾನಗಳು, ಪುಟ ೧೦೫

೧೨೦೦

ಬೆಚ್ಚಿದ ಮನಸ್ಸಿಗೆ ವಿಕೃತಿಯಲ್ಲದೆ ಪ್ರಕೃತಿ ಗೋಚರಿಸುವುದು ದುರ್ಲಭ.

ಕಾನೂರು ಹೆಗ್ಗಡಿತಿ, ಪುಟ ೧೧೦

೧೨೦೧

ತಪದಿಂ ವ್ಯಕ್ತಿ
ಗಳಿಸಿ ಸತ್ವವನಿಳಿಯೆ ಕಾರ್‍ಯಕೆ, ರಜಶ್ಶಾಲಿ
ತಾನಾಗಿ, ತಡೆವರಾರಾತನಂ?

ಕೃತ್ತಿಕೆ, ಕನ್ನಂಬಾಡಿ, ನೀರ್ಬಾಗಿಲೆಡೆ, ಪುಟ ೪೧

೧೨೦೨

ಸಂಪ್ರದಾಯವು ಯೋಗ್ಯತೆಯ ಮುಂದೆ
ಬಹುಕಾಲ ನಿಲ್ಲಲರಿಯದು. ಒಳಗಿಹ ಬೆಳಕು
ಹೊಳೆಯ ತೊಡಗಿದರೆ ಹೊರಗಿರುವ ಕತ್ತಲೆಯು
ತಡೆಯಲಾರದು ಅದನು.

ಕಾನೀನ, ಪಾತ್ರ ಪರುಶುರಾಮ, ಪುಟ ೨೧

೧೨೦೩

ಅತಿಥಿ ಬಂಧುಗಳೊಡನೆ ಸರಸವಾಗಿರಬೇಕು. ನಿಜ. ಆದರೆ ಮನೆಮಂದಿಯೊಡನೆಯೂ ಯಜಮಾನನಾದವನು ಉಲ್ಲಾಸದಿಂದಲೂ ಸ್ನೇಹದಿಂದಲೂ ಸಲುಗೆ ವಿನೋದಗಳಿಂದಲೂ ನಡೆದುಕೊಂಡರೆ ತಪ್ಪೇನು ? ಹಾಗೆ ಮಾಡಿದರೆ ಸಣ್ಣಬುದ್ಧಿ, ವೈಮನಸ್ಸು ತಂದುಹಾಕುತನಗಳಿಗೆ ಅವಕಾಶ ಕಡಿಮೆಯಾಗಿ ಸಂಸಾರ ಹೆಚ್ಚು ಸುಖಮಯವಾಗುತ್ತದಲ್ಲವೆ?

ಕಾನೂರು ಹೆಗ್ಗಡಿತಿ, ಪುಟ ೧೭೧

೧೨೦೪

ತಿರಿದು ಹೂವು ಕೊನೆಗೆ ವ್ಯರ್ಥ,
ಕರೆದ ಕಣ್ಣನೀರೆ ಅರ್ಥ !
ಯುಕ್ತಿ ತುದಿಗೆ ವ್ಯರ್ಥವಾಗೆ
ಭಕ್ತಿ ಸಾರ್ಥಗೆಯ್ಯಲಿ !

ಅಗ್ನಿಹಂಸ, ಯುಕ್ತಿ-ಭಕ್ತಿ, ಪುಟ ೭೭

೧೨೦೫

ಅಕ್ಕರೆಗೆ ಅತಿಶಂಕೆಯಲ್ತೆ ?

ಶ್ರೀ ರಾಮಾಯಣ ದರ್ಶನಂ, ಇರ್ದುದು ಮಹೇಂದ್ರಾಚಲಂ, ಪುಟ ೩೭೬

೧೨೦೬

ಸಾಹಿತ್ಯದ ಕ್ಷೇತ್ರ ಪರಮ ಭೂಮವಾಗಿದೆ. ಏಕೆಂದರೆ ವಿಶ್ವಜೀವನವೆಲ್ಲ ಅದರ ಜೀವನಕ್ಕೆ ತುತ್ತು, ವಿಜ್ಞಾನ, ಅಧ್ಯಾತ್ಮ, ಮತ, ಸಮಾಜ, ರಾಜಕೀಯ ಇತ್ಯಾದಿ ಪ್ರಪಂಚಗಳೆಲ್ಲವೂ ಅದಕ್ಕೆ ಸೊತ್ತು. ಆದ್ದರಿಂದ ಉತ್ತಮ ಸಾಹಿತಿಗೆ ಆ ಎಲ್ಲ ಪ್ರಪಂಚಗಳ ಅರಿವೂ ತಕ್ಕಮಟ್ಟಿಗೆ ಚೆನ್ನಾಗಿರಬೇಕು. ಪ್ರತಿಯೊಂದು ಶಾಸ್ತ್ರದಲ್ಲಿಯೂ ವಿವರಜ್ಞಾನವಿರುವ ಪ್ರವೀಣನಾಗಬೇಕೆಂದಲ್ಲ; ಅದರ ಸಾರವನ್ನು ಹೀರಿಕೊಂಡಿದ್ದರೆ ಸಾಕು. ಹಾಗಿರದಿದ್ದರೆ ಅವನು ನವೀನ ಮಾನವನಾಗುವುದಿಲ್ಲ. ಅವನಿಗೆ ಹೊಸ ದೃಷ್ಟಿ ಬರುವುದಿಲ್ಲ. ಅವನಿಂದ ನಿಜವಾದ ಹೊಸ ಸಾಹಿತ್ಯ ಸೃಷ್ಟಿಯಾಗುವುದಿಲ್ಲ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೪೯

೧೨೦೭

ಒಲಿದ ರಮಣಿ ದೂರವಿರಲು
ಅವಳ ಚಿತ್ರಿಪಟವ ಕಂಡು
ಅವಳ ದನಿಯ ನೆನಸಿಕೊಂಡು
ಎದೆಯು ತಣಿವುದೆ?

ಅವಳ ನೆನಪು ತರುವ ಕುರುಹು
ಮನವ ಕೆಣಕದೆ ?

ಕೊಳಲು, ಕಾಣದ ಕಡಲಿಗೆ, ಪುಟ ೨೬

೧೨೦೮

ಕನಸು ಸ್ವಾತಂತ್ರ್ಯಕೆ ತವರೂರು.

ಕಿಂಕಿಣಿ, ಕನಸಿನೊಳಾದರೂ, ಪುಟ ೪೬

೧೨೦೯

ಜೀವಿಗಳ ಕರ್ಮ ಜಟಿಲತೆ,.....ಈ
ಕುಟಿಲ ಕಾರ್ಯಂಗಳಿಗೆ ನಮ್ಮನ್ ನಿಯೋಜಿಪುದು,
ದೇವನಿಚ್ಛೆಯ ದಿವ್ಯಲೀಲಾ ಪ್ರಯೋಜನಕೆ.

ಬೆರಳ್ ಗೆ ಕೊರಳ್, ಪಾತ್ರ ದ್ರೋಣ, ಪುಟ ೪೯

೧೨೧೦

ನಿಜವಾದ ಕವಿ 'ಜನಪ್ರಿಯತೆ' ಎಂಬ ಭೂತಕ್ಕೆ ಬೆದರದೆ, ಅದನ್ನು ತೃಪ್ತಿಪಡಿಸುವ ಚಪಲತೆಗೆ ಬೀಳದೆ, ತನ್ನ ಉದಾತ್ತ ದರ್ಶನಕ್ಕೆ ಮಾತ್ರ ವಿಧೇಯನಾಗಿ ಕಾವ್ಯ ರಚನೆ ಮಾಡುವುದು ಆತನ ಕರ್ತವ್ಯ ಮತ್ತು ಆತನ ತಾಯ್ನುಡಿ ತಾಯ್ನಾಡುಗಳ ಶ್ರೇಯಸ್ಸು.

ಕಲಾಸುಂದರಿ, ಮುನ್ನುಡಿ, ಪುಟ ix

೧೨೧೧

ಹೊಸ ಹೊಸ ಪ್ರಯೋಗಗಳನ್ನು ನಡೆಸಿ ಹೊಸ ಹೊಸ ಸಿದ್ಧಾಂತಗಳು ಬಂದಾಗ ಹಳೆಯುದನ್ನು ನಾವು ನಿರಾಕರಿಸಬೇಕಾಗಿಬರುತ್ತದೆ. ಅದೇ ವೈಜ್ಞಾನಿಕ ದೃಷ್ಟಿ. ಪ್ರಯೋಗ, ಪರೀಕ್ಷೆ ತರುವಾಯ ಅದನ್ನು ಒಪ್ಪಿಕೊಳ್ಳತಕ್ಕಂಥಾದ್ದು. ಸುಮ್ಮನೆ ಹೇಳಿದ ಕೂಡಲೇ ನಂಬುವುದು ಅಂತ ಅಲ್ಲ.

ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಅದೇ ಹೆಸರಿನ ಲೇಖನ, ಪುಟ ೨೬

೧೨೧೨

ಎಲ್ಲಕ್ಕಿಂತಲೂ ಹೆಚ್ಚಾಗಿ, ಸಾಹಿತ್ಯ ಸಮಾಲೋಚಕನ ವಿಶೇಷವಾದ ಗಮನಕ್ಕೆ ಪಾತ್ರವಾಗುವುದೆಂದರೆ ನಿರಂತರ ನಾಟ್ಯಶೀಲ ಕಾವ್ಯ ಪುರುಷನ ಪದ ವಿನ್ಯಾಸವು ತನ್ನ ಕ್ಲುಪ್ತಛಂದೋಗಾಂಭೀರ್ಯದ ಸಂಪ್ರದಾಯ ಗದ್ದುಗೆಯಿಂದ ಕೆಳಗಿಳಿದು ಬಂದು, ಗದ್ಯದ ನಡೆಗೆ ನೋಂತು, ಕಡೆಗೆ ವಚನ ರೀತಿಯಲ್ಲಿ ಸಂತೃಪ್ತಿಗೊಳ್ಳುವ ಅಚ್ಚರಿ!

ವಿಭೂತಿ ಪೂಜೆ, ವಚನಕಾರ ಬಸವೇಶ್ವರರು, ಪುಟ ೩೭

೧೨೧೩

ಕಮನೀಯಳಲ್ತೆ ಭಯಂಕರಾ ಪ್ರಕೃತ್ತಿ ?

ಶ್ರೀ ರಾಮಾಯಣ ದರ್ಶನಂ, ಪಾದುಕಾ ಕಿರೀಟ, ಪಾತ್ರ ರಾಮ, ಪುಟ ೧೬೫

೧೨೧೪

ಅಹಂಕಾರದ ಸಂಪೂರ್ಣ ನಿರಸನದಿಂದ ಸಹಜ ಸಾಕ್ಷೀ ಪ್ರಜ್ಞೆಯಲ್ಲಿ ಆರೂಢನಾಗುವ ಯೋಗಿಗೆ ಸಮಸ್ತ ಲೋಕ ವ್ಯಾಪಾರವೂ, ನಿಸರ್ಗದ್ದಾಗಲಿ ಮನುಷ್ಯನದ್ದಾಗಲಿ, ಸುಖದುಃಖ ಕಷ್ಟಕ್ಲೇಶ ಜಯಾಪಜಯ ಶೋಕಸಂಕಟಾದಿಯಗಿ ಸರ್ವಾನುಭವವೂ ರಸಾನುಭವವೆ ಆಗಿರುತ್ತದೆ.

ರಸೋ ವೈ ಸಃ, ರಸಾನುಭವದ ಅಲೌಕಿಕತೆ, ಪುಃ ೩೨

೧೨೧೫

ನೀನೆ ಎನ್ನ ಬಾಳ ಮುಕ್ತಿ,
ನೀನೆ ಎನ್ನ ಆತ್ಮಶಕ್ತಿ,
ನೀನೆ ಸೊಗವು, ನೀನೆ ಹರುಷ
ಕಬ್ಬದಂಗನೆ.
ಸಗ್ಗ ಬೇಡ, ಮುಕ್ತಿ ಬೇಡ
ಸಿರಿಯನೊಲ್ಲೆ, ನೆಲವನೊಲ್ಲೆ
ನೀನೆ ಎನಗೆ ಸಾಕು, ಸಾಕು
ಮುದ್ದು ಮೋಹಿನಿ !

ಕೊಳಲು, ಕವಿತೆಗೆ, ಪುಟ ೮

೧೨೧೬

ಬೀದಿ ಗುಡಿಸುವ ಬಡವನೆದೆಯಲ್ಲಿ ನಾನಿರುವೆ !
ಉಳುತ್ತಿರುವ ಒಕ್ಕಲಿಗನೆಡೆಯಲ್ಲಿ ನಾನಿರುವೆ !
ಎಲ್ಲಿ ಹೊಲೆಯನು ನನ್ನ ಕಾರ್ಯದಲಿ ತೊಡಗಿಹನೊ
ಅಲ್ಲಿ ನಾನವನ ಪಕ್ಕದೊಳಿರುವೆ. ಕುಂಟರನು,
ಕುರುಡರನು, ದೀನರನು, ಅನಾಥರನು ಕೈಹಿಡಿದು
ಪೊರೆಯುತಿಹನೆಡೆಯಿರುವೆ.

ಜಲಗಾರ, ಪಾತ್ರ ಶಿವ, ಪುಟ ೩೪

೧೨೧೭

ನಾನಂತೂ ಯಮನಾದರೂ ಸರಿಯೆ, ಕನ್ನಡದಲ್ಲಿ ಕರೆದಾ ?
ಕುಣುಕೊಂಡು ಹೋಗ್ತೇನೆ ! ಇಲ್ಲಾ ? ಬರೋದಿಲ್ಲಾ
ಅಂದು ಬಿಡ್ತೇನೆ !

ಬಿರುಗಾಳಿ, ಪಾತ್ರ ಬೀಮಣ, ಪುಟ ೫೦

೧೨೧೮

ಪದ್ಧತಿಯ ಮೀರುವುದು ತರವಲ್ಲ.

ಚಂದ್ರಹಾಸ, ಪಾತ್ರ ಚಂದ್ರಹಾಸ, ಪುಟ ೮೬

೧೨೧೯

ಕೃತಿಲೋಕವಾಗಲಿ ಪ್ರಕೃತಿ ಲೋಕವಾಗಲಿ ಒಂದರ ನಿಯತಿ ನಿಯಮಗಳು ಮತ್ತೊಂದರ ಮೇಲೆ ಅಧಿಕಾರ ನಡೆಸಲು ಅಸಮರ್ಥವಾಗಿದ್ದರೂ ತಮ್ಮ ತಮ್ಮ ನಿಯತಿ ನಿಯಮಗಳಿಗೆ ಅಧೀನವಾಗಿಯೆ ಇರಬೇಕು. ಧಿಕ್ಕರಿಸಿದರೆ ಅವಕ್ಕೆ ಗತಿ ಪ್ರಲಯ ಸ್ಥಿತಿ.

ರಸೋ ವೈ ಸಃ, ಕವಿನಿರ್ಮಿತಿಯಲ್ಲಿ ನಿಯತಿಕೃತ ನಿಯಮರಾಹಿತ್ಯ, ಪುಟ ೬-೭

೧೨೨೦

ಕಣ್ಗಳಲಿಗಂ
ಕಿವಿಯಳಲೆ ಪಿರದೊ ? ಮೇಣೀ ನೋವನ ಗೋಳೆ
ತಿಂದು ತವಿಸಿದುದೊ ? ಮೇಣಾತ್ಮಯಾತ್ರೆಯ ಮಹಾ
ಜ್ಯೋತಿರ್ಮಹದ್ದರ್ಶನಂ ಲಭಿಸಿದಾತಂಗದೇಂ
ಗುರುತರಾನಂದಕರ ಗುಹ್ಯಮಾಗುವುದೇನೊ
ದೇಹಯಾತ್ರೆಯ ದುರಂತಂ ? ಭರತವಾಕ್ಯಮೀ
ಐಹಿಕದ ನಾಟಕಕೆ ತಾನಾದೊಡಂ ಮೃತ್ಯು ತಾಂ
ನಾಂದಿಯ್ಯೆಸಲೆ ಪೇಳ್ ಅಲೌಕಿಕಕೆ ?

ಶ್ರೀ ರಾಮಾಯಣ ದರ್ಶನಂ, ಅಗ್ನಿಯಾತ್ರೆ, ಪುಟ ೧೩೧

೧೨೨೧

ನಾ ನಡೆದ ಹಾದಿಯನು ಹಿಂತಿರುಗಿ ನೋಡಿದರೆ
ಬಗೆಯ ಬಾಯಲಿ ನೆನಹುಗಳ ಮೆಲುಕು ಹಾಕಿದರೆ
ಹೆಜ್ಜೆಹೆಜ್ಜೆಗೆ ನೀನೆ ಕೈಹಿಡಿದು ನಡೆಸಿರುವೆ
ಎಂಬುದನು ನಾನರಿವೆ, ನನ್ನ ಗುರುವೆ !

ಕದರಡಕೆ, ಮಾರ್ಗದರ್ಶಿ, ಪುಟ ೮೪

೧೨೨೨

ಆತ್ಮಶ್ರೀ ಇತರ ಶ್ರೀಗಳಂತಲ್ಲ. ಅದು ಇತರ ಶ್ರೀಗಳಲ್ಲಿ ಒಂದು ಮಾತ್ರವಲ್ಲ, ಅದು ಎಲ್ಲ ಶ್ರೀಗಳ ಶ್ರೀ. ಇತರ ಶ್ರೀ ಭೂಮಿಕೆಗಳಲ್ಲಿ ವ್ಯಕ್ತವಾಗಿ ಅವುಗಳ ಉಚ್ಛ್ರಾಯವನ್ನು ಸಾಧಿಸಬಲ್ಲುದಾದರೂ ಅದು ಎಲ್ಲ ಭೂಮಿಕೆಗಳನ್ನೂ ಒಳಕೊಂಡು ಎಲ್ಲವನ್ನೂ ಮೀರಿಸುವ ಸಾರ್ವಭೌಮಿಕ ಶ್ರೀ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ, ಪುಟ ೫೯

೧೨೨೩

ಕೀರ್ತಿಯಾ ಮಾಯೆ,
ಪೊನ್ನ ಪೊಳಪೊಲ್, ಸುಲಭವೇದ್ಯ ; ಮಹಿಮಾ ಜ್ಯೋತಿ,

ಸಂಯಮದ ಸಂಪತ್ತಿನೊಲ್, ಸಂಸ್ಕೃತಿಗೆ ಮಾತ್ರ
ಗೋಚರಂ.

ಕೃತ್ತಿಕೆ, ಊರ್ಮಿಳಾ ದೇವಿ, ಪುಟ ೫೦

೧೨೨೪

ನನಸಿಗಿಂತ ಕನಸೆ ಸವಿ !
ನೆರಳೆ ತಿರುಳನು
ಮೀರು ಮೆರೆಯುವಿದನು ಕವಿ
ಕಂಡು ಮರುಳನು !

ಕಲಾಸುಂದರಿ, ಕುಕ್ಕನಳ್ಳಿ ಕೆರೆಯ ಮೇಲೆ, ಪುಟ ೬೩

೧೨೨೫

ಆಧ್ಯಾತ್ಮಿಕ ಸಾಧನೆಯಿಂದ ಮಾತ್ರ ಲಭಿಸುವ ಯೋಗ ಲಕ್ಷಣಗಳಾದ ನಿಸ್ಸಂಗತ್ವ, ಸಮತ್ವ, ಸಮದರ್ಶನ, ಅಹಂಕಾರ ನಿರಸನ, ಸಾಕ್ಷೀ ಪ್ರಜ್ಞೆ, ಸಮರ್ಪಣ ಭಾವ ಮುಂತಾದುವನ್ನು ಅನಧಿಕಾರಿಗಳಿಗೂ, ತತ್ಕಾಲಕ್ಕಾದರೂ, ತಂದುಕೊಟ್ಟು, ಸದ್ಯಃಪರವಾದ ನಿರ್ವೃತಿಗೆ ಕಾರಣವಾಗುವ ಕಾವ್ಯ ಕಲೆಗಳನ್ನು 'ಸಾಮಾನ್ಯ ಯೋಗ' ಎಂದು ಕರೆದರೆ ತಪ್ಪೇನು ?

ರಸೋ ವೈ ಸಃ, ರಸೋ ವೈ ಸಃ, ಪುಟ ೧೩೩

೧೨೨೬

ಪ್ರೇಮದಿಂದಲೆ ಹೊಳೆಯಿತೀ ಮಹಾ ಬ್ರಹ್ಮಾಂಡ ;
ಪ್ರೇಮದಾಧಾರದಿಂದಲೆ ಬಾಳುತಿಹುದು ;
ಪ್ರೇಮ ವಾರಿಧಿಯಲ್ಲೆ ಕಡೆಗೈಕ್ಯವಾಗುವುದು !

ಯಮನ ಸೋಲು, ಪಾತ್ರ, ಯಕ್ಷ, ಪುಟ ೪೩

೧೨೨೭

ಇಂದು ; ನಾಳೆಯಲ್ಲ. ತಿಳಿ, ತಿಳಿ ! ತಿಳಿದು ಉಳಿ, ಇಲ್ಲ ಅಳಿ !

ಮನುಜಮತ ವಿಶ್ವಪಥ, ಕನ್ನಡಕ್ಕಾಗಿ ಕೈಯೆತ್ತು, ಪುಟ ೨

೧೨೨೮

ಬ್ರಹ್ಮದ ಮನೆ
ಕವಿ ಕಲ್ಪನೆ :
ನವಸೃಷ್ಟಿಯ ತವರೂರು !
ಮೇರೆಯನದಕಿತಿಮತಿಯನು ಕಲ್ಪಿಸಬಲ್ಲವರಾರು ?

ಕದರಡಕೆ, ಕವಿ ಕಲ್ಪನೆ, ಪುಟ ೩೩

೧೨೨೯

ಕ್ಷುದ್ರನೀಶ್ವರನಂತೆ ನಟಿಸುತ
ಜಗವನೊಲಿಯಲು ಸಾಧ್ಯವೆ?

ಪ್ರೇತ ಕ್ಯೂ, ಖಸಡೋರಾ, ಪುಟ ೯

೧೨೩೦

ಕಾಲ ಕಾಲಕ್ಕೆ ತಕ್ಕಂತೆ ಜನಗಳ ಭಾವಗಳು ಮಾರ್ಪಾಟಾಗುತ್ತವೆ. ಸಾಹಿತ್ಯವು ಜನ ಜೀವನದ ವಾಣಿ ಎಂದ ಮೇಲೆ, ಅದೂ ಕೂಡ ನಾನಾ ರೂಪವನ್ನು ಧರಿಸಿ, ನಾನಾ ಭಾವಗಳನ್ನು ಸುರಿಸಿ, ದೇಶದ ಮನಸ್ಸನ್ನು ವರಿಸಿ, ತನ್ನ ಗದ್ದುಗೆಯಿಂದ ಕೆಳಗಿಳಿದುಬಂದು ಜನತೆಯನ್ನು ಮೇಲೇರಿಸಿ, ದೇಶದ ಜೀವನವನ್ನು ಉತ್ತಮ ಭೂಮಿಕೆಯಲ್ಲಿಡುವುದು ಅದರ ಪರಮ ಕರ್ತವ್ಯ.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೭–೮

೧೨೩೧

....ನಮ್ಮ ರಾಷ್ಟ್ರೀಯ ಹಿನ್ನೆಲೆಯಂತೂ ಅತ್ಯಂತ ಆವಶ್ಯಕವಾಗುತ್ತದೆ. ಏಕೆಂದರೆ ನಮ್ಮ ಅಧ್ಯಾತ್ಮ ಮತ ಧರ್ಮ ತತ್ತ್ವ ಇವುಗಳೇ ವಿಶೇಷವಾಗಿ ನಮ್ಮ ಸಾಹಿತ್ಯದಲ್ಲಿರುವುದರಿಂದ, ಅದನ್ನು ಕೊಡಬೇಕಾಗುತ್ತದೆ.

ವಿಚಾರ ಕ್ರಾಂತಿಗೆ ಆಹ್ವಾನ, ಸಾಹಿತ್ಯ ಚರಿತ್ರಕಾರರಿಗೆ, ಸಲಹೆಗಳು, ಪುಟ ೩೩

೧೨೩೨

ಆಕಸ್ಮಿಕ ಎಂಬುದು ಅಪೂರ್ಣಜ್ಞಾನ ತನ್ನನ್ನು ತಾನು ಮರೆಮಾಡಿಕೊಳ್ಳ ಲೆಳಸುವು ಒಂದು ವಿಧಾನಕ್ಕೆ ನಾವು ಇಡುವ ಹೆಸರು. ನಾವು ಯಾವುದನ್ನು ಆಕಸ್ಮಿಕ ಎಂದು ಕರೆಯುತ್ತೇವೆಯೊ ಅದು ನಿಜವಾಗಿಯೂ ಆಕಸ್ಮಿಕವಾದುದಲ್ಲ. ಪೂರ್ವಾಪರವನ್ನು ಅಖಂಡವಾಗಿಯೂ ಏಕವಾಗಿಯೂ ಒಳಗೊಳ್ಳುವ ತ್ರಿಕಾಲದರ್ಶಿಯಾದ ಪೂರ್ಣ ದೃಷ್ಟಿಗೆ ಆಕಸ್ಮಿಕ ಎಂಬುದಿಲ್ಲ. ನಮ್ಮ ಅಲ್ಪ ಜ್ಞಾನ ತನಗೆ ಅನಿರೀಕ್ಷಿತವಾದುದನ್ನು ಹಾಗೆ ಕರೆದ ಮಾತ್ರಕ್ಕೆ ಭೂಮ ಜ್ಞಾನವೂ ಅದನ್ನು ಹಾಗೆ ಗ್ರಹಿಸಿ ಬೇಕಾಗಿಲ್ಲ. ಸರ್ವಜ್ಞ ವಾದ ಸರ್ವೇಚ್ಛಾಶಕ್ತಿ ಸುರುಳಿ ಬಿಚ್ಚುವ ತನ್ನ ಲೋಕ ಲೀಲೆಯಲ್ಲಿ ಯಾವುದನ್ನೂ ಅನಿಶ್ಚಯಕ್ಕೆ ಬಿಡುವುದಿಲ್ಲ ಎಂಬ ಪೂರ್ಣ ದೃಷ್ಟಿಯ ಶ್ರದ್ಧೆಯಿಂದ ಸಮನ್ವಿತವಾದ ಪ್ರಜ್ಞೆ ಸಾಮಾನ್ಯ ಬುದ್ಧಿಗೆ ಆಕಸ್ಮಿಕ ಎಂದು ತೋರುವುದರಲ್ಲಿಯೂ ಅರ್ಥ ಉದ್ದೇಶ ವ್ಯೂಹಗಳನ್ನು ಸಂದರ್ಶಿಸುತ್ತದೆ.

ಷಷ್ಟಿನಮನ, ಕೊಲಂಬೊ ಇಂದ ಆಲ್ಮೋರಕೆ, ಪುಟ ೨೧೬

೧೨೩೩

ಮಂದಿ ಮೆಚ್ಚಲದುವೆ ಹೆಚ್ಚೆ?
ಸುಳ್ಳು, ಹೊಳ್ಳು ಆ ಸ್ತುತಿ!
ಮೇಲು ಬಣ್ಣಕದರ ಕಣ್ಣು;

ಅದರರದು ಅತಿ ಶಿಶುಮತಿ !
ಗಣಿಸದದನು, ತರುವೆ, ನಿಲ್ಲು ;
ಮೌನದಿಂದೆ ಮನವ ಗೆಲ್ಲು,
ಹೇ ಸ್ವತಂತ್ರ ವಶಮತಿ !

ಅನಿಕೇತನ, ಪ್ರೇತವೃಕ್ಷ, ಪುಟ ೧೭

೧೨೩೪

ಎಲ್ಲಕೆ ಮಿಗಿಲು ಏಕಾಂತ,
ನಿರ್ಜನತೆ ;

ಪಕ್ಷಿಕಾಶಿ, ಇಬ್ಬನಿ, ಪುಟ ೮೫

೧೨೩೫

ವಾಸ್ತವವಾಗಿ ನಮ್ಮ ಪರೀಕ್ಷೆ ಜ್ಞಾನದ ಪರೀಕ್ಷೆಯಲ್ಲ ; ಜ್ಞಾಪಕ ಶಕ್ತಿಯ ಮತ್ತು ಅದೃಷ್ಟದ ಪರೀಕ್ಷೆಯಾಗಿದೆ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೨

೧೨೩೬

ಸಾಹಿತ್ಯ ಅನೇಕ ವಿಧವಾಗಿರುವಂತೆ ಅದರ ಪ್ರಯೋಜನಗಳೂ ಅನೇಕ ವಿಧವಾಗಿವೆ. ಸಮಾಜಸುಧಾರಣೆ, ನೀತಿ ಬೋಧೆ, ವಿಚಾರಪ್ರಚೋದನೆ, ಮತ ವಿಡಂಬನೆ, ಮತ ಪ್ರಶಂಸೆ, ಸ್ವಮತಶ್ಲಾಘನೆ, ಅನ್ಯಮತಖಂಡನೆ, ಸ್ವಜಾತಿ ಸಂಕೀರ್ತನೆ, ಪರಜಾತಿ ನಿಂದನೆ, ವೈಜ್ಞಾನಿಕ ದೃಷ್ಟಿಪ್ರಸಾರ, ರಾಷ್ಟ್ರೀಯತಾ ಪ್ರಚಾರ, ಸಮನ್ವಯ ಧರ್ಮೋಪದೇಶ, ಸರ್ವೋದಯ, ಸಮದರ್ಶನ ಮತ್ತು ಪೂರ್ಣ ದೃಷ್ಟಿ ಪ್ರಧಾನ ಇತ್ಯಾದಿ ಇತ್ಯಾದಿಯಾಗಿ ಶಿಷ್ಟ ಮತ್ತು ದುಷ್ಟೋದ್ದೇಶಗಳಿಗನುಸಾರವಾಗಿ ಪ್ರಯೋಜನಗಳೂ ಅನೇಕವಾಗಿವೆ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೩೫

೧೨೩೭

ತುರಿಗಜ್ಜಿಯ ಹಣೆಯ ಬರಹವೆ ಹಾಗೆ! ಒಂದು ಕಡೆ ತುರಿಕೆ ಶುರುವಾಯಿತು ಅಂದರೆ ಅದನ್ನು ತುರಿಸಿತುರಿಸಿ ನವೆಯನ್ನು ಸಮಾಧಾನ ಸ್ಥಿತಿಗೆ ತರುವಷ್ಟರಲ್ಲಿಯೆ ಅದರ ಪಕ್ಕದ ಸೀಮೆಯಲ್ಲಿ ಆಂದೋಳನಕ್ಕೆ ಪ್ರಾರಂಭ! ಹರಿತವಾದ ಉಗುರಿನ ಕೈ ಬೆರಳುಗಳನ್ನು ಅಲ್ಲಿಗೆ ಕಳಿಸಿ ಆ ಕ್ರಾಂತಿಯನ್ನು ಹತ್ತಿಕ್ಕುವುದೆ ತಡ ಆ ಸ್ಥಳಕ್ಕೆ ಸ್ವಲ್ಪವೂ ಸಂಬಂಧವಿಲ್ಲದೆ ಇರುವ ತೊಡೆಯ ಸಂಧಿಯ ದೂರ ಪ್ರಾಂತದಲ್ಲಿ ಗಲಭೆ ಷುರು ! ಹಾಳು ತುರಿಗಜ್ಜಿ !

ಮಲೆಗಳಲ್ಲಿ ಮದುಮಗಳು, ಪುಟ ೩೮೫–೬

೧೨೩೮

ತರುಣ ಕವಿ ಸಹೋದರರಲ್ಲಿ ನನ್ನದೊಂದು ಬಿನ್ನಹ. ಪಂಡಿತ ವರ್ಗದಲ್ಲಿ ಹೇಗೆ ಹೊಸ ಸಾಹಿತ್ಯವನ್ನು ಕಂಡರೆ ಒಂದು ವಿಧವಾದ ತಿರಸ್ಕಾರ ಉಂಟಾಗಿದೆಯೋ

ಹಾಗೆಯೇ ತರುಣರಲ್ಲಿ ಈಚೀಚೆಗೆ ಹಳೆಯ ಸಾಹಿತ್ಯವೆಂದರೆ ಒಂದು ವಿಧವಾದ ಉಪೇಕ್ಷೆ ಮೂಡುತ್ತಿದೆ. ಹೊಸ ಸಾಹಿತ್ಯವನ್ನು ಹಳಿದರೂ ಅವರೇನೋ ಬದುಕಬಹುದು. ಆದರೆ ನಾವು ಹಳೆಯದನ್ನು ಹಳಿದು ಕ್ಷಣಕಾಲವಾದರೂ ಬದುಕಲಾರೆವು. ಹಳೆಯದೆಂದರೆ ಹೊಸದರ ಬೆನ್ನುಮೂಳೆ. ಅದು ನಮ್ಮ ಬಲವಾದ ತಳಹದಿ. ಅದನ್ನು ಬಿಟ್ಟು ನಿಂತರೆ ನಮಗೆ ನೂರು ಎದೆಗಳಿದ್ದರೂ ಸಾಲದು !

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೮

೧೨೩೯

ಪ್ರಕೃತಿ ದೇವಿಯ ಸೊಬಗು ದೇಗುಲದಿ
ಆನಂದವೇ ಪೂಜೆ ; ಮೌನವೆ ಮಹಾಸ್ತೋತ್ರ !

ಕೃತ್ತಿಕೆ, ಕವಿಶೈಲ–೬, ಪುಟ ೧೩

೧೨೪೦

ಈ ಪ್ರವಾಸ ಮೂರು ಮುಖಗಳಲ್ಲಿ ಸಾಗಲು ಸಾಧ್ಯ. ಒಂದು ಅಧೋಮುಖಿ, ಮತ್ತೊಂದು ಸಮತಲಮುಖಿ, ಇನ್ನೊಂದು ಊರ್ಧ್ವಮುಖಿ. ಮಾದಕ ಮತ್ತು ಲೈಂಗಿಕಾದಿ ಪ್ರಪಂಚಗಳಲ್ಲಿ ತನ್ನನ್ನು ತಾನು ಮರೆಯಲೂ ಮೀರಲೂ ಮಾನವ ಕೈಗೊಳ್ಳುವ ಸಾಹಸಗಳೆಲ್ಲ ಅಧೋಮುಖ ಪ್ರವಾಸಕ್ಕೆ ಸೇರುತ್ತವೆ. ಅದರ ಪರಿಣಾಮ ಮೊದಮೊದಲು ಸ್ವಾದುವಾದರೂ ತುರಿಯಲ್ಲಿ ಕೇಡು : ತನಗೆ, ತನ್ನ ಸಮಾಜಕ್ಕೆ, ತನ್ನ ನಾಡಿಗೆ. ಸಾಹಿತ್ಯ, ಸಂಗೀತ, ಕಲೆ, ಲೋಕವೊಪ್ಪುವ ಅಥವಾ ಮೆಚ್ಚುವ ಯಾವುದಾದರೊಂದು ಸುಧಾರಣೆಯ ಚಳವಳಿ, ರಾಜಕಾರಣ, ರಾಜ್ಯಸಭೆ ಮತ್ತು ಪರಿಷತ್ತುಗಳಲ್ಲಿ ಭಾಗವಹಿಸುವುದು, ದೇಶಭಕ್ತಿಯ ಅಥವಾ ದೇಶ ರಕ್ಷಣೆಯ ಅಥವಾ ಸಮಾಜಸೇವೆಯ ಚಟುವಟಿಕೆಗಳಲ್ಲಿ ಆಸಕ್ತನಾಗುವುದು, ಇತ್ಯಾದಿ ಇತ್ಯಾದಿ ನಮ್ಮ ಸುತ್ತ ಮುತ್ತ ದಿನವೂ ನಡೆಯುತ್ತಿರುವ ನೂರಾರು ವ್ಯಾಪಾರಗಳಲ್ಲಿ ಮನಃಪೂರ್ವಕವಾಗಿ ಮುಳುಗುವುದೆ, ನಮ್ಮನ್ನು ನಾವು ಮರೆಯುವುದೆ, ಮೀರುವುದೆ, ಸಮತಲ ಮುಖಿ ಪ್ರವಾಸ. ಆಧ್ಯಾತ್ಮಿಕ ಶ್ರೇಯಸ್ಸೆ ಧ್ಯೇಯವಾಗಿ, ನಮ್ಮ ಸಮಸ್ತ ಪ್ರಜ್ಞೆಯ ಪೂರ್ಣ ಸಮರ್ಪಣವೆ ದಾರಿಯಾಗಿ, ನಮ್ಮ ಪೂರ್ಣತೆಯ ಅನುಸಂಧಾನಕ್ಕಾಗಿ ನಾವು ಕೈಗೊಳ್ಳುವ ಅತ್ಯಪೂರ್ವ ಸಾಹಸವೆ ಅತ್ಯಂತ ವಿರಳವಾದ ಊರ್ಧ್ವಮುಖ ಪ್ರವಾಸ.

ಷಷ್ಟಿನಮನ, ತೀರ್ಥಯಾತ್ರೆ, ಪುಟ ೮೫

೧೨೪೧

ನನ್ನ ಮಟ್ಟಿಗೆ ನಾನೇನೋ ಪುರೋಹಿತ ವರ್ಗದವರಿಂದ ಸಂಪೂರ್ಣ ಪಾರಾಗಿದ್ದೇನೆ. ಆದ್ದರಿಂದ ನನಗೇನೂ ರಗಳೆ ಇಲ್ಲ, ಗೊತ್ತಾಯಿತೇ ? ನಾನು ಯಾವ ದೇವಸ್ಥಾನಕ್ಕಾಗಲಿ ಪೂಜೆ ಮಾಡಿಸಲು ಹೋಗದೆ ಬಹುಶಃ ಐವತ್ತು ವರುಷಗಳ

ಮೇಲೆ ಆಗಿದೆ. ಯಾವ ಭಟ್ಟನಾಗಲಿ, ಯಾವ ಪುರೋಹಿತನಾಗಲಿ, ಯಾವ ಪಂಚಾಂಗವಾಗಲಿ ನನ್ನ ಬಳಿ ಸುಳಿಯಗೊಡುವುದಿಲ್ಲ. ನಮ್ಮ ಮದುವೆಗಿದುವೆಗೆ ಯಾವ ಹಾರುವನನ್ನಾಗಲಿ ಪೌರೋಹಿತ್ಯಕ್ಕೆ ಕರೆಸುವುದಿಲ್ಲ. ಕರೆಸಲೂ ಇಲ್ಲ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೭೩-೪

೧೨೪೨

ಹಿಂದೆಯು ನೆಚ್ಚಿದೆ, ಮುಂದೆಯು ನೆಚ್ಚುವೆ,
ಮಾರ್ಗದರ್ಶಿಗಳು ನೀವೆನಗೆ.
ದೇವನ ರೂಪವ ಕಾಣುವೆ ನಿಮ್ಮಲಿ,
ದೇವನ ವಾಣಿಯ ಕೇಳುವೆ ನಿಮ್ಮಲಿ,
ನಿಮ್ಮನುಭವದಲಿ ಶಿವನನುಭವವಿದೆ,
ದೇವನ ಪ್ರತಿನಿಧಿಗಳು ನೀವು !
ತರುಗಳೆ, ಸುಮಗಳೆ, ಮೃಗಗಳೆ, ಖಗಗಳೆ

ನವಿಲು, ಮನ್ನಿಸಿ ನನ್ನಪರಾಧವನು, ಪುಟ ೪೭

೧೨೪೩

ರಸಾನುಭವವು ಲೋಕಾನುಭವದ ಅನಂತರದ್ದು; ಅದಕ್ಕಿಂತಲೂ ಮೇಲು ಮಟ್ಟದ್ದು; ಆದರ್ಶದಲ್ಲಿ ಅದಕ್ಕಿಂತಲೂ ಉನ್ನತವಾಗಿ ಅತಿಕ್ರಾಂತವಾದ್ದು ಅದು ಅಲೌಕಿಕ.

ರಸೋ ವೈ ಸಃ, ರಸಾನುಭವದ ಅಲೌಕಿಕ, ಪುಟ ೨೪

೧೨೪೪

ದೈತ್ಯ ಕಲೆಯಿದು ; ದಿವ್ಯ ದೈತ್ಯಕಲೆ ! ಕಲ್ಲಿನಲಿ,
ನಿರ್ಜೀವ ಜಡತೆಯಲಿ, ನಗೆಗೆಡೆಯ ನಗ್ನತೆಗೆ,
ಇಂಥ ಭೀಮಾಕೃತಿಗೆ, ಚಿರಜೀವಗಾಂಭೀರ್ಯ
ಭವ್ಯತಾ ಮುದ್ರೆಯನ್ನೊತ್ತಿದೀ ದಿವ್ಯಕಲೆ
ದೈತ್ಯಕಲೆ ! ಎದೆಯಿದ್ದರಿಲ್ಲಿ ನಗು ನೋಡುವಂ,
ಬತ್ತಲೆಗೆ ಕಿಲಕಿಲನೆ ನಗುವ ಓ ಲಘುಹೃದಯಿ !
ಎಳ್ಳುನೀರಹುದಿಲ್ಲಿ ಹೀನತೆಗೆ, ನೀಚತೆಗೆ ;
ಬೆಳೆನೀರು ಭವ್ಯತೆಗೆ, ದಿವ್ಯತೆಗೆ. ಶಿಶುಮುಖದ
ಮುಗ್ಧತೆ, ಸಮಾಧಿಸ್ಥನಾನಂದ ಗಾಂಭೀರ್ಯ,
ವಜ್ರದ ಕಠೋರತೆ, ಕುಸುಮ ಕೋಮಲತೆ, ಮೇಣ್
ಸತ್ಯದ ರಹಸ್ಯ, ಬ್ರಹ್ಮದ ಅನಿರ್ವಚನೀಯತೆ
ಎಲ್ಲ ಮೈವೆತ್ತಿರುವುವೀ ದಿಗಂಬರ ಮಹಾ

ನಿರ್ವಾಣ ಮೂರ್ತಿಯಲಿ: ಇಲ್ಲಿ ಬಾಯಿಗೆ ಬೀಗ!
ನುಡಿಗೆ ಮೌನದ ಸಿಡಿಲು ಹೊಡೆದಂತಿರುವುದೀಗ!

ಅಗ್ನಿಹಂಸ, ಶ್ರವಣಬೆಳ್ಗೊಳದ ಗೋಮಟೇಶ್ವರನ ಸಾನ್ನಿಧ್ಯದಲ್ಲಿ, ಪುಟ ೬೪-೫

೧೨೪೫

ಕೂರ್ಮಿಣೆಯ ಪಿಡಿದಿರ್ಪುದಾ ಬಿದಿಯ ಕಯ್!
ನೂಂಕುತಿಹುದನಿಬರಂ ತನ್ನ ಲೀಲಾರ್ಥಂ.

ಬೆರಳ್ ಗೆ ಕೊರಳ್, ಪಾತ್ರ ದ್ರೋಣ, ಪುಟ ೩೯

೧೨೪೬

ನಿರ್ಮಲ ಮನುಜನೆ ದೇವಾಲಯವೊ ;
ನಿರ್ಮಲ ಹೃದಯವೆ ದೇವರ ಪೀಠ!
ಶುದ್ಧವಾದ ಮನಸೇ ಪೂಜಾರಿ :
ಶುದ್ಧಾಲೋಚನೆಗಳೆ ಸುಮಹಾರ !

ಮೋಡಣ್ಣನ ತಮ್ಮ, ಪಾತ್ರ ಮೋಡ, ಪುಟ ೧೮

೧೨೪೭

ಇಷ್ಟದೈವವು ಭಕ್ತನಮನದಲ್ಲಿರುವ ಬರಿಯ ಕಲ್ಪಿತಭಾವವಾಗಿರದೆ ರಕ್ತಮಾಂಸಗಳಿಂದ ಕೂಡಿದ ಮೂರ್ತಿಯಂತೆ ನಲಿಯುತ್ತದೆ. ಇದು ಬ್ರಹ್ಮಸಾಕ್ಷಾತ್ಕಾರಕ್ಕೆ ಪ್ರಥಮ ಸೋಪಾನ. ಈ ಅವಸ್ಥೆಯಲ್ಲಿ ಆರಾಧಕ ಆರಾಧ್ಯರು ಪ್ರಬಲ ಪ್ರೇಮಪಾಶ ಬದ್ಧರಾದರೂ ಭೇದಭಾವ ಸ್ವಲ್ಪ ಇದ್ದೇ ಇರುತ್ತದೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೫೦

೧೨೪೮

ಕನ್ನಡಕ್ಕಾಗಿ ಕೈಯೆತ್ತು ; ನಿನ್ನ ಕೈ ಕಲ್ಪವೃಕ್ಷವಾಗುತ್ತದೆ! ಕನ್ನಡಕ್ಕಾಗಿ ಕೊರಳೆತ್ತು ; ಅಲ್ಲಿ ಪಾಂಚಜನ್ಯ ಮೂಡುತ್ತದೆ! ಕನ್ನಡಕ್ಕಾಗಿ ಕಿರುಬೆರಳೆತ್ತಿದರೂ ಸಾಕು ಇಂದು ಅದೆ ಗೋವರ್ಧನಗಿರಿಯಾಗುತ್ತದೆ.

ಮನುಜಮತ ವಿಶ್ವಪಥ, ಕನ್ನಡಕ್ಕಾಗಿ ಕೈಯೆತ್ತು, ಪುಟ ೨

೧೨೪೯

ಅಂದು ಹೂವಿನ ಹಾರ,
ಇಂದು ಕಲ್ಲೇಟು :
ಏನಿದೀ ಗ್ರಹಚಾರ ?
ಹಾಳು ಈ ಓಟು !

ಕದರಡಕೆ, ಚುನಾವಣೆ, ಪುಟ ೮೯

೧೨೫೦

ತನ್ನ ನೋಂಪಿಗೆ ಪೆರರ
ನೋಂಪಿಯೆ ನೆರಂ, ಗುರಿಯೊಳಿಲ್ಲದಿರಲಂತರಂ.

ಶ್ರೀ ರಾಮಾಯಣ ದರ್ಶನಂ, ನಾನಕ್ಕನೆನ್ ನಿನಗೆ ತಂಗೆ, ಪುಟ ೩೫೧

೧೨೫೧

ಸ್ವಯಾರ್ಜಿತ ಪಿತ್ರಾರ್ಜಿತ ಎಂದು ಆಸ್ತಿಯನ್ನು ವಿಭಾಗ ಮಾಡುವುದು ನ್ಯಾಯವಲ್ಲ. ಒಂದು ಮನೆಗೆ ಯಜಮಾನನಾದವನು ಏನು ಸಂಪಾದನೆ ಮಾಡಿದರೂ ಅವು ಮನೆಯ ಸಂಪತ್ತಿಗೇ ಸೇರುತ್ತವೆ. ಯಜಮಾನನು ಮೈವಟ್ಟು ನಡೆಸುವಾಗ ಏನಾದರೂ ನಷ್ಟ ಸಂಭವಿಸಿದರೆ ಆ ನಷ್ಟವನ್ನು ತನ್ನೊಬ್ಬನ ಮೈಮೇಲೆಯೇ ಹಾಕಿಕೊಳ್ಳುತ್ತಾನೆಯೆ ? ಮನೆಯ ಲೆಖ್ಖಕ್ಕೆ ಖರ್ಚು ಹಾಕುವುದಿಲ್ಲವೇನು ? ನಷ್ಟದಂತೆಯೇ ಲಾಭವೂ ಮನೆಯ ಆಸ್ತಿಗೇ ಸೇರತಕ್ಕದ್ದು. ಪಿತ್ರಾರ್ಜಿತವಾದ ಆಸ್ತಿಯ ಆಧಾರ, ಬೆಂಬಲ, ಧನ, ಗೌರವ, ವಿರಾಮ ಇವುಗಳೆಲ್ಲ ಇಲ್ಲದಿದ್ದರೆ ಯಜಮಾನನು ಹೊಸ ಆಸ್ತಿಗಳನ್ನು ಸಂಪಾದಿಸಲು ಸಾಧ್ಯವಾಗುತ್ತಿತ್ತೆ ? ಆದ್ದರಿಂದ ಸಂಪಾದಿಸಿದ ಹೊಸ ಆಸ್ತಿಗಳೆಲ್ಲವೂ ಪಿತ್ರಾರ್ಜಿತ ಆಸ್ತಿ ಎಂಬ ಮೂಲಧನದ ಮೇಲೆ ಬಂದ ಬಡ್ಡಿಯಂತೆಯೇ ಹೊರತು ಮತ್ತೆ ಬೇರೆಯಲ್ಲ.

ಕಾನೂರು ಹೆಗ್ಗಡಿತಿ, ಪಾತ್ರ ಹೂವಯ್ಯ, ಪುಟ ೩೩೫-೬

೧೨೫೨

ನಿತ್ಯಸತ್ಯಗಳಿಗೆ ಭಂಗಬಾರದಂತೆ ಆ (ಪುರಾಣ) ಕಥಾ ಪ್ರತಿಮೆಗಳನ್ನು ಆಯಾ ಕಾಲದ ಮನೋಧರ್ಮಕ್ಕನುಗುಣವಾಗಿ ತಮ್ಮ ತಮ್ಮ ಶಕ್ತಿ ಸಂಸ್ಕಾರ ಧ್ಯೇಯ ದರ್ಶನಗಳ ಅಭಿವ್ಯಕ್ತಿಗೆ ಅನುಕೂಲವಾಗುವಂತೆ ಕವಿಗಳು ಮಾರ್ಪಡಿಸಿಕೊಂಡು ಸಾಹಿತ್ಯ ಸೃಷ್ಟಿ ಮಾಡುವುದು ಅತ್ಯಂತ ಆವಶ್ಯಕ ಎಂದು ಒತ್ತಿ ಹೇಳಬಯಸುತ್ತೇನೆ.

ಶೂದ್ರ ತಪಸ್ವಿ, ಮಾರ್ನುಡಿ, ಪುಟ ೪೩

೧೨೫೩

ನಾಟಕದ ನಿಜವನರಿವುದು
ನೇಪಥ್ಯಮಂ ಪೊಕ್ಕ ಮೇಲಲ್ತೆ ?

ಶೂದ್ರ ತಪಸ್ವಿ, ಪಾತ್ರ ಶ್ರೀರಾಮ, ಪುಟ ೨೬

೧೨೫೪

ಸಚ್ಚಿದಾನಂದಮಯಿಯಾದ ಆ ಪರಾಪ್ರಕೃತಿಯ ಒಂದು ಪಾದ, ಒಂದು ಅಂಶ ಮಾತ್ರ ಇಲ್ಲಿ 'ನಮ್ಮ ಪ್ರಕೃತಿ' ಆಗಿದೆ. ಉಳಿದ ಮೂರು ಪಾದ ಇನ್ನೂ ಅವ್ಯಕ್ತದಲ್ಲಿ ಅನಂತದಲ್ಲಿ ಅತೀತದಲ್ಲಿ ಅಮೃತವಾಗಿ ಇದೆ.

ವಿಭೂತಿ ಪೂಜೆ, ಕವಿಯ ದೃಷ್ಟಿಯಲ್ಲಿ ಪ್ರಕೃತಿ, ಪುಟ ೩೧-೨

೧೨೫೫

ವೇದಾಂತವಂತೆಯಿದು
ತರ್ಕವಂತೆ !
ಹುಚ್ಚಿಗಿದು ಬೇರೊಂದು
ಹೆಸರಲ್ಲವೇ ?

ಕಲಾಸುಂದರಿ, ಹುಚ್ಚಿಗಿದು ಬೇರೊಂದು ಹೆಸರಲ್ಲವೆ ? ಪುಟ ೨೪

೧೨೫೬

ಪ್ರಾಕೃತಕೆ ಬುದ್ಧಿ ; ಅಪ್ರಾಕೃತಕೆ,
ಭೂಮಕೆ, ಅನಲ್ಪಕೆ, ಮಹತ್ತಿಗೆಂತುಂ ಪ್ರತಿಭೆ
ಗುರುವಲ್ತೆ ?

ಶ್ರೀ ರಾಮಾಯಣ ದರ್ಶನಂ, ವನಮಂ ಪೊಕ್ಕನಶೋಕಮಂ, ಪಾತ್ರ ಆಂಜನೇಯ, ಪುಟ ೪೮೫–೬

೧೨೫೭

ತಮ್ಮ ಮನೆಯ ನೆಮ್ಮದಿಯ ವಿಷಯದಲ್ಲಿ ಹೆರರ ಮಾತು ಸಲಹೆಯಾಗಿರಬೇಕೇ ಹೊರತು ವೇದವಾಕ್ಯವಾಗಿರಬಾರದು. ಏಕೆಂದರೆ, ನಮ್ಮ ಕಷ್ಟ ಸಂಕಟಗಳೂ ಆಸೆ ಬಯಕೆಗಳೂ ಅನ್ಯರ ಮನಸ್ಸಿಗೆ ಸಂಪೂರ್ಣವಾಗಿ ಬರಲಾರವೆಂದೇ ತೋರುತ್ತದೆ.

ಸಾಹಿತ್ಯ ಪ್ರಚಾರ, ದೇಶದೇವಿಯ ಪೂಜೆಗೆ ಬನ್ನಿ, ಪುಟ ೭೧

೧೨೫೮

ಜಗಜ್ಜೀವನದ ಅನಂತ ಕಾಲಪಥದಲ್ಲಿ ಮಹಾಪುರುಷರು ಜ್ಯೋತಿರ್ಧಾರಿಗಳಾಗಿ ಅಲ್ಲಲ್ಲಿ ನಿಂತಿದ್ದಾರೆ. ಅವರ ಜೀವನ ಚರಿತ್ರೆಗಳು ನಿರಾಶೆಯ ಕತ್ತಲೆಯಲ್ಲಿ ಆಶಾಕಿರಣಗಳಾಗುತ್ತವೆ.

ಸ್ವಾಮಿ ವಿವೇಕಾನಂದ, ಪುಟ ೫೭–೮

೧೨೫೯

ಯಾವಾತನು ಅಂತಸ್ಸಾಧನೆಯಿಂದ ಆತ್ಮಶ್ರೀ ಸಮನ್ವಿತನಾಗಿರುತ್ತಾನೆಯೋ ಅಂಥವನು ಬುದ್ಧಿಯಲ್ಲಿ, ಭಾವದಲ್ಲಿ, ದೇಹದಲ್ಲಿ, ಜೀವನ ಸಂಗ್ರಾಮದಲ್ಲಿ ಆತ್ಮಶ್ರೀ ವಿಹೀನನಿಗಿಂತಲೂ ನಿಸ್ಸಂದೇಹವಾಗಿ ಮೇಲುಗೈಯಾಗುತ್ತಾನೆ. ಸೋಲು, ನಿರಾಶೆ, ಅವಮಾನ ಮೊದಲಾದ ದುರಂತ ಸನ್ನಿವೇಶಗಳು ಒದಗಿದಾಗಲೂ ಅವನ ಶಾಂತಿ, ಧೈರ್ಯ, ಅವನ ನಿರ್ಭರತೆ ಇವು ಅಂತಹನನ್ನು ಕೈಬಿಡದೆ ಉದ್ಧಾರ ಮಾಡುತ್ತವೆ. ಇತರರಂತೆ ಅವನು ನಿರ್ವಿಣ್ಣತೆಗೆ ತುತ್ತಾಗುವುದಿಲ್ಲ, ಮೋಘಕರ್ಮನಾಗುವುದಿಲ್ಲ, ನಷ್ಟಾತ್ಮನಾಗುವುದಿಲ್ಲ. ಆದ್ದರಿಂದ ದೇಹಶ್ರೀ ಭಾವಶ್ರೀ ಬುದ್ಧಿಶ್ರೀಗಳನ್ನು ಈಗಿರುವುದಕ್ಕಿಂತಲೂ ನೂರು ಮಡಿ ಸಾವಿರ ಮಡಿ ತೇಜೋಮಯವಾಗಿಯೂ ಆಶಾಪೂರ್ಣವಾಗಿಯೂ ಮಾಡಿ ಅವೆಲ್ಲವುಗಳ ಸರ್ವತೋಮುಖವಾದ ಏಳಿಗೆಗೆ ಪ್ರಚೋದಕಶಕ್ತಿಯಾಗುವ ಆತ್ಮಶ್ರೀಯ ಅನುಸಂಧಾನವು ಉದ್ಧಾರಾಕಾಂಕ್ಷಿಗಳಾದ ವಿದ್ಯಾರ್ಥಿಗಳೆಲ್ಲರಿಗೂ

ಅಮೃತ ಪಥ್ಯ. ವಿದ್ಯೆ ಆತ್ಮಶ್ರೀಯಿಂದ ಪ್ರದೀಪ್ತವಾದರೆ ಅದು ನಿಜವಾಗಿಯೂ ವಿದ್ಯೆಯಾಗುತ್ತದೆ; ಇಲ್ಲದಿದ್ದರೆ, ಅದು ಎಷ್ಟು ಅಕ್ಷರಗಳ ಪದವಿಗೆ ಬೇಕಾದರೂ ಏರಿರಲಿ, 'ಅವಿದ್ಯೆ' ಎನಿಸಿಕೊಳ್ಳುತ್ತದೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ, ಪುಟ ೫೦

೧೨೬೦

ಕೈಲಾಗದವರೆಂಬ ನಾವು ಕೀಳೆಂದೆಂಬ
ಹಣೆಬರಹವೆಂದೆಂಬ ಮೂಢತೆಯ ನೀಗಿ
ಯುಗಚಕ್ರ ಪರಿವರ್ತನೆಗೆ ಸರ್ವರೂ ಸೇರಿ
ಹೆಗಲು ಕೊಟ್ಟೊಮ್ಮನಸು ಮಾಡಿ ನೆರವಾಗಿ!
ಮೋಹಿನಿಗೆ ಮರುಳಾಗಿ ಮೂರ್ಖ ದಾನವರೆಲ್ಲ
ತಮ್ಮ ಗೆಯ್ಮೆಯ ಪಾಲನನ್ಯರಿಗೆ ತೆತ್ತು
ಸತ್ತಂತೆ ಸಾಯದಿರಿ : ಸಂಸ್ಕೃತಿಯ ಹೆಸರಿಂದೆ
ಶ್ರೀಮಂತರೊಡ್ಡುವಾ ಬಲೆ ನಿಮಗೆ ಮೃತ್ಯು!

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಹೊಸಬಾಳಿನ ಗೀತೆ, ಪುಟ ೨೯–೩೦

೧೨೬೧

ಅಮೆರಿಕಾದ ಚಿಕಾಗೊ ಬಹುದೂರದಲ್ಲಿದ್ದಿರಬಹುದು? ವಿವೇಕಾನಂದರ ಉತ್ತಾಲಧ್ವನಿ ಮಲೆನಾಡಿನ ಕೊಂಪೆಗೆ ಮುಟ್ಟದಿದ್ದಿರಬಹುದು? ಆದರೆ ಸಮೀಪದಲ್ಲಿಯೆ ಇದ್ದುವಲ್ಲ–ಶೃಂಗೇರಿ, ಧರ್ಮಸ್ಥಳ, ಉಡುಪಿ ಇತ್ಯಾದಿ ಪವಿತ್ರಕ್ಷೇತ್ರಗಳ ಗುರುಪೀಠಗಳು? ಅವೇನು ಮಾಡುತ್ತಿದ್ದುವು? ಅದ್ವೈತ ತತ್ತ್ವದಿಂದ ಬೌದ್ಧ ಧರ್ಮವನ್ನೇ ಭರತವರ್ಷದಿಂದ ಅಟ್ಟಿ ವೈದಿಕ ಧರ್ಮಸ್ಥಾಪನೆ ಮಾಡಿದನೆಂದು ಹೇಳಲಾಗುತ್ತಿರುವ ಆಚಾರ್ಯ ಶಂಕರನ ಮೂಲ ಪೀಠದಲ್ಲಿ ವಿರಾಜಮಾನರಾಗಿದ್ದ ಸನ್ಯಾಸಿವರೇಣ್ಯರು ಏನು ಮಾಡುತ್ತಿದ್ದರು? ಅಜ್ಞರೂ ಮೌಢ್ಯಾಂಧರೂ ಆಗಿದ್ದ ಶೂದ್ರವರ್ಗದ ಸಾಮಾನ್ಯ ಜನರಿಂದ ಪಾದಪೂಜೆ ಮಾಡಿಸಿಕೊಳ್ಳುತ್ತಿದ್ದರು; ಅಡ್ಡ ಪಲ್ಲಕ್ಕಿ ಸೇವೆ ಸಲ್ಲಿಸಿಕೊಳ್ಳುತ್ತಿದ್ದರು; ದಾನ, ದಕ್ಷಿಣೆ, ಸಾಷ್ಟಾಂಗ ನಮಸ್ಕಾರಗಳನ್ನೂ ಸ್ವೀಕರಿಸುತ್ತಿದ್ದರು. ಆಶೀರ್ವಾದ ಮಾಡುತ್ತಿದ್ದರು! ತಮ್ಮ ತಮ್ಮ ಪಂಗಡಕ್ಕೆ ಸೇರಿದ ಬ್ರಾಹ್ಮಣೋತ್ತಮರಿಗೆ, ಭೂಸುರರಿಗೆ, ಸಮಾರಾಧನೆ ಮಾಡಿಸಿ ಹೊಟ್ಟೆ ತುಂಬಿಸುತ್ತಿದ್ದರು. ಬಹುಶಃ ಶಾಸ್ತ್ರಕ್ಕಾಗಿ, ತಮ್ಮ ವರ್ಗಕ್ಕೆ ಸೇರಿದ ವಿದ್ವಾಂಸರನ್ನು ನೆರಪಿ ವಾಕ್ಯಾರ್ಥ ಏರ್ಪಡಿಸುತ್ತಿದ್ದರೂ ಇರಬಹುದು. ಶೂದ್ರರು ವೇದೋಪನಿಷತ್ತುಗಳನ್ನು ಓದುವುದಿರಲಿ, ಕೇಳಿದರೂ ಅವರ ಕಿವಿಗೆ ಸೀಸ ಕರಗಿಸಿ ಹೊಯ್ಯುವ ನರಕ ಶಿಕ್ಷೆಯನ್ನು ವಿಧಿಸಿ, ಅದಕ್ಕೆ ಮನುಧರ್ಮಶಾಸ್ತ್ರವೆಂದು ಹೆಸರಿಟ್ಟವರು ಶೂದ್ರರಿಗೆ ವೇದಾಂತ ಬೋಧನೆ ಮಾಡುವ ಪಾಪಕ್ಕೆ ಏಕೆ ಪಕ್ಕಾಗುತ್ತಾರೆ?

ಮಲೆಗಳಲ್ಲಿ ಮದುಮಗಳು, ಪುಟ ೨೩೧–೨

೧೨೬೨

ಪೂಜ್ಯ ಸಾನ್ನಿಧ್ಯಮಿರೆ
ಚಂಚಲತೆಯುಂ ಸುಸ್ಥಿರತೆಯಪ್ಪುದಚ್ಚರಿಯೆ ?

ಶ್ರೀ ರಾಮಾಯಣ ದರ್ಶನಂ, ಪಾದುಕ ಕಿರೀಟಿ, ಪುಟ ೧೨

೧೨೬೩

ಪಿರಿತನಕೆ ಮಣಿವುದೆ ಕಿರಿಯ ಸಂಸ್ಕೃತಿಗೆ
ಮೇಲ್ಮೆ. ಪುಣ್ಯಂ ವಿಪತ್ತಿನ ತೆರದಿನೋರೊರ್ಮೆ
ದೈತ್ಯನೋಲಾಕ್ರಮಿಪುದಾತ್ಮಮಂ ಜನತೆಯಂ
ನಾಡೂರ್ಗಳಂ. ಕೃಪಾಬಾಹು ನೀಡಲ್ಕದರ
ನೆಳಲಲ್ತೆ ಪೇಳ್ ರಾಹು !

ಶ್ರೀ ರಾಮಾಯಣ ದರ್ಶನಂ, ಅತ್ರಿಯಿಂದಗಸ್ತ್ಯಂಗೆ, ಪುಟ ೧೯೮

೧೨೬೪

ಮರ್ತ್ಯಜಂ ಕೀರ್ತಿಶನಿ ಅಹಂಕಾರ ಖನಿಯಲ್ತೆ ?

ಕೃತ್ತಿಕೆ, ಯಶೋಲಕ್ಷ್ಮಿ, ಪುಟ ೭೫

೧೨೬೫

ತಗುಳ್ದಪುದೆ ಪೇಳ್
ನಾಟಕದ ಪಾತ್ರದುದ್ವೇಗಮಾ ರಸಮಾತ್ರಮಂ
ಆಸ್ವಾದಿಸುವ ಸೂತ್ರಧಾರ ಕವಿಗೆ?

ಶ್ರೀ ರಾಮಾಯಣ ದರ್ಶನಂ, ಶ್ರೀರಾಮ ರಾವಣ ಚಿತ್‌ತಪಸ್‌ಶ್ರೀ, ಪುಟ ೭೬೬–೭

೧೨೬೬

ಪತ್ರಿಕೆಗಳ ದಪ್ಪಕ್ಷರ
ಮೇಣ್ ಚಿತ್ರದ ಕ್ಷಣಿಕಕೆ ನೀ
ಬೆಪ್ಪಗದೆ, ಹೇ ಜನನೀ,
ಒಪ್ಪಾಗಿರು, ಒಲವಾಗಿರು ;
ನಿಜಮತದಲಿ ಋಜುಪಥದಲಿ
ನಡಸೆಮ್ಮನು, ಋತದರ್ಶಿನಿ
ಹೇ ಮನುಕುಲ ಕಲ್ಯಾಣೀ !

ಇಕ್ಷುಗಂಗೋತ್ರಿ, ಮನೆಮನೆಯ ತಪಸ್ವಿನಿಗೆ, ಪುಟ ೯

೧೨೬೭

ಜೀವನಚರಿತ್ರೆಯಲ್ಲಿ ನಾವು ಹೇಳುವುದನ್ನೆಲ್ಲ ಹೇಳಿಬಿಡಬಹುದು ; ಸ್ವಲ್ಪ ದೀರ್ಘವಾದರೂ ಚಿಂತೆಯಿಲ್ಲವೆಂದು ವಿವರಿಸಲೂ ಬಹುದು ; ಇತರರಿಗೆ ಅಲ್ಪ,

ನೀರಸ, ಅರ್ಥಹೀನ ಎಂದು ತೋರುವ ಘಟನೆಗಳನ್ನು ನಮಗೆ ತೋರುವಂತೆ ಅನಲ್ಪ, ಸರಸ, ಅರ್ಥಪೂರ್ಣವೆಂದು ಸಮರ್ಥಿಸಲೂಬಹುದು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೬೬

೧೨೬೮

ಗುರು ಶಿಷ್ಯ ಸಂಬಂಧವು ರಹಸ್ಯತಮವಾದುದು. ನಿಜವಾಗಿ ಸಿದ್ಧಪುರುಷನಾದ ಗುರು ಪರಮಾತ್ಮನ ಪ್ರತಿನಿಧಿ. ಆದ್ದರಿಂದಲೆ ಗುರುವಿಲ್ಲದೆ ಯಾವ ಸಿದ್ಧಿಯೂ ದೊರಕದೆಂದು ಶಾಸ್ತ್ರಗಳು ಸಾರುತ್ತಿವೆ. ಪರಿಪಕ್ವವಾದ ಸಂಸ್ಕಾರವುಳ್ಳ ನರನಿಗೆ ಗುರು ಯಾವ ರೂಪದಿಂದಾದರೂ ಬರಬಹುದು....ದೈವಿಕ ಗುರು ಶಿಷ್ಯನ ಅಂತರಂಗದಲ್ಲಿ ಗುಪ್ತವಾಗಿರುವ ಸಮಸ್ತ ಶಕ್ತಿಗಳನ್ನೂ ಈಚೆಗೆ ಎಳೆಯಬಲ್ಲನು.

ಸ್ವಾಮಿ ವಿವೇಕಾನಂದ, ಪುಟ ೭೧-೨

೧೨೬೯

ಕವಿಗಳನು ರಸಿಕರನು ಕೆಣಕಿದಲ್ಲದೆ
ನಮಗೆ ಲಾಭವೆಲ್ಲಿ ? ತಮ್ಮ ಸರಕಿನ ಮೂಟೆಯನು
ಸುಮ್ಮನೆಯೆ ಬಿಚ್ಚುವರೆ ?

ಚಂದ್ರಹಾಸ, ಪಾತ್ರ ಪಂಕಜೆ, ಪುಟ ೬೭

೧೨೭೦

ಈ ಪ್ರಕಾಶನ ಸಂಸ್ಥೆಗಳಿಗೆ ನನ್ನ ಸಲಹೆ : ಧಾರ್ಮಿಕ ಮತ್ತು ಅಧ್ಯಾತ್ಮಿಕ ವರ್ಗದ ವ್ಯಕ್ತಿಗಳನ್ನು ಕುರಿತು ಬರೆಯಿಸುವಾಗ ಕ್ಷುದ್ರ ಕೋಮುವ್ಯಕ್ತಿಗಳನ್ನು ಆರಿಸಿಕೊಳ್ಳಬೇಡಿ : ವಿಶ್ವವ್ಯಕ್ತಿಗಳನ್ನೂ ರಾಷ್ಟ್ರವ್ಯಕ್ತಿಗಳನ್ನೂ ಮಾತ್ರ ಆರಿಸಿಕೊಳ್ಳಿ. ಮೌಢ್ಯ ಪ್ರಚೋದಕವಾಗುವಂತಹ ತೀರ್ಥಕ್ಷೇತ್ರಗಳ ಪವಾಡದ ಸುಳ್ಳುಸುಳ್ಳು ಕಥೆಗಳನ್ನೆಲ್ಲ ನಿಜ ಎಂದು ಹೇಳಿ ಮಕ್ಕಳನ್ನೂ ಮೂಢರನ್ನಾಗಿ ಮಾಡಬೇಡಿ. ವೈಜ್ಞಾನಿಕ ದೃಷ್ಟಿಯ ವಿಚಾರವಂತರನ್ನಾಗಿಮಾಡಿ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಅಡಿಟಿಪ್ಪಣಿ, ಪುಟ ೭೬

೧೨೭೧

ಮೊಲೆವಾಲಿನೊಡಗೂಡಿ ಬಂದ ನುಡಿ ತಾಯಿನುಡಿ ;
ಕೊಲೆಗೈದವರಮ್ಮನನೆ ಕೊಲಿಸಿದಂತೆ !
ತಾಯ್ ಮುತ್ತು ಕೊಡುವಂದು ನಿಮ್ಮ ಕೆನ್ನೆಯ ಮೇಲೆ
ಮೆರೆಯಿತದು ಪೋಣಿಸಿದ ಮುತ್ತಿನಂತೆ :
ನಿಮ್ಮ ನಲ್ಲೆಯರೊಡನೆ ನಲ್ನುಡಿಯ ನುಡಿವಂದು
ಕನ್ನಡವೆ ಕಲಿಸುವುದು ತುಟಿಗೆ ಬಂದು :
ನುಡಿವಂದು ನಿಮ್ಮ ಮುದ್ದಿನ ಹಸುಳೆಗಳನೆತ್ತಿ
ಕನ್ನಡವೇ ನಿಮಗೀವುದೊಲವ ತಂದು.

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ, ಪುಟ ೪೧

೧೨೭೨

ಕೋಗಿಲೆಯ ಕಂಠಕ್ಕೆ ಸ್ವರ್ಣಪದಕವ ತೊಡಿಸಿ
ನೇಣು ಬಿಗಿಯುವುದೇಕೆ ಬಹುಮಾನವೆಂದು ?
ಹಾರ ಭಾರಕೆ ಗೋಣು ಕುಸಿದು ಕುಗ್ಗಲು, ಗಾನ
ಕೊರಗಿ ಕರ್ಕಶವಾಗಿ ನರಳುವುದು ನೊಂದು !
ಬಿರುದು ಬಾವಲಿ ಹೆಚ್ಚೆ ? ಹೆಸರು ಹೊಗಳಿಕೆ ಹೆಚ್ಚೆ,
ಪಿಕವರಗೆ ಶಿವ ಕೊಟ್ಟ ಸವಿಗೊರಲಿಗಿಂತ ?
ಕೇಳಿ ಸವಿದೆಯ ? ಸಾಕು, ಅದೆ ಪರಮ ಬಹುಮಾನ !
ದಿವ್ಯ ನಿರ್ಲಕ್ಷತೆಯೆ ವರಕವಿಯ ಪಂಥ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ವರಕವಿಯ ಪಂಥ, ಮಟ ೮೫

೧೨೭೩

ನಾನು ಹೇಳಲಿರುವ ಅಭಿಪ್ರಾಯ ಅಲ್ಪಾಲೋಚನೆಯಿಂದಾಗಲಿ, ಉದ್ರೇಕದ ಬುದ್ಧಿಯಿಂದಾಗಲಿ, ಅನುದಾರತೆಯಿಂದಾಗಲಿ, ಪ್ರತಿಹಿಂಸಾಭಾವದಿಂದಾಗಲಿ ಬಂದುವಲ್ಲ; ಬಹುಕಾಲದ ದೀರ್ಘಮಂಥನದಿಂದ, ಪ್ರಶಾಂತ ಧ್ಯಾನದಿಂದ, ಅನ್ಯಾಯಗಳನ್ನೂ ಅವಿವೇಕಗಳನ್ನೂ ಅಜ್ಞಾನಜನ್ಯವಾದ ಕ್ರೂರ ವರ್ತನೆಗಳನ್ನೂ ಕಂಡಾಗ ಮೂಡಿದ ಸಾತ್ವಿಕ ಕ್ರೋಧದಿಂದ, ನಮ್ಮ ದೇಶ ನಮ್ಮ ನಾಡು ನಮ್ಮ ಭಾಷೆ ನಮ್ಮ ಸಂಸ್ಕೃತಿ ನಮ್ಮ ಸ್ಥಿತಿಗತಿಗಳು ಉಚ್ಛ್ರಾಯವಾಗಬೇಕೆಂಬ ಹಂಬಲದಿಂದ ಮೂಡಿದುವಾಗಿವೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಟ ೧

೧೨೭೪

ಹಾಲು, ಹೂವು, ಜೊನ್ನ, ಜೇನು,
ಎಲ್ಲ ಸೇರಿಯಾದೆ ನೀನು !
ಹಾಲಿಗಿಂತ ಕೆನ್ನೆ ಸವಿ ;
ಹೂವಿಗಿಂತ ಕಣ್ಣೆ ಸವಿ ;
ಜೊನ್ನಕಿಂತ ನಗೆಯೆ ಸವಿ ;
ಜೇನಿಗಿಂತ ಮುತ್ತೆ ಸವಿ ;
ಹಾಲು ಸವಿ, ಜೇನು ಸವಿ,
ಹಾಲು ಜೇನುಗಳನು ಮೀರಿ
ನೀನೆ ನನಗೆ ಹೆಚ್ಚು ಸವಿ !

ಪ್ರೇಮಕಾಶ್ಮೀರ, ಪ್ರಿಯನು ಪ್ರೇಯಸಿಗೆ, ಮಟ ೪೬

೧೨೭೫

ಹರಟೆಯ ಹಣೆಯಬರೆಹವೆ ಹೀಗೆ. ತುದಿಯಿಲ್ಲ, ಬುಡವಿಲ್ಲ; ಗೊತ್ತಿಲ್ಲ, ಗುರಿಯಿಲ್ಲ. ಜಗತ್ತಿನಲ್ಲಿ ದೇವರಿಗೆ ಸರಿಸಮಾನವಾಗಿರುವುದೆಂದರೆ ಹರಟೆಯೊಂದೇ !

ಹರಟೆಯೆಂದರೆ ಬೇಜಾರಿಗೆ ಭೇಷಜವಿದ್ದ ಹಾಗೆ. ಪೂರ್ವಾನುಭವಗಳೆಂಬ ಸ್ವಪಾರಣ್ಯದಲ್ಲಿ ಪೋಲಿ ಪೋಲಿಯಾಗಿ ಅಲೆಯುವುದೇ ಹರಟೆ.

ಮಲೆನಾಡಿನ ಚಿತ್ರಗಳು, ಹಾಸ್ಯದ ಚಟಾಕಿ, ಪುಟ ೩

೧೨೭೬

ಬೆಳ್ಳಿನಾಲಗೆ ಸಾಲದಯ್ಯ, ವಜ್ರದ ಮುಷ್ಟಿ
ಬೇಕಂದೆಮಗೆ : ಸೆರೆಯ ಕಬ್ಬಿಣ ಸರಳನೊಡೆಯೆ,
ನುಣ್ಪು ನಾಯಕರಲ್ಲ, ಬೇಕೆಮಗೊರಟು ಮಂದಿ.

ಕೃತ್ತಿಕೆ, ತ್ಯಾಗವಿಲ್ಲದ ದೇಶಭಕ್ತಿ, ಪುಟ ೭೦

೧೨೭೭

ಉಳುವುದು ಬಿತ್ತುವುದೆಮ್ಮಿಚ್ಛೆ,
ಬೆಳೆವುದು ಬಿಡುವುದು ದೈವೇಚ್ಛೆ!

ಹೊನ್ನಹೊತ್ತಾರೆ, ಮಂತ್ರಾಕ್ಷತೆ, ಪುಟ ೬೦

೧೨೭೮

ನಾನು ಇಂಗ್ಲಿಷ್ ಭಾಷೆಯ ದ್ವೇಷಿಯಲ್ಲ. ಈಗಲೂ ನಾನು ಬಹುಶಃ ಕನ್ನಡ ಪುಸ್ತಕಗಳನ್ನು ಓದುವುದಕ್ಕಿಂತ ಹೆಚ್ಚಾಗಿ ಇಂಗ್ಲಿಷ್ ಗ್ರಂಥಗಳನ್ನು ಓದುತ್ತಿದ್ದೇನೆ. ಇದಕ್ಕೆ ಮುಖ್ಯ ಕಾರಣವೆಂದರೆ ಬೇರೆ ಬೇರೆ ಅತಿ ವಿವರದ ಶಾಸ್ತ್ರಗಳನ್ನು ಓದುವ ಅಭೀಪ್ಸೆ.

ಷಷ್ಠಿನಮನ, ಭಾರತದಲ್ಲಿ ಇಂಗ್ಲಿಷಿನ ಸ್ಥಾನ, ಪುಟ ೧೧೩

೧೨೭೯

ಅಜಾಗರೂಕತೆಯಿಂದ ಇದ್ದರೆ ಎಲ್ಲಿದ್ದರೂ ರೋಗ ತಪ್ಪುವುದಿಲ್ಲ.

ನನ್ನ ದೇವರು ಮತ್ತು ಇತರ ಕಥೆಗಳು, ಔದಾರ್ಯ, ಪಾತ್ರ ಕಥಾನಾಯಕ, ಪುಟ ೩೪

೧೨೮೦

ಕಲಾಸುಂದರಿ ಸರಸಿಯಾದರೂ ಮಹಾತಪಸ್ವಿನಿ. ಆಕೆಯ ಬಹಿರಂಗದಲ್ಲಿ ತೇಜಸ್ಸಿರುವಂತೆಯೆ ಅಂತರಂಗದಲ್ಲಿ ತಪಸ್ಸಿದೆ: ಹಸುರು ಗಿಡ ಮರಗಳಿಂದಲೂ ನಗರ ಗ್ರಾಮಗಳಿಂದಲೂ ವನಪರ್ವತಗಳಿಂದಲೂ ಹೊಳೆಕೆರೆಗಳಿಂದಲೂ ನಲಿದು ನಗೆ ಸೂಸುತ್ತಿರುವ ಉರ್ವರೆಯ ಅಂತರಾಳದಲ್ಲಿ ಅನೇಕ ಶತಮಾನಗಳಿಂದಲೂ ಉನ್ಮತ್ತರಭಸದಿಂದ ಘೂರ್ಣಿಸುತ್ತಿರುವ ಜಲರೂಪದ ಅಗ್ನಿರಾಶಿ ತಪಸ್ಸು ಮಾಡುತ್ತಿರುವಂತೆ ಆಕೆಯ ಅಂತರಂಗದಲ್ಲಿ ತಪಸ್ಸಿದೆ. ಆಕೆ ಎಷ್ಟರ ಮಟ್ಟಿಗೆ ಭೋಗಿನಿಯೋ ಅದಕ್ಕಿಂತಲೂ ಹೆಚ್ಚಾಗಿ ಯೋಗಿನಿ. ಮೇಲೆ ಮೇಲೆ ನೋಡುವ ತೇಲುನೋಟದ ಮಂದಿಗೆ ಆಕೆಯ ಸೌಂದರ್ಯ ಮಾತ್ರ ಕಾಣುತ್ತದೆ; ಆಕೆಯಲ್ಲಿ ಅಗಾಧ ಪರಿಚಯವಿರುವ ರಸಋಷಿಗಳಿಗೆ ಸೌಂದರ್ಯದ ಜೊತೆಗೆ ಅದಕ್ಕಿಂತಲೂ ಶಾಶ್ವತವಾದ ಮತ್ತು ಅದನ್ನೇ ಶಾಶ್ವತಗೊಳಿಸುವ ಭವ್ಯವಾದ ಓಜಸ್ಸೂ ತೋರುತ್ತದೆ.

ಆಕೆ ಲಘುಮಾನಸರ ಅಲಸ ಸಮಯದ ನರ್ಮಮೂರ್ತಿಯಲ್ಲ; ಕಲೋಪಾಸಕರ ಹೃದಯ ಕುಟೀರದ ತಪೋಮೂರ್ತಿ. ಆಕೆಯಲ್ಲಿ ಕಾವ್ಯದ ರಮಣೀಯತೆಯೂ ತತ್ತ್ವದ ಸೂಕ್ಷ್ಮತೆಯೂ ಒಂದಾಗಿವೆ. ಹಸುಳೆಯ ಕ್ರೀಡಾಶೀಲವೂ ವೃದ್ಧನ ಧ್ಯಾನಶೀಲವೂ ಎರಡೂ ಆಕೆಯಲ್ಲಿ ಅಡಕವಾಗಿವೆ. ಆಕೆ ಬುದ್ಧಿ ಭಾವಗಳ ವಿದ್ಯುದಾಲಿಂಗನದಿಂದ ಆವಿರ್ಭವಿಸಿರುವ ಪ್ರತಿಭಾರೂಪಸಿ.

ಕಲಾಸುಂದರಿ, ಮುನ್ನುಡಿ, ಪುಟ iii

೧೨೮೧

ಬಹಿರ್ಮುಖ ಜೀವದ ಮುಪ್ಪಿನ ಭಾಗಕ್ಕೆ ಮೌನವು ಮಹಾಪಿಶಾಚಿ.

ಮಲೆಗಳಲ್ಲಿ ಮದುಮಗಳು, ಪುಟ ೪೦

೧೨೮೨

ನಾವು ಯಾವ ಭಾಷೆಗಳನ್ನೂ ದ್ವೇಷಿಸುವುದಿಲ್ಲ. ಎಲ್ಲ ಭಾಷೆಗಳೂ ನಮಗೆ ಮಾನ್ಯ ಆದರೆ ಕಟ್ಟಡ ಕಟ್ಟಬೇಕಾದರೆ ನಮ್ಮ ಭಾಷೆಯಿಂದಲೇ ಕಟ್ಟಡ ಕಟ್ಟಿ ಅದು ಗಟ್ಟಿ

ಷಷ್ಟಿನಮನ, ವಿಶ್ವಮಾನವ, ಪುಟ ೫೭

೧೨೮೩

ಪಾಪಿಗುದ್ಧಾರಮಿಹುದೌ
ಸೃಷ್ಟಿಯ ಮಹದ್‌ವ್ಯೂಹ ರಚನೆಯೊಳ್

ಶ್ರೀ ರಾಮಾಯಣ ದರ್ಶನಂ, ಭರತಮಾತೆ, ಪುಟ ೧೨೩

೧೨೮೪

ಇದುವರೆಗೂ ವಿಘ್ನಗಳೊಡನೆ ಸಂಗ್ರಾಮ ಮಾಡದೆ ಯಾರು ಯಾವ ಮಹಾ ಕಾರ್ಯವನ್ನೂ ಸಾಧಿಸಿಲ್ಲ.

ಸ್ವಾಮಿ ವಿವೇಕಾನಂದ, ಪುಟ ೧೪೩

೧೨೮೫

ಸೌಂದರ್ಯವೆ ಶಿವಕರ್ತವ್ಯ;
ಸೌಂದರ್ಯವೆ ಸರ್ವೋತ್ತಮ ಗಂತವ್ಯ!
ಸೌಂದರ್ಯವೆ ಸತ್,
ಸೌಂದರ್ಯವೆ ಚಿತ್,
ಸೌಂದರ್ಯವೆ ಆನಂದ:
ಆ ಸಾಧನೆಗಾಗಿಯೆ ಈ ಸೃಷ್ಟಿಯ ಬಂಧ,
ಆ ಸಿದ್ಧಿಗೆ ಮೀಸಲು ಮುಕ್ತಿಯ ನಿತ್ಯಾನಂದ!

ಚಂದ್ರಮಂಚಕೆ ಬಾ ಚಕೋರಿ, ಸೌಂದರ್ಯ ಸೂಕ್ತ, ಪುಟ ೨೯

೧೨೮೬

ಯಾವುದೊ ಒಂದು ಐತಿಹಾಸಿಕ ಸನ್ನಿವೇಶದಿಂದಲೆ ಉದ್ಭವಿಸಿ, ಮಹರ್ಷಿ ಕವಿಯ ದರ್ಶನ ದೀಪ್ತ ಪ್ರತಿಭಾವಶವಾಗಿ, ಶಕ್ತಿ ಸಂಚಾರವಾಗುವ "ಜಾಗ್ರತ ಮಹಾ ಪ್ರತಿಮೆ"ಯಾಗಿ, ಯಾವ ಐತಿಹಾಸಿಕ ಸಂಗತಿಯೂ ಸಾಧಿಸಲಾರದ ತ್ರಿಕಾಲಾತೀತವಾದ ನಿತ್ಯತ್ವದಿಂದ ಸಂಜೀವಿತವಾಗಿ ಸರ್ವಲೋಕ ಪೂಜ್ಯವಾಗಿದೆ ಶ್ರೀಮಾದ್ ಭಗವದ್ ಗೀತೆ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೪೨

೧೨೮೭

ಹಳೆಯದಕ್ಕೆ ಹೊಸದಾದುದೆಲ್ಲವೂ ಸೌಂದರ್ಯವೇ !

ಕಾನೂರು ಹೆಗ್ಗಡಿತಿ, ಪುಟ ೪೧

೧೨೮೮

ಮತ್ತೆ ಮತ್ತೆ ಉಕ್ಕುತಿದೆ ನಿನ್ನ ಮೇಲೆ ಮೋಹ ;
ಚಿತ್ತಮಧುವ ನೆಕ್ಕುತಿದೆ ದೇಹಕೆಳಸಿ ದೇಹ.
ದೇವರಿಚ್ಛೆಗಿದಿರೆ ಹೇಳು ನನ್ನ ನಿನ್ನ ಬೇಟ ?
ಅವನು ಒಪ್ಪುವನಕ ತಾಳಲೆಮ್ಮ ನೇಹ ನೋಟ :
ಅವನು ಒಪ್ಪಿದೊಲವೆ ನಮಗೆ ಬಾಳೊಳಮೃತದೂಟ ;
ಅವನು ಒಪ್ಪದಿರಲು ಅದುವೆ ಮೃತ್ಯು ಕಾಳಕೂಟ.
ಅವಸರವೇಕೊಲಿವುದೆಮಗೆ ಜನುಮ ಜನುಮದಾಟ !

ಪ್ರೇಮಕಾಶ್ಮೀರ,–ಗೆ, ಪುಟ i

೧೨೮೯

ನೀನು ಬಳಿಯಿಲ್ಲದಿರೆ, ಓ ನಲ್ಲೆ ಹೇಮಾಕ್ಷಿ,
ಜಗವೆಲ್ಲ ಜಡಬಂಡೆ, ಬೇಸರದ ಬೀಡು !
ನೀನಗಲಿದೀ ಕವಿಗೆ ಇಂದು ಈ ಮಲೆನಾಡು,
(ಹೇಳೆ ನಾಚಿಗೆಗೇಡು) ಹಿರಿಮರಳುಗಾಡು !

ಜೇನಾಗುವಾ, ಪ್ರಥಮ ವಿರಹ, ಪುಟ ೫

೧೨೯೦

...ವಿದೇಶಗಳಲ್ಲಿ ಯೋಗ್ಯತಾ ಪತ್ರಿಕೆ ಪಡೆಯದೆ ತಮ್ಮನಾಡಿನಲ್ಲಿ ತಮಗೆ ಕೀರ್ತಿ ಲಭಿಸುವುದಿಲ್ಲ ಎಂಬ ಭಾವನೆ ಬಹು ಮಟ್ಟಿಗೆ ಸಕಲ ಮನೋವ್ಯಾಪಿಯಾಗಿದೆ. ಅದಕ್ಕೆ ಕಾರಣವೂ ಇಲ್ಲದಿಲ್ಲ. ದಾಸ್ಯ ಸಹಜವಾದ ಅತೀವ ಪರಿಪ್ರತ್ಯಯನೇಯ ಬುದ್ಧಿ ತನ್ನ ಯೋಗ್ಯತೆಯನ್ನೆ ತಾನು ಮರೆಯುತ್ತದೆ. ಅನ್ಯರು ಕೊಟ್ಟಲ್ಲದೆ ತನ್ನವರಿಗೆ ಅದು ಬೆಲೆ ಕೊಡುವುದಿಲ್ಲ. ಹಿತ್ತಲ ಗಿಡ ಅದಕ್ಕೆ ಮದ್ದಲ್ಲ. ಇತರರು ಕೊಟ್ಟ ಬೆಲೆಯನ್ನೆ ತಾನೂ ಕಟ್ಟುತ್ತದೆ.

ವಿಭೂತಿ ಪೂಜೆ, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪುಟ ೫೧

೧೨೯೧

ಬರಿಯ ನಂಬುಗೆ ಬೇಡ,
ಬರಿಯ ಸಂಶಯ ಬೇಡ,
ಹಿಂದನೂ ತೊರೆಯದೆಯೆ, ಇಂದನೂ ಮರೆಯದೆಯೆ
ತೆರಳು ಮುಂದೆ.
"ಅವರಿವರ ಮತವಿರಲಿ,
ನನ್ನ ಪಥ ನನಗಿರಲಿ."
ಎಂದದನು ಕಂಡುಕೊಳ್ವನೆ ಜಾಣನುಳಿದವರು ಕುರಿಯ
ಮಂದೆ!

ಪಾಂಚಜನ್ಯ, ಮಲ್ಲಿಗೀತೆ, ಪುಟ ೪೫

೧೨೯೨

ಭಾವೋಪಯೋಗಿಯಾಗಿ ಉಪಯೋಗಿಸುವ ಪದಗಳಿಗೆ ಒಂದು ಅರ್ಥಕೇಂದ್ರ ಮಾತ್ರವಲ್ಲದೆ ಒಂದು ಅರ್ಥವಲಯವೂ ಇರುತ್ತದೆ. ಒಂದೊಂದು ಪದಕ್ಕೂ ಭಾವ ಮಾತ್ರವಲ್ಲದೆ ಭಾವ ಪರಿವೇಷವೂ ಇರುತ್ತದೆ. ಆ ಅರ್ಥವಲಯ ಮತ್ತು ಭಾವ ಪರಿವೇಷಗಳು ನಿರ್ನೇಮಿಯಾಗಿರುವಂತೆ ಚಿತ್ರಿಸಿಕೊಳ್ಳ ಬೇಕಾಗಿರುತ್ತದೆ. ಏಕೆಂದರೆ ವ್ಯಕ್ತಿ ವ್ಯಕ್ತಿಗೂ, ಒಬ್ಬನೆ ವ್ಯಕ್ತಿಗಾದರೂ ಅವನ ಅನುಭವ ವಿಶಾಲವಾದಂತೆಲ್ಲ ಕಾಲ ಕಾಲಕ್ಕೂ, ಆ ವಲಯದ ವಿಸ್ತಾರವೂ ಆ ಪರಿವೇಷದ ವಿಸ್ತೀರ್ಣವೂ ವ್ಯತ್ಯಸ್ತವಾಗುತ್ತ ಹೋಗುತ್ತವೆ.

ರಸೋ ವೈ ಸಃ, ರಸೋ ವೈ ಸಃ, ಪುಟ ೧೧೭

೧೨೯೩

ಪ್ರತಿಯೊಬ್ಬನೂ ತಾನು ಎಲ್ಲಿದ್ದರೆ ಅಲ್ಲಿ ಇದ್ದುಕೊಂಡು ತನ್ನ ಪರಿಪೂರ್ಣತೆ ಯನ್ನೂ ಸಮಾಜದ ಕಲ್ಯಾಣವನ್ನೂ ಸಾಧಿಸಲು ಯತ್ನಿಸಬೇಕು.

ಷಷ್ಟಿನಮನ, ಸಮನ್ವಯ ರಾಷ್ಟ್ರದಲಿ ವಿಶ್ವವಿದ್ಯೆ, ಪುಟ ೧೭೮

೧೨೯೪

ಐಹಿಕ ಸುಖಗಳನ್ನು ಹುಡುಕಿಕೊಂಡು ಹೋಗುವುದು ಮರುಭೂಮಿಯಲ್ಲಿ ಮರು ಮರೀಚಿಕೆಯ ನೀರನ್ನು ಹುಡುಕುವಂತೆ ಅವಿವೇಕವಾದುದು. ಅದರಲ್ಲಿಯೂ, ಸುಖ ಸಂಪತ್ತುಗಳು ನಾವು ಹಿಡಿಯಹೋದಷ್ಟೂ ಸಿಕ್ಕದೆ ದೂರ ಹೋಗುತ್ತವೆ.... ಸುಖವೂ ಆ ನೆರಳಿನಂತೆ : ಅಟ್ಟಿದರೆ ಓಡುತ್ತದೆ ; ತಿರಸ್ಕರಿಸಿ ಹಿಂತಿರುಗಿದರೆ ಹಿಂಬಾ ಲಿಸುತ್ತದೆ. ಆದ್ದರಿಂದ ನಿಜವಾದ ಸುಖ ಪ್ರಾಪ್ತಿಯಾಗಬೇಕಾದರೆ ಇಂದ್ರಿಯ ಸುಖ ಗಳಿಂದ ವಿಮುಖರಾಗುವುದು, ಎಂದರೆ ಹಿಂತಿರುಗುವುದು, ಅಂದರೆ ವೈರಾಗ್ಯ-ಬಹಳ ಅವಶ್ಯಕ. ವೈರಾಗ್ಯದ ಮಹಿಮೆ ಅದನ್ನು ಪ್ರಯೋಗಿಸಿದವರಿಗೇ ಗೊತ್ತು.

ನನ್ನ ದೇವರು ಮತ್ತು ಇತರ ಕಥೆಗಳು, ವೈರಾಗ್ಯದ ಮಹಿಮೆ, ಪಾತ್ರ ಕೀನಾರಾಮಗೋಸ್ವಾಮಿ, ಪುಟ ೯೩

೧೨೯೫

'ಶ್ರೀ ರಾಮಕೃಷ್ಣ ವಚನವೇದ' ವೆಂದರೆ ಅದೊಂದು ಕರತಲ ದೇವಸ್ಥಾನ, ಕರತಲ ತಪೋರಂಗ, ಕರತಲ ಪುಣ್ಯಕ್ಷೇತ್ರ. ಆದರೆ ದೇವಸ್ಥಾನ ಪುಣ್ಯಕ್ಷೇತ್ರಗಳಂತೆ ತಾನೆಂದಿಗೂ ಕಲುಷಿತವಾಗುವ ಸಂಭವವಿಲ್ಲ, ಶಿಥಿಲ ವಾಗುವ ಸಂಭವವಿಲ್ಲ. ಯಾವ ಮನೆಯಲ್ಲಿ ಈ 'ವಚನವೇದ' ವಿರುತ್ತದೆಯೊ ಅದು ಮಂದಿರವಾಗುತ್ತದೆ. ಯಾರ ಕೈ ಇದನ್ನು ಹಿಡಿದಿರುತ್ತದೆಯೊ ಅದು ಭಗವಂತನ ಪಾದಾರವಿಂದವನ್ನೆ ಧರಿಸಿರುತ್ತದೆ. ಯಾರ ಜಿಹ್ವೆ ಇದನ್ನು ಪಠಿಸುತ್ತದೆಯೊ ಅದು ಅಮೃತವನ್ನೆ ಈಂಟುತ್ತಿರುತ್ತದೆ. ಇದು ಆನಂದದ ಆಗರ; ಶಾಂತಿಯ ಸಾಗರ ; ದಿವ್ಯ ಜ್ಞಾನದ ಓಗರ. ಕಷ್ಟದ ಸಮಯದಲ್ಲಿ ಧೈರ್ಯವೀಯುವ ಸಖ ; ಸುಖದ ಸಮಯದಲ್ಲಿ ಸಮರ್ಪಣಭಾವವಿತ್ತು ವಿನಯ ಭಕ್ತಿಗಳನ್ನು ಪ್ರಬೋಧಿಸುವ ಗುರು ; ಕತ್ತಲಲಿ ದೀಪ, ದಾರಿಗೆ ಊರೆಗೋಲು, ದಿಕ್ಕುಗೆಡದಂತೆ ಗುರಿದೋರುವ ಧ್ರುವತಾರೆ. ಇಲ್ಲಿ ವೇದ ವೇದಾಂತ ದರ್ಶನಾದಿ ಸರ್ವಸಾರವಿದೆ. ಓದು ಬರುವ ಅತ್ಯಂತ ಸಾಮಾನ್ಯನೂ ಇದನ್ನು ಓದಿದ ಮೇಲೆ ಯಾವ ಪಂಡಿತನಿಗೂ ಕರುಬುವ ಆವಶ್ಯಕತೆಯಿಲ್ಲ; ಯಾವ ವಿದ್ವತ್ ಪೂರ್ಣನಾದ ತತ್ತ್ವಜ್ಞಾನಿಗೂ ಕೀಳೆಂದು ನಾಚಬೇಕಾಗಿಲ್ಲ. ಅದಕ್ಕೆ ಬದಲು ಭಗವಂತನ ಕೃಪೆಯಿಂದ ತನಗಿಂತಲೂ ಧನ್ಯರಿಲ್ಲ ಎಂದರಿತು ನಿರ್ಮಮನಾಗುತ್ತಾನೆ, ಶಾಂತನಾಗುತ್ತಾನೆ, ಪೂರ್ಣನಾಗುತ್ತಾನೆ. ಆತನಿಗೆ ಗಗನದ ವೈಶಾಲ್ಯ, ಹೈಮಾಚಲದ ಔನ್ನತ್ಯ, ಅಂಬುಧಿಯ ಗಭೀರ ಗಾಂಭೀರ್ಯ ಎಲ್ಲವೂ ಸಿದ್ಧಿಸುತ್ತವೆ. ಇಷ್ಟು ಸರ್ವಜನ ಸಾಮಾನ್ಯ ರೂಪದಲ್ಲಿ, ಭಗವಂತ ಇಷ್ಟು ಸರ್ವಸುಲಭ ರೂಪದಲ್ಲಿ ಎಂದೂ ಅವತರಿಸಿರಲ್ಲ, ಭಗವದ್‌ವಾಣಿ ತಾನೆಂದೂ ಕೃತಿಗೊಂಡಿರಲಿಲ್ಲ.

ಷಷ್ಟಿನಮನ, ಶ್ರೀ ರಾಮಕೃಷ್ಣ ವಚನವೇದ, ಪುಟ ೧೦೧-೨

೧೨೯೬

ನಿನ್ನ ಸೌಂದರ್ಯ ಸಾನ್ನಿಧ್ಯಮಿರೆ, ಓ ಪ್ರಕೃತಿ,
ಮಿಂಚಿದಪುದಿಂದ್ರಿಯಮತೀಂದ್ರಿಯಕೆ. ಜಡಜಗಂ
ತೋರಿದಪುದಂತರಾತ್ಮದ ಸಿರಿಗೆ ಹೊರಮೊಗಂ
ತಾನಾಗಿ. ಲಯವಹುದು ಚಿತ್ತಚಂಚಲ ವಿಕೃತಿ
ರಸದ ಮಿಂಚಿನ ಮೀಹದಿಂಪಿನಲಿ. ದೊರೆಕೊಳ್ವ
ತನ್ಮಯತೆಯಿಂ ಹೃದಯದಿಂಗಡಲ್ಗಲೆ ನಲಿಸಿ
ಮೈದೋರ್ಪುದಾ ಸಚ್ಚಿದಾನಂದ ಶಾಂತಿ ಶಶಿ.
ಮೃಣ್ಮಯಂ ಮಾಸಿ, ನನೆಕೊನೆಯೇರಿ ಚಿನ್ಮಯಂ,
ಧ್ಯಾನಿಸುವ ಕವಿಮನಂ ಗಾಯತ್ರಿಯನ್ನೇರ್ದು
ಭೂರ್ಭುವಸ್ಸುವಗಳಂ ತುಂಬಿ ತುಳುಕುತೆ ಮೀರ್ದು

ಭೋಗಿಸುವುದಾ ಬ್ರಹ್ಮ ಹೃದಯ ಮಧುವಂ ಪೀರ್ದು
ಯೋಗಲಯ ನಿದ್ರಾ ಸಮಾಧಿಯೊಳ್ ತಾನಾರ್ದು !
ಹೇ ಪ್ರಕೃತಿ, ಎಲ್ಲಮಿರ್ದೇನಿಲ್ಲದಾ ಅಲ್ಲಿ, ಮೇಣ್
ಸರ್ವಮಿರ್ಪಾ ಸರ್ವಶೂನ್ಯತಾ ಸಂಪೂರ್ಣದಲಿ
ನಿನ್ನ ಕೃಪೆಯಿಲ್ಲದಿರೆ ಪೇಳ್ ಪುರುಷದರ್ಶನವೆಲ್ಲಿ ?

ಶ್ರೀ ರಾಮಾಯಣ ದರ್ಶನಂ, ಚಿತ್ರಕೂಟಕೆ, ಪುಟ ೧೪೫

೧೨೯೭

ಪುಸ್ತಕಗಳಿಂದಲೂ ವ್ಯಕ್ತಿಗಳಿಂದಲೂ ಸಂಸ್ಥೆಗಳಿಂದಲೂ ಜೀವನ ವ್ಯಾಪಾರಗಳಿಂದಲೂ ನಾವು ಪಡೆಯುವ ತಿಳಿವು ನಮ್ಮ ಅನುಭವಕ್ಕೆ ಹಿಡಿಯಬೇಕಾದರೆ, ಅದರಿಂದ ನಮ್ಮ ಆತ್ಮಶ್ರೀ ಆವಿರ್ಭವಿಸಬೇಕಾದರೆ, ಏಕಾಂತವೂ ಮೌನವೂ ಧ್ಯಾನವೂ ಅತ್ಯಗತ್ಯ. ದಿನದ ದೀರ್ಘ ಜೀವನದಲ್ಲಿ ಸ್ವಲ್ಪ ಕಾಲವನ್ನಾದರೂ ಅದಕ್ಕೆ ಮೀಸಲಾಗಿಸುವುದರಿಂದಲೇ ಬಾಳು ಪರಿಪೂರ್ಣವೂ ಸುಂದರವೂ ಆಗಲು ಸಾಧ್ಯ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ, ಪುಟ ೫೩

೧೨೯೮

ಸತ್ಯದ ಜ್ಯೋತಿ ಕಾಣಬೇಕಾದರೆ ಮಿಥ್ಯಾಕಾರಿಯಾದ ಅವಿದ್ಯೆಯ ಅಂಧಕಾರ ತೊಲಗಬೇಕು. ಕತ್ತಲೆ ಹರಿಯುವಂತೆ ಮಾಡಲು ಎರಡು ಹಾದಿಗಳಿವೆ. ಒಂದನೆಯದು ಜ್ಞಾನಮಾರ್ಗ ; ಎರಡನೆಯದು ಭಕ್ತಿಮಾರ್ಗ. ಜ್ಞಾನಮಾರ್ಗ ವಿಚಾರ ಪೂರ್ಣವಾದುದರಿಂದ ಮೇಧಾವಿಗಳಿಗೆ ಮಾತ್ರವೇ ಸಾಧ್ಯ. ಭಕ್ತಿಮಾರ್ಗ ಭಾವಮಯವಾದುದರಿಂದ ಸಾಧಾರಣ ಮಾನವರಿಗೂ ಸುಲಭವಾದುದು. ಮೊದಲನೆಯದು 'ನೇತಿ ನೇತಿ'ಯ ಮಾರ್ಗ. ಎರಡನೆಯದು 'ಇತಿ ಇತಿ'ಯ ಮಾರ್ಗ. ಈ ಎರಡು ದಾರಿಗಳೂ ಕಟ್ಟಕಡೆಗೆ ಒಂದೇ ನಿಲಯಕ್ಕೆ ಹೋಗುತ್ತವೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೩೯

೧೨೯೯

ಸ್ವಾಮಿ ವಿವೇಕಾನಂದರು ಒಂದು ಕಡೆ ಈ ಅರ್ಥದ ಮಾತುಗಳನ್ನು ಹೇಳಿದ್ದಾರೆ : ಸಾವಿರಾರು ಜನರು ಸುತ್ತಲೂ ನೆರೆದು ಕರತಾಡನ ಮಾಡುವಾಗ, ಜಯಘೋಷದಿಂದ ಹುರಿದುಂಬಿಸುವಾಗ, ಸ್ಮಾರಕ ಸ್ತೂಪಗಳೂ ಜೀವನ ಚರಿತ್ರೆಗಳೂ ತನ್ನನ್ನು ಕೊಂಡಾಡುತ್ತವೆ ಎಂದು ಗೊತ್ತಾದಾಗ, ತನ್ನ ಮರಣವೇ ತನ್ನ ಯಶೋದುಂದುಭಿಯನ್ನು ಮೊಳಗುತ್ತದೆಂದು ತಿಳಿದಾಗ, ಯಾವ ಹೇಡಿತಾನೇ ಮುಂದುವರಿದು ರಣರಂಗದಲ್ಲಿ ಮಡಿಯಲಾರ ? ಯಾವ ಕ್ರಿಮಿ ತಾನೆ ಸಾಹಸಿಯಾಗಲಾರದು ? ಆದರೆ ಕೀರ್ತಿಯ ಕಿರಣ ಮಾತ್ರವೂ ಪ್ರಕಾಶಿಸದಿರುವಾಗ, ಪ್ರಶಂಸೆ ಮಾಡುವವರಾಗಲಿ ಹುರಿದುಂಬಿಸುವವರಾಗಲಿ ಒಬ್ಬರೂ ಇಲ್ಲದಿರುವಾಗ, ಬಹುಕಾಲದ ಪ್ರಯತ್ನದಿಂದಲೂ ಕಾರ್ಯಸಿದ್ಧಿಯಾಗದಿರುವಾಗ ದೃಢಚಿತ್ತನಾಗಿ, ಶ್ರದ್ಧಾನ್ವಿತನಾಗಿ ಮೌನಿಯಾಗಿ, ಹಲ್ಲು

ಕಚ್ಚಿಕೊಂಡು, ಹಣೆಸುಕ್ಕಿಕೊಂಡು, ಬೆವರು ಸುರಿಸುತ್ತಾ, ನಸುಬಾಗಿ, ಕಟ್ಟಕಡೆಯ ಕಲ್ಯಾಣದಲ್ಲಿ ನೆಚ್ಚಿಟ್ಟುಕೊಂಡು, ಈಶ್ವರನನ್ನು ನೆನೆದು ಕರ್ಮಪರ್ವತವನ್ನೇರುವವನೇ ಮಹಾತಪಸ್ವಿ; ಅವನಿಗಿಂತಲೂ ಹೆಚ್ಚಾದ ವಿಭೂತಿಗಳಿನ್ನಿಲ್ಲ. ಅವನ ಹೆಸರು ಪತ್ರಿಕೆಗಳಿಗೆ ಗೊತ್ತಿಲ್ಲದಿರಬಹುದು ; ಆದರೆ ಈಶ್ವರನ ದೃಷ್ಟಿಯಲ್ಲಿ ಅವನು ಅಗ್ರಗಣ್ಯನಾಗುತ್ತಾನೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೧೩-೪

೧೩೦೦

ನರ ಹೃದಯದ ಬಿಸಿ ರಕ್ತದ
ಬಾಯಾರಿಕೆ ಆರಿಲ್ಲ ;
ದಾರಿದ್ರ್ಯದ ಕರುಳಿರಿಯುವ
ಧನದಸಿಮೊನೆ ಮಾಸಿಲ್ಲ ;
ಪಲ್ಗಿರಿದಿದೆ ಕ್ರೋಧದ ಮುಖ,
ನಖವೆತ್ತಿದೆ ಕಾರ್ಪಣ್ಯ ;
ನರಳುತ್ತಿದೆ ಲೋಕದ ಸುಖ,
ಹೆಡೆಯೆತ್ತಿದೆ ದೌರ್ಜನ್ಯ !

ಅಗ್ನಿಹಂಸ, ಶತಮಾನ ಸಂಧ್ಯೆ, ಪುಟ ೮೪

೧೩೦೧

ಮತ್ತೆ ಕೆಲವರಿರುತ್ತಾರೆ, ಅವರಿಗೂ ಆಶೆಗಳೂ ಇಚ್ಛೆಗಳೂ ಉತ್ಕಟವಾಗಿಯೆ ಇರುತ್ತವೆ. ಆದರೆ ಅವರ ಆಕಾಂಕ್ಷೆ ವಾಸ್ತವ ಜಗತ್ತಿಗೆ ಡಿಕ್ಕಿ ಹೊಡೆದು, ತಲೆತಾಗಿಸಿಕೊಂಡು ರಕ್ತಪಾತಮಾಡಿಸಿಕೊಳ್ಳುವುದಿಲ್ಲ. ಅದು ಕಠಿನ ಜಗತ್ತು ಎಲ್ಲಿ ಬಾಗಿದರೆ ಅಲ್ಲಿ ಬಾಗಿ, ಎಲ್ಲಿ ತಲೆಯೆತ್ತಿದರೆ ಅಲ್ಲಿ ತಲೆಯೆತ್ತಿ, ಎಲ್ಲಿ ಇಕ್ಕಟ್ಟಾದರೆ ಅಲ್ಲಿ ಸಣ್ಣದಾಗಿ ನುಸುಳಿ, ತನ್ನ ಆಶೆ ಮತ್ತು ಇಚ್ಛೆಗಳನ್ನು ಪ್ರಪಂಚಕ್ಕೆ ಹೊಂದಿಸಿಕೊಂಡು ಬಾಳುತ್ತದೆ. ಅಂಥವರಿಗೆ ಕನಸುಕಟ್ಟುವ ಸಾಹಸಿಗಳಿಗೆ ಬಂದೊದಗುವ ಅತ್ಯುತ್ಕಟವಾದ ಹೃದಯ ಯಾತನೆ ಒದಗುವುದಿಲ್ಲ ; ಅವರಿಗೆ ಆದರ್ಶ ಸಿದ್ಧಿಯಿಂದುಂಟಾಗುವಂತೆ ನಿರುಪಮವಾದ ಮಹತ್ತಾದ ದಿವ್ಯಾನಂದವೂ ದೊರೆಯುವುದಿಲ್ಲ. ಆದರೆ ಒಟ್ಟಿನಲ್ಲಿ ಸ್ವಪ್ನ ಸಾಹಸಗಳಿಗಿರುವ ಘನತೆಯಿರದಿದ್ದರೂ ಐಹಿಕ ಜೀವನ ದೃಷ್ಟಿಯಲ್ಲಿ ಹೆಚ್ಚು ನೆಮ್ಮದಿಯಾಗಿರುತ್ತಾರೆ.

ಕಾನೂರು ಹೆಗ್ಗಡಿತಿ, ಪುಟ ೪೭೭-೮

೧೩೦೨

ಹಿರಿದಾದುದಳಿಯೆ, ಹಗೆಯಾದರೇಂ,
ಹಿರಿತನಕೆ ನೋವಾಗದುಂಟೆ ?

ಶ್ರೀ ರಾಮಾಯಣ ದರ್ಶನಂ, ೯೦ ಸತ್ಯವ್ರತನೆ ದಿಟಂ, ಪುಟ ೩೨೬

೧೩೦೩

ಮಲೆನಾಡಿನಲ್ಲಿ ಅನೇಕರಿಗೆ ಕಲಾ ಸಂಸ್ಕೃತಿಯ ಅಭಾವದಿಂದ ತಮ್ಮ ನಾಡಿನ ಅಂದ ಚಂದ ಮಹಿಮೆಗಳೆ ತಿಳಿದಿಲ್ಲ. ಆದರೆ ತಿಳಿಯುವ ಶಕ್ತಿಯಿದೆ ಎಂಬುದು ಈಚೀಚೆಗೆ ಗೊತ್ತಾಗುತ್ತಿದೆ.

ಮಲೆನಾಡಿನ ಚಿತ್ರಗಳು, ಮುನ್ನುಡಿ, ಪುಟ vi

೧೩೦೪

ಆತ್ಮಶ್ರೀಗಾಗಿ ನಿರಂಕುಶಮತಿಯಾಗುವ ಧೀರ ವಿದ್ಯಾರ್ಥಿ ಹತಾಶನಾಗುವುದಿಲ್ಲ. ವಿಜ್ಞಾನ ಮತ್ತು ಅಧ್ಯಾತ್ಮ–(ಮತವನ್ನಲ್ಲ ಮೌಢ್ಯವನ್ನಲ್ಲ ಅಂಧಶ್ರದ್ಧೆಯನ್ನಲ್ಲ ಅಂಧಾಚಾರವನ್ನಲ್ಲ)–ವಿಜ್ಞಾನ ಮತ್ತು ಅಧ್ಯಾತ್ಮ ಇವೆರಡನ್ನೂ ಕೆಚ್ಚಿನಿಂದ, ನಿಷ್ಠೆಯಿಂದ, ದೃಢಬುದ್ಧಿಯಿಂದ ಆಶ್ರಯಿಸಿ, ವಿಚಾರಧಿಯಾಗಿ, ವೈಜ್ಞಾನಿಕ ದೃಷ್ಟಿ ಸಂಪನ್ನವಾಗಿ ಮುಂಬರಿದು ತನಗೂ ಲೋಕಕ್ಕೂ ಕಲ್ಯಾಣವಾಗುವಂತೆ ಬಾಳುತ್ತಾನೆ. ದಾರಿಯ ಮುಳ್ಳನ್ನೆಲ್ಲ ತೆಗೆಯಲಾಗದಿದ್ದರೂ ತನ್ನ ಕಾಲಿಗಾದರೂ ಮೆಟ್ಟುಹಾಕಿಕೊಂಡು ಮುನ್ನಡೆದು ಗುರಿಗೆ ಸೇರುತ್ತಾನೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮೂರನೆಯ ಮುದ್ರಣಕ್ಕೆ ಮುನ್ನುಡಿ, ಪುಟ vii

೧೩೦೫

ನೋಡಿದವರೆದೆಯಲ್ಲಿ ಕಿರಿಯತನವನು ಆಳಿಸಿ,
ತನ್ನ ಮೀರುವ ಹಿರಿತನಕೆ ಮಣಿದು ಮೈಮರೆವ
ಹಿರಿತನವು ಮೂಡುವಂತೆಸಗುವುದೆ ಹೆಗ್ಗುರುತು
ದಿಟವಾದ ಹಿರಿತನಕೆ.

ನವಿಲು, ಜೋಗ, ಪುಟ ೪೨

೧೩೦೬

ಕವಿ ಸರ್ವನಾಶದ ಇದಿರಿನಲ್ಲಿಯೂ ಆಶಾವಾದಿಯೆ !

ಮನುಜಮತ ವಿಶ್ವಪಥ, ಬಲಾತ್ಕಾರದ ಇಂಗ್ಲಿಷ್ ಪ್ರಚ್ಛನ್ನ ಭ್ರಷ್ಟಾಚಾರ, ಪುಟ ೮–೯

೧೩೦೭

ಯಾವಾತನಲ್ಲಿ ಆನಂದರೂಢವಾದ ಪ್ರತಿಭೆ ಭಾವಾತಿಶಯದಿಂದ ತುಂಬಿ ತುಳುಕಿ ಸರಸವಾದ ಮಾತುಗಳಲ್ಲಿ ಮೈಗೊಳ್ಳುವುದೊ ಆತನೆ ಕವಿ. ಯಾವಾತನು ಸೃಷ್ಟಿಯ ಸೌಂದರ್ಯದಿಂದ ಮೋಹಿತನಾಗಿ ಮೈಮರೆತು, ಅದರಲ್ಲಿ ತಲ್ಲೀನನಾಗಿ, ಆ ರಹಸ್ಯ ಲೋಕದ ಸಂದೇಶಗಳನ್ನು ಹೊರಗೆಡಹಲು ಶಕ್ತನಾಗುವನೊ ಆತನೆ ಕವಿ.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೧೩

೧೩೦೮

ಬನದೊಳು ನೀನೋ ? ನಿನ್ನೊಳು, ನಾನೋ ?
ನಾನೂ ನೀನೂ ಬನದೊಳಗೊ ?

ಬನವೂ ನೀನೂ ಕನವರಿಪಾನೂ
ಎಲ್ಲವು ಎನ್ನಯ ಮನದೊಳಗೊ ?

ಕಲಾಸುಂದರಿ, ಬನದಲಿ ದಿನ ದಿನ, ಪುಟ ೧೦

೧೩೦೯

ಮಲೆನಾಡಿನ ಸೌಂದರ್ಯವೇನೊ ಸಾವಿರ ವರ್ಷದ ಹಿಂದೆ ಇದ್ದಂತೆಯೆ ಇದೆ. ಅದರ ಸೌಭಾಗ್ಯಕ್ಕೆ ಮಾತ್ರ ಇಳಿಗಾಲ ಬಂದಂತಿದೆ. ಪ್ರಕೃತಿಯ ಸೌಂದರ್ಯ ಮನುಷ್ಯ ಪ್ರಜ್ಞೆಯ ರಸಾಸ್ವಾದನೆಗೆ ವಿಷಯವಾದಂದು, ನೈಸರ್ಗಿಕವಾದ ಸಂಪತ್ತು ಮನುಷ್ಯ ಕೃತಿಯ ಅಭ್ಯುದಯಕ್ಕೆ ಅಧೀನವಾದಂದು, ಅಂತಹ ಅಭ್ಯುದಯವು ಸಂಸ್ಕೃತಿಗಾಗಿ ನಿಃಶ್ರೇಯಸಕ್ಕೂ ಕೈಂಕರ್ಯವೆಸಗಿದಂದು ಅದು 'ಸೌಭಾಗ್ಯ'ವಾಗುತ್ತದೆ. ಅಂತಹ 'ಸೌಭಾಗ್ಯ'ದ ಪರಿವರ್ತನೆಗೆ ತಪಸ್ಸು ಮಾಡುತ್ತಿರುವಂತಿದೆ, ಮಲೆನಾಡಿನ ಸೌಂದರ್ಯ.

ವಿಭೂತಿ ಪೂಜೆ, ಮಲೆನಾಡಿನ ನಿಸರ್ಗಭೂತಿ, ಪುಟ ೩೩

೧೩೧೦

ದೇಹ ಪೋಷಣೆಗೆ ಪ್ರತಿನಿತ್ಯವೂ ಅನ್ನ ಹೇಗೆ ಅವಶ್ಯವೊ ಶ್ರೇಯಸ್ಕರವಾದ ವಿಚಾರಗಳೂ ಹಾಗೆಯೆ ಅವಶ್ಯ; ಅವು ಎಷ್ಟು ಸಲ ಉಕ್ತವಾದರೂ ಹಳೆಯವಾಗುವುದಿಲ್ಲ. ರೋಗನಿವಾರಣೆಯಾಗುವತನಕವೂ ಮದ್ದು ಕೊಡುತ್ತಲೇ ಇರಬೇಕು ; ಚರ್ವಿತಚರ್ವಣವೆಂದು ಅದನ್ನು ನಿಲ್ಲಿಸುವಂತಿಲ್ಲ.

ವಿಚಾರ ಕ್ರಾಂತಿಗೆ, ಆಹ್ವಾನ, ಕರ್ನಾಟಕ : ಇಟ್ಟಹೆಸರು ಕೊಟ್ಟ ಮಂತ್ರ, ಪುಟ ೯೦

೧೩೧೧

ಆ ದೇವತೆಗಳೂ ಶಕ್ತಿಗಳೂ ಚೈತನ್ಯಗಳೂ ಕಾವ್ಯ ಕಲೆಗಳಲ್ಲಿಯೂ ಲೋಕ ಜೀವನದಲ್ಲಿಯೂ ಪರೋಕ್ಷವಾಗಿ ಭಾವಚರವೂ ಭಾವಗೋಚರವೂ ಆಗಬಲ್ಲುವು, ದರ್ಶನ ಧ್ವನಿ ಸಮರ್ಥವಾದ ಚೇತನಕ್ಕೆ. ಅವು ರಸರೂಪಿಗಳಾಗಿ ಅಥವಾ ರಸ ಶರೀರಗಳಾಗಿ ಋಷಿ ಕವಿಯ ಚಿದಾಕಾಶದಲ್ಲಿ ಮೂಡಿ ಪ್ರತಿಮೆಗಳನ್ನು ಪ್ರೇರಿಸಿಯೊ ಅಥವಾ ರೂಪಿಸಿಯೊ ಅಥವಾ ಆಶ್ರಯಿಸಿಯೊ ಅಥವಾ ಆಕ್ರಮಿಸಿಯೊ ಲೋಕ ಮತ್ತು ಕೃತಿ ಲೋಕಗಳಿಗೆ ಅವತರಿಸುತ್ತವೆ. ಆಸ್ವಾದನಾರೂಪದ ಅವರ ಆರಾಧನೆಯಿಂದ ಸಹೃದಯನಿಗೆ ಶಾಂತಿ ಶಕ್ತಿ ಜ್ಯೋತಿ ಪುಷ್ಟಿ ತುಷ್ಟಿ ಆನಂದಗಳು ಲಭಿಸಿ, ಆತನಿಗೆ ಅಪರೋಕ್ಷವಾಗಿಯೆ ಅನುಭವವಾಗುತ್ತದೆ : 'ರಸೋ ವೈ ಸಃ'!

ರಸೋ ವೈ ಸಃ, ರಸೋ ವೈ ಸಃ, ಪುಟ ೧೩೫–೬

೧೩೧೨

ನಮ್ಮ ತತ್ತ್ವಶಾಸ್ತ್ರ, ನಮ್ಮ ತರ್ಕಶಾಸ್ತ್ರ, ನಮ್ಮ ಯೋಗಶಾಸ್ತ್ರ, ಇವುಗಳು ಮಾಡಿರುವ ಕೆಲಸ, ಇವುಗಳ ಪರಿಭಾಷೆ, ಇವುಗಳ ಮುಂದೆ ಪಾಶ್ಚಾತ್ಯರ ಬಡತನ ಎದ್ದು ಕಾಣುತ್ತದೆ. ಆ ವಿಚಾರದಲ್ಲಿ ನಾವು ಅವರಿಂದ ಪಡೆಯಬೇಕಾದ್ದಿಲ್ಲ ;

ಕೊಡಬೇಕಾದ್ದು ಬೇಕಾದಷ್ಟು ಇದೆ. ವಿಜ್ಞಾನದ ವಿಚಾರದಲ್ಲಿ ಮಾತ್ರ ನಾವು ಅವರಿಂದ ಪಡೆಯಬೇಕಾದ್ದು, ಅವರಿಂದ ಕಲಿಯಬೇಕಾದ್ದು ಬೇಕಾದಷ್ಟು ಇದೆ.

ಮನುಜಮತ ವಿಶ್ವಪಥ, ಕದನಕ್ಕೆ ಸಜ್ಜು, ಪುಟ ೫೭

೧೩೧೩

...ಆ ಕೇವಲ ಪೂರ್ಣ ದೃಷ್ಟಿ, ಆ ಬ್ರಾಹ್ಮೀಸ್ಥಿತಿ, ಸಾಮಾನ್ಯರಿಗೆ ಸಿದ್ಧವಲ್ಲ. ಆ ಪೂರ್ಣದೃಷ್ಟಿಯ ಒಂದು ಛಾಯಾಪ್ರತಿಮೆಯಾಗಿ ಸಾಹಿತ್ಯ ಲೋಕದಲ್ಲಿ ಕವಿಯ ಪೂರ್ಣದೃಷ್ಟಿಯನ್ನು ಅರಿಯುವುದು ಮಾತ್ರ ನಮಗೆ ಸಾಧ್ಯ. ಹಾಗೆ ಅರಿಯುವುದು ಸಾಧ್ಯವಾದಾಗಲೆ ಬ್ರಹ್ಮಾನಂದದ ಛಾಯಾ ಮಾತ್ರ ಪ್ರತಿಮೆಯಾದ ಕಾವ್ಯಾನಂದ ರಸಾನುಭವವು ಸಹೃದಯನಿಗೆ ಸಾಧ್ಯವಾಗುತ್ತದೆ. ಆಗ ಕವಿಕೃತಿಯ ಧ್ಯಾನವೂ ಛಾಯಾ ರೀತಿಯಿಂದಲಾದರೂ ಯೋಗಸಾಧನವಾಗುತ್ತದೆ. ಮಹಾಕವಿಯ ಕೃತಿ ಪ್ರತಿಮೆಯಲ್ಲಿ ಮೈದೋರಿರುವ ವಿರಾಡ್ ದರ್ಶನವು 'ಬರಿಯ ಕಲೆ'ಯಾಗದೆ ನಮ್ಮನ್ನು ಸಚ್ಚಿನಾದಂದದ ನೆಲೆಗೂ ಕೊಂಡೊಯ್ಯುತ್ತದೆ.

ತಪೋನಂದನ, ಕಾವ್ಯ ವಿಮರ್ಶೆಯಲ್ಲಿ ಪೂರ್ಣದೃಷ್ಟಿ, ಪುಟ ೧೩೯-೪೦

೧೩೧೪

ಬ್ರಹ್ಮಸಾಕ್ಷಾತ್ಕಾರಕ್ಕಾಗಲಿ ಲೋಕಸೇವೆಗಾಗಲಿ ಅಥವಾ ಇನ್ನಾವ ಶಾಶ್ವತ ಕಾರ್ಯಕ್ಕಾಗಲಿ ಬ್ರಹ್ಮಚರ್ಯವೆ ಮೂಲಶಕ್ತಿ. ಅದರ ಸಾಧನೆಯಿಂದ ದುರ್ಬಲ ಮಾನವನು ಮಹಾಬಲಾನ್ವಿತನಾಗಿ ತೇಜಸ್ವಿಯಗಿ ದೇವನಾಗುತ್ತಾನೆ. ಸಿಂಹ ಬಲವೂ ಇಂದ್ರಿಯ ಸಂಯಮವೂ ಪ್ರಚಂಡ ಮೇಧಾ ಶಕ್ತಿಯೂ ಅಪ್ರತಿಹತ ಅಧಿಕಾರ ವಾಣಿಯೂ ಧೈರ್ಯ ಸ್ಥೈರ್ಯ ಸಹನೆ ಆನಂದ ಉತ್ಸಾಹ ಮತ್ತುಳಿದ ಪೌರುಷ ಗುಣಗಣಗಳೆಲ್ಲವೂ ವೀರ್ಯಧಾರಣೆಯಿಂದ ಪ್ರಾಪ್ತವಾಗುತ್ತವೆ. ಕಾಮ ಜಯದಿಂದ ಎಂತಹ ಅತ್ಯದ್ಭುತವಾದ ದೈವಿಕ ಓಜಸ್ಸು ಉದ್ಭವಿಸುತ್ತದೆ ಎಂಬುದು ಸರ್ವದೇಶದ ಸರ್ವಕಾಲದ ಯೋಗಿ ಮಹರ್ಷಿ ಸಿದ್ಧರೆಲ್ಲರಿಗೂ ತಿಳಿದ ವಿಷಯವಾಗಿತ್ತು ಎಂದು ಇತಿಹಾಸದಿಂದ ಗೊತ್ತಾಗುತ್ತದೆ.

ಶ್ರೀ ರಾಮಕೃಷ್ಣ ಪರಮಹಂಸ ಪುಟ ೧೯೭

೧೩೧೫

ವಿದ್ಯಾರ್ಥಿ ದಶೆಯ ಆ ಕಾಲದಿಂದಲೂ ನಾನು ಕರ್ಣಾಟಕವನ್ನು ಭರತ ಖಂಡದ ಒಂದು ಅವಿಭಾಜ್ಯಾಂಗವಾಗಿ ಪರಿಕಲ್ಪಿಸಿಕೊಂಡಿದ್ದೇನೆಯೆ ಹೊರತು, ಪ್ರತ್ಯೇಕತಾಭಾವನೆಗೆ ಎಂದೂ ಲೇಶ ಮಾತ್ರವೂ ಅವಕಾಶವಿತ್ತಿಲ್ಲ.

ವಿಚಾರ ಕ್ರಾಂತಿಗೆ ಆಹ್ವಾನ, ಕರ್ಣಾಟಕ : ಇಟ್ಟ ಹೆಸರು ಕೊಟ್ಟ ಮಂತ್ರ, ಪುಟ ೮೩

೧೩೧೬

ಕಾವ್ಯ ಅಥವಾ ಕಲೆ ಏನನ್ನಾದರೂ ಮಾಡಲಿ ಬಿಡಲಿ ಎಂದು ಲೋಕ ತಟಸ್ಥವಾಗಿರಲು ಸಾಧ್ಯವಾಗುವುದಿಲ್ಲ. ತನ್ನ ಶ್ರೇಯಸ್ಸಿಗಾಗಿ ಅದು ಆ ರಸಾನುಭವ

ಪ್ರಯೋಜನವನ್ನು ಬದುಕಿನ ಶಾಶ್ವತ ಪುರುಷಾರ್ಥಗಳ ಮಹತ್ತರ ಪ್ರಯೋಜನಕ್ಕೆ ಅಧೀನಗೊಳಿಸ ಬೇಕಾಗುತ್ತದೆ. ತನ್ನ ಕ್ಷೇತ್ರದಲ್ಲಿ ಪರಮ ಪ್ರಯೋಜನವೆಂದು ಮಾನ್ಯವಾಗಿದ್ದರೂ ಪೂರ್ಣಜೀವನದ ವಿಶಾಲತರ ಕ್ಷೇತ್ರದ ಪರಮಗಂತವ್ಯಸ್ಥಾನವಾದ ಪೂರ್ಣತಾಧ್ಯೇಯದ ಒರೆಗಲ್ಲಿನಲ್ಲಿ ಅದು ಪರೀಕ್ಷೆಗೆ ಒಳಗಾಗಬೇಕಾಗುತ್ತದೆ. ರಸದ ಮೌಲ್ಯ ನಿರ್ಣಯದಲ್ಲಿ ಪುರುಷಾರ್ಥಗಳೆಲ್ಲ ಅವಯುವಗಳಾಗಿವೆ, ಅಂತರ್ಗತವಾಗಿವೆ. ಆ ಪುರುಷಾರ್ಥಗಳನ್ನುಳಿದು ಅದನ್ನು ಪರಿಭಾವಿಸಿದರೆ ಅದು ಶೂನ್ಯವಾಗಿ ಬಿಡುತ್ತದೆ : ಪರಿಭಾವಿಸುವುದಕ್ಕೂ ಅಲ್ಲೇನೂ ಇರುವುದಿಲ್ಲ.

ರಸೋ ವೈ ಸಃ, ರಸಾನುಭವದ ಅಲೌಕಿಕತೆ, ಪುಟ ೨೯

೧೩೧೭

....ನಿಜವಾದ–ಸಾಹಿತ್ಯ–ಅದಕ್ಕೆ ನೀವು ಪ್ರಗತಿಶೀಲ ಎಂದಾದರೂ ಹೆಸರು ಕೊಡಿ, ನವೋದಯ ಎಂದಾದರೂ ಹೆಸರು ಕೊಡಿ–ಯಾವುದಾಗಿದ್ದರೂ ಅದು ಶಾಶ್ವತವಾಗಿ ನಿಲ್ಲುತ್ತದೆ. ಏಕೆಂದರೆ, ಅದು ಮನುಷ್ಯನ ಜೀವನಕ್ಕೆ ಸಂಬಂಧಪಟ್ಟು, ಅದರ ಉತ್ಥಾನಕ್ಕೆ ಸಂಬಂಧಪಟ್ಟು, ಭಾವರಸಗಳಿಂದ ಕೂಡಿದ ಪಕ್ಷದಲ್ಲಿ–(ನಾವು ಬೇಕಾದರೆ ಆ ಸಾಹಿತ್ಯ ಈ ಸಾಹಿತ್ಯ ಎಂದು ವಿಭಜನೆ ಮಾಡುಬಹುದು)–ಅದನ್ನು ಖಂಡಿತವಾಗಿಯೂ ಸಾಹಿತ್ಯ ಎನ್ನಬಹುದು.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೧೯

೧೩೧೮

ಕಾವಲಿಲ್ಲದ ಕೋಟೆಗೆ ನುಗ್ಗಲು ಶತ್ರುವಿಗೆ ಸೈನ್ಯ ಬೇಕೆ? ರಕ್ಷಕರಿಲ್ಲದ ದುರ್ಗವನ್ನು ಗೆಲ್ಲಲು ನಿಪುಣ ಸೈನಿಕನೊಬ್ಬನಾದರೂ ಸಾಕು! ತಮ್ಮ ಧರ್ಮದ ವಿಚಾರವಾದ ಯಾವ ಬುದ್ಧಿ ಪೂರ್ವಕ ಜ್ಞಾನವೂ ಇಲ್ಲದೆ, ಪರಂಪರಾಗತವಾದ ಅಂಧ ಆಚಾರ ಸಮೂಹಗಳನ್ನೆ ತತ್ವಗಳೆಂದು ನಂಬಿ, ಆಲೋಚನಾ ಶಕ್ತಿ ಲವಲೇಶವೂ ಇಲ್ಲದಿದ್ದವರನ್ನು, ಜಡಬುದ್ಧಿಗಳನ್ನು, ಮತಾಂತರಗೊಳಿಸುವುದು ಸುಲಭವಲ್ಲ ; ಆದರೆ ಜಡಬುದ್ಧಿಗಳಾಗಿದೆ ತುಸುಮಟ್ಟಿಗೆ ಜಾಗ್ರತ ಮತಿಗಳಾಗಿಯೂ ತಮ್ಮ ಮತಧರ್ಮದ ಸನಾತನ ಮೂಲ ತತ್ವಗಳನ್ನರಿಯದವರ ನಂಬಿಕೆಗಳನ್ನು ಅಲ್ಲಾಡಿಸುವುದು ಅಷ್ಟೇನು ಕಷ್ಟವಲ್ಲ.

ಮಲೆಗಳಲ್ಲಿ ಮದುಮಗಳು, ಪುಟ ೨೩೨

೧೩೧೯

ಆಧುನಿಕ ಯುಗವು ವಿಚಾರಶೀಲ ವೈಜ್ಞಾನಿಕ ಯುಗ. ವಿಮರ್ಶೆ, ಪರೀಕ್ಷೆ, ಪ್ರಯೋಗ ಇವು ಈ ಕಾಲದ ಧ್ಯೇಯೋಕ್ತಿಗಳು. ಶ್ರದ್ಧೆಗಿಂತಲೂ ಹೆಚ್ಚಾಗಿ ಬುದ್ಧಿ ಆಳುವ ಕಾಲವಿದು. ಇದು 'ಬಹುಮತ'ದ, 'ಬಹುಜನಹಿತ'ದ ಮತ್ತು 'ಬಹುಜನ ಸುಖ'ದ ಕಾಲ. ಹೊಂಗನಸಿನ ಪದ್ಯದ ಕಾಲವಲ್ಲ ; ಗಟ್ಟಿಯಾದ ಗದ್ಯದ ಕಾಲ. ಸಾಹಿತಿಯ ಕೃತಿ ನೂರಾರು ಒರೆಗಲ್ಲುಗಳಲ್ಲಿ ಮೋರೆ ತೀಡಿಸಿಕೊಂಡು

ಎಲ್ಲರಿಂದಲೂ ಮೆಚ್ಚುಗೆ ಪಡೆದು ಗೆದ್ದು ಬದುಕ ಬೇಕಾಗಿದೆ. ಆದರೆ ಬಹುಜನಾಭಿಪ್ರಾಯದ ಮೆಚ್ಚುಗೆ ಪಡೆದು ಬಹುಜನಪ್ರಿಯವಾದ ಮಾತ್ರಕ್ಕೇ ಬಹು ಶ್ರೇಷ್ಠವಾಗುತ್ತದೆಯೇ ಎಂದು ಒಂದೊಂದು ಸಾರಿ ಎಂತಹ ಉಗ್ರ ಸಮತಾವಾದಿಯ ಹೃದಯವೂ ಆಶಂಕೆಯಿಂದ ತೂಗುಯ್ಯಾಲೆಯಾಗುತ್ತದೆ.

ಸಾಹಿತ್ಯ ಪ್ರಚಾರ, ಕನ್ನಡ ಸಾಹಿತ್ಯ, ಪುಟ ೬೩

೧೩೨೦

ಕಂಡ ಕಂಡ ಪುರೋಹಿತರ ಕುಜ್ಞಾನ ಜನ್ಯವಾದ ಗೊಡ್ಡು ಹರಟೆಗಳನ್ನು ವೇದ ವಾಕ್ಯವೆಂದು ನಂಬಿದರೆ ಅನರ್ಥಕರವಾಗುತ್ತದೆ. ಎಷ್ಟೋ ಜನರ ಮೂರ್ಛೆರೋಗ, ನರಗಳ ಜಾಡ್ಯ, ಎದೆಗೇಡಿತನ ಮೊದಲಾದ ರೋಗ ರುಜೆಗಳನ್ನು ಈಶ್ವರ ಭಕ್ತಿಯಿಂದ ಪ್ರಾಪ್ತವಾದ ಮಹಾಭಾವಗಳೆಂದು ಭ್ರಮಿಸಿ ಆರಾಧಿಸುತ್ತಿದ್ದಾರೆ. ವೈದ್ಯರ ಔಷಧಿಗಳಿಂದ ಸುಲಭವಾಗಿ ಗುಣವಾಗುವ ಜಾಡ್ಯಗಳನ್ನು ದೇವರಿಗೆ ಕಾಣಿಕೆ ಕಟ್ಟಿ ಅಥವಾ ಪೂಜಾರಿಗಳಿಗೆ ದುಡ್ಡು ಕೊಟ್ಟು ಉಲ್ಬಣಾವಸ್ಥೆಗೆ ಬರುವಂತೆ ಮಾಡಿಕೊಳ್ಳುತ್ತಾರೆ. ಮತ್ತೆ ಕೆಲವರು ಭಕ್ತಿಯ ಹೆಸರಿನಲ್ಲಿ ಶುದ್ಧ ಮೂರ್ಖರಾಗುತ್ತಾರೆ. ವ್ಯವಹಾರದ ಜೀವನದಲ್ಲಿ ಪೆದ್ದು ಪೆದ್ದಾಗಿ ವರ್ತಿಸುವುದು ಅಲೌಕಿಕ ಭಕ್ತಿಯ ಮತ್ತು ಧರ್ಮ ಜೀವನದ ಚಿಹ್ನೆಗಳೆಂದು ತಿಳಿದು ಮೋಸ ಹೋಗುತ್ತಾರೆ. ಕೆಲವರಿಗಂತೂ ಅಜಾಗರೂಕತೆಯೇ ಅಧ್ಯಾತ್ಮ ಜೀನದಲ್ಲಿ ಲಕ್ಷಣವಾಗಿ ಹೋಗಿದೆ!

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨೦೩

೧೩೨೧

ಈಗ ಭರತಖಂಡಕ್ಕೊಂದು ಪರಿವರ್ತನೆಯ ಕಾಲ ಒದಗಿದೆ. ಮಹಾವ್ಯಕ್ತಿಗಳು ಮಹಾ ಶಕ್ತಿವಾಹಿನಿಯನ್ನು ದೇಶದ ಮೇಲೆ ಹರಿಯಲು ಬಿಟ್ಟಿದ್ದಾರೆ. ಅದೇನು ಸಾಮಾನ್ಯವಾದ ಪ್ರವಾಹವಲ್ಲ; ಪ್ರಚಂಡ ಪ್ರವಾಹ. ಆ ಬಲ್ಮೆಯ ಹೊನಲು ದೇಶದ ಮೂಲೆಮೂಲೆಗಳಲ್ಲೂ ನುಗ್ಗಿ ಜಡ ಜೀವನವನ್ನು ಕೊಚ್ಚುತ್ತಿದೆ. ಅದರ ವೈದ್ಯುತ ಸ್ಪರ್ಶದಿಂದ ನಿರ್ಜೀವವಾಗಿದ್ದ ಅಸ್ಥಿಪಂಜರಗಳೂ ಕೂಡ ಸಚೇತನವಾಗಿ ಕಾರ್ಯೋನ್ಮುಖವಾಗಲಾರಂಭಿಸಿವೆ. ಮಲಗಿದ್ದ ನಾಡು ಎಚ್ಚತ್ತಿದೆ. ಕುರಿಗಳಂತೆ ಅರಚುತ್ತಿದ್ದವರು ಸಿಂಹಗಳಂತೆ ಗರ್ಜಿಸುತ್ತಿದ್ದಾರೆ. ಬೀಸುವ ಬಿರುಗಾಳಿ ಬೂದಿ ಮುಚ್ಚಿದ ಕೆಂಡಗಳನ್ನು ಊದಿ ಊದಿ ನುಗ್ಗುತ್ತಿದೆ! ಇದ್ದಲಿನಂತಿದ್ದವರು ಈಗ ಕೆಂಗೆಂಡಗಳಂತೆ ದೇದೀಪ್ಯಮಾನರಾಗಿದ್ದಾರೆ. ಮೂಕರಾಗಿದ್ದವರು ವಾಗ್ಮಿಗಳಾಗಿದ್ದಾರೆ. ಕುರುಡರಿಗೆ ಕಣ್ಣು ಬಂದಿದೆ. ದುರ್ಬಲರಂತಿದ್ದವರಿಗೆ ಭೀಮ ಬಲ ಬಂದಿದೆ. ಕ್ಲೈಬ್ಯ ಮಾಯವಾಗಿ ಎದೆಯಲ್ಲಿ ಕೆಚ್ಚುದಿಸಿದೆ. ಬಗೆಯಲ್ಲಿ ನೆಚ್ಚು ಮೂಡಿದೆ.

ಸಾಹಿತ್ಯ ಪ್ರಚಾರ, ಪುಟ ೧೭

೧೩೨೨

ಮೂಲಾನುಭವಕ್ಕೂ ಆದರ ಸಾಂಕೇತಿಕ ಪ್ರತಿಮೆಗೂ ಅತ್ಯಂತ ನಿಕಟವೂ ವಿಶ್ಲೇಷಣ ದೂರವೂ ಆದ ಜೀವ ಸಂಬಂಧವಿರುತ್ತದೆ. ಪ್ರತಿಮೆ ಎಂಬುದು

ಮೂಲಾನುಭವಕ್ಕೆ 'ನಾವು' ನೀಡುವ ಆಕಾರವಲ್ಲ. ಅದು ಮೂಲಾನುಭವವು ತನಗೆ ಅನಿವಾರ್ಯವೂ ಆವಶ್ಯಕವೂ ಆಗಿರುವ ಸಹಜ ಧರ್ಮದ ಪ್ರೇರಣಶಕ್ತಿಯಿಂದ ಪಡೆಯುವ ರೂಪಧಾರಣೆ. ಅದೊಂದು ಅವತರಣ ಕ್ರಿಯೆ.

ತಪೋನಂದನ, ಪ್ರತಿಮಾ ಮತ್ತು ಪ್ರತಿಕೃತಿ, ಪುಟ ೩೪

೧೩೨೩

ಮಾನವ ವ್ಯಾಪಾರಗಳೆಲ್ಲ, ಕಲೆಯದ್ದಾಗಲಿ ಕಾವ್ಯದ್ದಾಗಲಿ ಲೋಕದ್ದಾಗಲಿ, ಪರಸ್ಪರೋಪಜೀವಿಗಳೆ ; ಒಂದರ ಪ್ರಭಾವ ಮತ್ತೊಂದರ ಮೇಲೆ ಬಿದ್ದೆ ತೀರುತ್ತದೆ ; ಒಂದರ ಪರಿಣಾಮ ಮತ್ತೊಂದರ ಪರಿಣಾಮವನ್ನು ನಿರ್ಣಯಿಸುತ್ತದೆ. ನಮ್ಮ ಆಲೋಚನೆಯ ಸೌಕರ್ಯಕ್ಕಾಗಿ ಮಾಡಿಕೊಳ್ಳುವ ವಿಭಜನೆಯನ್ನು ವಸ್ತುವಿಗೂ ವರ್ಗಾಯಿಸಿದರೆ ಅಸತ್ಯವಾಗುವುದರ ಜೊತೆಗೆ ಅನಾಹುತವೂ ಆಗುತ್ತದೆ.

ರಸೋ ವೈ ಸಃ, ರಸಾನುಭವದ ಅಲೌಕಿಕತೆ, ಪುಟ ೨೯-೩೦

೧೩೨೪

ಸಮಷ್ಟಿ ಪ್ರಜ್ಞೆಯ ಪ್ರತಿನಿಧಿಯಾದ ಕವಿದ್ರಷ್ಟಾರನ ಋಷಿ ಪ್ರತಿಭೆಯ ಪ್ರಾರ್ಥನೆಗೊ ಅಭೀಪ್ಸೆಗೊ ಅಪೇಕ್ಷೆಗೊ, ಆಶೀರ್ವಾದ ಮಾಡುವ ರೀತಿಯಲ್ಲಿ ವಶವಾಗಿ, ಕಾವ್ಯ ಸತ್ತೆಯ ಪ್ರತಿಮಾರೂಪದಿಂದ ಆವಿರ್ಭವಿಸಿ ಅಭಿವ್ಯಕ್ತವಾಗುವ ಊರ್ಧ್ವಲೋಕಗಳ ಶಕ್ತಿ-ವ್ಯಕ್ತಿ-ಚೇತನಗಳ ಸ್ವರೂಪವನ್ನೂ ಐಶ್ವರ್ಯವನ್ನೂ ಸಾಕ್ಷಾತ್ಕರಿಸಿಕೊಳ್ಳಬೇಕಾದರೆ ಸಹೃದಯನ ವಿಮರ್ಶೆ ಪ್ರತಿಮಾ ವಿಧಾನವನ್ನೆ ಆಶ್ರಯಿಸುವುದು ಆವಶ್ಯಕವಾಗುತ್ತದೆ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೫೧

೧೩೨೫

ನನಗೆ ಮನಶ್ಶಾಸ್ತ್ರದಲ್ಲಿ ಅಭಿಮಾನ. ಆದರೆ ಅಭಿಮಾನಕ್ಕಿಂತಲೂ ಇನ್ನೂ ಸ್ವಲ್ಪ ಹೆಜ್ಜೆ ಮುಂದಕ್ಕೆ ಹೋಗಬೇಕಾಗುತ್ತದೆ. ಜೀವಂತವಾದ ತೀವ್ರ ಆಸಕ್ತಿಯೂ ಇದೆ. ನಾನು ನಿತ್ಯವೂ ಓದುವ ಗ್ರಂಥಗಳಲ್ಲಿ ಒಂದಾದರೂ ಮನಶ್ಶಾಸ್ತ್ರಕ್ಕೆ ಸಂಬಂಧ ಪಟ್ಟುದಾಗಿರುತ್ತದೆ. ಏಕೆಂದರೆ, ಅದು ನನಗೆ ಬರಿಯ ಶಾಸ್ತ್ರವಲ್ಲ ; ಅದು ಒಂದು ರೀತಿಯಲ್ಲಿ ಸಾಕ್ಷಾತ್ಕಾರದ ಸೂತ್ರಗಳನ್ನು ಒಳಗೊಂಡ ಶಾಸ್ತ್ರ. ನನ್ನ ಸ್ವಂತ ಜೀವನದಲ್ಲಿ ಆಲೋಚನೆಯ ಆವಶ್ಯಕತೆಗಾಗಿ ಮನಶ್ಶಾಸ್ತ್ರ, ತತ್ತ್ವಶ್ಶಾಸ್ತ್ರ, ಸಾಹಿತ್ಯ- ಇವೆಲ್ಲ ಭೇದಗಳನ್ನೂ ಕಲ್ಪಿಸಿಕೊಂಡಿರುವುದುಂಟು. ಆದರೆ ಅನುಭವದ ದೃಷ್ಟಿಯಿಂದ ನನ್ನ ಕಾವ್ಯದಲ್ಲಿ, ನನ್ನ ಸಾಹಿತ್ಯದಲ್ಲಿ ಮನಶ್ಶಾಸ್ತ್ರ, ತತ್ತ್ವಶ್ಶಾಸ್ತ್ರ, ಇತಿಹಾಸ, ರಾಜ್ಯಶಾಸ್ತ್ರದ ವಿಷಯ-ಮುಂತಾದ ಇನ್ನೂ ಹಲವಾರು ವಿಷಯಗಳು, ಒಂದೇ ವ್ಯಕ್ತಿಯ ಶರೀರದಲ್ಲಿ ವಸ್ತುತಃ ಒಂದಕ್ಕೊಂದು ಬಹುದೂರವಾಗಿ, ಬೇರೆ ಬೇರೆಯಾಗಿರುವ ಪದಾರ್ಥಗಳು ಸೇರಿಕೊಂಡಿರುವಂತೆ ಸೇರಿಕೊಂಡಿವೆ.

ಷಷ್ಟಿನಮನ, ಭಾರತ ವಿಶ್ವವಿದ್ಯಾನಿಲಯಗಳಲ್ಲಿ ಆಧುನಿಕ ಮನಃಶಾಸ್ತ್ರ, ಪುಟ ೧೨೮

೧೩೨೬

ವಸ್ತು ಸಂನಿವೇಶಗಳ ಬೃಹತ್ತು ಮಹತ್ತುಗಳಿದ್ದ ಮಾತ್ರಕ್ಕೆ ಭವ್ಯತಾಅನುಭವ ತನಗೆ ತಾನೆ ಸಿದ್ಧವಾಗುವುದಿಲ್ಲ. ಸಹೃದಯ ಪ್ರಜ್ಞೆಯ ಚಿತ್ತಸಂವಾದ ಅದಕ್ಕೆ ಅತ್ಯಂತ ಆವಶ್ಯಕ.

ರಸೋ ವೈ ಸಃ, ಭೂಮಾನುಭೂತಿ, ಪುಟ ೧೧೨-೩

೧೩೨೭

ಯುವಕರು ವೇಷ ಭೂಷಣಗಳಲ್ಲಿ ಅತಿ ಷೋಕಿಗೆ ಹೋಗದೆ ಸರಳ ಸಾಧಾರಣವಾಗಿದ್ದರೆ ಸ್ವಲ್ಪವಾದರೂ ಉಳಿತಾಯವಾಗುತ್ತದೆ. ಅಲ್ಲದೆ ಷೋಕಿ ಮಾಡಲೆಂದು ಮದುವೆ ಮಾಡಿಕೊಂಡು ಮಾವಂದಿರ ಮೂಲಧನಕ್ಕೆ ಬಾಯಿ ಬಾಯಿ ಬಿಡುವುದೂ ತಪ್ಪುತ್ತದೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೧೧

೧೩೨೮

ಬೆಳಗಿನ ನೇಸರಿನೆಳಬಿಸಿಲಿನಮುದ್ದನು ಹಣ ಮೀರಿಹುದೇನಮ್ಮಾ?
ಎಲೆಹಸುರಲಿ ದಿನವೂ ನಾವಾಯುವ
ಹೂಗಳ ಮೀರಿಹುದೇನಮ್ಮಾ?
ಹನಿಯೊಳು ಮಿಂದಿಹ ತಳಿರಲಿ ನಲಿಯುವ ಹಿಮ
ಮಣಿಗದು ಚೆಲುವೇನಮ್ಮಾ?
ತಳಿತಿಹ ಬನದಲಿ ಉಲಿಯುವ ಕೋಗಿಲೆಯಿಂಚರಕದು
ಇಂಪೇನಮ್ಮಾ?

ನನ್ನ ಮನೆ, ಹಣ, ಪುಟ ೨೪

೧೩೨೯

ಮನುಷ್ಯನು ಸಾಧಾರಣವಾಗಿ ರಾಗಜೀವಿ. ಹೃದಯವು ಪ್ರೇರಿಸಿದಂತೆ ಕೆಲಸ ಮಾಡುವವರೇ ಬಹಳಮಂದಿ. ಮತಿ ವಿಚಾರ ಮಾಡಿ ತೋರಿಸಿದಂತೆ ಕೆಲಸ ಮಾಡುವವರು ಅತಿವಿರಳ. ಅವಿವೇಕಕ್ಕೂ ಭಕ್ತಿಗೂ ಕೆಲವು ವೇಳೆ ಭೇದವೆ ಇರುವುದಿಲ್ಲ. ಯೆಹೂದ್ಯರ ಶ್ರುತಿಮತಭಕ್ತಿಯಿಂದಲ್ಲವೆ ಯೇಸುಕ್ರಿಸ್ತನು ಶಿಲುಬೇಗೇರಿದುದು? ಗ್ರೀಕ್ ಜನರ ಮತಭ್ರಾಂತಿಯಿಂದಲ್ಲವೆ ಮತಿಯನ್ನೆ ಅನುಸರಿಸಿದ ಮಹಾಜ್ಞಾನಿ ಸಾಕ್ರೆಟೀಸನು ವಿಷಪಾನ ಮಾಡಿ ಮಡಿಯಬೇಕಾದುದು? ಕ್ರೈಸ್ತರ ಬೈಬಲ್-ಭಕ್ತಿಯಿಂದಲ್ಲವೆ ನೂತನ ಸತ್ಯಗಳನ್ನು ಕಂಡುಹಿಡಿದ ವಿಜ್ಞಾನ ಶಾಸ್ತ್ರಜ್ಞರು ಜೀವಸಹಿತ ಅಗ್ನಿ ಸಂಸ್ಕಾರ ಹೊಂದಬೇಕಾದದ್ದು? ಭರತಖಂಡದಲ್ಲಿಯೂ ಕೂಡ ವಿವೇಕಹೀನರೂ ಸ್ವಾರ್ಥಪರರೂ ಸಂಪ್ರದಾಯ ಶರಣರೂ ಆದ "ವೈದಿಕ"ರ ಸಂಕುಚಿತ ಭಾವ ಮೂಲವಾದ ಧರ್ಮಶಾಸ್ತ್ರದಾಸ್ಯದಿಂದಲೆ ಸಹಸ್ರಾರು ಅಮೃತ ಪುತ್ರಸಮಾನ ಮಾನವರು ಪಶುಗಳಿಗಂತಲೂ ನೀಚವೆಂದು ಪರಿಗಣಿತರಾಗಿ

ಅಂತ್ಯಜರಾಗಿರುವುದು ? ಸರ್ವಮಾನವ ಭ್ರಾತೃತ್ವವನ್ನು ಸಾರುವ ಮುಸಲ್ಮಾನರೂ ಜಗದೀಶ್ವರನ ಹೆಸರಿನಿಂದಲ್ಲವೆ ಕಾಫರನ ಕೊಲೆ ಸ್ವರ್ಗದಾಯಕವೆಂದು ತಿಳಿದಿರುವುದು ? ಮನುಷ್ಯನು ಬುದ್ಧಿಗೆ ಸ್ವಲ್ಪ ಪ್ರಧಾನ್ಯ ಕೊಟ್ಟಿದ್ದರೆ ಅಂಥ ಶ್ರದ್ಧೆಯಿಂದ ಜರಗುವ ಇಂತಹ ಅನಾಹುತಗಳು ಬಹುಮಟ್ಟಿಗೆ ಕಡಿಮೆಯಾಗುತ್ತಿದ್ದುವು. ಈಶ ರಾಜ್ಯಕ್ಕೆ ಈಶ ಭಕ್ತಿಯೆ ಕಂಟಕವಾಗಿರುವುದು ಶೋಚನೀಯ ವಿಷಯವಾಗಿದೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨೦೨

೧೩೩೦

ನನಗೆ ಪುಣ್ಯಕ್ಷೇತ್ರ ಮತ್ತು ತೀರ್ಥ ಯಾತ್ರೆಗಳ ವಿಚಾರದಲ್ಲಿ ಅಷ್ಟೇನೂ ಶ್ರದ್ಧೆಯಿದೆ ಎಂದು ಹೇಳಿಕೊಳ್ಳಲಾರೆ. ನಾನು ಪೂಜೆಯ ಸಲುವಾಗಿ ದೇವಸ್ಥಾನಗಳಿಗೆ ಕೂಡ ಹೋಗದೆ ಕಾಲು ಶತಮಾನಕ್ಕಿಂತಲೂ ಹೆಚ್ಚಾಯಿತೆಂದು ತೋರುತ್ತದೆ. ನಾನು ಜಾತಕ ಪಂಚಾಂಗ ಇತ್ಯಾದಿಗಳ ಕಡೆ ಎಂದೂ ಮುಖ ಹಾಕಿದವನಲ್ಲ. ನನಗೆ ರಾಹುಕಾಲ ಗುಳಿಕಕಾಲಗಳ ಅರ್ಥವೂ ಗೊತ್ತಿಲ್ಲ. ಪಿತೃಗಳಿಗೆ ಶ್ರಾದ್ಧಮಾಡುವುದು ಪಿಂಡ ಅರ್ಪಿಸುವುದು ಇತ್ಯಾದಿಗಳನ್ನು ಕೇಳಬಲ್ಲೆನೆ ಹೊರತು ಮಾಡುವ ಗೋಜಿಗೆ ಹೋದವನಲ್ಲ. ಹಿಂದೂಧರ್ಮಕ್ಕೆ ಸೇರಿದುವು ಎಂದು ಹೇಳಿಕೊಂಡು ಅನೇಕರು ಆಚರಿಸುವ ಕ್ರಿಯೆಗಳಲ್ಲಿ ಮುಕ್ಕಾಲು ಮೂರು ವೀಸಕ್ಕಿಂತಲೂ ಹೆಚ್ಚು ಪಾಲಿಗೆ ನಾನು ಸ್ವಭಾವತಃ ವಿಮುಖವಾಗಿದ್ದೇನೆಂದು ತೋರುತ್ತದೆ.

ಷಷ್ಠಿನಮನ, ತೀರ್ಥಯಾತ್ರೆ, ಪುಟ ೮೭-೮

೧೩೩೧

ಪ್ರತಿಭೆಯಿಂದ ಹೊರಹೊಮ್ಮಿದ ಕಾವ್ಯ ಅಕ್ಷಯ ಪಾತ್ರೆಯಂತೆ ಸರ್ವದಾ ಸಂಪೂರ್ಣವಾದುದು, ಚಿರನೂತನವಾದುದು. ಅಂತಹ ಅಕ್ಷಯ ರಸಪಾತ್ರೆಗೆ ಮೇರೆ ಕಲ್ಪಿಸಿದರೆ ಅದರಿಂದ ನಮ್ಮ ಕ್ಷುದ್ರಹೃದಯದ ದಾರಿದ್ರ್ಯವನ್ನು ನಾವೆ ಸೂಚಿಸಿದಂತಾಗುವುದೆ ಹೊರತು ರಸಪಾತ್ರೆಯ ಮಹೌದಾರ್ಯಕ್ಕೆ ಕಾರ್ಪಣ್ಯ ದೋಷಾರೋಪಣೆ ಮಾಡಿದಂತಾಗುವುದಿಲ್ಲ.

ಇತ್ಯಾದಿ, ಉಪಮಾಲೋಲ ಲಕ್ಷ್ಮೀಶ, ಪುಟ ೪೬

೧೩೩೨

ವೀತವಿಘ್ನವೂ ಅವಿದ್ಯಾವರಣ ವಿಮುಕ್ತವೂ ಆಗಿರುವ ರಸಋಷಿ ಪ್ರಜ್ಞೆ ರಸಾನುಭೂತಿಗಾಗಿ ಕಾವ್ಯಕಲೆಗಳ ಕೃಪೆಯ ಕೈ ಹಾರೈಸಬೇಕಾಗಿಲ್ಲ. ಸಮಸ್ತ ವಿಶ್ವವೂ ತನ್ನ ಸುಂದರ ರುದ್ರ ನಟರಾಜ ಭಂಗಿಯ ಸಹಸ್ರ ಬಾಹುವೆತ್ತಿ ಆತನನ್ನು 'ಶೃಣ್ವಂತು ವಿಶ್ವೇ ಅಮೃತಸ್ಯ ಪುತ್ರಾಃ' ಎಂದು ಆಹ್ವಾನಿಸಿ ಸಾರುತ್ತದೆ-'ರಸೋ ವೈ ಸಃ'!

ರಸೋ ವೈ ಸಃ, ರಸೋ ವೈ ಸಃ, ಪುಟ ೧೩೨

೧೩೩೩

ಅಧ್ಯಾತ್ಮಸಾಹಸಿಗಳ ತಪಃಪ್ರಭಾವ ಲೋಕದ ಬದುಕಿನ ಮೇಲೆ ತನ್ನ ಚಿರಮುದ್ರೆಯನ್ನೊತ್ತಿ ಅದರ ದಾರಿಯನ್ನೂ ಗತಿಯನ್ನೂ ನಿರ್ಣಯಿಸುವುದರಲ್ಲಿ ನಿಸ್ಸಂದೇಹವಾಗಿ ಪರಿಣಾಮಕಾರಿಯಾಗುತ್ತದೆ. ಭೂನಿವಾಸಗಳ ಕಣ್ಣಿಗೆ ಕಾಣಿಸದೆ ಮನಸ್ಸಿಗೂ ಅಗೋಚರವಾಗಿರುವ ಅತಿದೂರದ ನಕ್ಷತ್ರದ ಪ್ರಭಾವವು ಭೂಮಿಯ ಮತ್ತು ಅಲ್ಲಿಯ ನಿವಾಸಿಗಳ ಜೀವನದ ಮೇಲೆ ಹೇಗೆ ಪರಿಣಾಮಕಾರಿ ಆಗಿಯೇ ಆಗುತ್ತದೆಯೊ ಹಾಗೆ. ಅವರ ಹೆಸರನ್ನು ಕ್ಷಣಭಂಗುರವಾದ ಪತ್ರಿಕೆಯ ಜಲಲಿಪಿ ತನ್ನ ಕೂಷ್ಮಾಂಡಾಕ್ಷರಗಳಲ್ಲಿ ಪ್ರಕಟಿಸದಿರಬಹುದು; ರಾಷ್ಟ್ರವು ವಾರ್ಷಿಕವೂ ಸಾರ್ವಜನಿಕವೂ ಆದ ಜನ್ಮೋತ್ಸವಾದಿ ರೂಪದ ಶಿಲಾಲಿಪಿಯಲ್ಲಿ ಅವರ ಗೌರವದ ಪ್ರತಿಮೆಯನ್ನು ಕಂಡರಿಸದಿರಬಹುದು; ಇತಿಹಾಸಕಾರನೂ ಅವರಿಗಾಗಿ ತನ್ನ ಅಮೂಲ್ಯ ಲೇಖನಿಯ ಮಷೀ ವ್ಯಯಮಾಡಲು ಮರೆತುಬಿಡಬಹುದು ಅಥವಾ ಒಪ್ಪದಿರಬಹುದು. ಆದರೂ ಅವರ ತಪೋವೃಕ್ಷದ ಕ್ಷೀರಶಕ್ತಿ ಲೋಕದ ಲಕ್ಷಾಂತರ ತಪ್ತ ಜೀವರಾಶಿಗಳಿಗೆ ಪೀಯೂಷ ದಾನ ಮಾಡುತ್ತಿರುತ್ತದೆ; ನೀರವವಾಗಿ ನಿರಾಡಂಬರವಾಗಿ ಜಗತ್ಕಲ್ಯಾಣಕರವಾಗಿ ಲೋಕಸಂಗ್ರಹ ಮಾಡುವ ದಯಾಮಯ ವಾದ ಭಗವತ್ ಕಾರ್ಯದಲ್ಲಿ ನಿರಂತರವೂ ದಿವ್ಯ ಕರ್ಮಿಯಾಗಿರುತ್ತದೆ.

ಷಷ್ಠಿನಮನ, ಮಹಾಪುರುಷ: ಸ್ವಾಮಿ ಶಿವಾನಂದರು, ಪುಟ ೨೩೫-೬

೧೩೩೪

ಹಲವು ತೆರನಾದ ಅರೆಗಳಿಂದ ವಿಗ್ರಹಗಳನ್ನು ಕೆತ್ತುವ ಶಿಲ್ಪಿ ಕಲ್ಲಿನ ಗುಣಗಳನ್ನು ತಿಳಿದುಕೊಳ್ಳದೆ ಎಲ್ಲಕ್ಕೂ ಒಂದೇ ನಿಯಮದಂತೆ ಶಕ್ತಿ ಪ್ರಯೋಗ ಮಾಡಿದರೆ ಅಪಾಯವಾಗದಿರುವುದಿಲ್ಲ. ಕಗ್ಗಲಿಗೆ ಹೊಡೆಯುವ ಪೆಟ್ಟನ್ನು ಹಿಟ್ಟುಗಲ್ಲಿಗೆ ಹೊಡೆದರೆ ವಿಗ್ರಹಕ್ಕೆ ಬದಲಾಗಿ ರಂಗವಲ್ಲಿಯ ಚೂರ್ಣವಾಗಿಬಿಡುತ್ತದೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೯೩

೧೩೩೫

ಶ್ರೀಮಾತೆಯ ಬದುಕು ದೂರದ ವೀಣಾಧ್ವನಿಯಂ, ಸುಮಧುರ, ಸುಪ್ರಶಾಂತ. ಕಿವಿಗೊಟ್ಟು ಆಲಿಸಿದಲ್ಲದೆ ಕೇಳುವುದೂ ಅಸಂಭವ ; ಮನಮುಟ್ಟಿ ಕೇಳಿದಲ್ಲದೆ ಅದರ ಇಂಪು ಅನುಭವಕ್ಕೆ ಬರುವುದಿಲ್ಲ. ಹೆದ್ದಾರಿಗೆ ದೂರದಲ್ಲಿರುವ ಎಲೆಯ ಮರೆಯ ಹೂವಿನ ನರುಗುಂಪಿನಂತೆ ಅವಸರದ ಪಯಣಿಗರಿಗೆ ಅದು ಅವೇದ್ಯ. ಅದು ದೈನಂದಿನ ಸಾಂಸಾರಿಕ ಜೀವನದ ಸಕಲ ಲಕ್ಷಣಗಳಿಂದ ಸಮನ್ವಿತವಾಗಿದೆ: ವೈಭವಪೂರ್ಣವಾದರೂ ವಿನಯದೀನ; ಸಾಹಸಪೂರ್ಣವಾದುದಾದರೂ ನೀರಸ ಸಾಮಾನ್ಯ; ಶ್ರದ್ಧಾ ಮಹಿಮೆಯಿಂದ ಧೀರವಾದರೂ ಕೌಟುಂಬಿಕ ಕಷ್ಟ ಕ್ಲೇಶಗಳಿಂದ ದುಃಖ ಪೂರ್ಣ; ಶತಶತ ಅಪಮಾನ ಅನ್ಯಾಯಗಳಿಂದ ತಾಡಿತವಾದರೂ ಸರ್ವದಾ ಕ್ಷಮಾಶೀಲ; ಆದಿಶಕ್ತಿಯ ಸರ್ವಶಕ್ತವಾದ ಬೆಂಬಲವಿದ್ದರೂ ಅಬಲದಂತೆ

ವ್ಯವಹರಿಸುವ ಸಹಿಷ್ಣು. ಅಂತಹ ಬದುಕನ್ನು ಕುರಿತು ಉಪನ್ಯಾಸ ಮಾಡುವುದಿರಲಿ ಗಟ್ಟಿಯಾಗಿ ಮಾತನಾಡಿದರೂ ಅದಕ್ಕೆ ಅಪಚಾರ ಮಾಡಿದಂತಾಗುತ್ತದೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೬೫-೬

೧೩೩೬

'ಕರ್ನಾಟಕ' ನಾಮಕರಣಕ್ಕಾಗಿ ಹಾರೈಸಿದವರು, ಹೋರಾಡಿ ದುಡಿದವರು ರಾಜಕಾರಣಿಗಳಿಗಿಂತ ವಿಶೇಷವಾಗಿ ಕವಿಗಳು ಮತ್ತು ಸಾಹಿತಿಗಳು. ಕರ್ನಾಟಕತ್ವ ಮುಖ್ಯವಾಗಿ ಅವರ ವಿಜಯವಾಗಿದೆ. 'ಕರ್ನಾಟಕ' ಎಂಬ ಹೆಸರನ್ನಾಗಲಿ ಏಕೀಕರಣವನ್ನಾಗಲಿ ನಾವು ಸಾಹಿತಿಗಳು ಬಯಸಿದ್ದು ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಶ್ರೇಯೋಭ್ಯುದಯಗಳ ದೃಷ್ಟಿಯಿಂದಲೆ ಹೊರತು ರಾಜಕೀಯ ಕಾರಣಗಳಾಗಿ ಅಲ್ಲ. ಆದರೆ ಏಕೀಕರಣವನ್ನು ರಾಜಕಾರಣಪಟುಗಳು ತಮ್ಮ ಉತ್ಕರ್ಷಕ್ಕೆ ಸ್ವಾರ್ಥಕ್ಕೆ ಉಪಯೋಗಿಸಿಕೊಂಡರೆಂಬುದು ದುರದೃಷ್ಟಕರ ಸಂಗತಿ.

ವಿಚಾರ ಕ್ರಾಂತಿಗೆ ಆಹ್ವಾನ, ಕರ್ನಾಟಕ : ಇಟ್ಟ ಹೆಸರು ಕೊಟ್ಟ ಮಂತ್ರ, ಪುಟ ೮೯

೧೩೩೭

ಎಲ್ಲ ತರಹದ ಸಾಹಿತ್ಯವೂ ಸಮಾನ ಪ್ರಯೋಜನಕರವಾದುದೆಂದಾಗಲಿ ಸಮಾನ ಯೋಗ್ಯವಾದುದೆಂದಾಗಲಿ ನಿರೀಕ್ಷಿಸಿ, ಬೆಲೆಕಟ್ಟಿ, ಒಂದನ್ನು ಹೊಗಳಿ ಇನ್ನೊಂದನ್ನು ತೆಗಳುವುದು ಅನಾವಶ್ಯಕ. ಆಯಾ ಶ್ರೇಣಿಗೆ ಸೇರಿದ ಸಾಹಿತ್ಯ ತನ್ನ ಸ್ಥಾನ ತನ್ನಿಂದ ನಿರೀಕ್ಷಿಸುವುದನ್ನು ಮಾಡಿದರೆ ಅದು ಉತ್ತಮ ಸಾಹಿತ್ಯವೆ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೩೪-೫

೧೩೩೮

ಕನ್ನಡದ ನೆಲದೊಗ್ಗಟ್ಟಿಗಾಗಿ ಕರ್ನಾಟಕ ಏಕೀಕರಣದ ರಾಜಕೀಯ ಚಳವಳಿ ನಡೆಯುತ್ತಿದೆ. ಕನ್ನಡದ ನಡೆಯ ಮತ್ತು ನುಡಿಯ ಒಗ್ಗಟ್ಟಿಗಾಗಿ ಸಾಹಿತ್ಯದ ಸಾಂಸ್ಕೃತಿಕ ಚಳವಳಿ ಮುಂಬರಿಯುತ್ತಿದೆ. ಕನ್ನಡನಾಡಿನ ಸಿರಿಯ ಏಳ್ಗೆಗಾಗಿ ಆರ್ಥಿಕ ಚಳವಳಿ ಇನ್ನೂ ಸಾಕಷ್ಟು ನಡೆದಿಲ್ಲ ; ಇನ್ನೂ ಸ್ಪಷ್ಟವಾಗಿ ರೂಪುಗೊಂಡಿಲ್ಲ. ಆದರೆ ಅದೂ ಇಂದೋ ನಾಳೆಯೋ ರೂಪಗೊಳ್ಳಲೇಬೇಕಾಗಿದೆ. ಕನ್ನಡನಾಡಿನಲ್ಲಿ ಕನ್ನಡಿಗರ ಬ್ಯಾಂಕುಗಳೂ ಕನ್ನಡಿಗರ ಜೀವವಿಮಾ ಕಂಪೆನಿಗಳೂ ಕನ್ನಡಿಗರ ಕಾರ್ಖಾನೆಗಳೂ ಕನ್ನಡಿಗರ ಕೈಗಾರಿಕೆಗಳೂ ಮತ್ತು ಕನ್ನಡಿಗರ ವ್ಯಾಪಾರಸಂಸ್ಥೆಗಳೂ ಹುಟ್ಟಿ ಬೆಳೆದು ಕರ್ನಾಟಕದ ಸಂಪದಭ್ಯುದಯದ ಮಟ್ಟವನ್ನು ಮೇಲ್ಗೊಳಿಸಬೇಕಾದರೆ, ನಮ್ಮವರು ಕಣ್ಣು ಮುಚ್ಚಿಕೊಂಡು ಹೊರನಾಡಿಗರ ಕೈ ಬಾಯಿ ತುಂಬುವ ತಮ್ಮ ದಾನಶೌರ್ಯದ ವಿಚಾರದಲ್ಲಿ ಇನ್ನೂ ಸ್ವಲ್ಪ ಹೆಚ್ಚಿನ ವಿವೇಚನೆಯಿಂದ ವರ್ತಿಸಬೇಕಾಗಿರುವ ಕಾಲ ಈಗಲೀಗ ಬಂದಿದೆ.

ಸಾಹಿತ್ಯ ಪ್ರಚಾರ, ದೇಶದೇವಿಯ ಪೂಜೆಗೆ ಬನ್ನಿ, ಪುಟ ೬೯

೧೩೩೯

ದೇವರು, ಆತ್ಮ, ಪರಲೋಕ ಈ ವಿಚಾರಗಳಲ್ಲಿ ಕವಿ ತನ್ನ ಸ್ವಂತ ಅನುಭವಗಳಿಗೆ ಗಮನ ಕೊಡುತ್ತಾನೆ. ದೇವರ, ಆತ್ಮದ ಮತ್ತು ಅಮೃತತ್ವದ ನಿಜಾಂಶವನ್ನು

ವಾದದಿಂದಾಗಲಿ ಶ್ರುತಿಪ್ರಾಮಾಣ್ಯದಿಂದಾಗಲಿ ಸಮರ್ಥಿಸಲು ಹೋಗದೆ ಅವುಗಳನ್ನು ಕುರಿತು ತನಗುಂಟಾಗುವ ಅನುಭವಗಳನ್ನು ಭಾವಗೀತೆಗಳನ್ನಾಗಿ ಹಾಡುತ್ತಾನೆ. ಆ ಗೀತೆಗಳಲ್ಲಿ ಯಾವಾಗಲೂ ಶ್ರದ್ಧೆಯೇ ಇರುತ್ತದೆಯೆಂದು ಹೇಳಲಾಗುವುದಿಲ್ಲ. ಸಂದೇಹವೂ ಸುಳಿಯಬಹುದು. ಕೆಲವು ಸಾರಿ ಅಶ್ರದ್ಧೆಯೂ ತೋರಬಹುದು. ಮತ್ತೆ ಕೆಲವು ಸಾರಿ 'ದೇವರುಗೀವರುಗಳನ್ನು ಕಟ್ಟಿಕೊಂಡು ಕೆಟ್ಟಿದ್ದೇವೆ : ಇನ್ನು ಆ ಮೂಢ ಭ್ರಾಂತಿಗಳನ್ನೆಲ್ಲ ಹೊರತಳ್ಳಿ, ಮನುಷ್ಯ ಪೌರುಷವನ್ನೇ ನೆಚ್ಚಿ, ಉದ್ಧಾರವಾಗೋಣ', ಎಂಬ ರಭಸಧ್ವನಿಯೂ ಹೊಮ್ಮಬಹುದು. ಒಟ್ಟು ಒಂದು ಮಾತಿನಲ್ಲಿ ಹೇಳುವುದಾದರೆ ಪರಿಣಾಮವಾದ ಮತ್ತು ಮನಶ್ಶಾಸ್ತ್ರಗಳ ಪ್ರಭಾವ ಹೊಸ ಸಾಹಿತ್ಯದ ಮತದೃಷ್ಟಿಯಲ್ಲಿ ವಿಶೇಷವಾಗಿ ವ್ಯಕ್ತವಾಗುತ್ತದೆ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೫೨

೧೩೪೦

ವಿಶೇಷ ವ್ಯಕ್ತಿಗಳಲ್ಲಿ ವಿಶಿಷ್ಟ ಸನ್ನಿವೇಶಗಳಲ್ಲಿ ಮರ್ತ್ಯಪ್ರಜ್ಞೆ ಪ್ರಲಯವಾಗುವಂತಹ ಮಟ್ಟದಲ್ಲಿ ಅದು ಆವಿರ್ಭೂತವಾದಾಗ ಭೂಮವು ಲೋಕದ ಗಮನಕ್ಕೆ ಬಂದು ಸುಪ್ರಸಿದ್ಧವಾಗಿ ಪೂಜ್ಯವಾಗುತ್ತದೆ. ಶಕ್ತಿ, ಜ್ಯೋತಿ, ತೇಜಸ್ಸು ಅಂತಹ ಪೂರ್ಣ ಪ್ರಮಾಣದಲ್ಲಿ ಪ್ರಕಟವಾಗುವಾಗ ಆ 'ಭಗವತ್ತು' ವಿಭೂತಿ ಎಂಬ ಹೆಸರಿನಿಂತ ಪ್ರಖ್ಯಾತವಾಗುತ್ತದೆ.

ರಸೋ ವೈ ಸಃ, ಭೂಮಾನುಭೂತಿ, ಪುಟ ೮೦

೧೩೪೧

ಸಂಪೂರ್ಣವಾದ ಇಂದ್ರಿಯ ನಿಗ್ರಹವೆ ತಾಂತ್ರಿಕ ಸಾಧನೆಯ ಗುರಿ. ಸ್ವಾಭಾವಿಕವಾಗಿ ಮಾನವನು ಭೋಗಾಭಿಲಾಷಿ ; ತ್ಯಾಗ ಅವನಿಗೆ ರುಚಿಸದು. ನಿಷ್ಕಲ್ಮಷ ಚಿತ್ತನಾಗಿ ಈಶ್ವರನನ್ನು ಕುರಿತು ಧ್ಯಾನಮಾಡುವುದು ಅವನಿಗೆ ಕಷ್ಟಸಾಧ್ಯ. ಆದ್ದರಿಂದಲೆ ಹೊನ್ನಿನಲ್ಲಿ ಕಾಳಿಕೆ ಬೆರೆತಿರುವಂತೆ ಮಾನವನ ಹೃದಯದಲ್ಲಿ ನೈರ್ಮಲ್ಯದೊಂದಿಗೆ ಮಾಲಿನ್ಯವೂ ಕೂಡಿರುತ್ತದೆ. ಮಾಯೆಯ ವಜ್ರೋಪಮವಾದ ಆಲಿಂಗನವು ಆತ್ಮನನ್ನು ಸದಾ ಬಿಗಿದಿರುತ್ತದೆ. ಮಾಯೆಯನ್ನು 'ಇಲ್ಲಮಾಡಲು' ಅಸಾಧ್ಯವಾದುದರಿಂದ, ಅದನ್ನು ಬ್ರಹ್ಮಮುಖವಾಗಿ ತಿರುಗಿಸಿ, ಬ್ರಹ್ಮದಲಿ ಐಕ್ಯವಾಗುವಂತೆ ಮಾಡಿದರೆ ಮೋಕ್ಷವಾಗುತ್ತದೆ. ಇದೇ ತಾಂತ್ರಿಕ ಸಾಧನೆಯ ನಿಜವಾದ ಧ್ಯೇಯ. ಇಂದ್ರಿಯಗಳನ್ನು ವಜ್ರಬಂಧನಗಳಿಂದ ಬಿಗಿದು ಆಕರ್ಷಿಸುವ ಭೋಗವಸ್ತುಗಳ ಸಾಮೀಪ್ಯ ಸಾನ್ನಿಧ್ಯಗಳಲ್ಲಿ ಇದ್ದುಕೊಂಡು ಮನಸ್ಸನ್ನು ಬ್ರಹ್ಮಮುಖವಾಗಿ ಮಾಡುವ ವಿಷಯ ಪರೀಕ್ಷೆಯಲ್ಲಿ ಉತ್ತೀರ್ಣವಾಗಿ ಜಯಶೀಲನಾಗುವುದೇ ತಾಂತ್ರಿಕ ಸಾಧಕನ ಸಾಹಸ. ಎಂದರೆ ಭೀಷಣ ಜ್ವಾಲಾಮಯವಾದ ದಾವಾಗ್ನಿಯ ಮಧ್ಯೆ ಧುಮುಕಿ ಅಕ್ಷತವಾಗಿ ಪಾರಾಗುವುದೇ ತಂತ್ರಸಾಧನೆಯ ಸಿದ್ಧಿ. ತಾಂತ್ರಿಕ ಸಾಧಕನು ಪಾಪ ಪುಣ್ಯ ಶಾಶ್ವತ

ನಶ್ವರ ಎಲ್ಲದರಲ್ಲಿಯೂ ಏಕಾದ್ವಯ ಬ್ರಹ್ಮವಸ್ತುವನ್ನು ಕಾಣಲು ಸಮರ್ಥನಿರಬೇಕು. ಸ್ವಲ್ಪ ದುರ್ಬಲನಾದರೂ ಸಾಕು, ಸ್ವರ್ಗದ ಉನ್ನತೋನ್ನತ ಶಿಖರ ಸಿಂಹಾಸನದಿಂದ ಪತಿತನಾಗಿ ಅಗಾಧವಾದ ನರಕೂಪದಲ್ಲಿ ಬಿದ್ದುಹೋಗುತ್ತಾನೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೬೮-೯

೧೩೪೨

ನಮ್ಮ ಪ್ರಜಾಸತ್ತೆ ಕಲುಷಿತವಾಗಲು ಹಣ ಒಂದೆಯೆ ಕಾರಣವೆಂದು ತಿಳಿಯುವುದು ತಪ್ಪಾಗುತ್ತದೆ. ಅದಕ್ಕಿಂತಲೂ ಮಹತ್ತಾದ ಮತ್ತು ಮೂಲಭೂತವಾದ ಮತ್ತೊಂದು ಕಾರಣವೂ ಇದೆ, ನಮ್ಮ ಪುಣ್ಯಭೂಮಿ ಭಾರತದಲ್ಲಿ! ಅದು ಒಂದು ಅಮೂರ್ತ ವಸ್ತು, ಅದು ಹಾಕಿಕೊಂಡಿರುವ ವೇಷದಿಂದ ತುಂಬ ಸಾಧು ಮತ್ತು ಪೂಜ್ಯ ಎಂಬಂತೆ ತೋರುತ್ತದೆ. ಅದು ಭಾವರೂಪಿಯಾದುದರಿಂದ ಅತಿ ಸೂಕ್ಷ್ಮವಾಗಿ ಹೃದಯ ಪ್ರವೇಶಮಾಡಿ ನಮ್ಮನ್ನು ಆಕ್ರಮಿಸುತ್ತದೆ. ಮತ್ತು ನಮ್ಮಲ್ಲಿ ನಿಜವಾಗಿಯೂ ಇರುವ ಒಂದು ಅನಿರ್ವಚನೀಯ-ಅತ್ಯಂತ ಅಂತರತಮ-ಸತ್ಯಸ್ಯ ಸತ್ಯವಾದ ಸನಾತನತತ್ತ್ವಕ್ಕೆ (ಅದನ್ನು ಆಧ್ಯಾತ್ಮ ಎಂದು ಹೆಸರಿಸುತ್ತೇವೆ.) ಅದು ತನ್ನ ಬಾಂಧವ್ಯವನ್ನು ಘೋಷಿಸುತ್ತಾ ಬಂದಿರುವುದರಿಂದಲೂ ಮತ್ತು ಅದನ್ನೆ ತಾನು ಪೋಷಿಸತ್ತಿರುವುದಾಗಿ ಹೇಳುತ್ತಲೂ ಇರುವುದರಿಂದಲೂ ಅದರ ಪ್ರಚ್ಛನ್ನ ವಂಚನೆಯ ಮುಷ್ಟಿಯಿಂದ ತಪ್ಪಿಸಿಕೊಳ್ಳವುದೂ ಕಷ್ಟವಾಗಿದೆ. ಅದರ ಹೆಸರು 'ಮತ'! ಈ ಮತಭ್ರಾಂತಿಯಿಂದ ಲೋಕಕ್ಕೆ ಆಗಿರುವಷ್ಟು ಹಾನಿ ಮತ್ತಾವುದರಿಂದಲೂ ಆಗಿಲ್ಲ ಎಂದು ತೋರುತ್ತದೆ.

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೬-೭

೧೩೪೩

ಪರಕೀಯರ ಶೋಷಣೆಯಿಂದ ನಮ್ಮ ದೇಶ ಎಂತಹ ಬಡತನಕ್ಕೆ ಇಳಿದಿತ್ತು ಎಂದರೆ ಯಂತ್ರನಾಗರಿಕತೆಯಲ್ಲಿ ತುಂಬ ಮುಂದುವರಿದ ದೇಶಗಳಂತೆ ಮಹಾ ಮಹಾ ಕಾರ್ಖಾನೆಗಳ ಮತ್ತು ಕೈಗಾರಿಕೆಗಳ ಭಾರವನ್ನು ಹೊರುವ ತ್ರಾಣವೆ ಅದಕ್ಕಿರಲಿಲ್ಲ. ಆದರೂ ಅದರ ಹೆಗಲ ಮೇಲೆ ಅದನ್ನೆಲ್ಲ ಹೇರಿದೆವು, ಕೋಟ್ಯಂತರ ಧನದ ಸಾಲವೆತ್ತಿ. ನಮಗೆ ಆಗ ತುರುತ್ತಾಗಿ ಬೇಕಾಗಿದ್ದುದು ಅನ್ನ ನೀರು ಬಟ್ಟೆ ಗುಡಿಸಲು. ಆಗರೆ ನಾವು ಮೋಟಾರು ಕಾರುಗಳನ್ನು ತಯಾರಿಸುವ ಏರ್ಪಾಡಿಗೆ ಬೆಂಬಲ ಕೊಟ್ಟೆವು. ನಾವೂ ಉಪಗ್ರಹಗಳನ್ನು ಹಾರಿಸಬೇಕೆಂದು ಹಠತೊಟ್ಟೆವು. ನಾವೂ ರಿಯಾಕ್ಟರುಗಳನ್ನು ಸ್ಥಾಪಿಸಿದೆವು ಕೊನೆಗೆ ಆಟಂ ಸಾಧನವನ್ನೂ ಸಿಡಿಸಿದೆವು. ಹೀಗೆ ಅನೇಕ ರೀತಿಯ ಭೋಗದ ಮತ್ತು ಷೋಕಿಯ ವಸ್ತುಗಳ ತಯಾರಿಕೆಗೆ ಬಡ ರೈತರ ತೆರಿಗೆಯ ಧನವನ್ನು ವ್ಯಯ ಮಾಡಿದೆವು, ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಭೋಗ ಜೀವನ ನಡೆಸುವ ಶ್ರೀಮಂತರ ಸುಖಕ್ಕಾಗಿ, ಹಳ್ಳಿಗಳನ್ನೂ ರೈತ ವರ್ಗವನ್ನೂ ಮರೆತು ಬಿಟ್ಟೆವು. ಅಥವಾ ಮರೆತೇ ಬಿಟ್ಟೆವು ಎಂಬ ದೂರಿನಿಂದ

ಪಾರಾಗುವುದಕ್ಕಾಗಿಯೂ ಮತ್ತು ಅವರು ಸಂಪೂರ್ಣವಾಗಿ ನಿರ್ಜೀವವಾದರೆ ನಮಗಾಗಿ ದುಡಿಯುವವರು ಯಾರೂ ಇಲ್ಲದಂತೆ ಆಗಬಾರದು. ಎಂಬುದಕ್ಕಾಗಿಯೂ ಜೀವವಾಡುವಷ್ಟರ ಮಟ್ಟಿಗೆ ಅವರ ಭಿಕ್ಷಾಪಾತ್ರೆಗೂ ಕಾಸು ಎಸೆದದ್ದುಂಟು. ನಗರಗಳಲ್ಲಿ ಮಹಾಪರ್ವತೋಪಮ ಕಟ್ಟಡಗಳನ್ನು ಕಟ್ಟುವುದಕ್ಕೆ ನಮಗೆ ದುಡ್ಡು ಇತ್ತು. ಆದರೆ ಹಳ್ಳಿಗಳಲ್ಲಿ ಬಾವಿ ತೋಡಲು ಹಣವಿರಲಿಲ್ಲ. ಯಾವುದಕ್ಕೆ ಮೊದಲು ಗಮನ ಕೊಡಬೇಕಾಗಿತ್ತೊ ಅದಕ್ಕೆ ಕೊಡಲಿಲ್ಲ. ಬಡ ರೈತನನ್ನು ಹಿಂಡಿ ತೆಗೆದ ತೆರಿಗೆ ದವಸ ಧಾನ್ಯಗಳು ನಗರಗಳ ಶ್ರೀಮಂತ ವರ್ಗಕ್ಕೂ ಅಧಿಕಾರವರ್ಗದ ಧಾಳಾಧೂಳಿಗೂ ವ್ಯಯವಾಯಿತು. ರಾಷ್ಟ್ರಪತಿಯಿಂದ ಹಿಡಿದು ರಾಯಭಾರಿ, ಪ್ರಧಾನಿ, ಮಂತ್ರಿ, ಲೋಕಸಭಾ ಸದಸ್ಯ, ಮೇಲ್ಮನೆ, ಕೆಳಮನೆ. ಐ ಎ ಎಸ್, ಐ ಪಿ ಎಸ್ ಇತ್ಯಾದಿ ಅಧಿಕಾರಗಳವರೆಗೆ ಸಮೃದ್ಧ ಸಂಬಳ ಗಿಂಬಳಗಳ ಹಂಚಿಕೆ ನಡೆಯಿತು. ದೊಡ್ಡ ದೊಡ್ಡ ವಿದ್ವತ್ಪೂರ್ಣವಾದ ಹೆಸರು ಹೊತ್ತ ನಕಲಿ ಸಂಸ್ಥೆಗಳೂ ಈ ಲೂಟಿಯಲ್ಲಿ ಭಾಗಿಯಾಗುವುದನ್ನು ಮರೆಯಲಿಲ್ಲ; ಗ್ರಾಮ ಸ್ವರಾಜ್ಯ ಪರಿಕಲ್ಪನೆಯ ವಿಕೇಂದ್ರೀಕರಣದ ಸ್ಥಾನದಲ್ಲಿ ಸಂಪೂರ್ಣ ಕೇಂದ್ರೀಕರಣ ಸ್ಥಾಪನೆ ಯಾಗಿ, ದೆಹಲಿಗೆ ಹೋಗಿ ಬರುವುದೆ ಕರ್ತವ್ಯಕರ್ಮದ ಪ್ರಧಾನ ಭಾಗವಾಯಿತು. ಆಡಳಿತ ಮತ್ತು ನ್ಯಾಯ ವಿತರಣೆಗಳು ಬ್ರಿಟಿಷರ ಕಾಲದಲ್ಲಿದ್ದುದಕಿಂತಲೂ ಜಟಿಲವಾಗಿ ಅನಕ್ಷರಸ್ಥ ಹಳ್ಳಿಗರು ಅಧಿಕಾರದ ಗಾಣಕ್ಕೆ ಸಿಕ್ಕಿ ನರಳುವಂತಾಯಿತು. ನಮ್ಮ ಹೊಟ್ಟೆಗೆ ಬೇಕಾದ ಕೆಲವು ಅತ್ಯಾವಶ್ಯಕ ವಸ್ತುಗಳನ್ನು ಮಾರಿ ದುಡಿದ ವಿದೇಶಿ ವಿನಿಮಯದಿಂದ ವರ್ಷ ವರ್ಷವೂ ೧೪೦೦ ಕೋಟಿ ರೂಪಾಯಿ ಪೆಟ್ರೋಲು ಎಣ್ಣೆ ತರಿಸಿ ಸುಡುತ್ತೇವಂತೆ! ಹೀಗೆ ಹೇಳುತ್ತಾ ಹೋದರೆ ಕೊನೆ ಮುಟ್ಟುವುದೆಲ್ಲಿ? ಆ ವಿಚಾರದಲ್ಲಿ ನನಗಿಂತಲೂ ಆ ಆ ಕ್ಷೇತ್ರಗಳಲ್ಲಿ ಪರಿಣತರಾದವರಿಂದ ಈಗ ಒದಗಿರುವ ದುಃಸ್ಥಿತಿಯ ಕಥೆಯ ವಿವರಗಳನ್ನು ನೀವು ಕೇಳಿದರೆ ಮೂರ್ಛೆ ಹೋಗುತ್ತೀರೊ ಏನೋ?

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೩-೪

೧೩೪೪

ದೇವರಂಥ ಸಾಧುಸಂತ
ರಿಂದ ದೇವನಿರುವನೆಂದು ಜನರ ನಂಬಿಕೆ.
ಹೇ ಪವಿತ್ರರಾಜ ಋಷಿಯೆ,
ದೇವರನ್ನು ಬಿಂಬಿಸಿಹುದು
ಶುಭ್ರವಾದ ನಿನ್ನ ಅಮಲ ಎದೆಯ ಕನ್ನಡಿ!
ದೊರೆಯೆ ದೇವರೆಂಬ ನುಡಿಯು ಧನ್ಯವಾಯಿತು,
ಮಾನ್ಯವಾಯಿತು, ಗಣ್ಯವಾಯಿತು,
ನಿನ್ನ ಶೀಲದಿಂದ, ಹೇ ನೃಪಾಲತಿಲಕನೆ.

ಇಕ್ಷುಗಂಗೋತ್ರಿ, ಬೆಳ್ಳಿ ಹಬ್ಬದ ಕಬ್ಬದ ಬಳ್ಳಿ, ಪುಟ ೬೯-೭೦

೧೩೪೫

ಸೋಮಾರಿಗಳಿಗೆ ಸುಖಿಗಳಿಗೆ ರಸಿಕರಿಗಲ್ತೆ
ಸಾಮ್ರಾಜ್ಯವೆಂಬುದು ಕಾಮಧೇನು ?

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ರೈತನ ದೃಷ್ಟಿ, ಪುಟ ೧೫

೧೩೪೬

ಕರುಬರಿರುವ ಊರ
ತೊರೆದು ದೂರ ದೂರ
ಕಾಡೊಳ್ಳಿತು ಬಾರ,
ಓ ಮನವೆ, ಬಾರ !

ಕದರಡಕೆ, ಹೆಸರಿಲ್ಲದ ತಂಪು, ಪುಟ ೬೭

೧೩೪೭

ಕರ್ಣಾಟಕ ಎಂಬುದೇನು
ಹೆಸರೆ ಬರಿಯ ಮಣ್ಣಿಗೆ ?
ಮಂತ್ರ ಕಣಾ ! ಶಕ್ತಿ ಕಣಾ !
ತಾಯಿ ಕಣಾ ! ದೇವಿ ಕಣಾ !
ಬೆಂಕಿ ಕಣಾ ! ಸಿಡಿಲು ಕಾಣಾ !
ಕಾವ ಕೊಲುವ ಒಲವ ಬಲವ
ಪಡೆದ ಚಲದ ಚಂಡಿ ಕಣಾ
ಋಷಿಯ ಕಾಣ್ಬ ಕಣ್ಣಿಗೆ !

ಇಕ್ಷುಗಂಗೋತ್ರಿ, ಅಖಂಡ ಕರ್ಣಾಟಕ, ಪುಟ ೫೬

೧೩೪೮

ಜನರೇನಮ್ಮಾ , ಹಿಂದಿನದೆಂದರೆ,
ಕಂಗಳ ಮುಚ್ಚಿಯೆ ಪೂಜಿಪರು.

ನನ್ನ ಮನೆ, ಗುರು, ಪುಟ ೯

೧೩೪೯

ನಿಜವಾಗಿಯೂ ಭರತಖಂಡ ಹಿಂದೆಯೂ ಇನ್ನು ಮುಂದೆಯೂ ಲೋಕದ ಶ್ರೇಯಸ್ಸಿಗಾಗಿ ದಾನ ಮಾಡಬೇಕಾಗಿರುವ ನಿತ್ಯ ಸತ್ಯದ ಮತ್ತು ಶಾಶ್ವತ ಶಾಂತಿಯ ದಿವ್ಯ ಸಂದೇಶ : ಸರ್ವಧರ್ಮ ಸಮನ್ವಯ ದೃಷ್ಟಿ; ಸರ್ವ ಸಮತೆ ; ಸರ್ವೋದಯ, ಸರ್ವಪುಷ್ಟಿ, ಮತ್ತು ಸರ್ವತುಷ್ಟಿ.

ವಿಭೂತಿ ಪೂಜೆ, ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ, ಪುಟ ೫೩

೧೩೫೦

ಮೆಚ್ಚು ಮೆಯ್ ಜೋಡಾಗಿ, ಹೆಮ್ಮೆ ಕಾಲ್ ಜೋಡಾಗಿ,
ಒದೆದರೂ ಒಲಿಯುವಾ ಮನಸು ಮಾಡಿ

ಏರುವಾ ಪ್ರೇಮವೀರಗೆ ಬೇರೆ ಮೋರೆಯನು
ತೋರುವುದು ತನ್ನೆದೆಯ ಸೂರೆ ನೀಡಿ !

ಅನಿಕೇತನ, ಕಷ್ಟವಯ್ಯಾ ಹೊಗಲು ಕವಿಹೃದಯಕೆ, ಪುಟ ೨

೧೩೫೧

ನಾಮರೂಪ ಕಾಲದೇಶ ನಿಮಿತ್ತಾದಿಗಳಿಂದ ಬದ್ಧವಾದ ಮಾಯಾ ಜಗತ್ತನ್ನು ಉತ್ತರಿಸಿ ಅತೀಂದ್ರಿಯ ಬ್ರಹ್ಮ ವಸ್ತುವನ್ನು ಪರಿಚಯ ಮಾಡಿಕೊಳ್ಳಬೇಕಾದರೆ ಅವಶ್ಯವಾಗಿ ಬೇಕಾಗುವ ಸಲಕರಣೆ ಸಾಹಸಗಳಿಗೆ ವೇದ ಶಾಸ್ತ್ರಗಳು "ಸಾಧನೆ" ಎಂಬ ಹೆಸರನ್ನು ಕೊಟ್ಟಿವೆ. ಅಂತಹ ಸಾಧನೆಯನ್ನು ಕೈಕೊಳ್ಳುವವನೆ ಸಾಧಕನು. ವೈರಾಗ್ಯವು ಸಾಧಕನು ಏರಬೇಕಾದ ಮೊದಲನೆಯ ಮೆಟ್ಟಲು. ವೈರಾಗ್ಯವೆಂದರೆ ರಾಗವಿಲ್ಲದಿರುವುದು ; ಎಂದರೆ ನಿಷ್ಕಾಮತೆ, ನಿಸ್ವಾರ್ಥತೆ ಮತ್ತು ಸಮತೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೩೯

೧೩೫೨

ಯಜ್ಞವೇ ಸೃಷ್ಟಿ ನಿಯತಿರೂಪದ ಋತುಕ್ಕೂ ಮೂಲ. ಮಾನವ ತನ್ನದೆಂದು ಹೇಳಿಹೊಳ್ಳುವ ವಸ್ತು ಪ್ರಪಂಚದಲ್ಲಿ ಯಾವುದೂ ಇಲ್ಲ. ಅವನು ಸ್ವಾರ್ಥಕ್ಕಾಗಿ ಸಂಪಾದಿಸಿದ ಹಣ ಮೊದಲುಗೊಂಡು ಮುಕ್ತಿಗಾಗಿ ಮಾಡುವ ತಪಸ್ಸಿನ ತನಕ ಎಲ್ಲಕ್ಕೂ ಯಜ್ಞವೇ ಮೂಲ ; ಕೊನೆಗೆ ಎಲ್ಲವೂ ಅದರಲ್ಲಿಯೆ ಲಯ ಹೊಂದಬೇಕು.

ಬೆರಳ್ ಗೆ ಕೊರಳ್, ಟಿಪ್ಪಣಿಕೆ, ಪುಟ ೬೪

೧೩೫೩

ನಾನು ಮೊದಲು ಆದರ್ಶ ಸಂನ್ಯಾಸಿಯಾಗಬೇಕೆಂದಿದ್ದೆ. ಸಂನ್ಯಾಸವೆ ಆದರ್ಶಗಳಲ್ಲಿ ಅತ್ಯುತ್ತಮವಾದುದು ಎಂದು ಭಾವಿಸಿದ್ದೆ. ಆದರೆ ವಯಸ್ಸು ಸ್ವಲ್ಪ ಹೆಚ್ಚಾಗುತ್ತ ಬರಲು ಸಂನ್ಯಾಸ ಅಸ್ವಾಭಾವಿಕವಲ್ಲವೆ ಎಂದು ಯೋಚಿಸತೊಡಗಿದೆ. ಆ ಮೇಲೆ ಸಂನ್ಯಾಸ ಬೋಧಿಸುವ ತೀವ್ರತಪಸ್ಯೆಯೂ ಉಗ್ರ ತಿತಿಕ್ಷೆಯೂ ಸಂಪೂರ್ಣವಾಗಿ ಸ್ವಭಾವ ವಿರುದ್ಧ ಎಂದು ನಿರ್ಣಯಿಸಿ, ಸಂನ್ಯಾಸ ಆದರ್ಶಗಳಲ್ಲಿ ಅತ್ಯುತ್ತಮವಾದುದೂ ಅಲ್ಲ, ಉತ್ತಮವಾದುದೂ ಅಲ್ಲ, ಕಡೆಗೆ ಆದರ್ಶವೇ ಅಲ್ಲ ಎಂದು ಸಿದ್ಧಾಂತ ಮಾಡಿ ಅದರ ವಜ್ರ ಪಂಜರದಿಂದ ಹೊರಗೆ ಬಂದೆ.

ನನ್ನ ದೇವರು ಮತ್ತು ಇತರ ಕಥೆಗಳು, ಆದರ್ಶ ಸಾಧನೆ, ಪಾತ್ರ ಕಥಾ ನಾಯಕ, ಪುಟ ೨೨

೧೩೫೪

ಸಾಹಿತಿಯ ಬದುಕಿನ ವೃಕ್ಷ ಮುಗಿಲತ್ತ ಆಕಾಶದೆತ್ತರಕ್ಕೆ ಬೆಳೆಯಬೇಕದರೆ ಅದರ ತಾಯಿಬೇರು ಆಳವಾಗಿ ಇಳಿದು, ಕವಲು ಕವಲಾಗೊಡೆದು, ದಿಕ್ಕು ದಿಕ್ಕಿಗೆ ಪ್ರಸರಿಸಿ, ಆಹಾರ ಸತ್ತ್ವಗಳನ್ನು ಹೀರಿಕೊಳ್ಳಬೇಕಾಗುತ್ತದೆ. ಆ ತಾಯಿಬೇರಿನ ಕವಲುಗಳಲ್ಲಿ ಮುಖ್ಯೋಪಕರಣಗಳಂತಿರುವ ಮೂರನ್ನು ನಾನು ನಮ್ಮ ಪ್ರವರ್ಧಮಾನ ತರುಣರ ಮುಂದಿಡಲು ಬಯಸುತ್ತೇನೆ. ಭಾರತೀಯವಾದ ಪ್ರಾಚೀನ ವಿದ್ಯಾ ಸಂಸ್ಕೃತಿಗಳ ಸಾರಗ್ರಾಹಿಯಾಗಿ ಒಂದು ಹೆಗ್ಗವಲು ಇಳಿಯಬೇಕಾಗುತ್ತದೆ ; ಭಾರತೇತರ

ವಾದ ಉದ್ದಾಮ ವಿದ್ಯಾ ಸಂಸ್ಕೃತಿಗಳ ಸಾರಗ್ರಾಹಿಯಾಗಿ ಇನ್ನೊಂದು ; ಕರ್ಣಾಟಕದ ಭಾಷೆ ಕಲೆ ಸಂಸ್ಕೃತಿ ಇತ್ಯಾದಿಗಳ ಸಾರ ಮಾತ್ರವನ್ನಲ್ಲದೆ ವಿವಿರಗಳನ್ನೆಲ್ಲ ಕೂಲಂಕಷವಾಗಿ ಅರಿಯುವ ಮತ್ತು ಅಭ್ಯಸಿಸುವ ಸಲುವಾಗಿ ಮತ್ತೊಂದು. ಈ ಮೂರನ್ನೂ ಸಾಧಿಸಲು ಸಹಾಯಕವಾಗಿ ಕನಿಷ್ಠ ಪಕ್ಷ ಮೂರಾದರೂ ಭಾಷೆಗಳು ಬೇಕಾಗುತ್ತವೆ. ಒಂದು ಅನಿವಾರ್ಯವಾಗಿಯೆ ಕನ್ನಡ ; ಇನ್ನೊಂದು ಆವಶ್ಯಕವಾಗಿಯೆ ಸಂಸ್ಕೃತ ; ಮತ್ತೊಂದು, ಸದ್ಯದ ನಮ್ಮ ಪರಿಸ್ಥಿತಿಯಲ್ಲಿ, ಇಂಗ್ಲಿಷ್. ಬಹುಶಃ, ಕೆಲವು ಕಾಲದ ಮೇಲೆ, ವ್ಯಾಪ್ತಿಯಲ್ಲಿ ಶಕ್ತಿಯಲ್ಲಿ ಇಂಗ್ಲಿಷ್‌ಗೆ ಹೆಗಲೆಣೆಯಾಗಿ ಪ್ರಪಂಚಕ್ಕೂ ನಮಗೂ ನಡುವೆ ಕಾಲುವೆಯಾಗಬಲ್ಲ ಹಾಗೂ ಸೇತುವೆಯಾಗಬಲ್ಲ ಇನ್ನಾವುದಾದರೂ ಒಂದು ವಿದೇಶೀಯ ಭಾಷೆ. ಕನ್ನಡದಲ್ಲಿ ಏನಾದರೂ ತೂಕವಾದ ಮತ್ತು ನಾಲ್ಕು ಕಾಲ ಬಾಳುವ ಸತ್ತ್ವವುಳ್ಳ ಸಾಹಿತ್ಯ ಸೃಷ್ಟಿ ಮಾಡಬೇಕೆಂದು ಬಯಸುವ ಯಾವ ತರುಣನಾಗಲಿ ಮೇಲೆ ಸೂಚಿಸಿದ ದೀಕ್ಷೆಯಿಂದ ದೂರನಾಗಿಯೂ ಕೃತಕೃತ್ಯನಾಗುತ್ತೇನೆ ಎಂದು ಭಾವಿಸಿದರೆ ಅದು ಅಸಾಧ್ಯ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೪೦-೧

೧೩೫೫

ರಾಮತೀರ್ಥ ! ಚಂದ್ರ, ಆಕಾಶ, ಮುಗಿಲು, ವನ, ಪರ್ವತಶ್ರೇಣಿ, ನದಿ, ಬಂಡೆ, ಮಳಲುದಿಣ್ಣೆ-ಎಲ್ಲವೂ ಮೊದಲಿನಂತೆಯ ನಲಿಯುತ್ತಿದ್ದುವು. ಆದರೆ ಯಾವುದೂ ಸುಂದರವಾಗಿ ಕಾಣಲಿಲ್ಲ. ಅದಕ್ಕೂ ಔದಾರ್ಯಬೇಕು ! ಕಡಿದು ಓಡುವ ನಾಗರ ಹಾವಿನ ಹೆಡೆಯಲ್ಲಿ ಸೊಬಗನ್ನು ಕಾಣಲು ಔದಾರ್ಯವಿರಬೇಕು !

ನನ್ನ ದೇವರು ಮತ್ತು ಇತರ ಕಥೆಗಳು, ಔದಾರ್ಯ, ಪಾತ್ರ ಕಥಾ ನಾಯಕ, ಪುಟ ೪೪

೧೩೫೬

ಪ್ರೇಮ ನಾಮವನಿಟ್ಟ ಮಾತ್ರಕೆ
ಕಾಮಕಾದುದೆ ದಿವ್ಯತೆ ?
ಕಲೆಯ ನೇಣಲಿಕೊಂದುಕೊಂಡರೆ
ಕೊಲೆಗೆ ಬರುವುದೆ ಭವ್ಯತೆ ?

ಪ್ರೇತ ಕ್ಯೂ, ಐಸಡೋರಾ, ಪುಟ ೧೦

೧೩೫೭

....ಅಖಿಲ ಭಾರತದ ಸಮಗ್ರತೆ ಐಕ್ಯತೆಗಳನ್ನು ಅನಂತಕಾಲವೂ ಸಂರಕ್ಷಿಸುವ ನಿತ್ಯಶಕ್ತಿ ಎಂದರೆ ಸಾಹಿತ್ಯ ಶಕ್ತಿಯಾಗಿದೆ. ಆವಿರ್ಭವಿಸಿರುವ ಅಂತಹ ಸಾಹಿತ್ಯ ಶಕ್ತಿ ದೇವತೆಗೆ ಅವಿಚ್ಛಿನ್ನವಾಗಿ ಆರಾಧನೆ ನಡೆದು ಆಕೆಯನ್ನು ನಿರಂತರವೂ ಜಾಗ್ರತವಾಗಿರಿಸುವ ಅಗ್ನಿ ವೇದಿಕೆಯಾಗಿದೆ ಈ 'ಭಾರತೀಯ ಜ್ಞಾನಪೀಠ.'

ಮನುಜಮತ ವಿಶ್ವಪಥ, ಬಹು ಜಿಹ್ವಾ ಭಾರತಿಗೆ ಐಕ್ಯತೆಯ ಆರತಿ, ಪುಟ ೩೭

೧೩೫೮

ಹಿಂದೆ ನಮ್ಮ ಮನಃಶಕ್ತಿ ಒಂದೊ ಎರಡೊ ಮೂರೊ ವಿಷಯಗಳಲ್ಲಿ ನಿಂತು ಅವುಗಳಲ್ಲಿಯೆ ಆಳವಾಗಿ ಪ್ರವೇಶಿಸುತ್ತಿತ್ತು. ಈಗಲಾದರೊ ತಿಳಿಯಬೇಕಾದ ವಿಷಯಗಳ ಸಂಖ್ಯೆಗೆ ಪರಿಮಿತಿಯೆ ಇಲ್ಲ ಎಂಬಂತೆ ತೋರುತ್ತದೆ. ಪರಿಣಾಮವಾಗಿ ಯಾವ ವಿಷಯದಲ್ಲಿಯೂ ಆಳವಾಗಿ ಪ್ರವೇಶಿಸಲು ಸಮಯವಾಗಲಿ ಶಕ್ತಿಯಾಗಲಿ ಆಸಕ್ತಿಯಾಗಲಿ ಬಹು ಜನರ ಪಾಲಿಗೆ ಇಲ್ಲದಂತಾಗಿದೆ. ನಶಿಸಿಹೋಗಿದೆ. ನಮ್ಮ ಆಸಕ್ತಿ ಶಾಖೋಪಶಾಖೆಗಳಾಗಿ ಕವಲೊಡೆದು ಬರಲು ಬರಲಾಗಿ ನಿಂತಿದೆ. ಯಾವ ಕೊಂಬೆಗೂ ಬಲ್ಪಿಲ್ಲ. ತೊಲೆಯಾಗುವ ತೋರವಿಲ್ಲ; ಕಂಭವಾಗುವ ಭಾರವಿಲ್ಲ; ಹೊರೆ ಹೊರುವ ಚೈತನ್ಯವಿಲ್ಲ. ಇನ್ನು ಪೊರಕೆಯಾಗಲು ಮಾತ್ರ ಅರ್ಹವಾಗಿರುವ ಆ ಬರಲು ಕಡ್ಡಿಗಳಿಂದ ಬದುಕಿಗೆ ಉಪಯೋಗವಾಗುವಂತೆ ನಾಲ್ಕಾರು ಕಾಲ ಬಾಳುವ ಮನೆಯನ್ನಾಗಲಿ ಗುಡಿಯನ್ನಾಗಲಿ ಕಟ್ಟುವುದೆಂತು? ಆ ಬಡಕಲು ಆಸಕ್ತಿಗೂ ತನ್ನ ಸುತ್ತುಮುತ್ತಣದರಲ್ಲಿ ತಾತ್ಸಾರ, ತಿರಸ್ಕಾರ. ವೇಗ ಸೌಕರ್ಯ ದೊರಕಿರುವುದರಿಂದ ಅದು ಆರ್ಜೆಂಟೈನ ಭೂ ಕಂಪದ ವಿಚಾರದ ಅನುಕಂಪ ತಾಳುವ ಹೊರೆ ಹೊಣೆಯಿಲ್ಲದ ಕರುಣ ರಸಾನುಭವದ ಸೊಗಸಿಗೆ ಶರಣಾಗಲು ಇಷ್ಟ ಪಡುತ್ತದೆಯೆ ಹೊರತು ಪತ್ರಿಕೆಗಳಿಗೆ ವಿಷಯವಾಗದ ಅನಾಮಧೇಯರಾದ ನೆರೆ ಹೊರೆಯವರ ಹತ್ತಿರದವರ ಕಷ್ಟ ಸಂಕಟಗಳನ್ನು ಅಲಕ್ಷಿಸುತ್ತದೆ. ಮನೆಯ ಹಿಂಭಾಗದ ಗಿರಿನೆತ್ತಿಯಿಂದ ಸೂರ್ಯೋದಯವನ್ನು ಈಕ್ಷಿಸಲಾರದ ಅದು ಯಾವುದೊ ನೂರಾರು ಮೈಲಿ ದೂರವಿರುವ ಬೆಟ್ಟದ ಮೇಲಿಂದ ಸೂರ್ಯಾಸ್ತ ನೋಡಲು ಕೃತಕ ರಸಾವೇಶದಿಂದ ಧಾವಿಸುತ್ತದೆ: ಕಾರಣ–ಮೋಟಾರು ಕಾರಿದೆ, ಪೆಟ್ರೋಲಿದೆ! ಸಾಮಾನ್ಯದಲ್ಲಿ ಸಮೀಪದಲ್ಲಿ ಪರಿಚಿತವಾದುದರಲ್ಲಿ ದೈನಂದಿನ ಜೀವನ ದೃಶ್ಯ ಘಟನೆ ವ್ಯಕ್ತಿ ವ್ಯಾಪಾರಗಳಲ್ಲಿ ನಮ್ಮ ಆಸಕ್ತಿಗೆ ಅರುಚಿಯಾಗಿದೆ. ಇದನ್ನೆಲ್ಲ ಗಮನಿಸಿದರೆ ನಮಗೇನೋ ಒಂದು ಅತೃಪ್ತಿಯ ಅಸ್ವಸ್ಥತೆಯ ಅಶಾಂತಿಯ ಸಾಂಕ್ರಾಮಿಕ ರುಜೆ ತಗಲಿರುವಂತೆ ಭಾಸವಾಗುತ್ತದೆ.

ವಿಭೂತಿ ಪೂಜೆ, ಶ್ರೀ ರಾಮಾಯಣ ದಿವ್ಯಶಿಲ್ಪಿ, ಪುಟ ೧೪೫–೬

೧೩೫೯

ನಮ್ಮಲ್ಲಿ ಸಂಸ್ಕೃತಿಯ ಹೆಸರಿನಲ್ಲಿ, ಮತದ ಹೆಸರಿನಲ್ಲಿ, ಧರ್ಮದ ಸೋಗಿನಲ್ಲಿ, ಪೂರ್ವಿಕರ ಪ್ರಾಚೀನ ವೈಭವಗಳ ಕರ್ಮಕಾಂಡವನ್ನು ಮತ್ತೆ ಜೀರ್ಣೋದ್ಧಾರಮಾಡಿ ಪ್ರತಿಷ್ಠಾಪಿಸುವ ಸ್ವಾರ್ಥತಾಮೂಲವಾದ ಕುರುಡುನೆವದಲ್ಲಿ, ಅವಿವೇಕದ ಮೌಢ್ಯಗಳಿಗೆ ವೈಜ್ಞಾನಿಕತೆಯ ಮತ್ತು ವಿಚಾರದ ಚಿನ್ನದ ನಕಲಿ ಮುಲಾಮು ಹಚ್ಚಿ, ಜನರನ್ನು ದಿಕ್ಕು ತಪ್ಪಿಸಿ, ವಂಚಿಸುವ ಮಹೋದ್ಯೋಗ ನಿರ್ಲಜ್ಜೆಯಿಂದ ಸಾಗುತ್ತಿರುವುದನ್ನು ದಿನದಿನವೂ ನೋಡುತ್ತಿದ್ದೇವೆ. ಅಂತಹ ಆತ್ಮವಂಚನ ಮತ್ತು ಪರವಂಚನಕರವಾದ ಉದ್ಯೋಗ ಪ್ರಸಿದ್ಧರೂ ಪ್ರತಿಷ್ಠಿತರೂ ಆದ ಸ್ವಾರ್ಥಸಾಧಕ ವ್ಯಕ್ತಿಗಳಿಂದಲೆ ಪರಿಪೋಷಿತ ವಾಗುತ್ತಿರುವುದನ್ನು ನೋಡಿದರೆ ಈ ದೇಶದಲ್ಲಿ, ವಿಜ್ಞಾನದ ಯಂತ್ರವಿದ್ಯೆಯಿಂದ

ಪಂಚವಾರ್ಷಿಕ ಯೋಜನೆಗಳು ಮುಂಬರಿದರೂ, ವೈಜ್ಞಾನಿಕ ದೃಷ್ಟಿಯಾಗಲಿ ವಿಚಾರ ವಾದವಾಗಲಿ ವಿಜಯ ಪಡೆಯುವ ಕಾಲ ಹತ್ತಿರದಲ್ಲಿ ಎಲ್ಲಿಯೂ ಗೋಚರವಾಗುತ್ತಿಲ್ಲ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮೂರನೆಯ ಮುದ್ರಣಕ್ಕೆ ಮುನ್ನುಡಿ, ಪುಟ vi

೧೩೬೦

ನಮಗೆ ಏನಾಗಿದೆ ಎಂದರೆ ನಮ್ಮ ತಲೆಯಲ್ಲಿ ಈ ಧರ್ಮ, ಜಾತಿ, ಮತ ಇವುಗಳ ಮೌಢ್ಯ ಒಟ್ಟಾಗಿ ಸೇರಿ ಗೊಂದಲವನ್ನೆ ಎಬ್ಬಿಸಿ ಬಿಟ್ಟಿವೆ. ಅವೆಲ್ಲಾ ನಮಗೆ ಬಲವಾಗಿ ಅಂಟಿಕೊಂಡು ಬಿಟ್ಟಿವೆ. ಅವುಗಳನ್ನು ಬಿಡಿಸುವುದೇ ಕಷ್ಟವಾಗಿದೆ. ಇವುಗಳನ್ನೆಲ್ಲಾ ಬಿಡಿಸಬೇಕಾದರೆ ಒಂದು ಉಪಾಯ–ನಮ್ಮ ಜನಸಾಮಾನ್ಯರಿಗೆ ವಿಚಾರ ದೃಷ್ಟಿಯನ್ನು ಕೊಡಬೇಕು. ನಮ್ಮ ಯಾವ ಯುವಕನಾದರೂ ಇದನ್ನು ಪ್ರಶ್ನಿಸಬೇಕು. ಇಂತಹ ವೈಚಾರಿಕ ಬುದ್ಧಿಯನ್ನು ನೀವು ಅವನಿಗೆ ಕಲಿಸಿಕೊಡಬೇಕಾಗುತ್ತದೆ. ಹಳ್ಳಿಯವರಾಗಲಿ ಪಟ್ಟಣದವರಾಗಲಿ ಯಾರೇ ಆಗಲಿ ಇಂಥವನ್ನು ಪ್ರಶ್ನಿಸಬೇಕು.

ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಅದೇ ಹೆಸರಿನ ಲೇಖನ, ಪುಟ ೨೫

೧೩೬೧

ಯಾವುದಾದರೂ ಒಂದು ಕಾಲಾವಧಿಯಲ್ಲಿ ಪ್ರಕಟವಾದ ಸಾಹಿತ್ಯ ಕೃತಿಗಳಲ್ಲಿ ಸರ್ವಶ್ರೇಷ್ಠವೆಂದು ಪರಿಗಣಿತವಾದುದಕ್ಕೆ ಪ್ರಶಸ್ತಿ ಸಲ್ಲುತ್ತದೆ ಎಂಬುದು ವ್ಯಾವಹಾರಿಕವಾಗಿ ಅನಿವಾರ್ಯವಾಗಿ ಅನುಸರಿಸಬೇಕಾಗಿರುವ ಒಂದು ವಿಧಾನವೆ ಹೊರತು, ಕೇವಲವೆನ್ನಬಹುದಾದ ನಿರಪೇಕ್ಷಸತ್ಯವಾಗಲಾರದು. ಆರಿಸಿಕೊಂಡ ಹಲವಾರು ಉತ್ತಮ ಗ್ರಂಥಗಳಲ್ಲಿ ಯಾವುದಾದರೊಂದನ್ನೆ ಸರ್ವೋತ್ತಮ ಎಂದು ನಿರ್ಣಯಿಸುವುದು ಎಷ್ಟು ಕಷ್ಟದ ಮತ್ತು ಚರ್ಚಾಸ್ಪದ ವಿಷಯವಾಗುತ್ತದೆ ಎಂಬುದು ಎಲ್ಲ ಶ್ರೇಷ್ಠ ವಿಮರ್ಶಕರಿಗೂ ತಿಳಿದ ವಿಷಯವೆ ಆಗಿರುತ್ತದೆ. ಒಂದೊಂದು ದೃಷ್ಟಿಯಿಂದ ಪರಿಶೀಲಿಸಿದಾಗ ಒಂದೊಂದು ಸರ್ವಶ್ರೇಷ್ಠವಾಗಿ ತೋರಬಹುದು. ಪ್ರಶಸ್ತಿ ಪ್ರದಾನದ ಅವಶ್ಯ ನಿಯಮಕ್ಕೆ ಅನುಗುಣವಾಗಿ, ಎಲ್ಲವೂ ಶ್ರೇಷ್ಠವಾಗಿರಬಹುದಾದ ಆ ಉತ್ತಮ ಕೃತಿಗಳಲ್ಲಿ ಯಾವುದಾದಗೊಂದನ್ನು 'ಸರ್ವೋತ್ತಮ' ಎಂದು ನಿರ್ಣಯಿಸಲೆಬೇಕಾಗುತ್ತದೆ. ಅಂದ ಮಾತ್ರಕ್ಕೆ ಉಳಿದವುಗಳ ಶ್ರೇಷ್ಠತ್ವಕ್ಕೆ ಚ್ಯುತಿ ಬಂದಂತಾಗುವುದಿಲ್ಲ; ಅವುಗಳ ಹಿರಿಮೆಯನ್ನು ಅಲ್ಲಗಳೆದಂತಾಯಿತೆಂದು ತಿಳಿದವರಾರೂ ತಿಳಿಯುವುದಿಲ್ಲ.

ಮನುಜಮತ ವಿಶ್ವಪಥ, ಬಹುಜಿಹ್ವಾ ಭಾರತಿಗೆ ಐಕ್ಯತೆಯ ಆರತಿ, ಪುಟ ೪೦

೧೩೬೨

ನಾಟಕದಲ್ಲಿ 'ಕಾವ್ಯ'ದಲ್ಲಿರುವ 'ಶಕ್ತಿ' ಸಂಪೂರ್ಣವಾಗಿ ಪ್ರದರ್ಶಿತವಾಗಲು ಅವಕಾಶವಿಲ್ಲ. ನಾಟಕಕಲೆ ಪಾತ್ರಗಳ ಮೂಲಕವಾಗಿ ಹೊಮ್ಮುವ ಶಕ್ತಿಯನ್ನು ಮಾತ್ರ ತೋರಿಸಬಲ್ಲುದು; ಕವಿ ತಾನೆಯೆ ರಂಗಕ್ಕೆ ಬರುವಂತಿಲ್ಲವಾದ್ದರಿಂದ ಅವನ ವ್ಯಕ್ತಿತ್ವದ ಶಕ್ತ್ಯಂಶ ಪರದೆಯ ಹಿಂದೆ ನಿಲ್ಲಬೇಕಾಗುತ್ತದೆ.

ವಿಭೂತಿ ಪೂಜೆ, 'ಶಕ್ತಿಕವಿ'ರನ್ನ, ಪುಟ ೧೩

೧೩೬೩

ಸಕಲ ಛಂದಸ್ ಸರ್ವ ಮಾರ್ಗ ಶೈಲಿಗಳಮರ ಐಶ್ವರ್ಯ,
ಸರ್ವವೂ ಸಂಗಮಿಸಿದೀ 'ದರ್ಶನಂ' ತಾನಕ್ಕೆ ಕೃತಿಗಳಾಚಾರ್ಯ!

ಪ್ರೇತ ಕ್ಯೂ, ಶ್ರೀ ರಾಮಾಯಣ ದರ್ಶನಂ, ಪುಟ ೧೯

೧೩೬೪

ಮತದ ಮತಿಹೀನತೆಯು
ಸಾಕೆಮಗೆ ; ಬೇಕು ಸನ್ಮತಿಯ ನಾಗರಿಕತೆಯು :
ನರನ ಸನ್ಮತಿಗಿಂತ ಬೇರೆಯ ಜಗದ್ಗುರುವೆ ?

ಕೃತ್ತಿಕೆ, ಬುದ್ಧದೇವ, ಪುಟ ೭೯

೧೩೬೫

ಇತರ ಎಲ್ಲದರಲ್ಲಿಯೂ ಇರುವಂತೆ ಗೊರಕೆಯಲ್ಲಿಯೂ ಸಾತ್ವಿಕ ರಾಜಸ ತಾಮಸಗಳೆಂದು ಮೂರು ವಿಧವಿವೆಯಲ್ಲವೆ ?

ಮಲೆಗಳಲ್ಲಿ ಮದುಮಗಳು, ಪುಟ ೨೩-೪

೧೩೬೬

ಚಕ್ರಾಧಿಪತ್ಯಗಳನಾಳ್ವವರಿಗೇನಿಹುದೆ
ಕವಿಯ ಸಂತೋಷದೊಳಗೊಂದು ಬಿಂದು ?

ಜೇನಾಗುವಾ, ನಾಮಕರಣೋತ್ಸವ, ಪುಟ ૩೨

೧೩೬೭

ಮೂಡುವ ಸೂರ್ಯನಲ್ಲೊಂದು ಸಲಿಲಸೌಂದರ್ಯವಿದೆ. ಮಧ್ಯಾಹ್ನ ಸೂರ್ಯನಲ್ಲೊಂದು ಮಹಾತೇಜಸ್ಸಿದೆ. ಸೂರ್ಯಾಸ್ತದಲ್ಲೊಂದು ಗೌರವಮಯ ಗಾಂಭೀರ್ಯವಿದೆ. ಮಹಾಪುರುಷರ ಜೀವನದಲ್ಲಿಯೂ ಅದೇ ಗುಣಗಣಗಳು ತೋರಿಬರುತ್ತವೆ. ಅವರ ಶೈಶವದಲ್ಲಿ ಮಾಧುರ್ಯವೂ ಯೌವನದಲ್ಲಿ ತಪಸ್ಸೂ ಅವಸಾನಸಮಯದಲ್ಲಿ ಕಾರುಣ್ಯವೂ ಕಂಡು ಬರುತ್ತವೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨೦೮

೧೩೬೮

ಪಾಶ್ಚಾತ್ಯರಲ್ಲಿ ಅನೇಕರು, ವಿಶ್ವವಿದ್ಯಾನಿಲಯಗಳ ಮೆಟ್ಟಲನ್ನು ಕೂಡ ಹತ್ತದೇ ಇರುವವರು, ಎಷ್ಟೋಜನ ವಿಜ್ಞಾನದಲ್ಲಿ ದೊಡ್ಡ ಆವಿಷ್ಕಾರಗಳನ್ನು ಮಾಡಿದ್ದಾರೆ. ಕಾರಣ ಏನೆಂದರೆ ಅವರವರ ಭಾಷೆಗಳಲ್ಲಿ ಅವರು ಚಿಂತನ ನಡೆಸಿದ್ದಾರೆ. ಪುಸ್ತಕಗಳು ಕನ್ನಡದಲ್ಲಿ ಎಲ್ಲಕಡೆಯೂ ಇದ್ದರೆ ಪ್ರತಿಭೆ ಇರುವವರು ತಾನೇ ಓದಿಕೊಳ್ಳುತ್ತಾನೆ, ತಾನೇ ಕೆಲಸ ಮಾಡುತ್ತಾನೆ.

ಮನುಜಮತ ವಿಶ್ವಪಥ, ಕದನಕ್ಕೆ ಸಜ್ಜು, ಪುಟ ೬೧

೧೩೭೯

ನಾನು ಹಿಂದೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗಿ ಧಾರವಾಡಕ್ಕೆ ಹೋದಾಗ ಅಲ್ಲೊಂದು ಪುಸ್ತಕ ಪ್ರದರ್ಶನ ನಡೆಯಿತು. ನಾನೊಂದು 'ಆಲ್ಜೀಬ್ರಾ' ಪುಸ್ತಕವನ್ನು ತೆಗೆದು ನೋಡಿದೆ. ಅ, ಬ, ಕ ಎಂದಿತ್ತು a, b, c ಎನ್ನುವುದಕ್ಕೆ! ನಾನು ಅಂದೇ ಹೇಳಿದೆ: "ನೋಡಿ ಇದು ಕನ್ನಡ ಮಾಧ್ಯಮ ಆದರೆ, ನಾನು ಇದಕ್ಕೆ ಸಂಪೂರ್ಣ ವಿರೋಧಿ. ಇಂಗ್ಲಿಷ್ ಮಾಧ್ಯಮವೆ ಇರಲಿ ಅಂತ ಹೇಳ್ತೇನೆ. ಖಂಡಿತಾ ಬೇಡ ಇದು." ಈ ಅಕ್ಷರಗಳು, ಎಬಿಸಿ, ಸಿಂಬಲ್ಸ್, ಇವೆಲ್ಲ ಹಾಗೆ ಹಾಗೆ ಇರಬೇಕು.

ಮನುಜಮತ ವಿಶ್ವಪಥ, ಕದನಕ್ಕೆ ಸಜ್ಜು, ಪುಟ ೬೦

೧೩೮೦

ಸೃಷ್ಟಿಯಲಿ ಸೃಷ್ಟಿಕರ್ತನು ; ಕವಿಯು ಕವನದಲಿ :
ಒಂದೊಂದು ಉದಯವೂ ಅವತಾರವೆಂದು ತಿಳಿ, !

ಕುಟೀಚಕ, ದೊರಕುವುದು ನಿನ್ನಗುರಿ, ಪುಟ ೧೭

೧೩೮೧

ಶಶಿ ಸೂರ್ಯಗ್ರಹನಿಚಯ ತಾರಾಖಚಿತ ನಭದಿ
ಹಾರುತಿದೆ ನಮ್ಮೀ ಕಲಾವಿಮಾನ ;
ಮುಂದೆನಿತು ದೂರಕೋ ? ಎಂದಾವ ತೀರಿಕೋ !
ತೇಲುತಿಹುದೀ ನಿನ್ನ ಕಮಲಯಾನ !
ಸಂಶಯದಿ ಕಂಪಿಸುವುದೊಮ್ಮೆ
ನನ್ನಾತ್ಮಪಕ್ಷಿ ;
ನಿನ್ನಯ ಮುಗುಳ್ನಗೆಯ ನೆಮ್ಮೆ
ನನಗೆ ಗುರುಸಾಕ್ಷಿ !
ಹಗಲಿರುಳು ಬೆಳಗು ಬೈಗುಗಳುರುಳಿ ಸಾಗುತಿವೆ
ಗಗನದಲಿ ರಂಗೆರಚಿ ಬಂದು ನಿಂದು !
ನಿನ್ನ ಸದ್ದಿನಲಿ ಸನ್ನೆಯಲಿ ಮುಂದೆ ನೋಡಿದರೆ
ಹಬ್ಬಿಹುದು ನೀಲಿಮೆಯ ಶೂನ್ಯ ಸಿಂಧು !

ಕಲಾಸುಂದರಿ, ತಾವರೆಯ ತೇರು, ಪುಟ ೨೮

೧೩೮೨

ಅವಸರದ ಸಂನ್ಯಾಸ
ಜೀವನೋಪಾಯಕ್ಕೆ ಪಥವೆಂದು ತಿಳಿದೆಯಾ ?
ಕಾವಿ ಬರಿ ಮಣ್ಣಲ್ಲ ಕಾಣಯ್ಯ ; ಅದು ಬೆಂಕಿ !
ಅಧಿಕಾರಿ ಉಟ್ಟರದು ಉರಿಗಣ್ಣು ; ನಿನ್ನಂಥ
ಮದಮೋಹಿ ಧರಿಸಿದರೆ ಕೆಮ್ಮಣ್ಣು !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಕಾವಿಯನುಟ್ಟ ತರುಣನೊಬ್ಬನಿಗೆ, ಪುಟ ೬೭

೧೩೭೩

ಇಲ್ಲಿ ಕಲೆಯಲ್ಲಿ ಕ್ರಾಂತಿಯುಂಟಾದರೆ ಯಾರೂ ತಡೆಯುವುದಕ್ಕೆ ಆಗುವುದಿಲ್ಲ. ನೀವು ಬರೀ ಗುಂಡು ಹೊಡೆಯುವುದು, ಕೊಲ್ಲುವುದು ಅದೆಲ್ಲ ಪ್ರಯೋಜನವಿಲ್ಲ. ಹಿಂದೆ ಅದನ್ನೆಲ್ಲ ಮಾಡಿ ಸೋತಿದ್ದಾರೆ. ತಲೆ.....ತಲೆ....ತಲೆಯನ್ನು ಕ್ಲೀನ್ ಮಾಡಬೇಕು. ಉಳಿದಿರುವುದು ಅದು. ಬರಹಗಾರರ ಕೆಲಸ ಅಷ್ಟೆ ಅಲ್ಲ. ನೀವು ಓದಿಯೂ ಹೇಳಬೇಕು, ವಾಚನಮಾಡಿಯೂ ತಿಳಿಸಬೇಕು. ಸಭೆಗಳನ್ನು ಕರೆಯಬೇಕು.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ ! ಪುಟ ೭೭

೧೩೭೪

ಅಪ್ಪಿದರೂ ಮಹಾತ್ಯಾಗಿ ;
ಪರಮಯೋಗಿ ಚುಂಬಿಸಿ !
ಆಲಿಂಗಿಸಿ ನಾ ಮಹರ್ಷಿ ;
ಭೋಗಿಸಿಯೂ ನಾ ತಪಸ್ವಿ ;
ರಸಋಷಿ ಪರಿರಂಭಿಸಿ !

ಅನುತ್ತರಾ, ರಸಋಷಿ ಪ್ರಾರಂಭಿಸಿ, ಪುಟ ೧೪

೧೩೭೫

ಸಾಯಲಿ, ಹಾಳಾಗಲಿ ; ಕೀರ್ತಿಯ ಮುದಿ ಬಾಯಿಗೆ ನೀರು ಬಿಡಿ !
ಮರವೆಯ ಹೊಳೆ ನೀರಲಿ ಹೆಸರಿನ ಹೆಣ ಬೂದಿಯ ತೇಲಿ ಕೊಡಿ !

ಪ್ರೇತ ಕ್ಯೂ, ಪತಿತ ಕವಿಯ ಪ್ರಾರ್ಥನೆ, ಪುಟ ೭

೧೩೭೬

ಯಾವ ದಾರಿಯಲ್ಲಿ ಹೋದರೆ ಸಾರ್ಥಕತೆ ಎಂದು ಹೈಸ್ಕೂಲು ವಿದ್ಯಾರ್ಥಿಗೆ ಗೊತ್ತಾಗುವಂತಿರಬೇಕು. ಎಲ್ಲರೂ ಉತ್ತಮರಾಗಬೇಕು, ಸುಖ ಪಡಬೇಕು, ಸರಿ. ಆದರೆ ಸ್ವಧರ್ಮವನ್ನು ನಿರ್ಲಕ್ಷಿಸಿ ಸಾಹಸಕ್ಕೆ ಕೈಯಿಟ್ಟರೆ ಏನು ಪ್ರಯೋಜನ ? ಆಕಸ್ಮಿಕವನ್ನೆ ಸಾಧಾರಣವೆಂದು ನಂಬಬಾರದು.

ಷಷ್ಟಿನಮನ, ವಿದ್ಯಾರ್ಥಿ ಜೀವನವೂ ಒಂದು ತಪಸ್ಯೆ, ಪುಟ ೧೯೯

೧೩೭೭

'ಶ್ರೀಸಾಮಾನ್ಯ'ವೆ ಭಗವನ್ ಮಾನ್ಯಂ ;
'ಶ್ರೀಸಾಮಾನ್ಯ'ವೆ ಭಗವನ್ ಧನ್ಯಂ !
ಸಾಮಾನ್ಯತೆ ಭಗವಂತನ ರೀತಿ ;
ಸಾಮಾನ್ಯವೆ ದಿಟ ಭಗವತ್ ಪ್ರೀತಿ !
ಸಾಮಾನ್ಯರೊ ನಾವು.

ಇಕ್ಷುಗಂಗೋತ್ರಿ, 'ಶ್ರೀಸಾಮಾನ್ಯ'ರ ದೀಕ್ಷಾಗೀತೆ, ಪುಟ ೧

೧೩೭೮

ಕಾವಿಯೋ ಖಾದಿಯೋ ?
ಅಂತವೋ ಆದಿಯೋ ?
ಯಾವುದೋ ಹಾದಿಯೊಂದನು ಹಿಡಿದು ನಡೆಯಲಿದ್ದೆಡೆಯೆ ಸಿದ್ಧಿ !

ಪಾಂಚಜನ್ಯ, ಮಲ್ಲಗೀತೆ, ಪುಟ ೪೨

೧೩೭೯

.....ಜಗತ್ತನ್ನು ನಾವು ವಿಭಜಿಸಿದ್ದೇವೆಯೆ ಹೊರತು, ಕಾಲಪುರುಷ ಏನೂ ವಿಭಜಿಸಿಲ್ಲ. ಆದ್ದರಿಂದ ಈ ವಿಶ್ವಪ್ರಜ್ಞೆ ನಮ್ಮವರಿಗೆ ಸ್ವಲ್ಪಮಟ್ಟಿಗೆ ಒದಗುವಂತೆ ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಸ್ಥಳ ಕೊಡಬಹುದು.

ವಿಚಾರ ಕ್ರಾಂತಿಗೆ ಆಹ್ವಾನ, ಸಾಹಿತ್ಯ ಚರಿತ್ರಕಾರರಿಗೆ ಸಲಹೆಗಳು, ಪುಟ ೩೬

೧೩೮೦

ನಿರಾಕಾರವಾಗುವುದೇ ನಿರಾಕಾರವನ್ನು ಅರಿಯುವುದು ; ಅಲ್ಲಿ ಅರಿವು ಇರುತ್ತದೆ. ಅಲ್ಲಿ ಮೂರ್ತಿಯೂ ಇರದು ; ಪೂಜೆಯೂ ಇರದು. ಆರಾಧಕ ಆರಾಧ್ಯರಿಗೆ ಅದ್ವಯಭಾವವಿರುತ್ತದೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೫೧

೧೩೮೧

ನೃಪ ಎಂಬ ಹೆಸರೊಡನೆ ಮುಡಿಯೊಂದನಾಂತೊಡನೆ
ಕಳ್ಳರೊಡೆಯನು ಕೃಪೆಯ ಮೂರ್ತಿಯೇನು ?

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ರೈತನ ದೃಷ್ಟಿ, ಪುಟ ೧೫

೧೩೮೨

ಕವನ ಬರೆಯುವುದೇ ತಪ್ಪು.
ಬರಿದೆ ಇದನು ಓದುವವನೊ ?
ಇನ್ನೂ ಬೆಪ್ಪು :
ಬಾ, ಕಾಣ್, ಒಲಿ, ಅಪ್ಪು !

ಕದರಡಕೆ, ನಿತ್ಯಶಾಲಿಕ್ಷೇತ್ರ, ಪುಟ ೬೮

೧೩೮೩

ಅನೇಕರ ಮನಸ್ಸಿನಲ್ಲಿ, ಅದರಲ್ಲಿಯು ಯುವಕರ ಮನಸ್ಸಿನಲ್ಲಿ, ವಿಚಾರವಾದ ಅಂದರೆ ನಾಸ್ತಿಕವಾದ ಎಂಬ ಭಾವನೆ ಇದೆ. ಅನೇಕ ಹಿರಿಯರೂ ಕೂಡ ಆ ಭಾವನೆ ಬರುವ ಹಾಗೆಯೆ ಮಾತನಾಡುತ್ತಾರೆ. ಅದು ಮಾತ್ರ ನಿಮ್ಮ ಗುರಿಯನ್ನು ನೀವೆ ತಪ್ಪಿಸುವ ರೀತಿಯದಾಗುತ್ತದೆ. ನೀವು ಏನೇನು ಸಾಧಿಸಬೇಕು ಅನ್ನುತ್ತೀರೊ ಅದಕ್ಕೆ

ವಿರುದ್ಧವಾಗಿ ನೀವೆ ಹೋದಂತಾಗುತ್ತದೆ. ಏಕೆಂದರೆ ವಿಚಾರವಾದ ಅನ್ನುವುದು ನಾಸ್ತಿಕವಾದ ಅಲ್ಲ.

ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಅದೇ ಹೆಸರಿನ, ಪುಟ ೧೬–೭

೧೩೮೪

ಧೂಳಾಟವಾಡುವುದ ಕಲಿಸೆನಗೆ, ಕಂದ,
ಬಳಲಿ ಬಂದಿಹೆ ಜಗದ ಮರುಳು ರಣದಿಂದ!
ಹೇಮರತುನದ ರಾಶಿಯಾನಂದ ಸಾಕು,
ಕೆಂಧೂಳಿಯಾ ಸಿರಿಯ ಶುಭಶೋಕ ಬೇಕು.

ಮೇಘಪುರ, ಶಿಷ್ಯ, ಪುಟ ೫

೧೩೮೫

ಬಿಡಿಸುವ ಸಮಸ್ಯೆಗಳೇನೋ ಯಾವಾಗಲೂ ಇದ್ದೇ ಇರುತ್ತವೆ. ಎಲ್ಲ ಮುಗಿಯಿತು ಎಂಬ ಕಾಲ ಎಂದಿಗೂ ಬರುವುದಿಲ್ಲ. ನಿರಂತರ ಹೋರಾಟವೆ ಸಜೀವತ್ವದ ಲಕ್ಷಣವಲ್ಲವೆ?

ಮನುಜಮತ ವಿಶ್ವಪಥ, ಬಲಾತ್ಕಾರದ ಇಂಗ್ಲಿಷ್ : ಪ್ರಚ್ಛನ್ನ ಭ್ರಷ್ಟಾಚಾರ, ಪುಟ ೧೨–೩

೧೩೮೬

ಭಾವಕೋಶಪುಷ್ಟಿಗೆ ನೇರವಾಗಿ ನೆರವಾಗದ ಯಾವ ವಿಧಾನವೂ ಅಲಂಕಾರವಲ್ಲ. ಆದ್ದರಿಂದ ಉಪಮಾ ಅಲಂಕಾರವೊಂದೇ ನಿಜವಾದ ಅಲಂಕಾರ. ಉಪಮಾ ಮೂಲವಲ್ಲದ ಅಲಂಕಾರಗಳು ಅಲಂಕಾರಗಳಲ್ಲ. ಅವುಗಳನ್ನು ಅಲಂಕಾರಗಳೆಂದು ಕರೆದರೂ ಔಪಚಾರಿಕ. ಸ್ವಭಾವೋಕ್ತಿ, ವಿನೋಕ್ತಿ, ಸಂದೇಹಾಲಂಕಾರ, ಆಕ್ಷೇಪಾಲಂಕಾರ ಎಂದು ಮೊದಲಾಗಿ ಒಂದೊಂದು ಉಕ್ತಿವೈಚಿತ್ರ್ಯಕ್ಕೂ ಒಂದೊಂದು ಹೆಸರಿಡುತ್ತಾ ಹೋದರೆ ಅದಕ್ಕೆ ಕೊನೆಯೂ ಇಲ್ಲ; ಬೆಲೆಯೂ ಇಲ್ಲ. ವಿದ್ವತ್ತು ಕಣೆಗೆದರಿದ ಎಯ್ಯಮಿಗದಂತೆ ಭಯಂಕರವಾಗುತ್ತದೆ.

ತಪೋನಂದನ, ಮಹೋಪಮೆ, ಪುಟ ೬೩

೧೩೮೭

ಬೇಕಿಹುದು ನನಗೆ ಜಯ–
ದಭಿಮಾನವಲ್ಲ;
ಗೆಲುವೊ? ಸೋಲೋ? ನನಗೆ
ಸುಖವೊಂದೆ ಗೆಲ್ಲ!

ನವಿಲು, ಶರಣು ಹೊಗುವುದೆ ಲೇಸು, ಪುಟ ೮೧

೧೩೮೮

ಪ್ರೇಮದಿಂದಲೆ ಬಂದು,
ಪ್ರೇಮದಲ್ಲಿಯೆ ನಿಂದು,
ಪ್ರೇಮದಲ್ಲಿಯೆ ಸಂದು

ಹೋಗುವೆಮಗೆಲ್ಲ
ಪ್ರೇಮವೇ ಹರಿಯೆಂದು
ರಸಋಷಿಯೆ ಬಲ್ಲ!

ಷೋಡಶಿ, ರಸಋಷಿ, ಪುಟ ೭೩

೧೩೪೯

ಜಡದಿಂದ ಭಿನ್ನವಾದ ಚೈತನ್ಯದ ಲಕ್ಷಣಗಳನ್ನು ಪರಿಭಾವಿಸುವ ಪಕ್ಷದಲ್ಲಿ, ಸರ್ವ ಸಮತ್ವ ಎಂಬುದು ಅವುಗಳಿಗೆ ಸಾವಿಗಿಂತಲೂ ಹೀನತರವಾದ ನೀರಸ ಸ್ಥಿತಿಯಾಗುತ್ತದೆ. ಅದರಲ್ಲಿಯೂ ವ್ಯಕ್ತಿಯ ವ್ಯಕ್ತಿತ್ವವನ್ನು ಪರಮ ಮೌಲ್ಯಗಳಲ್ಲಿ ಒಂದನ್ನಾಗಿ ಪರಿಗಣಿಸುವ ಪ್ರಜಾಸತ್ತೆಯಲ್ಲಂತೂ ವ್ಯಷ್ಟಿಯ ವಿಶಿಷ್ಟತೆಗೆ ಸಮಷ್ಟಿಯ ಸಾಧಾರಣತೆಗೆ ಇರುವಷ್ಟೆ ಸಲ್ಲುತ್ತದೆ. ಆದ್ದರಿಂದ ಸಮಷ್ಟಿಯ ಕ್ಷೇಮವನ್ನು ಕಾಪಾಡುವ ಆತುರದಲ್ಲಿ ವ್ಯಷ್ಟಿಯನ್ನು ಬಲಿಗೊಟ್ಟು ವ್ಯಕ್ತಿಯ ವಿಶಿಷ್ಟತೆಯನ್ನು ನಿರ್ಲಕ್ಷಿಸಿದರೆ ಪ್ರಜಾಸತ್ತೆಯ ಬುಡಕ್ಕೆ ಕೊಡಲಿಯಿಟ್ಟಂತಾಗುತ್ತದೆ.

ಮನುಜಮತ ವಿಶ್ವಪಥ, ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ, ಪುಟ ೧೭

೧೩೫೦

ದೊಡ್ಡದರಲ್ಲಿ ಸುಖವಿದೆ, ಸಣ್ಣದರಲ್ಲಿ ಸುಖವಿಲ್ಲ. ಕವಿಯಾದವನು ಮತಾಚಾರ ಸಂಪ್ರದಾಯಗಳ ಶೃಂಖಲಾಸದೃಶವಾದ ಸಂಕುಚಿತ ದೃಷ್ಟಿಯಿಂದ ವಿಮುಕ್ತನಾಗಿ ಭೂಮವಾದುದರಲ್ಲಿ ಸಂಚರಿಸಬೇಕು. ಅವನ 'ದರ್ಶನ'–ತತ್ತ್ವಮತ ಪಂಥ ಪಂಗಡಗಳಲ್ಲ–ಅವನ 'ದರ್ಶನ' ವಿಜ್ಞಾನದ ನವನವಾವಿಷ್ಕಾರಗಳನ್ನೂ ಪ್ರಾಚ್ಯಪಾಶ್ಚಾತ್ಯಗಳೆಂಬ ಭೇದವಿಲ್ಲದೆ ಎಲ್ಲ ತತ್ತ್ವವಿಚಾರಗಳ ಚಿರಸಾರಾಂಶಗಳನ್ನೂ ಸರ್ವಮತಗಳ ಸಮನ್ವಯ ದೃಷ್ಟಿಯನ್ನೂ ಜೀರ್ಣಿಸಿಕೊಂಡಿರಬೇಕು. ಆ 'ದರ್ಶನ'ದ ಬೃಹದಾಲಿಂಗನಕ್ಕೆ ಯಾವುದೂ ಹೊರಗಾಗಿರಬಾರದು, ಹೊರತಾಗಿರಬಾರದು ; ಅದರಿಂದ ಯಾವುದೂ ತಪ್ಪಿಸಿಕೊಳ್ಳಬಾರದು. ಅಂತಹ ದರ್ಶನದಿಂದ ಹೊರಹೊಮ್ಮುವ ಸಾಹಿತ್ಯ ಜೀವನ ಪಥದಲ್ಲಿ ಮಾರ್ಗದರ್ಶಕ ಜ್ಯೋತಿಯಾಗುತ್ತದೆ ; ಜೀವನ ಸಂಗ್ರಾಮದಲ್ಲಿ ಉತ್ಸಾಹವೀಯುವ ರಣಭೇರಿಯಾಗುತ್ತದೆ ; ಜೀವನದ ನಿರಾಶೆಯಲ್ಲಿ ಆಶಾಕಿರಣವಾಗುತ್ತದೆ. ಬುದ್ಧಿಗೂ ಭಾವಕ್ಕೂ ಕಲ್ಪನೆಗೂ ನೂತನ ಚೇತನಕಾರಿಯಾಗುತ್ತದೆ. ಎಲ್ಲರ ಗೌರವಾದರಗಳಿಗೆ ಪಾತ್ರವಾಗಿ, ಕಳೆದುಕೊಂಡಿರುವ ಸಿಂಹಾಸನವನ್ನು ಮತ್ತೆ ಏರುತ್ತದೆ. ನಮಗಿಂದು ಬೇಕಾಗಿರುವುದು ಅಂತಹ ಸಾಹಿತ್ಯಕ್ಕೆ ಕಾರಣವಾಗುವ ಜೀವನದ 'ದರ್ಶನ'.

ಸಾಹಿತ್ಯ ಪ್ರಚಾರ, ಕಾವ್ಯದ ಕಣ್ಣು ಕವಿಯ ದರ್ಶನದಲ್ಲಿ, ಪುಟ ೩೧–೨

೧೩೫೧

ಪ್ರಾಚ್ಯಪಾಶ್ಚಾತ್ಯ ತತ್ತ್ವಜ್ಞಾನ ಖನಿಗಳಲಿ
ತೊಳತೊಳಲಿ ಹುಡುಕಿ ಬಹುವಜ್ರಗಳನಾಯ್ದು ನಾಂ

ಶ್ರೀಮಂತನಾಗಿರ್ದೊಡಂ, ಹೇ ಪೂರ್ಣ ಯೋಗೀಂದ್ರ,
ಕೊನೆಗೆ ನಿನ್ನೀ ಮೇರುಕೃತಿಯ ದರ್ಶನ ಶಿರದ
ಮೇರುವುನ್ನತಮತಿಯ ಮಾನಸ ಸರೋವರದಿ
ಪೂರ್ಣತೃಪ್ತಿಯನೀಂಟೆ ಶಾಂತವಾದುದು ನನ್ನ
ಧೀತೃಷ್ಣೆ.

ಅಗ್ನಿಹಂಸ, ಶ್ರೀ ಅರವಿಂದರಿಗೆ, ಪುಟ ೮೯

೧೩೯೨

ಮತದ ಹೆಸರಿನಲ್ಲಿ, ಸಮಾಜದ ಕಟ್ಟುಕಟ್ಟಳೆಗಳ ಹೆಸರಿನಲ್ಲಿ, ದೆವ್ವ ಪಿಶಾಚಿ ಗ್ರಹಗಳ ಹೆಸರಿನಲ್ಲಿ, ಮಾಮೂಲುಗಳ ಹೆಸರಿನಲ್ಲಿ ದುರ್ವ್ಯಯವಾಗುತ್ತಿರುವ ಸಂಪತ್ತನ್ನು ತಡೆಗಟ್ಟಿ, ಅದನ್ನು ಹೆಚ್ಚು ಆವಶ್ಯಕವಾಗಿರುವ ಮತ್ತು ಹೆಚ್ಚು ಉಪಯೋಗಕರ ವಾಗಿರುವ ಜೀವನ ಪಥಗಳಲ್ಲಿ ವಿನಿಯೋಗಿಸುವಂತೆ ಮಾಡಬೇಕು.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೧೦–೧

೧೩೯೩

ಬಿದಿ ಕಮ್ಮಾರನು ; ಲೋಕವೆ ಕುಲುಮೆ.

ಕಲಾಸುಂದರಿ, ಬಿದಿ ಕಮ್ಮಾರನು, ಪುಟ ೩೯

೧೩೯೪

ಗರುಕೆ ಮೂಗುತಿಯಂತೆ,
ರನ್ನದ ಸೊಡರಿನಂತೆ ಚೆಲ್ವಿರಿವ ಹುಲ್ಲುಹನಿ :
ಪೋ ! ಇದರ ಮುಂದೆ ಅರಸನ ಸಿರಿಯೆ ? ಕಬ್ಬಿಗನ
ಕಾಲ್ಗಳಡಿ ಚಕ್ರವರ್ತಿಯ ವಿಪುಲ ಸಂಪತ್ತು !

ಪಕ್ಷಿಕಾಶಿ, ಇಬ್ಬನಿ, ಪುಟ ೮೫

೧೩೯೫

ತಾಯಿಯ ಪ್ರೇಮದ ಶಕ್ತಿಯಿಂದಲೇ ಸೃಷ್ಟಿ ಚಕ್ರ
ನಿಲ್ಲದೆ ತಿರುಗುತ್ತದೆ. ಜಗತ್ತಿನ ಆನಂದಕ್ಕೆ ತಾಯಿಯ
ಪ್ರೇಮವೇ ಆಧಾರ. ತಾಯಿಯ ವಾತ್ಸಲ್ಯವನು
ಅನುಭವಿಸದವನ ಬಾಳು ಬಾಳಲ್ಲ, ಅದು ವ್ಯರ್ಥ.
ಆದ್ದರಿಂದಲೆ ಪ್ರೇಮನಿಧಿಯಾದ ಪರಮಾತ್ಮನನ್ನು
ಜಗಜ್ಜನನಿಯೆಂಬ ಭಾವನೆಯಿಂದ ಆರಾಧಿಸುತ್ತಾರೆ.

ನನ್ನ ಗೋಪಾಲ, ಪಾತ್ರ ಗುರು, ಪುಟ ೨೫

೧೩೯೬

ಕೊರಗಲೇಕೆ ? ಮರುಗಲೇಕೆ ?
ಹುಟ್ಟಿ ಬಂದಿಹೆ, ಹಳಿಯಲೇಕೆ ?

ಸುಖವೆ ಬರಲಿ, ದುಃಖ ಬರಲಿ,
ರೋಗ ಭೋಗಗಳೇನೆ ಬರಲಿ,
ಎಲ್ಲ ಹೊತ್ತು ಋಣವ ತೆತ್ತು
ಮುಂದೆ ಪುಣ್ಯದ ಬೀಜ ಬಿತ್ತು.

ಜಲಗಾರ, ಪಾತ್ರ ಕಬ್ಬಿಗೆ, ಪುಟ ೨೬-೭

೧೩೯೭

ತಿಮಿರಕ್ಕೆ ರವಿ ದಸ್ಯು.
ಜ್ಞಾನಮಜ್ಞಾನಕ್ಕೆ ದಸ್ಯು. ಮಾಯೆಯನಳಿಸಿ
ಮನುಜಹೃದಯವನಾಕ್ರಮಿಸುತಾತ್ಮಮಂ ತನ್ನ
ಕೃಪೆಗುಯ್ವ ಪರಮಾತ್ಮನುಂ ದಸ್ಯು. ನಾಂ ನಿನಗೆ
ನೀನೆನಗೆ ದಸ್ಯು. ಕೇಳಂತೆವೋಲಾರ್ಯರುಂ
ದಸ್ಯುಗಳ್ ದಂಡಕಾರಣ್ಯ ದಕ್ಷಿಣ ಜನದ
ನಯಕೆ.

ಶ್ರೀ ರಾಮಾಯಣ ದರ್ಶನಂ, ಅತ್ರಿಯಿಂದಗಸ್ತ್ಯಂಗೆ, ಪಾತ್ರ ರಾಮ, ಪುಟ ೧೯೮

೧೩೯೮

ಓ ನಿನ್ನ ನೀಲಿ ಸೀರೆಯ ಕನ್ನೆ ?
ಸಂಸ್ಕೃತಿಯ ರಸಿಕತೆಯ ಕಲೆಯ ಕಾವ್ಯದ ಪೆಂಪು
ನೀನಿರಲ್ಕೆಲ್ಲ ಸಾಧನೆಗೆ ನೀಂ ಫಲಂ, ಸಿದ್ಧಿ !
ನೀನಿಲ್ಲದಿಹ ತಪಕಿಹುದೆ ಶುದ್ಧಿ, ಮೇಣ್ ಬುದ್ಧಿ ?

ಕೃತ್ತಿಕೆ, ಹೆಣ್ಣು, ಪುಟ ೧೫

೧೩೯೯

ಸ್ವಾರ್ಥತೆಗೆ ತಕ್ಕ ಪ್ರಾಯಶ್ಚಿತ್ತ ದೊರಕುವುದು
ವಿಧಿನಿಯಮ, ಅದನು ಮೀರುವವರಾರು ಇಲ್ಲ !

ಕಾನೀನ, ಪಾತ್ರ ಗಂಗಾಮಾತೆ, ಪುಟ ೫

೧೪೦೦

ಸದ್ಯಃಫಲಾಕಾಂಕ್ಷೆಗಿಂತಲೂ ಕೀರ್ತಿಮೋಹದಿಂದ ಹೆಚ್ಚು ಅನಾಹುತವಾಗುತ್ತದೆ ! 'ಕೀರ್ತಿ ಮಹಾಪುರುಷರಲ್ಲಿರುವ ಕಟ್ಟ ಕಡೆಯ ದೌರ್ಬಲ್ಯ' ಎಂಬುದಾಗಿ ಒಂದು ಸುಭಾಷಿತವಿದೆ. ಮಹಾಪುರುಷರಾದವರೇ ಈ ಯಶೋಲೋಭಕ್ಕೊಳಗಾದ ಮೇಲೆ ಸಾಮಾನ್ಯರ ಗತಿಯೇನು ? ಆದರೂ ಮಹಾ ಪುರುಷರಲ್ಲಿರುವ ದೌರ್ಬಲ್ಯವನ್ನು ಸಾಮಾನ್ಯರೂ ಪೋಷಿಸಬೇಕೆಂಬ ನಿಯಮನಿಲ್ಲ. ಮಹಾ ಪುರುಷರಿಗೆ ಬಂದೊದಗುವ ಕೀರ್ತಿಯ ಪ್ರಭಾವದಿಂದಲೇ ಅದರ ಲೋಭವನ್ನು

ಗೆಲ್ಲಲು ಅವರಿಂದ ಸಾಧ್ಯವಾಗದಿರಬಹುದು. ನಮಗೆ ಅದರ ಅಭಾವವೇ ಅದರ ಲೋಭದಿಂದ ಪಾರಾಗಲು ಸಹಾಯವಾಗುತ್ತದೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೧೩

೧೪೦೧

ವೈರಾಗ್ಯವೊಂದು ಕಡೆ ತನ್ನ ಮಹಿಮೆಯ ತೋರಿ
ಕೈಚಾಚಿ ಕರೆಯುತ್ತಿದೆ ;
ಸೌಂದರ್ಯವೊಂದು ಕಡೆ ತನ್ನ ಮೋಹವ ಬೀರಿ
ಮೈಚಾಚಿ ಸೆಳೆಯುತ್ತಿದೆ.
ಒಂದುಕಡೆ ಸ್ವಾತಂತ್ರ್ಯ ಒಂದುಕಡೆ ಮಾಧುರ್ಯ,
ನಡುವಿಹೆನು ಬಟ್ಟೆಗೆಟ್ಟು,
ಮುಕ್ತಿಯನ್ನೊಪ್ಪಲೋ ? ಮಾಯೆಯನ್ನಪ್ಪಲೋ ?
ತಿಳಿದ ನೀನೆನ್ನನಟ್ಟು !

ಅಗ್ನಿಹಂಸ, ಶರಣು, ಪುಟ ೧೪

೧೪೦೨

ಅಣಕಿಸೆಮ್ಮನು, ವೀರ ; ಹೆಂಬೇಡಿಗಳು ನಾವು !
ನಿನ್ನ ಗದೆಯಾಘಾತದಿಂದೆಚ್ಚರುವೆವು !
ಹೇ ವೀರಮೂರ್ತಿಯೇ, ಹಂಪೆಯೀ ಮಸಣದಲಿ
ಭೈರವಾಶ್ರುವ ಚೆಲ್ಲಿ ಮೌನದಲಿ ನಿಲ್ಲು !
ಯಾತ್ರಿಕರ ಹೃದಯದಲಿ ಕೆಚ್ಚೂರಿ, ನೆಚ್ಚೂರಿ,
ಹೆಂಬೇಡಿಗಳನೆಲ್ಲ ನಿನ್ನೆಡೆಗೆ ಗೆಲ್ಲು !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಹಂಪೆಯ ಭೀಮ, ಪುಟ ೪೦

೧೪೦೩

ಬಾಳನು ಬೈಯದೆ, ಎದೆಗುಂದದಳದೆ,
ಭೂಮಿಯು ನಿನ್ನ ಮಡಿಲೆಂದು ತಿಳಿದು
ಋತದಿಂದ ಬಾಳಿ ಮೃತ್ಯುವನಣಕಿಪ
ಶಾಂತಿಯ ಬಲವೆನಗಿರಲಿ ಸದಾ.

ಕೊಳಲು, ಬಿನ್ನಹ, ಪುಟ ೪೮

೧೪೦೪

ಪಂಡಿತನು ನಾಚಿದರೆ
ಕವಿಗದೇನು ?
ಕೆಲಸವೆಲ್ಲವ ಬಿಟ್ಟು,
ಹೊತ್ತಗೆಯನತ್ತಿಟ್ಟು,

ಸೊಗದ ಹನಿ ತೊಯ್ಸುತಿಹ
ಕಣ್ಣೆವೆಯ ಮುಚ್ಚದೆಯೆ
ನೋಡುತ್ತ, ದಿಟ್ಟಿಯೊಳೆ
ಕಂದಂಗೆ ಮುತ್ತಿಟ್ಟು,
ನಲಿಯುವನು ನನ್ನೊಳಿಹ
ಕವಿಯು ತಾನು !

ಮೇಘಪುರ, ಕೇಳಿದೊಡನೆಯೆ ಬೀದಿವಾದ್ಯ, ಪುಟ ೭-೮

೧೪೦೫

ನಿನ್ನೊಂದು ಚುಂಬನದಿ ಮೈಮರೆಯುವುದು ನೋವು ;
ನಂದನದಿ ಹಾಲಾಗಿ ಹರಿಯುವುದು ಬಾಳು !
ನಿನ್ನ ಆಲಿಂಗನದಿ ಸವಿಯಾಗುವುದು ಸಾವು :
ಮತ್ತೆ–ನಾನರಿಯೆ, ಏನಹುದೊ ನೀನೆ ಹೇಳು !

ಕದರಡಕೆ, ಸಂಗೀತಕೆ, ಪುಟ ೩೧

೧೪೦೬

ಅಪ್ರಕಟಮಾದೊಡೇನ್ ?
ಅಪುಣ್ಯರೂಪದಿ ತೋರ್ದೊಡೇನ್ ? ತಪಂ ತಪಮಲ್ತೆ !

ಶ್ರೀ ರಾಮಾಯಣ ದರ್ಶನಂ, ತಪಸಿದ್ಧಿ, ಪುಟ ೮೭೪

೧೪೦೭

ಕವಿಕೃತಿ ಸಂಪೂರ್ಣವಾಗಿ ಲೋಕಭಿನ್ನವಾದುದೂ ಅಲ್ಲ; ಸಂಪೂರ್ಣವಾಗಿ ಲೋಕಾಶ್ರಯವಾದುದೂ ಅಲ್ಲ; ಸಂಪೂರ್ಣವಾಗಿ ಲೋಕಾನುಕೃತಿಯೂ ಅಲ್ಲ. ಅದೊಂದು ಅನನ್ಯಪರ–ತಂತ್ರವಾದ ಪ್ರತಿಮಾ.

ದ್ರೌಪದಿಯ ಶ್ರೀಮುಡಿ, ಕವಿಕೃತಿಯ ಅನನ್ಯ ಪರತಂತ್ರತೆ, ಪುಟ ೭೨

೧೪೦೮

ಕಾಡಿನ ಮೂಲೆಯ ಕೆರೆಯ ಕೆಸರಿನಲಿ
ಮುಡಿದ ಹೂವನು ನೀ ಕೊಯ್ದೆ ;
ಕರುಣದಿ ಕೃಪೆಯಲಿ ಕೊರಳ ಹಾರದಲಿ
ಪ್ರೇಮದಿ ಚುಂಬಿಸಿ ನೀ ನೆಯ್ದೆ !

ಕಲಾಸುಂದರಿ, ಪಂಕಜ, ಪುಟ ೫೬

೧೪೦೯

ನಮ್ಮ ಬಾಳಿದು ಬಿಡುವೆ ಇಲ್ಲದ ಕಠಿನ ಸಾಧನವು ;
ನಮ್ಮ ಸೇವೆಯೆ ಮಣ್ಣು ಬೋಧಿಸಿದೆಮ್ಮ ವೇದಾಂತ !

ಕೊಳಲು, ಸುಗ್ಗಿ ಹಾಡು, ಪುಟ ೩೦

೧೪೧೦

ನನ್ನ ನುಡಿಗೆ ಅರ್ಥವೇನೊಂದಿಲ್ಲ ; ಅದರಿಂದ
ನೀನು ತಿಳಿಯಬೇಕಾದುದೇನೊಂದಿಲ್ಲ. ಆದರೂ ನೀನು
ಕಿವಿಗೊಟ್ಟು ಕೇಳುತಿರುವೆ ; ಅರ್ಥವಾದಂತೆ ಕಿರುನಗೆಯ
ಬೀರುತಿರುವೆ.
ಏಕೆನೆ, ನಿನಗೆನ್ನ ತೊದಲು ಮಾತಿನಲಿ ಬಹು
ಪ್ರೀತಿ, ಓ ನನ್ನ ಪ್ರೇಮಮೂರ್ತಿ.

ಕಿಂಕಿಣಿ, ನಿನ್ನ ಪ್ರೀತಿ, ಪುಟ ೩೦

೧೪೧೧

'ಹುಟ್ಟು, ಹುಟ್ಟಿಸು, ಸಾಯು !' ಪ್ರಕೃತಿಯೀ ಆಣತಿಗೆ
ಸೃಷ್ಟಿ ತಲೆಬಾಗುತಿದೆ ಕಾಮಕ್ಕೆ ಶರಣಾಗಿ.
ಕಟ್ಟಿ ಸೊಂಟವನದನು ಮೂದಲಿಸಿ ಗೆಲ್ಲುವುದೆ ಭೀಷಣ
ತಪಸ್ಸಾಧನೆ !

ಅಗ್ನಿಹಂಸ, ಮುಕ್ತ ಮಹಾಪುರುಷನಿಗೆ, ಪುಟ ೫೫

೧೪೧೨

ಬದುಕಿನ ಗುರಿ ಶಾಂತಿ. ಬದುಕನ್ನು ವಿಷಯವಾಗುಳ್ಳ ಸಾಹಿತ್ಯದ ಕೊನೆಯ ಗುರಿಯೂ ಶಾಂತರಸಾಸ್ವಾದನೆಯೆ.

ಷಷ್ಠಿನಮನ, ತೀರ್ಥಯಾತ್ರೆ, ಪುಟ ೯೫

೧೪೧೩

ಸೋಜಿಗಮೇಕೆ ?
ದಿವ್ಯಕಲೆಯೆಲ್ಲಿರ್ದೊಡಲ್ಲಿಗೈತಹರಲ್ತೆ ದಲ್
ಪಗಲಿರುಳ್ ವಿಶ್ವಮಂ ಸಂಚರಿಸಿ ರಕ್ಷಿಸುವ
ಸತ್‌ಶಕ್ತಿಗಳ್, ದೇವತಾತ್ಮಗಳ್ ? ನಮ್ಮವೋಲ್
ಅವರುಂ ರಸಪ್ರಿಯರ್. ನಮಗಿಂ ಮಿಗಿಲ್ ! ರಸಮೆ
ಅವರುಣ್ಬಮೃತಮಲ್ತೆ ?

ಶ್ರೀ ರಾಮಾಯಣ ದರ್ಶನಂ, ಕನಕಲಂಕಾನ್ವೇಷಣಂ, ಪಾತ್ರ ವಿಭೀಷಣ, ಪುಟ ೪೬೭

೧೪೧೪

ದರ್ಶನ ದೀಪ್ತವಾದ ಕವಿಕ್ರತು ತನ್ನ ಮಹಾ ಅನುಭವಕ್ಕೆ ಮೆಯ್ ನೀಡಲು ಮನುಷ್ಯಲೋಕಾನುಭವದ ಪ್ರತಿಮಾ ಸಾಮಗ್ರಿಯನ್ನು ಅಮಾನುಷವೆಂಬಂತೆ ಉಪಯೋಗಿಸುತ್ತದೆ. ಕಲೆಯ ಪ್ರಕಾಶನಕ್ಕೆ ಸಾಮಗ್ರಿಯನ್ನು ಒದಗಿಸುವ ಆ

ಅನುಭವ ಅಪರಿಚಿತ ಭೂಮಿಕೆಯದಾಗಿರುವುದರಿಂದ ಆ ಅಲೌಕಿಕತೆಯನ್ನು ಪ್ರಕಟಿಸುವುದಕ್ಕೆ ಲೋಕಾತಿಕ್ರಾಂತ ವಿಧಾನಗಳನ್ನೆ ಅನುಸರಿಸಬೇಕಾಗುತ್ತದೆ.

ರಸೋ ವೈ ಸಃ, ಕವಿ ನಿರ್ಮಿತಿಯಲ್ಲಿ ನಿಯತಿಕೃತ ನಿಯಮರಾಹಿತ್ಯ, ಪುಟ ೭-೮

೧೪೧೫

ಒಲುಮೆಗಿಂತಲು ಬೇರೆ ಪರಮಾರ್ಥವಿನ್ನಿಲ್ಲ
ನರರ ಬದುಕಿನಲಿ ; ಮೇಣರ್ಥಹೀನಂ ಬಾಳ್ಕೆ
ಒಲುಮೆಯಿಲ್ಲದಿರೆ. ಹೂವಿಂದೆ ಸಾರ್ಥಕವಹುದು
ಗಿಡದ ಬಾಳಂತೆ ಬಾಳಿಡಕೆ ಒಲುಮೆಯೆ ಹೂವು.
ಒಲಿದೊಲ್ಮೆ ಮರಳಿಯೊಲಿಯದಿರೆ ಒಲುಮೆಗದೆ ಕೊಲೆ !

ಚಿತ್ರಾಂಗದಾ, ಐದನೆಯ ಪರ್ವಂ, ಪಾತ್ರ ಚಿತ್ರಾಂಗದೆ, ಪಂಕ್ತಿ ೧೭೬೧-೫, ಪುಟ ೬೬

೧೪೧೬

ಬೋಳ್, ಕಾವಿ, ರುದ್ರಾಕ್ಷಿ, ವೈರಮುಡಿ, ಜರಿಯ ಮಡಿ,
ಕತ್ತಲೆಯ ಗರ್ಭಗುಡಿ ಮೊದಲಾದುವೆಲ್ಲವಂ
ತೊರೆದು, ಸತ್ಯದ ದಿಗಂಬರತೆಯೊಂದನೆ ಒಲಿದು,
ಭೂಮ್ಯಂತರಿಕ್ಷಗಳ ಸಂಧಿಸುತ ನಿಂತಿರುವ,
ಸೌಂದರ್ಯದಾಚೆಯಾ ಭವ್ಯತಾಸೀಮೆಯಲಿ
ನೆಲೆಸಿರುವ, ಓ ಎನ್ನ ನಗ್ನಗುರುದೇವ, ನಮೋ !
ನಿನ್ನ ಈ ದಿವ್ಯ ನಿರ್ಲಕ್ಷತಾ ಸ್ಥಿರತೆಯಂ,
ಭೂಮತೆಯ ಭವ್ಯತೆಯ ಬ್ರಹ್ಮಗಾಂಭೀರ್ಯಮಂ
ದಯಪಾಲಿಸೆನಗೆಂದಿಗೂ ಮಾಸದಂದದಲಿ,
ಮೇಣನವರತ ಬೆಳಗುವೋಲ್

ಅಗ್ನಿಹಂಸ, ಶ್ರವಣಬೆಳ್ಗೊಳದ ಗೋಮಟೇಶ್ವರನ ಸಾನ್ನಿಧ್ಯದಲ್ಲಿ, ಪುಟ ೬೬

೧೪೧೭

ಬರಿದಲಾ
ಪ್ರಕೃತಿ ಸೌಂದರ್ಯಮಿನಿಯನ ಚೆಲ್ವುವೆರಸದಿರ್ಪಾ
ಪೆಣ್ಗೆ !

ಶ್ರೀ ರಾಮಾಯಣ ದರ್ಶನಂ, ಮಮತೆಯ ಸುಳಿ ಮಂಥರೆ, ಪುಟ ೬೬

೧೪೧೮

ದಶಶಿರಂ ಪೊತ್ತುಯ್ದುದೊರ್ಬ್ಬನ ಸತಿಯನಲ್ತು ;
ಸತಿತನವನುಯ್ದಿಹನ್ ! ಪುರುಷನಿರಲಾಗದೀ
ಧರೆಯ ಮೇಲೊರ್ವನುಂ ಪೊರೆಯುದನ್ನೆಗಮಾ
ಸತೀತ್ವಮಂ !

ಶ್ರೀ ರಾಮಾಯಣ ದರ್ಶನಂ, ರಣವ್ರತರ್ ವಹ್ನಿರಂಹರ್, ಪಾತ್ರ ವಹ್ನಿ, ಪುಟ ೫೫೭

೧೪೧೯

ಚಿಂತೆಯ ರೆಕ್ಕೆಗೆ ದಣಿವೂ ಇಲ್ಲ, ನಿಲೆ ಕಾಲೂ ಇಲ್ಲ :
ಜ್ಞಾನದ ಅಕೂಲ ಪಾರಾವಾರಕೆ ದಡಗಿಡವೊಂದಿಲ್ಲ !

ಕುಟೀಚಕ, ಬ್ರಹ್ಮದ ಲಾಂಗೂಲ, ಪುಟ ೧೨

೧೪೨೦

ವಿದ್ಯೆ ಎಂಬುದು ಪರೀಕ್ಷೆಗಳನ್ನು ಪ್ಯಾಸಮಡಿದ ಮಾತ್ರದಿಂದ ಲಭಿಸುವುದಿಲ್ಲ. ....ಸಾಕ್ರೆಟೀಸನು ಎಂ. ಎ., ಪ್ಯಾಸಮಾಡಿದ್ದನೇ ? ವೇದವ್ಯಾಸರು ವಿಶ್ವವಿದ್ಯಾನಿಲಯದಲ್ಲಿ ಓದಿದ್ದರೇ ? ವಾಲ್ಮೀಕಿಗೆ ಸ್ಕಾಲರ್‌ಷಿಪ್ ಬರುತ್ತಿತ್ತೇ ?

ನನ್ನ ದೇವರು ಮತ್ತು ಇತರ ಕಥೆಗಳು, ಪಾತ್ರ ಕಥಾನಾಯಕ, ಆದರ್ಶ ಸಾಧನೆ, ಪುಟ ೨೬

೧೪೨೧

ಅಂಧ ಪ್ರಶ್ನೆಗಳಾವು ಆಶ್ಚರ್ಯಗಳ ಮಧ್ಯೆ !
ಪ್ರಶ್ನೆ ಆಶ್ಚರ್ಯಗಳೆ ನಮ್ಮ ಉನ್ನತ ವಿದ್ಯೆ !

ಕೃತ್ತಿಕೆ, ಕಾಲ, ಪುಟ ೮೪

೧೪೨೨

ಪಾಪದ ರಥಂ ಸ್ವಾರ್ಥಸಾಧನೆಗೆ ಕೆಲವೊರ್ಮೆ
ಪಿಡಿದಪುದು ಪುಣ್ಯಪಥಮಂ !

ಶ್ರೀ ರಾಮಾಯಣ ದರ್ಶನಂ, ಶುಕಂ ಸಾರಣಂವೆರಸಿ, ಪಾತ್ರ ರಾಮ, ಪುಟ ೬೧೩

೧೪೨೩

ಇಷ್ಟವಿರಹಕೆ ಮಿಗಿಲ್ ಸಂಕಟದ ಶಿಕ್ಷೆಯಂ
ಸೃಜಿಸಬಲ್ಲನೆ ನರಕ ಶಿಕ್ಷಾಚಾರ್ಯನಾದೊಡಂ ?
ಮಣಿವುದು ಮಹಾ ಶೈಲಮುಂ ತಾಂ ಲತಾಂಘ್ರಿಗೆ
ಶಿರಂಬಾಗಿ. ಬೇರೆ ಕೋರೆಗಳೇಕೆ ನರಕದಾ
ವ್ಯಾಘ್ರಂಗೆ, ನರಹೃದಯ ರಕ್ತಮಾಂಸವನೀಂಟಿ
ತಿಂದು ತೇಗುವ ನಾಶದೌತಣಕೆ ?

ಶ್ರೀ ರಾಮಾಯಣ ದರ್ಶನಂ, ಪಾದುಕಾ ಕಿರೀಟಿ, ಪುಟ ೧೭೫–೬

೧೪೨೪

ಮಹಾಕಾವ್ಯಗಳಿಗೆ ಮಾತ್ರ ಮಹೋಪಮೆ ಒಪ್ಪುತ್ತದೆ. ಗರುಡಗಂಬವಿರಬೇಕಾದ್ದು ಗುಡಿಯ ಮುಂದೆ. ಕೊಟ್ಟಿಗೆಯಲ್ಲಿ ಅದನ್ನು ನಟ್ಟು, ಅದಕ್ಕೆ ದನದ ದಾವಣಿ ಕಟ್ಟಿದರೆ ! ದೇವಾಲಯಗಳಲ್ಲಿದ್ದ ಉತ್ತಮ ಶಿಲ್ಪಕೃತಿಯ ಎನಿತೋ ಕಲಾಶಿಲೆಗಳು ಮುಖ ಅಡಿಯಾಗಿ, ಬೆನ್ನು ಮೇಲಾಗಿ, ಬಟ್ಟೆಯೊಗೆಯುವ ಕಲ್ಲು ಚಪ್ಪಡಿಗಳಾಗಿಲ್ಲವೇನು ? ಯಾವುದರ ಪ್ರಯೋಜನ ಎಲ್ಲಿ ಪರಮವೋ ಅಲ್ಲಿದ್ದರೆ

ಅದಕ್ಕೆ ಪರಮ ಬೆಲೆ: ಸೌಂದರ್ಯ ಜಗತ್ತಿನಲ್ಲಿ ಅದೇ ಪರಮ ಕಲೆ. ರಸದ ಅರಸಿಕೆಗೆ ಔಚಿತ್ಯವೆ ಸಿಂಹಾಸನ.

ತಪೋನಂದನ, ಮಹೋಪಮೆ, ಪುಟ ೬೭-೮

೧೪೨೫

ಹದಿಬದೆಗೆ ತೋರ್ದಪುದು ತನ್ನಿನಿಯನೊರ್ವನೊಳೆ
ಸರ್ವ ಮನುಜರ, ಮತ್ತೆ ಸರ್ವಲೋಕದ ಸರ್ವ
ವೈವಿಧ್ಯಮಂ. ಪ್ರೇಮನಿಷ್ಠೆಯ ಪತಿಗುಮಂತೆ
ತನ್ನ ಸತಿಯೊಳೆ ತೋರ್ದಪುದು ಸರ್ವ ಲಲನೆಯರ
ಸರ್ವಶೃಂಗಾರಮುಂ!

ಶ್ರೀ ರಾಮಾಯಣ ದರ್ಶನಂ, ಪಂಚವಟಿಯ ಪರ್ಣಕುಟಿ, ಪಾತ್ರ ರಾಮ, ಪುಟ ೨೨೦

೧೪೨೬

ಲ್ಯಾಬೋರೇಟರಿಯಲ್ಲಿ ನಾವು ಪದಾರ್ಥಗಳನ್ನು ವಿಭಜಿಸುತ್ತೇವಲ್ಲ ಹಾಗೆ! ಮುಕ್ತಿಯೋಗ್ಯರು ಅಂತ ಒಂದು ಗುಂಪಂತೆ; ತಮೋಯೋಗ್ಯರು ಅಂತ ಒಂದು ಗುಂಪು. ಅವರು ನರಕಕ್ಕೇ ಹೋಗುವಂತೆ . ಈ ನಿತ್ಯ ಸಂಸಾರಿಗಳು ಅಂತ ಒಂದು ಗುಂಪು. ಅವತು ಹುಟ್ಟುವುದು ಸಾಯುವುದು, ಹುಟ್ಟೋದು ಸಾಯೋದು– ಇದರೊಳಗೇ ಸುತ್ತುತ್ತಾ ಇರತಕ್ಕಂಥವರು, ಅವರಿಗೆ ಮುಕ್ತಿಇಲ್ಲ. ಇದನ್ನು ಆ ಸ್ವಯಂ (ಶ್ರೀಮಧ್ವ) ಆಚಾರ್ಯರು ಹೇಳಿಬಿಟ್ಟರೂ ಅಂತ ಎಲ್ಲರೂ ಒಪ್ಪಿಕೊಂಡು, ಅದಕ್ಕೇನು ವ್ಯಾಖ್ಯಾನ ಟೀಕೆ ಟಿಪ್ಪಣಿಗಳನ್ನು ಬರೆದದ್ದೂ ಬರೆದದ್ದೆ! ಈ ಆಚಾರ್ಯರ ದೃಷ್ಟಿ ಲೋಕ ಜೀವನಕ್ಕೆ ಎಷ್ಟು ಅಪಾಯಕಾರಕ? ನೋಡಿ ಸ್ವಲ್ಪ. ಈಗ ಒಬ್ಬ ತಾನು ಮುಕ್ತಿಯೋಗ್ಯ ಅಂತ ತಿಳಿದುಕೊಂಡುಬಿಟ್ಟ ಅಂದರೆ ಅವನು ಏನೆ ಮಾಡಲಿ, ಕೊಲೆ ಮಾಡಲಿ, ಹಾದರ ಮಾಡಲಿ ಅವನು ಮುಕ್ತಿಯೋಗ್ಯನಾದುದರಿಂದ ಅವನಿಗೆ ಮುಕ್ತಿ ದೊರಕಿಯೇ ದೊರಕುತ್ತದೆ. ಇಷ್ಟು ಖಾತ್ರಿ ಆದ ಮೇಲೆ ಅವನೇಕೆ ಕೊಲೆ ಮಾಡಬಾರದು? ಹಾದರಮಾಡಿ ಸುಖಪಡಬಾರದು? ಏಕೆಂದರೆ ಮುಕ್ತಿ ಅವನಿಗೆ ಕಟ್ಟಿಟ್ಟ ಬುತ್ತಿ. ಹಾಗೆಯೆ ಈ ನಿತ್ಯ ನಾರಕಿ. ಇವನು ಕೊನೆಗೆ ನರಕಕ್ಕೇ ಹೋಗುತ್ತಾನೆ! ಏನೇಮಾಡಲಿ ಬಿಡಲಿ, ಅವನು ನರಕದಲ್ಲಿ ಎಂದೆಂದಿಗೂ ಬಿದ್ದಿರಬೇಕಾಗುತ್ತದೆ. ಅವನು ತಪಸ್ಸು ಮಾಡಿದರೂ ಒಂದೇ, ಕೊಲೆ ಮಾಡಿದರೂ ಒಂದೇ, ಧ್ಯಾನ ಮಾಡಿದರೂ ಒಂದೇ, ಹಾದರ ಮಾಡಿದರೂ ಒಂದೇ, ಎಂತಿದ್ದರೂ ನರಕಕ್ಕೇ ಹೋಗುತ್ತಾನೆ. ಆದ್ದರಿಂದ ಎಷ್ಟು ತಪಸ್ಸು ಮಾಡಲಿ, ಏನೇ ಮಾಡಲಿ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಅವನು ತಾನು ಇಹದಲ್ಲಿ ಮಜವಾಗಿರಲು ಏನು ಬೇಕಾದರೂ ಮಾಡುತ್ತೀನಿ ಎಂದು ಸುಳ್ಳು, ಮೋಸ, ಕಳವು, ಕೊಲೆ, ಹಾದರ ಏನನ್ನು ಬೇಕಾದರೂ ಮಾಡಲು ಹೇಸುವುದಿಲ್ಲ. ಇದೇ ತತ್ವವನ್ನು ನಿತ್ಯ ಸಂಸಾರಿಗಳೂ ಒಪ್ಪಿ, ಎಂತಿದ್ದರೂ ನಮ್ಮ ಪಾಡು: ಹುಟ್ತೀವಿ, ಸಾಯ್ತೀವಿ, ಹುಟ್ಟು ಸಾವಿನ ಚಕ್ರದಲ್ಲಿ ಸುತ್ತುತ್ತಲೇ ಇರುವುದು. ನಾವು ಹೇಗೆ ಬೇಕಾದರೂ

ಬದುಕುತ್ತೇವೆ ಎಂದರೆ ಏನು ಗತಿ ? ಈ ತತ್ತ್ವವನ್ನು ಒಪ್ಪಿ ಅನುಸರಿಸಿದರೆ ಸಮಾಜವೇ ಅಲ್ಲೋಲ ಕಲ್ಲೋಲವಾಗಿ ಬಿಟ್ಟೀತು. ಆದರೆ ಈ ತತ್ತ್ವವನ್ನೇ ಅನುಸರಿಸಿಕೊಂಡು ದೊಡ್ಡದೊಂದು ಶಾಸ್ತ್ರಗೀಸ್ತಮಾಡಿ, ಮಜಾ ಮಾಡ್ತಾ ಇದ್ದಾರೆ ನೋಡಿ !

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ ! ಪುಟ ೫೯–೬೦

೧೪೨೭

'ಅರಿವಾ'ಸೆಯ ಮಾಯಾ ಬಂಧ ;
'ಇರು'ವುದೆ ಮುಕ್ತಿಯ ಆನಂದ !
'ಅರಿವಾ'ಸೆಯ ಬಿಡು ; 'ಇರು'ವಾಸೆಯ ತೊಡು !

ಪಕ್ಷಿಕಾಶಿ, ಇಂತಹ ಸುಂದರ ಪ್ರಾತಃಕಾಲದಿ, ಪುಟ ೧೫

೧೪೨೮

ಗತಕಾಲದ ಭವಭವದಾಚೆಯ ಕವಿಜನ್ಮದೊಳಾನಂದು
ಹೃದಯದಿ ಸಾಕ್ಷಾತ್ಕರಿಸಿದ ರಸಚಿಂತನಬಿಂದು,
ಆಶಿಸಿಯೂ ವಾಗ್ ರೂಪವ ಧರಿಸದ ಕೃತಿಯೊಂದು,
ಲೋಕಾಲೋಕದೊಳೆನ್ನಂ ಪುಡುಕತಲೈತಂದು
ಯಾಚಿಸುತಿಹುದೀ ಕವನಾಕೃತಿಯಂ ಪಕ್ಷಿಯವೋಲಿಂದು !

ಅನಿಕೇತನ, ಪಕ್ಷಿ, ಪುಟ ೫

೧೪೨೯

ಬಳ್ಳಿ
ಹೂ ಹಡೆವುದಲ್ತೆ ? ಸಾಮಾನ್ಯ ಪಾಮರ ದೃಷ್ಟಿ
ಕಾಣದದರಲಿ ಕೃತಿರಹಸ್ಯದ ಪವಾಡಮಂ ;
ಬ್ರಹ್ಮಶಿಲ್ಪಿಯ ಪರಮ ಕಲೆಯ ಕೈವಾಡಮಂ
ಕಂಡು ರೋಮಾಂಚ ರಸವಶನು ಕವಿ ! ತವ ಸೃಷ್ಟಿ
ಕವಿಕೃತಿಗೆ ಕೀಳಲ್ಲ.

ಜೇನಾಗುವಾ, ಗರ್ಭಗುಡಿ, ಪುಟ ೧೮

೧೪೩೦

.....ಸಣ್ಣ ಸಣ್ಣ ಸವಕಲು ಮಾತುಗಳನ್ನು ಉಪಯೋಗಿಸಿ, ನಿಂದಿಸಿ, ಬೆಳೆಯಲಿರುವ ಚೇತನಗಳನ್ನು ನಿರುತ್ಸಾಹಗೊಳಿಸಬಾರದು, ಅವಹೇಳನ ಮಾಡಬಾರದು. ಅದಕ್ಕಿಂತಲೂ ಅಪೇಕ್ಷಣೀಯವಾದದ್ದು ಮೆಚ್ಚಿಗೆಯ ಕೆಲಸ, ಪ್ರೋತ್ಸಾಹದ ಕೆಲಸ, ಧೈರ್ಯ ಹೇಳುವ ಕೆಲಸ ಮಾಡಬೇಕಾಗುತ್ತದೆ. ಆ ರೀತಿ ನಮ್ಮ ಮನೋಧರ್ಮ ಮುಂದುವರಿಯಬೇಕೆಂಬುದು ನನ್ನ ಆಸೆ. ವಿಮರ್ಶೆಯ ಸೋಗುಹಾಕಿಕೊಂಡು ಪರಸ್ಪರ ನಿಂದೆ, ಅಸೂಯೆ ಮತ್ತು ದ್ವೇಷ ತೊಲಗಬೇಕು.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೧೫

೧೪೩೧

ಶೂದ್ರರೊಳ್
ಕವಿವರ್ಯರುದಿಸುವರೆ ? ಹುಟ್ಟುವರೆ ಪಂಡಿತರ್ ?
ಜನಿಸುವರೆ ಶಿಲ್ಪಿಗಳ್ ? ಗಾಯಕರ್ ? ಯೋಗಿಗಳ್ ?
ಅಸದಳಂ !

ಜಲಗಾರ, ಪಾತ್ರ ಎರಡೆಯನ ಪಾರ್ವ, ಪುಟ ೧೩-೪

೧೪೩೨

ಎಲ್ಲಿಯೂ ನಿಲ್ಲದಿರು ;
ಮನೆಯನೆಂದೂ ಕಟ್ಟದಿರು ;
ಕೊನೆಯನೆಂದೂ ಮುಟ್ಟದಿರು ;
ಓ ಅನಂತವಾಗಿರು !
ಓ ನನ್ನ ಚೇತನ,
ಆಗು ನೀ ಅನಿಕೇತನ !

ಅನಿಕೇತನ, ಅನಿಕೇತನ, ಪುಟ ೬೦

೧೪೩೩

ಕವಿಗಳ ಕಾರ್ಯದ ಮಹತ್ತು ಕಡೆಯದೂ ಅಲ್ಲ; ಕೀಳಾದದೂ ಅಲ್ಲ..... ಕವಿಗಳು ತಮ್ಮ ಗಾನದ ಇಂದ್ರಜಾಲದಿಂದ ಮನಸ್ಸನ್ನು ಎತ್ತಕಡೆಗೆ ಬೇಕಾದರೂ ತಿರುಗಿಸಬಹುದು. ಆದ್ದರಿಂದ ಕವಿಗಳ ಮೇಲಿರುವ ಭಾರ ಅಷ್ಟೇನೂ ಕಿರಿದಲ್ಲ. ಬಹಳ ಪವಿತ್ರತಮವಾದದ್ದು.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೧೩

೧೪೩೪

ಇನ್ನು ಮುಂದೆ ಇಂಗ್ಲಿಷ್ ಹಲವರು ಕಲಿಯುವ ಭಾಷೆಯಲ್ಲ ; ಕೆಲವರು ಕಲಿಯಬೇಕಾದ ಭಾಷೆ. ಇನ್ನು ಮುಂದೆ ಅನೇಕರಿಗೆ ಬೇಕಾದ ಇಂಗ್ಲಿಷಿನ ಮಟ್ಟವೆಂದರೆ ಅದನ್ನೋದಿ ಅರ್ಥಮಾಡಿಕೊಳ್ಳುವಷ್ಟೆ ಹೊರತು ಅದರಲ್ಲಿ ಸಂಭಾಷಿಸುವುದಾಗಲಿ, ಭಾಷಣ ಮಾಡುವುದಾಗಲಿ, ಬರೆಯವುದಾಗಲಿ ಅಲ್ಲ.

ಷಷ್ಠಿನಮನ, ನಮಗೆ ಬೇಕಾಗಿರುವ ಇಂಗ್ಲಿಷ್, ಪುಟ ೭೫-೬

೧೪೩೫

ಅಸ್ಪೃಶ್ಯರನ್ನು ದೇವಾಲಯಗಳಿಗೆ ಪ್ರವೇಶ ಮಾಡಲು ಬಿಡಬೇಕೆಂದು ಹೇಳುತ್ತಿರುವುದು ಉಚ್ಚವರ್ಗದ ಹಿಂದುಗಳ ಪರಿಶುದ್ಧತೆಗಾಗಿ ಮತ್ತು ದೃಷ್ಟಿವೈಶಾಲ್ಯ ಸಾಧನೆಗಾಗಿಯೆ ಹೊರತು ಹರಿಜನರ ಮೋಕ್ಷಕ್ಕಾಗಿಯಲ್ಲ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೯

೧೪೩೬

ರಾಗಸಾಗರದಲ್ಲಿ ಭೋಗಾಭಿಲಾಷೆಗಳ
ಭೈರವ ತರಂಗಗಳು ಅಪ್ಪಳಿಸಲು,
ಲೋಕಮೋಹಕ ಇಂದ್ರಜಾಲ ಸಂಮ್ಮೋಹನಕೆ
ಇಂದ್ರಿಯ ವಿಹಂಗಗಳು ಮನವಳುಕಲು,
ಕ್ಲೈಬ್ಯವನು ಸಂಹರಿಸೊ, ದೌರ್ಬಲ್ಯವನು ದಹಿಸೊ,
ಹೃದಯಕ್ಕೆ ಪೌರುಷವ ದಯಪಾಲಿಸೊ ;
ಮನವು ಸರಿ ಎಂದುದನು ಎದೆಯನನುಸರಿಸುವಂತೆ
ದೃಢತೆಯಾ ನಡತೆಯನು ನನ್ನದೆನಿಸೊ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಕ್ಲೈಬ್ಯವನು ಸಂಹರಿಸೊ, ಪುಟ ೬೫

೧೪೩೭

ಕಾತರದಿ ಹಾತೊರೆದು ಬರುವನ್ನೆಗಂ,
ಕಾಯುವೆನು ನನ್ನೆದೆಗೆ ಬರುವನ್ನೆಗಂ !

ಅಗ್ನಿಹಂಸ, ಕೃಪೆ, ಪುಟ ೧೬

೧೪೩೮

ಒಂದೇ ಕಲೆಯ ಒಂದೇ ಭೂಮಿಕೆಯಲ್ಲಿ, ಸತ್ಯದಲ್ಲಿ ಸಮಾನತೆಗೆ ಹೋರಾಡುವ ಬಹುಸಂಖ್ಯೆಯ ಸಮವಿಷಯ ಕೃತಿಗಳನ್ನು ಪರಸ್ಪರ ಹೋಲಿಸಿ ಯಾವ ಕೃತಿ ತನ್ನ ಪ್ರಚೋದಕಾನುಭವವನ್ನು ಅತ್ಯಂತ ಪೂರ್ಣವಾಗಿ, ಸಮರ್ಪಕವಾಗಿ ಮತ್ತು ರಸವತ್ತಾಗಿ ಸಹೃದಯರ ಹೃದಯಾನುಭವವಾಗುವಂತೆ ಮಾಡಲು ಸಮರ್ಥವಾಗುತ್ತದೆಯೋ ಅದನ್ನು ಉಳಿದೆಲ್ಲವುಗಳಿಗಿಂತಲೂ ಹೆಚ್ಚಿನ ಸತ್ಯವೆಂದೂ ಸೌಂದರ್ಯವೆಂದೂ ಸ್ವೀಕರಿಸುತ್ತೇವೆ.

ತಪೋನಂದನ, ಪ್ರತಿಮಾ ಮತ್ತು ಪ್ರತಿಕೃತಿ, ಪುಟ ೨೯

೧೪೩೯

ಮೆಯ್ಯ ಸಿರಿಯ ಬಹಳ ನೆಚ್ಚಿ
ಎದೆಯ ಮರೆಯ ಬೇಡ, ಹುಚ್ಚಿ !
ಚೆಲುವನೆಲ್ಲ ಕದಿಯೆ ಮುಪ್ಪು
ಒಲುಮೆಯೊಂದೆ ಬದುಕಿಗುಪ್ಪು !
ಬರಿಯ ಮೆಯ್ಯ ಹೆಮ್ಮೆ, ತಪ್ಪು !

ಜೇನಾಗುವಾ. ಬರಿಯ ಮೆಯ್ಯ ಹೆಮ್ಮೆ ತಪ್ಪು, ಪುಟ ೧೫

೧೪೪೦

ನಿನ್ನ ಅವತಾರವೆನ್ನ ಉದ್ಧಾರ ; ಬಾ ದಿವ್ಯ ಮುಕ್ತಿಯೆ

ಅಗ್ನಿಹಂಸ, ಋತಚಿನ್ಮಯೀ ಜಗನ್ಮಾತೆಗೆ, ಪುಟ ೯೭

೧೪೪೧

....ಹಳ್ಳಿಯವನು ಮೂಢನೆಂದು ತಿರಸ್ಕರಿಸಬೇಡ, ಮುಕ್ಕಾಲುಪಾಲು ಜಗತ್ತಿಗೆ ಮೌಢ್ಯವೇ ಆನಂದವಾಗಿರುವುದು.

ಮಲೆನಾಡಿನ ಚಿತ್ರಗಳು, ತೋಟದಾಚೆಯ ಭೂತ, ಪುಟ ೬೨

೧೪೪೨

ತೆಗೆ ! ಜಡವೆಂಬುದೆ ಬರಿ ಸುಳ್ಳು !

ಪಕ್ಷಿಕಾಶಿ, ಶರತ್ಕಾಲದ ಸೂರ್ಯೋದಯದಲಿ, ಪುಟ ೭

೧೪೪೩

ಆರ್ಯ, ಇಸ್ಲಾಂ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳ ಪರಸ್ಪರ ಕ್ರಿಯೆ ಪ್ರತಿಕ್ರಿಯೆಗಳಿಂದ ಮೈದೋರಿದ ಮೊದಲನೆಯ ಮಹಾವ್ಯಕ್ತಿಯೆಂದರೆ ರಾಜಾ ರಾಮಮೋಹನ ರಾಯ. ಐವತ್ತೊಂಬತ್ತು ವರ್ಷಗಳ (ಕ್ರಿ. ಶ. ೧೭೭೪–೧೮೩೩) ಕಾರ್ಯಮಯ ಜೀವಮಾನದಲ್ಲಿ ಆತನು ಎಸಗಿದ ಸುಧಾರಣೆಗಳಿಂದ ಭರತವರ್ಷದ ಸಾಮಾಜಿಕ ಮತ್ತು ಮಾನಸಿಕ ಜೀವನವೆ ಹೊಸದಾಯಿತು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೩

೧೪೪೪

ಆನಂದಕ್ಕೆ ಸೆರೆಯಾಗಬಹುದಾದರೆ ಸೌಂದರ್ಯಕ್ಕೆ ಸೆರೆಯಾಗಬಾರದೇಕೆ ? ಆದರೆ ಸಂನ್ಯಾಸಿಯ ಭಾವಕ್ಕೆ ಸೌಂದರ್ಯವು ಪರಬ್ರಹ್ಮನ ಅಂಶವೇ ಹೊರತು, ಅಹಂಕಾರ ಪೋಷಕವಾದ ಭೋಗವಲ್ಲ ! ಆತನು ಸೊಬಗಿಗೆ ಶರಣಾಗತನಾಗನು ; ಅದರಲ್ಲಿ ತಲ್ಲೀನನಾಗುವನು !

ಸಂನ್ಯಾಸಿ ಮತ್ತು ಇತರ ಕಥೆಗಳು, ಸಂನ್ಯಾಸಿ, ಪಾತ್ರ ಚೈತನ್ಯ, ಪುಟ ೬

೧೪೪೫

ಯುಕ್ತಿಯೆಂಬುದು ಬರಿಯ ಪಾಕಶಾಸ್ತ್ರದ ಶಿಕ್ಷೆ ;
ಭಕ್ತಿಯಾದರೊ ಭಕ್ಷ್ಯ ! ಶಿಕ್ಷಣಂ ಭಕ್ಷಣಮೇ ?
ಅಧ್ಯಯನ ಸಿದ್ಧಿಯಲ್ಲ ?
ಓದಿದರೆ ಸಾಲದೈ ಎಲ್ಲವೂ ಮಾತಿನಮಲ್ಲ,
ಸಾಧನಂಗೈಯಬೇಕಯ್ಯ ! ಹೆಂಡದ ಹೆಸರು
ಮಾದಕವೆ ನೂರಾರು ಮಡಿ ಹೇಳ್ದಡಂ ? ಅಂತೆ
ಬರಿಯೋದುಸಿದ್ಧಿಯಲ್ಲ !

ಅಗ್ನಿಹಂಸ, ಮುಕ್ತ ಮಹಾಪುರುಷನಿಗೆ, ಪುಟ ೫೬

೧೪೪೬

ಓ ಧರ್ಮ,
ನಿನ್ನ ನೊಲಿವುದೆ ಭಕ್ತಿ ; ನೀನಾಗುವುದೆ ಶಕ್ತಿ ;
ನಿನ್ನ ಕೈಂಕರ್ಯದಿಂ ನಿನ್ನ ಗೆಲುವುದೆ ಮುಕ್ತಿ !

ಕೃತ್ತಿಕೆ, ಧರ್ಮ, ಪುಟ ೮೬

೧೪೪೭

ಅಕ್ಷರ ಪ್ರಚಾರಮಾಡುವುದು ಮುಖ್ಯ. ಬ್ರಾಹ್ಮಣನಾದರೂ ಮಾಡಲಿ, ಮುಸಲ್ಮಾನನಾದರೂ ಮಾಡಲಿ, ಯಾರಾದರೂ ಮಾಡಲಿ, ಅಂತಹುದನ್ನೆಲ್ಲ ನೀವು ವಿರೋಧಿಸಬಾರದು. ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಎಲ್ಲೆಲ್ಲಿ ಒಳ್ಳೆಯ ಕೆಲಸ ನಡೆಯುತ್ತಾ ಇದೆಯೋ ಯಾವ ಪಕ್ಷದಿಂದ ನಡೆಯುತ್ತಾ ಇದೆಯೋ ಅದಕ್ಕೆಲ್ಲ ನಿಮ್ಮ ಬೆಂಬಲ ಇರಬೇಕು. ಏಕೆಂದರೆ ನೀವು ಎಲ್ಲವನ್ನೂ ವಿರೋಧಿಸುವ ಮತ್ತೊಂದು ವಿರೋಧ ಪಕ್ಷವಾಗಿ ಉಳಿಯಬಾರದು. **Get away from this negative attitude.** ಯಾವಾಗಲೂ ಸೃಜನ ಕಾರ್ಯ, ಸೃಷ್ಟಿಕಾರ್ಯ ವಿಧ್ಯುಕ್ತವಾಗಿ ನಡೆಯಲಿ ; ಬರಿಯ ನಿಷೇಧ ಅನಾವಶ್ಯಕ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೮೧

೧೪೪೮

ಉತ್ತಮ ಸಾಹಿತ್ಯ ನಮ್ಮನ್ನು ಎಷ್ಟು ಅಂತರ್ಮುಖಿಗಳನ್ನಾಗಿ ಮಾಡುತ್ತದೆಯೊ ಅಷ್ಟೆ ಬಹಿರ್ಮುಖಿಗಳಾಗಿಯೂ ಮಾಡುತ್ತದೆ. ಅವುಗಳೆರಡರ ಸಮತೂಕ ಮತ್ತು ಸಮನ್ವಯದಿಂದಲೇ 'ಮತಿಗೌರವ' ಸಾಧ್ಯ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಲ್ಲಿ ಮತಿಗೌರವದ ಆವಶ್ಯಕತೆ, ಪುಟ ೩೬

೧೪೪೯

ಮುರುಕು ಮನೆಗಳೂ ಓಡುಹೆಂಚಿನ ಮನೆಗಳೂ ಕಲ್ಲು ಕಟ್ಟಣೆಗಳೂ ಕೊರಕಲು ದಾರಿಗಳೂ ಕಿರುಗಲ್ಲಿಗಳೂ ಇರುವ ಅಸಹ್ಯವಾಗಿ ಹೇಸಿಗೆಯಿಂದ ತುಂಬಿದವುಗಳಾಗಿರುವ ಊರುಗಳು ನಮ್ಮಲ್ಲಿ ಎಲ್ಲೆಲ್ಲಿ ಹೋದರೂ ಗೋಚರಿಸುತ್ತವೆ. ಇವೆಲ್ಲ ಹೊರಗಣ್ಣಿಗೆ ಕಾಣುವ ಊರುಗಳು. ಒಳಗಣ್ಣಿಗೆ ಕಾಣುವ ಊರುಗಳನ್ನು ಆ ಊರಿನ ಜನರ ಕಲ್ಪನೆ, ಆಶೆ, ಪ್ರಾರ್ಥನೆ – ಇವು ಸೂಚಿಸುತ್ತವೆ. ಅವರ ಆದರ್ಶವೇನು ? ಅವರು ಏನನ್ನು ಅಪೇಕ್ಷಿಸುತ್ತಾರೇ ? ಏನನ್ನು ಪ್ರೀತಿಸುತ್ತಾರೆ ? ಏನನ್ನು ಬಯಸುತ್ತಾರೆ ? ಅವರ ಆತ್ಮ, ಚೇತನ ಯಾವುದರ ಕಡೆ ಹೋಗುತ್ತದೆ ? ಇವುಗಳಿಂದ ಆ ಪುರವನಿತೆಯ ಅಂತರಂಗರೂಪ ಗೋಚರಿಸುತ್ತದೆ.

ಷಷ್ಟಿನಮನ, ವಿಶ್ವಾವಿದ್ಯಾ ಮತ್ತು ಪ್ರಸಾರಾಂಗ, ಪುಟ ೧೫೬

೧೪೫೦

ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಪ್ರಸಿದ್ಧರೂ ಪೂಜ್ಯರೂ ಆಗಿರುವ ಮಹಿಳೆಯರೆಲ್ಲರೂ ತಪಸ್ಸಿಲ್ಲದೆ ಆ ಮಹತ್ತಿಗೇರಿಲ್ಲ ಎಂಬುದು ನಿರ್ವಿವಾದವಾಗಿದೆ.

ತಪೋನಂದನ, ಮಹಾಶ್ವೇತೆಯ ತಪಸ್ಸು, ಪುಟ ೭

೧೪೫೧

ಮಹಾಭಿಕ್ಷೆಯನ್ನು ನೀಡುವ ಶಕ್ತಿ ಔದಾರ್ಯಗಳು ಮಹಾಮಾತೆಗಲ್ಲದೆ ಇನ್ನಾರಿಗಿರುವುವು ?

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೮೯

೧೪೫೨

ಬಣಗು ಬಣ್ಣನೆ ಬೇಕೆ, ತಿಳಿಯಲ್ಕೆ
ಸಾಮಾನ್ಯಮಂ ? ರಸಮೊಳದೆ ಮಿಗಿಲ್, ಸಾಮಾನ್ಯಕಿಂ ?

ಶ್ರೀ ರಾಮಾಯಣ ದರ್ಶನಂ, ನೀಂ ಸತ್ಯವ್ರತನೆ ದಿಟಂ, ಪುಟ ೩೩೨

೧೪೫೩

ದೇವರು ಅವತರಿಸಿ ಅಜ್ಞಾನದ ಕತ್ತಲೆ ಮುತ್ತಿರುವ ನೀರಸಾಚಾರಗಳ ಶುಷ್ಕ ಕಾನನಕ್ಕೆ ಬೆಂಕಿಯಿಟ್ಟು ಜೀವನವನ್ನು ಉಜ್ವಲಗೈಯುತ್ತ ಮುಂದುವರಿದಿರೆ, ಪೂಜಾರಿ ಅನಿವಾರ್ಯವಾಗಿ ಅವನನ್ನು ಹಿಂಬಾಲಿಸಿ, ಪಂಚಪಾತ್ರೆಯ ತೀರ್ಥದಿಂದ ಆ ಜ್ವಾಲೆಯನ್ನು ಆರಿಸಿ, ಬೂದಿಯನ್ನು ಒಟ್ಟುಮಾಡಿ, ಅದರ ಪವಿತ್ರತೆಯನ್ನು ಸಾರಿ ಸಾರಿ, ಹಂಚಿ, ಲಾಭ ಪಡೆಯುತ್ತಾನೆ. ಕೆಲವು ಸಾರಿ ಆರಿಹೋದ ಬೆಂಕಿಯನ್ನು ಪುನರುದ್ದೀಪನಗೊಳಿಸುವ ಗೋಜಿಗೆ ಹೋಗದೆ ಬೂದಿಗಾಗಿ ತನ್ನ ನೆತ್ತರನ್ನೂ ಚೆಲ್ಲಿ ಇತರರಿಂದಲೂ ಚೆಲ್ಲಿಸುತ್ತಾನೆ.

ಸ್ವಾಮಿ ವಿವೇಕಾನಂದ, ಪುಟ ೧೦೩

೧೪೫೪

ಸರಪಣಿಗಳು ಎಂದಿನಂತೆ
ಮೈಯ ಸುತ್ತಿವೆ !
ಕಬ್ಬಿಣವದು ಕಾಣದಂತೆ
ಹೂವು ಮುತ್ತಿವೆ !
ಹೊಟ್ಟೆ ಬರಿದು ; ಹಿಟ್ಟೆಯಿಲ್ಲ.
ಮೈ ಬತ್ತಲೆ ; ಬಟ್ಟೆಯಿಲ್ಲ.
ನನ್ನ ನಾನೆ ಪೊರೆಯುವಂತೆ
ನನಗೆ ಶಕ್ತಿ ದೊರಕಿತಂತೆ !
ಎಂಥ ಶಕ್ತಿಯೋ ?

ಪಾಂಚಜನ್ಯ, ಭರತಮಾತೆ, ಪುಟ ೩೭

೧೪೫೫

ತಾಯಿಯ ಮುದ್ದು ತುಟಿಗಳಿಂದ ಹೊರಸೂಸುವ ಮುದ್ದಿನ ಮೆಲ್ನುಡಿಗಳು ಸುಮಧುರ ಮಂಜುಳವಾದುವು. ಮೂಡುದೆಸೆಯ ಮುಂಬೆಳಗಿನಲ್ಲಿ ಬೀಸಿಬರುವ ಸುಸಿಲುಸಿರಿನಿಂದ ತಲೆದೂಗುವ ಮಲ್ಲಿಗೆಯ ಹಸುರುಹೊದರಿನಲ್ಲಿ ನನೆಕೊನೆಯೇರಿ

ರುವ ಕುಡಿಗೊನರುಗಳಿಂದ ಒಯ್ಯೊಯ್ಯನೆ ಕೆಳಗುದುರಿ ಚಳಿಗಾಲದ ಕುಳಿರಹನಿಗಳಿಂದ ನಳನಳಿಸುವ ಹೊಸ ಹಸುರಿನ ಹಸಲೆಯನ್ನು ಚುಂಬಿಸುವ ಅಚ್ಚೆಲರುಗಳಂತೆ ತಾಯಿಯ ಮುದ್ದಿನ ಮಾತುಗಳು ಎಳೆಮಕ್ಕಳ ಮೆಲ್ಲೆದೆಗಳ ಮೇಲೆ ಬೀಳುತ್ತವೆ. ಅವುಗಳಿಗೆ ವೇದವಾಕ್ಯಗಳ ಪ್ರಭುತ್ವವಿಲ್ಲ. ಶಾಸ್ತ್ರಸೂತ್ರಗಳ ಕಾಠಿಣ್ಯ ಸೂಕ್ಷ್ಮತೆಗಳಿಲ್ಲ. ಕಾವ್ಯಗಳ ಮೋಹ ಪ್ರಲೋಭನಗಳಿಲ್ಲ. ಆದರೂ ಅವುಗಳ ಕಾರ್ಯ ವೇದ ಶಾಸ್ತ್ರ ಕಾವ್ಯಗಳ ಕಾರ್ಯವನ್ನು ಮೀರಿರುತ್ತದೆ. ತಾಯಿಯ ಮಾತುಗಳಲ್ಲಿ ಮಗುವಿನ ಹೃದಯ ಅಂತರಾಳಗಳಲ್ಲಿ ಅಡಗಿ ಹೊರಡಲು ಸಮಯವನ್ನೇ ಹೊಂಚುತ್ತಿರುವ ಗೂಢಶಕ್ತಿಗಳನ್ನು ಹೊರಗೆಳೆಯುವ ಸಾಮರ್ಥ್ಯವಿದೆ. ಆ ದೃಷ್ಟಿಯಿಂದ ನೋಡಿದರೆ ಜನಾಂಗ ನಿರ್ಮಾಪಕರು ತಾಯಂದಿರೇ. ಜನಾಂಗ ವಿನಾಶಕರೂ ಅವರೇ. ದೇಶವು ಭೀರುಗಳಿಂದ ತುಂಬಿದ್ದರೆ ಅದಕ್ಕೆ ಅವರೇ ಕಾರಣ ಅಥವಾ ದೇಶವು ವೀರರಿಂದ ತುಂಬಿದ್ದರೂ ಆ ಕೀರ್ತಿಗೆ ಮಾತೆಯರೇ ಅರ್ಹರು. ದೇಶದ ಮೇಲ್ಮೆ ಕೀಳ್ಮೆಗಳೆಲ್ಲ ತಾಯಂದಿರ ಕೈಲಿವೆ.

ಸ್ವಾಮಿ ವಿವೇಕಾನಂದ, ಪುಟ ೨೮

ಗಳ೫೬

ವಿಜ್ಞಾನ, ಸಾಹಿತ್ಯ, ಇತಿಹಾಸ, ರಾಜ್ಯಶಾಸ್ತ್ರ, ಮನಶಾಸ್ತ್ರ, ತತ್ತ್ವಶಾಸ್ತ್ರ, ಸಮಾಜ ಶಾಸ್ತ್ರ ಮೊದಲಾದ ಎಲ್ಲ ಶಾಸ್ತ್ರ ವಿಷಯದ ಅಧ್ಯಾಪಕರೂ ಈ ನಿಟ್ಟಿನಲ್ಲಿ ದುಡಿಯಬೇಕಾಗಿದೆ. ದೂರ, ಎತ್ತರದಲ್ಲಿ, ಸಾಮಾನ್ಯರಿಗೆ ಎಟುಕದ ಎತ್ತರದಲ್ಲಿ, ಸಾಮಾನ್ಯರಿಗೆ ನಿಲುಕದ ದೂರದಲ್ಲಿ, ಸಂಸ್ಕೃತದ ದುರ್ಗಮ ಶಿಖರಗಳಲ್ಲಿ, ಇಂಗ್ಲಿಷಿನ ಕಂಟಕಮಯ ಔನ್ನತ್ಯಗಳಲ್ಲಿ, ಅನ್ಯಭಾಷೆಗಳ ದುರ್ಜ್ಞೇಯ ಗುಹಾಂಗಣಗಳಲ್ಲಿ, ಶಿಲಾಪೀಠಸ್ಥವೋ ಸಿಂಹಾಸನಸ್ಥವೋ ತಪೋಮಗ್ನವೋ ಆಗಿರುವ ವಿಶ್ವವಿದ್ಯೆಯನ್ನು ನಾಡಿನ ಮೂಲೆಮೂಲೆಯ ಗುಡಿಸಲುಗಳಿಗೂ ಕೊಂಡೊಯ್ಯುವ ಅವಶ್ಯಕಾರ್ಯದಲ್ಲಿ ವಿಶ್ವವಿದ್ಯಾನಿಲಯಗಳು ತಮ್ಮ ಗರ್ವೋನ್ನತ ಉದಾಸೀನತೆಯನ್ನು ಕಿತ್ತೊಗೆದು, ಕಿರೀಟಶಿರ ತಾಟಸ್ಥ್ಯ ಧೋರಣೆಯಿಂದ ಪಾರಾಗಿ, ಅಜ್ಞಾನ ಮೌಢ್ಯ ಅವಿವೇಕಗಳ ವಿರುದ್ಧ ನಾವು ಹೂಡುವ ಯುದ್ಧದಲ್ಲಿ ಇದು ತುರ್ತುಪರಿಸ್ಥಿತಿಯೆಂದು ಭಾವಿಸಿ, ಅಚಲನಿಷ್ಠೆಯಿಂದ ಅವಿಲಂಬವಾಗಿ ಮುಂದುವರಿಯಲಿ ಎಂದು ನಾನು ಈ ಸಂದರ್ಭದಲ್ಲಿ ಕವಿ ಹೃದಯ ಕಾತರತೆಯಿಂದ ವಿಜ್ಞಾಪಿಸುತ್ತೇನೆ.

ಮನುಜಮತ ವಿಶ್ವಪಥ, ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ, ಪುಟ ೨೪-೫

ಗಳ೫೭

ಮಾನವರ ಭಕ್ತಿಯೇ ದೇವರಿಗೆ
ಶಕ್ತಿ! ನರಭಕ್ತಿಯಳಿದರೆ ಎಲ್ಲಿ ಹರಶಕ್ತಿ?

ಕಥನ ಕವನಗಳು, ಕರಿಸಿದ್ದ, ಪುಟ ೩

೧೪೫೮

ಹೇ ರಾಜಕಾರಣಿ, ಹೇ ಮಂತ್ರಿವರೇಣ್ಯ, ಹೇ ಅಧಿಕಾರಿ ಸರ್ವೋತ್ತಮ, ಹೇ ವಣಿಗ್ವರ, ಹೇ ಶ್ರಮಜೀವಿ, ಹೇ ಅಧ್ಯಾಪಕ ಮಹಾಶಯ, ಓ ನೇಗಿಲಯೋಗಿ, ನೀನು ಯಾರೇ ಆಗಿರು, ಎಲ್ಲಿಯೆ ಇರು, ಕನ್ನಡವನ್ನು ಕೈಬಿಡದಿರು....ಇದು ನಿನ್ನ ಭಾಷೆ ; ಇದು ದೇಶ ಭಾಷೆ ; ಇದು ಸಾವಿರಾರು ವರ್ಷಗಳ ಸುಪುಷ್ಪ ಸಾಹಿತ್ಯ ಭಾಷೆ ; ಇದು ಮಹಾಕವಿಗಳನ್ನೂ, ಶಿಲ್ಪಿಗಳನ್ನೂ, ರಾಜಾಧಿರಾಜರನ್ನೂ ವೀರಾಧಿವೀರರನ್ನೂ ರಸ ಋಷಿ ದಾರ್ಶನಿಕರನ್ನೂ ಹಡೆದಿರುವ ಭಾಷೆ ....ನಿನ್ನ ತಾಯಿ ರಾಣಿಯಾಗಿದ್ದ ಳೆಂಬುದನ್ನು ಮರೆತುಬಿಡುವೆಯ ? ಸ್ವತಂತ್ರನಾದ ಮೇಲೆಯೂ ಆಕೆಯನ್ನು ತೊತ್ತಾಗಿರಿಸುವೆಯ ?

ವಿಚಾರ ಕ್ರಾಂತಿಗೆ ಆಹ್ವಾನ, ಕರ್ಣಾಟಕ : ಇಟ್ಟ ಹೆಸರು ಕೊಟ್ಟ ಮಂತ್ರ, ಪುಟ ೯೩

೧೪೫೯

ಭೂಮದ ಅನುಭೂತಿ ಬರಿಯ ವೈಯಕ್ತಿಕ ಭಾವದ ಅನುಭವ ಮಾತ್ರವಲ್ಲ ; ಅದು ವಸ್ತು ; ಅದು ಶಕ್ತಿ , ನಿಗ್ರಹಾನುಗ್ರಹ ಸಮರ್ಥವಾದ ಚೈತನ್ಯವೂ ಆಗುತ್ತದೆ.

ರಸೋ ವೈ ಸಃ, ಭೂಮಾನುಭೂತಿ, ಪುಟ ೮೭

೧೪೬೦

ಈ ವರ್ಷದ ಎಸ್. ಎಸ್. ಎಲ್. ಸಿ. ಪರೀಕ್ಷೆಗಾಗಿ ಇಟ್ಟಿರುವ 'ಟೆಕ್ಸ್ಟ್' ತೆಗೆದುಕೊಂಡು ಅದರಲ್ಲಿರುವ ಕೆಲವು ಪದ್ಯಭಾಗಗಳನ್ನು ಓದಿ ನೋಡಿ. ಅವು ಗಳನ್ನು ಇಂಗ್ಲಿಷಿನಲ್ಲಿಯೆ ವಿವರಿಸಿದರೆ ವಿದ್ಯಾರ್ಥಿಗಳಿಗೆ ಹೇಗೆ ತಾನೆ ತಿಳಿದೀತು ! ಅನೇಕ ಮಕ್ಕಳಿಗೆ ಇಂಗ್ಲಿಷ್ ಗಂಧವೆ ಗೊತ್ತಿಲ್ಲ. ಹೋಗಲಿ, ಅವರಿಗೆ ಆ ಪದ್ಯಗಳಲ್ಲಿ ಬರುವ ವಿಷಯವಾದರೂ ತಿಳಿಯಲೆಂದರೆ, ಇಂಗ್ಲಿಷ್ ಉಪಾಧ್ಯಾಯರು ಕನ್ನಡದಲ್ಲಿ ವಿವರಿಸಿ ಪಾಠ ಹೇಳುವುದಿಲ್ಲ. ಕನ್ನಡದಲ್ಲಿ ಪಾಠ ಹೇಳಿದರೆ ಕೆಲವರು ತಮ್ಮ ಘನತೆಗೆ ಧಕ್ಕೆಯಾಗುವುದೆಂದು ಭಾವಿಸುವವರಿದ್ದಾರೆ. ಕೆಲವರಿಗೆ ಮೇಲಿನ ಅಧಿಕಾರಿಗಳ ಭೀತಿ ಇರಬಹುದು. ಈ ಸ್ಥಿತಿಯಲ್ಲಿ ಮಕ್ಕಳಿಗೆ ಆಗುತ್ತಿರುವ ನಷ್ಟವನ್ನು ಯಾರೂ ಗಮನಿಸುತ್ತಿಲ್ಲ. ಉಪಾಧ್ಯಾಯರು ತಮ್ಮ ಹೃದಯವನ್ನು ಶೋಧಿಸಿಕೊಳ್ಳಬೇಕಾಗಿದೆ. ಎಲ್ಲರೂ ಈ ಪರಿಸ್ಥಿತಿಯನ್ನು ಯೋಚಿಸಿ ಮುಂದೆ ಇಂಗ್ಲಿಷ್ ಕಲಿಸುವ ವಿಧಾನವನ್ನೆ ಬದಲಾಯಿಸಬೇಕು.

ಷಷ್ಟಿನಮನ, ಭಾರತದಲ್ಲಿ ಇಂಗ್ಲಿಷಿನ ಸ್ಥಾನ, ಪುಟ ೧೧೬

೧೪೬೧

ಮಾತೃಭಾಷೆಯ ಮೂಲಕವಾಗಿ ನಡೆಯುವ ಶಿಕ್ಷಣವೇ ಸರ್ವೋತ್ಕೃಷ್ಟ ವಾದುದೆಂಬುದು ಎಂದೂ ಚರ್ಚೆಯ ವಿಷಯವಲ್ಲ.

ಮನುಜಮತ ವಿಶ್ವಪಥ, ಕನ್ನಡ ನಾಡಿನ ರಾಜಧಾನಿಯಲ್ಲಿ, ಪುಟ ೫೧

೧೪೬೨

ಈಶಕೃಪೆಗಿಹುದು ನಾನಾ ಮುಖಂ. ಸುಖದಂತೆ
ದುಃಖಮುಂ ಋತಚಿತ್ ಕೃಪಾ ನೃಕೇಸರಿ ನಖಂ.

ಶ್ರೀ ರಾಮಾಯಣ ದರ್ಶನಂ, ಸಂಸ್ಕೃತಿ ಲಂಕಾ, ಪಾತ್ರ ಬೂತು, ಪುಟ ೩೪೦

೧೪೬೩

ಸಾಹಿತ್ಯ ಪ್ರಚಾರ ಗ್ರಂಥಕರ್ತರ ಕಲ್ಯಾಣ ದೃಷ್ಟಿಯೊಂದರಿಂದಲೇ ಆವಶ್ಯಕವಾದುದೆಂದು ಯಾರೂ ತಿಳಿಯಬಾರದು. ಜನರಿಗೆ ನೂತನ ಸಂಸ್ಕೃತಿಯ ಜ್ಞಾನ ಉಂಟಾಗಬೇಕಾದರೆ ಆ ಸಂಸ್ಕೃತಿಯನ್ನೊಳಗೊಂಡ ಸಾಹಿತ್ಯ ಅವರಲ್ಲಿ ಹರಡಬೇಕು. ಅದರಿಂದಲೇ ದೇಶದ ಅಭ್ಯುದಯ ಸಾಧ್ಯ. ರಷ್ಯಾ ಚೀನಾ ದೇಶಗಳಲ್ಲಿಯೂ ಜಪಾನ್ ತುರ್ಕಿಸ್ಥಾನಗಳಲ್ಲಿಯೂ ಆಗಿರುವ ಪರಿವರ್ತನೆಗೆ ಅಲ್ಲಿಯ ನೂತನ ಸಾಹಿತಿಗಳೆ ಮುಖ್ಯ ಕಾರಣ. ಯಾವಾಗ ನವದೃಷ್ಟಿಯ ಸಾಹಿತ್ಯ ಜನಸಾಮಾನ್ಯದಲ್ಲಿ ಹೆಚ್ಚಾಗಿ ಪ್ರಚುರವಾಗುವುದೋ ಆಗಲೇ ದೇಶ ಕಣ್ದೆರೆಯುವುದು. ಬರಿಯ ವಿಶ್ವವಿದ್ಯಾನಿಲಯಗಳಿಂದಲೂ, ನಗರದ ಉಪನ್ಯಾಸ ಮಂದಿರಗಳಿಂದಲೂ ಅದು ಸುಲಭ ಸಾಧ್ಯವಲ್ಲ. ನಮ್ಮ ದೇಶದ ಅವಸ್ಥೆಯಲ್ಲಂತೂ ಋಜುದೃಷ್ಟಿಯ ಸಾಹಿತ್ಯ ಪ್ರಚಾರ ಅತ್ಯವಶ್ಯಕವಾದುದು. ದೇಶಾಭಿಮಾನಿಗಳೆಲ್ಲರೂ ಸಾಹಿತ್ಯ ಪ್ರಚಾರಕರಾಗಲೇ ಬೇಕು.

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೨೪

೧೪೬೪

ಒಂದು ಕ್ಷಣವಾದರೂ ದಾಸ್ಯನಿಯಮಗಳಳಿದು
ಸ್ವಾತಂತ್ರ್ಯ, ಸ್ವಚ್ಛಂದ್ಯ, ಹುಚ್ಚಾಟವಾದೇ ?
ಎಲ್ಲ ಹಾಳಾದರೂ ಆಗಿಹೋಗಲಿ ಇಂದೆ !
ಬೇಕಾದುದೆನಗೆ ಆ ಸ್ವಾತಂತ್ರ್ಯಶ್ರೀಯೊಂದೆ !

ನವಿಲು, ಮರದ ನೆರಲು, ಪುಟ ೧೭

೧೪೬೫

ನಮ್ಮ ದೃಷ್ಟಿ academic ಎಂದು ಹೇಳುತ್ತಾರಲ್ಲ ಆ ತರಹದ್ದು.

ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಅದೇ ಹೆಸರಿನ ಲೇಖನ, ಪುಟ ೨೪

೧೪೬೬

ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿಗಳಿಂದ ಪರಿಶೀಲಿಸಿದೆ ; ಮಧ್ವಸಿದ್ಧಾಂತಕ್ಕಿಂತ ಕಳಪೆ ಸಿದ್ಧಾಂತ ಮತ್ತೊಂದಿಲ್ಲ–ಈ ಅರ್ಥದಲ್ಲಿ ! ಅದಕ್ಕೇನೆ ಆ ಮಾರ್ಗದ ಅನುಯಾಯಿಗಳಾದವರಿಗೆ ರಾಮಾಯಣ ದರ್ಶನದಂತಹ ಕೃತಿಗಳನ್ನು ಕಂಡರೆ ಆಗುವುದಿಲ್ಲ. ಏಕೆಂದರೆ ರಾಮಾಯಣದ ದರ್ಶನದಲ್ಲಿರುವುದು ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ. ನಿತ್ಯನಾರಕಿ, ಮುಕ್ತಿಯೋಗ್ಯ, ತಮೋಯೋಗ್ಯ, ನಿತ್ಯ ಸಂಸಾರಿ–ಇದನ್ನೆಲ್ಲ ನಂಬಿದವರಿಗೆ ಶ್ರೀ ರಾಮಾಯಣ ದರ್ಶನವನ್ನು

ಅಪ್ರೀಸಿಯೇಟ್ (appreciate) ಮಾಡುವುದಕ್ಕೆ ಸಾಧ್ಯವೇ ಇಲ್ಲ. ಅದರಿಂದಲೆ ಅವರು, ಆ ಗುಂಪಿಗೆ ಸೇರಿದ ವಿಮರ್ಶಕಮಾನ್ಯರು, ಇಡೀ ಕಾವ್ಯವನ್ನೇ ಹಳಿಯತ್ತಾ ಕುಳಿತುಕೊಳ್ಳುತ್ತಾರೆ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೭೬-೭

೧೪೬೭

ವಸ್ತುವಿನ ಮಹತ್ತೂ ತಕ್ಕಮಟ್ಟಿಗೆ ಕಾರಣವಾದರೂ ಕವಿಯಲ್ಲಿ 'ಭೂಮಾ ಪ್ರತಿಭೆ' ಇಲ್ಲದಿದ್ದರೆ ಭವ್ಯತೆ ಸೃಷ್ಟಿಯಾಗುವುದಿಲ್ಲ.

ರಸೋ ವೈ ಸಃ, ಭೂಮಾನುಭೂತಿ, ಪುಟ ೯೯

೧೪೬೮

ಸಿದ್ಧಿ ಕಾಲಾನುವಶಿ ಕಣಾ
ಲೀಲಾ ಜಗದೊಳದಾರ್ಗಾದೊಡಂ.

ಶ್ರೀ ರಾಮಾಯಣ ದರ್ಶನಂ, ಶ್ರೀರಾಮ ರಾವಣ ಚಿತ್ ತಪಸ್‌ಶ್ರೀ, ಪಾತ್ರ, ರಾಮ, ಪುಟ ೭೬೯

೧೪೬೯

ಏಳೇಳಿರಿ ! ಕರೆಯುತ್ತಿದೆ ಕೇಳಿರಿ,
ಓ ನವ ಜೀವನ ಸಂಕ್ರಾಂತಿ !
ಉದಯಿಸುತಿದೆ ನೂತನ ಯುಗದೇವತೆ
ಮಿಥ್ಯೆಯ ಮೌಢ್ಯತೆಯನು ಸೀಳಿ ;
ಜ್ಞಾನದ ವಿಜ್ಞಾನದ ಮತಿ ಖಡ್ಗದಿ
ಮೈದೋರುವಳೈ ನವಕಾಳಿ !
ಕೆಚ್ಚಿನ ನೆಚ್ಚಿನ ತನುಮನ ಪಟುತೆಯ
ಸಂಪಾದಿಸಿ ಓ ಮೇಲೇಳಿ ;
ಕಣ್ದೆರೆಯಿರಿ ನವ ಕಾಂತಿಗೆ, ಶಾಂತಿಗೆ,
ಓ ಕ್ರಾಂತಿಯ ಪುತ್ರತೆ, ಬಾಳಿ !

ಕಾನೂರು ಹೆಗ್ಗಡಿತಿ, ಪುಟ ೬೪೩

೧೪೭೦

ವಿಶ್ವವೂ ಅದರ ಜೀವನವೂ ಹಿಂದಿನವರ ಕಲ್ಪನೆ ಕನಸಿನಲ್ಲಿಯೂ ಕಾಣದನಿತು ವಿಸ್ತಾರವಾಗಿಯೂ ಭವ್ಯವಾಗಿಯೂ ರಹಸ್ಯ ಪೂರ್ಣವಾಗಿಯೂ ಭಯಾನಕವಾಗಿಯೂ ಪೂಜ್ಯವಾಗಿಯೂ ಅನಿರ್ವಚನೀಯವಾಗಿಯೂ ಕಾಣುವುದಿಲ್ಲವೆ ? ಆ ವಿಶ್ವ ರೂಪದ ದರ್ಶನದ ಮಹತ್ತು ಬೃಹತ್ತುಗಳ ಸಮ್ಮುಖದಲ್ಲಿ ನಮ್ಮಾತ್ಮ ವಿಕಂಪಿಸುವುದಿಲ್ಲವೆ ? ಮೂಕವಾಗುವುದಿಲ್ಲವೆ ? ಭಾವಲಯವಾಗುವುದಿಲ್ಲವೆ ? ಕಲ್ಪನೆ ವಿಸ್ತಾರವನ್ನಾಗಲಿ ಎಲ್ಲೆಯನ್ನಾಗಲಿ ಅರಿಯದೆ ನಿರ್ವಾಣವಾಗುವುದಿಲ್ಲವೆ ? ಜ್ಞಾನವು ಭಕ್ತಿ ಭಾವದಿಂದ ಜ್ವಾಲಾಮಯವಾಗುವುದಿಲ್ಲವೆ ? ಆತ ಪುನೀತವಾಗುವುದಿಲ್ಲವೆ ? ಆ ಅನುಭವದಲ್ಲಿ

ಕಾವ್ಯವಿಲ್ಲವೆ ? ಆ ಅನುಭವದಿಂದ ಕಾವ್ಯಕ್ಕೆ ಕುಂದಾಗುತ್ತದೆ ಎನ್ನುವುದು ವ್ಯರ್ಥಶಿಶು ಪ್ರಲಾಪ. ಅಂತಹ ಅನುಭವದ ಆವೇಶದಿಂದ ಹೊರಹೊಮ್ಮುವ ಕಾವ್ಯ ಚಿರಸ್ಥಾಯಿಯಾಗಿ ಲೋಕಪೂಜ್ಯವಾಗುವುದರಲ್ಲಿ ಸಂದೇಹವಿಲ್ಲ.

ಕಲಾಸುಂದರಿ, ಮುನ್ನುಡಿ, ಪುಟ vii

೧೪೭೧

ಕವಿ ಪ್ರತಿಭಾಶಾಲಿಯಾಗಿಯೂ ಸ್ಫೂರ್ತಿ ಸಂಪನ್ನವಾಗಿಯೂ ಸೌಂದರ್ಯಯೋಗಿಯಾಗಿಯೂ ಲಾವಣ್ಯಾತ್ಮನಾಗಿಯೂ ಇರುವ ಋಷಿಯಾಗಿರಬೇಕು. ಆತ್ಮಾನುಭವವೇ ಪರಮಪ್ರಮಾಣ ; ಬುದ್ಧಿಶಕ್ತಿ ಗೌಣ. ಆತನ ದೃಷ್ಟಿಗೆ ವೀಣಾ ಸದೃಶವಾದ ಸೂಕ್ಷ್ಮತೆ ಇರಬೇಕು. ಮಹಾಕವಿಯಾದವನು ತನ್ನಿಂದ ಹೊರಸೂಸುವ ದಿವ್ಯವಾಣಿಯ ಅಮರಸಂಗೀತದಿಂದ ಜಗತ್ತಿನ ಮನಸ್ಸನ್ನು ಮೋಹಿಸಿ ತನ್ನ ಕಡೆಗೆ ಸೆಳೆದುಕೊಂಡು, ಅದನ್ನು ತನ್ನ ಮಟ್ಟಕ್ಕೆ ಏರಿಸಬೇಕೇ ಹೊರತು, ತಾನು ಅದರ ಮಟ್ಟಕ್ಕೆ ಇಳಿಯಬಾರದು.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೧೨

೧೪೭೨

ಕಾಮವು ತನ್ನ ಉತ್ತಮಾವಸ್ಥೆಯಲ್ಲಿ ಪ್ರೇಮವಾಗುತ್ತದೆ. ಕಾಮವು ಸರ್ವಜೀವ, ಅಷ್ಟೇಕೆ ಸರ್ವಸ್ಯ ಸಾಧಾರಣವಾದುದು. ಸ್ವಭಾವಗಳಲ್ಲಿ ಕ್ಷುಧೆಯನ್ನು ಬಿಟ್ಟರೆ ಕಾಮವೇ ಅತಿ ಪ್ರಬಲವೂ ಪ್ರಧಾನವೂ ಆದುದು. ಇಂತಹ ಸರ್ವ ಸಾಧಾರಣವೂ ಮಹಾ ಪ್ರಬಲವೂ ಆಗಿರುವ ಕಾಮ ಸ್ವಭಾವದ ಆದರ್ಶೀಕರಣವೆ ಮಧುರ ಭಾವಸಾಧನೆಯ ರಹಸ್ಯ ಮತ್ತು ಲಕ್ಷ್ಯ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೭೨-೩

೧೪೭೩

ಹಾರ್ರ ಮಕ್ಕಳು ಇದ್ದಲ್ಲೇ ಹಾಂಗೆ ಕಾಣೋ ! ಕಾಗೆ, ನಾಯಿ ಹಿಂಡು ಹಿಂಡೇ ಇರ್ತವೆ. ಚೆಂದಾಗಿ ತಿಂದು ಬಿಸಾಡ್ತಾರೆ ನೋಡು, ಅದಕ್ಕೇ !

ಮಲೆಗಳಲ್ಲಿ ಮದುಮಗಳು, ಪಾತ್ರ ಕಾಡು, ಪುಟ ೫೦೬

೧೪೭೪

ನಾನು ಕನ್ನಡ ಎಂ. ಎ., ತೆಗೆದುಕೊಳ್ಳುವಂತೆ ಮಾಡಿದ್ದು ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳಿಗೆ ನೆನಪಿಟ್ಟುಕೊಳ್ಳಲಾರದಂತಹ ಒಂದು ಅತ್ಯಂತ ಸಾಧಾರಣ ವಿಷಯವಾಗಿದ್ದರೂ ನನಗೆ ಅದು ಒಂದು ದೈವೀಸಂಕಲ್ಪವಾಗಿಯೆ ಭಾಸವಾಗುತ್ತಿದೆ. ಏಕೆಂದರೆ, ನಾನು ಕನ್ನಡವನ್ನು ಸ್ನಾತಕೋತ್ತರ ವಿಷಯವಾಗಿ ಆಳವಾಗಿ ಅಭ್ಯಾಸ ಮಾಡದಿದ್ದರೆ, ಪಂಪ ರನ್ನ ಜನ್ನ ನಾಗವರ್ಮ ರಾಘವಾಂಕ ಕುಮಾರವ್ಯಾಸ ಲಕ್ಷ್ಮೀಶಾದಿಮಹಾಕವಿ ವರಕವಿಗಳ ಕೃತಿಗಳನ್ನು ಅಧ್ಯಯನ ಮಾಡದಿದ್ದರೆ, ಕೊನೆಗೆ ಕನ್ನಡ ಅಧ್ಯಾಪಕನಾಗಿ ಪಾಠ ಹೇಳದೆ ಇದ್ದಿದ್ದರೂ, ವಿಷಯ ವಸ್ತು ಭಾವಾದಿ

ಸಂಪತ್ತಿಯಲ್ಲಿ ಕೊರತೆಯಿರದಿರುವ ಉತ್ತುಂಗ ಪ್ರಜ್ಞಾಸ್ಥಿತಿಗೆ ಏರಬಹುದಾಗಿದ್ದರೂ, 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಂತಹ ಮೇರುಕೃತಿಗೆ ಬೇಕಾಗುವ ಪದಸಂಪತ್ತಿಯನ್ನೂ ಮಹಾಶೈಲಿಯನ್ನೂ ಖಂಡಿತವಾಗಿಯೂ ಪಡೆಯಲಾಗುತ್ತಿರಲಿಲ್ಲ. ಬಹುಶಃ ನನ್ನ ಕಾವ್ಯಕನ್ನಿಕೆ ಬಡಕಲು ಕನ್ನಡದ ಪಂಗುಶೈಲಿಯಲ್ಲಿ ಇಂಗ್ಲಿಷಿನ ಎರವಲು ಸರಕನ್ನು ತಲೆಹೊರೆಯಲ್ಲಿ ಹೊತ್ತು ಮಾರುವ ಬೀರಿಯ ಬೇಹಾರಿಯಾಗುತ್ತಿತ್ತೋ ಏನೋ ? ಪತ್ರಿಕಾಲೋಕ ಪ್ರಸಿದ್ಧವಾಗಿ !

ಮನುಜಮತ ವಿಶ್ವಪಥ, ಆ ಅಮೃತ ಕ್ಷಣ, ಪುಟ ೭೨-೩

೧೪೭೫

ಮಹತ್ ಕಾರ್ಯಗಳನ್ನು ಮಹತ್ ಪ್ರಮಾಣದಲ್ಲಿ ಸಾಧಿಸುವುದು ಅಲ್ಪಚೇತನಗಳಿಗೆ ಅಸಾಧ್ಯ. ಮಹಾಕಾರ್ಯವನ್ನು ಮಾಡಿದೊಡನೆಯೆ ಗೊತ್ತಾಗುತ್ತದೆ.– ಅದನ್ನು ಸಾಧಿಸಿರುವ ಶಕ್ತಿ ಮತ್ತೊಂದು, ನಾನಲ್ಲ ; ಆ ಶಕ್ತಿ ಇದನ್ನು ಎತ್ತಿದಿದ್ದರೆ, ಯಾರು ತಾನೆ ಈ ಭಾರವನ್ನು ಎತ್ತಲು ಸಾಧ್ಯವಾಗುತ್ತದೆ ? ಎಂದು. ಆದ್ದರಿಂದ ನನ್ನ ಕೃತಿಗಳಿಂದ ಜನತೆಯ ಜನಾರ್ಧನನಿಗೆ ಏನಾದರೂ ಪುಷ್ಪಾಂಜಲಿ ಅರ್ಪಿತವಾಗಿದ್ದರೆ ಅದರಿಂದ ನಾನು ನಿಜವಾಗಿಯೂ ಧನ್ಯ. ನನ್ನ ಮೂಲಕವಾಗಿ ಹೊರಗೆ ಬಂದಿರುವ ಕೃತಿಗಳನ್ನು ಓದಿ, ಓದಿಸಿ, ಕೇಳಿ–ನೀವು ಯಾರೇ ಆಗಲಿ, ಎಲ್ಲೇ ಆಗಲಿ–ಆನಂದಪಡುತ್ತಿದ್ದರೆ, ಆ ಆನಂದದ ಅಂಶ ಯಾವುದೋ ಒಂದು ರೀತಿಯಲ್ಲಿ ನನ್ನ ಚೇತನಕ್ಕೂ ತಾಕುತ್ತದೆ ; ನನ್ನ ಉದ್ಧಾರ ಮಾಡುತ್ತದೆ. ಅದು ಭಗವಂತನಿಗೆ ಸಮರ್ಪಿತವಾಗುತ್ತದೆ–ಎಂದು ನಾನು ಭಾವಿಸುತ್ತೇನೆ.

ಷಷ್ಟಿನಮನ, ವಿಶ್ವವಿದ್ಯಾ ಮತ್ತು ಪ್ರಸಾರಾಂಗ, ಪುಟ ೧೫೮

೧೪೭೬

......ವಿಚಾರಪೂರ್ವಕವಾದ ಭಾವಗಳನ್ನು ನಮ್ಮ ತರುಣರ ಎದೆಯಲ್ಲಿ ನೀವು ಬಿತ್ತಬೇಕು. ಪದ್ಯಗಳಲ್ಲಿಯೆ ಬಿತ್ತಿ ; ಆದರೆ ನವ್ಯ ಬರಿತೀವಿ ಅಂತ ಹೇಳಿಬಿಟ್ಟು ಒಬ್ಬರಿಗೂ ಅರ್ಥವಾಗದ್ದನ್ನೆಲ್ಲಾ ತಂದುಹಾಕಿ, ಒಬ್ಬರೂ ಓದಬಾರದು, ಆತರಾ ಮಾಡಬೇಡಿ. ಎಲ್ಲರಿಗೂ ಅರ್ಥವಾಗುವಂತೆ, ನವ್ಯವೋ ಪವ್ಯವೋ ಎಲ್ಲರಿಗೂ ಅರ್ಥವಾಗಿ ಅದರಿಂದ ಪರಿಣಾಮಕಾರಿಯಾಗುವಂತೆ ಬರೆಯಿರಿ. ಏನೋ symbolism ಅಂತ ಹೇಳಿಬಿಟ್ಟು ಅರ್ಥವಾಗಬಾರದು, ಹಾಗೆ ಮಾಡಬೇಡಿ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೬೩

೧೪೭೭

ಎಲ್ಲೆಲ್ಲಿಯೂ ಎಲ್ಲದರಲ್ಲಿಯೂ ಬ್ರಹ್ಮ ದರ್ಶನಮಾಡಲು ಅಭ್ಯಾಸಿಸುವುದು. ಕೆಲಸಕ್ಕೆ ಬಾರದ, ಕೊನೆಗಾಣದ, ಕಾಲಹರಣಕಾರಿಯಾದ ವಾದ ವಿವಾದಗಳಿಂದ ಅದು ಸಾಧ್ಯವಲ್ಲ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೯೬

೧೪೭೮

....ತನ್ನ ದೇವತೆಗೆ
ಪೂಜೆ ಸಲ್ಲಿಸಿ ಮಣಿಯುವನ್ನರಂ ಕಾಣಲ್ಕೆ
ಹೊಂಪುಳಿಯಿನುಕ್ಕಿದಪುದಲ್ತೆ ಭಕ್ತಗೆ ಭಕ್ತಿ
ಹುರಿಗೊಂಡು ?

ಶ್ರೀ ರಾಮಾಯಣ ದರ್ಶನಂ, ನಾನಕ್ಕನೆನ್ ನಿನಗೆ ತಂಗೆ, ಪುಟ ೩೫೧-೨

೧೪೭೯

ಒಮ್ಮೆ ನೋಡಿದ ಮಾತ್ರದಿಂದಲೆ ಕಣ್ಣಿನಿಂದ ಕಣ್ಣಿಗೆ ಚಿಮ್ಮುವ ಪ್ರೇಮವು ಮಿಂಚಿನಂತೆ ಉಜ್ವಲವಾಗಿರಬಹುದು. ಅದರೆ ಮಿಂಚಿನಂತೆಯೆ ಕ್ಷಣಿಕವಾಗಿಯೂ ಚಂಚಲವಾಗಿಯೂ ಇರಬಹುದು. ಅಂತಹ ಪ್ರೇಮದಿಂದಲೂ ನಿಜವಾದ ದಾಂಪತ್ಯ ಪ್ರೇಮವು ಮೂಡಬಹುದು. ಆದರೆ ಅದು ಕ್ಷಣಿಕೋತ್ಸಾಹದಿಂದ ಬಿಡುಗಡೆ ಹೊಂದಿ ಚಿರಕಾಲಬಂಧನಕ್ಕೆ ಒಳಗಾಗಬೇಕಾಗುತ್ತದೆ. ಬಾಳಿನ ಒರೆಗಲ್ಲಿನಲ್ಲಿ ಬಹುಕಾಲದವರೆಗೂ ಪರೀಕ್ಷೆಗೊಳಗಾಗಿ ನಿಲ್ಲುವ ಚಿರಪ್ರೇಯವು ಮಿಂಚಿನಂತಲ್ಲ ; ನಂದಾದೀಪದಂತಿರುತ್ತದೆ.

ನನ್ನ ದೇವರು ಮತ್ತು ಇತರ ಕಥೆಗಳು, ಮೀನಾಕ್ಷಿಯ ಮನೇಮೇಷ್ಟರು, ಪುಟ ೭೨

೧೪೮೦

ನೆನಪಿನಲ್ಲಿ ಒಂದು ತೆರನಾದ ನಿಷ್ಕಾಮತೆಯೂ ಶಾಂತಿಯೂ ಇರುತ್ತದೆ.

ಮಲೆನಾಡಿನ ಚಿತ್ರಗಳು, ಮುನ್ನುಡಿ, ಪುಟ iii

೧೪೮೧

ದಿನಬೆಳಗಾದರೆ ಪತ್ರಿಕೆ ತೆಗೆದು ನೋಡಿದಾಗ ಈ ಪ್ರಪಂಚದಷ್ಟು ಹೊಲಸು ಪ್ರಪಂಚ ಮತ್ತೊಂದಿಲ್ಲವೋ ಎನಿಸುತ್ತದೆ. ಅದರೆ ಇದಕ್ಕಿಂತ ಉತ್ತಮವಾದ ಪ್ರಪಂಚ ಬೇರೆ ಇದೆ–ಪತ್ರಿಕೆಯನ್ನು ಬಿಟ್ಟು ನೋಡಿದರೆ.

ಷಷ್ಟಿನಮನ, ಭಾರತ ವಿಶ್ವವಿದ್ಯಾನಿಲಯಗಳಲ್ಲಿ ಆಧುನಿಕ ಮನಃಶಾಸ್ತ್ರ, ಪುಟ ೪೦

೧೪೮೨

ಕನಸು ನನಸಾಯಿತಿದೊ ಏಕೈಕ ಕರ್ನಾಟಕ :
ಕಣ್ ನಟ್ಟು ಬಯಸಿ ಕಾಣ್ ದಿಕ್ ತಟಧ್ವಜಪಟ !

ಇಕ್ಷುಗಂಗೋತ್ರಿ, ಏಕೈಕ ಕರ್ನಾಟಕ, ಪುಟ ೮೦

೧೪೮೩

ನಮ್ಮ ಹಿಂದಿನ ಮಹಾಕವಿಗಳನ್ನು ಇಂದಿನ ದೃಷ್ಟಿಯಿಂದ ಅಳೆದು ಟೀಕಿಸುವುದಕ್ಕೆ ಹೋಗುವುದು ಅವರಿಗೆ ಅನ್ಯಾಯ ಮಾಡಿದಂತಾಗುತ್ತವೆ. ಮಾರ್ಕ್ಸಿಸಂ ಸಿದ್ಧಾಂತ ಅಲ್ಲಿಲ್ಲ ಎಂದು ಟೀಕಿಸುವುದರಲ್ಲಿ ಅರ್ಥವಿಲ್ಲ ; ಪ್ರಯೋಜನವೂ ಇಲ್ಲ.

ವಿಚಾರ ಕ್ರಾಂತಿಗೆ ಆಹ್ವಾನ, ಸಾಹಿತ್ಯ ಚರಿತ್ರಕಾರರಿಗೆ ಸಲಹೆಗಳು, ಪುಟ ೪೫

೧೪೮೪

ದಿಟದೊಲ್ಮೆ ಹಠವಾದಿ.

ಶ್ರೀ ರಾಮಾಯಣ ದರ್ಶನಂ, ಪಂಚವಟಿಯ ಪರ್ಣಕುಟಿ, ಪಾತ್ರ ಚಂದ್ರನಖಿ, ಪುಟ ೨೧೮

೧೪೮೫

ನನ್ನ ಪುಣ್ಯದೊಳೆನಗೆ ನೆಚ್ಚಿಲ್ಲ, ಗುರುದೇವ,
ನಿನ್ನ ಕರುಣೆಯೆ ನನಗೆ ಹಿರಿಯ ನೆಚ್ಚು.
ನನ್ನ ಬಿಜ್ಜೆಯ ಬಲ್ಮೆಯಲ್ಲಿನಿತು ನೆಚ್ಚಿಲ್ಲ,
ನಿನ್ನೊಲ್ಮೆಯೇ ನನಗೆ ಹಿರಿಯ ಬಲ್ಮೆ!

ಹೊನ್ನಹೊತ್ತಾರೆ, ದೈನ್ಯತೆ, ಪುಟ ೨೪

೧೪೮೬

ನೂತನವಾದುದರಲ್ಲಿ ಜನರಿಗೆ ಸಂಶಯ ಹೆಚ್ಚು. ಆ ಸಂಶಯ ಮೊದಮೊದಲು ಔದಾಸೀನ್ಯ, ತಿರಸ್ಕಾರಗಳ ರೂಪದಲ್ಲಿ ತೋರುತ್ತದೆ. ಎಲ್ಲಿಯೋ ಹಲಕೆಲವು ಕಲಾವಿದರಿಗೆ ಮಾತ್ರ ಅದರ ಮಹತ್ತು ತಿಳಿಯುತ್ತದೆ. ಅಂತಹರೇ ಅದನ್ನು ಪ್ರಶಂಸಿಸಿ ಪ್ರಚಾರಕಾರ್ಯಕ್ಕೆ ತೊಡಗುತ್ತಾರೆ; ಅದರ ಸೊಗಸು ಸೊಬಗುಗಳನ್ನು ಕುರಿತು ವಿಮರ್ಶೆಗಳನ್ನು ಬರೆಯುತ್ತಾರೆ. ಜನರು ಕಣ್ಣು ತೆರೆಯುತ್ತಾರೆ. ಆಮೇಲೆ ಕ್ರಮಕ್ರಮೇಣ ಜನರ ದೃಷ್ಟಿಯೂ ರುಚಿಯೂ ತಿದ್ದುಪಡೆದು ತಿರಸ್ಕಾರ ಔದಾಸೀನ್ಯಕ್ಕೆ ತಿರುಗಿ, ಔದಾಸೀನ್ಯ ಉಪಚಾರಕ್ಕೆ ತಿರುಗಿ, ಉಪಚಾರ ಪ್ರಶಂಸೆಗೂ ಆರಾಧನೆಗೂ ತಿರುಗುತ್ತದೆ.

ಕಲಾಸುಂದರಿ, ಮುನ್ನುಡಿ, ಪುಟ viii

೧೪೮೭

ಮಲೆನಾಡಿನಲ್ಲಿ ಮನುಷ್ಯರ ಹೊರತು ಉಳಿದುವೆಲ್ಲವು ಮಹತ್ತು ಬೃಹತ್ತುಗಳ ಪ್ರತಿನಿಧಿಗಳೆಂದು ನನಗೆ ಅನೇಕ ಸಾರಿ ತೋರಿಬಂದಿದೆ. ಹಾಗೆ ತೋರಿಬಂದಾಗಲೆಲ್ಲಾ ನಾನು ಮರುಗಿದ್ದೇನೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೧೮

೧೪೮೮

ನಿಮಗೋಸುಗವೆ ಮನೆ ಸಿಂಗಿರಿಸಿದೆ;
ನಿಮಗೋಸುಗವೆ ನನ್ನ ತನು ಸಿಂಗರಿಸಿದೆ,
ಮಂದಿ ಜನರಾರಿಲ್ಲಿ ಬರರು; ಭಯಬೇಡಿ, ಬನ್ನಿ;
ಕವಿಗಳಿರ, ಋಷಿಗಳಿರ, ಹೇ ಮಹಾಪುರುಷರಿರ,
ಜಗದಖಿಲ ಮಹಿಮರಿರ, ಕೃಪೆಮಾಡಿ ಬನ್ನಿ!

ಕದರಡಕೆ, ದೀಪಾವಳಿ, ಪುಟ ४೧

೧೪೮೯

ಜೀವನವನಿತುಂ ಜಪವೆನಗಾಗಿರೆ
ಜಪಗಿಪ ಮಣಿಮಾಲೆಯದೇಕೆ ?
ಸುಂದರ ಜಗ ಶಿವಮಂದಿರವಾಗಿರೆ
ಅಂಧತೆ ಕವಿದಿಹ ದೇಗುಲವೇಕೆ ?

ಕುಟೀಚಕ, ಜಪಮಣಿ, ಪುಟ ೫೮

೧೪೯೦

ಇದೇ ಸೃಷ್ಟಿಯ ಸಮಸ್ಯೆ. ಒಬ್ಬನು ಮುಕ್ತ, ಒಬ್ಬನು ಮುಮುಕ್ಷು, ಒಬ್ಬನು ಬದ್ಧ ! ಒಂದು ಅವ್ಯಕ್ತ, ಒಂದು ವ್ಯಕ್ತ, ಒಂದು ಮಾಯೆ ! ಇದೇ ಭಗವಂತನ ಲೀಲೆ.

ಸಂನ್ಯಾಸಿ ಮತ್ತು ಇತರ ಕಥೆಗಳು, ಸಂನ್ಯಾಸಿ, ಪಾತ್ರ ಪ್ರೇಮಾನಂದಸ್ವಾಮಿ,ಪುಟ ೧೩–೪

೧೪೯೧

ಪಾಪ, ಪುರೋಹಿತರೇನು ಮಾಡಿಯಾರು ? ಆಗಿನ ಕಾಲದ ದೊರೆಗಳಿಗನುಗುಣವಾಗಿ ಆಗಿನ ಪುರೋಹಿತರಿದ್ದರು ; ಈಗಿನ ಕಾಲದ ದೊರೆಗಳಿಗನುಸಾರವಾಗಿ ಈಗಿನ ಪುರೋಹಿತರಿದ್ದಾರೆ.

ನನ್ನ ದೇವರು ಮತ್ತು ಇತರ ಕಥೆಗಳು, ಧನ್ವಂತರಿಯ ಚಿಕಿತ್ಸೆ, ಪಾತ್ರ ಪರುಶುರಾಮ, ಪುಟ ೮೧

೧೪೯೨

ನಮ್ಮ ಜನರ ಬಾಳು ಮೇಲೆ ಮೇಲೆ ಎಷ್ಟು ಕೆಟ್ಟಂತೆ ಕಾಣುತ್ತಿದ್ದರೂ ಅದರ ಅಂತರಾಳದಲ್ಲಿ ಪೂರ್ವಿಕರ ಪುಣ್ಯದ ತಪಃಪ್ರಭಾವದ ನಂದಾದೀಪ ನಂದದೇ ಮಿನುಗುತ್ತಿದೆಯೆಂದು ತೋರುತ್ತದೆ.

ವಿಭೂತಿ ಪೂಜೆ, ಶ್ರೀ ರಾಮಾಯಣ ದಿವ್ಯಶಿಲ್ಪಿ, ಪುಟ ೧೩೪

೧೪೯೩

ಸಾಹಿತಿ ಯಾವ ತತ್ತ್ವವನ್ನಾಗಲಿ ಆಲೋಚಿಸಿ ಅದನ್ನೊಂದು ಸಿದ್ಧಾಂತ ರೂಪಕ್ಕೆ ತಂದುಕೊಂಡು ಆಮೇಲೆ ಅದನ್ನು ಬುದ್ಧಿಪೂರ್ವಕವಾಗಿ, ಪ್ರಯೋಜನವನ್ನು ಮೂರು ಹೊತ್ತೂ ಮನಸ್ಸಿನ ಮುಂದೆ ಇಟ್ಟುಕೊಂಡು, ಬರೆಯತೊಡಗಿದರೆ ರಸಾತ್ಮಕವಾದ ಕೃತಿ ಮೂಡಲಾರದು...... ತನ್ನ ಬುದ್ಧಿ ಭಾವಮಯವಾದ ಚಿತ್ಕೋಶವನ್ನು ಅಧ್ಯಯನದಿಂದ, ವಿದ್ವಜ್ಜನ ಸಂಪರ್ಕದಿಂದ, ಲೋಕಾನುಭವದಿಂದ, ಸ್ವಂತಚಿಂತನ ಧ್ಯಾನ ಸಾಧನಾದಿಗಳಿಂದ ಸುಪುಷ್ಟವನ್ನಾಗಿ, ಸುವಿಸ್ತೃತವನ್ನಾಗಿ, ಶ್ರೀಮಂತವನ್ನಾಗಿ ಮಾಡಿಕೊಳ್ಳಬೇಕು. ಆ ಅನುಭವವೆಲ್ಲವೂ ಸೇರಿ ಆತನ ಚೇತನೆಯಲ್ಲಿ ಒಂದು ಸಪ್ರಾಣ ಜ್ಯೋತಿಶ್ಶಕ್ತಿ, ಯಾವ ಗುಣವೂ ಅಲ್ಲದೆ ಎಲ್ಲ ಗುಣಗಳನ್ನೂ ಒಳಗೊಂಡು ಯಾವ ಗುಣವಾಗಿದೇಕಾದರೂ ಮೈದೋರುವ

ಸಾಮರ್ಥ್ಯವುಳ್ಳ ನಿರ್ಗುಣವಾದ ಒಂದು ಚಿತ್ ತಪಸ್ ಶಕ್ತಿ, ಆವಿರ್ಭಾವವಾಗುತ್ತದೆ. ಅದರಿಂದ ಹೊಮ್ಮುತ್ತದೆ ಉತ್ತಮ ಸಾಹಿತ್ಯ, ಉತ್ಕೃಷ್ಟ ರಸಕೃತಿ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೩೮–೯

೧೪೯೪

ಅನಂತರ ಜೀವಮಾನದಲ್ಲಿ ಮಹಾತ್ಮನಾಗುವಾತನಿಗೂ ದುರಾತ್ಮನಾಗುವಾತನಿಗೂ ಅಲ್ಪಾತ್ಮನಾಗುವಾತನಿಗೂ ಅವರ ಶಿಶುತನದಲ್ಲಿ ಪರಸ್ಪರ ಭಿನ್ನಭಾವ ಅಷ್ಟೇನೂ ತೋರದಿರಬಹುದು. ತೋರದಿದ್ದ ಮಾತ್ರಕ್ಕೆ ಇಲ್ಲವೆಂದಲ್ಲ. ಬಹುಶಃ ನಮಗೆ ಗೋಚರಿಸದಿರುವುದಕ್ಕೆ ಕಾರಣ, ಮಾಹಾತ್ಮ್ಯ ಅಪೂರ್ವವೂ ಅನಿರೀಕ್ಷಿತವೂ ಆಗಿರುವುದೇ. ಕಾರ್ಯದ ವಿಶೇಷತೆಗೆ ಸರಿದೂಗುವಂತೆ ಕಾರಣವೂ ವಿಶೇಷವಾಗಿರಬೇಕು.

ತಪೋನಂದನ, ಪಂಪನಲ್ಲಿ ಭವ್ಯತೆ, ಪುಟ ೪೯

೧೪೯೫

ಕಾವ್ಯವನ್ನು ಕಟ್ಟುವ ಕಾರ್ಯದಲ್ಲಿ ಚಿಂತನ ಮತ್ತು ವರ್ಣನಾಂಶಗಳಾದ ತನ್ನ ವಿದ್ಯೆ ಬುದ್ಧಿ ಅಧ್ಯಯನ ಅಭ್ಯಾಸ ಮತ ದೇಶ ಕಾಲ ಇತ್ಯಾದಿಗಳೆಲ್ಲವನ್ನೂ ವಿನಿಯೋಗಿಸುತ್ತಾನೆ. ಆದರೂ ಅವೆಲ್ಲವೂ ಅವನ 'ದರ್ಶನ'ದ ಅಧೀನವಾಗಿಯೆ ಇದ್ದುಕೊಂಡು ಅದರ ಅಭಿವ್ಯಕ್ತಿಗಾಗಿ ಅದಕ್ಕಾಗಿಯೇ ದುಡಿಯುತ್ತವೆ. ಅದರ ಚೇತನವೆ ಅವುಗಳಿಗೆ ಪ್ರಾಣ. ಅದರ ಕಾಂತಿಯೆ ಅವುಗಳಿಗೆ ಕಣ್ಣು. ಅವುಗಳ ನಾಡೀಸ್ಪಂದನವೂ ಕವಿಯ 'ದರ್ಶನ'ದ ಶ್ವಾಸೋಚ್ಛ್ವಾಸದ ಲಯಗತಿಯನ್ನೆ ಅನುಸರಿಸುತ್ತದೆ. ಕೃತಕವೆಂದು ನಮಗೆ ತೋರಬಹುದಾದ–ತಾನು ಪ್ರಯತ್ನಪೂರ್ವಕವಾಗಿ ಸಂಪಾದಿಸಿದ ವಿದ್ಯೆ ಬುದ್ಧಿ ಆಲೋಚನೆ ಅಭಿರುಚಿಗಳನ್ನು ಅವನು ಇಚ್ಛಾಪೂರ್ವಕವಾಗಿ ಉಪಯೋಗಿಸಿದರೂ, ಅವುಗಳೂ ಮೊತ್ತದಲ್ಲಿ ಅವನ ಸಂಸ್ಕಾರ ಸಮಷ್ಟಿಯ ಮೇಲೆಯೇ ನಿಲ್ಲುವುದರಿಂದ ಅವನ ಆತ್ಮದ ಸಮಗ್ರ 'ದರ್ಶನ'ದ ವಿಧೇಯ ಕರಣಗಳಾಗುತ್ತವೆಯೆ ಹೊರತು ಅತಂತ್ರವಾಗಿ ನಿಲ್ಲುವುದಿಲ್ಲ. ಅವುಗಳ ಸಂಪೂರ್ಣಸ್ವಾತಂತ್ರ್ಯ ಎಂಬುದು ಭ್ರಾಂತಿಮೂಲವಾದ ಒಂದು ಭಾವವೈಖರಿಯೆ ಹೊರತು ವಾಸ್ತವಾಂಶವಾಗುವುದಿಲ್ಲ.

ತಪೋನಂದನ. ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ, ಪುಟ ೧೨೬

೧೪೯೬

ಸಾಹಿತ್ಯ ಜನಜೀವನದ ವಾಣಿ. ಬರೆಯುವವರು ಬರೆಯಲಾರದಿರುವ ಸಾವಿರಾರು ಜನರಿಗೆ ಪ್ರತಿನಿಧಿಗಳು. ಕವಿಗಳೆಂದರೆ ನಾಡಿನ ನಾಡಿಗಳು. ಸಹಸ್ರ ಸಹಸ್ರ ಹೃದಯಗಳಲ್ಲಿ ಸುಳಿಯುವ ಭಾವಗಳಿಗೆ ಕವಿಹೃದಯ ಕನ್ನಡಿಯಂತೆ. ಸಾಹಿತ್ಯ ಸಂಸ್ಕೃತಿಯ ಪುರೋಗಮನಕ್ಕೆ ಸೋಪಾನ ಮಾರ್ಗ. ಜ್ಞಾನಾಮೃತ ಪಾನದಿಂದ ಸಂಸ್ಕೃತಿ ಅಭ್ಯುದಯವನ್ನೈದುವುದು. ಸಾಹಿತ್ಯ ಜ್ಞಾನಧೇನುವಿನ ಕೆಚ್ಚಲು ; ಎಂದ ಮೇಲೆ, ಸಾಹಿತ್ಯದ ಮೇಲ್ಮೆಯಿಂದ ಜನಜೀವನದ ಮೇಲ್ಮೆಯುಂಟಾಗುತ್ತದೆ. ರಾಜಕೀಯ ಪ್ರಪಂಚದಲ್ಲಿ ನವಜೀವನವುಂಟಾದರೆ ಜನ ಜೀವನದಲ್ಲಿಯೂ ಅದು

ಪ್ರವಹಿಸಿಯೇ ಪ್ರವಹಿಸುವುದು. ಬೀಜವೃಕ್ಷ ನ್ಯಾಯದಂತೆ ಆ ಹೊಸ ಹುರುಪು ಸಾಹಿತ್ಯದಲ್ಲಿ ಕನ್ನಡಿಸುವುದು. ಅದರಿಂದ ಈಗ ಎಲ್ಲೆಲ್ಲಿಯೂ ಎಲ್ಲ ದೇಶಭಾಷೆ ಗಳಲ್ಲಿಯೂ ಹೊಸಕಳೆ ಹೊರಹೊಮ್ಮುತ್ತಿದೆ.

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೧೮

೧೪೯೭

ವಿಚಾರವಾದಿಯಾದವನು ಯಾವಾಗಲೂ ನನಗೆ ಗೊತ್ತಿಲ್ಲ ಎಂದು ಅಲ್ಲಿಯವರೆಗೆ ಹೋಗುತ್ತಾನೆ. ಅಷ್ಟೆಹೊರತು ಅದರ ವಿಚಾರದಲ್ಲಿ ಮುಚ್ಚು ಮನಸ್ಸು ಇರಬಾರದು. ವಿಚಾರವಾದಿಯಾದವನಿಗೆ ಯಾವಾಗಲೂ ತೆರೆದು ಮನಸ್ಸು ಇರಬೇಕು. ಏನೆಂದರೆ ನೀವು ಈಗ ನಂಬುವುದಿಲ್ಲ, ಆಗುವುದಿಲ್ಲ ಎನ್ನುವುದನ್ನು ನಾಳೆ ವಿಜ್ಞಾನ ವಿಧಾನದಿಂದಲೇ ಅದನ್ನು ಹೌದು ಎಂದು ಸ್ಥಿರಪಡಿಸಿದಾಗ ಅದನ್ನು ನಂಬುವುದಕ್ಕೆ ಸಿದ್ಧವಾಗಿರಬೇಕು.

ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಅದೇ ಹೆಸರಿನ ಲೇಖನ, ಪುಟ ೩೧

೧೪೯೮

ದರ್ಶನ ಎಂಬ ಪದಕ್ಕೆ ಅಪರೋಕ್ಷವಾಗಿ ಅನುಭವಿಸಿ ಕಾಣುವುದು ಎಂದರ್ಥ. ಬುದ್ಧಿ, ಚಿಂತನ, ತರ್ಕ, ಅಥವಾ ಅವರಿವರ ಹೇಳಿಕೆ ಇವು ಯಾವ ಉಪಾಧಿಗಳೂ ಇಲ್ಲದೆ ನೇರವಾಗಿ ಗ್ರಹಿಸುವ ಶಕ್ತಿ ದರ್ಶನ'. 'ದರ್ಶನ'ದ ತರುವಾಯ 'ಚಿಂತನ'. 'ಚಿಂತನ'ದ ತರುವಾಯ 'ವರ್ಣನ'. ಸಹೃದಯ ಚಿತ್ತವಿಕಾಸನ ಕ್ರಮವು ವರ್ಣನದಿಂದ ಚಿಂತನಕ್ಕೂ ಚಿಂತನದಿಂದ 'ದರ್ಶನ'ಕ್ಕೂ ಏರುತ್ತದೆ. ಕವಿಯ ಅವರೋಹಣ ಮುಖವಾದ ಚಿದ್ ವಿಕಾಸನ ಕ್ರಮವು ದರ್ಶನದಿಂದ ಚಿಂತನಕ್ಕೂ ಚಿಂತನದಿಂದ ವರ್ಣನಕ್ಕೂ ಇಳಿಯುತ್ತದೆ : ಎಂದರೆ, ಅವತರಿಸುತ್ತದೆ.

ತಪೋನಂದನ, ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ, ಪುಟ ೧೨೫

೧೪೯೯

ನೀಡದೊಳ್ ಬಳೆದು, ಕಾಡಿನಲಿ ಹಾರಾಡಿದಾ
ಗರುಡ ಶಿಶು, ಗರಿ ಬಲಿತ ಮೇಲಲ್ಪದೇಶಂಗಳಂ
ಚರಿಸಿ ತಣಿವುದೆ ? ವಿಯದ್ ವಿಸ್ತೀರ್ಣಮಂ ಬಯಸಿ
ಕೈಕೊಳ್ವುದಾಕಾಶ ಪರ್ಯಟನಮಂ. ಕಿರುಮೀನ್ಗೆ
ಕೆರೆ ಕೊಳಂ ಪೊಳೆ ಸಾಲ್ಗುಮಾ ತಿಮಿಗೆ ವೇಳ್ಕುಂ
ಜಲಕ್ರೀಡೆಗಾ ರುಂದ್ರಸಾಗರ ಸಲಿಲವಿಸ್ತಾರ.

ಶ್ರೀ ರಾಮಾಯಣ ದರ್ಶನಂ, ಕವಿಕೃತು ದರ್ಶನಂ, ಪುಟ ೧೬

೧೫೦೦

ಸಂಪ್ರದಾಯವನು
ಮುರಿದು ನಡೆವ ನವೀನ ಯುಗವಲ್ತೆ ಈ ಕಾಲ ?

ಪಕ್ಷಿಕಾಶಿ, ರಸಾನುಭೂತಿ, ಪುಟ ೫೭

೧೫೦೧

ಮೂಲದ ಕಥೆ ನಿಮಿತ್ತ ಮಾತ್ರವಾದುದು. ಕವಿಗದು 'ಸೇರ'ದಿದ್ದರೆ ಅದರ ಗೋಜಿಗೆ ಹೋಗುತ್ತಲೇ ಇರಲಿಲ್ಲ. ಯಾವುದಾದರೂ ಅಂಶ ಸೇರದಿದ್ದರೆ ಅದನ್ನು ತನ್ನ ಇಚ್ಛೆಗೆ ಅಧೀನವಾಗುವಂತೆ ಬದಲಾಯಿಸುವ ನಿಯತಿಕೃತ ನಿಯಮ ರಹಿತ ಸ್ವಾತಂತ್ರ್ಯ ಕವಿಯ ನಿರಂಕುಶಮತಿಯ ಹುಟ್ಟು ಹಕ್ಕಾಗಿದೆ.

ಶೂದ್ರ ತಪಸ್ವಿ, ಮಾರ್ನುಡಿ, ಪುಟ ೪೦

೧೫೦೨

ಸೌಂದರ್ಯದ ವ್ಯಾಖ್ಯೆ ತಿಳಿಯದ ಮಾತ್ರಕ್ಕೆ ಅದರ ಅನುಭವವಾಗುವುದಿಲ್ಲ ಎಂದು ಯಾರೂ ಹೇಳರು.

ಇತ್ಯಾದಿ, ಪ್ರಕೃತಿ ಸೌಂದರ್ಯ ಪುಟ ೨

೧೫೦೩

ಸತ್ಯಕ್ಕೆ ಹೆದರುವವನು ಅಥವಾ ನಾಚುವವನು ನಿಜವಾದ ಜಿಜ್ಞಾಸುವಾಗಲಾರನು.

ಷಷ್ಟಿನಮನ, ಶ್ರೀ ರಾಮಕೃಷ್ಣ ಲೀಲಾಪ್ರಸಂಗ, ಪುಟ ೨೬೦

೧೫೦೪

ಭಾರತದಂತಹ ವೈವಿಧ್ಯಮಯವಾದ ವಿಶಾಲ ರಾಷ್ಟ್ರದ ದೊಡ್ಡ ದೊಡ್ಡ ಔದ್ಯೋಗಿಕ ನಗರಗಳೆಲ್ಲ ವೇಷ ಭೂಷಣ ಭಾಷೆ ಸಂಸ್ಕೃತಿ ಮೊದಲಾದವುಗಳಲ್ಲಿ ಸಂಕ್ಷಿಪ್ತ ಭಾರತಗಳೇ ಆಗಿರಬೇಕಾದುದು ಅನಿವಾರ್ಯ

ಮನುಜಮತ ವಿಶ್ವಪಥ, ಕನ್ನಡ ನಾಡಿನ ರಾಜಧಾನಿಯಲ್ಲಿ....., ಪುಟ ೪೯

೧೫೦೫

ಮಂದಿಯ ಕೈಚಪ್ಪಾಳೆ, ವೃತ್ತ ಪತ್ರಿಕೆಗಳ ಅಗ್ಗದ ಸ್ತುತಿ, ಬಿರುದು ಬಾವಲಿಗಳ ವ್ಯಾಮೋಹ ಇವುಗಳಿಗೆ ವಶನಾಗದೆ, ತಾನು ಹಿಡಿದ ಕೆಲಸವನ್ನು ಪಟ್ಟುಹಿಡಿದು ನಿಶ್ಶಬ್ದವಾಗಿ ಮಾಡುವಾತನೇ ನಿಜವಾದ ಕರ್ಮಯೋಗಿ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೧೩

೧೫೦೬

ಮಧುರತಮ
ಗಾಯನವು ಅಮಲತಮ ಹೃದಯದಿಂದಲ್ಲದೆ
ಹೊರಹೊಮ್ಮಲರಿಯದು !

ಜಲಗಾರ, ಪಾತ್ರ ಜಲಗಾರ, ಪುಟ ೧೩

೧೫೦೭

ವಸ್ತುಗಳು ಬೇರೆ ಬೇರೆಯಾಗಿ ಕಂಡರೂ ಅಂತರ್ಯಾಮಿಯಾಗಿರುವ ಅಂತರಾತ್ಮವು ಒಂದೇ. ಗುಪ್ತಗಾಮಿಯಾದ ಚೈತನ್ಯವಾಹಿನಿ ಎಲ್ಲೆಲ್ಲಿಯೂ ತುಂಬಿ ಮರೆಯಾಗಿ ಹರಿಯುತ್ತಿದೆ. ಇದನ್ನೇ 'ಏಕಮೇವಾದ್ವಿತೀಯಂ' ಎನ್ನುವುದು.

ಸಂನ್ಯಾಸಿ ಮತ್ತು ಇತರ ಕಥೆಗಳು, ಸಂನ್ಯಾಸಿ, ಪಾತ್ರ ಚೈತನ್ಯ, ಪುಟ ೫

೧೫೦೮

ಪುಸ್ತಕ ಓದುವವರ ಮೇಲೆ ಲೇಖಕನದು ಏನೂ ಬಲಾತ್ಕಾರವಿರುವುದಿಲ್ಲ. ಅವನಿಗೆ ಸ್ವಾರಸ್ಯವಾಗಿ ಕಂಡರೆ ಹಾಳೆ ಮಗುಚುತ್ತಾನೆ; ಹಾಗೆ ಕಾಣಲಿಲ್ಲ, ಮುಚ್ಚುತ್ತಾನೆ. ಅವನ ತಿರಸ್ಕಾರದ ಕಿರುನಗೆ ತನ್ನ ಕೊಂಕಿನಿಂದ ಲೇಖಕನನ್ನು ಇರಿಯುವುದಿಲ್ಲ. ವಾಚಕನ ಧಿಕ್ಕಾರದ ಕೋರೆಯ ವ್ಯಾಘಾತದಿಂದ ದೂರವಾಗಿ ಲೇಖಕ ಸಂಪೂರ್ಣವಾಗಿ ಸುರಕ್ಷಿತ. 'ಯಾರಿಗೆ ಲಭ್ಯವಲ್ಲವೋ ಅವರಿಗೆ ಲಭ್ಯವಿಲ್ಲ' – ಎಂಬ ಸ್ವರ್ಣಾಕ್ಷರಗಳು ಲೇಖಕನ ಗುರಾಣಿಯ ಮೇಲೆ ಥಳ ಥಳಿಸುವಂತೆ ಖಚಿತವಾಗಿ ಧಿಕ್ಕಾರದ ಬದ್ಧ ಭ್ರುಕುಟಿಯನ್ನು ಭಂಗಿಸಿ ಉಪಕಾರ ಮಾಡುತ್ತವೆ !

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೬೬

೧೫೦೯

ನನ್ನದು ವಿಶ್ವಪ್ರಜ್ಞೆ. ನಾನು ಭಾರತೀಯನಾಗಿ ಅದರಲ್ಲಿಯೂ ಕನ್ನಡಿಗನಾಗಿ ಹುಟ್ಟಿದ್ದರಿಂದ ಆ ಸಂಸ್ಕೃತಿಯ ಮತ್ತು ಆ ಭಾಷೆಯ ಪರಿಭಾಷೆಯನ್ನು ಅನಿವಾರ್ಯವಾಗಿ ಉಪಯೋಗಿಸುತ್ತೇನಷ್ಟೆ. ಸತ್ಯ ವೈದಿಕವಾಗಿ ಪ್ರಕಟವಾದ ಮಾತ್ರಕ್ಕೆ ಅಸತ್ಯವಾಗುವುದಿಲ್ಲ ; ಆದರ್ಶಮಯವಾದ ಮಾತ್ರಕ್ಕೆ ಅವಾಸ್ತವವಾಗುವುದಿಲ್ಲ....ಚಿನ್ನದ ಒಡವೆಯನ್ನು ಅಕ್ಕಸಾಲಿ ಮಾಡಿದ ಮಾತ್ರಕ್ಕೆ ಚಿನ್ನ ಅಸತ್ಯವಾಗುತ್ತದೆಯೆ ? ಗ್ರಾವಿಟೇಶನ್ ಸಿದ್ಧಾಂತವನ್ನು ನ್ಯೂಟನ್ ಕಂಡು ಹಿಡಿದ ಮಾತ್ರಕ್ಕೆ ಅದು ಕ್ರೈಸ್ತವಾಗುತ್ತದೆಯೆ ? ವೇದದ ಋಷಿ ಸನಾತನ ಶಾಶ್ವತ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡು ಅದಕ್ಕೆ ಬ್ರಹ್ಮನ್ ಎಂದು ಹೆಸರು ಕೊಟ್ಟ ಮಾತ್ರಕ್ಕೆ ಆ ಸತ್ಯ ಆ ಋಷಿಯ ಸೃಷ್ಟಿಯಾಗುತ್ತದೆಯೆ ? ಆ ಸತ್ಯ ಋಷಿಗೆ ಪೂರ್ವದಲ್ಲಿಯೆ ಇದ್ದದ್ದು. ಆ ಋಷಿ ಮಾತ್ರವಲ್ಲ, ಮನುಷ್ಯರೆಲ್ಲ ಮುಗಿದಮೇಲೆಯೂ ಆ ಸತ್ಯಕ್ಕೆ ಚ್ಯುತಿ ಬರುವುದಿಲ್ಲ. ಗುರುತ್ವಾಕರ್ಷಣ ಶಕ್ತಿ ನ್ಯೂಟನ್ನಿಗೆ ಪೂರ್ವದಲ್ಲಿಯೂ ಇತ್ತು, ಮನುಷ್ಯ ಕುಲವೇ ನಾಶವಾದ ಮೇಲೆಯೂ ಇರುತ್ತದೆ. ಅಂತಹ ಸತ್ಯವನ್ನು ನಿತ್ಯ, ಸನಾತನ, ಶಾಶ್ವತ ಎನ್ನುತ್ತೇವೆ. ಬೇರೆ ಬೇರೆ ದೇಶಗಳು, ಬೇರೆ ಬೇರೆ ಭಾಷೆಗಳೂ ಬೇರೆ ಬೇರೆ ಹೆಸರು ಕೊಡಬೇಕಷ್ಟೆ. ನನ್ನ ಜೀವನ ದರ್ಶನ ಅಂತಹ ಅಚ್ಯುತ ಸತ್ಯದ ಮೇಲೆ ನಿಂತಿದೆ. ನನ್ನ ಸಾಹಿತ್ಯವೂ ಅದನ್ನೆ ಅಭಿವ್ಯಕ್ತಗೊಳಿಸುತ್ತದೆ. ಅದನ್ನು 'ನಿಮ್ಮಲ್ಲಿ' ಕೆಲವರು 'ವೈದಿಕ' ಎಂದು ನಿಂದಿಸುವಂತೆ ಜರೆಯುವ ರೀತಿಯಲ್ಲಿ 'ಅವರಲ್ಲಿ' ಕೆಲವರು 'ಅವೈದಿಕ' ಎಂದೂ

ತಿರಸ್ಕರಿಸುತ್ತಾರೆ. ಆದರೆ ನನ್ನ ಸಾಹಿತ್ಯ ಉದ್ಭವಿಸುವುದು ಬದುಕಿನಿಂದ, ಬದುಕಿಗಾಗಿ ; ಮತ್ತು ಬದುಕಿನಾಚೆಯ ಬದುಕಿಗಾಗಿ.

ವಿಚಾರ ಕ್ರಾಂತಿಗೆ ಆಹ್ವಾನ, ಪ್ರಶ್ನೆಗಳಿಗೆ ಉತ್ತರಗಳು, ಪುಟ ೧೧೩.೪

೧೫೧೦

ನಾಮ ಮುದ್ರೆ ವಿಭೂತಿಗಳ ಬಳಿದುಕೊಂಬವರು
ಕತ್ತೆಯಂದದಿ ಗದ್ದೆಯಲಿ ಗೆಯ್ದು ಮೈಬೆವರು
ಸುರಿಸಿ ಗೊಬ್ಬರ ಮಣ್ಣು ಬಳಿದುಕೊಂಬರಿಗಿಂತ
ಮೇಲೆಂಬ ಭಾವ ತಲೆಕೆಳಗಾಗಿ ಹೋಗುತ್ತಿದೆ !
ನೇಗಿಲ ಕುಳಂ ದೊರೆಯ ಕತ್ತಿಯಂ ಕಿತ್ತೆಸೆದು,
ಮುತ್ತಿನುಂಡೆಯ ಮುಡಿವ ಸಿರಿನೆತ್ತಿಯನ್ನುತ್ತು
ಬತ್ತಮಂ ಬಿತ್ತಿ ಬೆಳೆಯುವ ಉತ್ತಮದ ಹೊತ್ತು
ಹತ್ತಿರಕೆ ಹತ್ತಿರಕೆ ಬರುತಿರುವುದೊತ್ತೊತ್ತಿ !
ಗೊಬ್ಬರಂ ಸಿಂಹಾಸನಕ್ಕೇರಿದಾ ದಿನಂ
ತನ್ನ ಹೊಗಳಿದ ಕಬ್ಬಿಲನ ಕಬ್ಬಿಗನ ಮಾಡಿ
ಮೆರೆಯುವುದು ! ಅಂದು ಗೊಬ್ಬರದ ಕಂಪೆಲ್ಲರ್ಗೆ
ಪರಿಮಳದ್ರವ್ಯ ತಾನಾದಪುದು ! ಏತಕೆನೆ,
ಸಿರಿವೆರಸು ಶಕ್ತಿಯಿರೆ ಗೊಬ್ಬರವೆ ಪರಿಮಳಂ ;
ಇಲ್ಲದಿರೆ ಪುನುಗು ತಾನಾದೊಡಂ ಗೊಬ್ಬರಂ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಗೊಬ್ಬರ, ಪುಟ ೧೮

೧೫೧೧

ಆ ಲೋಕವ ನೆನೆದಳದಿರೊ, ಕಂದ.
ಕೀಳೇನ್ ? ಈ ಲೋಕವಿದೂ ಚಂದ ;
ರವಿ, ಶಶಿ, ಗಗನಂ, ತಾರಾವೃಂದ,
ಸಾಗರ, ನದಿ, ವನ, ಗಿರಿಧಾತ್ರಿ,
ಕವಿಕೃತಿ, ಕನ್ನಡ ನುಡಿ, ನಿನ್ನಮ್ಮ,
ತಂಬೆಲರ್, ಆನ್, ಅಲರ್, ಅಂತೆಯೆ ನಮ್ಮ
ಗಾಂಧೀಜಿಯಿರುವರೊ ! ಅಳದಿರೊ, ತಮ್ಮಾ,
ಕೊನೆಗಾಣುವುದೋ ಈ ರಾತ್ರಿ !

ಜೇನಾಗುವಾ, ಸ್ವಾಗತ ನಿನಗೆಲೆ ಕಂದಯ್ಯ, ಪುಟ ೩೧

೧೫೧೨

ಭಗವಂತನಿಲ್ಲಿರದೆ ಮತ್ತೆಲ್ಲಿ ವೈಕುಂಠ
ದಲ್ಲಿಹನೆ ? ವೈಕುಂಠವಿರುವುದೆಲ್ಲಿ
ಈ ದಿವ್ಯ ಭವ್ಯ ಸುಂದರ ದೃಶ್ಯದಲ್ಲಿರದೆ ?

ನವಿಲು, ಮೈಸೂರಿನಲ್ಲಿ, ಪುಟ ೨೩

೧೫೧೩

ಮದ್ಯಪಾನದಿಂದ ಮನುಷ್ಯನಿಗೆ ತಾತ್ಕಾಲಿಕ ಉತ್ಸಾಹ ಉಲ್ಲಾಸಗಳು ತೋರಿ ಬಂದರೂ ಪರಿಣಾಮದಲ್ಲಿ ಅದು ಅನರ್ಥಕಾರಿ. ದೇಹವನ್ನು ನಿರ್ವೀರ್ಯವನ್ನಾಗಿಯೂ ಮನಸ್ಸನ್ನು ನಿಸ್ತೇಜವನ್ನಾಗಿಯೂ ಮಾಡಿ ಆತ್ಮನಾಶಗೈಯುತ್ತದೆ. ಮದ್ಯಪಾನದಿಂದಾಗು ತ್ತಿರುವ ಮಹಾ ಕಷ್ಟನಷ್ಟಗಳ ಪರಂಪರೆಗಳನ್ನು ಅರಿತು, ಮಹಾತ್ಮಗಾಂಧಿಯವರೇ ಮೊದಲಾದ ಮಹನೀಯರು ಅದನ್ನು ತೊಲಗಿಸಲು ಸರ್ವಪ್ರಯತ್ನ ಮಾಡುತ್ತಿದ್ದಾರೆ. ಸೆಕೆ ದೇಶದವರ ಮಾತಂತಿರಲಿ ; ಚಳಿ ದೇಶದವರೂ ಕೂಡ ಮದ್ಯಪಾನದ ಪಿಶಾಚಿ ಯಿಂದ ಪಾರಾಗಲು ಹಾತೊರೆಯುತ್ತಿದ್ದಾರೆ. ಮದ್ಯಪಾನದಿಂದ ಮಾನ, ಪ್ರಾಣ, ಧನ ಎಲ್ಲವೂ ನಷ್ಟ. ಮದ್ಯಪಾಯಿಯ ಮನದಲ್ಲಿಯೂ ಶಾಂತಿಯಿರುವುದಿಲ್ಲ. ಆತನು ದಿನ ದಿನವೂ ಅಧೋಗತಿಗಿಳಿಯುತ್ತಾನೆ. ಆತನಿಗೆ ಸಂಭವಿಸುವ ಮಕ್ಕಳು ಕೂಡ ಮಂದ ಅಥವಾ ವಕ್ರ ಬುದ್ಧಿಗಳಾಗಿಯೂ ಅಬಲರಾಗಿಯೂ ಇರುತ್ತಾರೆ. ಆದ್ದರಿಂದ ಮದ್ಯಪಾಯಿಯ ಪಾಪ ಅವನೊಂದಿಗೆ ನಶಿಸುವುದಿಲ್ಲ ; ಅದು ಆತನ ಸಂತಾನಕ್ಕೂ, ಅಲ್ಲಿಂದ ಸಮಾಜಕ್ಕೂ ಹಬ್ಬಿ ಕೇಡು ಮಾಡುತ್ತದೆ. ಆದ್ದರಿಂದ ತಮ್ಮ ಮತ್ತು ತಮ್ಮ ಜನಾಂಗದ ಶ್ರೇಯಸ್ಸನ್ನು ಬಯಸುವವರೆಲ್ಲರೂ ಮದ್ಯಪಾನವೆಂಬ ಪಿಶಾಚಿಯನ್ನು ಸರ್ವಪ್ರಕಾರದಿಂದಲೂ ಸಂಹರಿಸುವುದಕ್ಕೆ ಪ್ರಯತ್ನಿಸಬೇಕು.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೨೦

೧೫೧೪

ಜಡತೆಗೂ ಉಂಟಲ್ಲೆ
ಒಂದೇನೊ ಎಲ್ಲೆ ?

ಪ್ರೇಮಕಾಶ್ಮೀರ, ಪ್ರಶ್ನೋತ್ತರ, ಪುಟ ೩೬

೧೫೧೫

ಕನಸಿನಂತೆನಗೆಲ್ಲ ತೋರುತಿಹುದಯ್ಯ ;
ಮಾನವರು, ಹಕ್ಕಿಗಳು, ಮಿಗಗಳೆಲ್ಲ.
ಬೆಟ್ಟಗಳು ಕೂಡ ಕಾಣುವುದು ಕನಸಂತೆ ;
ಬಾಲರೆನಗಾಡುತಿಹ ಕನಸ ಮಾಲೆ.
ಕನಸೊಡೆದು ಬೇರೊಂದು ಕನಸಪ್ಪುದಯ್ಯ ಕಡೆಗೆ !

ಸಾವು ಬಾಳುಗಳೇನು ? ಕನಸಿನಿಂ ಕನಸಿನೆಡೆಗೆ
ಹಾರುವುದೆ ಸಂಸಾರ ! ನಾನಾರು ? ಯಾವ ಮನಸೊ
ಕಾಣುತಿಹ ಕನಿಸಿನಲಿ ಸುಳಿದಲೆವ ಕಿರಿಯ ಕನಸೋ

ಹೊನ್ನಹೊತ್ತಾರೆ, ಕನಸಿನ ಕನಸು, ಪುಟ ೨೫

೧೫೧೬

ಮಕ್ಕಳಿಗೆ ಬೇಕಾದುದು ಶ್ರದ್ಧೆ : ತಾಯಿ ತಂದೆ ಗುರು ಹಿರಿಯರು ಹೇಳಿದುದನ್ನು ನಂಬಿ, ಅದರಲ್ಲಿ ವಿಶ್ವಾಸವಿಟ್ಟು, ಅದರಂತೆ ನಡೆದರೆ ಅವರಿಗೆ ಕ್ಷೇಮ ಮತ್ತು ಶ್ರೇಯಸ್ಸು. ಲೋಕಕ್ಕೆ ಹೊಸದಾಗಿ ಕಾಲಿಟ್ಟಿರುವ ಮಗು, ಲೋಕಾನುಭವದ ಏನೊಂದೂ ನೆಲಗಟ್ಟು ಭದ್ರವಾಗಿಲ್ಲದೆ, ತನ್ನ ಕಾಲ ಮೇಲೆ ತಾನೆ ನಡೆಯುತ್ತೇನೆ, ಇನ್ನೊಬ್ಬರ ಕೈಯಾಪು ತನಗೇಕೆ ಎಂದು ಹೊರಟರೆ ಎಡವಿ ಬಿದ್ದು ಹಲವಾರು ಅಪಾಯಗಳಿಗೆ ಒಳಗಾಗುವ ಸಂಭವ ಉಂಟು ; ಅಷ್ಟೇ ಅಲ್ಲದೆ ಪ್ರಾಣಾಪಾಯಕ್ಕೂ ಒಳಗಾದರೂ ಆದೀತು. ಆದ್ದರಿಂದ ಲೋಕಾನುಭವವಿರುವವರ ಬುದ್ಧಿವಾದದಂತೆ ನಡೆಯುವುದೇ ಕ್ಷೇಮಕರ. ತಾನೇ ಆಲೋಚಿಸಿ ತನಗೆ ತೋರಿದಂತೆ ನಡೆಯುವ 'ವಿಚಾರ ಬುದ್ಧಿ' ಮಗುವಿಗೆ ಒಳಿತಲ್ಲ.

ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಮಕ್ಕಳಿಗೇಕೆ ವೈಚಾರಿಕತೆ, ಪುಟ ೩೫

೧೫೧೭

ಸೃಷ್ಟಿಮೂಲ ಪ್ರಥಮನಾಂ, ಸ್ಫೂರ್ತಿಯಾಂ, ಪೃಥುಲನಮ್ :
ಸುಖದುಃಖ ಪಾಶದಿಂ ಜೀವರನು ಬಂಧಿಸುವೆನಾಂ
ಭಾವಜಂ ! ಭುವನ ಹೃದಯದಿ ಪ್ರೇಮ ಸೌಂದರ್ಯದಾ
ವಿದ್ಯುತ್ಪ್ರವಾಹಮಂ ಚೋದಿಸುತೆ, ಮೃತ್ಯು ಜರೆ
ಬೇಸರಗಳಾನಂದಮಂ ತವಿಸದೊಲ್, ಚಿರಮದಂ
ಪೊರೆಯುತಿಹ ಚಿರಯೌವನೋಲ್ಲಾಸನಿಧಿ ನಾನ್.

ಚಿತ್ರಾಂಗದಾ, ಎರಡನೆಯ ಪರ್ವಂ, ಪಾತ್ರ ಮದನವಾಣಿ, ಪಂಕ್ತಿ ೭೨೭–೩೨, ಪುಟ ೨೬–೭

೧೫೧೮

ಅಂತರಂಗದ ಮೂಲತತ್ವಮನರಿಯದಿಹ
ಕುಬ್ಜದೃಷ್ಟಿಯ ನರರ್ ತೆಗಳುವರ್, ನೂಂಕುವರ್
ಎಂದಾನ್, ಎಲ್ಲಮಂ ತಿಳಿದಾನುಂ ಅಂತೆಸೆಗೆ
ನನ್ನಿಗೇ ಕುಂದಹುದು. ಎನಗೆ ದ್ವೇಷಿಗಳಿಲ್ಲ ;
ಪ್ರಿಯರುಮಿಲ್ಲ ! ಎನ್ನ ದಿಟ್ಟಿಗೆ ಎಲ್ಲರೊಂದೇ !

ಶ್ಮಶಾನ ಕುರುಕ್ಷೇತ್ರಂ, ಪಾತ್ರ ಕೃಷ್ಣ, ಪುಟ ೧೯

೧೫೧೯

ಕಲೆಯ ಬಲೆಯನ್ನು ನೆಯ್ದುವನಿಗೆ ಬಣ್ಣದ ದಾರಗಳು ಸಾಧನ ಸಾಮಗ್ರಿಗಳೇ ಹೊರತು ಅವು ಸಿದ್ಧಿಯ ಪರಿಪೂರ್ಣತೆಯಲ್ಲ ಎಂಬುದನ್ನು ನಾವು ಮರೆಯಬಾರದು. ಆದರೆ ಇನ್ನೊಂದು ವಿಷಯವನ್ನೂ ನೆನಪಿನಲ್ಲಿ ಇಟ್ಟಿರಬೇಕು. ಅದೇನೆಂದರೆ, ಸೂತ್ರವನ್ನು ಅದರ ಕಲಾಮಯವಾದ ಆವರಣ ಸನ್ನಿವೇಶದಿಂದ ನಾವೆಂದಿಗೂ ಸಂಪೂರ್ಣವಾಗಿ ಪ್ರತ್ಯೇಕಿಸಿಬಿಡಬಾರದು.

ಕಾವ್ಯವಿಹಾರ, ಕುಮಾರವ್ಯಾಸನ ದುರಂತ ಕರ್ಣ, ಪುಟ ೨೯

೧೫೨೦

ಬಾಲ್ಯ ವಿವಾಹ. ಇದರ ವಿಷಯವಾಗಿ ಎಷ್ಟು ಹೇಳಿದರೂ ಸ್ವಲ್ಪವೇ ಸರಿ. ಇದರಿಂದ ನಮ್ಮ ಭಾರತ ವರ್ಷವೇ ದುರ್ಬಲವಾಗಿದೆ ; ಇನ್ನೂ ಆಗುತ್ತಿದೆ. ಅಸಂಖ್ಯ ಬಾಲಬಾಲಿಕೆಯರು ಈ ಭೂತಕ್ಕೆ ವರ್ಷ ವರ್ಷವೂ ಬಲಿಯಾಗುತ್ತಿದ್ದಾರೆ. ಆಶಾಪೂರ್ಣವಾಗಿರುವ ಜೀವಕುಸುಮಗಳು ಜೀವನ ಪ್ರಾರಂಭದಲ್ಲಿಯೇ ಬಾಲ್ಯ ವಿವಾಹ ಎಂಬ ವಿಷಕೀಟಗ್ರಸ್ತರಾಗಿ ಬಾಡಿ ಬಿದ್ದುಹೋಗುವುದನ್ನು ಕಂಡರೆ ಯಾವನು ತಾನೆ ಮರುಗುವುದಿಲ್ಲ ? ನನ್ನೊಡನೆ ಹುಟ್ಟಿ ಬೆಳೆದವರು, ನನ್ನ ತರುವಾಯ ಹುಟ್ಟಿ ಬಂದ ಕಿರಿಯರು, ಆಶಾಪೂರ್ಣ ಜೀವಿಗಳು ಬಾಲ್ಯ ವಿವಾಹಕ್ಕೆ ತುತ್ತಾಗಿ ಹತಚೇತಸರಾಗಿಯೋ ಅಥವಾ ಗತಪ್ರಾಣರಾಗಿಯೋ ಆಗಿರುವುದನ್ನು ನಾನು ನೋಡಿ ನೆನೆದು ಎದೆ ನೋಯುತ್ತಿದ್ದೇನೆ. ಕಣ್ಣಿನ ಕಾಂತಿ, ಮನಸ್ಸಿನ ಶಾಂತಿ, ಮುಖದ ತೇಜಸ್ಸು, ಆತ್ಮದ ಓಜಸ್ಸು, ದೇಹದ ಉಲ್ಲಾಸ, ಹೃದಯದ ಉತ್ಸಾಹ ಎಲ್ಲವನ್ನೂ ಕಳೆದುಕೊಂಡು ಜೀವಶವಗಳಂತೆ ಇರುವವರಿಂದ ನಾಡಿಗಾದರೂ ಜನರಿಗಾದರೂ ಏನು ಉಪಯೋಗವಾದೀತು? ಆದ್ದರಿಂದ ಪ್ರಾಪ್ತ ವಯಸ್ಕರಾದ ಮೇಲೆಯೇ ಮಕ್ಕಳಿಗೆ ವಿವಾಹ ಮಾಡುತ್ತೇವೆ ಎಂಬುದು ನಿಮ್ಮ ಪ್ರತಿಜ್ಞೆಯಾದರೆ ಮಲೆನಾಡಿನ ಜೀವನ ಇನ್ನೂ ಹೆಚ್ಚು ಚೈತನ್ಯಮಯವಾಗುವುದರಲ್ಲಿ ಸಂದೇಹವಿಲ್ಲ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೨೦–೧

೧೫೨೧

ಪಂಡಿತರ ಬಾಯಲ್ಲಿ ಕೇಳಿದರೆ ಏನು ?....
ಆಡುವುದು ಬಾಯಲ್ಲಿ ದೊಡ್ಡ ವೇದಾಂತ
ಮಾಡುವುದು ದುರ್ನಡತೆ ; ಹೀನವೈ ಸ್ವಾಂತ !
ಕೊಳೆತು ನಾರುತಲಿರುವುದವರಂತರಂಗ ;
ಆದರೂ ಮಘಮಘಿಪುದವರ ಬಹಿರಂಗ !

ಹಾಳೂರು, ಪಂಕ್ತಿ ೪೫೫–೬೨, ಪುಟ ೨೦

ಮಹದಾಲೋಚನೆ ಉತ್ತಮ ಕಲ್ಪನೆಗೆ ಸಹಕಾರಿಯಾಗುವಂತೆ, ಉಜ್ವಲ ಭಾವಕ್ಕೂ ಪ್ರೇರಕವಾಗುತ್ತದೆ. ಬುದ್ಧಿ ಹೆಚ್ಚಾದರೆ ಕಲ್ಪನೆ ಹೆಚ್ಚಾಗುತ್ತದೆ ಎಂದು ಕೆಲವರ ಮತ. ಆದರೆ ಅದೇನೂ ಸರ್ವವ್ಯಾಪಿಯಾದ ಸೂತ್ರವಲ್ಲ. ವಿಜ್ಞಾನ–ನಿಜವಾದ ವಿಜ್ಞಾನ–ನಿಜವಾದ ಕಾವ್ಯಕ್ಕೆ ವಿರೋಧಿಯಲ್ಲ. ವಿಜ್ಞಾನ ಶಾಸ್ತ್ರ ತತ್ತ್ವ ಶಾಸ್ತ್ರಗಳೆರಡೂ ಬುದ್ಧಿ ಸೂಕ್ಷ್ಮತೆಯ ಮೇಲೆ ನಿಂತಿವೆ; ಕಾವ್ಯ ಕಲೆಗಳು ಹೃದಯತೀಕ್ಷ್ಣತೆಯ ಮೇಲೆ ನಿಂತಿವೆ. ಇದು ಸ್ವಲ್ಪಮಟ್ಟಿಗೆ ನಿಜವಾದರೂ ಬುದ್ಧಿ ಸೂಕ್ಷ್ಮತೆಯಿಂದ ಸಿದ್ಧಿಸಿದ ತಿಳಿವಳಿಕೆ ಹೃದಯದ ಕಲ್ಪನೆಯನ್ನೂ ಭಾವಗಳನ್ನೂ ಕೆರಳಿಸಬಲ್ಲುದು ಎಂಬುದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಹಾಗೆಯೆ ವಿಜ್ಞಾನ ಮತ್ತು ತತ್ತ್ವಶಾಸ್ತ್ರಗಳು ನಮಗೆ ತೋರುವ ಭವ್ಯ ದರ್ಶನಗಳಿಗೆ ಕಲ್ಪನಾಶಕ್ತಿ ಮತ್ತು ಭಾವಗಳು ಎಷ್ಟರಮಟ್ಟಿಗೆ ಕಾರಣವಾಗಿವೆ ? ಆ ದರ್ಶಗಳಲ್ಲಿ ಅತ್ಯುತ್ತಮ ಕಾವ್ಯಕಲೆಯಲ್ಲಿ ಮಾತ್ರವೆ ಗೋಚರವಾಗುವ ಕಲ್ಪನೆಯೂ ಭಾವವೂ ಎಷ್ಟಿವೆ ಎಂಬುದನ್ನು ಗಣನೆಗೆ ತೆಗೆದುಕೊಂಡರೆ ವಿಜ್ಞಾನ ತತ್ತ್ವಶಾಸ್ತ್ರಗಳಿಗೂ ಕಾವ್ಯ ಕಲೆಗಳಿಗೂ ಬುದ್ಧಿ ಆಲೋಚನೆಗಳಿಗೂ ಕಲ್ಪನೆ ಭಾವನೆಗಳಿಗೂ ನಾವು ಮಾಡುವ ವಿಭಜನಾ ವ್ಯತ್ಯಾಸ ಎಷ್ಟು ಕೃತಕವಾದುದೆಂದು ಚೆನ್ನಾಗಿ ತೋರುತ್ತದೆ. ನಿಜವಾಗಿ ನೋಡಿದರೆ ಮನುಷ್ಯನ ವ್ಯಕ್ತಿತ್ವ ಏಕಾಖಂಡವಾದುದು – ಸಮಸ್ತ ಜಗತ್ತಿರುವಂತೆಯೆ. ನಾವು ನಮ್ಮಲ್ಲಿರುವ ಬೇರೆ ಬೇರೆ ಶಕ್ತಿಗಳನ್ನು ಸೂಚಿಸಲು ಬೇರೆ ಬೇರೆ ಪದಗಳನ್ನು ನಮ್ಮ ಸೌಕರ್ಯಕ್ಕಾಗಿ ಉಪಯೋಗಿಸುತ್ತೇವೆ. ಪದಗಳಿರುವ ಪೃಥಗ್ಭಾವವನ್ನು ಅದ್ವೈತವಾಗಿರುವ ಮೂಲವಸ್ತುವಿಗೂ ಆರೋಪಿಸುವುದು ಜ್ಞಾನದ ಅಜ್ಞಾನವೆಂದೆ ಹೇಳಬೇಕಾಗುತ್ತದೆ. ಆದ್ದರಿಂದ ಪ್ರತಿಭೆಯಲ್ಲಿ ಆಲೋಚನೆ, ಕಲ್ಪನೆ, ಭಾವಗಳು ಐಕ್ಯವಾಗಿವೆ, ಅಖಂಡವಾಗಿವೆ. ಬುದ್ಧಿಭಾವಗಳ ವಿದ್ಯಾದಾಲಿಂಗನವೆ ಪ್ರತಿಭೆ. ಆದ್ದರಿಂದ ಪ್ರತಿಭೆಯುಳ್ಳ ಕವಿಯ ಬುದ್ಧಿ ಆತನಲ್ಲಿಯ ಕಲ್ಪನೆ ಭಾವಗಳಂತೆಯೆ ಮಹೋನ್ನತನಾಗಿರಬೇಕು. ಎಂದರೆ ಆತನ ದರ್ಶನದ ಹೃದಯದಲ್ಲಿ ತತ್ತ್ವದ ಅಮೃತ ಕಲಶವಿರಬೇಕು. ತತ್ತ್ವಗರ್ಭಿತವಲ್ಲದ ದರ್ಶನ ಎಷ್ಟೇ ಮನರಂಜಕವಾಗಿರಲಿ ಲಘುವಾದುದು. ಅದು ನೊರೆಯೆ ಹೊರತು ಮುತ್ತಲ್ಲ.

ಕಲಾಸುಂದರಿ, ಮುನ್ನುಡಿ, ಪುಟ v-vi

೧೫೨೩

ಬಡಬಗ್ಗರ ಗುಡಿಸಲುಗಳ ಮುರಿದು
ಗುಡಿಗಳ ಕಟ್ಟುವರೆನಗಾಗಿ !
ನರಳುತ್ತಿರೆ ನಾ ನೆತ್ತರು ಹರಿದು
ಸಂಗೀತದಿ ನನ್ನನು ಕೂಗಿ
ಪ್ರಾರ್ಥನೆ ಮಾಡಿದೆವೆಂದೆನ್ನುವರು,
ರಕ್ತ ಮಾಂಸವನೆ ತಿನ್ನುವರು !
ನನ್ನ ಧರ್ಮದಾ ಹೆಸರನೆ ಹೇಳಿ

ನನ್ನನೆ ಶಿಲುಬೆಗೆ ಕುತ್ತುವರು ;
ನನ್ನ ರಕ್ತದಾ ಹೊಳೆಯೊಳೆ ತೇಲಿ
ಹೊಸ ಹೊಸ ಶಿಲುಬೆಯ ಕೆತ್ತುವರು !
ಮಾನವರರಿಯರು ಕ್ಷಮಿಸೈ, ತಂದೆ :
ಅಂದೂ ಇಂದೂ ಎರಡೂ ಒಂದೇ !

ಪಾಂಚಜನ್ಯ, ಅವತಾರ, ಪುಟ ೭೨

೧೫೨೪

ಕಾವ್ಯವೋದುವ ವ್ಯಕ್ತಿ ತನಗೆ ತಾನೆ ಬಹುಕಾಲದ ಅನುಭವದಿಂದ ತನ್ನ ಭಾವಕೋಶವನ್ನು ತುಂಬಿಕೊಂಡಿರಬೇಕಾಗುತ್ತದೆ. ಹಾಗೆ ಭಾವಕೋಶ ತುಂಬಿರದಿದ್ದರೆ ಉಪಮೆಯ ಉದ್ದೇಶ ವಿಫಲ. ಭಾವಕೋಶ ಬರಿದಾಗಿರುವಾತನಿಗೂ ಅಥವಾ ಅಲ್ಪ ಸ್ವಲ್ಪ ತುಂಬಿರುವಾತನಿಗೂ ಮಹೋಪಮೆ ಬಹಳ ಉಪಕಾರ ಮಾಡುತ್ತದೆ. ಓದುಗನೇ ಬಹುಕಾಲದ ಪ್ರಯತ್ನದಿಂದಲೂ ಶ್ರಮದಿಂದಲೂ ಪಡೆಯಬಹುದಾದ ಅನುಭವಗಳನ್ನೆಲ್ಲ ಮಹೋಪಮೆ ಒಟ್ಟಿಗೆ ತಂದುಕೊಡುತ್ತದೆ. ಆ ಅನುಭವಗಳು ಕವಿಯ ಅನುಭವಗಳಾಗಿಯೂ ಹೊರಹೊಮ್ಮಿರುವುದರಿಂದ ಹೊಸತಾಗಿಯೂ ರಸವತ್ತಾಗಿಯೂ ಇರುತ್ತವೆ.

ತಪೋನಂದನ, ಮಹೋಪಮೆ, ಪುಟ ೬೭

೧೫೨೫

ನೆಲದಲ್ಲಿ, ಬಾನಲ್ಲಿ,
ಕಡಲು ಕಾಡುಗಳಲ್ಲಿ ಪಕ್ಕಿ ಮಿಗ ಪುಲ್ಗಳಲಿ
ಆರ್ಯರಲಿ ಮೇಣ್ ಅನಾರ್ಯರಲಿ, ಕೇಳ್, ವಿಶ್ವಮಂ
ಸರ್ವತ್ರ ತುಂಬಿದಂತರ್ಯಾಮಿ ಚೇತನಂ ತಾಂ
ಪ್ರೇಮಾತ್ಮವಾಗಿರ್ಪುದದರಿಂದೆ ಹಿಂಸೆಯಿಂ
ಪ್ರೇಮಮೂರ್ತಿಗಳಾದ ಸಂತಾನಮುದಿಸದಯ್.

ಶ್ರೀ ರಾಮಾಯಣ ದರ್ಶನಂ, ಕವಿಕ್ರತು ದರ್ಶನಂ, ಪಾತ್ರ ಜಾಬಾಲಿ, ಪುಟ ೨

೧೫೨೬

ಅನ್ನ ಬಟ್ಟೆಗಳನ್ನು ಸಂಪಾದಿಸುವುದು ಮಾತ್ರವೆ ವಿದ್ಯೆಯ ಗುರಿಯಲ್ಲ. ಅನ್ನ ಬಟ್ಟೆಗಳಿಂದ ಮನುಷ್ಯ ಬದುಕುತ್ತಾನೆ. ಆದರೆ ಅದು ಮನುಷ್ಯನ ಬದುಕಲ್ಲ ಮೃಗದ ಬದುಕು. ಭಗವಂತ ಮಾನವನಲ್ಲಿ ಒಂದು ಚೇತನವನ್ನಿಟ್ಟಿದ್ದಾನೆ, ಆತ್ಮವನ್ನಿಟ್ಟಿದ್ದಾನೆ. ಅದು ಭಗವಂತನ ಕಡೆ ಮುಂದುವರಿದಂತೆಲ್ಲಾ ಬುದ್ಧಿಶಕ್ತಿ, ಹೃದಯಶಕ್ತಿ ಅಥವಾ ಭಾವಶಕ್ತಿ ವಿಕಾಸವಾಗುತ್ತಾ ಹೋಗುತ್ತದೆ. ಬುದ್ಧಿಶಕ್ತಿಯ ವಿಕಾಸದಿಂದ ತತ್ವ

ಬೆಳೆಯುತ್ತದೆ ; ಭಾವಶಕ್ತಿಯ ವಿಕಾಸದಿಂದ ಕಾವ್ಯ ಮುಂದುವರಿಯುತ್ತದೆ. ಇದು ಅತ್ಯಗತ್ಯವಾಗಿ ನಡೆಯಬೇಕು. ಇಲ್ಲದಿದ್ದರೆ ಮನುಷ್ಯನು ಅಂದವಾಗಿ ಬಟ್ಟೆ ಹಾಕಿಕೊಂಡ ಪಶುವಾಗುತ್ತಾನೆ.

ಷಷ್ಟಿನಮನ, ಸಮನ್ವಯ ರಾಷ್ಟ್ರದಲ್ಲಿ ವಿಶ್ವವಿದ್ಯೆ, ಪುಟ ೧೭೪-೫

೪೦೮

ನಿನ್ನ
ಮೆಯ್ಯ ಮೈದಾನದಲಿ ನಾನು ಕ್ರೀಡಾಪಟು ;
ನಿನ್ನ
ವಕ್ಷಶೃಂಗಾಶ್ರಮದಿ ನಾ ತಪಂಗೈವ ವಟು
ನಿನ್ನ
ಒಂದೊಂದು ಅಂಗವೂ ನನ್ನ ಆನಂದಕುಟಿ ;
ಅಲ್ಲಿ
ಹಾಲುಜೇನನೆ ಹೀರಿ ಮೈಮರೆವುದೆನ್ನ ತುಟಿ !

ಅನುತ್ತರಾ, ಮೆಯ್ಯ ಮೈದಾನದಲಿ, ಪುಟ ೨೧

೧೫೨೮

ಧೈರ್ಯಗಳಲ್ಲಿ ಎರಡು ವಿಧಗಳಿವೆ. ಒಂದನೆಯದು ಮೃಗೀಯ ಮತ್ತು ತಾಮಸ. ಎರಡನೆಯದು ದೈವಿಕ ಮತ್ತು ಸಾತ್ವಿಕ. ತಾಮಸ ಧೈರ್ಯ ರಾಗ ಮೂಲ ವಾದುದು ; ಕ್ಷಣಿಕ ಉದ್ರೇಕಗಳಿಂದ ಉದ್ದೀಪನವಾದುದು, ಅವಿವೇಕವಾದುದು. ಸಾತ್ತ್ವಿಕ ಧೈರ್ಯ ನೀತಿ ಮೂಲವಾದುದು. ಮೊದಲನೆಯದು ಹುಲ್ಲು ಬೆಂಕಿಯಂತೆ ; ಎರಡನೆಯದು ಕಲ್ಲಿದ್ದಲ ಬೆಂಕಿಯಂತೆ. ಮೃಗೀಯ ಧೈರ್ಯ ದೇಹಬಲದ ಮೇಲೆ ನಿಂತಿದೆ. ದೈವಿಕ ಧೈರ್ಯ ಆತ್ಮ ಬಲದ ಮೇಲೆ ನಿಂತಿದೆ. ಮೃಗೀಯ ಧೈರ್ಯ ತನಗಿಂತಲೂ ಬಲವತ್ತರವಾದ ಪ್ರತಿಭಟನೆಯಿಂದ ಕುಗ್ಗಿ ಹೋಗುತ್ತದೆ. ಸಾತ್ತ್ವಿಕ ಧೈರ್ಯ ಕಷ್ಟ ಸಂಕಟ ಪ್ರತಿಭಟನೆಗಳಿಂದ ಮತ್ತಿನಿತು ಹಿಗ್ಗಿ ಉಜ್ವಲವಾಗುತ್ತದೆ. ಮೊದಲನೆಯದಕ್ಕೆ ಮರಣ ಭಯವಿದೆ ; ಎರಡನೆಯದಕ್ಕೆ ಅದಿಲ್ಲ. ಮೊದಲನೆ ಯದು ಕೇಡಿಯಾಗಿರುವ ಮಾರುವೇಷದ ಹೇಡಿತನ. ಎರಡನೆಯದು ಶಿಲುಬೆಗೇರುವ ಏಸುಕ್ರಿಸ್ತನ ಅಪಾರ ಸಾಮರ್ಥ್ಯ. ತಾಮಸ ಧೈರ್ಯ ಉದ್ರೇಕ ಕೊನೆಗೊಂಡೊಡನೆಯೆ ತಲೆ ಬಾಗುತ್ತದೆ.

ಕಾನೂರು ಹೆಗ್ಗಡತಿ, ಪುಟ ೧೫೪

೧೫೨೯

ಇಂದಿನ ಜಗತ್ತು ಹಿಂದಿನ ಜಗತ್ತಿನಂತಿಲ್ಲ. ಇಂದಿನ ಮಕ್ಕಳು ಹಿಂದಿನ ಮಕ್ಕಳಂತಿಲ್ಲ. ಇಂದಿನ ಮಕ್ಕಳಿಗೆ ಬೇಕಾಗುವ ವಿದ್ಯೆಯ ಸ್ವರೂಪ ಇಂದಿನ ವೈಜ್ಞಾನಿಕ

ಜಟಿಲ ನಾಗರಿಕ ಜೀವನಕ್ಕೆ ಹೊಂದಿಕೊಳ್ಳುವ ಪ್ರತಿಕ್ರಿಯೆಗೆ ಆವಶ್ಯಕವಾಗುವ ಲಕ್ಷಣದಿಂದ ಕೂಡಿರಬೇಕು. ಅದರಲ್ಲಿಯೂ ಭಾವಜೀವನಕ್ಕೆ ಸಂಬಂಧಪಡುವ ಮನೋಧರ್ಮದ ಲಕ್ಷಣ ಅತ್ಯಂತ ವೈಜ್ಞಾನಿಕವೂ ವೈಚಾರಿಕವೂ ಆಗಿರಬೇಕು. ಇನ್ನೂ ಮುಂದೆ ನಮ್ಮ ಮಕ್ಕಳು ಸಂಕುಚಿತ ಮತಭಾವನೆಗಳನ್ನೆಲ್ಲ ತಿರಸ್ಕರಿಸಿ ವಿಶಾಲ ಅಧ್ಯಾತ್ಮಕ್ಕೆ ಮಾತ್ರ ವಿದ್ಯಾರ್ಥಿಗಳಾಗಬೇಕು. ಲೋಕದ ಶಾಂತಿ ಸೌಖ್ಯಗಳಿಗೆ ಕಾರಣವಾಗುವ ಧರ್ಮವನ್ನು ವೈಚಾರಿಕತೆಯಿಂದ ಕಂಡುಕೊಂಡು ಮತಗಳನ್ನೆಲ್ಲ ಮತಿಯ ಒರೆಗಲ್ಲಿಗೆ ತಿಕ್ಕಬೇಕು. ಮತ ಜಾತಿಗಳನ್ನೆಲ್ಲಾ ತಮ್ಮ ಮನಸ್ಸಿನ ಹತ್ತಿರಕ್ಕೂ ಬರಕೊಡದೆ ದೂರೀಕರಿಸಬೇಕು. 'ಅನಿಕೇತನ'ರಾಗಿ ವೈಚಾರಿಕತೆಯ ಅಡಗಲ್ಲಿನ ಮೇಲೆ ತಮ್ಮ ಅಭ್ಯುದಯ ನಿಃಶ್ರೇಯಸಗಳ ವೈಜ್ಞಾನಿಕ ಅಭೀಪ್ಸಾ ವೇದಿಕೆಗಳನ್ನು ನಿರ್ಮಿಸಿಕೊಳ್ಳಬೇಕು.

ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಮಕ್ಕಳಿಗೇಕೆ ವೈಚಾರಿಕತೆ, ಪುಟ ೪೨

೧೫೩೦

ಜಾಣತನ ಅರಿವಲ್ಲ ! ಹಮ್ಮು ಸೋಹಂ ಮಲ್ಲ ;
ಅದು ಬರಿಯ ಕತ್ತಲೂ ಅಲ್ಲ ; ಬೆಳಕಿನ 'ಇಲ್ಲ' !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಕಾವಿಯನುಟ್ಟ ತರುಣನೊಬ್ಬನಿಗೆ, ಪುಟ ೬೭

೧೫೩೧

ಬಹುಶಃ ಪುರಾಣಗಳು ಮುಂದೆ ಸಂಭವಿಸಲಿರುವ ಇತಿಹಾಸವನ್ನು ಪ್ರತಿಮಾ ವಿಧಾನದಿಂದ ಪ್ರತಿಬಿಂಬಿಸುವ ಪೃಥ್ವೀಮನೋಮಂಡಲದ ವ್ಯೋಮಾಭಿಲಾಷೆ ಗಳಾಗಿರಬೇಕಲ್ಲವೆ ?

ವಿಭೂತಿ ಪೂಜೆ, ಶ್ರೀ ಅರವಿಂದರು, ಪುಟ ೧೨೧

೧೫೩೨

ಕವಿ ಆಶಾವಾದಿ. ಸರ್ವನಾಶದಲ್ಲಿಯೂ ಆಶಾವಾದಿ ಎಂದೂ ಹೇಳಿಕೊಳ್ಳುತ್ತಾನೆ. ಆದರೂ ಒಮ್ಮೊಮ್ಮೆ ಸುತ್ತಲೂ ಕಗ್ಗತ್ತಲು ಕವಿದಂತಾದಾಗ ತುಸು ಬೆಬ್ಬಳಿಸಿ ದಿಕ್ಕಗೆಟ್ಟಂತಾಗಿ ನಾಲ್ಕೂ ಕಡೆಗೆ ಭಗವಂತನ ಆಶ್ವಾಸನೆಯ ಆಶೀರ್ವಾದ ನಿರೀಕ್ಷೆಯಿಂದ ಕಣ್ಣು ಹೊರಳಿಸುತ್ತಾನೆ. ಆಗ ಪ್ರಾಚೀನದ ವ್ಯೋಮಾಂತದಲ್ಲಿಯೊ ಅಥವಾ ಅರ್ವಾಚೀನದ ಭೂಮಂಡಲದಲ್ಲಿಯೊ ಚಲಿಸುವ ಯಾವುದಾದರೊಂದು ದಿವ್ಯ ವಿಭೂತಿಯ ಪೂಜ್ಯ ಚರಣಚಿಹ್ನೆಯ ಅಗ್ನಿರೇಖೆಯೊಂದು ಧೈರ್ಯ ದೀಪಧಾರಿಯಾಗಿ ಮೈದೋರಿಯೆ ತೋರುತ್ತದೆ. ಆ ವಿಭೂತಿ ವ್ಯಕ್ತಿಯಾಗಿರಬಹುದು, ಘಟನೆಯಾಗಿರಬಹುದು, ಭಗವತ್ ಕೃತಿಯಾಗಿರಬಹುದು, ಪೌರಾಣಿಕ ಸಂಗತಿಯಾಗಿರಬಹುದು. ಐತಿಹಾಸಿಕ ಕ್ರಿಯೆಯಾಗಿರ ಬಹುದು, ಮಹಾಕಾವ್ಯವಾಗಿರಬಹುದು, ಅಥವಾ ಗಾನದ ವಿಮಾನವೇರಿ ಚೇತನ ವನ್ನು ಅನಂತತೆಗೆ ಬೀಸುವ ಒಂದು ಸಣ್ಣ ಭಾವಗೀತೆ ಕೂಡ ಆಗಿರಬಹುದು.

ಷಷ್ಟಿನಮನ, ಶ್ರೀ ವಿನೋಬಾಜಿ, ಪುಟ ೧೪೪

೧೫೩೩

ಈಗಾಗಲೆ ಸೃಷ್ಟಿಯಾಗಿರುವ ಸಾಹಿತ್ಯದ ಸ್ವರೂಪವನ್ನು ಜನತೆಗೆ ನಿರೂಪಿಸುವುದಕ್ಕೂ ಮುಂದೆ ಸೃಷ್ಟಿಯಾಗಲಿರುವ ಸಾಹಿತ್ಯವನ್ನು ಜನತಾಹೃದಯದ ದೃಷ್ಟಿಯಿಂದ ರೂಪಿಸುವುದಕ್ಕೂ ವಿಮರ್ಶೆ ನೆರವಾಗುತ್ತದೆ. ಸಾಹಿತ್ಯದ ಸ್ವರೂಪ, ಸಾಹಿತ್ಯದ ಉದ್ದೇಶ, ಸಾಹಿತ್ಯದ ಪ್ರಯೋಜನ, ಸಾಹಿತ್ಯ ಪ್ರಕಾರಗಳು, ಸಾಹಿತ್ಯ ಸತ್ತ್ವದ ವಿವಿಧಾಂಗಗಳು ಮೊದಲಾದ ಮೂಲತತ್ತ್ವಗಳನ್ನು ಕುರಿತು ಜಿಜ್ಞಾಸೆ ಸಾಹಿತಿಯ ದೃಷ್ಟಿಯ ರಚನೆಗೆ ಸಹಕಾರಿಯಾಗುತ್ತದೆ. ವಾಚಕನ ಅಥವಾ ಸಹೃದಯನ ದಿಕ್ಕಿನಿಂದಲೂ ಸಾಹಿತ್ಯ ವಿಮರ್ಶೆ ಆಧುನಿಕ ಸಾಹಿತ್ಯದ ಪರಿಚಯ ಮಾಡಿಕೊಡುವುದು ಅತ್ಯಗತ್ಯವಾಗಿದೆ. ಯಾರ ಅಭಿರುಚಿ ಹಳೆಯ ರೀತಿಯ ಸುಪರಿಚಿತ ಸಾಹಿತ್ಯ ಪ್ರಕಾರಗಳಿಂದಲೆ ಇದುವರೆಗೂ ತೃಪ್ತಿಪಡೆಯುತ್ತ ಬಂದಿದೆಯೊ ಅವರಿಗೆ ಹೊಸದು ಮೊದಮೊದಲು ವಿಲಕ್ಷಣವಾಗಿ ಅಗ್ರಾಹ್ಯವಾಗುತ್ತದೆ. ಆದರೆ ಹೊಸದರಲ್ಲಿ ಏನಾದರೂ ನಿಜವಾದ ಸತ್ತ್ವಾಂಶ ರಸಾಂಶಗಳು ಇರುವ ಪಕ್ಷಕ್ಕೆ ಅದನ್ನು ತೋರಿಸಿಕೊಟ್ಟು ಅವರ ಅಭಿರುಚಿಯನ್ನು ಅಕೃಪಣವನ್ನಾಗಿ ಮಾಡಬೇಕಾದ ಕರ್ತವ್ಯ ವಿಮರ್ಶೆಯದು.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೪೧-೨

೧೫೩೪

ದೆವ್ವಗಳ ಆರಾಧನೆಯನ್ನು ಬಿಡಿ ; ದೇವರನ್ನು ಮಾತ್ರ ಪೂಜಿಸಿ. ನಿಮಗೆ ಭಯಬೇಡ. ಏಕೆಂದರೆ, ನಿಮ್ಮ ಆರಾಧನೆಯ ಮಹೇಶ್ವರನು ಸರ್ವ ಶಕ್ತನು. ಆತನ ಇಚ್ಛೆಯಿಲ್ಲದೆ ಒಂದು ತೃಣವೂ ಅಲ್ಲಾಡದು. ಆತನ ಭಕ್ತಿ ನಮಗೆ ವಜ್ರ ಕವಚದಂತೆ. ಅದಕ್ಕಿಂತಲೂ ಅತಿಶಯವಾದ ರಕ್ಷಾ ಕವಚ ಬೇರೊಂದಿಲ್ಲ. ಇದನ್ನು ದೃಢವಾಗಿ ನಂಬಿದರೆ ಶ್ರೇಯಸ್ಸು ತಪ್ಪದು. ದೇವರಿಗೆ ಕೋಳಿ ಕುರಿಗಳ ಬಲಿಯೂ ಬೇಡ ; ವಜ್ರದ ಕಿರೀಟಗಳೂ ಬೇಡ. ಆತನಿಗೆ ಬೇಕಾದುದು ಭಕ್ತಿ. ಭಕ್ತಿಯಿಂದ ತೃಣವನ್ನು ನಿವೇದಿಸಿದರೂ ಆತನು ಸಂತೃಪ್ತನು.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮಲೆನಾಡಿನ ಯುವಕರಲ್ಲಿ, ಪುಟ ೨೪

೧೫೩೫

ಸ್ವರ್ಗವೆ, ಭೂಮಿಯೊಳಿರದಿರೆ ನೀನು
ಮೇಣೆಲ್ಲಿಯು ನೀನಿಲ್ಲಾ ! ಇಲ್ಲಾ !

ನವಿಲು, ಸ್ವರ್ಗವೆ ಭೂಮಿಯೊಳಿರದಿರೆ ನೀನು, ಪುಟ ೫೨

೧೫೩೬

ಭಗವದಾಗಮನಮೇಂ
ಭಕ್ತನ ನಿರೀಕ್ಷಿಸಿದ ರೂಪದಿಂ ಬಂದಪುದೆ ?
ಸುಖದವೋಲಾಶಿಸಲ್ ದುಃಖದೊಲ್ ಮೈದೋರಿ,

ಭಕ್ತನನಿತಂ ಸುಲಿದು ನೈವೇದ್ಯಮಂ ಕೊಳದೆ
ಪೇಳ್ ಅಹಂಕಾರಮಂ ದಿವ್ಯಶೂನ್ಯತೆಗದ್ದುವೊಲ್
ಸಂಪೂರ್ಣತಾ ಸಿದ್ಧಿಯೋಲ್.

ಶ್ರೀ ರಾಮಾಯಣ ದರ್ಶನಂ, ಶಬರಿಗಾದನು ಅತಿಥಿ ದಾಶರಥಿ, ಪುಟ ೨೮೩

೧೫೩೭

ಪೊಣ್ಮವುದೆ ವಿಕೃತಿ
ಸೌಂದರ್ಯದಿಂ ? ಚೆಲ್ವಿನಭಿಲಾಷೆ ತಾನೇಗಳುಂ
ಚೆಲ್ವಿಂಗೆ ತಾಯ್. ಧರ್ಮದೇವತಾ ಕ್ರೌರ್ಯಕ್ಕೆ
ಕರುಣೆಯಲ್ಲದೆ ಬೇರೆ ಗುರಿಯಿಹುದೆ ?

ಶ್ರೀ ರಾಮಾಯಣ ದರ್ಶನಂ, ಪಾದುಕಾ ಕಿರೀಟ, ಪಾತ್ರ ರಾಮ, ಪುಟ ೧೮೩

೧೫೩೮

ಪ್ರಾಪ್ತವಯಸ್ಕರೆಲ್ಲರಿಗೂ ಓಟಿನ ಹಕ್ಕಿದೆಯೆಂಬ ತತ್ವವನ್ನು ಸ್ವತಂತ್ರಭಾರತ ಯಾವ ದಿನ ಘೋಷಿಸಿತೋ ಅಂದೆ ಅದು ಸರ್ವವಿಷಯಗಳಲ್ಲಿಯೂ ಸರ್ವರಿಗೂ ಸರ್ವ ಸಮಾನತೆಯಿಂದ ಎಂದು ಒಪ್ಪಿಕೊಂಡಂತಾಗಿದೆ. ಆ ಒಪ್ಪಂದ ಕೊನೆ ಮುಟ್ಟು ವವರೆಗೂ ಜನ ಜೀವನದಲ್ಲಿ ರಾಜಕೀಯವಾದ ಆಂದೋಲನ ವಿರಮಿಸುವುದಿಲ್ಲ. ಅದನ್ನು ಸಾಧಿಸುವಂತೆ ಸರ್ವೋದಯದ ಅಹಿಂಸಾ ಮೂಲವಾದ ಶಾಂತ ಚಳವಳಿಗೆ ದೇಶ ಅವಕಾಶ ಕೊಡದಿದ್ದರೆ ಉಗ್ರ ಹಿಂಸಾ ಶಕ್ತಿಗಳು ಅದನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು ಗುರಿಯನ್ನು ಸಾಧಿಸಲು ಪ್ರಯತ್ನಿಸಿಯೇ ತೀರುತ್ತವೆ. ಆಗ ಒದುಗುವ ಹಾನಿ ನಷ್ಟಗಳಿಗೆ ಪರಿಮಿತಿಯೇ ಇರುವುದಿಲ್ಲ. ಆಚಾರ್ಯ ವಿನೋಬಾ ಅವರ ಹಿತವಚನಗಳಿಗೆ ಕಿವಿಗೊಟ್ಟರೆ ಸ್ವಹಿತ ಪರಹಿತ ಮತ್ತು ದೇಶ ಹಿತಗಳೆಲ್ಲವೂ ಕೈಗೂಡಿ ಸರ್ವರಿಗೂ ಶ್ರೇಯಸ್ಸಾಗುತ್ತದೆ ಎಂಬ ನಿಷ್ಠುರ, ನಿರ್ದಾಕ್ಷಿಣ್ಯ ಸತ್ಯವನ್ನು ನಮ್ಮ ಜನತೆ ಎಷ್ಟು ಬೇಗ ಗ್ರಹಿಸಿದರೆ ಅಷ್ಟೂ ಮೇಲು, ಭಾರತಕ್ಕೆ ಮತ್ತು ಲೋಕಕ್ಕೆ.

ಷಷ್ಟಿನಮನ, ಶ್ರೀ ವಿನೋಬಾಜಿ, ಪುಟ ೧೫೧

೧೫೩೯

ಅತಿ ಪ್ರೀತಿ ಅತಿ ಭೀತಿಗೆ ಕಾರಣವಾಗುವುದು ಸ್ವಾಭಾವಿಕ.

ಕಾನೂರು ಹೆಗ್ಗಡಿತಿ, ಪುಟ ೩೯೦

೧೫೪೦

ರತಿ ದಾರಿದ್ರ್ಯ ಪ್ರಿಯಳಲ್ಲ.

ನನ್ನ ದೇವರು ಮತ್ತು ಇತರ ಕಥೆಗಳು, ವೈರಾಗ್ಯದ ಮಹಿಮೆ, ಪುಟ ೯೨

೧೫೪೧

ಓ ಕಬ್ಬಿಗನೆ, ನಿನ್ನೊಳಿಹ ಕಲೆಗೆ ಶಕ್ತಿಯಿದೆ,
ಜಡವ ಚೇತನಗೊಳಿಪ ದಿವ್ಯತರ ಮುಕ್ತಿಯಿದೆ.

ಮನುಜರಿಗೆ ಸೊಗಮೀವ ಕರ್ತವ್ಯವೊಂದೆ
ನಿನ್ನೆದೆಂದರಿಯದಿರು ; ನಿನ್ನ ಕಲೆಯಿಂದೆ
ನೂರಾರು ಆತ್ಮಗಳು ಜಡತನದ ಬಲೆಯಿಂದೆ
ಬಿಡುಗಡೆಯ ಹೊಂದುವುವು !

ಕಲಾಸುಂದರಿ, ಶಿಲಾತಪಸ್ವಿ, ಪುಟ ೫೦

೧೫೪೨

ವೈಜ್ಞಾನಿಕ ದೃಷ್ಟಿ ಮತ್ತು ವಿಚಾರ ಬುದ್ಧಿಗಳನ್ನು ಬೋಧಿಸಿ, ಪ್ರಚೋದಿಸಿ, ಸಾಧಿಸುವ ಕಾರ್ಯ ಯಾವ ಸಂಸ್ಥೆಗಳಿಗೆ ಮೀಸಲಾಗಿರಬೇಕೊ ಆ ಸಂಸ್ಥೆಗಳಲ್ಲಿಯೆ ಅದು ಅವಮಾನಿತವಾಗುತ್ತಿರುವುದು ಅತ್ಯಂತ ನಿರಾಶಾಜನಕವಾಗಿದೆ. ವಿಜ್ಞಾನದ ಪಾಠ ಹೇಳಿಕೊಡುವ ಅಧ್ಯಾಪಕನೆ ತನ್ನ ಬದುಕಿನಲ್ಲಿ ರಾಹುಕಾಲ ಪಂಚಾಂಗ ವಾರ ಭವಿಷ್ಯ ಇತ್ಯಾದಿ ಮೂಢ ನಂಬಿಕೆಗಳಿಂದ ಮೂರು ಹೊತ್ತೂ ಮತ ಮೂರ್ಖನಾಗಿದ್ದರೆ ವಿದ್ಯಾರ್ಥಿಗಳಿಗೆ ಹೇಗೆ ತಾನೆ ಸಿದ್ಧಿಸೀತು ವಿಚಾರದೃಷ್ಟಿ? ನಮ್ಮ ರಾಜಕೀಯ ವಲಯದಲ್ಲಿಯೊ ಭವಿಷ್ಯ ನಿರ್ಣಯ ಮಾಡುವ ಜ್ಯೋತಿಷಿಗಳಿಗೆ ಪರಮಾಧಿಕಾರ ಲಭಿಸಿದಂತಾಗಿದೆ. ಅಧಿಕಾರಿ ತನ್ನ ಮೇಲ್ಮೆಯನ್ನು ಸಾಧಿಸಲು ಸೇವಾ ನಿಷ್ಠೆಯನ್ನು ಅನುಸರಿಸುವ ಕ್ಲೇಶಕ್ಕೆ ಹೋಗುವುದಿಲ್ಲ; ಜ್ಯೋತಿಷಿಯನ್ನೊ ಮಾಂತ್ರಿಕನನ್ನೊ ಆಶ್ರಯಿಸುತ್ತಾನೆ. ಮಂತ್ರಿ ತನ್ನ ರಾಜಕೀಯ ಭದ್ರತೆಯನ್ನು ಪ್ರಜಾಸತ್ತೆಯ ಋಜು ನಿಯಮಗಳಿಂದ ಸ್ಥಾಪಿಸಿಕೊಳ್ಳುವ 'ಅಭದ್ರ ವಿಜ್ಞಾನ'ಕ್ಕೆ ಬಿಟ್ಟುಕೊಡದೆ ಜ್ಯೋತಿಷಿಯ 'ಸುಭದ್ರ ಅಜ್ಞಾನ'ಕ್ಕೇ ಶರಣು ಹೋಗುತ್ತಾನೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಮೂರನೆಯ ಮುದ್ರಣಕ್ಕೆ ಮುನ್ನುಡಿ, ಪುಟ vi-vii

೧೫೪೩

ನೀತಿಫಣಿ ಗರುಡಮಣಿ
ತಾನಲ್ತೆ ಕವಿಯ ರಸಹೃದಯ ?

ಕೃತ್ತಿಕೆ, ರಸವೊಂದೆ ಕವಿಗೆ ನೀತಿ, ಪುಟ ೧೬

೧೫೪೪

ಹೊಸ ಹಾದಿಯಲ್ಲಿ ಹೋಗುವ ಹುಚ್ಚು ಕನ್ನಡಿಗರಿಗೇನು ಹೊಸತಲ್ಲ. ಇದು ಪುರಾತನ ಕಾಲದಿಂದಲೂ ನಡೆದು ಬಂದುದು. ಕನ್ನಡ ನುಡಿಯ ಚರಿತ್ರೆಯನ್ನು ಯಾರಾದರೂ ಅವಲೋಕಿಸಿದರೆ ಈ ಗುಟ್ಟು ಗೊತ್ತಾಗುವುದು. ಕರ್ಣಾಟಕ ಸಾಹಿತ್ಯ ಸಾಮ್ರಾಜ್ಯದ ಚರಿತ್ರಪಥದಲ್ಲಿ 'ದಂಗೆ'ಯ ಮೇಲೆ 'ದಂಗೆ' ನಡೆದ ಹಜ್ಜೆಯ ಗುರುತುಗಳಿವೆ. ಆದ್ದರಿಂದಲೆ ನಮ್ಮ ಸಾಹಿತ್ಯ ಇನ್ನೇನೂ ಮಹಾಕಾರ್ಯಗಳನ್ನು ಸಾಧಿಸದಿದ್ದರೂ ಈ ವಿಧವಾದ ನವಸಾಹಸಗಳಿಂದ ಜೀವನದ ರಸವನ್ನು ಕಾಪಾಡಿಕೊಂಡು ಬಂದಿದೆ.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೭

೧೫೪೫

ದಿವ್ಯಗುರು ಅನುಗ್ರಹಿಸಿದ (೮-೧೦-೧೯೨೯ ರಂದು) ಆ ಮಂತ್ರ ರಥವನ್ನೇರಿ ತರುವಾಯದ ನನ್ನ ಬಾಳು ಪುಣ್ಯಪಥದಲ್ಲಿ ನೇರವಾಗಿ ಏಳು ಬೀಳುಗಳಿಲ್ಲದೆ ಸಾಗಿತು ಎಂದು ಯಾರೂ ಊಹಿಸದಿರಲಿ. ಸಾಮಾನ್ಯ ಬದ್ಧಜೀವವೊಂದು ಮುಗ್ಗರಿಸಬಹುದಾದ ಎಡೆಗಳಲ್ಲೆಲ್ಲ ನನ್ನ ಜೀವವೂ ಮುಗ್ಗರಿಸಿದೆ: ಮೃತ್ಯುವಿನ ಇದಿರುತತ್ತರಿಸಿದೆ ; ಪಾಪ ಪಂಕದಲ್ಲಿ ಬಿದ್ದು ಲಿವಿಲಿವಿ ಒದ್ದಾಡಿದೆ ; ಅರಿಷಡ್ವರ್ಗದ ಬೆಂಕಿಯಲ್ಲಿ ಬೆಂದಿದೆ; ಅಹಂಕಾರ, ಅನ್ಯಾಯ, ಅವಹೇಳನಾದಿಗಳ ನಿಷ್ಠುರ ಮುಷ್ಟಿಯಲ್ಲಿ ಸಿಕ್ಕಿ ನೊಂದಿದೆ. ಸೋತು ಕುಗ್ಗಿದೆ. ಗೆದ್ದು ಹಿಗ್ಗಿದೆ. ಆದರೆ ಆಟದಲ್ಲಿ ಗಿರ್ರನೆ ತಿರುಗುವ ಬಾಲಕನು ಭೇಟಿ ಕಂಬವನ್ನು ಬಲವಾಗಿ ಹಿಡಿಯುವಂತೆ, ನನ್ನ ಚೇತನ ಶ್ರೀಗುರುಪಾದ ರೂಪದ ನಾಮ ಮಂತ್ರವನ್ನು ದೃಢವಾಗಿ ಆಶ್ರಯಿಸಿ, ಒಮ್ಮೊಮ್ಮೆ ದಾರಿ ತಪ್ಪಿದರೂ ದಿಕ್ಕುತಪ್ಪದಂತೆ, ಗುರಿಯತ್ತ ಸಾಗುತ್ತಿದೆ.

ಮನುಜಮತ ವಿಶ್ವಪಥ, ದೀಕ್ಷಾಯಾತ್ರೆ, ಪುಟ ೧೧೦

೧೫೪೬

ಬ್ರಹ್ಮಚರ್ಯದ ಮೂರ್ತಿ, ಸ್ವಾರ್ಥತ್ಯಾಗದ ಬೀಡು :
ಗಾಂಭೀರ್ಯದಾಗರವು, ಭಕ್ತಿಗೆ ನೆಲೆವನೆಯು ;
ಪೂರ್ಣ್ಣ ಪೂರ್ಣ್ಣೆಯ ಸಾಧಿಸುವರೊಳಗೆ ಅಗ್ಗಳನು.
ಕಲಿಯಾತನ್ ಅಮಿತಬಲಯುತನಾತನ್ ಇರಿವರೊಳು
ಕಟ್ಟಾಳು ; ಮಾನನಿಧಿ ; ಪಂಡಿತನು ; ವರಯೋಗಿ ;
ಭೀಷ್ಮನಂತಹ ಮಹಾಪುರುಷನನು ಇದುವರೆಗು
ಭೂದೇವಿ ಪಡೆದಿಲ್ಲ.

ಕಾನೀನ, ಪಾತ್ರ ಪರುಶುರಾಮ, ಪುಟ ೨೬

೧೫೪೭

ಅಂತರತಮ ನೀ ಗುರು,
ಹೇ ಆತ್ಮತಮೋಹಾರಿ !
ಜಟಿಲ ಕುಟಿಲತಮ ಅಂತರಂಗ ಬಹು
ಭಾವ ವಿಪಿನ ಸಂಚಾರಿ,
ಜನುಮ ಕನುಮ ಶತಕೋಟಿ ಸಂಸ್ಕಾರ
ಪರಮ ಚರಮ ಸಂಸ್ಕಾರಿ,
ಪಾಪ ಪುಣ್ಯ ನಾನಾ ಲಲಿತ ರುದ್ರ ಲೀಲಾ
ರೂಪ ಅರೂಪ ವಿಹಾರಿ.

ಅಗ್ನಿಹಂಸ, ಅಂತರತಮ ನೀ ಗುರು, ಪುಟ ೯೦

೧೫೪೮

ಕಾವ್ಯ ಸತ್ತೆಯನನ್ಯ ಸತ್ತಾ ಪ್ರಮಾಣದಿಂ
ಪರಿಕಿಸಲ್ ಮಿಥ್ಯೆಯಲ್ಲದೆ ತನಗೆ ತಾಂ ಮಿಥ್ಯೆಯೇಂ ?
ಕವಿಕೃತಿಯುಮಾ ಬ್ರಹ್ಮಕೃತಿಯಂತೆ ಋತಚಿದ್
ವಿಲಾಸಮಾ ಕೃತಿಲೋಕಮೀ ಪ್ರಕೃತಿಲೋಕದೊಲೆ
ಬಹುಲೋಕ ಕಿರಣಮಯ ಸತ್ಯ ಸೂರ್ಯೋತ್ತಮನ
ಚಿತ್ ಪ್ರಕಾಶನದೊಂದು ರಸಲೋಕರೂಪ ಕಿರಣಂ.
ಸಂಭವಿಸಿ ಭವಕಿಳಿದು ವಾಣೀಪತಿಯ ಕೃತಿಯ
ವಿಭವಗಳನನುಭವಿಸುವೋಲುಣ್ಬವೋಲ್ ಕಾಣ್ಬವೋಲ್
ಕಾಣವೇಳ್ಕುಂ ಪೊಕ್ಕು ಕೃತಿನೇತ್ರ ಪಥದಿಂ
ಕವೀಂದ್ರ ಮತಿ ಲೋಕದೊಳ್ ಪೊಳೆವ ಋತಕಲ್ಪನಾ
ಮೂರ್ತಂಗಳಂ, ಭಾವಚರ ನಿತ್ಯ ಸತ್ಯಂಗಳಂ.

ಶ್ರೀ ರಾಮಾಯಣ ದರ್ಶನಂ, ಕವಿಕ್ರತು ದರ್ಶನಂ, ಪುಟ ೧೫-೬

೧೫೪೯

ಬದುಕಿರಲು ಸಾವಿಲ್ಲ,
ಸಾವಿರಲು ಬದುಕಿಲ್ಲ.
ನಾವಿರಲು ಸಾವಿಲ್ಲ,
ಸಾವಿರಲು ನಾವಿಲ್ಲ !
ಇನ್ನಳುಕಲೇನು ?
ಗುರುವೊಲ್ಮೆಯಾದರಿಗೆ
ಭಯವೆಂದರೇನು ?
ಗುರುಮಂತ್ರ ದೀಕ್ಷಿತರು
ಯಾವುದೆಮಗೇನು ?
ಸಮಗಿರಲು ನಿರ್ಭರತೆ
ಹಿಂಜರಿವುದೇನು ?

ಷೋಡಶಿ, ರಸಋಷಿ, ಪುಟ ೭೬

೧೫೫೦

ಎಲ್ಲಿ ಪೂಜೆ ನಡೆಯುತಿಹುದೊ
ಅಲ್ಲೆ ನನ್ನ ದೇಗುಲ ;
ಪ್ರಾರ್ಥಿಸಿರುವುದಾರ ಹೃದಯ
ಅದುವೆ ನನ್ನ ಗುರುಕುಲ ;
ದೇವರೇಗಳಾರ್ಗೆ ನೆನಪೊ
ನಾನವರ ಕುಲ !

ಅಗ್ನಿಹಂಸ, ಶ್ರೀ ಸ್ವಾಮಿ ಸಿದ್ಧೇಶ್ವರಾನಂದರಿಗೆ, ಪುಟ ೩

೧೫೫೧

ಮುಕ್ತಿಯ ವಂಚಿಸೆ ಮುಕ್ತಿಯ ಹುಡುಕಿದೆ ;
ತತ್ತ್ವವಿಚಾರದ ಗಲಭೆಗೆ ದುಡುಕಿದೆ ;
ಜಪತಪ ಪ್ರಾರ್ಥನೆ ಧ್ಯಾನವ ತುಡುಕಿದೆ ;
ಮುಕ್ತಿಯ ಹಾದಿಗೆ ಎಡರನು ಅಡಕಿದೆ !
ಅಯ್ಯೋ, ತತ್ತ್ವದ ಮೋಸವು ಕೂಡ,
ಅಯ್ಯೋ, ಧರ್ಮದ ವೇಷವು ಕೂಡ,
ವಂಚಿಸಲಾರದೆ ಹೋದುವೆ ನಿನ್ನನು ?
ಮುಕ್ತಿರಾಹುವೆ ಬಿಡೆಯಾ ನನ್ನನು ?
ಇದೊ ! ಶರಣಾದೆನು ! ನಾ ಸೋತೆ !
ನುಂಗೆನ್ನನು ! ತಪ್ಪಲಿ ರೋತೆ !

ಪಾಂಚಜನ್ಯ, ಮುಕ್ತಿರಾಹು, ಪುಟ ೫೯

೧೫೫೨

ರಣದ ಸಾಹಸಕಥೆಯ ಬಣ್ಣನೆಗೆ ಬಡತನವೆ ಹೇಳ್ ?
ಹೇರಳಂ ! ದಿನದಿನದ ಸಾಧಾರಣದ ಶಾಂತ
ಸರಳ ಜೀವಿತದ ವರ್ಣನೆಯೆ ವಿರಳಂ. ನಾನದನೆ
ಕೈಕೊಂಡೆಸಗಲೆಳಸುವೆಂ ; ಪರಕೆಯಿರಲೆನಗೆ
ನಿನ್ನಮೃತ ವರದ ಕರದಾ, ದೇವಿ ಓ ಶಾರದಾ !

ಶ್ರೀ ರಾಮಾಯಣ ದರ್ಶನಂ, ಕುಣಿದಳುರಿಯ ಊರ್ವಶಿ, ಪುಟ ೧೫೪

೧೫೫೩

ಸಂಸಾರದ ಸಾಧನೆಗಿದೆ ಸಿದ್ಧಿ :
ಸಕಲೈಶ್ವರ್ಯದ ಸುಖಕಿದೆ ಕಣ್ :
ಕಂದನೊಡನೆ ಕುಣಿದಾಡುವ ಬುದ್ಧಿ ;
ಕಂದನ ಸಿರಿಮೆಯ್ಗಂಟಿದ ಮಣ್ !
ಇನ್ನೆಲ್ಲರಸುವೆ ? ಇಲ್ಲಿದೆ, ಕಾಣ್ ?
ಈಶನ ಕಣ್ !

ಜೇನಾಗುವಾ, ಸಾಮಾನ್ಯತೆ ಭಗವಂತನ ರೀತಿ, ಪುಟ ೪೬

೧೫೫೪

ಸರ್ವಜ್ಞನೆಂದದೆಯು ಸಂಕುಚಿತವಾಗುತಿರೆ
ನಿನ್ನ ಮೈಮೆಯ ಬೆಳಕು ಮೈದೋರಲಿ.
ಸಂದೇಹವೈತಂದು ಬಗೆಯ ಕದಡಲು, ದೊರೆಯೆ,

ನಿನ್ನ ನುಣ್ಚರ ಮೂಡಿ ಪರಿಹರಿಸಲಿ.
ನೂರಾರು ಹಾದಿಗಳ ಸಂಗಮದಿ ನಿಶೆ ಕವಿಯೆ
ನಿನ್ನ ಕಣ್ಬೆಳಕೆನ್ನ ಕಣ್ದೆರೆಯಲಿ.
ಒಣ ಕಟ್ಟಳೆಯ ಶಿಶಿರದಲಿ ಜೀವತರು ಕೊರಗೆ
ನಿನ್ನ ಚೇತನ ಚೈತ್ರದೆಲರೂದಲಿ.

ಕೊಳಲು, ಗೊಲ್ಲನ ಗಾಯತ್ರಿ, ಪುಟ ೧೦೮

೧೫೫೫

ಕೂರ್ಮೆ ಬೆಸುಗೆಯಿಂ
ದ್ವೈತ ತಾನದ್ವೈತಮಪ್ಪುದೊಂದಚ್ಚರಿಯೆ ಪೇಳ್ ?
ಮೆಯ್ಗಳೆನಿತಾದೊಡೇನೊಲಿದವರ್ಗದು ದಿಟಂ
ಮನಮೊಂದೆಯಲ್ತೆ ?

ಶ್ರೀ ರಾಮಾಯಣ ದರ್ಶನಂ, ಕವಿಕ್ರತು ದರ್ಶನಂ, ಪುಟ ೨೪

೧೫೫೬

ನಾವೆ ಹರಿಯುವ ಗಂಗೆಯು !
ನಾವೆ ಮಂಗಳ ಕಾಶಿಯು !
ನಮ್ಮ ಎದೆಗಳಲಿಹವು ಮಾಸದ
ದೇವನೊತ್ತಿರುವಡಿಗಳು ;
ಲೋಕರಕ್ಷಕ ನಿಚ್ಚ ನೆಲೆಸಿಹ
ನಾವೆ ಚಲಿಸುವ ಗುಡಿಗಳು !

ಕೊಳಲು, ಸುಗ್ಗಿಹಾಡು, ಪುಟ ೩೦

೧೫೫೭

"ಭಕ್ತವರ್ಯ, ನಾ ಕೇಳಲಾರೆ ;
ಸಾಕು, ನಿಲ್ಲಲಿ ನಿನ್ನ ಗಂಟಲಿನ ಗಾನಧಾರ !
ಈ ಸಾರಿ ತಪ್ಪಾಯ್ತು, ಕ್ಷಮಿಸಯ್ಯ ದಯವಿಟ್ಟು,
ನಿನಗೆ ಮುಂದಿನ ಜನ್ಮಕೊಳ್ಳೆಕಂಠವ ಕೊಟ್ಟು
ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳುವೆ ನಾನು ;
ಸದ್ಯಕ್ಕೆ ಭಕ್ತನಾಂ, ಭಗವಂತನೈ ನೀನು !
ಈ ಸಾರಿ ವರವಿತ್ತು ನನ್ನ ಕಾಪಾಡಯ್ಯ ;
ನಿನ್ನ ಗಂಟಲು ಕಟ್ಟು, ದಾಸಯ್ಯ, ದಮ್ಮಯ್ಯ !"
ಎಂದು ಭಗವಂತ ತೆರಳಿದನು ವೈಕುಂಠಕ್ಕೆ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಕೀರ್ತನೆಯ ಮಹಿಮೆ, ಪುಟ ೭೨

೧೫೫೮

ಕಬ್ಬುನದ
ಸಂಕೋಲೆಗಿಂ ಚಿರಂ, ಕ್ರೂರಕಠಿನಂ, ಮನದ
ಮೂಢತೆಯ ಕಪಿಮುಷ್ಟಿ.

ಕೃತ್ತಿಕೆ, ಮಾದೇಶ್ವರನ ಬೆಟ್ಟಕಂತೆ, ಪುಟ ೬೮

೧೫೫೯

ಎಲ್ಲ ಕಲೆಗಳ ಗುರಿಯೂ ಆನಂದ, ರಸಾನುಭೂತಿ. ಆ ಆನಂದ ಸ್ವರ್ಗಕ್ಕಾಗಿಯೇ ನಿರಂತರವೂ ಮರ್ತ್ಯವು ಅಮರ್ತ್ಯದ ಕಡೆಗೆ ಮುಖಚಾಚಿ ನೋಡುತ್ತದೆ, ಕೈನೀಡಿ ಬೇಡುತ್ತದೆ.

ತಪೋನಂದನ, ಮಹಾಶ್ವೇತೆಯ ತಪಸ್ಸು, ಪುಟ ೧

೧೫೬೦

ಫಲವ ಕೋರದು ಪ್ರೇಮ !
ಚಲವ ತೋರದ ಪ್ರೇಮ ! ಭಯವನರಿಯದು ಪ್ರೇಮ !

ಬಿರುಗಾಳಿ, ಪಾತ್ರ ಶಿವನಾಯಕ, ಪುಟ ೫೯

೧೫೬೧

ನಗ್ನತೆಗೆ ನಾಚದಿಹೆ ; ಬತ್ತಲೆಗೆ ಬೆದರದಿಹೆ.
ಹುಸಿ ನಾಗರಿಕ ವೇಷದಿಂದಲ್ಪತೆಯ ಮುಚ್ಚಿ
ಮೆರುಗು ಬೆರಗಿನ ಮೋಸಗೈಯದಿಹೆ. ಮುಚ್ಚು ಮರೆ
ತಾನೇಕೆ ಅಲ್ಪತಾ ಲವಲೇಶವಿಲ್ಲದೆಯೆ
ಸರ್ವತ್ರ ಸರ್ವದರೊಳುಂ ಭೂಮನಾಗಿರುವ
ಮಹತೋ ಮಹೀಯನಿಗೆ ನಿನಗೆ ?

ಅಗ್ನಿಹಂಸ, ಶ್ರವಣಬೆಳ್ಗೊಳದ ಗೋಮಟೇಶ್ವರನ ಸಾನ್ನಿಧ್ಯದಲ್ಲಿ, ಪುಟ ೬೫

೧೫೬೨

ಮೂರ್ಖರ ಮಾತಿಗೆ ಮರುಗುವರೆ ?

ನವಿಲು, ಮೀಂಚುಳ್ಳಿ, ಪುಟ ೨೧

೧೫೬೩

ಜಗನ್ಮಹಾಕವಿಯಾಗಿ, ಪೂರ್ಣಸಿದ್ಧನಾಗಿ, ಅತಿಮಾನಸಯೋಗಿಯಾಗಿ, ಗುರುಮಹರ್ಷಿಯಾಗಿ, ಅದ್ಭುತ ಮನೀಷಿಯಾಗಿ, ತತ್ತ್ವಜ್ಞಾನಿಯಾಗಿ, ದಾರ್ಶನಿಕನಾಗಿ, ದ್ರಷ್ಟಾರನಾಗಿ, ಮಾನವಜ್ಞಾನಲೋಕದ ಸರ್ವರಂಗಗಳಲ್ಲಿಯೂ ಬೆರಗುಗೊಳಿಸುವ ಕೃತಿ ಮೇರುಗಳನ್ನು ಸೃಷ್ಟಿಸಿರುವ ಶ್ರೀ ಅರವಿಂದರು ಅತೀಂದ್ರಿಯವಾದ ಅತಿಮಾನಸಯೋಗದ ಚಿತ್‌ತಪಸ್ ಶಕ್ತಿಯಿಂದಲೇ ಜಗತ್ತಿನಲ್ಲಿ ಸ್ವಯಂಕ್ರಿಯೆಗಳನ್ನು

ಪ್ರಚೋದಿಸುವ ಭಗವದ್ ವಿಧಾನವನ್ನು ಕೈಕೊಂಡರಲ್ಲದೆ ಮನುಷ್ಯ ವಿಧಾನದ ದುರ್ಬಲ ಪ್ರಕಾರದ ಅಸಮರ್ಪಕ ಮಾರ್ಗಗಳಿಗೆ ಇಳಿಯಲು ಇಷ್ಟಪಡಲಿಲ್ಲ.

ವಿಭೂತಿ ಪೂಜೆ, ಶ್ರೀ ಅರವಿಂದರು, ಪುಟ ೧೧೯

೧೫೬೪

ಸತ್ಯ ಎಂದರೆ ಕೊರಳಿನಲ್ಲಿ ಧರಿಸುವ ಹೂಮಾಲೆ ಮಾತ್ರವಲ್ಲ, ಎದೆಗೆ ಇರಿದುಕೊಳ್ಳಬೇಕಾಗಿರುವ ಹೊನ್ನಿನ ಕತ್ತಿಯೂ ಹೌದು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೭೪

೧೫೬೫

ವ್ಯಕ್ತಿರೂಪದ ವ್ಯಷ್ಟಿಯ ವ್ಯಕ್ತಿತ್ವಕ್ಕೂ ಮತ್ತು ಹೃದಯ ಬುದ್ಧಿ ಸಂಸ್ಕಾರಗಳಿಗೂ ವೈಜ್ಞಾನಿಕ ವಿಷಯಗಳಿಗೆ ಇಲ್ಲದ ಒಂದು ವಿಶಿಷ್ಟತೆ ಇರುತ್ತದೆ. ಆ ವೈಶಿಷ್ಟ್ಯದ ಪಾಲನೆ, ರಕ್ಷಣೆ, ಪೋಷಣೆ, ಸಂಶೋಧನೆ ಮತ್ತು ಪ್ರಸಾರ ಇವು ಆಯಾ ಭಾಷಾ ಪ್ರದೇಶದ ರಾಜ್ಯಗಳಲ್ಲಿರುವ ವಿಶ್ವವಿದ್ಯಾನಿಲಯಗಳ ಆದ್ಯಕರ್ತವ್ಯವಾಗಿರಬೇಕು. ಆ ವಿಚಾರದಲ್ಲಿ ಔದಾಸೀನ್ಯ ಸಲ್ಲದು. ತಿರಸ್ಕಾರವಂತೂ ಅಕ್ಷಮ್ಯ ಜನತಾ ದ್ರೋಹವಾಗುತ್ತದೆ.

ಮನುಜಮತ ವಿಶ್ವಪಥ, ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ, ಪುಟ ೧೮-೯

೧೫೬೬

ಅಪಕಾರ ಮಾಡದಿರು, ಅದಕಿಂತಲೂ ಬೇರೆ
ಉಪಕಾರವನು ಬಯಸೆ ನಿನ್ನಿಂದ ನಾನು :
ಅಪಕಾರ ಮಾಡದಿರುವುದೆ ಪರಮ ಉಪಕಾರ !

ಮಂತ್ರಾಕ್ಷತೆ, ಪುಟ ೩೩

೧೫೬೭

ನನಗೆನಿತು ಹಿರಿಯನಾದರೂ,
ಕ್ಷಮಿಸು,
ಕೋಟಿಯೋಜನದಗಲ ಮರುಭೂಮಿಯನು
ಮಾಡಬಲ್ಲೆಯ ಹೇಳು ಫಲವತ್ತಾಗಿ ?
ಹಿರಿಯ ಆ ವ್ಯರ್ಥಸಾಹಸವನುಳಿದು,
ನಮ್ಮ ಈ ಚಿಕ್ಕ ತೋಟದಲ್ಲಿಯೆ ನಿಂತು
ಈ ಸಣ್ಣ ಗಿಡಗಳಿಗೆ ನೀರೆರೆದರೆ
ಅಲ್ಪವಾದರೂ, ಅಣ್ಣಾ, ಸಫಲವಲ್ತೆ ?

ಪ್ರೇತ ಕ್ಯೂ, ಪ್ರಯೋಜನ, ಪುಟ ೨೭

೧೫೬೮

ವಿಜ್ಞಾನ ವಿದ್ಯೆಯೊಂದಿಗೆ ವೈಜ್ಞಾನಿಕ ದೃಷ್ಟಿಯೂ ವಿಚಾರ ಬುದ್ಧಿಯೂ ಸಾಧಿತವಾಗುತ್ತದೆ ಎಂದು ಹಾರೈಸಿದ್ದವರಿಗೆಲ್ಲ ಅತ್ಯಂತ ನಿರಾಶೆಯಾಗುವ ಪರಿಸ್ಥಿತಿ

ಈ ದೇಶದಲ್ಲಿದೆ. ನಮ್ಮ ರಾಜ್ಯಾಂಗವೇನೋ ವೈಜ್ಞಾನಿಕ ದೃಷ್ಟಿಗೂ ವಿಚಾರಬುದ್ಧಿಗೂ ತಂದೊಡ್ಡಿರುವ ರಕ್ಷಾಪೀಠದಂತಿದೆ. ಆದರೆ ಹಳೆಯ ಮತೀಯ ಭ್ರಾಂತಿಗಳು ಧರ್ಮಾಚರಣೆಯ ಹೆಸರಿನಲ್ಲಿ ಆ ದೃಷ್ಟಿ ಮತ್ತು ಬುದ್ಧಿ ಎರಡಕ್ಕೂ ವಿಘ್ನಪ್ರಾಯವಾಗಿ ವಿಜೃಂಭಿಸುತ್ತಿವೆ. ಶ್ರೀಸಾಮಾನ್ಯನ ಚೇತನ ಆಚಾರದ ಯೂಪಕ್ಕೆ ಕಟ್ಟುಗೊಂಡು ಅಸಹಾಯವಾಗಿ ಅರಚುತ್ತಿದೆ.

ಷಷ್ಟಿನಮನ, ಶ್ರೀ ನೆಹರೂ : ವೈಜ್ಞಾನಿಕ ದೃಷ್ಟಿ ಮತ್ತು ವಿಚಾರ ಬುದ್ಧಿ, ಪುಟ ೨೬೮

೧೫೭೯

ಮನುಜಕೃಪಣತೆ ದಾನವೀವ ಕೀರ್ತಿಯು ಬೇಕೆ
ಮಮಕಾವ್ಯಕನ್ನಿಕೆಗೆ ? ರಸವಿರಲು ಜಸವೇಕೆ ?

ಕೃತ್ತಿಕೆ, ರಸವಿರಲು ಜಸವೇಕೆ, ಪುಟ ೭೪

೧೫೮೦

ವೇದ ಪೂರೈಸಿದ ಗ್ರಂಥವಲ್ಲ ; ವೇದದ ಕಟ್ಟಕಡೆಯ ಅಧ್ಯಾಯ ಅಂದಿಗೇ ಮುಗಿದಿಲ್ಲ. ಅದು ಇಂದಿಗೂ ನಾಳೆಗೂ ಮುಂದುವರಿಯುತ್ತದೆ. ಹಾಗೆಯೇ ಋಷಿಗಳೂ ಆಚಾರ್ಯರೂ ಅಂದಿಗೇ ಪೂರೈಸಿಲ್ಲ, ಕೊನೆಗಂಡಿಲ್ಲ ; ಇಂದಿಗೂ ನಾಳೆಗೂ ಬರುತ್ತಲೇ ಇರುತ್ತಾರೆ. ಆದ್ದರಿಂದ ಹೊಸ ಋಷಿಗಳ ಹೊಸ ವೇದವಾಕ್ಯಗಳನ್ನು ಕಿವಿಗೊಟ್ಟು ಕೇಳಿ. ಸಂಕುಚಿತ ಬುದ್ಧಿಯನ್ನು ದೂರಮಾಡಿ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೪

೧೫೮೧

.....ಅಪಾತ್ರದಲ್ಲಿ ಅಸ್ಥಾನದಲ್ಲಿ ತೋರಿಸುವ ಅನುಕಂಪೆ 'ಬಾಲಿಶಾನುಕಂಪೆ'. ಈ'ಬಾಲಿಶಾನುಕಂಪೆ' ಜೀವನದಲ್ಲೆಂತೋ ಅಂತೆಯೆ ಸಾಹಿತ್ಯದಲ್ಲಿಯಾದರೂ ನಮ್ಮ ಉದ್ಧಾರ ಮಾರ್ಗಕ್ಕೆ ಒಂದು ಕಂಟಕವಾಗುತ್ತದೆ.

ದ್ರೌಪದಿಯ ಶ್ರೀಮುಡಿ, 'ಯಶೋಧರ ಚರಿತ್ರೆ'...., ಪುಟ ೨೧

೧೫೮೨

ಸಂದೇಹವೆ ಆರಾಧನೆ
ಮೇಣ್ ಸಾಧನೆ ನನಗೆ.

ಕದರಡಕೆ, ಸಂದೇಹಿಯ ಪ್ರಾರ್ಥನೆ, ಪುಟ ೭೫

೧೫೮೩

ಹಾದಿ ಸಾಗಿದರಾಯ್ತು ! ಬರುವುದೆಲ್ಲಾ ಬರಲಿ !
ಬಾರಯ್ಯ ಮಮ ಬಂಧು, ಜೀವನ ಪಥದೊಳಾವು
ಒಂದಾಗಿ ಮುಂದುವರಿಯುವ ; ಹಿಂದಿರಲಿ ಸಾವು !

ಕೃತ್ತಿಕೆ, ಯಾವ ಜನ್ಮದ ಮೈತ್ರಿ, ಪುಟ ೯೦

೧೫೭೪

ನಾನು ರಾಜ್ಯ ದೃಷ್ಟಿಯಿಂದ ಕರ್ಣಾಟಕದವನು ; ಭಾಷಾದೃಷ್ಟಿಯಿಂದ ಕನ್ನಡಿಗನು ; ಆದರೆ ಸಂಸ್ಕೃತಿಯ ದೃಷ್ಟಿಯಿಂದ ಮತ್ತು ರಾಷ್ಟ್ರದೃಷ್ಟಿಯಿಂದ ಭಾರತೀಯನು. ನನ್ನ ಕರ್ಣಾಟಕತ್ವ ಭಾರತೀಯತ್ವಕ್ಕೆ ಎಂದೆಂದಿಗೂ ಅವಿರೋಧಿಯಾಗಿ ಸೇವೆ ಸಲ್ಲಿಸುವುದರಿಂದಲೇ ತನ್ನ ಅಸ್ತಿತ್ವವನ್ನು ರಕ್ಷಿಸಿಕೊಳ್ಳುತ್ತದೆ. ಭಾರತಿ ತಾಯಿ ಕರ್ಣಾಟಕ ಮಗಳು.

ಮನುಜಮತ ವಿಶ್ವಪಥ, ಬಹುಜಿಹ್ವಾ ಭಾರತಿಗೆ ಐಕ್ಯತೆಯ ಆರತಿ, ಪುಟ ೩೮-೯

೧೫೭೫

ನಾವು ಜನಗಳಿಗೆ ವಿಚಾರವಾದ ಬೋಧಿಸುವಾಗ ದೇವರ ಕಲ್ಪನೆಗಾಗಲಿ, ಧರ್ಮದ ಕಲ್ಪನೆಗಾಗಿ ವಿರುದ್ಧವಾಗಿ ಹೋದರೆ, ನಮ್ಮ ವಿಚಾರವಾದ ಸೋತುಹೋಗುತ್ತದೆ. ವಿಚಾರವಾದದಲ್ಲಿ ಯಾವಾಗಲೂ ಅವರಿಗೆ ನಾವು ಏನು ಹೇಳಬೇಕಾಗುತ್ತದೆ ಅಂದರೆ, ಯಾವುದು ವೈಜ್ಞಾನಿಕ ಅಲ್ಲವೊ ಅದನ್ನು ನೀವು ವಿಚಾರಿಸಬೇಕು ; ವಿಚಾರಿಸಿ ವೈಜ್ಞಾನಿಕವಾದುದನ್ನು ಮಾತ್ರ ಒಪ್ಪಿಕೊಳ್ಳಬೇಕು ; ಉಳಿದುದನ್ನು ಮೂಢಾಚಾರವೆಂದು ತಿರಸ್ಕರಿಸಬೇಕು, ಅಂತ.

ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಅದೇ ಹೆಸರಿನ ಲೇಖನ, ಪುಟ ೧೮

೧೫೭೬

ಈಗ ವಿಜ್ಞಾನ ವಿಷಯವನ್ನು ತೆಗೆದುಕೊಳ್ಳೋಣ. ನಮ್ಮ ದೇಶದಲ್ಲಿ ಇಷ್ಟೊಂದು ಕೋಟಿ ಕೋಟಿ ಜನ ಇನ್ನೂರು ವರ್ಷಗಳಿಂದ ಇಂಗ್ಲಿಷ್ ವಿದ್ಯಾಭ್ಯಾಸ ಮಾಡುತ್ತಿದ್ದರೂ, ಎಲ್ಲೊ ಒಬ್ಬ ಸಿ. ವಿ. ರಾಮನ್, ಒಬ್ಬ ಪಿ. ಸಿ. ರಾಯ್ ಎಂದು ಒಂದೆರಡು ಹೆಸರುಗಳನ್ನು ಮಾತ್ರ ಹೇಳಬೇಕಾಗಿದೆ. ಇದು ಶುದ್ಧ ಅಪಮಾನಕರ. ಎಲ್ಲಿಯವರೆಗೆ ನಾವು ಅನ್ಯಭಾಷೆಯಲ್ಲಿ ಜ್ಞಾನಬೋಧನೆಯನ್ನು ನಡೆಸುತ್ತಾ ಹೋಗುತ್ತೇವೆಯೋ ಅಲ್ಲಿಯವರೆಗೆ ನಾವು ಅನ್ಯರು ಹೇಳಿದುದನ್ನು ತೆಗೆದುಕೊಂಡು ಬಳಸಬಲ್ಲೆವೇ ಹೊರತು ಹೊಸದನ್ನು ಸೃಷ್ಟಿ ಮಾಡುವುದು ಕಷ್ಟ ಸಾಧ್ಯವಾಗುತ್ತದೆ.

ಷಷ್ಟಿನಮನ, ಸಮನ್ವಯ ರಾಷ್ಟ್ರದಲ್ಲಿ ವಿಶ್ವವಿದ್ಯೆ, ಪುಟ ೧೭೨

೧೫೭೭

ದೊಡ್ಡದನ್ನು ಕಂಡಾಗ ಅದನ್ನು ಪೂಜಿಸಬೇಕು, ಅದರಂತಾಗಬೇಕು, ಅದರ ಕಣ್ಣಿಗೆ ಬೀಳಬೇಕು, ಅದರ ಪ್ರಶಂಸೆಗೆ ಪಾತ್ರವಾಗಬೇಕು ಎಂಬುದು ಮನುಷ್ಯಕುಲದ ಸಾಮಾನ್ಯೇಚ್ಛೆ.

ಕಾನೂರು ಹೆಗ್ಗಡಿತಿ, ಪುಟ ೨೪೬-೭

೧೫೭೮

ನನ್ನಾತ್ಮ ಸೌಂದರ್ಯ ; ನಿನ್ನಾತ್ಮ ಸೌಂದರ್ಯ ;
ನಾನಿಲ್ಲ, ನೀನಿಲ್ಲ ; ಸೌಂದರ್ಯಮಿಹುದೆಲ್ಲ !

ಸೌಂದರ್ಯವಾನಂದ ! ಸೌಂದರ್ಯವೈಶ್ವರ್ಯ !
ವಿಶ್ವಕ್ಕೆ ತಾಯಾರು ಬಲ್ಲೆಯೇಂ ?–ಸೌಂದರ್ಯ !

ಕದರಡಕೆ, ಸೌಂದರ್ಯ, ಪುಟ ೧೩

೧೫೭೯

ನೀನೊಬ್ಬನೇ ಅಲ್ಲ ; ಸಮಸ್ತ ಜಗತ್ತೂ ಕಪಟವೇಷಧಾರಿ ! ಭಗವಂತನನ್ನೇ ಕಪಟ ನಾಟಕ ಸೂತ್ರಧಾರಿ ಎನ್ನುವುದಿಲ್ಲವೇ ?

ಸಂನ್ಯಾಸಿ ಮತ್ತು ಇತರ ಕಥೆಗಳು, ಸಂನ್ಯಾಸಿ, ಪಾತ್ರ ಗುರುಗಳು, ಪುಟ ೮

೧೫೮೦

ತಂತಮ್ಮ ಸಂಸ್ಕೃತಿಗೆ ಸುಕೃತಕ್ಕೆ ಸಾಧ್ಯಮಂ
ಸವಿಯುವುದು ಸಹೃದಯರ್ ಸಂವೇದ್ಯಮಂ

ಶ್ರೀ ರಾಮಾಯಣ ದರ್ಶನಂ, ಸ್ವಪ್ನದೇವಿಗೆ ತಪೋಲಕ್ಷ್ಮಿ, ಪುಟ ೬೩೯

೧೫೮೧

ಪ್ರತಿಭಟನೆ ಎದುರಾಳಿಯನ್ನು ರೇಗಿಸಿ ಪ್ರತಿಭಟನೆಯನ್ನೆ ತರುತ್ತದೆ ; ಸಹಾನುಭೂತಿಯಾದರೋ ಎದುರಾಳಿಯನ್ನು ಸಂಮೋಹಿಸಿ ಕೈವಶ ಮಾಡಿಕೊಳ್ಳುತ್ತದೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೫

೧೫೮೨

ಕಲ್ಲಾದರೇನ್ ?
ತೀವ್ರತಪದಿಂದೆ ಚೇತನ ಸಿದ್ಧಿಯಾಗದೇಂ
ಜಡಕೆ ?

ಶ್ರೀ ರಾಮಾಯಣ ದರ್ಶನಂ, ಶಿಲಾತಪಸ್ವಿನಿ, ಪುಟ ೫೧

೧೫೮೩

ಮಹಾಕಾರ್ಯಕ್ಕೆ ಮಹಾಕಾರಣಗಳಿರಬೇಕು. ಮಹಾಪುರುಷರು ಸೃಷ್ಟಿಶಕ್ತಿಯ ಮಹಾಕಾರ್ಯಗಳು. ಅವರ ಜೀವನದಲ್ಲಿ ಜನ ಸಾಮಾನ್ಯರಿಗೆ ಅಸಾಧ್ಯವೆಂದು ತೋರುವ ಎಷ್ಟೋ ಘಟನೆಗಳೊದಗುವುವು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೭

೧೫೮೪

ಈ ಮಂದಿಗೇನಂತೆ ?
ಕಪ್ಪೆಯೋ ಕೋತಿಯೋ ಯಾವುದಾದರು ಸಾಕು,
ವಾದ್ಯವೂದುತ್ತೆ ಪಲ್ಲಕ್ಕಿಯನು ಹೊತ್ತೊರಲಿ
ನಲಿದು ಮೆರವಣಿಗೆ ಮಾಡಿದರಾಯ್ತು ! ಮೆರೆದರಾಯ್ತು !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಮುದುಕರಾದ ದೊಡ್ಡ ಮನುಷ್ಯರೊಬ್ಬರಿಗೆ, ಪುಟ ೭೦–೧

೧೫೮೫

ಅಪಾಯ ಲಘುವಾಗಿದ್ದರೆ ವಿನೋದವಾಗುತ್ತದೆ; ಗುರುತರವಾದರೆ ವಿಷಾದವಾಗುತ್ತದೆ.

ಕಾನೂರು ಹೆಗ್ಗಡಿತಿ, ಪುಟ ೨೦೪

೧೫೮೬

ಆರ್ಯಧರ್ಮ ಇತರ ಮತಗಳಂತೆ ಏಕವ್ಯಕ್ತಿಯ ಅಧಿಕಾರ ವಾಣಿಯಲ್ಲ; ಅನೇಕ ಅಪೌರುಷೇಯ ತತ್ತ್ವಗಳ ಶ್ರೇಣಿ. ಆ ಮಹಾವಾಹಿನಿಗೆ ಅನೇಕ ಸಂಸ್ಕೃತಿಗಳು ಉಪನದಿಗಳಾಗಿವೆ. ಅದು ಯಾವ ಬೆಳಕನ್ನೂ ಅನ್ಯವೆಂದು ಹಳಿದುದಿಲ್ಲ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೩

೧೫೮೭

ನಮ್ಮ ಸಾಹಿತ್ಯ ತನ್ನ ಆಧುನಿಕ ಕಾಲಾವಧಿಯಲ್ಲಿ ನಾನಾಮುಖವಾಗಿ ಬೆಳೆದಿದೆ ಎಂಬುದೇನೊ ನಿಜ; ಆದರೆ ಸಾಹಿತ್ಯವಿಮರ್ಶೆಯ ಹಾಗೂ ಕಾವ್ಯಮೀಮಾಂಸೆಯ ಮುಖದಲ್ಲಿ ಮಾತ್ರ ಅದು ಇತರ ಮುಖಗಳಲ್ಲಿ ಮುಂದುವರಿದಂತೆ ಬೆಳೆದಿಲ್ಲ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೪೧

೧೫೮೮

ಕಾವ್ಯವೂ ಸತ್ಯಶೀಲವಾದುದೇ. ಕಾವ್ಯವೂ ಸತ್ಯವನ್ನೇ ಪ್ರತಿಪಾದಿಸುತ್ತದೆ. ಆದರೆ ಅದು ಹಿಡಿಯುವ ಸತ್ಯ ಭಾವಸತ್ಯ. ಬಹಿರ್ ಲೌಕಿಕ ಸತ್ಯಕ್ಕಿಂತಲೂ ಸತ್ಯತರವಾದ ಅನುಭವ ಸತ್ಯ.

ತಪೋನಂದನ, ಪ್ರತಿಮಾ ಮತ್ತು ಪ್ರತಿಕೃತಿ, ಪುಟ ೩೨

೧೫೮೯

ಉತ್ತಮವಾದುದು ಇದ್ದರೆ ಅದನ್ನು ಹೊಗಳಿ; ಇಲ್ಲದಿದ್ದರೆ ತೆಪ್ಪಗಿರಿ. ಬರಿಯ ತೆಗಳುವ ಕೆಲಸವನ್ನೇ ಮಾಡಬೇಡಿ. ಶಲ್ಯ ಕರ್ಣನನ್ನು ಬಯ್ದು ಬಯ್ದು ಅವನ ಶಕ್ತಿಯನ್ನೆ ಕುಂದಿಸಿದಂತೆ, ಬರಿಯ ಖಂಡನೆಯ ಕೆಲಸ ಮಾಡಬಾರದು.

ವಿಚಾರ ಕ್ರಾಂತಿಗೆ ಆಹ್ವಾನ, ಬರೆಯ ಬಯಸುವರಿಗೆ ಒಂದು ಎಚ್ಚರಿಕೆ, ಪುಟ ೧೪

೧೫೯೦

ಗುರುದೇವನ ಚೈತನ್ಯಕೆ
ನನ್ನುದ್ಧಾರವೆ ಸಾಕ್ಷಿ!
ನನ್ನಂತೆಯೆ ನಿಮ್ಮೆಲ್ಲರ
ಆತ್ಮೋದ್ಧಾರವು ಸಾಕ್ಷಿ!

ಅಗ್ನಿಹಂಸ, ಶತಮಾನ ಸಂಧ್ಯೆ, ಪುಟ ೮೬

೧೫೯೧

ಹಳೆಯ ಮೌಲ್ಯಗಳಿಂದ ಮತ್ತು ಹಳೆಯ ಮೌಢ್ಯಗಳಿಂದ ಜನರನ್ನು ಪಾರುಮಾಡಿ ಅವರಲ್ಲಿ ವೈಜ್ಞಾನಿಕ ದೃಷ್ಟಿ ಮತ್ತು ವೈಚಾರಿಕ ಬುದ್ಧಿ ಮೂಡುವಂತೆ ಮಾಡದಿದ್ದರೆ ನೀವು ಅವರ ಅಭಿವೃದ್ಧಿಗಾಗಿ ಮಾಡುವ ಸಾಹಸವೆಲ್ಲ ನೀರಿನಲ್ಲಿ ಮಾಡಿದ ಹೋಮವಾಗುತ್ತದೆ.

ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಅದೇ ಹೆಸರಿನ ಲೇಖನ, ಪುಟ ೧೪

೧೫೯೨

ಭಾವ ವೀಚಿಗಳಳಿದು ಹೃದಯ ಸರೋವರ ನಿಸ್ತರಂಗ !
ಚಿಂತೆಯೂರ್ಮಿಗಳುಡುಗಿ ಚಿತ್ತವಾರಿಧಿ ಅಚಂಚಲ !
ಉಳಿದೆಲ್ಲ ಉಪಾದಿಗಳನುಳಿದಾತ್ಮ ತಾನೆ ಕಿಂಕಿಣಿ !

ಕಿಂಕಿಣಿ, ಕಿಂಕಿಣಿ, ಪುಟ ೧

೧೫೯೩

ಮನುಷ್ಯತ್ವಕ್ಕೆ ಸಾಮಾನ್ಯವಾಗಿದ್ದು, ರಾಗದ್ವೇಷಾದಿ ಸ್ವಾರ್ಥಪ್ರಯೋಜನದ ಲೌಕಿಕ ಕ್ರಿಯಾರೂಪದ ಪ್ರತಿಕ್ರಿಯೆಗಳನ್ನು ಅಪೇಕ್ಷಿಸಿ ಕೆರಳಿಸುವ ರತ್ಯಾದಿ ಸ್ಥಾಯಿ ಭಾವಗಳ ಸಮ್ಮುಖದಲ್ಲಿ ಮನುಷ್ಯ ಸಾಮಾನ್ಯನಿಗೆ ಲೋಕರಂಗದಲ್ಲಿ ರಸಾನುಭವ ಎಂದೆಂದಿಗೂ ಅಸಾಧ್ಯ. ಆದರೆ ರತ್ಯಾದಿ ಸ್ಥಾಯಿಭಾವಗಳಿಗೆ ನೇರವಾಗಿ ಸಂಬಂಧ ಪಡದಿರುವ ಸುಂದರವಾದ ನೈಸರ್ಗಿಕ ದೃಶ್ಯಗಳನ್ನೂ ಮತ್ತು ಕಮನೀಯ ನೈಸರ್ಗಿಕ ವ್ಯಾಪಾರಗಳನ್ನೂ ಅವಲೋಕಿಸಿ ನಲಿಯುವಾಗ ಉಂಟಾಗುವ ಸೌಂದರ್ಯ ಸುಖಾನುಭವ ಯಾವ ರೀತಿಯಲ್ಲಿಯೂ ರಸಾನುಭವಕ್ಕೆ ವಿಭಿನ್ನವಾಗಿ ತೋರುವುದಿಲ್ಲ.

ರಸೋ ವೈ ಸಃ, ರಸೋ ವೈ ಸಃ, ಪುಟ ೧೨೫

೧೫೯೪

ಇಂದ್ರಿಯಗಳಿಗೆ ತೋರುವ ಭೇದವೆಲ್ಲ ಅಜ್ಞಾನಜನ್ಯವಾದುದು. ಜ್ಞಾನೋದಯ ವಾದರೆ ನಿಜವು ಗೊತ್ತಾಗುತ್ತದೆ. ಅವಿದ್ಯೆಯ ಯವನಿಕೆ ಜಗತ್ತನ್ನು ಆವರಿಸಿದೆ. ಆ ಅವಿದ್ಯೆ ಅನಾದಿಯಾದುದು. ಎಂದರೆ ಕಾಲಭಾವನೆಯೇ ಅವಿದ್ಯೆಯ ಶಿಶುವಾಗಿರುವುದ ರಿಂದ ಅವಿದ್ಯೆ ಕಾಲಾತೀತವಾದುದು. ಅದು ಹೇಗೆ ಯಾವಾಗ ಪ್ರಾರಂಭವಾಯಿತೆಂದು ಯಾರೂ ಹೇಳಲಾರರು. ಮಾಯೆಯ ಸ್ವರೂಪ ನಮ್ಮ ಈ ಚತುರ್ಮುಖ ಜಗತ್ತಿನ ಸೂತ್ರಗಳಿಗೆ ಸಿಲುಕುವುದಿಲ್ಲ. ಆದ್ದರಿಂದ ಅದು ಅಪ್ರಮೇಯವಾದುದು ; ಅನಿರ್ವಚನೀಯವಾದುದು. ಕನಸು ನನಸಿನಲ್ಲಿ ಅಳಿಸಿ ಹೋಗಿ ಮಿಥ್ಯೆಯೆಂದು ತೋರುವಂತೆ ಈ ಮಾಯಾಮುದ್ರಿತ ಮಹಾವಿಶ್ವವು ಜಾಗ್ರದತೀತವಾದ ತುರೀಯಾವಸ್ಥೆಯಲ್ಲಿ ಅಥವಾ ನಿರ್ವಿಕಲ್ಪ ಸಮಾಧಿಯಲ್ಲಿ ಇಲ್ಲವಾಗಿ ಅದ್ವಯವೂ ಸಚ್ಚಿದಾನಂದವೂ ಆಗಿರುವ ಬ್ರಹ್ಮದ ಅನುಭವವಾಗುತ್ತದೆ. ಆ ಸಚ್ಚಿದಾನಂದ ಸಾಕ್ಷಾತ್ಕಾರವೆ ಮಾನವನ ಚರಮಗಮ್ಯ

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೩೮-೯

೧೫೯೫

ಈಗ ಅಲ್ಲಲ್ಲಿ ಪ್ರಕಟವಾಗುತ್ತಿರುವ ಕವನಗಳು ರೂಪದಲ್ಲಿ ಬಹಳಮಟ್ಟಿಗೂ ಆತ್ಮದಲ್ಲಿ ಸ್ವಲ್ಪಮಟ್ಟಿಗೂ, ಆಂಗ್ಲೇಯ ಸಾಹಿತ್ಯವನ್ನೇ ಅನುಸರಿಸುತ್ತಿವೆಯೆಂಬುದು ನಿರ್ವಿವಾದವಾದ ಮಾತಾಗಿದೆ. ರೂಪ ಬದಲಾಯಿಸಿದ್ದರೂ ಕೂಡ ಅದು ನಮಗೆ ಸಂಪೂರ್ಣವಾಗಿ ಹೊಸತಲ್ಲ. ಇನ್ನೂ ಸ್ವಲ್ಪ ಮುಂದೆ ಹೋಗಿ, ಧೈರ್ಯವಾಗಿ ಹೇಳುವುದಾದರೆ, ಹೊಸತೇ ಅಲ್ಲ ಎಂದೂ ಹೇಳಿಬಿಡಬಹುದು. ಏಕೆಂದರೆ ಛಂದಶ್ಶಾಸ್ತ್ರವನ್ನು ಓದಿದ ಯಾರಿಗಾದರೂ ಈಗಿನ ಹೊಸರೂಪಗಳು ಹಳೆಯ ಷಟ್ಪದಿ ರಗಳೆಗಳ ರೂಪಾಂತರಗಳೆಂದು ತೋರದೆ ಇರುವುದಿಲ್ಲ. ಈಗಿನ ಹೊಸ ಕವನಗಳಿಗೆ ಆಧಾರ ಆದಿಪಂಪನಲ್ಲಿಯೇ ದೊರಕುತ್ತದೆ.

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೨೦

೧೫೯೬

ಮೌಢ್ಯಕಿಂ ಪೋಲೀಸೆ ?
ಕರ್ಬೊನ್ನ ಸರಪಣಿಯು ಮತದಘೀಮಿಗೆ ಲೇಸೆ ?

ಕೃತ್ತಿಕೆ, ಮಾದೇಶ್ವರನ ಬೆಟ್ಟಕಂತೆ, ಪುಟ ೬೮

೧೫೯೭

ಬಿದಿಯ ತಿದ್ದಲು ನಾವು ಗೆಯ್ವಾ ಪ್ರಯತ್ನವೇ
ತಳ್ಳುವುದು ನಮ್ಮ ನಾ ಬಿದಿಯ ಒಡ್ಡಿದ ಬಲೆಗೆ !

ಚಂದ್ರಹಾಸ, ಪಾತ್ರ ತಾರಕಾಕ್ಷಿ, ಪುಟ ೧೧

೧೫೯೮

ಅನುಭವ ಬದಲಾಯಿಸಿದಂತೆ, ಪ್ರಜ್ಞೆ ವಿಕಾಸವಾದಂತೆ ಕವಿಯ ದರ್ಶನ ಪರಿಣಾಮಗೊಳ್ಳುತ್ತದೆ. ಕೇವಲವಾದ ಭೂಮಾನುಭೂತಿ ಸಿದ್ಧಿಸುವವರೆಗೂ ಅದರ ವೃದ್ಧಿಗಾಗಲಿ ಪರಿವರ್ತನೆಗಾಗಲಿ ಪೂರ್ಣವಿರಾಮ ಲಭಿಸುವುದಿಲ್ಲ. ಅದು ಅನಂತ ಕಾಲವೂ ನಿರಂತರ ವಿಕಾಸಶೀಲವಾದುದು. ಅನಂತದ ಸಿದ್ಧಿಗೆ ಅಂತವೆಲ್ಲಿ ?

ದ್ರೌಪದಿಯ ಶ್ರೀಮುಡಿ, ಕವಿಯ ಜೀವನದೃಷ್ಟಿ ಮತ್ತು ಕಾವ್ಯಸೃಷ್ಟಿ, ಪುಟ ೪೧

೧೫೯೯

ಪೌರಾಣಿಕಗಳಲ್ಲಿಯೂ ಪ್ರತಿಕೃತಿಯ ವಿಧಾನವನ್ನು ಹೊಂದಿಸುವ ಪ್ರಯತ್ನದ ವಿಕೃತ ಫಲಗಳನ್ನು ಆಧುನಿಕ ನಾಟಕಗಳಲ್ಲಿ ಕಾಣಬಹುದು. ಅಂತಹ ಪ್ರಯತ್ನಕ್ಕೆ ಬೆಂಬಲವಾಗಿರುವ ಮನೋಧರ್ಮವೆಂದರೆ–ಭಾವಲೋಕದ ಸತ್ಯತೆಯ ವಿಚಾರ ವಾಗಿರುವ ಸಂದೇಹ; ಮತ್ತು ಭವಲೋಕವೇ ಪರಮಸತ್ಯ ಎಂಬ ಶ್ರದ್ಧೆ.

ತಪೋನಂದನ, ಅಡಿಟಿಪ್ಪಣಿ ನಾಟಕ ಕಲೆಯಲ್ಲಿ ಪ್ರತಿಕೃತಿ ಮತ್ತು ಪ್ರತಿಮಾ ವಿಧಾನಗಳು, ಪುಟ ೧೦೭

೧೬೦೦

ತಾಳ್ಮೆಯೊಳೆ ಬಾಳ್ಮೆಯಿದೆ.

ಚಿತ್ರಾಂಗದಾ, ಮೊದಲನೆಯ ಪರ್ವಂ, ಪಾತ್ರ ಅರ್ಜುನ, ಪಂಕ್ತಿ ೩೫೬, ಪುಟ ೧೩

೧೬೦೧

ಕವಿಗೆ ಮೇಣ್ ಸ್ತ್ರೀಗೆ ತರ್ಕಂ
ಪ್ರಕೃತಿವಕ್ರಂ.

ಶ್ರೀ ರಾಮಾಯಣ ದರ್ಶನಂ, ಅತ್ತಲಾ ದೈತ್ಯ ಸಭೆಯೊಳ್, ಪಾತ್ರ ಮೇಘನಾದ, ಪುಟ ೫೭೫

೧೬೦೨

ಆತ್ಮಕಾಂತಿಗಪ್ರಾಕೃತಕೆ
ಪೇಳೆಲ್ಲಿಯದು ಛಾಯೆ ? ಮಹಿಮೆ ಮಹಿಮೆಗೆ ಪೆರತೆ ?

ಶ್ರೀ ರಾಮಾಯಣ ದರ್ಶನಂ, ಚಿತ್ರಕೂಟಕೆ, ಪುಟ ೧೪೬

೧೬೦೩

ಲೌಕಿಕ ಕ್ಷೇಮಗಳನ್ನು ಸಾಧಿಸುವುದಕ್ಕೆ ನಾವು ಕೈಗೊಂಡಿರುವ ಎಲ್ಲ ಕೆಲಸಗಳೂ ನಡೆಯಬೇಕು, ನಡೆಯುತ್ತಿವೆ. ಆದರೆ ಅವುಗಳನ್ನೆಲ್ಲಾ ಉಪಯೋಗಿಸಿ ಸುಖ ಶಾಂತಿಗಳನ್ನು ಅನುಭವಿಸುವ ಚೇತನ ಅದಕ್ಕೆ ಸಿದ್ಧವಾಗದಿದ್ದರೆ ಎಷ್ಟು ವಿದ್ಯುಚ್ಛಕ್ತಿ ಇದ್ದರೇನು ? ಎಷ್ಟು ಬಟ್ಟೆ ಇದ್ದರೇನು ? ಎಷ್ಟು ಊಟ ತಿಂಡಿ ಇದ್ದರೇನು ? ಇವನಿಗೆ ಆರೋಗ್ಯವಿಲ್ಲದಿದ್ದರೆ, ಮನಶ್ಶಾಂತಿ ಇಲ್ಲದಿದ್ದರೆ, ಇವನು ಮಾನಸಿಕವಾಗಿ ಹೃದಯದಲ್ಲಿ ಕುಬ್ಜನಾಗಿದ್ದರೆ. ಏನು ದೊಡ್ಡದನ್ನು ತಾನೆ ಸಾಧಿಸಬಲ್ಲನು ?

ಷಷ್ಟಿನಮನ, ವಿಶ್ವಮಾನವ, ಪುಟ ೪೯

೧೬೦೪

ಪ್ರತೀಕಕ್ಕೆ ಒಂದು ವ್ಯಾಪಕವಾದ ಜೀವಂತ ಸ್ಥಾನ ದೊರೆಕೊಂಡಿದೆ. ರಾಜಕೀಯ ಮತ್ತು ಮತ ಪ್ರಪಂಚಗಳಲ್ಲಂತೂ ಅದೊಂದು ಶಕ್ತಿಯೂ ಶಕ್ತಿಪ್ರಣಾಲಿಕೆಯೂ ಆಗಿ ತನ್ನ ಪ್ರಬಲತೆಯನ್ನು ಸ್ಥಾಪಿಸಿಕೊಂಡಿದೆ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೩೫

೧೬೦೫

ಮುಂದಾಗುವುದನೊಂದನೂ
ಅರಿಯದವನೇ ಧನ್ಯ.

ಯಮನ ಸೋಲು, ಪಾತ್ರ ಸಾವಿತ್ರಿ, ಪುಟ ೧೨

೧೬೦೬

ಕಲೆಯ ಕಣ್ಣಿಂದ ನರರಿಗೆ ನಾನು ಬರಿಕಲ್ಲು;
ಕವಿಯನುಳಿದಾರಿಗೂ ಕೇಳದೆನ್ನೀ ಸೊಲ್ಲು !

ಕಲಾಸುಂದರಿ, ಶಿಲಾತಪಸ್ವಿ, ಪುಟ ೪೯

೧೬೦೭

ಪ್ರತಿಯೊಬ್ಬ ಪ್ರತಿಭಾಶಾಲಿಯಾದ ಮಹಾಕವಿಯೂ ಯಾವ ರುಚಿಯಿಂದ, ಯಾವ ದೃಷ್ಟಿಯಿಂದ ಜನರು ತನ್ನ ಕೃತಿಗಳ ಸೌಂದರ್ಯ ಮಹತ್ತುಗಳನ್ನು ಗ್ರಹಿಸಿ

ಆಸ್ವಾದಿಸಲು ಸಮರ್ಥರಾಗುವರೋ ಆ ರುಚಿಯನ್ನೂ ದೃಷ್ಟಿಯನ್ನೂ ತಾನೇ ಪ್ರಯತ್ನದಿಂದಲೂ ಸಾಹಸದಿಂದಲೂ ಸಾವಧಾನವಾಗಿ ಜನರಲಿ ಉತ್ಪತ್ತಿ ಮಾಡಿಕೊಳ್ಳಬೇಕಾಗುತ್ತದೆ ಎಂಬ ವಿಷಯ ಇತರ ಸಾಹಿತ್ಯ ಚರಿತ್ರೆಗಳು ತೋರುವ ನಿದರ್ಶನಗಳಿಂದ ನಮಗೆ ವಿಶದವಾಗುತ್ತದೆ.

ಕಲಾಸುಂದರಿ, ಮುನ್ನುಡಿ, ಪುಟ viii

೧೬೦೮

ಜ್ಯೋತಿಯಿರ್ಪೆಡೆಯಲ್ಲಿ ಭಗವತ್ ವಿಭೂತಿಯಂ
ದರ್ಶಿಸುತೆ, ಮುಡಿಬಾಗಿ ಮಣಿದು ಕೈಜೋಡಿಸುವೆನಾಂ.
ಲೋಕ ಗುರು ಕೃಪೆಯಿರಲಿ; ಲೋಕ ಕವಿ ಕೃಪೆ ಬರಲಿ;
ಲೋಕ ಹೃದಯದ ಬಯಕೆಯಾಶೀರ್ವಾದ ವೈತರಲಿ.
ಮಣಿದಿರಲಿ ಮುಡಿ; ಮತ್ತೆ ಮುಗಿದಿರಲಿ ಕಯ್ ; ಮತ್ತೆ
ಮಡಿಯಾಗಿರಲಿ ಬಾಳ್ವೆ, ಜಯಿಸುಗೆ ರಸತಪಸ್ಯೆ;
ದೊರೆಕೊಳುಗೆ ಚಿರಶಾಂತಿ; ಸಿರಿಗನ್ನಡಂ, ಗೆಲ್ಗೆ!

ಶ್ರೀ ರಾಮಾಯಣ ದರ್ಶನಂ, ಕವಿಕ್ರತು ದರ್ಶನಂ, ಪುಟ ೧೮

೧೬೦೯

ಟಿಪ್ಪಣಿಗಳು ಲೇಖನಗಳಿಗೆ ಗಡ್ಡದ ಕೂದಲುಗಳಿದ್ದಂತೆ. ಗಡ್ಡವಿಲ್ಲದ ಗಂಡಸಿಗೆ ಅಷ್ಟು ಗೌರವವಿಲ್ಲ ಎಂದು ಅನೇಕರ ಅನುಭವಕ್ಕೆ ಬಂದಿರಬಹುದು. ಗಡ್ಡ ಬಿಟ್ಟಿದ್ದರೆ ಶ್ರೀಮದ್ಗಾಂಭೀರ್ಯ! ಗಡ್ಡ ಎಷ್ಟು ಉದ್ದವಾಗಿದ್ದರೆ ಅಷ್ಟೂ ಗಾಂಭೀರ್ಯ! ಕೆಲವು ಪ್ರಸಿದ್ಧ ವ್ಯಕ್ತಿಗಳಂತೂ ಗಡ್ಡದ ಮೇಲೆಯೇ ನಡೆಯುತ್ತಿದ್ದಾರೆ! ಅವರೆಲ್ಲಿಯಾದರೂ ಗಡ್ಡ ತೆಗೆದುಬಿಟ್ಟೆ–ದೇವರೇ ಗತಿ! ಲೇಖನಗಳಿಗೂ ಹಾಗೆಯೇ ಟಿಪ್ಪಣಿಗಳು ಉದ್ದವಾಗಿದ್ದು ಹೆಚ್ಚಾಗಿದ್ದರೆ ಅವುಗಳಿಗೆ ಪ್ರೌಢಿಮೆ ದೊರೆಕೊಳ್ಳುವುದರಲ್ಲಿ ಲೇಶವೂ ಸಂದೇಹವಿಲ್ಲ.

ನನ್ನ ದೇವರು ಮತ್ತು ಇತರ ಕಥೆಗಳು, 'ಗಂಟು' ಅಥವಾ ಗುಪ್ತಧನ, ಪಾತ್ರ ಕಥಾನಾಯಕ, ಪುಟ ೪೭

೧೬೧೦

ಭಕ್ತಿಯಲಿ, ಶಾಂತಿಯಲಿ,
ಒಂದಿನಿತು ಗೊಣಗುಡದೆ,
ನಶ್ವರದ ನಡುವೆಯಿಹ
ಶಾಶ್ವತವ ಸವಿಯುತ್ತ,
ದುಃಖಗಳ ಎದೆಯೊಳಿಹ
ಸುಖಗಳನು ಸುಲಿಯುತ್ತ,
ಇಹಪರಗಳೆರಡನೂ
ಪ್ರೇಮದಿಂ ಮುತ್ತುತ್ತ
ನಲಿಯುವಂ ಬಾ!

ಷೋಡಶಿ, ರಸಋಷಿ, ಪುಟ ೭೮

೧೬೧೧

ಮೌನವೆ ಮಹಾ ಸ್ತೋತ್ರಂ
ಈ ಭೂಮ ಭವ್ಯ ಸೌಂದರ್ಯದಾರಾಧನೆಗೆ !
ಈ ದೃಶ್ಯ ಮಾಧುರ್ಯದಿದಿರಿನಲಿ ಕರ್ಕಶಂ
ಕವಿಯ ವಾಣಿಯು ಕೂಡ !

ಪಕ್ಷಿಕಾಶಿ, ನವಿಲು ಕಲ್ಲಿನಲ್ಲಿ ಸೂರ್ಯೋದಯ, ಪುಟ ೮೩

೧೬೧೨

ಕಲೆಯ ಬಾಳ್ವಿಗೆ ಮಿಗಿಲ್ ಬಾಳ್ವೆಯ ಕಲೋಲ್ಲಾಸ :
ಕಲೆ ಸಂಸ್ಕೃತಿ ವಿಲಾಸ ; ಬಾಳ್ ಸೃಷ್ಟಿಗೆ ವಿಲಾಸ !

ಪ್ರೇತ ಕ್ಯೂ, ದಿವಂಗತ ಕವಿಗೆ ಜಯಶ್ರೀ ಸ್ಮಾರಕ, ಪುಟ ೬೪

೧೬೧೩

ಒಲಿದೆರಡು ದೃಷ್ಟಿಗಳ ಸಂಗಮವು ತುಂಗೆಭದ್ರೆಯರ ಗಂಗೆಯಮುನೆಯರ ಸಂಗಮಕ್ಕಿಂತಲೂ ಪವಿತ್ರವಾದುದು, ಗೂಢವಾದುದು, ಮಹತ್ತಾದುದು.

ಕಾನೂರು ಹೆಗ್ಗಡಿತಿ, ಪುಟ ೧೨೬

೧೬೧೪

ಹೇಳುವುದು ಒಂದು,
ಮಾಡುವುದು ಮತ್ತೊಂದು ! ಜಗದೊಡೆಯನೆಲ್ಲಿಯುಂ
ಇರುವನೆಂಬರು ಒಮ್ಮೆ ! ಗುಡಿಯಲರಸುವರೊಮ್ಮೆ !
ನಿರಾಕಾರನವನೆಂದು ಸಾರುವರು ಒಮ್ಮೆ ;
ಮೂರ್ತಿಗಳ ಮಾಡಿ ಆರಾಧಿಸುವರಿನ್ನೊಮ್ಮೆ !
ಒಂದು ಸಲ ಸರ್ವರೊಳು ಅವನಿರುವನೆನ್ನುವರು ;
'ಹೊಲೆಯ ನೀ ದೂರವಿರು' ಎಂದೆಂಬರಿನ್ನೊಮ್ಮೆ !
ನುಡಿಗೂ ನೆಗಳ್ತೆಗೂ ಸಂಬಂಧವೇ ಇಲ್ಲ !
ಇದೆ ನಮ್ಮ ಭಾರತಾಂಬೆಯ ದುರ್ಗತಿಗೆ ಕಾರಣ.

ಜಲಗಾರ, ಪಾತ್ರ ಮೊದಲನೆಯ ತರುಣ, ಪುಟ ೧೭

೧೬೧೫

ಮತದ ಬಿರುಕುಗಳನು ತೂರೆವೆ ;
ನುಡಿಗಳೊಡಕುಗಳನು ಮರೆವೆ ;
ತೊತ್ತ ತೊಡಕುಗಳನು ಬಿರಿವೆ ;
ಜೀವನವನೆ ದೇವಿಗೆರೆವೆ
ಬಿಡುತೆ ಗುಡಿಯ ಕಟ್ಟಲು.
ಭರತ ಭೂಮಿ ನನ್ನ ತಾಯಿ

ನನ್ನ ಪೊರೆವ ತೊಟ್ಟಿಲು :
ಸ್ವಾತಂತ್ರ್ಯದ ಸ್ವರ್ಗಕೇರೆ
ಪುಣ್ಯದೇಣಿ ಮೆಟ್ಟಲು !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಭರತಭೂಮಿ ನನ್ನ ತಾಯಿ, ಪುಟ ೩೪-೫

೧೬೧೬

ಜಗತ್ತೇ ಒಂದು ಮಹಾ ದೇವಾಲಯ. ನಾವು ದೇವತಾರಾಧನೆಗೆ ಬಂದ ಭಕ್ತರು.

ಇತ್ಯಾದಿ, ಪ್ರಕೃತಿ ಸೌಂದರ್ಯ, ಪುಟ ೧೪-೫

೧೬೧೭

ಆಹ,
ಏನು ಕಲೆ ನಿನ್ನದಯ್ : ವಿಶ್ವತಾ ಸಂಸ್ಪರ್ಶಿ,
ಮೇಣ್ ಬ್ರಹ್ಮದರ್ಶಿ ! ಕಲ್ಪನೆ ಅಲ್ಪಮಾತ್ರದಿಂ
ಭೂಮಾನುಭೂತಿಯಂ ಮಂತ್ರಿಸಿ ಮಥಿಪುದಲ್ಲಿ.

ಅಗ್ನಿಹಂಸ, ರೋರಿಕ್ ಚಿತ್ರಶಾಲಾ ಸ್ಮೃತಿ, ಪುಟ ೫-೬೦

೧೬೧೮

ಇಂದು ನೆತ್ತರು ಚೆಲ್ಲಿ ಮುಂದೆ ಬಹ ಮಕ್ಕಳಿಗೆ
ಹೊಟ್ಟೆಗನ್ನವ, ಮೈಗೆ ಬಟ್ಟೆಯನ್ನು ನೀಡಿ.
ಇಂದು ನೋವಾದರೂ ಇಂದು ಸಾವಾದರೂ
ಮುಂದೆ ಬಾಳಿಗೆ ಸೊಗಸು ನೆಮ್ಮದಿಯ ಮಾಡಿ.
ಇಂದು ನೀವೇಳದಿರೆ ಕೆಚ್ಚೆದೆಯ ತಾಳದಿರೆ
ನಿಮ್ಮವರ ಬಾಳು ಎಂದೆಂದಿಗೂ ಹೇಡಿ !
"ಇಂದು ರಕ್ತದ ಬಿಂದು ಮುಂದೆ ಸೌಖ್ಯದ ಸಿಂಧು !"
ಎಂದು ಸಾಹಸಕೇಳಿ, ಹಿಂಜರಿಯಬೇಡಿ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಹೊಸಬಾಳಿನ ಗೀತೆ, ಪುಟ ೩೦

೧೬೧೯

ಬಳೆಯುತಿರೆ ದಿವ್ಯಾರ್ಭಕಂ ಗರ್ಭಗುಡಿಯಲ್ಲಿ
ನಿನ್ನ ಮೈ, ಗರ್ಭಿಣಿಯೆ, ದೇವಾಲಯಂ ; ಪೂಜ್ಯೆ
ನೀನೆನಗೆ. ಓ ಲಕ್ಷ್ಮಿ, ಓ ಸೃಷ್ಟಿ ಸಾಮ್ರಾಜ್ಞೆ,
ನಿನ್ನ ಕರ್ಮದ ಮಹಿಮೆ ನಿನಗರಿಯದಿದೆ.

ಜೇನಾಗುವಾ, ಗರ್ಭಗುಡಿ, ಪುಟ ೧೮

೧೬೨೦

ಯಾವಾತನು ಸಂಸ್ಕೃತಿಯ ಸಮುದ್ರದ ಮೇಲೆಮೇಲೆಯೆ ತೇಲುತ್ತಾ, ಮುತ್ತುಗಳನ್ನು ನಟಿಸುವ ಅದರ ನೊರೆಯೊಡನೆ ಸರಸವಾಡುವುದರಲ್ಲಿಯೆ ತೃಪ್ತನಾಗದೆ,

ಆಳಕ್ಕೆ ಮುಳುಗಿ, ಅವಶ್ಯಬಿದ್ದರೆ ಸಾಮಾನ್ಯ ಸುಖಗಳನ್ನೂ ತೊರೆದು, ಅಪಾಯಗಳನ್ನೂ ಎದುರಿಸಿ, ಪ್ರಾಚೀನ ಕವಿಗಳಿಂದಲೂ ಋಷಿಗಳಿಂದಲೂ ದಾರ್ಶನಿಕರಿಂದಲೂ ಬ್ರಹ್ಮದರ್ಶಿಗಳಿಂದಲೂ ಕಲಾಕೋವಿದರಿಂದಲೂ ಸಕಲ ವಿಬುಧವರೇಣ್ಯರಿಂದಲೂ ಅಮೂಲ್ಯ ರತ್ನವರಗಳನ್ನು ವರವಾಗಿ ಪಡೆದು ವಿವಿಧ ವರ್ಣಕಿರಣ ದೇದೀಪ್ಯನಾಗಿ ಮೂಡುತ್ತಾನೆಯೋ ಆತನೇ ನವೀನ ಮಾನವ ಎಂಬ ಹೆಸರಿಗೆ ಯೋಗ್ಯವಾಗುತ್ತಾನೆ; ಉಳಿದವರಲ್ಲ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೪೬

೧೬೨೧

ಮಹಾ ಪುರುಷರು ಸಿಡಿಲಿನಂತೆ ಕಠೋರರು ; ಹೂವಿನಂತೆ ಕೋಮಲರು ;

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೭೧

೧೬೨೨

ಪ್ರತಿಮಾದೃಷ್ಟಿಯಿಂದ ಪರಿಶೀಲಿಸಿದರೆ ರಾಮಾಯಣ ಒಂದು ನಿತ್ಯ ಕಥೆಯಂತೆ ಬೋಧೆಯಾಗುತ್ತದೆ. ನಿತ್ಯ ಕಥೆ ಎಂದರೆ ಭೂತ ವರ್ತಮಾನ ಭವಿಷ್ಯತ್ ಕಾಲಗಳಿಗೆ ಮಾತ್ರ ಅನ್ವಿತವಾಗದೆ ಅವುಗಳನ್ನೊಳಗೊಂಡೂ ಅತೀತವಾಗಿ ನಿಲ್ಲುವ ಕಥೆ: ತ್ರಿಕಾಲಾತೀತವಾದ ಅಲೋಕ ಸತ್ಯಗಳು ಲೋಕ ಕಾಲದೇಶಾಧೀನವಾಗಿ ಸ್ವತಂತ್ರವಾಗಿ ರೂಪಗೊಂಡು ಸ್ವಭಾವತಂತ್ರವಾಗಿ ವಿಕಾಸಗೊಳ್ಳುವುದನ್ನು ಪ್ರತಿಮಾ ವಿಧಾನದಿಂದ ನಿರೂಪಿಸುವ ಕಥೆ.

ತಪೋನಂದನ, ಋಷಿ ವಾಲ್ಮೀಕಿಯ ಕಾವ್ಯಜಾಹ್ನವಿ, ಪುಟ ೧೧೫

೧೬೨೩

ನನಗೆ ಒಂದೊಂದು ಸಾರಿ, ಮನುಷ್ಯ ಮನುಷ್ಯನಿಗೆ ಮಾಡುವ ಅನ್ಯಾಯವನ್ನು ಯೋಚಿಸಿಕೊಂಡರೆ ಕೋಪ ಕಣ್ಣೀರು ಎಲ್ಲಾ ಒಟ್ಟಿಗೆ ಬರುತ್ತವೆ.

ಮಲೆನಾಡಿನ ಚಿತ್ರಗಳು, ಪುಟ್ಟಾಚಾರಿಯ ಕಾಡುಕೋಳಿ, ಪುಟ ೪೯

೧೬೨೪

ದ್ವಿತೀಯ ವಿವಾಹ ಎಷ್ಟು ಶಾಸ್ತ್ರಸಮ್ಮತವಾದರೂ ಪ್ರಥಮ ಪತ್ನೀ ದ್ರೋಹ ಎಂದು ಕಂಡುಬಂದಿತು. ಸ್ತ್ರೀಯು ಗಂಡ ಸತ್ತರೆ ತಾನು ದೇವತೆಗಳಿಗಿತ್ತ ಭಾಷೆಯನ್ನು ಪಾಲಿಸುತ್ತಾಳೆ. ಆದರೆ ಪುರುಷನು ಆಕೆಗೆ ದ್ರೋಹವೆಸಗುತ್ತಾನೆ. ಪ್ರೇಮ ನಿಶ್ಚಲವೂ ಶಾಶ್ವತವೂ ಆಗಿರಬೇಕು. ಸತಿ ಮಡಿದೊಡನೆ ಮತ್ತೊಬ್ಬಳನ್ನು ಬಯಸುವ ಪ್ರೇಮ ನಿಃಸಂದೇಹವಾಗಿ ವೇಷಾಂತರ ಹೊಂದಿದ ಕಾಮ.

ನನ್ನ ದೇವರು ಮತ್ತು ಇತರ ಕಥೆಗಳು, ಪಾತ್ರ ಕಥಾನಾಯಕ, ಆದರ್ಶ ಸಾಧನೆ, ಪುಟ ೨೯–೩೦

೧೬೨೫

ಒಲುಮೆ ಚೇಳು ಸಕ್ಕರೆಯದು
ಕಚ್ಚಿದರೂ ಅಲ್ಲ ಕಹಿ ;

ಅದರ ಕೊಂಡಿ ಅಕ್ಕರೆಯದು
ಚುಚ್ಚಿದರೂ ಬೆಲ್ಲ ಸಿಹಿ !

ಜೇನಾಗುವಾ, ಒಲುಮೆ ಚೇಳು, ಪುಟ ೭೭

೧೬೨೬

ಸಾಮಾನ್ಯತೆ ಭಗವಂತನ ರೀತಿ ;
ಸಾಮಾನ್ಯವೆ ಭಗವತ್ ಪ್ರೀತಿ.
ರಾಜ್ಯವನುರುಳಿಸಿ ಕಟ್ಟುವ ಕೀರ್ತಿ,
ವೈರಿಯನೆದೆಮೆಟ್ಟುವ ಕೀರ್ತಿ–
ಪೋ ! ತೆಗೆ ! ಪೈಶಾಚಸ್ಫೂರ್ತಿ !
ಬರಿ ನೇತಿ !

ಜೇನಾಗುವಾ, ಸಾಮಾನ್ಯತೆ ಭಗವಂತನ ರೀತಿ, ಪುಟ ೪೬

೧೬೨೭

ಭಕ್ತಿ ತುಂಬಿ ಶ್ರದ್ಧೆಯಿಂದ ಹೊಮ್ಮಿದ ಆರ್ತ ಜೀವದ ಪ್ರಾರ್ಥನೆಗೆ ಜಗನ್ಮಾತೆ– ಅವಳು ಅಖ್ಯಾತ ಹೂವಳ್ಳಿ ಹಾಡ್ಯದ ಮಾರಿಯಮ್ಮನ ರೂಪದಿಂದಿರಲಿ ಅಥವಾ ದಕ್ಷಿಣೇಶ್ವರದ ಜಗದ್‌ವಿಖ್ಯಾತ ಭವತಾರಿಣಿಯ ರೂಪದಿಂದಿರಲಿ – ಓ ಕೊಳ್ಳದಿರುತ್ತಾಳೆಯೆ ?

ಮಲೆಗಳಲ್ಲಿ ಮದುಮಗಳು, ಪುಟ ೬೬೬

೧೬೨೮

ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ !

ಪಾಂಚಜನ್ಯ, ಇಂದಿನ ದೇವರು, ಪುಟ ೩೯

೧೬೨೯

ಪುರುಷಕಾರಮೆ ಬಿದಿಗೆ ಬಾಳುಸಿರ್. ಶೌರ್ಯಮಿರೆ
ಕೃಪಣವಿಧಿ ಮುಕ್ತಹಸ್ತಂ.

ಶ್ರೀ ರಾಮಾಯಣ ದರ್ಶನಂ, ಊರ್ಮಿಳಾ, ಪಾತ್ರ ಲಕ್ಷಣ, ಪುಟ ೯೪

೧೬೩೦

ಪ್ರತಿಯೊಬ್ಬರಿಗೂ ಬರಿಯ ಅನ್ನ ಬಟ್ಟೆಗಳನ್ನೊದಗಿಸುವಷ್ಟರಲ್ಲೇ ಪರ್ಯವಸಾನ ವಾಗುವುದಿಲ್ಲ, ಸಮಾಜವಾದ ಮತ್ತು ಸರ್ವೋದಯ. ಸಮಷ್ಟಿ ಜೀವನಕ್ಕೆ ಎಲ್ಲ ಭೂಮಿಕೆಗಳಲ್ಲೂ ವಿಕಾಸ ತುಷ್ಟಿಪುಷ್ಟಿಗಳ ಅವಕಾಶವನ್ನೊದಗಿಸಬೇಕು. ದೇಶ ಭಾಷಾ ಮಾಧ್ಯಮವೆ ಅದಕ್ಕೆ ಏಕೈಕ ಸಾಧನ.

ವಿಚಾರ ಕ್ರಾಂತಿಗೆ ಆಹ್ವಾನ, ಕರ್ಣಾಟಕ : ಇಟ್ಟ ಹೆಸರು ಕೊಟ್ಟ ಮಂತ್ರ, ಪುಟ ೯೧

೧೬೩೧

ನಮ್ಮ ಭಕ್ತಿಗೆ ಮೆಚ್ಚುವಾ ಸಚ್ಚಿದಾನಂದಮೆ
ಜಗದ್ಗುರು....ಬೇರೆ ಗುರುವುಂಟೆ ?
ನರಗುರು ನಿಮಿತ್ತ ಮಾತ್ರನ್.

ಬೆರಳ್ ಗೆ ಕೊರಳ್, ಪಾತ್ರ ದ್ರೋಣ, ಪುಟ ೪೩

೧೬೩೨

ಅಪ್ರಸಿದ್ಧ ಯಃಕಶ್ಚಿತ ವ್ಯಕ್ತಿಗಳಿಗೆ ಸಂಬಂಧಪಟ್ಟುದಾದರೂ ತೀವ್ರ ಭಾವಮಯವಾದ ವಿಶೇಷ ಘಟನೆಗಳು ಸಂಭವಿಸಿದ ಸಾಧಾರಣ ಸ್ಥಳಗಳಿಗೂ ಒಂದು ಸ್ಮೃತಿ ಸಂಸ್ಕಾರ ರೂಪದ ವಿಶಿಷ್ಟ ಮನೋಮಂಡಲ ಕಲ್ಪಿತವಾಗಿದ್ದು, ತರುವಾಯ ಅದನ್ನು ಪ್ರವೇಶಿಸುವ ಸಮಾನ ಸಹಾನುಭೂತಿಯ ಮತ್ತು ಅನುಕಂಪೆಯ ವ್ಯಕ್ತಿಗಳ ಹೃದಯದಲ್ಲಿ ಏನಾದರೂ ಪ್ರತಿಕ್ರಿಯೆನ್ನುಂಟುಮಾಡುತ್ತವೆಯೊ ಏನೊ ?

ಮಲೆಗಳಲ್ಲಿ ಮದುಮಗಳು, ಪುಟ ೫೩೦

೧೬೩೩

ನಮ್ಮ ಸಾಹಿತ್ಯ ಜೀವಸಾಹಿತ್ಯ. ಜೀವನ ಲಕ್ಷಣ ಬೆಳವಣಿಗೆ. ಬೆಳವಣಿಗೆಗೆ ಒಂದು ಪ್ರಬಲವಾದ ಚಿಹ್ನೆ ಎಂದರೆ ಬದಲಾವಣೆ. ಕಾಲ ದೇಶ ಪರಿಸ್ಥಿತಿಗಳಿಗೆ ತಕ್ಕಂತೆ ಬದಲಾವಣೆ ಹೊಂದುತ್ತಾ ಬೆಳೆಯುತ್ತಿರುವ ಸಾಹಿತ್ಯವೆ ಜೀವಸಾಹಿತ್ಯ ಅಂತಹ ಬದಲಾವಣೆ ಯಾವಾಗಲೂ ಏರಿಕೆಯಾಗಿಯೇ ಇರದೆ ಇರಬಹುದು. ಇಳಿಕೆಯಾಗಿದ್ದರೂ ಚಿಂತೆಯಿಲ್ಲ ; ಹೆದರಬೇಕಾಗಿಲ್ಲ.

ಸಾಹಿತ್ಯ ಪ್ರಚಾರ, ಕನ್ನಡ ಸಾಹಿತ್ಯ, ಪುಟ ೬೦

೧೬೩೪

ನಿನಗೆ ಮಂಗಳವಾಗಲಿನಿಯ, ಮರೆ ಎನ್ನ !
ಮುದ್ದಿಡುತ ಹೊಸಬಳನು ನೆನೆಯದಿರು ಎನ್ನ !
ಎನ್ನ ನೆನಪದು ಶೂಲ ! ಮರೆತುಬಿಡು ನೀನು !
ನಾ ಮರೆಯೆ, ನಾ ಮರೆಯೆ, ನಾ ನಿನ್ನ ಮರೆಯೆ !

ಷೋಡಶಿ, ನಾ ನಿನ್ನ ಮರೆಯೆ, ಪುಟ ೪೧

೧೬೩೫

ಗುಡಿಗಳಿವು ಪಾಪಿಗಳ ಭೋಗಿಗಳ
ಗೂಡುಗಳು ! ಪೂಜೆಯೆಂಬುದೊ ಧರ್ಮಬುದ್ಧಿಯನು
ಜೋಗುಳದಿ ಮಲಗಿಸುವ ಕಾಳಮಂತ್ರವು.

ಜಲಗಾರ, ಪಾತ್ರ ತಿರುಕ, ಪುಟ ೧೬

೧೬೩೬

ಕಟ್ಟಕಡೆಯಲಿ
ದೇವರ ಗುಡಿಯಲಿ

ಪೂಜಾರಿಯೆ ದಿಟದ ನಿವಾಸಿ ;
ದೇವರೆ ಪರದೇಶಿ !–
ಜ್ಯೋತಿಯ ಬಯಸುತೆ ಬಹ ಭಕ್ತರಿಗೆ ವಿಭೂತಿಯ
ಹಂಚುವನು !
ಬೆಂಕಿಯ ನಂದಿಸಿ
ಬೂದಿಗೆ ವಂದಿಸಿ
ದೇವರ ಮರೆಗೈಯತೆ ಪೂಜಾರಿಯೆ ಮಿಂಚುವನು !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ದೇವರು–ಪೂಜಾರಿ, ಪುಟ ೭೪

೧೬೩೭

ಎಲ್ಲಕ್ಕೂ ಮೊದಲಾಗಿ, ಎಲ್ಲಕ್ಕೂ ಮಿಗಿಲಾಗಿ, ಎಲ್ಲರಿಗಿಂತಲೂ ಹಿರಿದಾಗಿ, ಇತರರಾರಿಂದಲೂ ಸಾಧ್ಯವಲ್ಲದಷ್ಟು ವಿವರವಾಗಿ, ಬರೆವ ಇತರರೆಲ್ಲರಿಗೂ ಮೂಲಾಧಾರ ಗ್ರಂಥವಾಗುವಂತೆ ಸಕಲ ವಿಷಯ ವಿಸ್ತಾರವಾಗಿ, ಹಿಂದಿಲ್ಲ ಮುಂದೆ ಬರುವುದಿಲ್ಲವೆಂಬಂತೆ ಆಶ್ಚರ್ಯಕರವಾಗಿ, ಪಂಡಿತ ಪಾಮರ ಸರ್ವ ಸುಲಭ ಸ್ವರಸವಾಗಿ, ಶ್ರೀ ರಾಮಕೃಷ್ಣ ಪರಮಹಂಸರ ಸ್ವಂತ ಸಹಜ ದಿವ್ಯವಾಣಿಯೆ ಲೋಕಕಲ್ಯಾಣಾರ್ಥವಾಗಿ ಮೂರ್ತಿಮತ್ತಾಗಿರುವಂತೆ ಅವರ ವಚನವೇದವನ್ನು ಲೋಕಕ್ಕೆ ಅನುಗ್ರಹಿಸಿದವರೆಂದರೆ 'ಕಥಾಮೃತ' ಕರ್ತೃ ಶ್ರೀ 'ಮ'! 'ಮ' ಅವರಿಗೆ ತಾನು ಯಾವ ಪ್ರಮಾಣದಲ್ಲಿ ಋಣಿಯಾಗಿದ್ದೇನೆ ಎಂಬುದಿನ್ನೂ ಜಗತ್ತಿಗೆ ಸಂಪೂರ್ಣವಾಗಿ ಅರಿವಾಗಿಲ್ಲ. ಸ್ವಾಮಿ ವಿವೇಕಾನಂದರು ಶ್ರೀ ರಾಮಕೃಷ್ಣ ಮಹಾಸಂಘ ಸಂಸ್ಥಾಪನೆ ಮಾಡಿದುದಕ್ಕೆ ಸಮ ಸಂವಾದಿಯಾಗಿ, ಹೆಗಲೆಣೆಯಾಗಿ ನಿಲ್ಲುತ್ತದೆ 'ಮ' ಅವರ 'ಶ್ರೀ ರಾಮಕೃಷ್ಣ ವಚನವೇದ' ಮೇರುಕೃತಿ !

ಷಷ್ಟಿನಮನ, ಶ್ರೀ ರಾಮಕೃಷ್ಣ ವಚನವೇದ, ಪುಟ ೯೯–೧೦೦

೧೬೩೮

ಎಂತಹ ಸೌಂದರ್ಯವೂ ಅತಿರೇಕದಿಂದ ಅಸಹ್ಯವಾಗಬಹುದು. ಹುಬ್ಬುಗಳ ನಡುವೆ ಬಿಂದು ರೂಪದಿಂದಿರಬೇಕಾದ ಚಂದ್ರಕುಂಕುಮವನ್ನು ಹಣೆಯ ತುಂಬಾ ಬಳಿದುಕೊಂಡರೆ! ಹಣೆಯ ಅಗಲಕ್ಕೂ ಕುಂಕುಮದ ಬೊಟ್ಟಿಗೂ ಯಾವುದೋ ಒಂದು ಪ್ರಮಾಣಾಂತರವಿದ್ದರೆ ಮಾತ್ರ ಅದು ಚೆಲುವಿಗೆ ನೆರವಾಗುತ್ತದೆ.

ತಪೋನಂದನ, ಮಹೋಪಮೆ, ಪುಟ ೭೫

೧೬೩೯

ಸ್ವಾತಂತ್ರ್ಯವಿಲ್ಲದಾ ಯಂತ್ರ ಜೀವನ ಸುಡಲಿ !

ಜೇನಾಗುವಾ, ರವಿಗೆ ಕವಿಯ ಸರಸ ನಿಂದೆ, ಪುಟ ೧೦

೧೬೪೦

ಪ್ರತಿಯೊಬ್ಬ ಯುವಕನೂ ಅಂತಿಮದ ಅನಂತ ಕಲ್ಯಾಣದಲ್ಲಿ ಶ್ರದ್ಧೆಯಿಟ್ಟು ಕಾರ್ಯರಂಗಕ್ಕಿಳಿಯಬೇಕು. ತಾನು ರಂಗಕ್ಕಿಳಿದೊಡನೆಯೆ ಜಗತ್ತು ಉದ್ಧಾರವಾಗುತ್ತದೆ ಎಂದಾಗಲಿ, ಲೋಕಲೋಚನವಲಯಕ್ಕೆ ನಾನು ಕೇಂದ್ರವಾಗುತ್ತೇನೆಂದಾಗಲಿ, ಶಾಂತಿ ಸ್ಥಾಪನೆಗಾಗಿ ಕೊಡುವ ನೊಬೆಲ್ ಬಹುಮಾನ ತನಗೇ ಬರುತ್ತದೆ ಎಂದಾಗಲಿ ಹೊಂಗನಸುಗಳನ್ನೂ ಆಕಾಶಗೋಪುರಗಳನ್ನೂ ಕಟ್ಟಿಕೊಳ್ಳಬಾರದು.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೧೪

೧೬೪೧

ನಿನ್ನ ಬೇಡುವುದೇಕೆ ? ನಾವು ಮಾಡುವುದೇಕೆ ?
ನಿನ್ನ ಕೃಪೆಗೆನ್ನ ಬಲ ನೆರವಪ್ಪುದೇಕೆ ?
ಬಂದು ಕಲಿಯುವುದೇಕೆ ? ಸಂದು ಮರೆಯುವುದೇಕೆ ?
ಮನವ ಕೆರಳಿಪ ನಿನ್ನ ಇಂದ್ರಜಾಲವಿದೇಕೆ ?

ಕೊಳಲು, ಏಕೆ, ಪುಟ ೯೭

೧೬೪೨

...ವಾಸ್ತವವಾಗಿ ನಿಜವಾದ ಮತಿಗೆ ನಿಜವಾದ ಅನುಭೂತಿ ವಿರುದ್ಧವಾಗಿರುವುದಿಲ್ಲ. ಅನುಭೂತಿ ಮತಿಗೆ ಪೂರಕವಾಗುತ್ತದೆ. ಅವೆರಡಕ್ಕೂ ಇರುವ ವ್ಯತ್ಯಾಸ ರೂಪಾಂತರವೇ ಹೊರತು ಜಾತ್ಯಂತರವಲ್ಲ. ಕಾಂತಿ ಉಷ್ಣಕ್ಕೆ ವಿರೋಧಿಯಲ್ಲ; ಅವೆರಡಕ್ಕೂ ಇರುವ ಭೇದವೆಂದರೆ ವಿದ್ಯುತ್ಕಣಗಳ ವೇಗತಾರತಮ್ಯ ಮಾತ್ರ. ಆದ್ದರಿಂದ ಮತಿಗೆ ಅವಿರುದ್ಧವಾದ ಅನುಭೂತಿ ಶ್ರುತಿಯ ಪಟ್ಟಕ್ಕೇರಲು ಯೋಗ್ಯವಾಗುತ್ತದೆ.

ಸ್ವಾಮಿ ವಿವೇಕಾನಂದ, ಪುಟ ೫೨-೩

೧೬೪೩

ನಾನು ಪ್ರಾರ್ಥಿಸಲೊಲ್ಲೆ ;
ನಾನು ಪ್ರೀತಿಸಬಲ್ಲೆ !
ಪ್ರೀತಿ ಎಂಬುದೆ ನಮಗೆ
ಪ್ರಾರ್ಥನೆಯ ಸಾರ !
ಎದೆಯ ಮೇಲೆದೆಯಿಟ್ಟು
ಬಾ ಬಳಿಗೆ ಬಾರ !

ಷೋಡಶಿ, ರಸಋಷಿ, ಪುಟ ೭೫

೧೬೪೪

ಅತಿ ಎಲ್ಲಿಯೂ ಒಳಿತಲ್ಲ. ಅತಿಖಂಡನೆ ಅತಿಶ್ಲಾಘನೆಗಿಂತ ಅನರ್ಥಕಾರಿಯಾಗಬಹುದು.

ಷಷ್ಟಿನಮನ, ತೀರ್ಥಯಾತ್ರೆ, ಪುಟ ೮೭

೧೬೪೫

ಮನುಷ್ಯ ತನ್ನಿಂದ ತಪ್ಪಿಸಿಕೊಳ್ಳಲು, ತನ್ನನ್ನು ತಾನೆ ಮೀರಿ ತನ್ನತನದಿಂದ ಪಾರಾಗಲು ಎಂತೆಂತಹ ಉಪಾಯಗಳಿಂದ ಎಷ್ಟೆಷ್ಟು ಪ್ರಯತ್ನಿಸುತ್ತಾನೆ!

ಷಷ್ಟಿನಮನ, ತೀರ್ಥಯಾತ್ರೆ ಪುಟ ೮೩

೧೬೪೬

ಸನಾತನ ಅನಂತಗಾಯಕನೆ, ನಿನ್ನ ಗಾನವು ನಾನು.
ಎನಿತೆನಿತೊ ಸಾರಿ, ಆವಾವ ಲೋಕಗಳಲ್ಲಿ, ಆವಾವ
ರೀತಿಗಳಲ್ಲಿ ನೀನು ನನ್ನನು ಹಾಡಿದೆ ; ದಣಿಯದೆ ಮರಳಿ
ಮರಳಿ ಹಾಡುತ್ತಿರುವೆ!

ಕಿಂಕಿಣಿ, ಅನಂತಗಾನ, ಪುಟ ೪

೧೬೪೭

ಸುಖದುಃಖವೀ ಲೋಕವಿದು ಕಲೆತ ಬಾಳು!

ಹಾಳೂರು, ಪಂಕ್ತಿ, ೭೮, ಪುಟ ೬

೧೬೪೮

ಅವರವರ ಉಡುಗೆತೊಡುಗೆಗಳನ್ನು ನೋಡಿದರೆ ಸಾಧಾರಣವಾಗಿ ಅವರವರ ಅಂತಸ್ತು ತಕ್ಕಮಟ್ಟಿಗೆ ಗೊತ್ತಾಗುತ್ತದೆ. ಹಾಗೆಯೇ ದೇಹಗಳೂ ಆತ್ಮದ ಯೋಗ್ಯತೆಗೆ ತಕ್ಕ ಹಾಗಿರುತ್ತವೆ....

ಕಾನೂರು ಹೆಗ್ಗಡಿತಿ, ಪಾತ್ರ ಹೂವಯ್ಯ, ಪುಟ ೧೭೭-೮

೧೬೪೯

ಜನಮನದ ಶಕ್ತಿ
ಮೇಣವರಭೀಪ್ಸೆಯೆ ಮಹಾತ್ಮರಂ ನಮ್ಮೊಳೆಗೆ
ತಪ್ಪದೆಳೆತರ್ಪುದು ಕಣಾ

ಶ್ರೀ ರಾಮಾಯಣ ದರ್ಶನಂ, ಕವಿಕ್ರತ ದರ್ಶನಂ, ಪಾತ್ರ ಜಾಬಾಲಿ, ಪುಟ ೨೨

೧೬೫೦

ನಮಗೆ ಇಂಗ್ಲಿಷ್ ಸಾಹಿತ್ಯದ ಭಾವ, ಪುಷ್ಟಿ, ಶಕ್ತಿಗಳು ಬೇಕು. ಕನ್ನಡ, ಸಂಸ್ಕೃತ ಮೊದಲಾದ ಸಾಹಿತ್ಯ ವಿಭಾಗದ ಆನರ್ಸ್ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಸಾಹಿತ್ಯದ ವಿಶೇಷ ಅಭ್ಯಾಸ ಬೇಕು. ಅವರು ಷೇಕ್ಸ್‌ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್ ಮೊದಲಾದ ಕವಿಗಳನ್ನು ಚೆನ್ನಾಗಿ ಅಭ್ಯಾಸಮಾಡಿ ನಿಷ್ಕಷ್ಟವಾದ ಜ್ಞಾನವನ್ನು ಪಡೆಯಲಿ. ಆದರೆ ಇಂಗ್ಲಿಷನ್ನು ಕನ್ನಡದಲ್ಲಿ ಬೋಧಿಸಬೇಕು. ಪರೀಕ್ಷೆಯಲ್ಲಿ ಉತ್ತರಗಳನ್ನು ಕನ್ನಡದಲ್ಲಿ ಬರೆಯಬೇಕು. ನೀವು ಈ ಕ್ರಮದಲ್ಲಿ ಮುಂದುವರಿಯಬೇಕು. ಅದರಿಂದ ದೇಶಕ್ಕೆ ಕ್ಷೇಮ. ಸಹಸ್ರಾರು ವಿದ್ಯಾರ್ಥಿಗಳ ಶ್ರೇಯಸ್ಸೂ ಆಗುತ್ತದೆ. ಇಲ್ಲದಿದ್ದರೆ

ವಿದ್ಯಾರ್ಥಿಗಳಿಗೆ ದಂಗೆಯ ಮನೋಭಾವವನ್ನು ಬೆಳೆಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ.

ಷಷ್ಟಿನಮನ, ಭಾರತದಲ್ಲಿ ಇಂಗ್ಲಿಷಿನ ಸ್ಥಾನ, ಪುಟ ೧೨೦

೧೬೫೧

ದೇಶವನು ಕಾಲ ಗೆಲ್ಲುವುದೆಂದು ನಂಬಿ
ಆಶೆ ಕುಳಿತಿಹುದಿಲ್ಲಿ ಸ್ವಪ್ನ ಚುಂಬಿ !

ಪ್ರೇಮ ಕಾಶ್ಮೀರ, ಆಶೆ ಸ್ವಪ್ನಚುಂಬಿ, ಪುಟ ೫೭

೧೬೫೨

ಮೊನ್ನೆ ನೋಡ್ತೀನಿ; ಮೂವತ್ತೈದು ಲಕ್ಷ ಜನ ಹರಿದ್ವಾರದಲ್ಲಿ ಸ್ನಾನ ಮಾಡಿದರಂತೆ, ಪೂಜೆ ಮಾಡಿದರಂತೆ. ಅಂದರೆ ೩೫ ಲಕ್ಷ ಸೋಮಾರಿಗಳು. ನಮ್ಮ ದೇಶದಲ್ಲಿ ಕೆಲಸವಿಲ್ಲ. ನಿರುದ್ಯೋಗಿಗಳು. ಆದ್ದರಿಂದ ನೀವೊಂದು ಪ್ರಶ್ನೆ ಕೇಳಬಹುದು, ಅವರು ಅಲ್ಲಿಗೆ ಹೋಗುವುದರಿಂದ ಸದ್ಯ ರಕ್ಷಣೆಯಾಯಿತು. ಅಲ್ಲಿಗೆ ಹೋಗದೆ ಇದ್ದರೆ ಅವರು ಗುಜರಾತಿನಲ್ಲಿ ಇಲ್ಲವೆ ಬಿಹಾರಿನಲ್ಲಿ ಮಾಡಿದ ಹಾಗೆ ಮಾಡುತ್ತಿದ್ದರು ಅಂತ. ಈ ಮೂವತ್ತೈದು ಲಕ್ಷ ಜನರನ್ನು ಈ ಉಪಾಯದಿಂದ ಮೆಲ್ಲಗೆ ಹರಿದ್ವಾರದ ಕಡೆ ತಿರುಗಿಸಿದರೆ ನಮ್ಮ ಸರ್ಕಾರಕ್ಕೆ ಸ್ವಲ್ಪ ಅನುಕೂಲ. ಏಕೆಂದರೆ ಅವರಿಗೆ ಕೆಲಸ ಕೊಡಬೇಕು, ಸರಿಯಾದ ತಿಳುವಳಿಕೆ ಕೊಡಬೇಕು. ಅದೂ ಇಲ್ಲ, ಇದೂ ಇಲ್ಲ ಅಂದರೆ ಇನ್ನೂ ದಂಗೆ ಏಳುತ್ತದೆ, ಗಲಾಟೆಯಾಗುತ್ತದೆ. ರೈಲು ಸುಡುತ್ತಾರೆ. ಅದರ ಬದಲು ಹರಿದ್ವಾರಕ್ಕೆ ಹೋಗಿ ಸ್ನಾನ ಮಾಡಿದರೆಂದರೆ ನಮಗೇನೂ ತೊಂದರೆ ಇಲ್ಲ ಎಂದು ಬಸ್ಸುಗಳನ್ನು ಕಲ್ಪಿಸಿ ಅನುಕೂಲಗಳನ್ನು ಮಾಡಿಕೊಡುತ್ತಾರೆ, ಅಲ್ಲಿಗಾದರೂ ಹೋಗಿ ತೊಲಗಲಿ ಎಂದು. ನೋಡಿ, ನೀವು ಬರಹಗಾರರು ನೀವೇನು ತಮಾಷೆಗೆ ಹೊರಟಿಲ್ಲ. ಇಂಥವುಗಳನ್ನೆಲ್ಲ ಬರೆದು ತಿಳಿಸಿ ಕೆಲಸ ಮಾಡಬೇಕು.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ, ಪುಟ ೭೦

೧೬೫೩

ಭಗವತ್ ವಿಭೂತಿಯ ಆವಿರ್ಭಾವರೀತಿಗಳಲ್ಲಿ ಎಲ್ಲ ದೇಶಗಳಲ್ಲಿಯೂ, ಸರ್ವ ಸಾಧಾರಣವಾಗಿ, ಎಲ್ಲರ ಆದರಕ್ಕೂ ವಿಶೇಷವಾಗಿ ಪಾತ್ರವಾಗಿರುವ ಒಂದು ರಸಪೂರ್ಣವಾದ ರೀತಿ ಎಂದರೆ ಕವಿ.

ವಿಭೂತಿ ಪೂಜೆ, ಕವಿಯಲ್ಲಿ ವಿಭೂತಿ ಪುಟ ೫

೧೬೫೪

ಅಸ್ಪೃಶ್ಯ ಯುವಕರಾದವರಿಗೆ ನನ್ನಗೊಂದು ಬಿನ್ನಹ. ನೀವು ಅವಮಾನಿಸಿ ಕೊಂಡು ದೇವಾಲಯಕ್ಕೆ ಹೋಗದಿದ್ದರೆ ಏನಾಗುತ್ತದೆ ? ಗುಡಿಯ ಕಲ್ಲಿನಲ್ಲಿ ದೇವರಿದ್ದಾನೆ ಎಂಬ ಭ್ರಾಂತಿ ನಿಮಗೇಕೆ ?......ಗುಡಿಯೊಳಗೆ ಹೋಗಿ ಮತದ ಮೌಢ್ಯಕ್ಕೂ

ಪುರೋಹಿತರ ಸುಲಿಗೆಗೂ ಒಳಗಾಗುವುದಕ್ಕಿಂತ ದೂರವಾಗಿದ್ದುಕೊಂಡು ಎದೆಯ ದೇಗುಲದಲ್ಲಿಯೆ ಈಶ್ವರನನ್ನು ಇನ್ನಷ್ಟು ಅತಿಶಯವಾದ ಭಾವಭಕ್ತಿಯಿಂದ ಪೂಜಿಸಬಾರದೆ ?

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೮-೯

೧೬೫೫

ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರವಲ್ಲ. ಹೊಸ ಛಂದಸ್ಸು ಎಂದರೆ ನಿಯಮವಿರುದ್ಧವಾದ ನುಡಿಗಳ ದಾಂಧಲೆಯಲ್ಲ. ಹೊಸದರ ಮೂಲ ತತ್ತ್ವವೂ ಹಳೆಯದರ ಮೂಲ ತತ್ತ್ವವೂ ಎಲ್ಲಾ ಒಂದೇ. ಅದೇ ಮಣ್ಣು, ಅದೇ ಇಟ್ಟಿಗೆ ; ಆಕೃತಿ ಮಾತ್ರ ಬೇರೆ. ಇಷ್ಟು ಮಾತ್ರಕ್ಕೆ ಹೊಸತೆಂದು ನಿಂದಿಸುವುದೇಕೆ ?

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೭

೧೬೫೬

ಕನ್ನಡವ ಕೊಲುವ ಮುನ್
ಓ ನನ್ನ ಕೊಲ್ಲು !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಕನ್ನಡಮ್ಮನ ಹರಕೆ, ಪುಟ ೪೭

೧೬೫೭

ಓ ಸ್ವಪ್ನ ಸುಂದರಿಯೆ ? ಸೃಷ್ಟಿಸಲ್ ತೊಡಗಿದರೆ
ನಿನ್ನ ಮಾಯಾಕುಂಚಕಿದಿರೆಲ್ಲಿ ? ಎಣೆಯಲ್ಲಿ ?

ಚಿತ್ರಾಂಗದಾ, ಮೊದಲನೆಯ ಪರ್ವಂ, ಪಂಕ್ತಿ, ೧೨೪-೫, ಪುಟ ೫

೧೬೫೮

ವರ್ಣಮಾಲೆಯಲ್ಲಿ ನಮ್ಮ ಮಕ್ಕಳಿಗೆ ನಾವು ಅ ಆ ಇ ಈ ಕಲಿಸುತ್ತೇವೆ. ಇನ್ನು ಒಂದು, ಎರಡು, ಮೂರು, ನಾಲ್ಕು ಅಂತ ಕಲಿಸುತ್ತೇವೆ. ಕನ್ನಡದ ಅಂಕಿಗಳನ್ನೂ ಕಲಿಸುತ್ತೇವೆ. ರೋಮನ್ ಮತ್ತು ಅರಾಬಿಕ್ ಅಂಕಿಗಳನ್ನೂ ಕಲಿಸುತ್ತೇವೆ. ಅದೇನೂ ಕಷ್ಟ ಇಲ್ಲ. ಹಾಗೆಯೆ ಎಬಿಸಿಯಿಂದ ಜಡ್‌ವರೆಗೆ ಇಪ್ಪತ್ತಾರು ಅಕ್ಷರಗಳನ್ನು ಕಲಿಸುವುದು, ಕಲಿತುಕೊಳ್ಳುವುದೂ ಏನೂ ಕಷ್ಟವಲ್ಲ. ಆದ್ದರಿಂದ ನಮ್ಮ ವರ್ಣಮಾಲೆಯಲ್ಲಿ ಕನ್ನಡದ ವರ್ಣ ಮಾಲೆಯ ಜೊತೆಗೆ ಇಂಗ್ಲಿಷ್ ವರ್ಣ ಮಾಲೆಯನ್ನೂ ಸೇರಿಸಿ ಹೇಳಿಕೊಡಿ.

ಮನುಜಮತ ವಿಶ್ವಪಥ, ಕದನಕ್ಕೆ ಸಜ್ಜು, ಪುಟ ೬೧

೧೬೫೯

ಶ್ರೀ ವಿನೋಬಾಜಿಯಲ್ಲಿ ಭಾರತೀಯ ಪರಂಪರೆಯ ಪ್ರಾಚೀನ ತಪಸ್ವಿಯೂ ಅತ್ಯಂತ ಕ್ರಾಂತಿಕಾರನಾದ ಆಧುನಿಕ ರಾಜಕೀಯಾರ್ಥಿಕ ವಿಜ್ಞಾನಿಯೂ ಒಟ್ಟುಗೂಡಿದಂತಿದೆ. ಈ ದೃಷ್ಟಿಯಿಂದ ನೋಡಿದರೆ ಗಾಂಧೀಜಿಯ ನಿಜವಾದ ಉತ್ತರಾಧಿಕಾರಿ ಅವರಲ್ಲದೆ ಬೇರೆ ಇನ್ನಾರೂ ಅಲ್ಲ.

ಷಷ್ಟಿನಮನ, ಶ್ರೀ ವಿನೋಬಾಜಿ, ಪುಟ ೧೪೫

೧೬೬೦

ಬದುಕಿಗಿಲ್ಲದ ಬೆಲೆಯ ಬೀಡೆ ಸಾಹಿತ್ಯಕೃತಿ ?
ಬದುಕಿನಿಂದಲೆ, ಬದುಕಿಗಾಗಿಯೆ ಕಣಾ ಕಲೆಯ ಬೆಲೆ :
ಕವಿಯ ಬಾಳ್ವೆಯೆ ದಿಟದ ಕಾವ್ಯಬೆಲೆ, ರಸದ ನೆಲೆ !
ಕವಿಯ ಬದುಕಿಂದ್ಯೆಸೆ ಅವನ ಕೃತಿಯಕ್ಕು–'ಕಲೆ' ?

ಪ್ರೇತ ಕ್ಯೂ, ದಿವಂಗತ ಕವಿಗೆ ಜಯಶ್ರೀ ಸ್ಮಾರಕ, ಪುಟ ೬೪

೧೬೬೧

ಗುಟ್ಟಿನ ರಟ್ಟು
ಕೇಡು ನೀಚತೆ ಹೀನತೆಯ ಹೊತ್ತಗೆಗೆ ಬೇಕು ;
ಗಗನ ವಿಸ್ತಾರದೌದಾರ್ಯಕದು ಬೇಕೆ ? ಸಾಕೆ ?
ನಿಜ ಮಹಿಮೆ ನಗ್ನತೆಗೆ ಅಳುಕಬೇಕಾಗಿಲ್ಲ.
ಬಡಕಲಿಗುಡುಗೆ ಬೇಕು, ಕಲಿಯ ಮೈಗೇತಕದು ?
ಕೀಳ್ಗಳಿಗೆ ವೇಷವಿಲ್ಲದೆಯೆ ಗೌರವವಿಲ್ಲ :

ಅಗ್ನಿಹಂಸ, ಶ್ರವಣಬೆಳ್ಗೊಳದ ಗೋಮಟೇಶ್ವರನ ಸಾನ್ನಿಧ್ಯದಲ್ಲಿ, ಪುಟ ೬೫

೧೬೬೨

ಕೆಲರಿಳೆಯ ಬಿಟ್ಟವರು,
ದೊಡ್ಡವರು ಅವರು !
ಕೆಲರೆದೆಯ ಸುಟ್ಟವರು,
ದೊಡ್ಡವರು ಅವರು !
ಅವರಿಗವರದೆ ಹಾದಿ,
ನಮಗೆ ನಮ್ಮದೆ ಹಾದಿ !

ಷೋಡಶಿ, ರಸಋಷಿ, ಪುಟ ೬೬–೭

೧೬೬೩

ನೂರು ಕಾವ್ಯಕೆ ಸಾರವೊಂದು ಸಾಕ್ಷಾತ್ಕಾರ :
ಕವಿಯ ದರ್ಶನ ಅಗ್ನಿದರ್ಪಣ ತಪಃಸಂಸಾರ !

ಪ್ರೇತ ಕ್ಯೂ, ದಿವಂಗತ ಕವಿಗೆ ಜಯಶ್ರೀ ಸ್ಮಾರಕ, ಪುಟ ೬೪

೧೬೬೪

ಸಾವು ನೋವು ಬಡತನ ನಿರಕ್ಷರತೆ ಅಜ್ಞಾನ ಅವಿವೇಕ ಇವುಗಳ ಕರ್ಕಶ ನಿಜದೆದುರು ಕವಿಯ ಸಾಲಂಕಾರ ವರ್ಣನೆ ಹೇಗೆ ತಾನೆ ತಲೆಯೆತ್ತಿ ನಿಲ್ಲಬಲ್ಲುದು ?

ವಿಭೂತಿ ಪೂಜೆ, ಮಲೆನಾಡಿನ ನಿಸರ್ಗ ವಿಭೂತಿ, ಪುಟ ೩೩

೧೬೬೫

ಕಲೆ ನನ್ನಿಯ ನೆಲೆಗೆ ಹೆಬ್ಬಾಗಿಲು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨೦

೧೬೬೬

ಎಲ್ಲಿ 'ಅನ್ಯ' ಎಂಬುದು ಇರುತ್ತದೆಯೊ, ಮನಸ್ಸಿಗೆ ಬರುತ್ತದೆಯೊ, ಅದೆಲ್ಲ ಅಲ್ಪ, ಮರ್ತ್ಯ, ಅಸುಖ. ಅನ್ಯವಲ್ಲದ್ದು, ಅನ್ಯವಿಲ್ಲದ್ದು ಯಾವ ಅನುಭವವೊ ಅದು ಭೂಮಾ, ಅಮೃತ, ಸುಖ. ಯಾವುದನ್ನು ಭೂಮಾ ಎಂದು ಕರೆಯುತ್ತೇವೆಯೊ ಅದು ಎಲ್ಲದಕ್ಕೂ ಅತ್ಯಂತ ಮೂಲಾಧಾರವಾದದ್ದು.

ರಸೋ ವೈ ಸಃ, ಭೂಮಾನುಭೂತಿ, ಪುಟ ೭೮-೯

೧೬೬೭

ಹೂವೊಲಿದು ತೆರೆಯಲ್ಕೆ
ಸೊದೆಯ ತೋರಿ,
ಝೇಂಕೃತಿಯ ನಿಲ್ಲಿಸದೆ
ಜೇನ ಹೀರಿ ?

ಜೇನಾಗುವಾ, ಮೂಕವಾಗಿಹುದೇಕೆ ಕವಿಯವಾಣಿ, ಪುಟ ೭

೧೬೬೮

ಅರಮನೆಯೊಳಿಹುದೇನೊ ?
ಅರಸುತನಮೆದೆಯೊಳಿರೆ ಕಾಡರಮನೆಗೆ ಕೀಳೆ ?
ರಸವಿಲ್ಲದಿಹ ಬಾಳಿಗರಮನೆಯೆ ಮರುಭೂಮಿ.
ರಸಿಕಂಗಡವಿ ಸಗ್ಗಕಿಂ ಮಿಗಿಲ್ ಸೊಗಸಲ್ತೆ,
ಜೊತೆಯಿರಲ್ಕೊಲಿದ ಪೆಣ್, ಮೇಣ್ ಕಾಣ್ಬ ಕಬ್ಬಗಣ್ ?

ಶ್ರೀ ರಾಮಾಯಣ ದರ್ಶನಂ, ಕುಣಿದಳುರಿಯ ಊರ್ವಶಿ, ಪುಟ ೧೫೬

೧೬೬೯

ಗುರು, ನಿನ್ನ
ಕೃಪೆ ನನ್ನ ಸತಿಸುತರ ಮೇಣೆನ್ನ ಮೇಲಿರಲಿ
ಸರ್ವದಾ. ಶ್ರದ್ಧೆ ಬಳುಕದೆ ನಿತ್ಯವಾಗಿರಲಿ
ನಿನ್ನ ಮಹಿಮೆಯೊಳೆಮಗೆ. ಪ್ರೇಮಾಂಗಿನಿಯ ನನ್ನ
ಕುವರನಾಗಲಿ ಪೂರ್ಣಚಂದ್ರಸಮ ತೇಜಸ್ವಿ:
ಕಾಂತಿ ಶಾಂತಿಯನಿತ್ತು ನಲಿಸುವ ರಸತಪಸ್ವಿ!

ಜೇನಾಗುವಾ, ಕುಮಾರ ಸಂಭವ, ಪುಟ ೨೮

೧೬೭೦

ಇಂದು ನಮ್ಮ ದೇಶದಲ್ಲಿ ಏನಾದರೂ ಜೀವವಾಡುತ್ತಿದ್ದರೆ ಅದಕ್ಕೆ ಅಂದಿನ ತರುಣರ 'ನಿರಂಕುಶಮತಿ' ಬಹು ಮಟ್ಟಿಗೆ ಕಾರಣವಾಗಿದೆ.

ಸ್ವಾಮಿ ವಿವೇಕಾನಂದ, ಪುಟ ೫೦

೧೬೭೧

ನಾನೇನು ಸ್ವಾಭಾವಿಕವಾಗಿ ಧರ್ಮಿಷ್ಠನಲ್ಲ. ನನ್ನ ಹೃದಯ ಬಹಳ ಮೃದು ಎಂಬ ಹೆಮ್ಮೆಯೂ ನನಗೆ ಸಲ್ಲದು.

ಸಂನ್ಯಾಸಿ ಮತ್ತು ಇತರ ಕಥೆಗಳು, ಆರಾಣೆ ಮೂರುಕಾಸು, ಪಾತ್ರ ಮಾಧವರಾಯ, ಪುಟ ೪೧

೧೬೭೨

ಕವಿಯ ರಸ ತಪಸ್ಸಿಗೆ ಜಗತ್ತಿನ ನಾಡಿಗಳಲ್ಲಿ ಪ್ರವಹಿಸುವ ರಹಸ್ಯಗಳೆಲ್ಲವೂ ಅನುಭವ ವೇದ್ಯವಾಗುತ್ತವೆ. ಆ ಅತೀಂದ್ರಿಯ ಪ್ರಪಂಚದ ಅಸ್ಪಷ್ಟ ಸೂಚನೆಗಳು ಕವಿಯ ಹೃದಯದಲ್ಲಿ ಸಾಕಾರವಾಗಿ ಸಾಹಿತ್ಯರೂಪಗೊಂಡು ಸಾರ್ಥಕವಾಗುತ್ತವೆ. ಅವುಗಳನ್ನು ತಿಳಿಯುವುದೂ ಅನುಭವಿಸುವುದೂ ವಾಚಕನ ಭಾಗಕ್ಕೆ ಪುನರ್ ಪರಿಚಯವಾದಂತಾಗುವುದಿಲ್ಲ ; ನವ ಪರಿಚಯವಾದಂತಾಗುತ್ತದೆ.

ಕಲಾಸುಂದರಿ, ಮುನ್ನುಡಿ, ಪುಟ xi

೧೬೭೩

ರಾಜ ದರ್ಪದಲಿ, ಅಧಿಕಾರದಲಿ, ಕ್ರೌರ್ಯದಲಿ,
ಶಕ್ತಿ ಬಲ ಯುಕ್ತಿ ಸಿರಿ ಮೇಣ್ ಅಹಂಕಾರದಲಿ
ದೇವತ್ವವನು ಕಾಣುವಾ ಕಾಲವೊಂದಿತ್ತು.
ಆ ಅನಾಗರಿಕ ಮಾನವ ದೇವಭಾವಗಳ್
ಇಂದು ದೂರಾಗುತಿವೆ. ಮಾನವನ ಅಭ್ಯುದಯ
ಶ್ರೇಯಸ್ಸುಗಳಿಗಾಗಿ ನೊಂದವರ್, ಬೆಂದವರ್,
ಮನುಜರಂತೆಯೆ ಬಾಳಿ ಹೋರಾಡಿ ಸಂದವರ್,
ರಾಜ್ಯ ಭೋಗ ತ್ಯಾಗದಮಲ ವೈರಾಗಿಗಳ್,
ಮನುಜ ತನುಜರ್ ಇಂದು, ಕ್ರಿಸ್ತ ಬುದ್ಧಾದಿಗಳೆ,
ಮಾನವರ ಪೂಜೆ ಗೌರವಗಳನು ಕೈಕೊಳ್ವ
ದೇವತೆಗಳಾಗುವಾ ಕಾಲವೈತಂದಿಹುದು.
ಋಜುದೃಷ್ಟಿ ದೊರೆಕೊಳಲ್ ಮೂರು ಯುಗಗಳ್ ಕಳೆದು
ಕಲಿಕಾಲ ಬೇಕಾಯ್ತು! ಧನ್ಯ, ಕಲಿಯುಗ, ಧನ್ಯ!

ಅಗ್ನಿಹಂಸ, ಸಭತ್ಯಾ ದೇವತೆ, ಪುಟ ೮೦

೧೬೭೪

ಮನೆಯ ತಾಯಿ ಪ್ರಪಂಚ ಸೌಂದರ್ಯ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಹೊರತೂ ನಮ್ಮ ಪೂಜೆಗೆ ಪ್ರೀತಿಗೆ ಗೌರವಕ್ಕೆ ಪಾತ್ರಳಾಗುವುದಿಲ್ಲ ಎನ್ನುವುದು ಅವಿವೇಕದ ಪರಮಾವಧಿ. ಮಕ್ಕಳಿಗೆ ಹಿಡಿದಿರುವ "ಕೀರ್ತಿ ಶನಿ"ಯಿಂದ ತಾಯಿಗೆ ಅಮೇರಿಕದ ಬೀದಿಗಳಲ್ಲಿ ಅಗೌರವವಾಗದಂತೆ ನೋಡಿಕೊಳ್ಳಬೇಕು.

ವಿಭೂತಿ ಪೂಜೆ, ವಚನಕಾರ ಬಸವೇಶ್ವರರು, ಪುಟ ೪೨

೧೬೭೫

ಅರಿತರಾಯಿತು : ಬಾಳು
ಹಗೆಯಿಲ್ಲದೊಲುಮೆ.
ಅರಿವು ಮುರಿದರೆ : ಗೋಳು,
ಹೊಗೆ, ಬೆಂಕಿ, ಕುಲುಮೆ !

ಕದರಡಕೆ, ಬಂಡೆ–ಕಾಡು–ಹಕ್ಕಿ, ಪುಟ ೪೫

೧೬೭೬

ಕಣ್ಣೀರನೊರಸಿಕೊ ! ಕಳೆದುದಕಳಲು ನಮಗೆ ಹೊತ್ತಿಲ್ಲ.
ಇಲ್ಲಿಗೇ ಮುಗಿಯಲ್ಲಿಲ್ಲ ಎಮ್ಮಳಲ ಹೊರೆ. ಅತ್ತತ್ತು
ಕಣ್ಣೀರನೆಲ್ಲ ಬತ್ತಿಸಬೇಡ. ಮುಂದೆ ದಾರಿಯೊಳೆಮ್ಮನಡ್ಡಗಟ್ಟುವ
ದುಃಖಗಳಿಗಾಗಿ ಅಳಲು ಒಂದಿನಿತು ಕಣ್ಣೀರಾದರೂ
ಇರಲಿ ಎದೆಯ ಅರಳಿನಲಿ.
ಏಕೆನೆ, ನಮ್ಮ ಕಷ್ಟಕ್ಕೆಲ್ಲ ಕಣ್ಣೀರೆ ಮದ್ದು !

ಕಿಂಕಿಣಿ, ಬತ್ತದಿರಲಿ ಕಣ್ಣೀರು, ಪುಟ ೨೬

೧೬೭೭

ಸಜೀವವಾದ ವಾಣಿಯೂ ಮುಖ ನಯನ ಅಂಗಗಳ ಅಭಿನಯವೂ ಮಾಡುವ ಕೆಲಸವನ್ನು ನಿರ್ಜೀವದ ಲೇಖಣಿ ಮಾಡಬಲ್ಲದೆ ?

ಮಲೆನಾಡಿನ ಚಿತ್ರಗಳು, ಮುನ್ನುಡಿ, ಪುಟ xi

೧೬೭೮

ಕನಸನೆಳೆದು ತಂದು ತಿರೆಗೆ
ಅದನು ನನಸುಗೈವವರೆಗೆ
ನುಡಿದೆ ನುಡಿವುದೆದೆಯ ವೀಣೆ ;
ಎಂದಿಗದಕೆ ಬಿಡುವ ಕಾಣೆ.

ಕದರಡಕೆ, ಕವಿಯ ಹೃದಯ, ಪುಟ ೮೦

೧೬೭೯

ಅದೃಷ್ಟ, ಅನಿರ್ದಿಷ್ಟ, ಆಕಸ್ಮಿಕ, ಅಪ್ರಮೆಯ, ಅನಿರ್ವಚನೀಯ–ಇವುಗಳು ಇಲ್ಲದಿದ್ದರೆ ಮನುಷ್ಯನ ಬಾಳು ಎಷ್ಟು ನೀರಸವಾಗುತ್ತಿತ್ತು ! ಎಷ್ಟು ಬೇಗನೆ ಬೇಸರವಾಗುತ್ತಿತ್ತು !

ನನ್ನ ದೇವರು ಮತ್ತು ಇತರ ಕಥೆಗಳು, 'ಗಂಟು' ಅಥವಾ ಗುಪ್ತಧನ, ಪಾತ್ರ ಕಥಾನಾಯಕ, ಪುಟ ೪೯

೧೬೮೦

ಪವಾಡಗಳೆಂದರೆ ಹೊಟ್ಟೆಯ ಪಾಡಿಗಾಗಿ ಮೋಸಗಾರರು ಹೂಡುವ ಕುತಂತ್ರ. ಅಂತಹರಿಂದಲೇ ಧರ್ಮಜೀವನಕ್ಕೆ ಕಲಂಕವೂ ಅಪವಾದವೂ ಬಂದೊದಗಿವೆ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೪೧

೧೬೮೧

ವನಚರರ್ ಅನಸೂಯಾಶೀಲರ್,
ಅರಿಯರ್ ಪೆಸರಂ ಮೆರೆವ ಅಹಂಕಾರಮಮಂ.
ಪೆಸರಾಸೆ, ಅದೊಂದು ನಾಗರಿಕರ್ಗೆ ಮೀಸಲಾಗಿರ್ಪ
ಮನೋಜಾಡ್ಯಂ ಕಣಾ !

ಬೆರಳ್ ಗೆ ಕೊರಳ್, ಪಾತ್ರ ಏಕಲವ್ಯ, ಪುಟ ೨೦

೧೬೮೨

ಲೋಕ ನಗಬೇಕಾದರಾರಾದಳಬೇಕು !

ಜಲಗಾರ, ಪಾತ್ರ ಜಲಗಾರ, ಪುಟ, ೧೧

೧೬೮೩

ಕರ್ತವ್ಯ
ದಾಸ್ಯಗಳಿಗನಿತೇನು ಬಾಹ್ಯ ಭೇದಗಳಿಲ್ಲ.

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ತಣ್ಣೆಳಲು, ಪುಟ ೧೦

೧೬೮೪

ಭಕ್ತಿ ಪ್ರಥಮತಃ ಭಯದಿಂದ ಪ್ರಾರಂಭವಾಗುತ್ತದೆ.....ಆದರೆ ಬರಬರುತ್ತ ಭಯಭಾವವು ಕ್ರಮೇಣ ಪರಿಚಯದಿಂದ ಸಲಿಗೆಯಾಗಿ, ಸ್ನೇಹವಾಗಿ, ಪ್ರೇಮವಾಗಿ, ನೈಜಭಕ್ತಿಯಾಗಿ ಪರಿಣಮಿಸುತ್ತದೆ. ಆಗ ಭಕ್ತನ ದೃಷ್ಟಿ ಭಗವಂತನ ಶಕ್ತಿ ಸಾಮರ್ಥ್ಯ ಐಶ್ವರ್ಯಗಳ ಕಡೆಯಿಂದ ಅವಮುಖವಾಗಿ ಆತನ ಮಹಾ ಘನ ಗೌರವ ಪ್ರೇಮದ ಕಡೆಗೆ ತಿರುಗುತ್ತದೆ. ಎಂದರೆ ಈಶ್ವರನು ಐಶ್ವರ್ಯದಿಂದ ಈಶ್ವರನಾಗದೆ ಆನಂದದಿಂದ ಈಶ್ವರನಾಗುತ್ತಾನೆ. ಆಗ ಭಕ್ತಿ ಅಹೇತುಕವಾಗಿ, ನಿಸ್ವಾರ್ಥವಾಗಿ, ತ್ಯಾಗಪೂರ್ಣವಾಗಿ, ಅತೀಂದ್ರಿಯ ಪ್ರೇಮ ಮಾತ್ರವಾಗಿ ಪರಿಣಮಿಸುತ್ತದೆ. ಇಂತಹ ಅತೀಂದ್ರಿಯ ಪ್ರೇಮಸಿದ್ಧಿಯೆ ಮಧುರಭಾವ ಸಾಧನೆಯ ಸರ್ವೋಚ್ಚಗಮ್ಯ.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೭೨

೧೬೮೫

ಪ್ರತಿಮಾವಿಧಾನ ಮತ್ತು ದರ್ಶನ ಧ್ವನಿಯ ಈ ಸಿದ್ಧಾಂತವು ವಿವೇಕದ ಎಲ್ಲೆಯ ಒಳಗೆ, ಕಲ್ಪನಾ ಪ್ರತಿಭೆಯ ಮತ್ತು ರಸಪ್ರಜ್ಞೆಯ ಅಧೀನದಲ್ಲಿ, ಮಾಂತ್ರಿಕ ವಾಗಿ ಪ್ರಯೋಗವಾದರೆ ಅದರಿಂದ ಉತ್ತಮ ಫಲ ಲಭಿಸುವುದರಲ್ಲಿ ಸಂದೇಹವಿಲ್ಲ. ಪುರಾಣಗಳ ಐತಿಹಾಸಿಕಾಂಶದಲ್ಲಿ ಶ್ರದ್ಧೆ ಶಿಥಿಲವಾಗುತ್ತಿರುವ ವಿಚಾರ ದೃಷ್ಟಿಯ ಮತ್ತು ವೈಜ್ಞಾನಿಕ ಬುದ್ಧಿಯ ಅನೇಕರಲ್ಲಿ, ಮೌಢ್ಯವಶರಾಗದೆಯೂ ಪ್ರಾಚೀನ ಕವಿ ಸೃಷ್ಟಿಯ ಭಾವಪುಷ್ಟಿ, ಬುದ್ಧಿಪುಷ್ಟಿ ಮತ್ತು ರಸಾನುಭಾವಗಳಿಂದ ಅವರು ವಂಚಿತ ರಾಗದಂತೆ ಮಾಡಿ, ಜ್ಞಾನಮಯವಾದ ಅಮೂಢ ಶ್ರದ್ಧೆಯ ನವ್ಯ ಪುನರುತ್ಥಾನಕ್ಕೆ ನೆರ

ವಾಗುತ್ತದೆ. ಆದರೆ ವಿವೇಕವಿಲ್ಲದ ಅತಿರೇಕಕ್ಕೆ ಸಿಕ್ಕಿ ಯಾಂತ್ರಿಕವಾಗಿ ಪ್ರಯೋಗವಾದರೆ ಅತ್ಯಂತ ವಿಕಾರವಾದ ವಿಮರ್ಶನಾಮಕ ಕ್ಲೇಶಕ್ಕೆ ಗುರಿಯಾಗಬೇಕಾಗುತ್ತದೆ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೬೦-೧

೧೬೮೬

ಓ ವನಗಾಯಕ ವರವಾಗೀಶ,
ನಿನ್ನಾ ಕಾನನ ಕೂಜನ ಪಾಶ
ಕಬ್ಬಿಗನಿಗೆ ಮುಕ್ತಿಯ ಆವೇಶ :
ಸ್ಮರ ಚಾಪಕೆ ನೀ ಸ್ವರಬಾಣ !
ಕೇಳಿದರಲ್ಲದೆ ತಿಳಿಯದು ನಿನ್ನ
ಕಂಠದ ವೈಖರಿ. ತುದಿಯಲಿ ನನ್ನ
ಸಾವಿನ ಬಯಕೆಯ ನಿನ್ನಾ ಗಾನ :
ನಿನಗೆ ನಮೋ ಓ ಕಾಜಾಣ !

ಕಲಾಸುಂದರಿ, ವನಗಾಯಕ, ಪುಟ ೧೪

೧೬೮೭

ಕವಿ ಕಲ್ಪನಾಸಮ್ರಾಜ್ಯದ ಚಕ್ರವರ್ತಿ. ಆತನು ಭಾವಪ್ರಪಂಚದ ನಿರಂಕುಶ ಪ್ರಭು. ಅಲ್ಲಿ ಆತನೆ ಸರ್ವಾಧಿಕಾರಿ. ಆತನ ನುಡಿಯೆ ವೇದ. ಆತನ ನಡತೆಯೆ ಮೇಲ್ಪಂಕ್ತಿ. ಆತನೆ ನಿಯತಿ. ಹೌದು, ಇವನ್ನೆಲ್ಲಾ ಒಪ್ಪಿಕೊಂಡರೂ ಕವಿತೆ ಆತ್ಮ ಸ್ವಾನಂದಕ್ಕಾಗಿ ತನಗೆ ತಾನೆ ಮಾಡಿಕೊಳ್ಳುವ ಒಂದು ಅಲೌಕಿಕ ವಿಚಿತ್ರವಾದ ಪೂಜೆ....

ಕಾವ್ಯವಿಹಾರ, ಸೀತಾವನವಾಸ, ಪುಟ ೧೦

೧೬೮೮

ಕಲೆಯನು ಮೀರುವ ಸಾಧನೆಯಿಲ್ಲ ;
ಕಲೆಯೊಳೆ ಪುರುಷಾರ್ಥಗಳೆಲ್ಲ ;
ಕಲೆಯಿರದೆದೆಗೆ ಏನಿಲ್ಲ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಹೂವು ದೇವರು, ಪುಟ ೭೭

೧೬೮೯

ಉತ್ತಮ ಕವಿ ಯಾವುದನ್ನು ನೋಡುತ್ತಾನೆ, ಏಕೆ ನೋಡುತ್ತಾನೆ, ಹೇಗೆ ನೋಡುತ್ತಾನೆ, ಅಥವಾ ನೋಡುವಂತೆ ಮಾಡುತ್ತಾನೆ ; ಏನನ್ನು ಕಾಣುತ್ತಾನೆ, ಏಕೆ ಕಾಣುತ್ತಾನೆ, ಹೇಗೆ ಕಾಣುತ್ತಾನೆ, ಅಥವಾ ಕಾಣುವಂತೆ ಮಾಡುತ್ತಾನೆ ;– ಎಂಬುದು ಅಮಂದ ಪ್ರಜ್ಞನಾದ ಸಹೃದಯನಿಗೆ ಔದಾಸೀನ್ಯದ ವಿಷಯವಾಗುವುದಿಲ್ಲ. ಅದನ್ನು ಗಮನಿಸದಿದ್ದರೆ ಕಾವ್ಯದ ಉತ್ತಮತೆಯಾಗಲಿ ; ಕವಿಯ ಉತ್ತಮತೆಯಾಗಲಿ ನಮಗೆ

ಗೋಚರಿಸುವುದಿಲ್ಲ. ಏಕೆಂದರೆ ಕವಿಯ ಪ್ರಕೃತಿವರ್ಣನೆ ಕವಿಪ್ರಕೃತಿಯನ್ನೂ ವರ್ಣಿಸುತ್ತದೆ ; ಕವಿಪ್ರತಿಭೆಯ ಅಂತರ್ವರ್ಣಗಳನ್ನೂ ಬೆಳಕಿಗೆ ತರುತ್ತದೆ; ಕವಿ ಹೃದಯದ ಸಂಸ್ಕಾರ, ವಿದ್ಯೆ, ನಾಗರಿಕತೆ, ಸಂಸ್ಕೃತಿ, ಕಾವ್ಯಶಕ್ತಿ, ಕಲ್ಪನಾ ಸಂಪತ್ತು ಇತ್ಯಾದಿಗಳಿಗೆ ತೋರ್ ಬೆರಳೂ ಒರೆಗಲ್ಲೂ ಆಗುತ್ತದೆ.

ತಪೋನಂದನ, ಸರೋವರದ ಸಿರಿಗನ್ನಡಿಯಲ್ಲಿ, ಪುಟ ೭೯

೧೬೯೦

ಜನರ ಮತವೆ ಕವಿಯ ಮತವು,
ಅವರ ಹಿತವೆ ಕವಿಯ ಹಿತವು,
ಅವರ ವಾಣಿ ಕವಿಯ ವಾಣಿ

ಇಕ್ಷುಗಂಗೋತ್ರಿ, ಬೆಳ್ಳಿ ಹಬ್ಬದ ಕಬ್ಬದ ಬಳ್ಳಿ, ಪುಟ ೭೨

೧೬೯೧

ಒಂದೊಂದು ವ್ಯಾಪಾರವೂ ಅದರ ಸಾರಸತ್ತ್ವಾರ್ಥದಲ್ಲಿ ಮೂಲದಲ್ಲಿಯೇ ನಿಯಮಿತವಾಗಿದೆ. ಪೂರ್ಣದೃಷ್ಟಿ ಪ್ರಯೋಗಶರಣವಾಗಿ ಅದನ್ನು ಇತ್ಯರ್ಥ ಪಡಿಸಬೇಕಾಗಿಲ್ಲ. ಇಲ್ಲಿ ಈ ವ್ಯಕ್ತಿಪ್ರಪಂಚದಲ್ಲಿ ಯಾವುದರ ಪೂರ್ಣವಾದ ಅಥವೂ ಅಲ್ಲಿಯೇ ಅದರಿಂದಲೇ ಸಂಪೂರ್ಣವಾದ ವ್ಯಕ್ತವಾಗಲಾರದು. ಸಂಪೂರ್ಣಾರ್ಥವು ಪೂರ್ಣದೃಷ್ಟಿಯಿಂದಲೇ ಗ್ರಹೀತ. ಹೀಗೆ ನಡೆದುದು ತಪ್ಪು, ಹೀಗಿರಬಾರದಾಗಿತ್ತು, ಹಾಗೆ ನಡೆಯಬೇಕಿತ್ತು, ಹಾಗಿರಬೇಕಿತ್ತು – ಎಂಬ ಟೀಕೆಗಳಿಗೆ ಟೀಕಾವಕಾಶ ಹೊರತು ಬೇರೆಯ ಅವಕಾಶವಿಲ್ಲ.

ತಪೋನಂದನ, ಕಾವ್ಯವಿಮರ್ಶೆಯಲ್ಲಿ ಪೂರ್ಣದೃಷ್ಟಿ, ಪುಟ ೧೨೧

೧೬೯೨

ಧನಮದದ ಬೆನ್ನಿನೊಳೆ ದರ್ಪಮದ
ಹುಟ್ಟಿದೊಡೆ ಸದ್ಗುಣವು ದುರ್ಗುಣಕೆ ತಿರುಗುವುದು.

ಬಿರುಗಾಳಿ, ಪಾತ್ರ ಭೈರವ, ಪುಟ ೨೦

೧೬೯೩

ಮಲೆಗಳಲುಲಿಯುವ ಓ ಕೋಗಿಲೆಯೇ,
ಬಲು ಚೆಲುವಿದೆ ನಿನ್ನೀ ಗಾನ !
ಇಂಗ್ಲಿಷಿಗೆ ತರ್ಜುಮೆ ಮಾಡಿದರೆ
ದೊರೆವುದು ನೋಬೆಲ್ ಬಹುಮಾನ !
ಅರಣ್ಯ ರೋದನ ! ಸುಮ್ಮನೆ ಹಾಡುವೆ
ಕೇಳುವರಾರಿಲ್ಲಿ ?

ನವಿಲು, ಬಹುಮಾನ, ಪಾತ್ರ ಆಲಿಸಿದೋರ್ವನು, ಪುಟ ೬೬

೧೬೯೪

ತನ್ನ ಲೀಲಾ ಲೋಕಲೋಕಂಗಳಂ ಸೃಜಿಸಲ್
ಅನಾದಿಕವಿ, ಪರಮ ಪುರುಷೋತ್ತಮಂ, ಸರ್ವೇಶ್ವರಂ,
ಬೇರೆಬೇರೆಯ ವಿಶ್ವಕವಿಗಳಂ ಬ್ರಹ್ಮರ್ಕಳಂ
ನಿರ್ಮಿಪೋಲ್, ನಮ್ಮೀ ಚತುರ್ಮುಖ ಜಗತ್‌ಕರ್ತೃ ತಾಂ
ತನ್ನ ಲೀಲೆಯ ಕಾವ್ಯಸತ್ತೆಯ ಬೃಹತ್ ಕೃತಿಗಳಂ
ಸೃಷ್ಟಿಸೆ ವಸುಂಧರೆಯೊಳಂತೆಯೆ ಕವೀಂದ್ರರ್ಕಳಂ
ಪುಟ್ಟಿಪನ್. ಬ್ರಹ್ಮಕೃತಿಯೊಳ್ ಸಚ್ಚಿದಾನಂದಮಂ
ವ್ಯಕ್ತಿಗೊಳಿಪಂತುಟಾ ಅವ್ಯಕ್ತ ಪರಮ ತತ್ತ್ವಂ,
ವರಕವಿಯ ಕಾವ್ಯಸತ್ತೆಯೊಳಾತ್ಮ ರಸ ಸತ್ಯಮಂ
ಪ್ರಕಟಿಸುವನೀ ಬ್ರಹ್ಮನನ್ಯವಿಧದಿಂದೆಮ್ಮ
ಮರ್ತ್ಯ ಪೃಥಿವೀ ತತ್ತ್ವದೊಳ್ ಪ್ರಕಟನಾಸಾಧ್ಯಮಂ,
ಅನಿರ್ವಚನ ಬೋಧ್ಯಮಂ, ಪ್ರತಿಮಾ ವಿಧಾನದಿಂ
ರಸಋಷಿ ಪ್ರತಿಭಾನ ಮಾತ್ರ ಸಂವೇದ್ಯಮಂ.

ಶ್ರೀ ರಾಮಾಯಣ ದರ್ಶನಂ, ಕವಿಕ್ರತು ದರ್ಶನಂ, ಪುಟ ೧೫

೧೬೯೫

ನಾನು ಬದುಕೊಳುಳಿವ ಮನೆ,
ನಾನು ಬಾಳಿಯಳಿವ ಮನೆ ;
ನನ್ನದಲ್ಲದಿಳೆಯೊಳಿಂದು,
ಹೆಮ್ಮೆಯಿಂದ ನನ್ನದೆಂದು,
ಬೆಂದು ಬಳಲಿದಾಗ ಬಂದು
ನೀರು ಕುಡಿವ ನನ್ನ ಮನೆ !

ಕೊಳಲು, ನನ್ನಮನೆ, ಪುಟ ೧೮

೧೬೯೬

ಗರ್ವಕೆ ಮಣಿಯದೆ, ದೀನರ ತುಳಿಯದೆ,
ಸಿರಿಯಧಿಕಾರಗಳಾಸೆಗೆ ಸಿಲುಕಿ
ಶಿವ ಸತ್ಯ ಸೌಂದರ್ಯಗಳನೆಲ್ಲ ಹಳಿಯದೆ
ಜೀವವು ಹೂವಿನೊಳಿರಲಿ ಸದಾ.

ಕೊಳಲು, ಬಿನ್ನಹ, ಪುಟ ೪೮

೧೬೯೭

ಹೊತ್ತ ಕೊಲೆಗೈಯುವನೆ
ತಿಳಿದ ಮನುಷಂ ?

ನಾಚಿ ನಿಂತರೆ, ಅಯ್ಯೊ,
ಅಮೃತವೆ ವಿಷಂ !

ಪ್ರೇಮಕಾಶ್ಮೀರ, ಅಮೃತ ವಿಷ, ಪುಟ ೬೭

೧೬೯೮

ಬಾರ ಬೇಗ ಚಂಚರೀಕ,
ಬಾರ, ಹೃದಯಪುಂಡರೀಕ
ಹಂಬಲಿಸಿದೆ ನಿನ್ನನೆ.
ಬೇಗ ಹಿಂಡಿ ಹೀರು ನನ್ನ,
ಜೇನು ಸೋರಿ ಹೋಹ ಮುನ್ನ,
ಪ್ರೇಮ ಪಾನ ಧನ್ಯನೆ !

ಜೇನಾಗುವಾ, ಓ ತೃಷಿತ ಚಂಚರೀಕ, ಪುಟ ೬

೧೬೯೯

ಹಿಡಿಯದಿರಲಿ ನಿನಗಾದರು
ಗಂಡಸರಾ ಕುತ್ತ :
ಪ್ರಖ್ಯಾತಿಯ ಪಡೆಯುವೊಂದು
ಪ್ರಾಪಂಚಿಕ ಪಿತ್ತ !
ಹೊಸಲಾಚೆಗೆ ನೀನೋತರೆ
ಹೊಸಲೀಚೆಗೆ ಬೆಳಕಿಲ್ಲ :
ಹೆಸರಾಸೆಗೆ ನೀ ಸೋತರೆ
ಉಸಿರಾಸೆಯೆ ನಮಗಿಲ್ಲ !

ಇಕ್ಷುಗಂಗೋತ್ರಿ, ಮನೆಮನೆಯ ತಪಸ್ವಿನಿಗೆ, ಪುಟ ೭

೧೭೦೦

ಇತರ ಎಲ್ಲಾ ವಿಷಯಗಳಲ್ಲಿಯೂ ಇರುವಂತೆ ಪುಸ್ತಕಗಳಲ್ಲಿಯೂ ಸತ್ ಮತ್ತು ಅಸತ್ ಎರಡೂ ಇರುತ್ತವೆ. ಈ ಸತ್ಕಾವ್ಯ ನಮ್ಮನ್ನು ಊರ್ಧ್ವಮುಖ ಪ್ರವಾಸ ದತ್ತ ಕೊಂಡೊಯ್ದರೆ, ದುಷ್ಕಾವ್ಯ ನಮ್ಮನ್ನು ಅಧೋಮುಖ ಪ್ರವಾಸಿಗಳನ್ನಾಗಿ ಮಾಡುತ್ತದೆ. ಕೆಳಕ್ಕೆ ತಳ್ಳುವ ಆಸುರೀ ಪುಸ್ತಕಗಳನ್ನು ಸಂಹರಿಸಿ, ಮೇಲಕ್ಕೆ ಒಯ್ಯುವ ದೈವೀ ಪುಸ್ತಕಗಳನ್ನು ಗುರುತಿಸಬೇಕು. ಅಕ್ಷರಾಭ್ಯಾಸದಿಂದ ಓದುವ ಹೊಸರುಚಿ ಯನ್ನು ಸಂಪಾದಿಸಿರುವ ಶ್ರೀಸಾಮಾನ್ಯನಿಗೆ ಮೊದಮೊದಲು, ಕ್ಯಾಬರೆ ನೃತ್ಯದಂತೆ, ಪಶುರುಚಿಗೆ ಆಕರ್ಷಣೀಯವಾಗಿ ತೋರಿದರೂ ತುದಿಗೆ ಕ್ಯಾನ್ಸರಿಗಿಂತಲೂ ಕ್ರೂರ ವಾಗುವ ಪುಸ್ತಕ ಸಾಮಗ್ರಿಯಿಂದ ಅಪಾಯವಾಗದಂತೆ ನೋಡಿಕೊಳ್ಳಬೇಕಾದುದು ಅನಕ್ಷರರನ್ನು ಸಾಕ್ಷರರನ್ನಾಗಿ ಮಾಡಿದವರ ಪವಿತ್ರ ಹೊಣೆಗಾರಿಕೆಯಾಗಿರುತ್ತದೆ.

ವಿಚಾರ ಕ್ರಾಂತಿಗೆ ಆಹ್ವಾನ, ಶ್ರೀಸಾಮಾನ್ಯ ಮತ್ತು ವಿಚಾರಕ್ರಾಂತಿ, ಪುಟ ೧೧೯

೧೭೦೧

ಬಾಳಂಚಿನೊಳ್ ನಿಂತು
ಪೇಳ್ವೆನೀ ನನ್ನಿಯಂ : ಆ ಜಳ್ಳೆ ಗಟ್ಟಿ ; ನಾಮ್
ಗಟ್ಟಿಯೆಂದರಿತುದೆಲ್ಲಂ ಜಳ್ಳು, ಬರಿ ಜಳ್ಳು !....
ಸಾವ್ ಗಾಳಿ ತೂರಲರಿವಪ್ಪುದಯ್ !

ಶ್ರೀ ರಾಮಾಯಣ ದರ್ಶನಂ, ನೀಂ ಸತ್ಯವ್ರತನೆ ದಿಟಂ, ಪಾತ್ರ ವಾಲಿ, ಪುಟ ३३೧

೧೭೦೨

ಮಮತೆಯಂತೆ ಮೇಣ್ ಕಾಮದಂತೆ ಮೇಣ್ ಪ್ರೇಮಭಾವದಲ್ಲಿ
ನಿನ್ನ ಚಿಚ್ಛಕ್ತಿ ತನ್ನ ನಿತ್ಯಸದ್ ರಸವ ಸವಿವುದಿಲ್ಲಿ !

ಅಗ್ನಿಹಂಸ, ಋತಚಿನ್ನಯೀ ಜಗನ್ಮಾತೆಗೆ, ಪುಟ ೯೭

೧೭೦೩

ಅಂತದ ತುಟಿಯಲಿ ಅನಂತವೊತ್ತಿದ
ಮುತ್ತಿನ ಮುಗುಳಾನು !

ಕದರಡಕೆ, ಮುತ್ತಿನ ಮುಗುಳು, ಪುಟ ೭೬

೧೭೦೪

ಕನ್ನಡಿಗರು ಮೊದಲಿನಿಂದಲೂ ಸಾಹಸಪ್ರೇಮಿಗಳು. ಬದಲಾಯಿಸುವುದಕ್ಕಾಗಲಿ ಬೆಳೆಯುವುದಕ್ಕಾಗಲಿ ಅವರು ಹಿಂಜರಿದವರಲ್ಲ. ಕರ್ಮ ಧರ್ಮ ಮತ್ತು ಕಲಾರಂಗ ಗಳಲ್ಲಿ ಬರಿಯ ತಟಸ್ಥಾಚಾರಶೀಲನಾಗಿರದೆ ವಿಚಾರ ಪ್ರಚಾರ ಮತ್ತು ಪ್ರಯೋಗ ಶೀಲರಾಗಿ ಮುಂದುವರಿದಿದ್ದಾರೆ. ಅವರ ಸಾಹಿತ್ಯದಲ್ಲಿಯೂ ಅದೇ ಸಾಹಸಪ್ರಿಯತೆ ಪ್ರತಿಬಿಂಬಿಸಿದೆ, ಆತ್ಮ ಮತ್ತು ಆಕಾರ ಎರಡರಲ್ಲಿಯೂ. ಅದಕ್ಕಾಗಿ ನಮ್ಮ ಪೂರ್ವಿಕರಿಗೆ ಋಣಿಗಳಾದ ನಾವು ಎಷ್ಟು ಕೃತಜ್ಞರಾದರೂ ಸಾಲದಾಗಿದೆ. ಅವರ ನೆತ್ತರು ನಮ್ಮ ನಾಳಗಳಲ್ಲಿ ಹರಿಯುತ್ತಿರುವುದರಿಂದಲೆ ನಾವಿಂದು ಸಾಹಸಿಗಳಾಗಿ ಮುಂದುವರಿಯುತ್ತಿದ್ದೇವೆ. ಹೊಸ ಹಾದಿ ನಡೆಯುತ್ತಿರುವ ನಮ್ಮ ಸಾಹಸಕ್ಕೆ ಅವರ ಮೇಲ್ಪಂಕ್ತಿಯೂ ಆಶೀರ್ವಾದವೂ ಉತ್ತೇಜನಗಳಾಗಿವೆ.

ಸಾಹಿತ್ಯ ಪ್ರಚಾರ, ಕನ್ನಡ ಸಾಹಿತ್ಯ, ಪುಟ ೬೦

೧೭೦೫

ಎಂತೊ ಏನೋ ಅಂತು ಪರಿಹಾರವಾಗುವುವು
ಚಿಂತೆ ತಂದೊಡ್ಡಿರುವ ಅಗಣಿತ ಸಮಸ್ಯೆಗಳು
ಅಂತವಾದಿಗಳಿಲ್ಲದತಿಮೃತ್ಯು ಲೋಕದಲಿ ಕಲ್ಪನಾತೀತವಾಗಿ !
ಅನ್ನೆಗಂ ತೊಡುಗುವೆನು ಧರ್ಮದಲಿ ಕರ್ಮದಲಿ
ನನ್ನಿಯೊಲ್ಮೆಗಳಲ್ಲಿ ಪುಣ್ಯ ಸೌಂದರ್ಯದಲಿ

ನನ್ನಂತೆ ಕಲೆಯನು ಉಪಾಸಿಸುವರೊಡಗೂಡಿ
ಕಲ್ಪನಾಧೀನನಾಗಿ !

ಅಗ್ನಿಹಂಸ, ಮುಕ್ತ ಮಹಾಪುರುಷನಿಗೆ, ಪುಟ ೫೭

೧೭೦೬

ವಯಸ್ಕರಿಗೆ ಅಕ್ಷರ ಕಲಿಸುವುದೆಂದರೆ ಅವರು ಇದುವರೆಗೂ ಪ್ರಕೃತಿ ಸಹಜವಾಗಿಯೆ ಪಡೆದಿದ್ದ ಕೈ ಕಾಲು ಮೂಗು ಬಾಯಿ ಕಣ್ಣು ಕಿವಿ ಮೊದಲಾದ ಇಂದ್ರಿಯಗಳ ಜೊತೆಗೆ, ಅವೆಲ್ಲವನ್ನೂ ಮೀರಿದ ಒಂದು ಅಂತರಿಂದ್ರಿಯದ ಸಂಪಾದನೆಗೆ ಅವರಿಂದ ಗುದ್ದಲಿಪೂಜೆ ಮಾಡಿಸಿದಂತೆ.

ವಿಭೂತಿ ಪೂಜೆ, ಶ್ರೀ ರಾಮಾಯಣ ದಿವ್ಯಶಿಲ್ಪಿ, ಪುಟ ೧೩೨-೩

೧೭೦೭

ಮಣಿಯದೆಯೆ ಬಾಳ್ವನರನೆರ್ದೆಯೆ ಮಹಾಸ್ಥಾನಂ.

ಶ್ಮಶಾನ ಕುರುಕ್ಷೇತ್ರಂ, ಪಾತ್ರ ದ್ವಾಪರ, ಪುಟ ೨೮

೧೭೦೮

ಕಂಡ ಬಲ್ಮೆಯಂ
ಕೊಂಡಾಡುವುದೆ ಬೀರರಿಗೆ ತಗುವ ಸಿರಿಗೆಯ್ಮೆ.
ಕಾಣದುದನಿಳಿಕೆಗೆಯ್ವುದುಮಂತೆ ಕೀಳ್‌ಗೆಯ್ಮೆ.

ಶ್ರೀ ರಾಮಾಯಣ ದರ್ಶನಂ, ಪೂರ್ಣದನಗ್ನಿಯೆ ಸಾಕ್ಷಿ, ಪಾತ್ರ ರಾಮ, ಪುಟ ೩೧೧

೧೭೦೯

ಕಲೆಯನಲ್ಲದೆ ಶಿಲ್ಪಿ ಶಿಲೆಯನೇಂ ಸೃಷ್ಟಿಪನೆ?
ತನು ನಿನ್ನದಾದೊಡಂ ಚೈತನ್ಯಮೆನ್ನದೆನೆ,
ಕಥೆ ನಿನ್ನದಾದೊಡಂ, ನೀನೆ ಮೇಣಾಶೀರ್ವಾದಿಸಿ
ಮತಿಗೆ ಬೋಧವನಿತ್ತೊಡಂ, ಕೃತಿ ನನ್ನ ದರ್ಶನಂ
ಮೂರ್ತಿವೆತ್ತೊಂದಮರ ಕಾವ್ಯದಾಕೃತಿಯಲ್ತೆ ?

ಶ್ರೀ ರಾಮಾಯಣ ದರ್ಶನಂ, ಕವಿಕ್ರತು ದರ್ಶನಂ, ಪುಟ ೧೬

೧೭೧೦

ಕವಿದರ್ಶನಕೆ ಜಡವಿಲ್ಲ ;
ಜಡವೆಂಬುದೆಲ್ಲ ಚೇತನದ ನಟನೆಯ ಲೀಲೆ.
ರಸವಲ್ಲದಿನ್ನಿಲ್ಲ ವಿಶ್ವದಲಿ. ಮಾನವನ
ಮೇಣಿತರ ಜೀವಿಗಳ ಮನಕೆ ಮೇಣನುಭವಕೆ
ಕಲ್ಲಾಗಿ, ಮಣ್ಣಾಗಿ, ನೀರು ಗಾಳಿಗಳಾಗಿ,
ಬೆಳಕು ಬೆಂಕಿಗಳಾಗಿ, ನಭವಾಗಿ ಗಿರಿಯಾಗಿ
ಗ್ರಹ ತಾರೆ ಶಶಿ ಸೂರ್ಯ ನೀಹಾರಿಕೆಗಳಾಗಿ,

ಕಾಲದೇಶಗಳೊಂದು ಮುರಿಯಾಗಿ ನಿರಿಯಾಗಿ
ಹೊನಲಾಗಿ, ಹೊರಗಾಗಿ ತೋರುವೀ ವಿಶ್ವಕ್ಕೆ
ತಳಹದಿಯದೊಂದೆ ಚೈತನ್ಯ ; ಅದು ರಸದೃಷ್ಟಿ
ಸಂವೇದ್ಯ ; ರಸಋಷಿ ಪ್ರತಿಭಾ ಸಮಾಧಿಗದು
ಪ್ರತ್ಯಕ್ಷ.

ಪಕ್ಷಿಕಾಶಿ, ರಸಾನುಭೂತಿ, ಪುಟ ೫೭

೧೭೧೧

ನನ್ನ ಭಾವದ ಧೀರ ಭಾರಕ್ಕೆ ವೇಗಕ್ಕೆ
ಚಟುಲ ರಣತೇಜಿ ಈ ಭೀಮಸುಂದರ ಶೈಲಿ :
ಹತ್ತದನು ನೀವೆಲವೊ ವೆತ್ತರಿದ್ದರೆ ಮೈಲಿ !
ಬಡಕಲಾದವಗೆ ನಾಗಾಲೋಟದಿಂ ಪಕ್ಕೆ
ನಿರಿನಿಟಿಲು ಮುರಿದಪ್ಪುದಸ್ಥಿಚೂರ್ಣದ ಥೈಲಿ.
ಕೈಲಾಗದೆಯೆ ಹತ್ತಿ ಮೈ ನೊಂದರೇಂ ತಪ್ಪೆ
ಕುದುರೆ ? ಮೈ ಕೊಬ್ಬೆಂದು ದೂಷಿಸುವೆ ! ಬಿಡು, ಬೆಪ್ಪೆ,
ನಿನಗಲ್ಲವೀ ತೇಜಿ–ಈ ದೈತ್ಯ ಕವಿಶೈಲಿ !
ನಿನ್ನ ಭಾವದ ಮೆಯ್ಯ ಪುಷ್ಟಗೊಳಿಸೈ ಮೊದಲು ;
ತೋರ್ಪುದಾಗೆನ್ನ ಶೈಲಿಯ ಮಹಿಮೆ. ಭೂರ್ಭುವನ
ಸ್ವರ್ಗಂಗಳಂ ಯಾತ್ರೆಗೈಯುವೆನ್ನಯ ಕವನ
ಬಯಲು ಸೀಮೆಯ ದೃಶ್ಯ ಕಾರ್ಪಣ್ಯತೆಗೆ ಬದಲು
ಮಲೆನಾಡಿನಡವಿ ಮೈಸಿರಿಯ ವಿನ್ಯಾಸಮಂ
ನೋಂತಿದೆ, ತೊರೆದು ನಪುಂಸಕರ ಸಂನ್ಯಾಸಮಂ !

ಕೃತ್ತಿಕೆ, ನನ್ನ ಶೈಲಿ, ಪುಟ ೨೮

೧೭೧೨

ಧ್ವನಿಗೆ ವಾಚ್ಯದ ಊರೆ ಏಕೆ ? –
ಸಾಕೆ ?

ಪ್ರೇತ ಕ್ಯೂ, ಹಿಮಾಲಯಕ್ಕೆ ಸಹ್ಯಾದ್ರಿ, ಪುಟ ೩೨

ಪ್ರಯತ್ನ ಪಡಬ

೧೭೧೩

ಸಮಸ್ಯೆಗ ವಿಮರ್ಶೆಗಳೆಷ್ಟಿದ್ದರೂ ಅವೆಲ್ಲ ಕೈಮರಗಳಂತೆ. ಕೈಮರಕ್ಕೆ ಜೋತು ಬಿದ್ದ ಮಾತ್ರಕ್ಕೆ ಯಾರಿಗೂ ದಾರಿ ಸಾಗುವುದಿಲ್ಲ, ಯಾರೂ ಗುರಿಗೆ ಸೇರುವುದಿಲ್ಲ.

36

ವಿಭೂತಿ ಪೂಜೆ, ಕಲಿಯದವರಿಗೂ ಕಾಮಧೇನು, ಪುಟ ೧೭

೧೭೧೪

ಯಮನೂರು ದಯೆಯ ಬೀಡಲ್ಲ. ನಿಷ್ಪಕ್ಷ-
ಪಾತವಾಗಿಹ ಧರ್ಮದೂರು.

ಯಮನ ಸೋಲು, ಪಾತ್ರ ದೂತ, ಪುಟ ೨೨

೧೭೧೫

ಯಾವ ಚಿಪ್ಪಿನೊಳಾವ
ಮುತ್ತಿರುವುದೆಂಬುದನು ಬಲ್ಲವರೆ ಬಲ್ಲರು !

ಕಾನೀನ, ಪಾತ್ರ ಪರುಶುರಾಮ, ಪುಟ ೨೮

೧೭೧೬

ಅಭಿಪ್ರಾಯಗಳು ಎಷ್ಟೇ ಭಿನ್ನವಾಗಿದ್ದರೂ ನಮ್ಮ ಸಾಹಿತ್ಯ ಪ್ರಪಂಚದಲ್ಲೇನೋ ಹೊಸ ಯುಗ ಕಾಲಿಟ್ಟಾಗಿದೆ. ಆ ಮಿಂಚಿನ ಪ್ರವಾಹ ಯಾರ ಪ್ರತಿಭಟನೆಗೂ ತರಹರಿಸುವುದಿಲ್ಲ. ಹಣ್ಣೆಲೆಗಳು ಎಷ್ಟೇ ಗೌರವಾರ್ಹವಾಗಿದ್ದರೂ ಸಕಾಲವೊದಗಿದಾಗ ಹೊಸ ತಳಿರಿಗೆ ಎಡೆಗೊಟ್ಟು, ಮಾತಿಲ್ಲದೆ ಕೆಳಗುದುರಲೇಬೇಕು. ಅದು ಪ್ರಕೃತಿ ನಿಯಮ. ಎಲೆಗಳಿಗಾಗಿ ಮರವಿರುವುದಿಲ್ಲ ; ಮರಕ್ಕಾಗಿ ಎಲೆಗಳಿರುವುದು. ಆದ್ದರಿಂದ ಮರದ ಕಲ್ಯಾಣಕ್ಕಾಗಿ ಹಣ್ಣೆಲೆಗಳುದುರಿ ಹೊಸ ತಳಿರು ಚಿಗುರುವಂತೆ ನಾಡಿನ ಮೇಲ್ಮೆಗಾಗಿ ಹಳೆಯದೆಲ್ಲ ಹೊಸದಾದುದಕ್ಕೆ ತಲೆಬಾಗಲೇಬೇಕು. ಹಾಗೆಯೇ, ಸಾಹಿತ್ಯದಲ್ಲಿಯೂ ಹೊಸ ಮಾರ್ಗಗಳಿಗೆ ಹಳೆಯಮಾರ್ಗ ಶರಣಾಗಲೇಬೇಕು.

ಸಾಹಿತ್ಯ ಪ್ರಚಾರ, ಸಾಹಿತ್ಯ ಪ್ರಚಾರ, ಪುಟ ೨೨

೧೭೧೭

ತರುಣತೆ, ನೂತನತೆ, ನವೀನತೆ, ಆಧುನಿಕತೆ ಈ ಪದಗಳು ಹೃದಯದ ಲಕ್ಷಣಗಳನ್ನು ವರ್ಣಿಸುತ್ತವೆ ; ದೇಹದ ವಯಸ್ಸನ್ನು ಮಾತ್ರವೆ ನಿರ್ಣಯಿಸುವುದಿಲ್ಲ. ಹೊಸತು ಎನ್ನುವ ಮಾತು ಕಾಲಕ್ಕೆ ಮಾತ್ರವಲ್ಲದೆ ಆತ್ಮಕ್ಕೂ ಅನ್ವಯಿಸುತ್ತದೆ. ಅಷ್ಟೇ ಅಲ್ಲ ; ವ್ಯಕ್ತಿಗಳಿಗೆ ಮಾತ್ರವೆ ಅಲ್ಲದೆ ತತ್ತ್ವಗಳಿಗೂ ಅನ್ವಯಿಸುತ್ತದೆ. ಕೆಲವು ಆಲೋಚನೆ ಅಭಿಪ್ರಾಯಗಳಿವೆ ; ಅವು ಅತ್ಯಂತ ಪುರಾತನವಾದರೂ ಸರ್ವದಾ ನೂತನವಾಗಿರುತ್ತವೆ. ಮತ್ತೆ ಕೆಲವು ಮೊನ್ನೆ ಮೊನ್ನೆ ಹುಟ್ಟಿದ ಹೊಸ ಸಿದ್ಧಾಂತಗಳಾದರೂ ಜಗತ್ತಿನ ಬದುಕಿನ ನೆಮ್ಮದಿಯ ದೃಷ್ಟಿಯಿಂದ, ಸಂಸ್ಕೃತಿಯ ಏಳ್ಗೆಯ ದೃಷ್ಟಿಯಿಂದ, ಕಳಚಿ ಬಿಸಾಡಲು ಯೋಗ್ಯವಾದ ಹಳೆಯ ಚಿಂದಿ ಬೊಂತೆಗಳಾಗಿರುತ್ತವೆ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೪೩

೧೭೧೮

ಎಂತಹ ಹಾನಿಯೆ ಒದಗಲಿ, ಸರ್ವನಾಶವೆ ಬೇಕಾದರೂ ಆಗಲಿ, ಮಾನವತ್ವವನ್ನು ತಲುಪಿದ ಚೇತನ ಕಲ್ಲುಮಣ್ಣುಗಳಂತೆ ತಟಸ್ಥವಾಗಿ ಬಿದ್ದಿರಲು ಸಾಧ್ಯವಿಲ್ಲ.

ಮಲೆಗಳಲ್ಲಿ ಮದುಮಗಳು, ಪುಟ ೪೦೬

೧೭೧೯

ಮಾತು ನನ್ನ ಕಲೆ
ಮೌನ ನನ್ನ ನೆಲೆ.

ಮಂತ್ರಾಕ್ಷತೆ, ಪುಟ ೯

೧೭೨೦

ಹೆಸರಿನ ಹುಸಿಗೆ ನಿನ್ನೆದೆಯ ಸಿರಿಯ
ಮಾರದಿರು. ನಂಬಿ ಬರುಗನಸೊಂದನಾಮೇಲೆ
ಕೋಳುಹೋಗದಿರು. ವಿಗ್ರಹಮಿಲ್ಲದಾ ಗುಡಿಗೆ
ಕಳುಹದಿರು ನಿನ್ನೊಲುಮೆಯ್ಯೆಸಿರಿಯ ಪೂಜೆಯಂ.

ಚಿತ್ರಾಂಗದಾ, ಮೂರನೆಯ ಪರ್ವಂ, ಪಾತ್ರ ಅರ್ಜುನ, ಪಂಕ್ತಿ ೯೯೧-೪, ಪುಟ ೩೬-೭

೧೭೨೧

ರಭಸಮತಿಗಳಿಗೆ ವಿಮರ್ಶೆಮಾಡಲು ಸಮಯವೆಲ್ಲಿ ?

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೨

೧೭೨೨

....ನಾವು ನಮ್ಮದನ್ನೇ ಮಾತ್ರ ನೋಡುತ್ತ ಕುಳಿತಿದ್ದರೆ ನಮಗೆ ಪ್ರಜ್ಞಾವಿಸ್ತಾರ ಲಭಿಸುವುದಿಲ್ಲ. ಇತರರೊಡನೆ ನಮ್ಮನ್ನು ತೂಗಿಕೊಳ್ಳದಿದ್ದರೆ ನಮ್ಮದರ ಸರಿಯಾದ ಬೆಲೆಯೂ ನಮಗೆ ತಿಳಿಯುವುದಿಲ್ಲ. ಹಾಗಾಗಿ ನಾವು ಹೊಗಳಿಕೆಯ ಅಥವ ತೆಗಳಿಕೆಯ ಉತ್‌ಪ್ರೇಕ್ಷೆಗೆ ವಶವಾಗುವ ಸಂಭವವೊದಗುತ್ತದೆ. ಪೂರ್ಣದೃಷ್ಟಿಯ ಪರಿಪೂರ್ಣ ವಿಮರ್ಶೆಗೆ ಇಂದು ಜಗತ್‌ಪ್ರಜ್ಞೆಯ ಅಥವಾ ವಿಶ್ವಪ್ರಜ್ಞೆಯ ನಿಕಷ ಆವಶ್ಯಕ.

ವಿಚಾರ ಕ್ರಾಂತಿಗೆ ಆಹ್ವಾನ, ಸಾಹಿತ್ಯ ಚರಿತ್ರಕಾರರಿಗೆ ಸಲಹೆಗಳು, ಪುಟ ೩೩-೪

೧೭೨೩

ಪ್ರಾಕೃತ ಘಟನೆಗಳ್ಗೆ ಪ್ರಕೃತಿಕಾರಣದಂತೆ
ದೇವಕಾರಣಮಿರ್ಪುದೆಂದು ಗುರು ಕಲಿಸಿದನ್
ನನಗೆ.

ಶ್ರೀ ರಾಮಾಯಣ ದರ್ಶನಂ, ಮಮತೆಯ ಸುಳಿ ಮಂಥರೆ, ಪಾತ್ರ ದಶರಥ, ಪುಟ ೬೯

೧೭೨೪

ಈ ವಿಶ್ವಮಾನವ ರಚನೆಯೆ ನಮ್ಮ ಇತರ ಎಲ್ಲ ಉದ್ಧಾರೋದ್ಯಮಗಳ ಮತ್ತು ಸುಖಸಾಧನೆಯ ಸಾಹಸಗಳ ಅಂತರಾತ್ಮದಲ್ಲಿ ಅಡಗಿರುವ ಪ್ರಚ್ಛನ್ನ ಪ್ರೇರಣೆ. ಈ ಪೂರ್ಣದೃಷ್ಟಿ ದೇಶ ಕಾಲ ಪೂರ್ವ ಪಶ್ಚಿಮ ಮತ ಜಾತಿ ವರ್ಣ ಪಕ್ಷ ಪಂಥ ಸಿದ್ಧಾಂತಾದಿ ಎಲ್ಲ ತೆರನಾದ ಸೀಮೆಗಳನ್ನೂ ಉಲ್ಲಂಘಿಸಿ ಅತೀತವಾಗಿರುತ್ತದೆ, ಅನಿಕೇತನವಾಗಿರುತ್ತದೆ, ನಿತ್ಯವಾಗಿರುತ್ತದೆ. ಈ ಪೂರ್ಣದೃಷ್ಟಿ ಜನಾಂಗ ಜನಾಂಗ ಗಳ ನಡುವೆ ಗೋಡೆ ಕಟ್ಟಿಕೊಂಡು ನಿಂತಿರುವ ರಾಷ್ಟ್ರೀಯತೆಯನ್ನು ಉತ್ತರಿಸಿ,

ಮಾನವನಿಂದ ಮಾನವನನ್ನು ಪ್ರತ್ಯೇಕಿಸುತ್ತಿರುವ ಕ್ಷುದ್ರಭೇದಗಳನ್ನು ಇಲ್ಲಗೈದು, ಶಾಶ್ವತವೂ ಸರ್ವಸಂಪೂರ್ಣತಾಸಿದ್ಧಿಕಾರಕವೂ ಆಗಿರುವ ನಿತ್ಯಶಾಂತಿಯ ಕಡೆಗೆ ಜಗತ್ತನ್ನು ಒಯ್ಯುತ್ತದೆ. ಸಕಲ ಪುರುಷಾರ್ಥಗಳ ಶಿಖರ ಪುರುಷಾರ್ಥಕ್ಕೆ ಜಗತೀ ಚೇತನೆಯನ್ನೇರಿಸುತ್ತಿದೆ. ಸಹೃದಯಯಾತ್ರಿ ಸಾಹಿತ್ಯಹೈಮಾಚಲ ಪರ್ವತಶ್ರೇಣಿಗಳಲ್ಲಿ ಈ ತುತ್ತತುದಿಯ ಶ್ರೇಣಿಯ ಈ ಕೈಲಾಸ ಪವಿತ್ರ ಕ್ಷೇತ್ರಕ್ಕೆ ಪ್ರವೇಶಿಸಿದಾಗ ಮಾನವತ್ವ ದೇವತ್ವದಲ್ಲಿ ಪದಾರ್ಪಣ ಮಾಡಿ ಸಾರ್ಥಕ್ಯ ಹೊಂದುತ್ತದೆ.

ಷಷ್ಠಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೩೮

೧೭೨೫

ಸತ್ಯ ಪರೀಕ್ಷೆಗೆ ಸಾಕ್ಷಾತ್ಕರಣವೆ ಪರಮ ಪ್ರಮಾಣ. ಅವರಿವರ ಮಾತುಗಳಿಗಿಂತಲೂ ಧರ್ಮಗ್ರಂಥಗಳ ವಾಕ್ಯಗಳಿಗಿಂತಲೂ ಸ್ವಾನುಭವವೆ ಅತ್ಯುತ್ತಮ ಸಾಕ್ಷಿ. ಪರೀಕ್ಷಿಸಿ ಸಾಧಿಸಿ ನೋಡದೆ ಯಾವುದನ್ನಾದರೂ ಅಲ್ಲಗಳೆಯುವುದಾಗಲಿ ಸ್ವೀಕರಿಸುವುದಾಗಲಿ ತಪ್ಪು. ಪ್ರಯತ್ನಶೀಲವಲ್ಲದ ಸಂಶಯವು ಅಂಧಶ್ರದ್ಧೆಯಂತೆಯೇ ನೀರಸವಾದುದ್ದು. ಸ್ವಾನುಭವ ಸಿದ್ಧವಾದ ಜ್ಞಾನವೇ ಸರ್ವಶ್ರೇಷ್ಠವಾದದ್ದು. ಅದುವೆ ಸರ್ವೋಚ್ಚ ಪ್ರಮಾಣ ಮತ್ತು ಸರ್ವೋತ್ತಮ ಅಧಿಕಾರಿ. ಉಳಿದುದೆಲ್ಲವೂ ಸುಳ್ಳು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೯೪–೫

೧೭೨೬

ಸಾಯುತಿದೆ ನಿಮ್ಮ ನುಡಿ, ಓ ಕನ್ನಡದ ಕಂದರಿರ,
ಹೊರನುಡಿಯ ಹೊರೆಯಿಂದ ಕುಸಿದು ಕುಗ್ಗಿ !
ರಾಜನುಡಿಯೆಂದೊಂದು, ರಾಷ್ಟ್ರನುಡಿಯೆಂದೊಂದು,
ದೇವನುಡಿಯೆಂದೊಂದು ಹತ್ತಿ ಜಗ್ಗಿ
ನಿರಿನಿಟಿಲು ನಿಟಿಲೆಂದು ಮುದಿಮೂಳೆ ಮುರಿಯುತಿದೆ,
ಕನ್ನಡಮ್ಮನ ಬೆನ್ನ ಬಳುಕಿ ಬಗ್ಗಿ !
ಕೂಗಿಕೊಳ್ಳಲು ಕೂಡ ಬಲವಿಲ್ಲ : ಮಕ್ಕಳೇ
ಬಾಯ್ಮುಚ್ಚಿ ಹಿಡಿದಿಹರು ಕೆಲರು ನುಗ್ಗಿ !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಸಾಯುತಿದೆ ನಿಮ್ಮ ನುಡಿ ಓ ಕನ್ನಡದ ಕಂದರಿರ, ಪುಟ ೪೧

೧೭೨೭

ಮಾಡಿರಯ್ ಯಾಗಗಳ ! ತಿನ್ನಿರಯ್ ಭಕ್ಷ್ಯಗಳ !
ಭೋಜನವೆ ಯೋಜನೆಯ ಮುಖ್ಯ ಅಂಗ !

ಪ್ರೇತ ಕ್ಯೂ, ಅಷ್ಟಗ್ರಹಯೋಗಸಿದ್ಧಿ, ಪುಟ ೫೦

೧೭೨೮

ನಿನ್ನೆಡೆಗೆ ಬರುವಾಗ ಸಿಂಗರದ ಹೊರೆಯೇಕೆ ?
ಸಡಗರದ ಮಾತುಗಳ ಬಿಂಕವೇಕೆ ?

ನಿನ್ನ ಮುಂದಿರುವಾಗ ಮಂತ್ರಗಳ ಮರೆಯೇಕೆ ?
ಸಂಪ್ರದಾಯದ ಮರುಳು ಲಜ್ಜೆಯೇಕೆ ?

ಷೋಡಶಿ, ನಿನ್ನೆಡೆಗೆ ಬರುವಾಗ, ಪುಟ ೪೭

೧೭೨೯

ಜೀವವನ್ನು ಸ್ಥಗಿತಗೊಳಿಸಿ ಅದಕ್ಕೆ ಚಿಂತನಾ ಶಸ್ತ್ರ ಚಿಕಿತ್ಸೆ
ಮಾಡುವುದೆ ಶಾಸ್ತ್ರಭಾಷೆಯ ಕರ್ತವ್ಯ

ರಸೋ ವೈ ಸಃ, ರಸೋ ವೈ ಸಃ, ಪುಟ ೧೧೬

೧೭೩೦

ನಾನು ಹೈಸ್ಕೂಲು ಮೊದಲನೆಯ ತರಗತಿಯಿಂದ ಮೊದಲ ವರ್ಷದ ಬಿ.ಎ. ಮುಗಿಯುವವರೆಗೆ ಇಂಗ್ಲಿಷಿನ ಕಟ್ಟಭಿಮಾನಿಯಾಗಿದ್ದೆ. ಇಂಗ್ಲಿಷ್ ಕವಿಗಳು, ನಾಟಕಕಾರರು (ಕಾದಂಬರಿಗಳನ್ನು ನಾನು ಮೂಸಿಯೂ ನೋಡಿದವನಲ್ಲ) ನನ್ನ ಜೀವ ಜೀವಾಳವಾಗಿದ್ದರು. ಜಗತ್ತಿನ ಪ್ರಸಿದ್ಧ ಇಂಗ್ಲಿಷ್ ಕವಿಯಾಗಬೇಕೆಂದು ನಾನು ಭ್ರಮಿಸಿದ್ದೆ. ಇಂಗ್ಲಿಷಿನಲ್ಲಿಯೆ ಕವಿತೆಗಳನ್ನೂ ಪ್ರಾರಂಭಿಸಿ ಹೈಸ್ಕೂಲಿನ ಕಡೆಯ ತರಗತಿಯಲ್ಲಿ ಓದುವ ವೇಳೆಗೆ "Beginner's Muse" ಎಂಬ ಹೆಸರಿನಿಂದ ಇಂಗ್ಲಿಷ್ ಕವನ ಸಂಗ್ರಹವೊಂದನ್ನು ಅಚ್ಚು ಹಾಕಿಸಿದೆ. ಆ ಕವನಗಳೆಲ್ಲ ಕೇವಲ ಅನುಕರಣದ ಕವನಗಳು. ಮಿಲ್ಟನ್, ವರ್ಡ್ಸ್‌ವರ್ತ್, ಷೆಲ್ಲಿ–ಮೊದಲಾದ ಕವಿಗಳಿಂದ ಮತ್ತು ಬ್ಯಾಲೆಡ್ ಕವನಗಳಿಂದ ಭಾವಗಳನ್ನು ಎತ್ತಿಕೊಂಡು ಕವನಗಳನ್ನು ರಚಿಸಿದೆ. ನನ್ನ ಮನಸ್ಸು ಕ್ರಮೇಣ ದಾರ್ಶನಿಕ ಕವಿಗಳ ಕಡೆಗೆ ತಿರುಗಿತು. ಗ್ರೀಸ್, ರೋಮ್, ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್ – ಮೊದಲಾದ ದೇಶಗಳ ತತ್ತ್ವಶಾಸ್ತ್ರಜ್ಞರ ಕೃತಿಗಳನ್ನೆಲ್ಲ ಇಂಗ್ಲಿಷ್ ಭಾಷೆಯ ಮೂಲಕ ತಕ್ಕಮಟ್ಟಿಗೆ ಅಧ್ಯಯನ ಮಾಡಿದೆ. ಇಷ್ಟೇ ಅಲ್ಲ, ನಮ್ಮ ಸ್ವಂತ ಆಸ್ತಿಯಾದ ವೇದ, ಉಪನಿಷತ್ತು, ದರ್ಶನಗಳನ್ನೂ ಇಂಗ್ಲಿಷ್ ಮುಖಾಂತರವಾಗಿಯೆ ಮೊದಲು ನಾನು ಅಧ್ಯಯನ ಮಾಡಿದ್ದು. ದೇವ ಭಾಷೆಯಲ್ಲಿನ ಪವಿತ್ರ ವಿಷಯಗಳನ್ನು ಓದಬಾರದು, ಕೇಳಬಾರದು ಎಂದು ಭಯ ಭೀತಿಗಳಿದ್ದ ಕಾಲದಲ್ಲಿ ಇಂಗ್ಲಿಷ್ ತನ್ನ ಭಾಷಾಂತರಗಳ ಮೂಲಕ ಇವುಗಳಿಗೆಲ್ಲ ಪ್ರವೇಶವನ್ನು ನೀಡಿದುದರಿಂದ ಅದಕ್ಕೆ ಸಂಸ್ಕೃತಕ್ಕಿಂತಲೂ ಹೆಚ್ಚು ಗೌರವ ಸಲ್ಲುವುದು ಸ್ವಾಭಾವಿಕವಾಗಿತ್ತು. ನಾನು ಅದೇ ದಿಕ್ಕಿನಲ್ಲಿ, ಅದೇ ದಾರಿಯಲ್ಲಿ ಮುಂದುವರಿದಿದ್ದರೆ ಏನಾಗುತ್ತಿತ್ತೊ! ನನ್ನ ದಾರಿ ದಿಕ್ಕುಗಳನ್ನು ಬದಲಾಯಿಸಿದವರು ಒಬ್ಬ ಐರಿಷ್ ಕವಿ, ಕಸಿನ್ಸ್ ಅವರು.

ಷಷ್ಟಿನಮನ, ಭಾರತದಲ್ಲಿ ಇಂಗ್ಲಿಷಿನ ಸ್ಥಾನ, ಪುಟ ೧೧೦–೧

೧೭೩೧

ಇರುವಲ್ಪ ಶಕ್ತಿಯನು ಇರುವಲ್ಪ ದ್ರವ್ಯವನು
ಪರಭಾಷೆ ಮೋಹಕ್ಕೆ ಚೆಲ್ಲಬೇಡಿ ;

ಹೂಮಾಲೆ ಸೂಡುವೆವು ಕೊರಳಿಂಗೆ ಎಂದೆನುತೆ
ನೇಣುರುಳನೆಳೆದಯ್ಯೊ ಕೊಲ್ಲಬೇಡಿ.
ಪರಕೀಯರೆಲ್ಲರಾಶೀರ್ವಾದ ಕರವೆತ್ತಿ
ಹರಸುತ್ತ ಬರುವರ್ಕೈ ಮೊದಲು ಮೊದಲು ;
ಕಡೆಗದುವೆ ಕುತ್ತಿಗೆಗೆ ಕರವಾಳವಾಗುವುದು ;
ನಮ್ಮ ನಾಲಗೆ ನಮಗೆ ಕೀಳುತೊದಲು !

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಸಾಯುತಿದೆ ನಿಮ್ಮನುಡಿ ಓ ಕನ್ನಡದ ಕಂದರಿರ, ಪುಟ ೪೧

೧೮೩೨

ನಮಗಲ್ಲವೊ ಪತ್ರಿಕೆಗಳ್
ಪೊತ್ತಿಸುವಾ ಪ್ರಖ್ಯಾತಿಯ
ಪುಲ್‌ವೆಂಕೆಯ ಕಾಂತಿ,
ಹೆಸರಿನ ವಿಭ್ರಾಂತಿ !
ಹೆಸರರಿಯದ ದಿನದಿನದಾ
ಒಲುಮೆಯ ಬಾಳಿನ, ನಲುಮೆಯ ಸೇವೆಯ
ಅಖ್ಯಾತಿಯೆ ನಮ್ಮಾತ್ಮದ ಚಿರಶಾಂತಿ !

ಇಕ್ಷುಗಂಗೋತ್ರಿ, 'ಶ್ರೀಸಾಮಾನ್ಯ'ರ ದೀಕ್ಷಾಗೀತೆ, ಪುಟ ೩

೧೮೩೩

ಉತ್ತು ಬಿತ್ತುವುದೆಮ್ಮ ಜಪತಪ, ಗೈಮೆ ಗಾಯತ್ರಿ ;
ನಮ್ಮ ಬಾಳ್ಮೆಯೆ ಕೆಡದೆ ಬೆಳಗುವ ಮಂಗಳಾರತಿಯು !

ಕೊಳಲು, ಸುಗ್ಗಿಹಾಡು, ಪುಟ ೩೦

೧೮೩೪

ರಸಪೂರ್ಣ ಶೂನ್ಯದಿಂದೊಗೆತಂದುದೀ
ವಿಶ್ವಂ ; ಅದರೊಳೆ ವಿಲೀನಮಾಗಡಗುವುದು ತಾನ್.

ಶ್ಮಶಾನ ಕುರುಕ್ಷೇತ್ರಂ, ಪಾತ್ರ ಕಲಿ, ಪುಟ ೬

೧೮೩೫

ಎಳೆಯದೆಂದಿಗೂ ಹಳೆಯದನ್ನು ಒಲಿಯಲಾರದು. ಬಾಲ್ಯ ವೃದ್ಧಾಪ್ಯಗಳಿಗೆ ಗೌರವದ ಸಂಬಂಧವಿರಬಲ್ಲುದೆ ಹೊರತು ಪ್ರೇಮಸಂಬಂಧವಿರಲಾರದು.

ಕಾನೂರು ಹೆಗ್ಗಡಿತಿ, ಪುಟ ೨೪೪

೧೮೩೬

ಗದ್ದೆಯಿಂದ ಮನೆಗೆ ಹೋಗುವ ನೇಗಿಲಯೋಗಿಗಳು
ಹಾದಿಯ ಬಳಿ ಮರುಳಿನಂತೆ ಕುಳಿತ ನನ್ನನ್ನು ನೋಡಿ

ವಿಸ್ಮಿತರಾಗಿದ್ದಾರೆ. ಮೂಡಿಬರುವ ಹುಣ್ಣಿಮೆಯ ತಿಂಗಳನ್ನು
ಎದರುಗೊಳ್ಳಲು ನಾನು ಕಾಯ್ದುಕೊಂಡಿರುವೆನೆಂಬುದನ್ನು
ಅವರೆಂತರಿವರು ?

ಕಿಂಕಿಣಿ, ಸಂಜೆಯ ದಿಬ್ಬಣ, ಪುಟ ೫

೧೭೩೭

ಪ್ರಕೃತಿಯೂ ನವೀನ ಮಾನವನಂತೆ, ಮೊನೆಯಲ್ಲಿ ಕ್ರಾಂತಿಕಾರಿಣಿಯಾದರೂ ಬುಡದಲ್ಲಿ ಸಂಪ್ರದಾಯಶೀಲೆ. ಹಳೆಯದರ ಸಾರವನ್ನೆಲ್ಲ ಸಂಗ್ರಹಿಸುವುದರಲ್ಲಿ ಆಕೆ ಅದ್ವಿತೀಯೆ. ಹಿಂದೆ ಕಲಿತುದನ್ನು ಆಕೆ ಎಂದೂ ಮರೆಯುವುದಿಲ್ಲ. ಕೋಟ್ಯಂತರ ವರ್ಷಗಳ ಪೂರ್ವಾನುಭವಗಳ ಮುದ್ರೆಯನು ನಾಳೆ ಹುಟ್ಟುವ ಹಸುಳೆಯ ಮೇಲೆಯೂ ಸಂಗ್ರಹಿಸಿ ಒತ್ತುತ್ತಾಳೆ.

ಸಾಹಿತ್ಯ ಪ್ರಚಾರ, ಹೊಸ ಸಾಹಿತ್ಯ ಮತ್ತು ಹೊಸ ದೃಷ್ಟಿ, ಪುಟ ೪೫

೧೭೩೮

ಹಿಂದೆ ನೋಡುವುದಿಲ್ಲ ; ಮುಂದೆ ನೋಡುವುದಿಲ್ಲ.
ಕುರಿಗಳಂದದಿ ಬರಿದೆ ನನ್ನೊಡನೆ ಕುರುಡು ನಂಬುಗೆಯಿಂದ
ಬೆನ್ನಿನೊಳೆ ತೇಲಿ ಬರುತಿಹರು.
ನಾನು ಹಾದಿ ತಪ್ಪಿದರೆ ಅವರೂ ತಪ್ಪುವರು ; ನಾನು
ಹಾದಿ ಹಿಡಿದರೆ ಅವರೂ ಹಿಡಿವರು. ದಾಸನ
ದಾಸಾನುದಾಸರಂತಿಹರಲ್ಲಾ, ನನ್ನ ಸಹ ಯಾತ್ರಿಕರು !
ಆದರೆ ನೀನು ಮುಗುಳ್ನಗೆ ಬೀರುತ್ತಿರುವೆ
ದೂರದಲಿ ನಿಂತು !

ಕಿಂಕಿಣಿ, ಅನಂತಯಾತ್ರೆ, ಪುಟ ೨೩

೧೭೩೯

.... ಬೆಟ್ಟದ ನೆತ್ತಿಯ ಮೇಲೆ ನಿಂತು, ಕಣ್ಣು ಹೋಗುವವರೆಗೂ ಹಬ್ಬಿರುವ ದೊಡ್ಡ ಕಾಡುಗಳನ್ನು ನೋಡಿದಾಗ ಕಣ್ಣೀರು ಕರೆದಿದ್ದೇನೆ. ಪೂರ್ಣ ದಿಗಂತದಲ್ಲಿ ಸೂರ್ಯಬಿಂಬ ಕೆಂಪು ಕುಂಕುಮದಲ್ಲಿ ಮಿಂದು ಮೂಡುತ್ತಿದ್ದಾಗ ನೋಡಿ ಕಣ್ಣೀರು ಕರೆದಿದ್ದೇನೆ ! ಮುಂಗಾರಿನ ಪ್ರಾರಂಭದಲ್ಲಿ ಆಕಾಶವನ್ನೆಲ್ಲ ಕರಿಮುಗಿಲು ತುಂಬಿ, ಮಹಾಸರ್ಪದ ಮಹಾಜಿಹ್ವೆಗಳಂತೆ ಬಳ್ಳಿ ಮಿಂಚು ಕುಣಿಯುವುದನ್ನು ನೋಡಿ ಕಣ್ಣೀರು ಕರೆದಿದ್ದೇನೆ ... ಪೂರ್ಣಿಮಾ ರಾತ್ರಿಯಲ್ಲಿ ಚಂದ್ರನು ಶುಭ್ರ ಜ್ಯೋತ್ಸ್ನೆ...ಹುಣ್ಣಿಮೆ ರಾತ್ರಿಯಲ್ಲಿ ತಿಂಗಳ ಬೆಳಕು ಹಾಲು ಚೆಲ್ಲಿದಂತೆ ಕಾಡುಗಳ ಮೇಲೆ ಮಲಗಿರುವುದನ್ನು ನೋಡಿ ಕಣ್ಣೀರು ಕರೆದಿದ್ದೇನೆ...ಮಹಾತ್ಮರ ಕಥೆಗಳನ್ನು ಓದುತ್ತ ಕಣ್ಣೀರು ಕರೆದಿದ್ದೇನೆ !....

ಕಾನೂರು ಹೆಗ್ಗಡಿತಿ, ಪಾತ್ರ ಹೂವಯ್ಯ, ಪುಟ ೧೭೬

೧೭೪೦

ಚೆಲುವಿಗೆ ಸೊಬಗಿನಾಶೆ !

ಚಂದ್ರಹಾಸ, ಪಾತ್ರ ಮದನ, ಪುಟ ೫೭

೧೭೪೧

ಮಹಾ ಕಾರ್ಯದಲಿ ತೊಡಗುವಾತಗೆ ಉತ್ತೇಜನ ಕೊಡುವುದು ಸುಸಂಸ್ಕೃತರ ಕರ್ತವ್ಯ. ಅದಕೆ ಬದಲಾಗಿ ಆತನನ್ನು ಅಲ್ಲಗಳೆದು, ಆತನ ಅಪಜಯ ಮೃತ್ಯುಗಳನ್ನು ಸಾರುವುದು ಕುಸಂಸ್ಕೃತರ ಕಾರ್ಯವಲ್ಲದೆ ಮತ್ತೇನು ?

ಕಾವ್ಯವಿಹಾರ, ಕುಮಾರವ್ಯಾಸನ ದುರಂತ ಕರ್ಣ, ಪುಟ ೫೯

೧೭೪೨

ಹಣತೆಗೆ ಎಣ್ಣೆ ಬತ್ತಿಗಳನ್ನು ಹಾಕಿದ ಮಾತ್ರದಿಂದ ಬೆಳಕು ಉಂಟಾಗುವುದಿಲ್ಲ. ತೇಜಸ್ಸು ಬರಬೇಕಾದರೆ ಉರಿಯುವ ಮತ್ತೊಂದು ಸೊಡರಿನ ಸಂಪರ್ಕದಿಂದಲೇ ಸಾಧ್ಯ. ಅಂತಹ ತೇಜಸ್ಸೇ ನಿಜವಾದ ವಿದ್ಯೆಯ ಚರಮೋದ್ದೇಶ ಮತ್ತು ಪರಮಸಾರ್ಥಕತೆ.

ಇತ್ಯಾದಿ, ಉಪನಿಷತ್ತಿನ ಋಷಿಯ 'ದರ್ಶನ', ಪುಟ ೭೦

೧೭೪೩

ಪೇಳ್ವವಂಗರಿಯದಿರೆ
ಕೇಳ್ವ ರಸಿಕಂಗರಿಯದಿಹುದೆ ವರಕೃತಿ ಮಹಿಮೆ ?
ತನ್ನ ತಾನರಿಯದು ಮಹತ್ತು, ಕೈ ಮುಗಿಯದಿರೆ
ಜಗತ್ತು.

ಜೇನಾಗುವಾ, ಗರ್ಭಗುಡಿ, ಪುಟ ೧೮

೧೭೪೪

ಗರುಡಗಹಿಯೆಂತಂತೆ ದೊರೆಗಳೆಂದರೆ ನನಗೆ !

ಕೃತ್ತಿಕೆ, ಅಶೋಕ ಚಕ್ರವರ್ತಿ, ಪುಟ ೫೯

ಅಪಮಾನಕಿಂತ ಸಾವೇ ಲೇಸು.

ಕಾನೀನ, ಪಾತ್ರ ಕುಂತಿ, ಪುಟ ೪

೧೭೪೬

ಯಾವ ಗುಡಿಯಲ್ಲಿ ಕಡಲಿನಂತಹ ಪಂಚಪಾತ್ರೆ ಇದೆ ? ಆಕಾಶದಂತಹ ಗೋಪುರವಿದೆ ? ಸೂರ್ಯ ಚಂದ್ರ ತಾರಕೆಗಳಂತಹ ದೀಪಗಳಿವೆ ? ಮಾನವ ರಂಥಾ ಸಜೀವರಾದ, ಪ್ರೇಮಮಯರಾದ, ಸಮಯಕ್ಕೊದಗುವ ವಿಗ್ರಹಗಳಿವೆ ? ಜಗತ್ತಿನ ಕಲ್ಯಾಣಕ್ಕಾಗಿ ಪರಮಾತ್ಮನು ತೋರಿರುವ ಕೃಪೆಯಲ್ಲಿ ಆತನ ಕರುಣೆಯನ್ನು ತಿಳಿಯುವಷ್ಟು ಸುಲಭವಾಗಿ ಇನ್ನಾವ ಗುಡಿಯಲ್ಲಿ ಆತನ ಕೃಪೆಯನ್ನು

ಅನುಭವಿಸಬಲ್ಲೆವು ? ವಿಹಂಗಮಗಾನಕ್ಕೆ ಸರಿಸಾಟಿಯಾದ ಸ್ವರಮೇಳವು ಯಾವ ದೇವರ ನಿಲಯದಲ್ಲಿದೆ ? ವನಮಾಲೆಗಿಂತಲೂ ದಿವ್ಯವಾದ ಹೂಮಾಲೆ ಯಾವುದಿರುವುದು ? ಹೃದಯದಲ್ಲಿ ಬರೆದ ಧರ್ಮಶಾಸ್ತ್ರಕ್ಕಿಂತಲೂ ಉತ್ಕೃಷ್ಟವಾದ ಧರ್ಮಶಾಸ್ತ್ರವಿದೆಯೇ ? ದಂಪತಿಗಳ ಅನ್ಯೋನ್ಯವಾದ ಆತ್ಮಯಜ್ಞಕ್ಕಿಂತಲೂ ಹೆಚ್ಚಿನ ಯಜ್ಞವುಂಟೇ ? ಪರಮಾತ್ಮನ ಸ್ವಂತ ಯಜ್ಞಭೂಮಿಯಾದ ಮಾನವನ ಹೃದಯಕ್ಕಿಂತಲೂ ಶ್ರೇಷ್ಠವಾದ ಕ್ರತುಪೀಠವಿದೆಯೇ ? ಹೊಳೆ ತೊರೆ ಕೆರೆಗಳ ನಿರ್ಮಲವಾದ ಅಗ್ರೋದಕಕ್ಕಿಂತಲೂ ದಿವ್ಯವಾದ ತೀರ್ಥ ಬೇರೊಂದಿದೆಯೇ ?

ಇತ್ಯಾದಿ. ಪ್ರಕೃತಿ ಸೌಂದರ್ಯ, ಪುಟ ೧೫

೧೭೪೭

ಸಿರಿಯತನದೊಳೆನ್ನ ಮೀರಿ
ದವರು ಇದ್ದರು ;
ಬಿಜ್ಜೆಯಲ್ಲಿ ಎನ್ನ ಮೀರಿ
ಹಿರಿಯರಿದ್ದರು ;
ಪದವಿಯಲ್ಲಿ ಎನ್ನ ದಾಂಟಿ
ದಿತರರಿದ್ದರು ;
ಅವರನೆಲ್ಲ ಬಿಟ್ಟು ಬಂದೆ
ಎನ್ನ ಎದೆಯ ಮೆಚ್ಚಿ ನಿಂದೆ ;
ಗಾಳಿಯಂತೆ ಎನ್ನ ಕುರುಳಿ
ನೋಳಿಯಲ್ಲಿ ಸರಸವಾಡಿ,
ಎನ್ನ ಎದೆಯ ಬಿಟ್ಟ ಬನಕೆ
ನೀನೆ ಚೈತ್ರವಾದೆ, ರಮಣಿ,
ಕಬ್ಬದಂಗನೆ !

ಕೊಳಲು, ಕವಿತೆಗೆ, ಪುಟ ೭

೧೭೪೮

ಕೊನೆ ದೊರೆಯ ಕೊರಳಿಗಾ ಕೊನೆ ಪುರೋಹಿತನ ಕರುಳ್
ಉರುಳಾಗುವಾವರೆಗೆ ಸುಖವಿಲ್ಲ ಈ ಧರೆಗೆ !

ಜಲಗಾರ, ಪಾತ್ರ ಎರಡನೆಯ ತರುಣ, ಪುಟ ೧೬

೧೭೪೯

ಮಹಿಮೆಯಾ ಜೀವಿತವದೊಂದು ದಿನವಾದರೇನು ?
ಹೀನವಾಗಿಹ ಬಾಳು ಯುಗ ಯುಗಗಳಿದ್ದರೇನು ?

ಕೊಳಲು, ಮಳೆಬಿಲ್ಲು, ಪುಟ ೧೯

೧೭೫೦

ಕವಿತೆ ಏಕಾಂತ ಧ್ಯಾನದಿಂದ ಹೊರಸೂಸುವ ಗಾನ. ಅದು ಹಳೆಯದನ್ನು ಹೊಸತು ಮಾಡಿ ನಮ್ಮ ಭಾವಗಳಿಗೆ ನಿತ್ಯ ಯೌವನವನ್ನು ದಾನ ಮಾಡುತ್ತದೆ. ಅದರ ತತ್ತ್ವವು ಸರ್ವಕಾಲ ಸರ್ವದೇಶಗತವಾದುದು.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೧೦

೧೭೫೧

ಈ ಇಂಗ್ಲಿಷ್ ಚಪ್ಪಡಿಯ ಭಾರಾಪಘಾತದಿಂದ ಜನ ಸಾಮಾನ್ಯರ ಬಹು ಸಂಖ್ಯಾತ ಮಕ್ಕಳನ್ನು ಪಾರುಮಾಡಿ ರಕ್ಷಿಸದಿದ್ದರೆ ನಾವು ವಿದ್ಯಾಭ್ಯಾಸಕ್ಕಾಗಿ ವ್ಯಯ ಮಾಡುತ್ತಿರುವ ಕೋಟ್ಯಂತರ ರೂಪಾಯಿ ನೀರಿನಲ್ಲಿ ಮಾಡಿದ ಹೋಮವಾಗುತ್ತದೆ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೧೬

೧೭೫೨

ನಾ ನಿಲ್ಲದೀ ವಿಶ್ವ
ಏನಾದರೇನು ?

ಮಂತ್ರಾಕ್ಷತೆ, ಪುಟ ೧೫

೧೭೫೩

ಜ್ಯೋತಿಷ್ಯದಿಂದ ಉದ್ಬುದ್ಧವಾಗುವ ಶ್ರದ್ಧಾಭಕ್ತಿಯ ಅಂಶದಿಂದ ಒಳ್ಳಿತಾದರೂ ಆ ವೈಚಾರಿಕ ಮತ್ತು ಅವೈಜ್ಞಾನಿಕವಾದ ಅದರ ಕ್ರಿಯಾಚಾರದ ಅಂಶವನ್ನು ಅಂಧ ಹೃದಯದಿಂದ ಅನುಸರಿಸುವುದರಿಂದ ಹಾನಿ ತಪ್ಪುವುದಿಲ್ಲ.

ಮಲೆಗಳಲ್ಲಿ ಮದುಮಗಳು, ಪುಟ ೩೧೭

೧೭೫೪

ಜೀವಪ್ರವಾಹ ಪೂರ್ಣವನರಿಯಲೆಂದಲ್ತು ಜೀವನದ ಉಪಯೋಗಕೆ
ಖಂಡನಾಸಾಧ್ಯವಹ ಕಾಲಪ್ರವಾಹಮಂ
ಖಂಡಿಸುತೆ, ಚಲನೆಯಂ ಕೊಂದು ನಿಶ್ಚಲಗೈದು,
ಕಂಡನೆನೆ ಬುದ್ಧಿ, ಸತ್ಯದ ಶವವನುಂಡಂತೆ ! ಮಾರ್ಗಮಲ್ತದು
ಯೋಗಕೆ.

ಅಗ್ನಿಹಂಸ, ಮುಕ್ತ ಮಹಾಪುರುಷನಿಗೆ, ಪುಟ ೫೩

೧೭೫೫

ಸಿರಿಯು ಸರಸತಿ ಧರಾರಮಣಿಯಿವರೆಲ್ಲರೂ
ಬರಿದೆ ವರವೀಯುವರು ತಮ್ಮನುಳಿದು ;
ಪರಮಾತ್ಮ, ನಿನ್ನನ್ನೇ ಬಯಸುತಿಹ ಎನಗೆ ನೀ
ವರವೀಯೆ ; ನೀನೆ ವರವಾಗಿ ಬರುವೆ !

ಷೋಡಶಿ, ನೀನೆ ವರವಾಗಿ ಬರುವೆ, ಪುಟ ೧೦

೧೭೫೬

ಸೌಂದರ್ಯಾನುಭೂತಿ ಭಾವಾಂಶದಲ್ಲಿ ಪ್ರವಹಿಸಿ ಸಹೃದಯನ ರಸಾನುಭವಕ್ಕೆ ಕಾರಣವಾಗುತ್ತದೆ ; ಚಿಂತನಾಂಶದಲ್ಲಿ ಪ್ರವಹಿಸಿ ದರ್ಶನಾಂಶವಾದ ವಸ್ತು ಧ್ವನಿಗೆ ಮಾರ್ಗವಾಗುತ್ತದೆ. ಕಥನ ಕಲೆ, ಪ್ರತಿಮಾ ಸೃಷ್ಟಿ, ಸನ್ನಿವೇಶ ರಚನೆ ಇತ್ಯಾದಿ ಕಲ್ಪನಾಂಶ ದಲ್ಲಿ ಪ್ರವಹಿಸಿ ಚಾರುತ್ವದಾಯಿಯಾದ ಕಾರಯಿತ್ರೀ ಪ್ರತಿಭೆಯ ಅಂಗವಾಗುತ್ತದೆ ; ಭಾಷಾ ರೂಪಾಂಶದಲ್ಲಿ ಪ್ರವಹಿಸಿ ರೀತಿಯ, ಮಾರ್ಗದ, ಶೈಲಿಯ ಮನೋಹರತೆ ಯಲ್ಲಿ ಪರಿಣಾಮಗೊಳ್ಳುತ್ತದೆ.

ರಸೋ ವೈ ಸಃ, ರಸಾನುಭವದ ಅಲೌಕಿಕತೆ, ಪುಟ ೧೯

೧೭೫೭

ಜನರು ! ಕುರಿಗಳ ಹಿಂಡು !
ಅವರೇನು ಬಲ್ಲರು ?

ಕಾನೀನ, ಪಾತ್ರ ಕೌರವ, ಪುಟ ೩೦

೧೭೫೮

ಪ್ರಬಲವಾಗಿದ್ದ ಮನೆತನ ಒಡೆದು ಹೋದರೆ ಪ್ರಬಲರಾಗಬೇಕೆಂಬ ಇತರರಿಗೆ ಒಳ್ಳೆಯ ಅವಕಾಶ ಸಿಕ್ಕಿದಂತಾಗುವುದಿಲ್ಲವೆ ?

ಕಾನೂರು ಹೆಗ್ಗಡಿತಿ, ಪುಟ ೩೪೮

೧೭೫೯

ಪೃಥ್ವಿಯಲಿ ಕ್ಲೇಶಕಷ್ಟಗಳೆಲ್ಲ ಕೊನೆಮುಟ್ಟಿ
ಸರ್ವರೂ ರಸದ್ರಷ್ಟರಾಗಿ, 'ದರ್ಶನ' ಪಡೆದು,
ಕಾವ್ಯದಾಸ್ವಾದನೆಗೆ, ಸೌಂದರ್ಯಸಾಧನೆಗೆ,
ಕಲೆಯ ಆರಾಧನೆಗೆ, ಮನವೀಯುವಾ ಮಣ್ಣು
ಸ್ವರ್ಗವೆಂದೈತರುವುದೋ ಕಾಣೆ !

ಪಕ್ಷಿಕಾಶಿ, ಪ್ರಕೃತಿ ಉಪಾಸನೆ, ಪುಟ ೨೪

೧೭೬೦

ದ್ರಷ್ಟಾರನಾದ ಕವಿಯ ಪೂರ್ಣ ದೃಷ್ಟಿಗೆ ಪ್ರಕೃತಿ ಮರ್ತ್ಯಗೋಚರವಾದ ಜಗತ್ತಷ್ಟರಿಂದಲೆ ಪೂರೈಸುವುದಿಲ್ಲ. ಅವಳು ಉರ್ವರೆಯೂ ಹೌದು, ವಿಶ್ವಂಭರೆಯೂ ಹೌದು, ಅಂತರ್ಯಾಮಿಯೂ ಹೌದು, ಅತೀತೆಯೂ ಹೌದು. ಅವಳು ಸೃಷ್ಟಿರತಿ, ಕಲಾಸುಂದರಿ, ಜಗದ್ಧಾತ್ರಿ, ಜಗಜ್ಜನನಿ, ಮಹಾಮಾಯೆ, ಆದಿಶಕ್ತಿ. ಸೃಷ್ಟಿಯೆಲ್ಲ ಅವಳ ಲೀಲಾವ್ಯಕ್ತಿ ; ಜನನ ಮರಣ ಕಾಲ ದೇಶಗಳು ಅವಳ ನರ್ತನದ ಚರಣನ್ಯಾಸಗಳು.

ವಿಭೂತಿ ಪೂಜೆ, ಕವಿಯ ದೃಷ್ಟಿಯಲ್ಲಿ ಪ್ರಕೃತಿ, ಪುಟ ೩೦

೧೭೬೧

ವಾಕ್ ಚಪಲೆ ಸಂಚಾರಿ ; ಮೌನವೆ ಚಿರಸ್ಥಾಯಿ.

ಕೃತ್ತಿಕೆ, ಎಚ್ಚರಿಕೆ, ಪುಟ ೩೩

೧೭೬೨

ಊರು ಬಿಟ್ಟು ನಾವು ಬಹು ದೂರದಲ್ಲಿರುವಾಗ ನಮ್ಮೂರಿನವರು ಯಾರಾದರಾಗಲಿ ಒಬ್ಬರು ಅಲ್ಲಿಗೆ ಬಂದರೆ ನಮಗೆಷ್ಟು ಸಂತೋಷವೊ ಹಾಗೆಯೆ ಬಾಲ್ಯವನ್ನು ಬಿಟ್ಟು ಬಹುದೂರ ಕಾಲವಾಹಿನಿಯಲ್ಲಿ ತೇಲಿ ಹೋದ ಮೇಲೆ ಬಾಲ್ಯ ಜೀವನದ ಸ್ಮೃತಿಯನ್ನು ತಂದುಕೊಡುವ ಪ್ರತಿಯೊಂದು ವಸ್ತುವೂ ನಮಗೆ ಪ್ರಿಯವಾಗುತ್ತದೆ.

ನನ್ನ ದೇವರು ಮತ್ತು ಇತರ ಕಥೆಗಳು, ಔದಾರ್ಯ, ಪಾತ್ರ ಕಥಾನಾಯಕ, ಪುಟ ೪೦

೧೭೬೩

ಬಸವಲಿಂಗಪ್ಪನವರು ಅವೊತ್ತೇನೊ ಎಲ್ಲಾ ಸಾಹಿತ್ಯ ಬೂಸಾ ಅಂತ ಹೇಳಿಬಿಟ್ಟರು ಅಂತ ಗಲಾಟೆಯೋ ಗಲಾಟೆ ಮಾಡಿ, ಮಂತ್ರಿ ಮಂಡಲ ಉರುಳಿ, ದೊಡ್ಡ ರಾಜಕೀಯ ವಿಪ್ಲವವೇ ಆಗಿ ಹೋಯಿತು. ಆದರೆ ನೋಡಿ, ಈ ಬೂಸಾ ಸಾಹಿತ್ಯ ಅಂತ ಯಾವುದನ್ನು ಕರೆಯುತ್ತೇವೆಯೋ, ಅದು ಪ್ರಪಂಚದ ಎಲ್ಲಾ ಸಾಹಿತ್ಯದಲ್ಲಿಯೂ ಇರುತ್ತದೆ ; ಸುಮಾರು ಮುಕ್ಕಾಲು ಪಾಲಿನ ಮೇಲೆ ಇರುವುದು ಬೂಸಾ ಸಾಹಿತ್ಯವೆ.

ವಿಚಾರ ಕ್ರಾಂತಿಗೆ ಆಹ್ವಾನ, ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ, ಪುಟ ೬೩

೧೭೬೪

ಪರಸತಿಗಳುಪುವಳಿಯಾಸೆ
ಈ ಸಿರಿಯ ಸೊರ್ಕಿಗಲ್ಲದೆ ಸಲ್ಲದಿತರತೆಗೆ :– ಚಿಃ
ಪೊಲ್ಲಮೀ ವೈಭವಂ ! ಸಲ್ಲದೀ ನಾರಕಕೆ,
ಪೊನ್ನಾದೊಡಂ, ಪೊಗಳ್ಕೆ !

ಶ್ರೀ ರಾಮಾಯಣ ದರ್ಶನಂ, ದಶಶಿರ ಕನಕಲಕ್ಷ್ಮಿ, ಪಾತ್ರ ಆಂಜನೇಯ, ಪುಟ ೪೩೬

೧೭೬೫

ಉದ್ಧಾರದಲ್ಲಿ ನೆಚ್ಚಿರುವ ಪ್ರತಿಯೊಬ್ಬರಿಗೂ ತರುಣ ರಕ್ತದ ಕುದಿದಾಟವು ಆಶಾಜನಕವಾಗಬೇಕು, ಅಭಿಮಾನದ ವಿಷಯವಾಗಬೇಕು.

ಸ್ವಾಮಿ ವಿವೇಕಾನಂದ, ಪುಟ ೪೯

೧೭೬೬

ಬ್ರಹ್ಮ ಸತ್ತೆಯನಾ ಪರಬ್ರಹ್ಮ ಸತ್ತೆಯಿಂ
ಮಾತ್ರಮೆಯೆ ದರ್ಶಿಸುತಿದಂ ಮಿಥ್ಯೆಯೆಂಬುದೇಂ
ಪೂರ್ಣ ಸತ್ಯಮೆ ? ಯೋಗ ವಿಜ್ಞಾನಮೊಪ್ಪದು ಕಣಾ !
ಪೂರ್ಣಮದು ; ಪೂರ್ಣಮಿದು ; ಪೂರ್ಣದಿಂ ಬಂದುದೀ

ಪೂರ್ಣಮಾ ಪೂರ್ಣದಿಂ ಪೂರ್ಣಮಂ ಕಳೆದೊಡಂ
ಪೂರ್ಣಮೆಯೆ ತಾನುಳಿವುದಾ ಪ್ರಜ್ಞೆಗದುವಿದುಂ
ಸರ್ವಮುಂ ಸತ್ಯದಾವಿಷ್ಕಾರ ವಿನ್ಯಾಸಗಳ್.

ಶ್ರೀ ರಾಮಾಯಣ ದರ್ಶನಂ, ಕವಿಕ್ರತು ದರ್ಶನಂ, ಪುಟ ೧೫

೧೭೬೭

ಪ್ರತಿಭಾಶಾಲಿಯಾದ ವಿದ್ಯಾರ್ಥಿಯ ಲಕ್ಷ್ಯ ಅಂತರಿಕ್ಷೋನ್ನತವಾಗಿರಬೇಕು; ವಿಶ್ವವ್ಯಾಪಿಯಾಗುವ ಅನಂತ ಸಾಹಸದಲ್ಲಿ ನಿರಂತರವಾಗಿರಬೇಕು. ಅವನ ಮಿತಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದುವ ಮತ್ತು ಪಾರಿತೋಷಕಗಳನ್ನು ಪಡೆಯುವ ಅಲ್ಪ ತೃಪ್ತಿಯ ಉಸುಬಿನಲ್ಲಿ ಹೂತು ನಡೆಗೆಡಬಾರದು. ಪಠ್ಯ ಪುಸ್ತಕಗಳ ಮಿತವಲಯದಲ್ಲಿ ಸೆರೆಯಾಗಿರದೆ ವಾಙ್ಮಯ ಜಗತ್ತಿನ ವಿಶ್ವ ವಿಶಾಲತೆಯಲ್ಲಿ ರಸಯಾತ್ರಿಯಾಗಬೇಕು. ಅಲ್ಲಿಯ ಮಹದ್ ವ್ಯಕ್ತಿಗಳೊಡನೆ ಸ್ನೇಹ ಬೆಳಸಬೇಕು ; ಅವರೊಡನೆ ಹೋರಾಡಬೇಕು ; ಅವರಿಗೆ ಶರಣು ಹೋಗಬೇಕು ; ಪೂಜೆ ನಮಸ್ಕಾರಗಳಿಂದಲೆ ಅವರನ್ನು ಗೆದ್ದು, ಅವರ ಐಶ್ವರ್ಯವನ್ನು ದೋಚಬೇಕು ; ಅವರ ಗರಡಿಯಲ್ಲಿ ಅವರೊಡನೆಯೆ ಸಾಧನೆಮಾಡಿ ಜಗಜಟ್ಟಿಗಳಾಗಬೇಕು ; ಅಲ್ಲಿಯ ಗರಡಿಯಾಚಾರ್ಯರಲ್ಲಿ ಕೃಪಣತೆಯಿಲ್ಲ, ಕರುಬಿಲ್ಲ, ತೆರೆದ ಮನೆಯಂತೆ, ಬಿಚ್ಚಿದ ಕೈಯಂತೆ, ಅಕ್ಷಯ ಪಾತ್ರೆಯಂತೆ ಅವರು ಉದಾರಿಗಳು,

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಲ್ಲಿ ಮತಿ ಗೌರವದ ಆವಶ್ಯಕತೆ, ಪುಟ ೩೮–೯

೧೭೬೮

ದೇಶವು ಸರ್ವತೋಮುಖವಾಗಿ ಎಚ್ಚರಗೊಳ್ಳುತ್ತಿರುವ ಕಾಲವಿದು. ಎಲ್ಲೆಲ್ಲಿಯೂ ಎಲ್ಲ ಶಾಖೆಗಳಲ್ಲಿಯೂ ಕೆಲಸಗಾರರು ಬೇಕಾಗಿದ್ದಾರೆ. ಸಂಘಬದ್ಧರಾಗಿಯೊ, ಸಂಸ್ಥೆಗಳಿಗೆ ಸದಸ್ಯರಾಗಿಯೊ, ಅಥವಾ ವ್ಯಕ್ತಿಶಃವಾಗಿಯೊ ಎಲ್ಲರೂ ಕಾರ್ಯೋನ್ಮುಖರಾಗಬೇಕು, ಆ ಕಾರ್ಯಗಳ ರೀತಿ ನೀತಿ ವಲಯ ವಿಸ್ತಾರಗಳನ್ನು ಯಾರೊಬ್ಬರೂ ನಿಷ್ಕರ್ಷಿಸಿ ಹೇಳಲಾರರು. ಆಯಾ ಸನ್ನಿವೇಶಕ್ಕೆ ತಕ್ಕಂತೆ ಅವರವರ ಮನೋಧರ್ಮ ಆತ್ಮಾನುಭವ ಅಭಿರುಚಿ ಉದ್ದೇಶಗಳಿಗೆ ತಕ್ಕಂತೆ ಕಾರ್ಯಾರಂಭ ಮಾಡಬೇಕು.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ಪುಟ ೧೨

೧೭೬೯

ಸೌಂದರ್ಯವಲ್ಲ ಕಲೆ.
ಕಲೆ ನನ್ನಿಗೊರ್ದಾರಿ ; ನಿನ್ನ ಸೊಬಗಿಂಗೆ ನೆಲೆ.

ಕೃತ್ತಿಕೆ, ಕಲೆ ಮತ್ತು ನೀನು, ಪುಟ ೨೪

೧೭೭೦

ವಿಶ್ವವಿದ್ಯಾನಿಲಯಗಳು ಅಣೆಕಟ್ಟುಗಳಂತಲ್ಲ ; ಕಾಗದದ, ಉಕ್ಕಿನ ಅಥವಾ ಹೆಂಚಿನ ಕಾರ್ಖಾನೆಗಳಂತಲ್ಲ. ಅವುಗಳಿಂದ ಸಿದ್ಧವಾಗುವ ತಯಾರಿಕೆಗಳನ್ನು

ಕಾರ್ಖಾನೆಯ ಸಿದ್ಧ ಪದಾರ್ಥಗಳನ್ನು ಪರೀಕ್ಷಿಸುವಂತೆ ಪರಿಶೀಲಿಸಿ ಬೆಲೆಕಟ್ಟು ವಂತಿಲ್ಲ. ಅವುಗಳಿಂದ ಹೊರಬೀಳುವ ವಸ್ತುಗಳು ಸಜೀವವಾದುವು ; ಸಚೇತನವಾದುವು. ಒಂದೊಂದೂ ತನ್ನ ವಿಶಿಷ್ಟತೆಯಿಂದ ನಿರುಪಮವಾದುದು.

ಮನುಜಮತ ವಿಶ್ವಪಥ, ಪ್ರಾದೇಶಿಕ ವೈಶಿಷ್ಟ್ಯದ ರಕ್ಷಣೆ, ಪುಟ ೧೭

೧೭೭೧

ಬಾಳ್ಗಬ್ಬದೊಳ್ ಕರುಣೆ ತಾಂ ಬೇನೆಗುದಿದೊಡಮಲ್ತೆ
ಮೆರೆದಪುದು ಪೊರಪೊಣ್ಮುತಾ ಮಹಾಕಾವ್ಯ ಶಿಶು ತಾಂ
ಚಾರು ವಾಗ್‌ವೈಖರಿಯ ಛಂದಶ್ಶರೀರದಿಂ ?

ಶ್ರೀ ರಾಮಾಯಣ ದರ್ಶನಂ, ಕವಿಕ್ರತು ದರ್ಶನಂ, ಪುಟ ೧೪

೧೭೭೨

ಅನಾರೋಗ್ಯವಿರುವವರಿಗೆ ಕನಸಿಲ್ಲದ ನಿದ್ದೆ ಬರುವುದೆ ದುರ್ಲಭ.

ನನ್ನ ದೇವರು ಮತ್ತು ಇತರ ಕಥೆಗಳು, ಸಾಲದ ಮಗು, ಪುಟ ೧೮

೧೭೭೩

ಜನಜೀವನದ ನದಿ ಹರಿದ ಮೇಲೆ ಸಿದ್ಧವಾಗುವ ನದೀಪಾತ್ರಮಾತ್ರದಂತಲ್ಲ ಸಾಹಿತ್ಯ ; ನದಿಯ ನೀರನ್ನೂ ಸೃಜಿಸಿ, ಅದು ಹರಿಯುವ ದಿಕ್ಕನ್ನೂ ಹರಿಯಬೇಕಾದ ದಾರಿಯನ್ನೂ ನಿರ್ಣಯಿಸುವ ಚೇತನಶಕ್ತಿಯೂ ಹೌದು. ರಸರತಿ ಆ ಚೇತನಶಕ್ತಿ, ಸೃಷ್ಟಿಮೂಲವಾಗಿರುವುದರಿಂದ, ಅದು ಸೃಷ್ಟಿಹೃದಯದಲ್ಲಿ ಸದಾ ಸ್ಪಂದಿಸುತ್ತಿರುವುದರಿಂದ, ಸೃಷ್ಟಿದೇವಿಯಾದ ಮಹಾಲಕ್ಷ್ಮಿಯಂತೆ ವಾಗ್ದೇವಿಯಾದ ಮಹಾಸರಸ್ವತಿಯೂ ಯಾವಾಗಲೂ ಹೊಸ ಹೊಸದಾಗಿ ನವನವೀನ ಪ್ರಕಾರಗಳಲ್ಲಿ ಪ್ರವಾಹ ಲೋಲೆಯಾಗಿರುವ ನವನವೋನ್ಮೇಷಶಾಲಿನಿ ಮತ್ತು ಕ್ರಾಂತಿದರ್ಶಿನಿ.

ವಿಭೂತಿ ಪೂಜೆ, ಇಂದಿನ ಹೊಸಗನ್ನಡ ಕವಿತೆ, ಪುಟ ೧೯

೧೭೭೪

ಹಗಲಿರುಳೂ ನಿನ್ನನರಿತವರಂತೆ ನಿನ್ನನು
ಕುರಿತು ಮಾತಾಡುತಿಹರು.
ನಿನಗಿಂತಲೂ ನಿನ್ನನು ಕುರಿತ ಹರಟೆಯೆ
ಇವರಿಗೆ ರುಚಿಕರವಾಗಿದೆ !
ಸೂತ್ರಬದ್ಧವಾಗುವವರೆಗೂ ಮಾಧುರ್ಯ
ಮಧುರವಾಗದೆಂದು ಇವರ ನಂಬುಗೆ ಇರುವಂತೆ
ತೋರುತಿದೆ.

ಕಿಂಕಿಣಿ, ಮಕರಂದ ಮೌನಿ, ಪುಟ ೩೪

೧೭೭೫

ಎಲ್ಲರೂ ತಮ್ಮ ತಮ್ಮ ದಾರಿಗಳನ್ನರಿತು ಭಕ್ತಿಯಿಂದ ಭಗವಂತನೆಡೆಗೆ ಸಾಗುವುದರ ಜೊತೆಗೆ, ಅನ್ಯಮತಗಳನ್ನು ಸಹಾನುಭೂತಿಯಿಂದ ಅರಿತು, ಇತರರ

ಸಾಮಾಜಿಕ ಜೀವನದೊಂದಿಗೆ ಮೈತ್ರಿಯಿಂದ ಬೆರೆತು, ಭಾಗವಹಿಸಿ, ರಾಷ್ಟ್ರದ ಜನರಲ್ಲಿ, ಸಹೋದರಭಾವವನ್ನೂ ಐಕಮತ್ಯದ ಬುದ್ಧಿಯನ್ನೂ ನೆಲೆಗೊಳಿಸಬೇಕು. ಈ ಕೆಲಸದ ಹೊರೆಯ ಮತ್ತು ಹೊಣೆಯ ಮುಕ್ಕಾಲು ಮೂರು ವೀಸ ಪಾಲು ಸಾಹಿತ್ಯದ್ದಾಗಿದೆ. ಆದ್ದರಿಂದ ಸಾಹಿತಿ ಅಥವಾ ಲೇಖಕನಾಗುವವನು ತನ್ನ ಸ್ವಂತಜೀವನದಲ್ಲಿ ಈ ವಿಶಾಲ ಮನೋಧರ್ಮವನ್ನು ಸ್ಥಾಪಿಸಿಕೊಳ್ಳುವುದು ಅಗತ್ಯ

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೩೬

೧೭೭೬

ಯಾರೂ ನೋಡದೆ ಬಾಡುವ ಹೂವಿದು
ನಾಡಿನ ಕಣ್ಣಿಗೆ ಕಣ್ಣಾಯ್ತು ;
ಹೇ ಗುರುದೇವನೆ, ನಿನ್ನ ಪರುಸದಲಿ
ಗೋಡದ ಮಣ್ಣಿದು ಹೊನ್ನಾಯ್ತು !

ಕಲಾಸುಂದರಿ, ಪಂಕಜ, ಪುಟ ೫೬

೧೭೭೭

ಇತರರೆನ್ನನು ಹೊಗಳುವರು ಎಂದು ನೀನೇಕೆ
ಹೊಗಳುತಿಹೆ ? ಇತರರೇನನು ಕೊಡರು. ಅದಕಾಗಿ
ಹೊಗಳಿಕೆಯ (ನುಡಿಯ ಕೊಡುಗೆಯ) ಕೊಡುತಿಹರು.

ಕೃತ್ತಿಕೆ, ಮಲೆನಾಡಿಗೆ, ಪುಟ ೩೪

೧೭೭೮

ಉತ್ತಮವಾದುದು ಶ್ರಮವಿಲ್ಲದೆ ಲಭಿಸದು ; ಇಚ್ಛೆಯಿಲ್ಲದಿದ್ದರಂತೂ ಅದು ಸಾಧ್ಯವೇ ಅಲ್ಲ.

ಕಾವ್ಯವಿಹಾರ, ಹರಿಶ್ಚಂದ್ರಕಾವ್ಯ, ಪುಟ ೭೮

೧೭೭೯

ಬಹುಕಾಲದಿಂದ ರೂಢಿಯಲ್ಲಿರುವ ಯಾವುದಾದರೂ ಒಂದು ಅಭ್ಯಾಸ ವನ್ನು ಬಿಟ್ಟುಕೊಡುವುದು ಸಾಮಾನ್ಯ ಚೇತನಗಳಿಗೆ ಬಹಳ ಕಷ್ಟದ ವಿಷಯ.

ಮನುಜಮತ ವಿಶ್ವಪಥ, ಕದನಕ್ಕೆ ಸಜ್ಜು, ಪುಟ ೫೪

೧೭೮೦

ವಿದ್ಯಾರ್ಜನೆಗಾಗಿ ಬಂದವನು ಲೋಕಸೇವೆ ಪರೋಪಕಾರಗಳನ್ನು ಕಲಿಯ ಬಾರದೆಂದಲ್ಲ ; ವಿದ್ಯೆಯನ್ನೂ ಚೆನ್ನಾಗಿ ಸಂಪೂರ್ಣವಾಗಿ ಆರ್ಜಿಸಬೇಕು, ಎಂಬುದು ನನ್ನ ಆಕಾಂಕ್ಷೆ. ಅದೂ ಅಲ್ಲದೆ ಲೋಕಸೇವೆ ಪರೋಪಕಾರಗಳೂ ಕೂಡ ಒಂದು ವಿಧವಾದ ಅಡ್ಡಕಸುಬಿನ ಷೋಕಿಗಳಾಗುವ ಸಂಭವವೂ ಇರುತ್ತದೆ. ನಾಲ್ಕು ಮಂದಿಯ ಕಣ್ಣಿಗೆ ಬೀಳಬೇಕೆಂಬ ಚಪಲತೆಗಾಗಿಯೊ, ತಾನು ಕೈಕೊಂಡ ವಿದ್ಯಾರ್ಜನೆಯಲ್ಲಿ ಆಸಕ್ತಿ ಇಲ್ಲದುದರಿಂದ ಉಂಟಾಗುವ ಬೇಜಾರಿನ ಪರಿಹಾರಕ್ಕಾಗಿಯೊ ಅಥವಾ

ಯಾವುದೋ ಸಂಘಕ್ಕೆ ಕಾರ್ಯದರ್ಶಿಯಾಗಬೇಕು, ಅಧ್ಯಕ್ಷನಾಗಬೇಕು, ಚುನಾವಣೆಯಲ್ಲಿ ಗೆಲ್ಲಬೇಕು ಎಂಬಿವೆ ಮೊದಲಾದ ಚಪಲ ಪ್ರಕೃತಿಯ ಅಭಿಸಂಧಿಗಾಗಿಯೊ, ಸೇವಾಕಾರ್ಯಗಳಲ್ಲಿ ತನ್ನನ್ನು ತಾನೆ ಮರೆಯುವ ಹವ್ಯಾಸಕ್ಕೆ ಗೌರವಮತಿಗಳಾದ ವಿದ್ಯಾರ್ಥಿಗಳು ಹೋಗದಿರುವುದು ಲೇಸೆಂದು ನನಗೆ ತೋರುತ್ತದೆ. ಏಕೆಂದರೆ ವಿದ್ಯೆ ಭೂಮವಾಗಿದೆ ; ಸಮಯ ಸ್ವಲ್ಪವಾಗಿದೆ.

ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ, ವಿದ್ಯಾರ್ಥಿಗಳಲ್ಲಿ ಮತಿಗೌರವದ ಆವಶ್ಯಕತೆ, ಪುಟ ೩೭

೧೭೮೧

ನಮ್ಮಲ್ಲಿ ಬಹುಜನರಿಗೆ ಓದಿ ವಿಷಯವನ್ನು ತಿಳಿದುಕೊಳ್ಳುವಷ್ಟು ಇಂಗ್ಲಿಷ್ ಬಂದರೆ ಸಾಕು. ಅದಕ್ಕಿಂತ ಕಡಿಮೆ ಸಂಖ್ಯೆಯ ಜನರಿಗೆ ಇಂಗ್ಲಿಷ್ ಮಾತನಾಡುವ ಮತ್ತು ಓದುವ ಜ್ಞಾನಬೇಕು. ಅದಕ್ಕಿಂತಲೂ ಕಡಿಮೆ ಸಂಖ್ಯೆಯ ಜನರಿಗೆ ಇಂಗ್ಲಿಷ್ ಮಾತನಾಡುವ, ಓದುವ, ಬರೆಯುವ ಜ್ಞಾನಬೇಕು. ಈಗ ನನಗೆ ಸಂಸ್ಕೃತ ಮಾತನಾಡಲು ಬರುವುದಿಲ್ಲ, ಆದರೆ ಸಂಸ್ಕೃತ ಗ್ರಂಥಗಳನ್ನು ಓದಿ ವಿಷಯವನ್ನೂ ವಿಚಾರವನ್ನೂ ಗ್ರಹಿಸುತ್ತೇನೆ. ಬಂಗಾಳಿ ಭಾಷೆಯಲ್ಲಿ ಮಾತನಾಡಲು ನನಗೆ ಬರುವುದಿಲ್ಲ. ಆದರೆ ಪುಸ್ತಕಗಳನ್ನು ಓದಿ ಅದರ ವಿಚಾರವನ್ನು ಗ್ರಹಿಸಿ ಪುಷ್ಟಿಯನ್ನು ಪಡೆಯಬಲ್ಲೆ. ನಮ್ಮ ದೇಶದಲ್ಲಿ ವಿಷಯ ಪರಿಜ್ಞಾನಕ್ಕಾಗಿ ಅನೇಕರಿಗೆ ಇಂಗ್ಲಿಷ್ ಭಾಷೆಯನ್ನು ಓದಿ ಅರ್ಥಮಾಡಿಕೊಳ್ಳುವಷ್ಟು ಜ್ಞಾನವಿದ್ದರೆ ಸಾಕು.

ಷಷ್ಠಿನಮನ, ಭಾರತದಲ್ಲಿ ಇಂಗ್ಲಿಷಿನ ಸ್ಥಾನ, ಪುಟ ೧೧೮

೧೭೮೨

ಸಿಂಧು ಮಹಿಮೆಯನಳೆಯೆ
ಪೇಳ್ವನಿಯೆಣಿಕೆ ಏಕೆ ? ಮಹತೋ ಮಹೀಯಕ್ಕೆ
ಪಟ್ಟಿಯಲ್ಪತೆಯ ವಿವರಣೆಯ ಬಣ್ಣದ ನೆರಂ
ಬೇಕೆ ?

ಶ್ರೀ ರಾಮಾಯಣ ದರ್ಶನಂ, ಸುಗ್ರೀವಾಜ್ಞೆ, ಪುಟ ೩೬೮

೧೭೮೩

ಒಲುಮೆ ಒಂದು ದಿವ್ಯ ರಕ್ಷೆ
ಇಹ ಸಮಸ್ಯೆಗೆ :
ಮದುವೆ ಅದಕೆ ಮಧುರ ದೀಕ್ಷೆ
ಗೃಹತಪಸ್ಯೆಗೆ !

ಮಂತ್ರಾಕ್ಷತೆ, ಪುಟ ೨೭

೧೭೮೪

ಹುಟ್ಟುವಾಗ ಕೇವಲ ಸಂಕೇತ ಮಾತ್ರಗಳಾಗಿದ್ದು, ಅಭಿದಾವೃತ್ತಿಯಿಂದ ನಿಷ್ಕೃಷ್ಟ ಸುಸ್ಪಷ್ಟ ಪರಿಮಿತಾರ್ಥಗಳಷ್ಟನ್ನೆ ಕೊಡುತ್ತಿದ್ದ ಅನೇಕಾನೇಕ ಶಬ್ದಗಳೂ ಪದಗುಂಫನ

ಗಳೂ ಕಾಲಾನುಕ್ರಮದಲ್ಲಿ ಕವಿಪ್ರತಿಭಾವಶವಾಗಿ ಕಾವ್ಯಸೌಂದರ್ಯದಿಂದ ದೀಪ್ತವಾಗಿ, ಭಾವಾಂಶ ಕಲ್ಪನಾಂಶ ಚಿಂತನಾಂಶಗಳ ದರ್ಶನ ಭಿತ್ತಿಯನ್ನೂ ಅರ್ಥ ಪರಿವೇಷ ವನ್ನೂ ಭಾವಕೋಶವನ್ನೂ ಪಡೆದು, ಉಪಮಾ ರೂಪಕಾದಿ ಅಲಂಕಾರಗಳಾಗಿ ಕವಿಸಮಯಾದಿಗಳಾಗಿ ಪರಿವರ್ತನೆಗೊಂಡು ಪ್ರತೀಕಸ್ವರೂಪಧಾರಣೆ ಮಾಡುತ್ತವೆ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೩೬

೧೭೮೫

ಅಲ್ಲಿ ಇಲ್ಲಿ ಅಲೆದುದಾಯ್ತು
ಅವರ ಇವರ ಕಂಡುದಾಯ್ತು
ಅದನು ಇದನು ಓದಿಯಾಯ್ತು
ಹುಡುಕಿ ತಡಕಿ ನೋಡಿಯಾಯ್ತು !
ಓ ನನ್ನ ಮಾನಸಾ,
ಸಾಕು ಈ ಬಹೂದಕ :
ಆಗು ನೀ ಕುಟೀಚಕ !

ಕುಟೀಚಕ, ಕುಟೀಚಕ, ಪುಟ ೫೩

೧೭೮೬

ಲೋಕದಲ್ಲಿ ಕರ್ಮವಿಪಾಕದಿಂದಲೊ ವಿಧಿವಶದಿಂದಲೊ ಸ್ತ್ರೀಯ ಹೃದಯ ದೌರ್ಬಲ್ಯದಿಂದಲೊ ಅಥವಾ ಸನ್ನಿವೇಶ ಸಹವಾಸ ದೋಷಗಳಿಂದಲೊ ಪ್ರಲೋಭನೆ ಗಳಿಗೆ ಶರಣಾಗಿ ದಾರಿ ತಪ್ಪಿದವರನ್ನು "ಎಲೈ ಪಾಪಿಗಳೆ" ಎಂದು ಸಂಬೋಧಿಸಿ, ನರಕ ಭಯವನ್ನು ತೋರಿ, ಪುಕ್ಕಟೆಯಾಗಿ ಬುದ್ಧಿ ಹೇಳಿ ಉಪದೇಶ ಮಾಡುವ ಮುಖ್ಯಾಚಾರ್ಯರು ಎಷ್ಟೋಮಂದಿ ಇದ್ದಾರೆ. ಆದರೆ ಪಾಪಿಗಳನ್ನು ಆಲಿಂಗಿಸಿ, ಧೈರ್ಯ ಹೇಳಿ, ಸಹಾನುಭೂತಿ ತೋರಿಸಿ ಅವರನ್ನು ಉದ್ಧಾರಮಾಡುವವರು ಎಲ್ಲಿಯೋ ಬಹು ಸ್ವಲ್ಪ ಪುಣ್ಯಾತ್ಮರು. ಅಂತಹವರೆ ಪತಿತಪಾವನರು.

ಶ್ರೀ ರಾಮಕೃಷ್ಣ ಪರಮಹಂಸ, ಪುಟ ೧೬೨

೧೬೮೭

ಕವಿತೆಯೆಂದರೆ ಆತ್ಮವು ತನಗೆ ತಾನೆ ಮಾಡಿಕೊಳ್ಳುವ ಒಂದು ಅಲೌಕಿಕ ವಿಚಿತ್ರವಾದ ಸ್ವಾರಾಧನೆ. ಆನಂದವೆ ಅದರ ಶೀಲ.

ಸಾಹಿತ್ಯ ಪ್ರಚಾರ, ವಿದ್ಯಾರ್ಥಿ ಕವಿಗಳಲ್ಲಿ, ಪುಟ ೯

೧೭೮೮

ಗಿರಿ, ತೊರೆ, ಕಾನನ, ಗಗನ, ರವಿ, ಚಂದ್ರ, ಮಂದಮಾರುತ – ಮೊದಲಾ ದವು ಯಾವನ ಸ್ವಂತ ಆಸ್ತಿಗೂ ಒಳಪಟ್ಟುವಲ್ಲ. ಆದಕಾರಣ ಅವುಗಳಿಂದ ಜನ್ಯವಾದ ಆನಂದವು ಎಲ್ಲರ ಹಕ್ಕುಬಾಧ್ಯತೆಗಳಿಗೂ ನಿಲುಕತಕ್ಕದ್ದಾಗಿದೆ. ಈ ವಿಧವಾದ

ಹರುಷವು ಅಪ್ರತಿಮವಾದುದಾದರೂ ಸುಲಭ ಸಾಧ್ಯವಾಗಿರುವುದು. ಅದನ್ನು ಪಡೆಯಲು ಯಾವ ವಿಧವಾದ ಐಶ್ವರ್ಯವೂ ಬೇಡ ; ಮತ್ತು ಯಾವ ಅಧಿಕಾರ ಸಾಮರ್ಥ್ಯವೂ ಅವಶ್ಯವಿಲ್ಲ. ತೀಕ್ಷ್ಣವಾದ ಬೋಧಾಶಕ್ತಿಯೂ ಮತ್ತು ಸೂಕ್ಷ್ಮವಾದ ಸಂವೇದನೆಯೂ ಯಾವನಲ್ಲಿರುವುವೋ ಆತನಿಗೆ ಆ ದಿವ್ಯವಾದ ಸಂತೋಷವು ಬೇಗನೆ ಸಿಕ್ಕುವುದು. ಹಾಗೆಂದಮೇಲೆ ಸೌಂದರ್ಯಾನುಭವವು ಮನಸ್ಸಂಬಂಧವಾದುದೆಂದು ಹೇಳಿದಂತೆಯೆ ಆಯಿತು.

ಇತ್ಯಾದಿ, ಪ್ರಕೃತಿ ಸೌಂದರ್ಯ, ಪುಟ ೯

೧೭೮೯

ನೇತಿಯುಂ
ಸತ್ಯ ಸಾಕ್ಷಾತ್ಕಾರಕಿತಿಯಂತತುಲ ನೀತಿ.

ಶ್ರೀ ರಾಮಾಯಣ ದರ್ಶನಂ, ಸುಗ್ರೀವಾಜ್ಞೆ, ಪಾತ್ರ ಸುಗ್ರೀವ, ಪುಟ ೩೭೦

೧೭೯೦

...ಯಾವ ಒಬ್ಬ ವ್ಯಕ್ತಿಗೂ ಆತನಷ್ಟೇ ಮಹತ್ತಾಗಿರಲಿ, ದಾಸರಾಗಿ ನಮ್ಮ ಬುದ್ಧಿ ಸ್ವಾತಂತ್ರ್ಯವನ್ನು ಬಲಿ ಗೊಡುವುದು ಅಪಾಯ ; ಏಕೆಂದರೆ ಬುದ್ಧಿ ಸ್ವಾತಂತ್ರ್ಯವನ್ನು ಬಿಟ್ಟರೆ ನಾವು ಮೋಸ ಹೋಗಬಹುದು ; ಇಟ್ಟುಕೊಂಡಿದ್ದರೆ ಒಂದೆಡೆ ಮೋಸ ಹೋದರೂ ಅಲ್ಲಿಂದ ಪಾರಾಗಿ ಮತ್ತೊಂದೆಡೆಗೆ ದಾಟಿ ಸತ್ಯಾನ್ವೇಷಣೆ ಮಾಡಬಹುದು.

ಸ್ವಾಮಿ ವಿವೇಕಾನಂದ, ಪುಟ ೨೫೧

೧೭೯೧

ನಿಮ್ಮ ನುಡಿ ನಿಮ್ಮ ಗಂಡಸುತನಕ್ಕೆ ಹಿರಿಸಾಕ್ಷಿ ;
ಗೆಲವಿದ್ದರದಕೆ ನಿಮಗಿಹುದು ಶಕ್ತಿ.
ನುಡಿ ಮಡಿದರೆಲ್ಲರೂ ಮೂಕ ಜಂತುಗಳಂತೆ ;
ಬಾಲವಲ್ಲಾಡಿಪುದೆ ಪರಮ ಭಕ್ತಿ !
ಉತ್ತರದ ಕಾಣೆಯಲಿ ಕತ್ತೆ ಮಿಂದ್ಯೆ ತರಲು
ದಕ್ಷಿಣದ ದೇಶಕದು ಕುದುರೆಯಹುದೆ ?
ತಾಯಿತ್ತ ಮೊಲೆಹಾಲೆ ನಿಮ್ಮ ಮೈಗಾಗದಿರೆ
ಹೊತ್ತ ಹೊರೆ ಬಲಕಾರಿ ನೆತ್ತರಹುದೆ ?

ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಸಾಯುತಿದೆ ನಿಮ್ಮ ನುಡಿ ಓ ಕನ್ನಡದ ಕಂದರಿರ, ಪುಟ ೪೨

೧೭೯೨

ಉತ್ತಮ ಸಹೃದಯನಿಗೆ ಮುಖ ಕಂಡೊಡನೆಯೆ ಹೃದಯ ಗೋಚರವಾಗುತ್ತದೆ.

ರಸೋ ವೈ ಸಃ, ಸಾಹಿತ್ಯದಲ್ಲಿ ಪ್ರತಿಮಾ, ಪುಟ ೩೭

೧೭೯೩

ಕವಿ ಸದಾ ತತ್ತ್ವ ಶಿಖರಗಳಲ್ಲಿ ಮಾತ್ರ ನಿವಾಸಿಯಾಗುತ್ತಾನೆಂದು ತಿಳಿಯಬಾರದು, ಸಂಸಾರದ ಸುಖ ದುಃಖ ಕಷ್ಟ ಕಾರ್ಪಣ್ಯಗಳಲ್ಲಿಯೂ ಅವನು ಪ್ರವಾಸಿಯೆ. ಆದರೆ ಅವನ ಕಾಣ್ಕೆ ಬೇರೆ. ಅನುದಿನದ ಸಂಸಾರದಲ್ಲಿ, ಹೆಣ್ಣು ಗಂಡಿನ ಬಾಳಿನ ಸರಸ ವಿರಸಗಳಲ್ಲಿ, ಸಾಮಾಜಿಕ ಜೀವನದ ಶೋಕತಾಪಗಳಲ್ಲಿ, ಪ್ರಪಂಚದ ವಿವಿಧ ಪ್ರಕಾರವಾದ ರಾಜಕೀಯ ಘಟನೆಗಳಲ್ಲಿ ಅವನು ಭಗವಂತನ ಲೀಲಾ ವಿನ್ಯಾಸಗಳನ್ನೆ ಕಾಣುತ್ತಾನೆ.

ದ್ರೌಪದಿಯ ಶ್ರೀಮುಡಿ, ಕವಿಯ ಜೀವನದೃಷ್ಟಿ ಮತ್ತು ಕಾವ್ಯ ಸೃಷ್ಟಿ, ಪುಟ ೪೩

೧೭೯೪

ಬ್ರಹ್ಮಕೆ ಸೃಷ್ಟಿಯ ಮಹದಾಶೆ,
ಸೃಷ್ಟಿಗೆ ಬ್ರಹ್ಮದ ಬೃಹದಾಶೆ !

ಚಂದ್ರಮಂಚಕೆ ಬಾ ಚಕೋರಿ, ಆಶೆ, ಪುಟ ೬೬

೧೭೯೫

ಸ್ಪಷ್ಟತೆಯನ್ನು ಸಂಪಾದಿಸುವುದಕ್ಕೇನೋ ಕಷ್ಟಪಡಬೇಕು. ಮತ್ತೆ, ಹಾಗೆ ಸಂಪಾದಿಸಿದ ಸ್ಪಷ್ಟತಾ ಕರ್ಪೂರಕ್ಕೆ ಪುನಃ ಅಸ್ಪಷ್ಟತಾಗ್ನಿಯನ್ನು ಹೊತ್ತಿಸಿ ಆ ಮಂಗಳಾರತಿಯ ಕಂಪು ಹೊಗೆಯ ಬೆಳಕಿನಲ್ಲಿ ಅಥವಾ ನೀಲಿಗತ್ತಲೆಯಲ್ಲಿ ಆ ದೃಶ್ಯ ತ್ರಿವಿಕ್ರಮನನ್ನು ದೃಷ್ಟಿಸಿ ರಸಮೂರ್ಛಿತರಾಗಬೇಕು. ಏಕೆಂದರೆ, ಖಚಿತವಾದ ಸ್ಪಷ್ಟತೆಯಿಂದ ಭವ್ಯತಾ ಅನುಭವಕ್ಕೆ ಅಡಚಣೆಯಾಗುತ್ತದೆ. ಸ್ಪಷ್ಟತೆಗೂ ಅಲ್ಪತೆಗೂ ಆತ್ಮ ಸಂಬಂಧವಿರುವಂತೆ ಅಸ್ಪಷ್ಟತೆಗೂ ಭೂಮತೆಗೂ ಅಧ್ಯಾತ್ಮ ಸಂಬಂಧವಿದೆ.

ತಪೋನಂದನ, ಪಂಪನಲ್ಲಿ ಭವ್ಯತೆ, ಪುಟ ೫೫

೧೭೯೬

ನಾನು ಅಧ್ಯಾಪಕ ವರ್ಗದವರಲ್ಲಿ ಬೇಡಿಕೊಳ್ಳುವುದಿಷ್ಟೆ : .... ಎಲ್ಲ ಮತ ಧರ್ಮಗಳ ಪ್ರಾಚ್ಯ ಪಾಶ್ಚಾತ್ಯ ಮಹಾನದಿಗಳ ನೀರಿನಿಂದಲೂ ಅದು ಸಮೃದ್ಧವಾಗಲಿ. ಆದರೆ ಶೇಖರವಾದ ಆ ಜಲರಾಶಿಯನ್ನು ನಮ್ಮ ನಾಡಿನ ಜನತೆಗೆ ಹರಿಸಲು ನಮ್ಮ ಪ್ರದೇಶ ಭಾಷಾ ಪಾತ್ರಗಳನ್ನೆ ಕಾಲುವೆಗಳನ್ನಾಗಿ ತೆಗೆದುಕೊಳ್ಳಲಿ. ಹಾಗಿಲ್ಲದಿದ್ದರೆ ನಮ್ಮ ಉದ್ದೇಶವೆ ಜನತೆಯನ್ನು ಮುಟ್ಟದಂತಾಗುವುದಿಲ್ಲ.

ಷಷ್ಟಿನಮನ, ಮಾನಸ ಗಂಗೋತ್ರಿ, ಪುಟ ೭೦

ಜ್ಞಾನ ಛಂದೋ ಬದ್ಧವಾಗುವಂತೆ ಮೂರ್ಖತೆಯೂ ಛಂದೋ ಬದ್ಧವಾಗ ಬಲ್ಲದು. ಸೌಂದರ್ಯ ಛಂದೋ ಬದ್ಧವಾಗುವಂತೆ ವಿಕಾರವೂ ಆಗಬಲ್ಲುದು. ಸೊಗಸಾಗಿ ಛಂದೋ ಬದ್ಧವಾದ ಮಾತ್ರಕ್ಕೆ ಅದು ಪೂಜ್ಯ, ದಿವ್ಯ, ಗ್ರಾಹ್ಯ, ಶ್ರೇಷ್ಠ ಎಂದು ಸರ್ವಶ್ಲಾಘ್ಯವಾಗಲಾರದು. ಸಮಾಜವನ್ನಾಗಲಿ ದೇಶವನ್ನಾಗಲಿ ವ್ಯಕ್ತಿಯನ್ನಾಗಲಿ

ಉತ್ತಮತೆಯ ಕಡೆಗೊಯ್ಯುವ ಊರ್ಧ್ವಮುಖಿಯಾದ ಉದ್ಧಾರ ಶಕ್ತಿ ಎಲ್ಲೆಲ್ಲಿ ಇರುತ್ತದೆಯೊ ಅದೆಲ್ಲವೂ ಗ್ರಾಹ್ಯ, ಸ್ವೀಕಾರಯೋಗ್ಯ. ಅದಕ್ಕೆ ವಿರುದ್ಧವಾಗಿ ಅಧೋಮುಖಿಯಾದುದು ನಮಗೆ ಎಷ್ಟೆ ಸ್ವಾರಸ್ಯವಾಗಿರಲಿ ತ್ಯಾಜ್ಯ ಮತ್ತು ಖಂಡನೀಯ. ಅದರ ದಮನಕ್ಕೆ ದಾಕ್ಷಿಣ್ಯ ಅಡ್ಡ ಬರಬಾರದು ; ಏಕೆಂದರೆ ಅದರಿಂದ ಮಾನವೀಯತೆಗೆ ಹಾನಿ ಮತ್ತು ಆತ್ಮಶ್ರೀಗೆ ಗ್ಲಾನಿ.

ಷಷ್ಟಿನಮನ, ಸಂಸ್ಕೃತಿ ಕರ್ಣಾಟಕ, ಪುಟ ೩೫–೬

೧೭೮

ಗಗನದಲಿ ಕಾಣುವಾ ತಾರೆಗಳಲೆಲ್ಲಿಯೂ
ತಿರುಗಿಹೆನು ; ಆದರೇನವುಗಳಲಿ ಎಲ್ಲಿಯೂ
ಕ್ರಿಮಿಯೊಂದರಲ್ಲಿರುವ ಚೇತನದ ಕಣವಿಲ್ಲ ;
ಸ್ವೇಚ್ಛೆಯೆಂಬುವುದಿಲ್ಲ ; ಕಡೆಗೊಂದು ತೃಣವಿಲ್ಲ !
ಈ ಭೂಮಿಯೊಂದು ಕ್ರಿಮಿ ಕ್ಷಣಜೀವಿಯಾದರೂ
ತಾರೆಗಳ ಮೀರಿಹುದು : ಯುಗ ಜೀವಿಯಾದರೂ
ತನ್ನಿಚ್ಛೆ ಏನೆಂಬುದರಿಯದಿಹ ದಾಸ್ಯಂ
ಸಾವಿಗೆಣೆ. ನೇಸರ್ಗೆ ಕ್ರಿಮಿಗಿರದ ದಾಸ್ಯಂ !
ಎಲ್ಲ ಜಡತೆಯ ಬಯಕೆ ಚೈತನ್ಯಸಿದ್ಧಿಯ್ಕೆ.
ಈ ರಹಸ್ಯವನರಿತ ಮಾನವನೆ ಬುದ್ಧನ್ಯೆ !

ಕಲಾಸುಂದರಿ, ಶಿಲಾತಪಸ್ವಿ, ಪುಟ ೪೮–೯

೧೭೯

ಈಗ ಕೋಟ್ಯಾಧೀಶ್ವರರಲ್ಲದವರಾರೂ ಚುನಾವಣೆಯನ್ನು ಗೆಲ್ಲುವುದಿರಲಿ, ಚುನಾವಣೆಗೆ ನಿಲ್ಲುವುದೂ ಅಸಾಧ್ಯ. ಇನ್ನು ನಮ್ಮ ದೇಶದಲ್ಲಿ ಆ ರೀತಿಯ ಚುನಾವಣಾ ಪದ್ಧತಿಯಿಂದ ಏನೇನು ಅನಾಹುತವಾಗಬಹುದೊ ಅದೆಲ್ಲ ಆಗಿದೆ ಮತ್ತು ಆಗುತ್ತಲೂ ಇದೆ. ಜಾತಿ, ಮತ, ಹೆಂಡ, ದುಡ್ಡು ಇವೇ ಓಟರುಗಳು ; ಓಟು ಕೊಡುವ ಪ್ರಜೆಗಳು ಬರಿಯ ನಿಮಿತ್ತ ಮಾತ್ರ ಮೂಕವಾಹನಗಳಷ್ಟೆ ! ನಾಲ್ಕಾರು ಜನ ಯಾತಕ್ಕೂ ಹೇಸದ ಖದೀಮರು ಸೇರಿ, ಯಾವ ಉಪಾಯದಿಂದಾದರೂ, ಕಾಳಸಂತೆಯ ಕಪ್ಪು ಹಣವೊ, ಕಳ್ಳ ಸಾಗಾಣಿಕೆಯ ಹಳದಿ ಹಣವೊ, ಅಂತೂ ಹೆಚ್ಚು ಹಣ ಒಟ್ಟು ಮಾಡಿದರಾಯ್ತು ನಮ್ಮ ಚುನಾವಣೆಗಳಲ್ಲಿ ಗೆಲ್ಲಬಹುದು. ಒಮ್ಮೆ ಗೆದ್ದು ಅಧಿಕಾರ ಸೂತ್ರವನ್ನು ಹಿಡಿದರಾಯ್ತು, ನಾಡಿನ ಸರ್ವ ಪ್ರಚಾರ ಮಾರ್ಗಗಳನ್ನೂ ಅಧಿಕಾರದ ಭಯದಿಂದಲೂ ದುಡ್ಡಿನ ಬಲದಿಂದಲೂ ವಶಪಡಿಸಿಕೊಂಡು ತಮ್ಮ ಸರ್ವಾಧಿಕಾರಕ್ಕೆ ವ್ಯಾಘಾತ ಒದಗದಂತೆ ನೋಡಿಕೊಳ್ಳಬಹುದು. ಒಂದು ವೇಳೆ ಜನಶಕ್ತಿ ಎಚ್ಚತ್ತು ಪ್ರತಿಭಟಿಸಿದರೂ ಅದನ್ನು ವಿಫಲಗೊಳಿಸಲು ವಿಶೇಷಾಜ್ಞೆಗಳನ್ನೂ ಪೋಲೀಸ್ ಪಡೆಯನ್ನೂ ಕಡೆಗೆ ಸೈನ್ಯ ಬಲವನ್ನೂ ಪ್ರಯೋಗಿಸಬಹುದು.

ವಿಚಾರ ಕ್ರಾಂತಿಗೆ ಆಹ್ವಾನ, ವಿಚಾರ ಕ್ರಾಂತಿಗೆ ಆಹ್ವಾನ, ಪುಟ ೫

ವೆಂಕಣ್ಣಯ್ಯನವರ ವ್ಯಕ್ತಿತ್ವ ಪ್ರಖರವಾದುದಲ್ಲ, ಸೌಮ್ಯವಾದುದು. ಸೂರ್ಯಕಾಂತಿಯಂತೆ ಕಣ್ಣು ಕೋರೈಸುತ್ತಿರಲಿಲ್ಲ. ಚಂದ್ರಕಾಂತಿಯಂತೆ ಸಂಮೋಹಕವಾಗಿತ್ತು. ಇತರ ಯಾವ ಪ್ರಾಧ್ಯಾಪಕರೂ ವೆಂಕಣ್ಣಯ್ಯನವರಂತೆ ನನ್ನಲ್ಲಿ ಆತ್ಮೀಯತಾಭಾವವನ್ನುಂಟು ಮಾಡಲಿಲ್ಲ. ನನ್ನ ಪ್ರಶಂಸೆಗೂ ಗೌರವಕ್ಕೂ ಪಾತ್ರರಾಗಿದ್ದ ಪ್ರಾಧ್ಯಾಪಕರಲ್ಲಿಯೂ ನಾನು ವೆಂಕಣ್ಣಯ್ಯನವರಲ್ಲಿ ಅನುಭವಿಸಿದಂತೆ 'ಆತ್ಮೀಯತೆ'ಯನ್ನು ಅನುಭವಿಸಲು ಸಮರ್ಥನಾಗಲಿಲ್ಲ. ಇತರ ಯಾರಲ್ಲಿಯೂ 'ನಿಕಟತ್ವ' ಉಂಟಾಗಲಿಲ್ಲ. ವೆಂಕಣ್ಣಯ್ಯನವರಿಗೂ ನನಗೂ ಉಂಟಾದ ಸಂಬಂಧದಲ್ಲಿ 'ಅಕ್ಕರೆ'ಯ ಸ್ವರೂಪವಿತ್ತು. ಅವರೊಡನೆ ತುಂಬ 'ಸಲಿಗೆ'ಯಿಂದ ಇರುತ್ತಿದ್ದೆ. ಆದರೆ ಆ 'ಸಲಿಗೆ'ಯಲ್ಲಿ ಎಂದೂ 'ಲಘುತ್ವ'ವಾಗಲಿ 'ಅಗೌರವ' ಭಾವವಾಗಲಿ ಇಣುಕಿಯೂ ಇರಲಿಲ್ಲ. ನನಗೆ ಅವರಲ್ಲಿ ಯಾವಾಗಲೂ ಒಂದು ವಿಶ್ವಾಸಪೂರ್ವಕವಾದ 'ಪೂಜ್ಯ' ಭಾವನೆಯೆ ಇರುತ್ತಿತ್ತು....ವೆಂಕಣ್ಣಯ್ಯನವರಲ್ಲಿ ನನಗಿದ್ದ 'ಆತ್ಮೀಯತೆ'ಗೆ ಯಾವ ಒಂದು ಕಾರಣವನ್ನೂ ನಾನು ಒಡ್ಡಲಾರೆ. ಅದು 'ನಿಷ್ಕಾರಣ'ವಾಗಿತ್ತು. ಅಥವಾ 'ಅಕಾರಣ'ವಾಗಿತ್ತು, ಅಥವಾ 'ಅಹೇತುಕ'ವಾಗಿ ದೈವಿಕವಾಗಿತ್ತು ! ಅಂತಹ ಅಹೇತುಕ ಸ್ವರೂಪದ ವಿಶ್ವಾಸದಿಂದ ನನ್ನ ಮೇಲೆ ಪ್ರಭಾವ ಬೀರಿದವರಲ್ಲಿ ಪ್ರೊ. ವೆಂಕಣ್ಣಯ್ಯನವರು ಪೂಜ್ಯ ಸಿದ್ಧೇಶ್ವರಾನಂದರಿಗೆ ದ್ವಿತೀಯ ಮಾತ್ರರಾಗಿದ್ದರು.

ಮನುಜಮತ ವಿಶ್ವಪಥ, ಅಹೇತುಕ ಆತ್ಮೀಯತೆ, ಪುಟ ೭೬-೭

ನನ್ನ ಸಾಹಿತ್ಯದಲ್ಲಿ – ಕತೆ, ಕಾದಂಬರಿ, ಭಾವಗೀತೆ, ಕಾವ್ಯ, ಮಹಾಕಾವ್ಯ, ಜೀವನಚರಿತ್ರೆ, ಭಾಷಣ, ವಿಮರ್ಶೆ ಇತ್ಯಾದಿ – ನಾನು ಹೇಳಬೇಕಾದದ್ದೆಲ್ಲವನ್ನೂ ಹೇಳಿದ್ದೇನೆ. ಇಷ್ಟವಿರುವ ತರುಣರು ಅವುಗಳನ್ನು ಮನಸ್ಸಿಟ್ಟು ಓದಲಿ. ವಿಶೇಷವಾಗಿ, ಅದರ ಮುನ್ನುಡಿ ಸಹಿತ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬ ಪುಸ್ತಕದ ನಾಲ್ಕು ಭಾಷಣಗಳನ್ನಾದರೂ ಓದಲಿ. ಆದರೆ ನಾಲ್ಕನ್ನೂ ಸಮಗ್ರವಾಗಿ ತೆಗೆದುಕೊಳ್ಳಬೇಕು, ಅಷ್ಟೆ – ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ ಇವುಗಳೆ ಎಲ್ಲರ ಧ್ಯೇಯ ಮಂತ್ರಗಳಾಗಲಿ !

ವಿಚಾರ ಕ್ರಾಂತಿಗೆ ಆಹ್ವಾನ, ಪ್ರಶ್ನೆಗಳಿಗೆ ಉತ್ತರಗಳು, ಪುಟ ೧೧೬

೧೮೦೨

ಮುಂದಿನ ಪೀಳಿಗೆಗೆ ಕುವೆಂಪು ಸಂದೇಶ

"ವಿಶ್ವಮಾನವ"ರಾಗಲು ನಾವು ಸಾಧಿಸಲೆಬೇಕಾದ ಮೂಲಭೂತ ಸ್ವರೂಪದ ತತ್ತ್ವಪ್ರಣಾಳಿಕೆ

೧. "ಮನುಷ್ಯಜಾತಿ ತಾನೊಂದೆ ವಲಂ" ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು.

೨. ವರ್ಣಾಶ್ರಮವನ್ನು ತಿದ್ದುವುದಲ್ಲ, ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು. ಅಂದರೆ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಅಂತ್ಯಜ ಇತ್ಯಾದಿ ವಿಭಜನೆಯನ್ನು ನಿರ್ನಾಮ ಮಾಡಬೇಕು.

೩. ಜಾತಿಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ ವಿನಾಶಗೊಳಿಸಬೇಕು.

೪. 'ಮತ' ತೊಲಗಿ 'ಅಧ್ಯಾತ್ಮ' ಮಾತ್ರ ವೈಜ್ಞಾನಿಕ ತತ್ತ್ವವಾಗಿ ಮಾನ್ಯತೆ ಪಡೆಯಬೇಕು.

೫. ಮತ "ಮನುಜಮತ"ವಾಗಬೇಕು. ಪಥ "ವಿಶ್ವಪಥ"ವಾಗಬೇಕು. ಮನುಷ್ಯ "ವಿಶ್ವಮಾನವ"ನಾಗಬೇಕು.

೬. ಮತ ಗುಂಪುಕಟ್ಟುವ ವಿಷಯವಾಗಬಾರದು. ಯಾರೂ ಒಂದು ಮತಕ್ಕೂ ಸೇರದೆ, ಪ್ರತಿಯೊಬ್ಬನೂ ತಾನೂ ಕಂಡುಕೊಳ್ಳುವ "ತನ್ನ" ಮತಕ್ಕೆ ಮಾತ್ರ ಸೇರಬೇಕು. ಅಂದರೆ ಜಗತ್ತಿನಲ್ಲಿ ಎಷ್ಟು ವ್ಯಕ್ತಿಗಳಿದ್ದಾರೋ ಅಷ್ಟೇ ಸಂಖ್ಯೆಯ ಮತಗಳಿರುವಂತಾಗುತ್ತದೆ. ಯಾರೊಬ್ಬರೂ ಇನ್ನೊಬ್ಬರ ಮತಕ್ಕೆ ಸೇರಿ ಗುಂಪು ಕಟ್ಟಿ ಜಗಳ ಹಚ್ಚುವಂತಾಗಬಾರದು.

೭. ಯಾವ ಒಂದು ಗ್ರಂಥವು ಏಕೈಕ ಪರಮ ಪೂಜ್ಯ ಧರ್ಮಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ ತಿಳಿದು ತನ್ನ "ದರ್ಶನ"ವನ್ನು ತಾನೆ ನಿರ್ಣಯಿಸಿ ಕಟ್ಟಿಕೊಳ್ಳಬೇಕು.

ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ, ಪುಟ ೫೩

ಅನುಬಂಧ ೧

ಕುವೆಂಪು (ಕೆ. ವಿ. ಪುಟ್ಟಪ್ಪ) ಅವರ ಬದುಕಿನ ಮುಖ್ಯ ಘಟ್ಟಗಳು

೧೯೦೪ ಡಿಸೆಂಬರ್ ೨೯	ಕುವೆಂಪು ಜನನ ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕಿನ ಹಿರಿಕೊಡಿಗೆ ಯಲ್ಲಿ. ತಾಯಿ : ಸೀತಮ್ಮ (ಹಿರಿಕೊಡಿಗೆ) ತಂದೆ : ವೆಂಕಟಪ್ಪಗೌಡ (ಕುಪ್ಪಳಿ) ಕುವೆಂಪು ಒಡಹುಟ್ಟಿದವರು : ದಾನಮ್ಮ ಪುಟ್ಟಮ್ಮ
೧೯೧೬	ತಂದೆಯ ಮರಣ
೧೯೧೮	ಮೈಸೂರಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬಂದದ್ದು.
೧೯೨೨	"Biginner's muse" ಎಂಬ ಇಂಗ್ಲಿಷ್ ಕವನ ಸಂಕಲನದ ಪ್ರಕಟಣೆ. ಇದು ಕುವೆಂಪು ಅವರ ಮೊಟ್ಟ ಮೊದಲ ಸಾಹಿತ್ಯ ಕೃತಿ.
೧೯೨೪	ತಾಯಿಯ ಮರಣ "ಅಮಲನ ಕಥೆ" ಎಂಬ ಕನ್ನಡ ಕೃತಿಯ ಪ್ರಕಟಣೆ
೧೯೨೫	ಶ್ರೀ ರಾಮಕೃಷ್ಣಾಶ್ರಮ ಪ್ರವೇಶ
೧೯೨೭	ಬಿ. ಎ., ಪದವಿ
೧೯೨೮ ಡಿಸೆಂಬರ್ ೧೫	ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ನಡೆದ ಪ್ರಪ್ರಥಮ ವಿದ್ಯಾರ್ಥಿ ಕವಿ ಸಮ್ಮೇಳನದ ಅಧ್ಯಕ್ಷತೆ.
೧೯೨೯ ಅಕ್ಟೋಬರ್ ೮	ಕೋಲ್ಕತ್ತ ಬಳಿಯ ಬೇಲೂರಿನ ಶ್ರೀ ರಾಮಕೃಷ್ಣಾಶ್ರಮ ಮಠದಲ್ಲಿ ಅಧ್ಯಕ್ಷರಾದ ಸ್ವಾಮಿ ಶಿವಾನಂದ ಅವರಿಂದ ದೀಕ್ಷಾನುಗ್ರಹ. ಎಂ. ಎ., ಪದವಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಅಧ್ಯಾಪಕ ರಾಗಿ ವೃತ್ತಿ ಪ್ರಾರಂಭ.

೧೯೩೬ ಏಪ್ರಿಲ್	ದೇವಂಗಿ ರಾಮಣ್ಣಗೌಡರ ಮಗಳು ಹೇಮಾವತಿ ಅವರೊಡನೆ ವಿವಾಹ.
೧೯೩೭	ಸ್ವಂತ ಮನೆ 'ಉದಯ ರವಿ' ಯಲ್ಲಿ ದಂಪತಿಗಳ ವಾಸ.
	ಕುವೆಂಪು ದಂಪತಿಗಳ ಮಕ್ಕಳು :
	೧. ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಎಂ.ಎ. (ಕನ್ನಡ) (ಜನನ: ೮.೯.೧೯೩೮, ಶಿವಮೊಗ್ಗ)
	೨. ಕೆ.ಪಿ. ಕೋಕಿಲೋದಯ ಚೈತ್ರ ಎಂ.ಇ. (ಕನ್ನಡ) (ಜನನ: ೨.೫.೧೯೪೧, ಶಿವಮೊಗ್ಗ)
	೩. ಕೆ.ಪಿ. ಇಂದುಕಲಾ ಎಂ.ಎ. (ಜನನ: ೨೧.೭.೧೯೪೩ ಬೆಂಗಳೂರು)
	೪. ಕೆ.ಪಿ. ತಾರಿಣಿ ಬಿ.ಎಸ್‌ಸಿ. (ಹೊಂಸೈನ್ಸ್) ಎಂ.ಎ. (ಮ್ಯೂಸಿಕಾಲಜಿ) (ಜನನ: ೬.೨.೧೯೪೫, ಶಿವಮೊಗ್ಗ)
೧೯೩೯	ಕನ್ನಡ ಉಪಪ್ರಾಧ್ಯಾಪಕ
೧೯೪೬	ಕನ್ನಡ ಪ್ರಾಧ್ಯಾಪಕ, ವಿಭಾಗದ ಮುಖ್ಯಸ್ಥ
೧೯೫೫	ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರು
	ಭಾರತೀಯ ಕೇಂದ್ರ ಸಾಹಿತ್ಯ ಅಕಾಡಮಿ ಬಹುಮಾನ, ಕನ್ನಡ ಬರಹಗಾರರಲ್ಲೇ ಪ್ರಪ್ರಥಮ.
೧೯೫೬ ಮೇ ೨೫	ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಿ. ಲಿಟ್., ಕನ್ನಡದ ಬರಹಗಾರರಲ್ಲಿ ಪ್ರಪ್ರಥಮವಾಗಿ ವಿಶ್ವವಿದ್ಯಾನಿಲಯದ ಕುಲಪತಿ.
೧೯೫೭ ಮೇ ೭	ಧಾರವಾಡದಲ್ಲಿ ನಡೆದ ೩೯ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ
೧೯೫೮	ಕನ್ನಡದ ಬರಹಗಾರರಲ್ಲೇ ಪ್ರಪ್ರಥಮವಾಗಿ ಭಾರತದ ಸರ್ಕಾರದಿಂದ "ಪದ್ಮಭೂಷಣ" ಪ್ರಶಸ್ತಿ.
೧೯೬೦ ಏಪ್ರಿಲ್ ೨೮	"ಮಾನಸ ಗಂಗೋತ್ರಿ" ಪ್ರಾರಂಭೋತ್ಸವದ ಅಧ್ಯಕ್ಷತೆ
೧೯೬೫ ಜನವರಿ ೨೭	ಕರ್ನಾಟಕ ಸರ್ಕಾರದಿಂದ ಕನ್ನಡದ ಪ್ರಪ್ರಥಮ "ರಾಷ್ಟ್ರಕವಿ" ಪ್ರಶಸ್ತಿ.

೧೯೬೬ ಫೆಬ್ರವರಿ ೨೭	ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಗೌರವ ಡಿ. ಲಿಟ್.
೧೯೬೮ ಡಿಸೆಂಬರ್ ೨೦	ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕನ್ನಡದ ಬರಹಗಾರ ರಲ್ಲಿಯೇ ಪ್ರಪ್ರಥಮ (ಗುಜರಾತಿನ ಉಮಾಶಂಕರ್ ಜೋಶಿ ಅವರೊಡನೆ ಹಂಚಿಕೆ)
೧೯೬೯ ಜನವರಿ ೮	ಬೆಂಗಳೂರು ವಿಶ್ವವಿದ್ಯಾಲಯದ ಗೌರವ ಡಿ. ಲಿಟ್.,
೧೯೭೨ ಡಿಸೆಂಬರ್ ೨೯	ಮೊಟ್ಟಮೊದಲು, ಕುವೆಂಪು ಅವರ ಹುಟ್ಟುಹಬ್ಬವನ್ನು "ವಿಭೂತಿ ಪೂಜೆ" ಹೆಸರಿನಲ್ಲಿ ಮಂಡ್ಯ ಜಿಲ್ಲೆಯ ಮಂದಗೆರೆ ಗ್ರಾಮದಲ್ಲಿ, ಹರಿಹರಪ್ರಿಯ ನೇತೃತ್ವದಲ್ಲಿ ಆಚರಿಸಲಾಯಿತು.
೧೯೭೪ ಡಿಸೆಂಬರ್ ೮	ಬೆಂಗಳೂರು ವಿಶ್ವವಿದ್ಯಾನಿಲಯದ ಹತ್ತನೆಯ ಘಟಿ ಕೋತ್ಸವದಲ್ಲಿ ಕ್ರಾಂತಿಕಾರಿ ಭಾಷಣ.
೧೯೭೯	ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ ನಾಡಿನಾದ್ಯಂತ ೭೫ನೇ ಹುಟ್ಟುಹಬ್ಬದ ಆಚರಣೆ ಭಾರತೀಯ ಕೇಂದ್ರ ಸಾಹಿತ್ಯ ಅಕಾಡಮಿಯ ಫೆಲೋಶಿಪ್
೧೯೮೨ ಸೆಪ್ಟಂಬರ್ ೧೫	ಪತ್ನಿ ಹೇಮಾವತಮ್ಮ ತೀರಿಕೊಂಡರು.
೧೯೮೫	ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್.
ಡಿಸೆಂಬರ್ ೧೫	ಮೊಟ್ಟಮೊದಲ ವಿಶ್ವ ಕನ್ನಡ ಸಮ್ಮೇಳನ ಉದ್ಘಾಟನೆ (ಮೈಸೂರಿನಲ್ಲಿ)
೧೯೮೬	ಕಲಾ ಮತ್ತು ಸಾಂಸ್ಕೃತಿಕ ವಿಶ್ವ ಅಕಾಡಮಿ ಸ್ಯಾನ್‌ಫ್ರಾನ್‌ಸಿಸ್ಕೊದಿಂದ ಗೌರವ ಡಿ.ಲಿಟ್.,
೧೯೮೮	ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿ ಸ್ವೀಕಾರ. ಭಾರತದ "ಪದ್ಮ ವಿಭೂಷಣ" ಪ್ರಶಸ್ತಿ.
೧೯೮೯	ಮಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್.
೧೯೯೨ ನವೆಂಬರ್ ೧೨	ಕರ್ನಾಟಕ ಸರ್ಕಾರದ 'ಕರ್ನಾಟಕ ರತ್ನ' ಪ್ರಶಸ್ತಿ ಸ್ವೀಕಾರ.
೧೯೯೩	ಕುವೆಂಪು ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್.
೧೯೯೪ ನವೆಂಬರ್ ೧೦	ಗುರುವಾರ ಬೆಳಗಿನ ಜಾವ (೧ ರಿಂದ ೨ ಘಂಟೆಯಲ್ಲಿ ಮೈಸೂರಿನಲ್ಲಿ) ವಿಶ್ವಚೇತನದಲ್ಲಿ ವಿಲೀನ.
೧೯೯೫	ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ನಾಡೋಜ ಪ್ರಶಸ್ತಿ.

ಅನುಬಂಧ ೨

ಕುವೆಂಪು ಸಾಹಿತ್ಯ

(ಸಾಹಿತ್ಯ ವಿಭಾಗಗಳು, ಕೃತಿಗಳು ಅಕ್ಷರಾನುಕ್ರಮಣಿಕೆ, ಕೃತಿಗಳ ಮೊದಲ ಮುದ್ರಣ ಹಾಗೂ "ಕುವೆಂಪು ಒಲವು ನಿಲವು"ಗೆ ಬಳಸಿರುವ ಆವೃತ್ತಿಗಳ ಸೂಚಿ)

ಕಾವ್ಯಗಳು

೧.	ಅಗ್ನಿಹಂಸ	೧೯೪೬ – ೧೯೭೧
೨.	ಅನಿಕೇತನ	೧೯೬೩ – ೧೯೬೩
೩.	ಇಕ್ಷುಗಂಗೋತ್ರಿ	೧೯೫೭ – ೧೯೫೭
೪.	ಕಥನ ಕವನಗಳು	೧೯೩೬ – ೧೯೫೮
೫.	ಕದರಡಕೆ	೧೯೬೭ – ೧೯೬೭
೬	ಕಲಾಸುಂದರಿ	೧೯೩೪ – ೧೯೬೯
೭	ಕಿಂಕಿಣಿ	೧೯೪೬ – ೧೯೭೧
೮.	ಕುಟೀಚಕ	೧೯೬೭ – ೧೯೬೭
೯.	ಕೃತ್ತಿಕೆ	೧೯೫೯ – ೧೯೭೧
೧೦.	ಕೊಳಲು	೧೯೩೦ – ೧೯೭೦
೧೧.	ಕೋಗಿಲೆ ಮತ್ತು ಸೋವಿಯಟ್ ರಷ್ಯಾ	೧೯೪೪ – ೧೯೬೬
೧೨.	ನವಿಲು	೧೩೬೪ – ೧೯೭೧
೧೩.	ಪಕ್ಷಿಕಾಶಿ	೧೯೪೬ – ೧೯೬೩
೧೪.	ಪಾಂಚಜನ್ಯ	೧೯೩೩ – ೧೯೬೯
೧೫.	ಪ್ರೇತ–ಕ್ಯೂ	೧೯೬೭ – ೧೯೬೭
೧೬	ಮಂತ್ರಾಕ್ಷತೆ	೧೯೬೬ – ೧೯೬೬
೧೭	ಹಾಳೂರು	೧೯೨೬ – ೧೯೭೦
೧೮.	ಹೊನ್ನಹೊತ್ತಾರೆ	೧೯೭೬ – ೧೯೭೬

ಪ್ರೇಮಕಾವ್ಯಗಳು

೧೯.	ಅನುತ್ತರಾ	೧೯೬೫ – ೧೯೬೫
೨೦.	ಚಂದ್ರಮಂಚಕೆ ಬಾ, ಚಕೋರಿ	೧೯೫೪ – ೧೯೬೯
೨೧.	ಜೇನಾಗುವಾ	೧೯೫೨ – ೧೯೭೧

೨೨. ಪ್ರೇಮಕಾಶ್ಮೀರ ೧೯೪೬ – ೧೯೬೯

೨೩. ಷೋಡಶಿ ೧೯೪೭ – ೧೯೪೭

ಖಂಡಕಾವ್ಯ

೨೪. ಚಿತ್ರಾಂಗದಾ ೧೯೩೬ – ೧೯೫೬

ಮಹಾಕಾವ್ಯ

೨೫. ಶ್ರೀ ರಾಮಾಯಣ ದರ್ಶನಂ ೧೯೪೯ – ೧೯೭೧

ನಾಟಕಗಳು

೨೬. ಕಾನೀನ ೧೯೭೪ – ೧೯೭೪

೨೭. ಚಂದ್ರಹಾಸ ೧೯೬೩ – ೧೯೬೭

೨೮. ಜಲಗಾರ ೧೯೨೮ – ೧೯೬೯

೨೯. ಬಲಿದಾನ ೧೯೪೮ – ೧೯೪೮

೩೦. ಬಿರುಗಾಳಿ ೧೯೩೦ – ೧೯೫೬

೩೧. ಬೆರಳ್ ಗೆ ಕೊರಳ್ ೧೯೪೭ – ೧೯೫೨

೩೨. ಮಹಾರಾತ್ರಿ ೧೯೩೧ – ೧೯೬೨

೩೩. ವಾಲ್ಮೀಕಿಯ ಭಾಗ್ಯ ೧೯೩೧ – ೧೯೬೯

೩೪. ಯಮನ ಸೋಲು ೧೯೨೮ – ೧೯೬೯

೩೫. ರಕ್ತಾಕ್ಷಿ ೧೯೩೨ – ೧೯೬೬

೩೬. ಶೂದ್ರ ತಪಸ್ವಿ ೧೯೪೪ – ೧೯೪೮

೩೭. ಶ್ಮಶಾನ ಕುರುಕ್ಷೇತ್ರಂ ೧೯೩೧ – ೧೯೬೨

ವಿಮರ್ಶೆ, ವಿಚಾರ, ಭಾಷಣ, ಮುನ್ನುಡಿ, ಪ್ರಬಂಧಗಳು

೩೮. ಇತ್ಯಾದಿ ೧೯೭೦ – ೧೯೭೦

೩೯. ಕಾವ್ಯವಿಹಾರ ೧೯೪೬ – ೧೯೫೨

೪೦. ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗ್ರತಿ ೧೯೭೮ – ೧೯೭೮

೪೧. ತಪೋನಂದನ ೧೯೫೦ – ೧೯೬೯

೪೨. ದ್ರೌಪದಿಯ ಶ್ರೀಮುಡಿ ೧೯೬೦ – ೧೯೬೭

೪೩. ನಿರಂಕುಶಮತಿಗಳಾಗಿ (ಆತ್ಮಶ್ರೀಗಾಗಿ) ೧೯೪೪ – ೧೯೭೦

೪೪. ಮನುಜಮತ ವಿಶ್ವಪಥ ೧೯೭೧ – ೧೯೭೧

೪೫.	ವಿಚಾರ ಕ್ರಾಂತಿಗೆ ಆಹ್ವಾನ	೧೯೭೬ – ೧೯೭೬
೪೬.	ರಸೋ ವೈ ಸಃ	೧೯೬೨ – ೧೯೬೨
೪೭.	ವಿಭೂತಿ ಪೂಜೆ	೧೯೫೩ – ೧೯೭೦
೪೮.	ಷಷ್ಟಿನಮನ	೧೯೬೪ – ೧೯೬೪
೪೯.	ಸಾಹಿತ್ಯ ಪ್ರಚಾರ	೧೯೪೪ – ೧೯೭೨

ಮಹಾಕಾದಂಬರಿಗಳು

೫೦.	ಕಾನೂರು ಹೆಗ್ಗಡಿತಿ	೧೯೩೬ – ೧೯೭೦
೫೧.	ಮಲೆಗಳಲ್ಲಿ ಮದುಮಗಳು	೧೯೬೭ – ೧೯೬೭

ಕಥೆಗಳು

೫೨.	ನನ್ನ ದೇವರು ಮತ್ತು ಇತರ ಕಥೆಗಳು	೧೯೪೦ – ೧೯೭೨
೫೩.	ಸಂನ್ಯಾಸಿ ಮತ್ತು ಇತರ ಕಥೆಗಳು	೧೯೩೬ – ಪಠ್ಯ ಪುಸ್ತಕದ ಆವೃತ್ತಿ

ಲಲಿತಪ್ರಬಂಧಗಳು

೫೪.	ಮಲೆನಾಡಿನ ಚಿತ್ರಗಳು	೧೯೩೧ – ೧೯೫೧


ಜೀವನಚರಿತ್ರೆಗಳು


೫೫.	ಶ್ರೀ ರಾಮಕೃಷ್ಣ ಪರಮಹಂಸ	೧೯೩೪ – ೧೯೭೩
೫೬.	ಸ್ವಾಮಿ ವಿವೇಕಾನಂದ	೧೯೩೨ – ೧೯೬೨

ಶಿಶುಸಾಹಿತ್ಯ

೫೭.	ಅಮಲನ ಕಥೆ (ಖಂಡಕಾವ್ಯ)	೧೯೨೪ – ೧೯೬೮
೫೮.	ನನ್ನ ಗೋಪಾಲ (ನಾಟಕ)	೧೯೩೦ – ೧೯೭೧
೫೯.	ನನ್ನ ಮನೆ (ಕವನಗಳು)	೧೯೪೬ – ೧೯೬೬
೬೦.	ನರಿಗಳಿಗೇಕೆ ಕೋಡಿಲ್ಲ (ಕಥೆ)	೧೯೭೭ – ೧೯೭೭
೬೧.	ಬೊಮ್ಮನ ಹಳ್ಳಿಯ ಕಿಂದರಿಜೋಗಿ (ಕವನ)	೧೯೨೮ – ೧೯೭೩
೬೨.	ಮರಿವಿಜ್ಞಾನಿ (ಕವನಗಳು)	೧೯೪೭ – ೧೯೬೬
೬೩.	ಮೇಘಪುರ (ಕವನಗಳು)	೧೯೪೭ – ೧೯೬೬
೬೪.	ಮೋಡಣ್ಣನ ತಮ್ಮ (ನಾಟಕ)	೧೯೨೬ – ೧೯೬೭

(ಕೊನೆಯ ಮೂರು ವಿಭಾಗಗಳನ್ನು "ಕುವೆಂಪು ಒಲವು ನಿಲವು"ಗೆ ಬಳಸಿಕೊಂಡಿಲ್ಲ)





ಮನುಜಮತ ವಿಶ್ವಪಥವೆಂಬ ಲೋಕ ದರ್ಶನವನ್ನು ಸಾರಿದ ಕವಿ ಕುವೆಂಪು ಅವರ ಎಲ್ಲ ಕೃತಿಗಳಲ್ಲಿರುವ ಚಿಂತನೆಯ ಸೂಕ್ತಿಗಳನ್ನು ಸಂಗ್ರಹಿಸಿ ಒಪ್ಪವಾಗಿ ಜೋಡಿಸಿ ಒಂದು ಕೃತಿ ರೂಪದಲ್ಲಿ ಅದನ್ನು ಪ್ರಕಟಿಸಿದ್ದಾರೆ ಸಾಹಿತಿ ಹರಿಹರಪ್ರಿಯ. ಇದೊಂದು ಅಪರೂಪದ ಕೆಲಸ. ಕುವೆಂಪು ಅವರ ವಿಚಾರದ ಹರಹು, ವಿಷಯ ವೈವಿಧ್ಯ ಹಾಗೂ ಆಲೋಚನಾ ಕ್ರಮದ ವಿಧಿ ವಿಧಾನಗಳನ್ನು ಒಂದೆಡೆಯಲ್ಲಿ ಕಾಣಸಿಗುವಂತೆ ಮಾಡಿರುವ ಈ ಕೆಲಸ ಶ್ಲಾಘನೀಯ. ಪುಸ್ತಕಮನೆಯ ಹರಿಹರ ಪ್ರಿಯರೆಂದೇ ಖ್ಯಾತರಾಗಿರುವ ಇವರ ಓದಿನ ಬದ್ಧತೆ, ಗ್ರಹಿಕೆಯ ಸೂಕ್ಷ್ಮತೆಯನ್ನು ಈ ಕೃತಿ ಮನಗಾಣಿಸುತ್ತಿದೆ.

ಪ್ರೊ । ಎಸ್.ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಬೆಲೆ ರೂ. 150/-

ISBN : 81-7713-237-7

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು